ಕರ್ನಾಟಕ-ಆಂಧ್ರದ ಗಡಿಭಾಗದಲ್ಲಿನ ಹಿಂದೂ ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯ

ಡಾಕ್ಟರ್ ಆಫ್ ಫಿಲಾಸಫಿ (ಪಿ.ಹೆಚ್.ಡಿ.)ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಅಧ್ಯಯನ
ಎಂ.ಮಲ್ಲಿಕಾರ್ಜುನಗೌಡ

ಮಾರ್ಗದರ್ಶನ
ಡಾ|| ಜೋಗನ್ ಶಂಕರ್
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಸಮಾಜ ಶಾಸ್ತ್ರ ವಿಭಾಗ, ಮಂಗಳ ಗಂಗೋತ್ರಿ,
ಮಂಗಳೂರು ವಿಶ್ವವಿದ್ಯಾಲಯ - ೫೭೪ ೧೯೯

೧೯೯೬
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೨೧

ಕರ್ನಾಟಕ-ಆಂಧ್ರದ ಗಡಿಭಾಗದಲ್ಲಿನ ಹಿಂದೂ ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯ

ಡಾಕ್ಟರ್ ಆಫ್ ಫಿಲಾಸಫಿ (ಪಿ.ಹೆಚ್.ಡಿ.)ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಅಧ್ಯಯನ
ಎಂ.ಮಲ್ಲಿಕಾರ್ಜುನಗೌಡ

ಮಾರ್ಗದರ್ಶನ
ಡಾ|| ಜೋಗನ್ ಶಂಕರ್
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಸಮಾಜ ಶಾಸ್ತ್ರ ವಿಭಾಗ, ಮಂಗಳ ಗಂಗೋತ್ರಿ,
ಮಂಗಳೂರು ವಿಶ್ವವಿದ್ಯಾಲಯ - ೫೭೪ ೧೯೯

೧೯೯೬
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ,ಹಂಪಿ
ವಿದ್ಯಾರಣ್ಯ-೫೮೩ ೨೨೧

08

ಡಾ|| ಜೋಗನ್ ಶಂಕರ್
ಪ್ರಾಧ್ಯಾಪಕರು
ಸಮಾಜಶಾಸ್ತ್ರ ವಿಭಾಗ
ಮಂಗಳ ಗಂಗೋತ್ರಿ
ಮಂಗಳೂರು ವಿಶ್ವವಿದ್ಯಾಲಯ - ೫೭೪ ೧೯೯

ಮಾರ್ಗದರ್ಶಕರ ಧೃಢೀಕರಣ ಪತ್ರ

ಶ್ರೀ ಎಂ.ಮಲ್ಲಿಕಾರ್ಜುನಗೌಡ ಇವರು 'ಕರ್ನಾಟಕ-ಆಂಧ್ರದ ಗಡಿಭಾಗದಲ್ಲಿ ಹಿಂದೂ-ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯ' ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿ.ಹೆಚ್ .ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಾದರ ಪಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.ಇದರಲ್ಲಿನ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ, ಪ್ರಕಟಣೆಗಾಗಲಿ ಬಳಸಿಕೊಂಡಿಲ್ಲವೆಂದು ಧೃಡಪಡಿಸುತ್ತಿದ್ದೇನೆ.

J.C. Shankar
(ಡಾ|| ಜೋಗನ್ ಶಂಕರ್)

ದಿ||
ಸ್ಥಳ:ಮಂಗಳೂರು

DR. JOGAN SHANKAR M.A., Ph.D.
PROFESSOR & CHAIRMAN
DEPARTMENT OF SOCIOLOGY
MANGALORE UNIVERSITY
KONAJE - 574 199.

ಪ್ರಮಾಣಪತ್ರ

'ಕರ್ನಾಟಕ -ಆಂಧ್ರದ ಗಡಿಭಾಗದಲ್ಲಿ ಹಿಂದೂ-ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿ.ಹೆಚ್.ಡಿ.ಪದವಿಗಾಗಿ ಸಿದ್ಧಪಡಿಸಲಾಗಿದೆ. ಡಾ|| ಜೋಗನ್ ಶಂಕರ್, ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ ಇವರು ಈ ಅಧ್ಯಯನಕ್ಕೆ ಮಾರ್ಗದರ್ಶನ ನೀಡಿದ್ದಾರೆ. ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಪ್ರಕಟಣೆಗಳಲ್ಲಿ ಬಳಸಿಕೊಂಡಿಲ್ಲವೆಂದು ಪ್ರಮಾಣಿಸುತ್ತೇನೆ.

ವಿದ್ಯಾರಣ್ಯ
ದಿ||

ಎಂ.ಮಲ್ಲಿಕಾರ್ಜುನಗೌಡ
ಸಂಶೋಧನಾ ವಿದ್ಯಾರ್ಥಿ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕಮಲಾಪುರ - ೫೮೩ ೨೨೧

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದ ಶಿಷ್ಯವೇತನದಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಪಿ.ಹೆಚ್.ಡಿ.ಪದವಿ ಅಧ್ಯಯನಕ್ಕಾಗಿ ಅವಕಾಶ ಕಲ್ಪಿಸಿಕೊಟ್ಟ ಕುಲಪತಿಗಳಾದ ಡಾ|| ಚಂದ್ರಶೇಖರ ಕಂಬಾರರು ಮತ್ತು ನನ್ನ ಪಿ.ಹೆಚ್.ಡಿ.ಅಧ್ಯಯನದ ಆರಂಭದಿಂದಲೂ ನನ್ನನ್ನು ಪ್ರೋತ್ಸಾಹಿಸಿದ ನಿಕಾಯದ ಮುಖ್ಯಸ್ಥರಾಗಿದ್ದ ಮತ್ತು ಪ್ರಸ್ತುತ ಕುಲಸಚಿವರಾದ ಪ್ರೊ|| ಹಿ.ಚಿ.ಬೋರಲಿಂಗಯ್ಯ ಅವರಿಗೆ,

ಮಹಾಪ್ರಬಂಧಕ್ಕೆ ಮಾರ್ಗದರ್ಶಕರಾಗಿ ಉಪಯುಕ್ತ ಚರ್ಚೆ,ವಿವರಗಳನ್ನಿತ್ತು ,ಸಲಹೆ ನೀಡಿದ ಡಾ|| ಜೋಗನ್ ಶಂಕರ್ ಅವರಿಗೆ ,

ಕ್ಷೇತ್ರ ಪರಿವೀಕ್ಷಣೆಯಲ್ಲಿ ಅತ್ಯಂತ ಆಸಕ್ತಿ ಮತ್ತು ಪ್ರೀತಿಯಿಂದ ಸಹಕರಿಸಿದ ಎಲ್ಲಾ ವಕ್ತೃಗಳಿಗೆ ಮತ್ತು ಗೆಳೆಯರಿಗೆ , ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಂಗ, ಆಡಳಿತಾಂಗ, ಪ್ರಸಾರಾಂಗದ ಸಿಬ್ಬಂದಿವರ್ಗದವರಿಗೆ ,ಎಲ್ಲಾ ನಿಕಾಯಗಳ ಮುಖ್ಯಸ್ಥರು,ಉಪನ್ಯಾಸಕರು, ಸಹಪಾಠಿಗಳು ಮತ್ತು ಸಹೃದಯರಿಗೆ ,

ಕಂಪ್ಯೂಟರ್ ಗೆ ಅಳವಡಿಸಿದ 'ಸ್ಫೂರ್ತಿ' ಕಂಪ್ಯೂಟರ್ಸ್ ನ ಶ್ರೀಮತಿ ರೇಣುಕಾ ಅವರಿಗೆ ಮತ್ತು ಸಂಧ್ಯಾ ಗ್ರಾಫಿಕ್ಸ್‌ನ ಸೋಮನಾಥರೆಡ್ಡಿ ಅವರಿಗೆ, ಟೈಪ್ ಮಾಡಿದ ಕುಮಾರಿ ರೇಖಾ ಹಾಗೂ ನಿರ್ಮಲಾ ಅವರಿಗೆ, ಕೇವಲ ನಾಲ್ಕನೇ ತರಗತಿ ಓದುತ್ತಿದ್ದರೂ ನನ್ನ ಮಹಾ ಪ್ರಬಂಧದ ಕೆಲವು ಭಾಗಗಳನ್ನು ಕಂಪ್ಯೂಟರ್‌ನಲ್ಲಿ ತಿದ್ದುಪಡಿ ಮಾಡಿದ ಬಿ. ಅಭಿಷೇಕನಿಗೆ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ವಿದ್ಯಾರಣ್ಯ
ದಿ||

ಎಂ.ಮಲ್ಲಿಕಾರ್ಜುನಗೌಡ

ಪರಿವಿಡಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕರ್ನಾಟಕ - ಆಂಧ್ರದ ಗಡಿಭಾಗದಲ್ಲಿನ ಹಿಂದೂ - ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯದ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಉದ್ದೇಶವನ್ನು ಈ ಅಧ್ಯಯನವು ಹೊಂದಿದ್ದು ಇದಕ್ಕಾಗಿ ಈಗಲೂ ಜೀವಂತವಾಗಿರುವ ಮೊಹರಂ, ಉರೂಸ್ ನಂತಹ ಆಚರಣೆಗಳನ್ನು ಅಧ್ಯಯನ ಮಾಡುವುದರೊಂದಿಗೆ ಜನರ ಜೀವನ ವಿಧಾನವನ್ನು ಗ್ರಹಿಸುವುದರ ಮುಖಾಂತರ ನಮ್ಮ ಸಾಂಸ್ಕೃತಿಕ ಆಶಯಗಳನ್ನು ಹುಡುಕುವುದು ಮುಖ್ಯವಾಗಿದೆ. ಯಾಕೆಂದರೆ ನಮ್ಮ ವಸಾಹತುಶಾಹಿಯ ಅಧ್ಯಯನದ ನೆಲೆಗಳು ಮತ್ತದರಿಂದ ಪ್ರಭಾವಿತ ಗೊಂಡ ಈಚಿನವರೆಗಿನ ಅಧ್ಯಯನದ ಕ್ರಮಗಳು ಅಪರಿಪೂರ್ಣವಾಗಿದ್ದು ಅವು ನಮ್ಮ ಸಾಂಸ್ಕೃತಿಕ ಆಶಯಗಳ ಸ್ವರೂಪದ ಪೂರ್ಣ ಚಿತ್ರಣವನ್ನು ನೀಡಲಾರವು. ಇಂದು ನಾವು ಯಾವುದನ್ನು ಭಾರತೀಯ, ಕರ್ನಾಟಕ ಸಂಸ್ಕೃತಿ ಎಂದು ಕರೆಯಲ್ಪಡುತ್ತೇವೆಯೋ ಅದು ಏಕಮುಖ ಲಕ್ಷಣಗಳನ್ನು ಹೊಂದಿದ್ದು ಇಂತಹ ಸಾಂಸ್ಕೃತಿಕ ವಿವರಗಳನ್ನು ಹೆಣೆಯುವಲ್ಲಿ ಅದರ ಆಕರ ಸಾಮಗ್ರಿಗಳಿಗಾಗಿ ಅದು ನಿರ್ಧಿಷ್ಟ ಮತ್ತು ನಮ್ಮ ಈವರೆಗಿನ ಅಧ್ಯಯನವ ಕ್ರಮಗಳು ಯಾವುದನ್ನು ಅಧಿಕೃತವೆಂದು ನಂಬಲಾಗಿತ್ತೋ ಅಂತಹ ಮೂಲವನ್ನೇ ಅವಲಂಬಿಸಬೇಕಾಗಿಬಂತು. ಯಾವುದನ್ನು ಅಧಿಕೃತವೆಂದು ನಂಬಲಾಗಿತ್ತೋ ಅದು ಕೇವಲ ನಮ್ಮ ಸಾಂಸ್ಕೃತಿಕ ಇತಿಹಾಸಕಾರರು ಕಾಲಮಾನದ ಒತ್ತಡಗಳಿಗೆ ಮತ್ತು ಪ್ರಭಾವಗಳಿಗೆ ಸಿಲುಕಿವೈಭವೀಕರಿಸಿದ ಭಾರತೀಯ ಪರಂಪರೆಯ ಅಂಶಗಳಾಗಿದ್ದವು. ಅಂದರೆ ಇದು ವಸಾಹತುಶಾಹಿ ಅಧ್ಯಯನದ ನೆಲೆಗಳ ಪ್ರಭಾವ ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುಟ್ಟಿಕೊಂಡ ರಾಷ್ಟ್ರೀಯತೆಯ ಪ್ರಭಾವಕ್ಕೆ ಸಿಲುಕಿದುದಾಗಿತ್ತು.[೧]

ನಮ್ಮ ಸಾಂಸ್ಕೃತಿಕ ವ್ಯಾಖ್ಯಾನಕಾರರಿಗಿದ್ದ ಪರಿಮಿತಿಗಳನ್ನು ಅರ್ಥಮಾಡಿಕೊಳ್ಳುತ್ತಲೇ ಪ್ರಸ್ತುತ ಅಧ್ಯಯನದ ನೆಲೆಗಳನ್ನು ಖಚಿತ ಪಡಿಸಿಕೊಳ್ಳುವುದರೊಂದಿಗೆ ಮುಂದುವರೆಯಲಾಗಿದೆ. ಮೊದಲನೆಯದಾಗಿ ಈ ಮುಂಚೆನಮ್ಮ ಸಾಂಸ್ಕೃತಿಕ ವಿಶ್ಲೇಷಣಾಕಾರರ ಪರಿಮಿತಿಗಳನ್ನು ಕ್ರಮವಾಗಿ ಹೀಗೆ ನೋಡಬಹುದು.

ಮೊದಲನೆಯದಾಗಿ ಮೂಲತಃಸಂಸ್ಕೃತಿ ಪದದ ನಿರ್ವಚನೆ, ವ್ಯಾಖ್ಯಾನಗಳಿಗೆ ಸಂಬಂಧಿಸಿದಂತೆ

ಅದರ ರೂಪ, ಚೌಕಟ್ಟು ಪಾಶ್ಚಾತ್ಯ ಪ್ರಭಾವದಿಂದಾಗಿಯೇ ಬಂದದ್ದಾಗಿರುವುದು ಮತ್ತು ಅದರ ವ್ಯಾಖ್ಯಾನಕ್ಕೆ ವಿಶ್ಲೇಷಣೆಗೆ ಅದರ ಸಿದ್ಧ ಮಾದರಿಗಳನ್ನುಬಳಸಲ್ಪಡುವ ಅನಿವಾರ್ಯತೆಗೆ ಸಿಲುಕಬೇಕಾದುದು. ಎರಡನೆಯದಾಗಿ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಗುರುತಿಸಿ ಅರ್ಥೈಸುವಾಗ ವಸಾಹತುಶಾಹಿ ಅಧ್ಯಯನದ ಮಾದರಿಗಳನ್ನನುಸರಿಸಿದುದಲ್ಲದೆ ಸಮಕಾಲೀನ ಸಾಂಸ್ಕೃತಿಕ ಒತ್ತಡುಗಳಿಗೆ ಪ್ರತಿಕ್ರಿಯಿಸಿದ ರೀತಿಯೂ ಸಹ ತಪ್ಪು ಗ್ರಹಿಕೆಗಳಿಂದ ಕೂಡಿದುದಾಗಿದೆ. ನಿದರ್ಶನಕ್ಕೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯತಾವಾದವು ಮುಸ್ಲಿಂ ಮತ್ತು ಹಿಂದೂ ಎಂಬ ಎರಡು ವರ್ಗಗಳನ್ನು ಪ್ರತ್ಯೇಕವಾಗಿ ಗುರುತಿಸತೊಡಗಿತಲ್ಲದೆ ಅವೆರಡರ ಮಧ್ಯೆ ಅಂತರಜಾಸ್ತಿಯಾಗುವಂತೆ ಮಾಡಿದುದೇ ಅಲ್ಲದೆ ಸಂಸ್ಕೃತೀಕರಣದ ಪ್ರಕ್ರಿಯೆಯನ್ನು ಮರೆಗೆ ತಳ್ಳಲಾಗಿತ್ತು.

ಇದನ್ನು ಮತ್ತಷ್ಟು ವಿವರಿಸುವುದಾದರೆ ಇಂಡಿಯಾದಲ್ಲಿ ಇಸ್ಲಾಂ ಮತ್ತು ಭಾರತೀಯ ಸಂಸ್ಕೃತಿಕಗಳೆರಡರ ಸಮ್ಮಿಲನದೊಂದಿಗೆ ಸಮ್ಮಿಶ್ರ ಸಂಸ್ಕೃತಿಯೊಂದು ರೂಪುಗೊಂಡಿದ್ದನ್ನು ಪ್ರಜ್ಞಾಪೂರ್ವಕವಾಗಿಯೇ ಮುಚ್ಚಿಡ ಲಾಗುತ್ತಿತ್ತು ಅಥವಾ ಅದಕ್ಕೆ ಪ್ರಾಮುಖ್ಯತೆ ನೀಡುತ್ತಿರಲಿಲ್ಲ. ವಾಸ್ತವವಾಗಿ ನಾವಿಂದು ಇಂಡಿಯಾದಲ್ಲಿ ಭಾರತೀಯ ಸಂಸ್ಕೃತಿ ಮತ್ತು ಇಸ್ಲಾಂ ಸಂಸ್ಕೃತಿಗಳೆಂದು ಪ್ರತ್ಯೇಕವಾಗಿ ಗುರುತಿಸಿ ಲಕ್ಷಣಗಳನ್ನು ನಿರೂಪಿಸಲಾಗದಷ್ಟು ಅವು ಪರಸ್ಪರ ಒಂದರೊಳಗೊಂದು ಬೆರೆತು ಹೋಗಿವೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ದ್ವಿ-ಸಾಂಸ್ಕೃತಿಕ ಅಧ್ಯಯನದ ಪರಿಕಲ್ಪನೆಯನ್ನು ಬಳಸಿಕೊಳ್ಳಲಾಗುವುದು. ದ್ವಿ-ಸಾಂಸ್ಕೃತಿಕತೆಯೆಂದರೆ ಎರಡೂ ಸಂಸ್ಕೃತಿಗಳು ಒಂದರೊಳಗೊಂದು ಬೆರೆತು ಅವನ್ನು ಬಿಡಿ ಬಿಡಿಯಾಗಿ ಗುರುತಿಸಲಾಗದಷ್ಟು ಏಕಗೊಂಡ ಸಂಸ್ಕೃತಿಯಾಗಿರುತ್ತದೆ. ಭಾಷಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿ 'ದ್ವಿ-ಭಾಷಿಕ' ಪದವನ್ನು ಬಳಸಲಾಗುತ್ತಿದ್ದು ಅದೇ ಮಾದರಿಯಲ್ಲಿ ಸಂಸ್ಕೃತಿಯ ಅಧ್ಯಯನಕ್ಕೂ 'ದ್ವಿ-ಸಾಂಸ್ಕೃತಿಕತೆ' ಪದವನ್ನು ಇಲ್ಲಿ ಬಳಸಲಾಗಿದೆ. ದ್ವಿ-ಭಾಷಿಕತೆಯಲ್ಲಿ ಎರಡು ಭಾಷೆಗಳನ್ನು ಭಿನ್ನವಾಗಿ ನೋಡಬಹುದಾಗಲೀ ದ್ವಿ-ಸಾಂಸ್ಕೃತಿಕತೆಯ ವಿಷಯದಲ್ಲಿ ಎರಡು ಸಂಸ್ಕೃತಿಗಳನ್ನು ಭಿನ್ನವಾಗಿ ಕಾಣಲು ಸಾಧ್ಯವಾಗುವುದಿಲ್ಲ.[3] ಈ ಅಧ್ಯಯನಕ್ಕೆ ಸಂಬಂಧಿಸಿದಂತೆ 'ದ್ವಿ-

ಸಾಂಸ್ಕೃತಿಕತೆ' ಯೆನ್ನುವ 'ಪರಿಕಲ್ಪನೆ'ಯನ್ನು, ಸಂಗ್ರಹಿಸಿದ ಮಾಹಿತಿಗಳನ್ನು ಅರ್ಥೈಸಲು ಮಾತ್ರ ಬಳಸಲಾಗಿದೆಯಲ್ಲದೆ ಇಡಿಯಾಗಿಯೆ ಅದಕ್ಕೆ ವಿವರಗಳನ್ನು ಜೋಡಿಸಿ ಯಾವುದೋ ತೀರ್ಮಾನಗಳಿಗೆ ಬರುವ ಅಪಾಯದಿಂದ ಪ್ರಜ್ಞಾಪೂರ್ವಕವಾಗಿಯೆ ದೂರವಿರುವ ಪ್ರಯತ್ನ ಮಾಡಲಾಗಿದೆ.

ಇಸ್ಲಾಂನ ಧಾರ್ಮಿಕ ಆಚರಣೆಗಳು ಸ್ಥಳಿಯ ಪ್ರಭಾವಗೊಳಗಾಗಿ ಮುಸ್ಲಿಮೇತರರಿಂದ ವರ್ಣರಂಜಿತವಾಗಿ ರೂಪುಗೊಂಡದ್ದನ್ನು ಅದರೆಲ್ಲ ವಿವರಗಳೊಂದಿಗೆ ಕಾರಣಗಳನ್ನು ವಿಶ್ಲೇಷಿಸುವುದರ ಮೂಲಕಧರ್ಮ ಆ ಮೂಲಕ ಸಂಸ್ಕೃತಿಯೊಂದು ಸಮುದಾಯದ ಮೇಲೆ ಬೀರುವ ಪ್ರಭಾವ ಮತ್ತು ಅದು ವಹಿಸಬಹುದಾದಪಾತ್ರವನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. 'ಉರುಸು' 'ಮೊಹರಂ' ಆಚರಣೆಗಳಲ್ಲಿ ಪಾಲ್ಗೊಳ್ಳುವ ಮುಸ್ಲಿಮೇತರರ ಪಾಲ್ಗೊಳ್ಳುವಿಕೆ ಕೇವಲ ಪಾಲ್ಗೊಳ್ಳುವಿಕೆಯಾಗಿರದೆ ಅದು ಧರ್ಮದ 'ತಾಧ್ಯಾತ್ಮ' ಗುಣವನ್ನುಹೊಂದಿದ್ದು ಇಲ್ಲಿ ಕಂಡು ಬರುವ 'ಜ್ಯಾತ್ಯಾತೀತ' ಧೋರಣೆ ಬೆರಗು ಹುಟ್ಟಿಸುವ ಅಂಶವಾಗಿದೆ. ಹಳ್ಳಿ,ಪಟ್ಟಣಗಳಲ್ಲಿರುವ 'ಮೊಹರಂ'ನ ಪಂಜಾಗಳನ್ನು ಕೂಡಿಸುವ ಮಸೀದಿಗಳಾಗಲಿ, ದರ್ಗಾಗಳಿಗಾಗಲಿ ದಿನಂಪ್ರತಿ, ವಾರ ವಾರ ನಡೆದುಕೊಳ್ಳುವ ಅಸಂಖ್ಯಾತ ಮುಸ್ಲಿಮೇತರ ಸಮುದಾಯ (ಈಗ ಹಿಂದೂ ಎಂದು ಗುರುತಿ-ಸಲ್ಪಡುವ ಬೇರೆ ಬೇರೆ ಜಾತಿಯ ಸಮುದಾಯಗಳು) ದ ಈ ಬಗೆಯ ಸಂಬಂಧ ಮೇಲು ನೋಟಕ್ಕೆ ಉತ್ತಮ ಬಾಂಧವ್ಯವೆಂದು ವಿವರಿಸಿದರಷ್ಟೆ ಸಾಲದು. ಮೂಲಭೂತವಾದಂತಹ ಧಾರ್ಮಿಕ ಅವಶ್ಯಕತೆಗಳನ್ನು ಪೂರೈಸಿ-ಕೊಳ್ಳಲು 'ಮೊಹರಂ'ನ ಮಸೀದಿಗಳು' 'ದರ್ಗಾ'ಗಳನ್ನು ಬಳಸಿಕೊಳ್ಳುವ ಜನ ಅಪ್ರಜ್ಞಾಪೂರ್ವಕ-ವಾಗಿಯಾದರೂ ಅವನ್ನು ಪರಕೀಯವೆಂದೂ ಸಹ ಯೋಚಿಸಲಾರರು. ಇಲ್ಲಿ ದರ್ಗಾಗಳನ್ನಾಗಲಿ, ಮಸೀದಿ-ಗಳನ್ನಾಗಲಿ, ದೇವಸ್ಥಾನಗಳನ್ನಾಗಲಿ ಅವುಗಳನ್ನು ದೈವಿಕ ಮಾದರಿಗಳನ್ನಾಗಿಯಷ್ಟೆ ಬಳಸಿಕೊಳ್ಳುತ್ತಾರೆಯೋ ಹೊರೆತು ಅದಕ್ಕೆ ಶಿಷ್ಟವಾದ ಆವರಣವೊಂದನ್ನು ನಿರ್ಮಿಸಿ ಕಂದರಗಳನ್ನು ಸೃಷ್ಟಿಸಿಕೊಳ್ಳಲಾರರು. ಇದನ್ನೊಂದು ಜಾತ್ಯಾತೀತವಾದ ಮನೋಭಾವನೆಯೆಂದು ಪರಿಭಾವಿಸಿದರೂ ಇದರ ಸ್ವರೂಪಕ್ಕೆ ಬೇರೆ ಬಗೆಯಕಾರಣಗಳೂ ಇಲ್ಲದಿಲ್ಲ. ಸೂಫಿಗಳ ಮಾನವೀಯತೆ ಮತ್ತು ಪ್ರೀತಿ, ಅಂತಃಕರಣಗಳಿಗೆ ಮಾರು ಹೋದಮುಸ್ಲಿಮೇತರರು ಮುಸ್ಲಿಮರಾಗಿ ಮತಾಂತರ ಹೊಂದಲು

ಮುಖ್ಯ ಪ್ರೇರಣೆಯಾಯಿತು. ಪುಣ್ಯತಿಥಿಗಳು (ಉರೂಸ್ ಗಳು) ಉತ್ಸವ ರೂಪಪಡೆಯಲೂ ಸಹ ಮುಖ್ಯಕಾರಣ ಇದೇ ಆಗಿದೆ.

ಮತ ಸಂಬಂಧಿ ಆಚರಣೆಗಳನ್ನು ಅಪರೂಪದ ಸಂಧರ್ಭದಲ್ಲಿ ಹೊರತು ಪಡಿಸಿ ಉಳಿದಂತೆ ಜೀವನದ ಪ್ರತಿ ವಿವರಗಳಲ್ಲೂ ನಾವು ಇಂತಹ ಸಾಂಸ್ಕೃತಿಕ ಏಕತೆಯನ್ನು ಕಾಣಬಹುದಾಗಿದೆ. ಈರೀತಿಯ ದ್ವಿ - ಸಾಂಸ್ಕೃತಿಕ ಪರಿಸರದಲ್ಲೂ ಸಾಂಸ್ಕೃತಿಕ ಪ್ರತ್ಯೇಕತೆಯ ಗುಣವನ್ನು ಉಳಿಸಿಕೊಳ್ಳುವ ವರ್ಗಗಳೂ ಕಾಣಸಿಗುತ್ತವೆ. ಇವು ಮೂಲತಃ ಮತ ಸಂಬಂಧಿ ಅಂಶಗಳನ್ನೇ ಸಾಂಸ್ಕೃತಿಕ ಅಂಶಗಳನ್ನಾಗಿ ಬಳಸುವ, ಭ್ರಮಿಸುವ ಮತ್ತು ಆರೋಪಿಸುವಸ್ವಭಾವದವುಗಳಾಗಿದ್ದು ಇವು ತಮ್ಮನ್ನು ನಿರ್ಧಿಷ್ಟ ಜನಾಂಗದ ಕುಲೀನ ವರ್ಗದ ಶ್ರೇಷ್ಠ ಪ್ರತಿನಿಧಿಗಳನ್ನಾಗಿಪರಿಭಾವಿಸುವ ವರ್ಗವಾಗಿರುತ್ತದೆ ಅಥವಾ ಆ ವರ್ಗದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಇಷ್ಟಪಡುವ ವರ್ಗಗಳಿಂದ ಕೂಡಿದುದಾಗಿರುತ್ತವೆ. ಇವು ತಾವು ನಂಬಿಕೊಂಡ ಮೌಲ್ಯಗಳು, ರೀತಿ, ರಿವಾಜುಗಳು, ಜೀವನ ವಿಧಾನ ಮುಂತಾಗಿ ಯಾವುದನ್ನು ನಂಬಿರುತ್ತವೆಯೋ ಅದರ ಸೂಚನೆ, ನಿರ್ದೇಶನಗಳನ್ನೊಳಗೊಂಡ ಸಂಸ್ಥಾಗತ ವ್ಯವಸ್ಥೆಯನ್ನು ಅಧಿಕೃತವಾಗಿ ನೆಚ್ಚಿಕೊಂಡಿರುತ್ತವೆ. ಹೆಚ್ಚಾಗಿ ಇವು ಮಠ, ಮಾನ್ಯಗಳಂತಹ ಧಾರ್ಮಿಕ ಸಾಂಪ್ರದಾಯಿಕ ವರ್ಗದವುಗಳಾಗಿರುತ್ತವೆ.

ಇದಕ್ಕೆ ಭಿನ್ನವಾಗಿ ನಾವು ಯಾವುದನ್ನು ದ್ವಿ-ಸಾಂಸ್ಕೃತಿಕತೆಯೆಂದು ವಿವರಿಸಲಾಗುತ್ತದೆಯೋ ಅಂತಹ ಸಾಂಸ್ಕೃತಿಕ ಪರಿಸರವು ಸ್ವಭಾವತಃ ಜಾತ್ಯಾತೀತ ಗುಣವುಳ್ಳದ್ದು ಮತ್ತು ಅದು ಮಾನವೀಯ ನೆಲೆಯಲ್ಲಿ ಮತಾಂಧತೆಯಂತಹ ಎಲ್ಲಾ ರೀತಿಯ ಅತಿಗಳನ್ನು ಮುರಿಯುವ ಅಂತಃಸತ್ವವುಳ್ಳದ್ದೂ ಆಗಿರುತ್ತದೆ.ಸಂಸ್ಕೃತಿಯೊಂದರ ಜೀವಾಳವೇ ಇದಾಗಿದ್ದು ಇಂತಹ ಆಶಯಗಳನ್ನು ಗುರುತಿಸುವಲ್ಲಿ ನಾವು ಸಾಂಸ್ಕೃತಿಕ ವಿಶ್ಲೇಷಣೆಯ ಈವರೆಗಿನ ಗ್ರಹಿಕೆಯ ಕ್ರಮಗಳಿಗಿಂತ ಭಿನ್ನವಾಗಿ ಯೋಚಿಸಬೇಕಾದ ಅಗತ್ಯವಿದೆ.

ಇಂಡಿಯಾದಲ್ಲಿನ ಮುಸ್ಲಿಂರನ್ನೊಳಗೊಂಡ ಮಧ್ಯಯುಗೀನ ಚರಿತ್ರೆಯ ವ್ಯಾಖ್ಯಾನಗಳು ಸಹ ಇಂತಹ ಪರಿಮಿತಿಗಳಿಂದ ತುಂಬಿದವುಗಳಾಗಿವೆ. ವೈಜ್ಞಾನಿಕವಾಗಿ ಚರಿತ್ರೆಯ ಬರವಣಿಗೆಯನ್ನು

ರೂಢಿಸಿಕೊಳ್ಳಲುತೊಡಗಿದ್ದೇ ನಾವು ವಸಾಹತುಶಾಹಿ ಕಾಲದಲ್ಲಾಗಿದೆ. ರಾಜರ ರಾಜಕೀಯ ಇತಿಹಾಸದ ಕಾಲಾನುಕ್ರಮಣಿಕೆಯನ್ನೇ ನಿರೂಪಿಸುವ ಮುಖ್ಯ ಉದ್ದೇಶವನ್ನು ಹೊಂದಿದ್ದ ಚರಿತ್ರೆಯ ಮಾನದಂಡಗಳು ವಸ್ತು ನಿಷ್ಠವಾಗಿ ನಮ್ಮ ಸಾಂಸ್ಕೃತಿಕ ವಿಕಾಸ ಕ್ರಮವನ್ನು ಗುರುತಿಸುವಲ್ಲಿ ವಿಫಲಗೊಂಡವು. ಇಂದು ಅದರ ಫಲವಾಗಿಯೇ ಹುಟ್ಟಿಕೊಂಡ ತಪ್ಪು ಗ್ರಹಿಕೆಗಳು ಜನಾಂಗೀಯ ದ್ವೇಷವನ್ನು - ಕೋಮುವಾದದಂತಹ - ಹರಡುವಲ್ಲಿ ಕಾರಣವಾಗಿವೆ[5]. ಚರಿತ್ರೆಯ ಈ ಮಿತಿಗಳನ್ನು ಅರಿತುಕೊಳ್ಳುವುದರೊಂದಿಗೆ ನಮ್ಮ ಧಾರ್ಮಿಕ, ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನುತಿಳಿಯಲು ಆಚರಣೆಗಳು, ನಂಬಿಕೆಗಳು, ಜೀವನ ವಿಧಾನವನ್ನು ಪರಿಶೀಲಿಸಬಹುದಾಗಿದೆ. ಕೋಮುವಾದದಿಂದಪ್ರೇರಿತವಾದ ಚರಿತ್ರೆಯ ಮಾನದಂಡ ಮತ್ತು ರಾಷ್ಟ್ರೀಯತೆಯ ಪ್ರಭಾವಕ್ಕೆ ಸಿಲುಕಿ ವಿಕೃತಗೊಂಡ ಸಾಂಸ್ಕೃತಿಕ ವಿಶ್ಲೇಷಣಾ ವಿಧಾನವು ಅಪಾಯಕಾರಿಯಾದುದಷ್ಟೇ ಅಲ್ಲದೆ, ನಮ್ಮ ಪರಂಪರೆಯ ಉನ್ನತ ಮೌಲ್ಯಗಳನ್ನು ತಿರುಚಿ ವಿರೂಪಗೊಳಿಸಿ ಬಿಡಬಹುದಾಗಿದೆ. ನಿದರ್ಶನಕ್ಕೆ ಬಲತ್ಕಾರದಿಂದಾಗಿಯೇ ಇಂಡಿಯಾದಲ್ಲಿ ಇಸ್ಲಾಂಗೆ ಮತಾಂತರ ನಡೆದದ್ದು ಎಂಬ ಅಭಿಪ್ರಾಯ ಕೇವಲ ಕೋಮುವಾದಿ ಮನೋಭಾವದ ಚರಿತ್ರೆಕಾರರು ಜನಾಂಗೀಯ ದ್ವೇಷ ಹುಟ್ಟಿಸಲು ಹೇಳುವ ವಿವರಣೆಯಂತೆ ತೋರುತ್ತದೆ. ಆದರೆ ನಮ್ಮ ಸಾಂಸ್ಕೃತಿಕ ವಿವರಗಳು ಬಿಚ್ಚಿಡುವ ನಿಜಸಂಗತಿಗಳೇ ಬೇರೆ ರೀತಿಯವುಗಳಾಗಿವೆ. ಇಸ್ಲಾಂ ಕೇವಲ ಕತ್ತಿಯಿಂದ ಹರಡದೆ ಸೂಫಿಗಳ ಪ್ರೇಮ, ಮಾನವೀಯತೆಯಿಂದ ಹರಡಿರುವುದಾಗಿ ತಿಳಿದು ಬರುತ್ತದೆ. ಮಧ್ಯಯುಗೀನ ಭಕ್ತಿ ಪಂಥದ ಸಂದರ್ಭವು ಇಸ್ಲಾಂ ಮತ್ತು ಇಸ್ಲಾಮೇತರ ಸಮುದಾಯಗಳ ನಡುವೆ ಅರ್ಥಪೂರ್ಣ ಸಂಬಂಧಗಳನ್ನು ಸ್ಥಾಪಿಸಿತು. ವಿವಿಧ ಪಂಥದ ಸೂಫಿಗಳು,ರಮಾನಂದ, ಗುರುನಾನಕ್ , ಚೈತನ್ಯರಂತಹ ಸಂತರಿಂದ ಆವರೆಗಿನ ಸನಾತನ ಧಾರ್ಮಿಕ ಮೌಲ್ಯಗಳು ಮತ್ತೊಮ್ಮೆ ಪರಾಮರ್ಶೆಗೊಳಪಟ್ಟು ವಿಶಿಷ್ಟ ನಂಬಿಕೆಗಳ ಜ್ಯಾತ್ಯಾತೀತತೆಯ ಸ್ಪರ್ಶ ಪಡೆದ ಸಾಮಾಜಿಕ ಸಂರಚನೆಯುಮುಕ್ತವಾದ ಅವಕಾಶಗಳಿಗೆ ತೆರೆದುಕೊಂಡಿತು. ಇದಕ್ಕೆ ಸ್ಪಷ್ಟ ನಿದರ್ಶನವಾಗಿ ಸೂಫಿಗಳೊಂದಿಗಿನ ಮುಸ್ಲಿಮೇ-ತರರ ಸಂಬಂಧವು ಗಟ್ಟಿಗೊಳ್ಳುತ್ತಾ ಅವರು ಇಸ್ಲಾಂನ ತೆಕ್ಕೆಯೊಳಗೆ ಸಿಲುಕಿದರು. ಇದನ್ನು ಕೇವಲ 'ಮತಾಂತರೀಕರಣ'ವೆಂಬುದಾಗಿ ವಿವರಿಸಲಾಗದು ಎಂದು ಈಟನ್ ಅಭಿಪ್ರಾಯ ಪಡುತ್ತಾರೆ. ಮತಾಂತರೀಕರಣ-ವೆನ್ನುವುದು ಕೇವಲ ಕ್ರೈಸ್ತಮಿಷನರಿಗಳು ವಸಾಹತು ಶಾಹಿ ಕಾಲದಲ್ಲಿ ಹುಟ್ಟು ಹಾಕಿದ

ಪದ್ಧತಿಯಾಗಿದ್ದು ಅಲ್ಲಿಮತಾಂತರೀಕರಣಕ್ಕೊಳಗಾಗುವವನು ಮತ್ತು ದೀಕ್ಷೆ ಕೊಡುವವನೂ ಇಬ್ಬರೂ ಪ್ರಜ್ಞಾಪೂರ್ವಕವಾಗಿಯೇ ಈಪ್ರಕ್ರಿಯೆಯಲ್ಲಿ ತೊಡಗಿರುತ್ತಾರಾದ್ದರಿಂದ ಇದನ್ನು ಬೇಕಾದರೆ ಮತಾಂತರೀಕರಣವೆಂದು ಹೆಸರಿಸಬಹುದು. ಆದರೆ ಸೂಫಿ ಪರಂಪರೆಯೊಂದಿಗೆ ಗುರುತಿಸಿಕೊಂಡ ಮುಸ್ಲಿಮೇತರ ವರ್ಗವೊಂದು ಈ ರೀತಿಯ ಪ್ರಜ್ಞಾಪೂರ್ವಕವಾದ ಕ್ರಿಯೆಯ ಭಾಗವಾಗಿರದೆ ಪರಂಪರೆಯೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಲೇ ಇಸ್ಲಾಂನ ಒಂದು ಭಾಗವಾಗಿ ಬಿಟ್ಟಿರುತ್ತಾರೆ. ಈ ಪ್ರಕ್ರಿಯೆಯನ್ನು ಈಟನ್ ಮತಾಂತರೀಕರಣವೆಂದು ಕರೆಯದೆ 'ಸಂಸ್ಕೃತೀಕರಣ' ಪ್ರಕ್ರಿಯೆಂದು ಕರೆದಿರುವುದು ಸಹ ಅರ್ಥಪೂರ್ಣವಾಗಿದೆ.

ಧರ್ಮವನ್ನೊಳಗೊಂಡಂತೆ ವಿಶಾಲಾರ್ಥದಲ್ಲಿ 'ಸಂಸ್ಕೃತಿ'ಯ ನಿರ್ವಚನವನ್ನು ಗಮನಿಸಿದರೆ ಅದು ಚಲನಶೀಲವಾದದ್ದು ಮತ್ತು ಪರಿವರ್ತನೀಯ ಗುಣವುಳ್ಳದ್ದೂ ಆಗಿದೆ. ಇಂತಲ್ಲಿಯೆ ಅದರ ಜೀವಂತಿಕೆ ಇರುವುದೂ ಕೂಡ. ಇಂಡಿಯಾದಂತಹ ವರ್ಣವ್ಯವಸ್ಥೆಯ ವಿಶಿಷ್ಟ ಸಾಮಾಜಿಕ ರಚನೆಯಲ್ಲಿ ಧರ್ಮವು ಸಮುದಾಯವೊಂದಕ್ಕೆ ತನ್ನ ಸಂಪ್ರದಾಯಶೀಲತೆಯ ಮೂಲಭೂತ ಗುಣಗಳ ಮೂಲಕ ನಿರ್ಬಂಧಕ್ಕೊಳ-ಪಡಿಸುವುದು ಕಷ್ಟದ ವಿಷಯವಾಗಿದೆ. ವಾಸ್ತವಿಕವಾಗಿ 'ಇಸ್ಲಾಂ' ನಂತಹ ಸಾಂಸ್ಥಿಕ ಧರ್ಮವೊಂದು ಹೇರಲ್ಪಡುವ ಧಾರ್ಮಿಕ ವಿಧಿ, ಕಟ್ಟಳೆಗಳು ಮತ್ತು ಜೀವನ ವಿಧಾನವನ್ನು ಪ್ರಭಾವಿಸುವಂತಹ ನಿಯಮ ನಿಬಂಧನೆಗಳ ನಡುವೆಯೂ ಅದರ ಸಂಪ್ರದಾಯಕತೆಯನ್ನು ಮೀರಿ ಮುಸ್ಲಿಮೇತರ ವರ್ಗದೊಂದಿಗೆ ಹೊಸತೊಂದು ಜೀವಂತಿಕೆಯನ್ನು ಅನ್ವೇಷಿಸಲು ಪ್ರಯತ್ನಿಸುವ ಈ ಬಗೆಯ ಪ್ರಕ್ರಿಯೆಗಳು (ಉರುಸು, ಮೊಹರಂ ಇತ್ಯಾದಿ) ಇಂಡಿಯಾದಂತಹ ವಿಶಿಷ್ಟ ಸಾಮಾಜಿಕ ರಚನೆಗಳಲ್ಲಿ ಸಾಧ್ಯವಿದ್ದು ಇವುಗಳ ಅಂತರಂಗ ಬಿಟ್ಟುಕೊಡುವ ಸತ್ಯಸಂಗತಿಗಳು ಮತ್ತು ಅವು ವಿವರಿಸುವ ಜೀವನ ಪ್ರೀತಿ, ಮಾನವೀಯತೆಯನ್ನು ಅರ್ಥಮಾಡಿಕೊಳ್ಳಲು ಯತ್ನಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಕರ್ನಾಟಕ ಮತ್ತು ಆಂಧ್ರದ ಗಡಿಭಾಗವು ಬೀದರಿನಿಂದ ಹಿಡಿದು ಕೋಲಾರದವರೆಗಿನ ಭಾಗವಾಗಿದ್ದು ಒಟ್ಟು ಏಳು ಜಿಲ್ಲೆಗಳು 'ಗಡಿ'ಗೆ ಸೇರಿದ ಜಿಲ್ಲೆಗಳಾಗಿವೆ. ಹಾಗೆಯೇ ಆಂಧ್ರದ ಒಟ್ಟು ಆರುಜಿಲ್ಲೆಗಳು

(ಮೆದಕ್, ರಂಗಾರೆಡ್ಡಿ, ಮೆಹಬೂಬ್ ನಗರ,ಕರ್ನೂಲು,ಅನಂತಪುರ ,ಚಿತ್ತೂರು) ಗಡಿಭಾಗದ ಜಿಲ್ಲೆಗಳಾಗಿವೆ.

ಮುಖ್ಯವಾಗಿ ಬಹುಮನಿ ಸಂಸ್ಥಾನದ ಹೃದಯ ಭಾಗವಾಗಿದ್ದ ಗುಲುಬರ್ಗಾ, ಬೀದರ ಮತ್ತು ನಂತರದ ಶಾಹೀ ರಾಜ್ಯಗಳಲ್ಲೊಂದಾದ ಗೋಲ್ಕೊಂಡಾ ಪ್ರದೇಶದ ತೆಲುಗಾಣವು ಸಾಂಸ್ಕೃತಿಕವಾಗಿ ತನ್ನದೇ ಆದ ವೈಶಿಷ್ಟ್ಯಗಳಿಂದ ಕೂಡಿದ ಪ್ರದೇಶವಾಗಿದೆ. ಈ ಪ್ರದೇಶವು 'ದಖನಿ' ಭಾಷೆಯು ಸೃಷ್ಟಿಗೊಂಡ ಭಾಗವಾಗಿರುವುದಲ್ಲದೆ 'ಭಾಷಿಕ'ವಾಗಿಯೂ ಇದು ವೈಶಿಷ್ಟ್ಯಮಯವಾದ ಪ್ರದೇಶವಾಗಿದೆ. ಬಹುತೇಕ ಈ ಪ್ರದೇಶದಲ್ಲಿ ಉರ್ದು-ಕನ್ನಡ ಅಥವಾ ಉರ್ದು ತೆಲುಗು 'ದ್ವಿ-ಭಾಷಿಕ 'ಪರಿಸರವು ಕಂಡುಬರುತ್ತದೆ.. ಗುಲುಬರ್ಗಾದ ಗೇಸುದರಾಜರನ್ನೊಳಗೊಂಡಂತೆ ಅಸಂಖ್ಯಾತ ಸೂಫಿಗಳು ಈ ಭಾಗದಲ್ಲೆ ಇದ್ದವರಾಗಿದ್ದರು. ಈ ಸಂತರ ದರ್ಗಾಗಳು, ವಾರ್ಷಿಕ ಪುಣ್ಯತಿಥಿಗಳಾದ 'ಉರೂಸ್ 'ಗಳು 'ಮೊಹರಂ'ನ ಆಚರಣೆಯಿಂದಾಗಿ ಇದು ಸಾಂಸ್ಕೃತಿಕವಾಗಿ ವಿಶಿಷ್ಟ ಲಕ್ಷಣಗಳಿಂದ ಕೂಡಿದ ಪ್ರದೇಶವಾಗಿದೆ. ಹಾಗೆಯೇ ಗುಲುಬರ್ಗಾ, ರಾಯಚೂರಿನಿಂದ ಕೆಳಗಡೆ ಬಳ್ಳಾರಿ,ಚಿತ್ರದುರ್ಗ,ತುಮಕೂರ, ಮೊದಲಾದೆಡೆ ಉರ್ದುವಿನ ಪ್ರಭಾವವು ಕಡಿಮೆಯಾದರೂ 'ಸೂಫಿಜಂ'ನ ದಟ್ಟ ಪ್ರಭಾವನ್ನಂತೂ ಕಾಣಬಹುದಾಗಿದೆ. ಕರ್ನೂಲು ಜಿಲ್ಲೆಯ ಆದೋನಿ ತಾಲೂಕಿನ 'ಕೌತಾಳಂ'ನ 'ಖಾದರ್ ಲಿಂಗ್'ನ ದರ್ಗಾ , ಮತ್ತು ಅನಂತಪುರ ಜಿಲ್ಲೆಯ ಕಣೇಕಲ್ಲು ತಾಲೂಕಿನ 'ದರ್ಗಾಹೊನ್ನೂರಿ' ನ 'ಸರ್ಮಸ್ತ್ ಹುಸೇನಿ ಚಿಷ್ತಿ' ಯವರ ದರ್ಗಾ ಹಾಗೂ ಅನಂತಪುರ ಜಿಲ್ಲೆಯ 'ಪೆನುಗೊಂಡೆ' ಯ 'ಬಾಬಾ ಫಕ್ರುದ್ದೀನ'ರ ದರ್ಗಾ ಸಂಸ್ಥೆಗಳು ಸ್ಪಷ್ಟಪಡಿಸುವ ಹಾಗೆ ಮುಸ್ಲಿಂ ಮತ್ತು ಮುಸ್ಲಿಮೇತರರ ಧಾರ್ಮಿಕ ಬದುಕಿನ ಬಹುಮುಖ್ಯ ಅಂಗಗಳಾಗಿವೆ.


'ಸೂಫಿಜಂ'ನ ತಾತ್ವಿಕ ಮತ್ತು ಆಚರಣಾತ್ಮಕ ನೆಲೆಗಳ ಅಧ್ಯಯನಕ್ಕೆ ಮೇಲೆ ಸೂಚಿಸಿದ ಸ್ಥಳಗಳನ್ನಾಯ್ದುಕೊಂಡಿದೆ. ಹಾಗೆಯೇ 'ಮೊಹರಂ'ಗೆ ಸಂಬಂಧಿಸಿದಂತೆ ಗಡಿಭಾಗದ ಕೆಲವು ವಿಶಿಷ್ಟ ಸ್ಥಳಗಳಾದ ಬೀದರಿನ ಸಮೀಪದ ಮೀನಿಕೇರಿ ,ಬಗ್ದಲ್ ,ಕುಮುಟಾಣ, ಹುಮನಾಬಾದ್ ತಾಲೂಕಿನ ಸುಲ್ತಾನಬಾದ್ ವಾಡಿ, ಕಡಕ್ ಚಿಂಚೋಳಿ,ಗುಲಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ 'ಮೋತಕಪಲ್ಲಿ', 'ಗುರುಮಠ್‌ಕಲ್' ರಾಯಚೂರಿನ ಮುದುಗಲ್ ಅಗಸನೂರು ಮತ್ತು ಇದೇ ಜಿಲ್ಲೆಯ ಗಡಿಭಾಗದಲ್ಲಿರುವ

ಆಂಧ್ರಕ್ಕೆ ಸೇರಿದ 'ಚಿನ್ನ ಹರಿವಾಣಂ' 'ಪೆದ್ದ ಹರಿವಾಣಂ' ಮತ್ತು ಬಳ್ಳಾರಿ ತಾಲೂಕಿನ 'ವಣೇನೂರು', ಈ ಜಿಲ್ಲೆಯ ಗಡಿಭಾಗದಲ್ಲಿರುವ ಆಂಧ್ರದ 'ಪೆನ್ನಂಪಳ್ಳಿ', ಹಾವಳಿಗಿ ಮುಂತಾದ ಊರುಗಳನ್ನು ಆಯ್ದುಕೊಳ್ಳಲಾಗಿದೆ. ಉಳಿದಂತೆ ಮದುವೆ, ಹುಟ್ಟು, ಸಾವು ಮತ್ತು ಕೆಲವು ವಿಶಿಷ್ಟ ಧಾರ್ಮಿಕ ಆಚರಣೆಗಳ ಕುರಿತಾದ ಅಧ್ಯಯನಕ್ಕೆ ಬಳ್ಳಾರಿ,ಅನಂತಪುರ ಮತ್ತು ಕರ್ನೂಲು ಜಿಲ್ಲೆಯ ಸ್ಥಳಗಳನ್ನಾಯ್ದುಕೊಳ್ಳಲಾಗಿದೆ. (ವಿವರಗಳಿಗೆ ನಕ್ಷೆ ನೋಡಿ)

೧.೨ ಅಧ್ಯಯನ ವಿಧಾನ :

ಪ್ರಸ್ತುತ ಅಧ್ಯಯನವು ಮುಖ್ಯವಾಗಿ 'ಕ್ಷೇತ್ರಕಾರ್ಯ'ವನ್ನು ಅವಲಂಬಿಸಿದ್ದು ಹಿಂದೂ - ಮುಸ್ಲಿಂ ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳನ್ನು ವಿಶ್ಲೇಷಿಸುವುದರೊಂದಿಗೆ ಅದಕ್ಕೆ ಸಂವಾದಿಯಾಗಿ ಚಾರಿತ್ರಿಕ, ಸಾಹಿತ್ಯಿಕ ದಾಖಲೆಗಳನ್ನು ಪರಾಮರ್ಶಿಸಿ ಸಾಂಸ್ಕೃತಿಕ ಸಂಬಂಧಗಳ ಸ್ವರೂಪವನ್ನು ಅರ್ಥೈಸುವ ಪ್ರಯತ್ನ ಮಾಡಲಾಗಿದೆ. ಈವರೆಗಿನ ಈ ಕ್ಷೇತ್ರಗಳಲ್ಲಾದ ಅಧ್ಯಯನಕ್ಕೆ ಸಂಬಂಧಿಸಿದ ಕೃತಿಗಳಲ್ಲಿನ ಅಧ್ಯಯನ ಮಾದರಿಗಳನ್ನು ಗಮನಿಸುವುದರೊಂದಿಗೇ ಸಂಗ್ರಹಿಸಿದ ದತ್ತಾಂಶಗಳ ಆಧಾರದ ಮೇಲೆ ಪ್ರಸ್ತುತ ಅಧ್ಯಯನದ ಕ್ಷೇತ್ರವನ್ನು ವಿಸ್ತರಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ಇದಕ್ಕೆ ಪೂರಕವಾಗಿ ಬೇರೆ ಬೇರೆ ಕ್ಷೇತ್ರಗಳಲ್ಲಾದ ಅಧ್ಯಯನ ವಿಧಾನ, ವಿಶ್ಲೇಷಣಾ ಕ್ರಮಗಳನ್ನು ಅನುಲಕ್ಷಿಸಲಾಗುವುದು. ನಿದರ್ಶನಕ್ಕೆ ಚರಿತ್ರೆಯ ಪುನರ್ರಚನೆಗೆ ಸಹಾಯಕವಾಗುವಂತಹ ಹೊಸ ಬಗೆಯ ವಿಶ್ಲೇಷಣಾ ಕ್ರಮವನ್ನು ತೋರಿಸಿಕೊಡುವ 'ಸಬಾಲ್ಟ್ರನ್ ಸ್ಟಡೀಸ್' ಎನ್ನುವ ಅಧ್ಯಯನ ಸರಣಿಯನ್ನು ಹೆಸರಿಸಬಹುದು. ಈಸರಣಿಯ ಆರನೆಯ ಸಂಪುಟದಲ್ಲಿ ಶ್ರೀಮತಿ ವೀಣಾದಾಸ್ ಎನ್ನುವ ಮಾನವಶಾಸ್ತ್ರಜ್ಞರು ವಿವರಿಸುವಂತೆ 'ಚರಿತ್ರಕಾರನಿಗೆ ಹೊಸತನದ ಹುಟ್ಟು ಮುಖ್ಯವಾಗುತ್ತದೆ. ಅಲಕ್ಷಿತ ವಿಷಯಗಳ ಅಧ್ಯಯನದ ಸಂಪುಟಗಳಲ್ಲಿ ಅತ್ಯಂತ ಮಹತ್ವದ ಲೇಖನಗಳೆಲ್ಲ ಹೊಸತರ ಉಗಮವನ್ನು ಕುರಿತವೇ ಆಗಿವೆ. ದೈನಿಕಕ್ಕೂ ಚಾರಿತ್ರಿಕಕ್ಕೂ ಇರುವ ಸಂಬಂಧವನ್ನು ಗ್ರಹಿಸುವುದು ತಾತ್ವಿಕ ಚಿಂತನೆಯ ಮುಂದಿನ ಘಟ್ಟವಾಗಿದೆ. ಈ ಬಗೆಯ ದೃಷ್ಟಿಕೋನದ ಬೆಳವಣಿಗೆಯಿಂದ ಸಾಂಸ್ಕೃತಿಕ ಇತಿಹಾಸಕಾರರನ್ನು ಹೊಸ ರೀತಿಯಲ್ಲಿ ನೋಡಲು ಸಹಾಯಕವಾಗುತ್ತದೆ. ಇಲ್ಲಿನ ಚಿಂತನೆಗಳು

ಕರ್ನಾಟಕ - ಆಂಧ್ರದ ಗಡಿಭಾಗ



ವಸಾಹತುಶಾಹಿ ಇತಿಹಾಸಕ್ಕೂ, ಸ್ಥಳೀಯ ಇತಿಹಾಸಗಳಿಗೂ ಇರುವ ಸಂಬಂಧವನ್ನು ಪರಿಶೀಲಿಸುತ್ತಾ ಭಾರತೀಯ ಸಮಾಜದ ಚರಿತ್ರೆಯನ್ನು ರಚಿಸಲು ಇರುವ ಸಾಧ್ಯತೆಗಳನ್ನು ವಿಸ್ತರಿಸಿದೆ. ಅಧಿಕೃತವಲ್ಲದ ಚರಿತ್ರೆಯ ಮೂಲಗಳು ಹೇರಳ- ವಾಗಿಲ್ಲದಿರಬಹುದು. ಸುಲಭವಾಗಿ ಸಿಗದಿರಬಹುದೆಂಬುದು ಮುಖ್ಯವಲ್ಲ. ಇಂಥ ಮೂಲಗಳನ್ನು ಕೂಡ ಅಧಿಕೃತವೆಂದೇ ಮನ್ನಿಸುವ ದೃಷ್ಟಿ ಅಗತ್ಯವಾಗಿದೆ" ಎಂದು ವ್ಯಾಖ್ಯಾನಿಸುತ್ತಾರೆ. ಈ ರೀತಿಯ ವ್ಯಾಖ್ಯಾನಗಳು ಮತ್ತೆ ಮತ್ತೆ ನಮ್ಮ ಈವರೆಗಿನ ಗ್ರಹಿಕೆಯ ಕ್ರಮಗಳನ್ನು ಪ್ರಶ್ನಿಸುತ್ತವೆಯಷ್ಟೆ ಅಲ್ಲದೆ ಭಿನ್ನ ಮತ್ತು ಸೂಕ್ತ ಮಾನದಂಡಗಳಿಂದ ನಮ್ಮ ಸಂಸ್ಕೃತಿಯಂತಹ ವಿಷಯಗಳನ್ನು ವಿಶ್ಲೇಷಿಸುವ ಅಗತ್ಯವನ್ನು ಒತ್ತಿ ಹೇಳುತ್ತವೆ.[೫]

ಪ್ರಸ್ತುತ ಅಧ್ಯಯನದ ವಿಷಯವಾದ ಹಿಂದೂ - ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯದ ಸ್ವರೂಪವನ್ನು ನಾವು ಅರ್ಥವಮಾಡಿಕೊಳ್ಳಬೇಕಾದರೆ ವಸಾಹತು ಶಾಹಿಯ ಚರಿತ್ರೆಯ ತಪ್ಪು ಗ್ರಹಿಕೆಗಳಿಂದ ಬಿಡಿಸಿಕೊಳ್ಳಬೇಕಾಗುತ್ತದೆ. ವರ್ತಮಾನದ ಸಾಂಸ್ಕೃತಿಕ ತಲ್ಲಣಗಳಿಗೆ ಮತ್ತು ನಮ್ಮ ಪರಂಪರೆಯೊಂದಿಗೆ ಅವ್ಯಾಹತವಾಗಿ ಸಾಗಿ ಬಂದ ಸೌಹಾರ್ದ- ಯುತ ಬಾಂಧವ್ಯಕ್ಕೆ ಕುತ್ತಾಗುವ ಮತ್ತದನ್ನು ವಿರೂಪಗೊಳಿಸುವ ಕೋಮುವಾದೀ ಸಾಂಸ್ಕೃತಿಕ ವ್ಯಾಖ್ಯಾನಗಳನ್ನು ಪುನರ್ ಪರಿಶೀಲಿಸಬೇಕಾಗುತ್ತದೆ.

ಇದಕ್ಕೆ ಪೂರಕವಾಗಿ ನಾವು ಇಂತಹ ಕೋಮುವಾದದ ಮನೋಭಾವವನ್ನು ಗುರುತಿಸುವ ಮತ್ತದರ ಪ್ರಭಾವದಿಂದ ಬಿಡಿಸಿಕೊಳ್ಳುವ ಬಗೆಯುನ್ನು ನಮ್ಮ ಅಧ್ಯಯನದ ಕ್ರಮದಲ್ಲಿಯೇ ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಕೋಮುವಾದದ ಬಗೆಗೆ ಸಾಕಷ್ಟು ಚರ್ಚಿಸಿರುವ ಭಾರತೀಯ ಇತಿಹಾಸಕಾರರಲ್ಲೊಬ್ಬರಾದ ಬಿಪಿನ್ ಚಂದ್ರ ಅವರು ವಿವರಿಸುವಂತೆ ನಮ್ಮ ಸಾಂಸ್ಕೃತಿಕ ಇತಿಹಾಸವು ಅತ್ಯಂತ ಸಾಮರಸ್ಯದಿಂದ ಕೂಡಿದುದಾಗಿದ್ದು ಪಂಜಾಬಿನ ಮುಸ್ಲಿಮನೊಬ್ಬ ಪಂಜಾಬಿನ ಹಿಂದೂವಿಗೆ ಹೆಚ್ಚು ನಿಕಟವಾಗಿರುತ್ತಾನೆ. ಬಂಗಾಳಿ ಮುಸ್ಲಿಮನೊಬ್ಬ ಪಂಜಾಬಿ ಮುಸ್ಲಿಮನಿಗಿಂತ ಬಂಗಾಳಿ ಹಿಂದೂವಿನೊಂದಿಗೇ ಸಾಂಸ್ಕೃತಿಕವಾಗಿ ಹೆಚ್ಚು ನಿಕಟವಾಗಿರುತ್ತಾನೆ.[೬] ಈ ರೀತಿಯ ಸಾಂಸ್ಕೃತಿಕ ವೈವಿಧ್ಯತೆಯು ಪ್ರಾದೇಶಿಕ ಬದ್ಧತೆಯನ್ನು ಅಲ್ಲಿನ ಪರಸ್ಪರ ಅಂತರ್ ಸಂಬಂಧಗಳನ್ನು ಸೂಚಿಸುತ್ತದೆಯಷ್ಟೆ ಅಲ್ಲದೆ, ಧರ್ಮ, ಸಂಸ್ಕೃತಿಗಳ

ಸಿದ್ದ ಮಾದರಿಗಳನ್ನು ಪ್ರಾದೇಶಿಕ ಭಿನ್ನತೆಯನ್ನು ಪರಿಗಣನೆಗೆ ತಾರದೆ ಸರ್ವವ್ಯಾಪಿಯಾಗಿ ಅನ್ವಯಿಸುವ ಮಿತಿಗಳನ್ನು ತೋರಿಸಿಕೊಡುತ್ತದೆ.

೧.೩ ಈವರೆಗೆ ನಡೆದ ಅಧ್ಯಯನದ ಸಮೀಕ್ಷೆ :

ಕರ್ನಾಟಕ-ಆಂಧ್ರದ ಗಡಿ ಭಾಗಕ್ಕೆ ಸಂಬಂಧಿಸಿದಂತೆ ಹಿಂದೂ-ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯದ ಸ್ವರೂಪವನ್ನುಕುರಿತಾದ ಅಧ್ಯಯನದ ಪ್ರಯತ್ನವು ಇದೇ ಮೊದಲ ಸಲವಾದರೂ ಈ ಭಾಗದ ಸಾಂಸ್ಕೃತಿಕ ಬಾಂಧವ್ಯದ ನಿದರ್ಶನಗಳನ್ನು ಪಾಕ್ಷಿಕವಾಗಿಯಾದರೂ ಚರ್ಚಿಸಿದ ಕೆಲವು ಅಧ್ಯಯನಗಳು ನಡೆದಿವೆ. ಇವುಗಳಲ್ಲಿ ತುಂಬಾ ಮಹತ್ವದ ಅಧ್ಯಯನವನ್ನಾಗಿ ಅಮೇರಿಕದ 'ಈಟನ್' ಎನ್ನುವವರು ನಡೆಸಿದ ಕರ್ನಾಟಕದ ಸೂಫಿಗಳು ಕುರಿತಾದಂತಹ ಅಧ್ಯಯನವನ್ನು ಹೆಸರಿಸಬಹುದು. ಈ ಅಧ್ಯಯನದ ಫಲವಾಗಿ ಹೊರ ಬಂದ 'ಸೂಫೀಸ್ ಆಫ್ ಬಿಜಾಪುರ್' ಕೃತಿಯು ಆವರೆಗಿನ ವಸಾಹತುಶಾಹಿ ಅಧ್ಯಯನದ ಗ್ರಹಿಕೆಯ ಕ್ರಮಗಳಿಗಿಂತ ಭಿನ್ನವಾದ ನೆರೆಯಲ್ಲಿ ನಿಂತು ಕರ್ನಾಟಕ ಸಂಸ್ಕೃತಿಯ ವಿಶಿಷ್ಟ ಹೊಳಹುಗಳನ್ನು ಕಾಣುವಲ್ಲಿ ಯಶಸ್ವಿಯಾಗುತ್ತದೆ. ನಿದರ್ಶನಕ್ಕೆ 'ಈಟನ್' ಅವರು ಬಿಜಾಪುರದ ಸೂಫಿಗಳ ಸಿದ್ಧಾಂತ, ತಾತ್ವಿಕತೆಯನ್ನು ವಿಶ್ಲೇಷಿಸುವಾಗ ಸ್ಥಳೀಯ ಪ್ರಭಾವಗಳು ಮತ್ತು ಸಮಕಾಲೀನ ಸಾಂಸ್ಕೃತಿಕ ಆಶಯಗಳು ನಡುವಿನ ಅಂತರ್ ಸಂಬಂಧಗಳನ್ನು ಗುರುತಿಸುತ್ತಾರೆ. ಮುಸ್ಲಿಮೇತರರೊಂದಿಗೆ ಸೂಫಿಗಳ ಸಂಬಂಧ 'ಸಂಸ್ಕೃತೀಕರಣ' 'ಮತಾಂತರೀಕರಣ' ಪ್ರಕ್ರಿಯೆಗಳ ಸ್ವರೂಪವನ್ನು ಅರಿತು ಕೊಳ್ಳುವುದರೊಂದಿಗೆ ಈವರೆಗೂ ನಮ್ಮ ಕರ್ನಾಟಕ ಸಂಸ್ಕೃತಿಯ ಅಧ್ಯಯನಕಾರರು ದಾಖಲಿಸದೇ ನಿರ್ಲಕ್ಷಿಸದ ಇಸ್ಲಾಂ ಜನಪದ ಸಂಸ್ಕೃತಿಯ ಆಶಯಗಳನ್ನು ಮತ್ತದರ ವಿಶಿಷ್ಟ ಗುಣವನ್ನು ತೋರಿಸಿಕೊಡುತ್ತಾರೆ. ಮಧ್ಯಯುಗದಿಂದಲೂ ಸೂಫಿಗಳ ಮುಖ್ಯ ಕೇಂದ್ರವಾದ ಬಿಜಾಪುರದ ಸೂಫಿಗಳು ಬಹುತೇಕ ಕರ್ನಾಟಕವನ್ನೇ ಪ್ರತಿನಿಧಿಸುತ್ತಿದ್ದರಾದ್ದರಿಂದ ಈಟನ್ ವಿವರಿಸುವ ಸೂಫಿಗಳೆಲ್ಲ ಕರ್ನಾಟಕದ ಸೂಫಿಗಳೇ ಆಗಿದ್ದಾರೆ. ಬಂದೇ ನವಾಜ್ ಗೇಸುದರಾಜ್ ರಂತಹ ಪ್ರಮುಖ ಸೂಫಿಗಳೊಂದಿಗೆ ಹಲವಾರು ಸಂತರ ಕುರಿತು ಇಲ್ಲಿನ ಅಧ್ಯಯನ ಕ್ಷೇತ್ರ ವಿಸ್ತರಿಸಿದೆ.

ಈಟನ್ ಅವರು ಸೂಫಿಗಳ ಕುರಿತಂತೆ ವಿವರಿಸುತ್ತಾ ದಖನ್ನಿನ ಜನಪದ ಇಸ್ಲಾಂ ಅನ್ನು ವಿಶ್ಲೇಷಿಸುವಾಗ ಸ್ಥಳೀಯ ಪ್ರಭಾವಗಳನ್ನು ಪರಿಗಣಿಸಿ ಮಾಡುವ ವ್ಯಾಖ್ಯಾನವು, ಮತ್ತು ಕಡೆಯಲ್ಲಿ ಬರುವ ಯೋಗ್ಯ ತೀರ್ಮಾನಗಳು ಅರ್ಥಪೂರ್ಣವಾದುವುಗಳಾಗಿವೆ. ದಖನ್ನಿನ ಸಮಾಜದ ಪಾರಂಪರಿಕ ಅಂಶಗಳು 'ಇಸ್ಲಾಂ' ಅನ್ನು ಪ್ರಭಾವಿತಗೊಳಿಸಿ ತನ್ನದೇ ಆದ ವಿಶಿಷ್ಟ 'ಜನಪದ ಇಸ್ಲಾಂ' ರೂಪುಗೊಂಡ ಬಗೆಯನ್ನು ವಿವರಿಸುತ್ತಾರೆ. ಸಾಂಪ್ರದಾಯಿಕ ದಖನ್ನಿನ ಮಹಿಳೆಯರ ಜನಪದ ಸಾಹಿತ್ಯದ ಪ್ರಕಾರಗಳಾಗಿದ್ದ ಬೀಸುವ ಪದಗಳು ಮತ್ತು ನೇಯ್ಗೆಯ ಪದಗಳಿಗೆ ಸಾಂವಾದಿಯಾಗಿ'ಇಸ್ಲಾಂ' ನ ತಾತ್ವಿಕತೆಯನ್ನು ವಸ್ತುವನ್ನಾಗುಳ್ಳ ಚಕ್ಕಿನಾಮ (ಬೀಸುವ ಪದ) ಮತ್ತು ಚರಕಾ ನಾಮಗಳ (ನೇಯ್ಗೆಯ ಹಾಡುಗಳು) ಸೂಫಿಗಳಿಂದ ಮತ್ತವರ ಉತ್ತರಾಧಿಕಾರಿಗಳಿಂದ ಸೃಷ್ಟಿಗೊಂಡು 'ಜಾನಪದ ಇಸ್ಲಾಂ' ಅನ್ನು ಪ್ರವೇಶಿಸಿದವು. ಸ್ವತಃ ಈಟನ್ ಅವರೇ ವಿವರಿಸುವಂತೆ ಚಕ್ಕೀನಾಮ ಚರಕಾನಾಮಗಳ ವಸ್ತು ವಿಷಯವನ್ನು ವಿಶ್ಲೇಷಿ ನೋಡಿದಾಗ ನಾವು ಪರಸ್ಪರ ಪೂರಕವಾದ ಮೂರು ಅಂಶಗಳನ್ನು ಗಮನಿಸಬಹುದೆಂಬುದಾಗಿ ಹೇಳುತ್ತಾರೆ. ಮೊದಲನೆಯದಾಗಿ ದೇವರು ಮತ್ತು ಮಹಮ್ಮದ್ ಪೈಗಂಬರನ ನಡುವಿನ ಆತ್ಮಿಕ ಸಂಬಂಧ ಮತ್ತು ಎರಡನೆಯದಾಗಿ ಇವುಗಳನ್ನು ಸಂಕೇತಿಸಲು ಬೀಸುವಕಲ್ಲು ಮತ್ತು ಅವುಗಳ ಯಾಂತ್ರಿಕ ಭಾಗಗಳನ್ನು ಈ ಸಂಬಂಧಗಳ ಸಂಕೇತವಾಗಿ ಕಾಣುವುದು ಮತ್ತು ಮೂರನೆಯದಾಗಿ ಗೃಹಕೃತ್ಯದಲ್ಲಿ ತೊಡಗಿರುವ ಮಹಿಳೆಯ ಕೆಲಸಗಳನ್ನು ಆಧ್ಯಾತ್ಮಿಕ ನೆನಪುಗಳೊಡನೆ ಸಂಬಂಧಗೊಳಿಸಿ ಆಕೆಯ ವಿವಿಧ ಗತಿಗಳನ್ನು ನಿಯಂತ್ರಿಸುವುದಾಗಿತ್ತು ಎಂಬುದಾಗಿ ವಿವರಿಸುತ್ತಾರೆ. ಈ ಅಂಶಗಳು ಸ್ಪಷ್ಟ ಪಡಿಸುವಂತೆ ಸ್ಥಳೀಯ ಸಂಸ್ಕೃತಿಯೊಂದಿಗೆ ಇಸ್ಲಾಂನ ಸಾವಯವ ಸಂಬಂಧ ಪಡೆದುಕೊಳ್ಳುತ್ತಾ ಮುಸ್ಲಿಮೇತರ ವಿವಿಧ ವರ್ಗಗಳನ್ನು ಒಳಗೊಳ್ಳತೊಡಗಿತು.

ಸ್ವತಃ ನನ್ನ ಅಧ್ಯಯನದ ಸಂಧರ್ಭದಲ್ಲಿ ನಾನು ಬಿಜಾಪುರದಲ್ಲಿ ಈಟನ್ ಸಂಪರ್ಕಿಸಿದ ಹಿರಿಯರನ್ನು ಭೇಟಿ ಮಾಡಿದಾಗ ಅವರು ವಿವರಿಸುವಂತೆ ಮತ್ತೂ ಸ್ವತಃ ಈಟನ್ ಅವರ ಕೃತಿಯೇ ಸ್ಪಷ್ಟಪಡಿಸುವಂತೆ ಅಧ್ಯಯನದ ಹಿಂದಿನ ಪರಿಶ್ರಮ ಅಪಾರವಾದುದು ಮತ್ತು ಸೂಫಿಗಳ ಕುರಿತಂತೆ ನಡೆದ ಅಧ್ಯಯನಗಳಲ್ಲಿ ಈ ಕೃತಿಯು ಅತ್ಯಂತ ಮಹತ್ವದ್ದು ಮತ್ತು ಮೌಲಿಕವಾದುದು ಆಗಿದೆ.

೧೯೮೯ರಲ್ಲಿ ಪ್ರಕಟವಾದ ಮೊಹಮ್ಮದ್ ಸುಲೇಮಾನ್ ಸಿದ್ದಿಯವರ 'The Bahamani Sufis' ಎನ್ನುವ ಇಂಗ್ಲೀಷಿನಲ್ಲಿ ಪ್ರಕಟವಾದ ಸಂಶೋಧನಾ ಕೃತಿಯು ಕೂಡ ಸೂಫಿಗಳ ಕುರಿತದ್ದೇ ಆದರೂ ಈಟನ್ ಕೊಡುವ ಒಳನೋಟಗಳಾಗಲಿ ಮತ್ತು ಈಟನ್ ಅವರ ವಿಶ್ಲೇಷಣಾ ಸಾಮರ್ಥ್ಯವಾಗಲೀ ಇಲ್ಲಿಲ್ಲ. ಬಹುಮನಿ ಕಾಲದ ಸೂಫಿಗಳ ಕುರಿತಂತೆ ಮಾಹಿತಿ ಕೇಂದ್ರಿತ ವಿವರಗಳನ್ನು ಮಾತ್ರವೇ ನೀಡುತ್ತಾ ಉಳಿದಂತೆ ಸೂಫಿಜಂನ ಸ್ಥಳೀಯ ಪ್ರಕ್ರಿಯೆಗಳನ್ನು ಗುರುತಿಸುವ ಪ್ರಯತ್ನವಾಗಲಿ, ಪರಿಶ್ರಮವಾಗಲಿ ಇಲ್ಲಿಲ್ಲ.

Susain balyly ಎನ್ನುವ ಸಂಶೋಧಕರ ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ (ಅದರಲ್ಲೂ ಮುಖ್ಯವಾಗಿ ತಮಿಳುನಾಡು) ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಂತರು. ದೇವತೆಗಳು ಮತ್ತು ರಾಜರ ಕುರಿತಂತೆ 'SAINTS, GODDESSES AND KINGS' ಎನ್ನುವ ಸಂಶೋಧನಾ ಕೃತಿಯು ತಮಿಳು ನಾಡಿನ ಮುಸ್ಲಿಂ ಸಮಾಜ, ಸೂಫಿಗಳು, ಉರೂಸ್ ಮೊದಲಾದ ಆಚರಣೆಗಳ ಕುರಿತಾದ ಅಧ್ಯಯನವಾಗಿದೆ. ತಿರುಚ್ಚಿಯ ನಾಥರ್‌ವಲಿ ದರ್ಗಾದ ಆಚರಣೆಗಳು, ಆಸಂತನ ಕುರಿತಾದ ಐತಿಹ್ಯ ಸ್ಥಳಪುರಾಣಗಳನ್ನೊಳ ಗೊಂಡಂತೆ ಈ ಕೃತಿಯು ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮಾಜಗಳೆರಡೂ ಇಂಡಿಯಾದ ಸಾಂಸ್ಕೃತಿಕ ಸಂದರ್ಭದಲ್ಲಿ ಸಂತರಿಸಿಕೊಂಡ ವಿಶಿಷ್ಟಸ್ವರೂಪವನ್ನು ಮಂಡಿಸುತ್ತದೆ.

ಇನ್ನು ನನ್ನ ಅಧ್ಯಯನಕ್ಕೆ ನೇರವಾಗಿ ಸಂಬಂಧ ಪಡುವ ಎರಡು ಸಂಶೋಧನಾ ಪ್ರಯತ್ನಗಳನ್ನಿಲ್ಲಿ ಹೆಸರಿಸಬೇಕಾಗುತ್ತದೆ. ಮೊದಲನೆಯದಾಗಿ ತೆಲುಗಿನ ಪ್ರಖ್ಯಾತ ವಿದ್ವಾಂಸರು ಮತ್ತು ತೆಲುಗು ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳೂ ಆಗಿದ್ದ ತೂಮಾಟಿ ದೋಣಪ್ಪ ಅವರ ೧೯೭೫ರಲ್ಲಿ ಪ್ರಕಟಗೊಂಡ 'ಮೊಹರಂ ಗೀತಿಕಲು' ಎನ್ನುವ ಸಂಶೋಧನಾ ಸಂಪ್ರಬಂಧವು ಅನಂತಪುರ ಮತ್ತು ಕರ್ನೂಲು ಜಿಲ್ಲೆಯ ಕರ್ನಾಟಕದ ಗಡಿ ಭಾಗಗಳಲ್ಲಿ ಬರುವ ಹಳ್ಳಿಗಳಲ್ಲಿನ ಮೊಹರಂ ಆಚರಣೆ ಮತ್ತು ಮೊಹರಂನ ಜಾನಪದವನ್ನು ಸಂಗ್ರಹಿಸಿ ಸಿದ್ಧಪಡಿಸಿದುದಾಗಿದೆ. ಮೊಹರಂ ಮತ್ತು ಮುಸ್ಲಿಂ ಆಚರಣೆಗಳಿಗೆ ಸಂಬಂಧಿಸಿದಂತೆ ಹಳೆಯ ತೆಲುಗು ಕಾವ್ಯಗಳಲ್ಲಿನ ಅದರಲ್ಲೂ ವಿಶೇಷವಾಗಿ ಗೋಲ್ಕೊಂಡ ನವಾಬರ ಕಾಲದಲ್ಲಿನ ತೆಲುಗು ಕಾವ್ಯಗಳಲ್ಲಿನ ನಿದರ್ಶನಗಳನ್ನು ನೀಡುತ್ತಾ ಮೊಹರಂ ಆಚರಣೆಯ ಪ್ರಾಚೀನತೆಯನ್ನು ಅದು

ಮುಸ್ಲಿಮೇತರರಲ್ಲಿ ಗಳಿಸಿದ ಜನಪ್ರಿಯತೆಯನ್ನು ತೋರಿಸಿಕೊಡುತ್ತಾರೆ. ಶ್ರೀ ತೂಮಾಟಿ ದೋಣಪ್ಪ ಅವರು ಕನ್ನಡದ ಕೆಲವು ಮೊಹರಂ ಹಾಡುಗಳೊಂದಿಗೆ (ಕನ್ನಡದ ನಾಡಪದಗಳು ಸಂಕಲನದಲ್ಲಿನ ಮೊಹರಂ ಹಾಡುಗಳು) ತೆಲುಗಿನ ಹಾಡುಗಳನ್ನು ತೌಲನಿಕವಾಗಿ ಪರಿಶೀಲಿಸಲು ಪ್ರಯತ್ನಿಸಿದ್ದು ಕುತೂಹಲಕರವಾಗಿದೆ. ಮೊಹರಂನ ಮೂಲದ ಕರ್ಬಲಾ ಘಟನೆಗಳು ತೆಲುಗಿನಲ್ಲಿ ರೂಪಾಂತರಗೊಂಡಾಗ ನಮ್ಮ ಸಾಂಸ್ಕೃತಿಕ ಛಾಪು ಪಡೆದುಕೊಂಡು ಆಚರಣೆಯ ಜೊತೆಗೆ ಅಸ್ತಿತ್ವಕ್ಕೆ ಬಂದುದನ್ನು ವಿವರಿಸುತ್ತಾರೆ. ಮುಖ್ಯವಾಗಿ ಇದು ಮೊಹರಂ ಗೀತೆಗಳನ್ನು ಜನಪದ ಪ್ರಕಾರವಾಗಿ ಅಧ್ಯಯನ ಮಾಡುವ ದೃಷ್ಟಿಯಿಂದಲೇ ಸಿದ್ಧ ಪಡಿಸಿದ ಸಂಪ್ರಬಂಧವಾದರೂ ಹಿಂದೂ - ಮುಸ್ಲಿಂ ಧಾರ್ಮಿಕ ಸಾಂಸ್ಕೃತಿಕ ಸಮನ್ವಯದ ಸ್ವರೂಪವನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ.

ಎರಡನೆಯದಾಗಿ ತೆಲುಗು ವಿಶ್ವವಿಧ್ಯಾನಿಲಯವ ತೌಲನಿಕ ಅಧ್ಯಯನ ವಿಭಾಗಕ್ಕೆ ಸಮರ್ಪಿಸಲಾದ ಶ್ರೀಮೊಹಮ್ಮದ್ ಅವರ 'ತೆಲುಗು - ಉರ್ದು ಮೊಹರಂ ಗೀತಿಕಲು; ತುಲನಾರ್ತಕ ಸಮನ್ವಯಂ' ಎಂ.ಫಿಲ್ 'ಪ್ರಬಂಧವು' ತೆಲುಗು ಮತ್ತು ಉರ್ದು ಭಾಷೆಗಳೆರಡರ ಮೊಹರಂಗೀತೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದರ ಜೊತೆಗೆ ಆಚರಣಾತ್ಮಕ ವಿವರಗಳನ್ನು ಸಹ ನೀಡುತ್ತಾರೆ. ತೆಲಂಗಾಣ ಮತ್ತು 'ರಾಯಲಸೀಮ' ಪ್ರದೇಶದಲ್ಲಿ ಮುಸ್ಲಿಂ ಮತ್ತು ಮುಸ್ಲಿಮೇತರರಿಂದ ವಿಶಿಷ್ಟವಾಗಿ ಆಚರಿಸುವ ಮೊಹರಂನ ವೈವಿಧ್ಯತೆಯನ್ನು ವಿವರಿಸುತ್ತಾ ಆಚರಣೆಯಲ್ಲಿ ಮುಸ್ಲಿಂ ಮತ್ತು ಮುಸ್ಲಿಮೇತರರ ನಡುವಿನ ಭಿನ್ನತೆಗಳನ್ನು ಗುರುತಿಸುತ್ತಾರೆ. ಮೊಹರಂ ಮುಸ್ಲಿಮೇತರರಲ್ಲಿ ಹಬ್ಬವಾಗಿದ್ದಾಗ್ಯೂ ಹತ್ತನೆಯ ದಿನ ರಾತ್ರಿ ವಿಷಾದದ ಛಾಯೆ ಇರುತ್ತದೆ. ಮುಸ್ಲಿಮರು ಅಧಿಕವಾಗಿರುವ ಕಡೆಗೆ ಅದು ಮೊಹರಂ ಆರಂಭವಾದಂದಿನಿಂದ ೪೦ ದಿನಗಳವರೆಗೆ ಸಸ್ಯಾಹಾರ, ಕಪ್ಪುಬಟ್ಟೆ ಧರಿಸುವಿಕೆ ಮೊದಲಾದ ನಿಯಮಗಳನ್ನು ಪಾಲಿಸಿ ಪೂರ್ತಿಯಾಗಿ ಶೋಕ ಸೂಚಿತ ಆಚರಣೆಗಳಿರುವುದನ್ನು ವಿವರಗಳ ಸಹಿತ ಪ್ರಸ್ತಾಪಿಸುತ್ತಾರೆ. ಉರ್ದು ಮೊಹರಂಗೀತೆಗಳ ವಸ್ತು ನಿರೂಪಣೆಗಳ ಉಪಯುಕ್ತ ಮಾಹಿತಿಯೊಂದಿಗೆ ತೆಲುಗಿನ ಮೊಹರಂ ಗೀತೆಗಳನ್ನು ತೌಲನಿಕವಾಗಿ ಪರಿಶೀಲಿಸುತ್ತಾರೆ.

ಈ ಅಧ್ಯಯನಗಳನ್ನೊರೆತುಪಡಿಸಿ ನನ್ನ ಮಹಾ ಪ್ರಬಂಧದ ವಿಷಯಕ್ಕೆ ಸಂಬಂಧಿಸಿದ ಅಧ್ಯಯನಗಳು

ತುಂಬಾ ವಿರಳವಾಗಿವೆ. ಪ್ರಸ್ತುತ ನನ್ನ ಅಧ್ಯಯನದ ಕ್ಷೇತ್ರವೆ ಹೊಸತಾಗಿದ್ದು ಹಿಂದೂ-ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯ (ಸಂಸ್ಕೃತೀಕರಣ, ದ್ವಿ-ಸಾಂಸ್ಕೃತಿಕತೆ ಇತ್ಯಾದಿ) ಕ್ಕೆ ಸಂಬಂಧಿಸಿದಂತೆ ನಿರ್ಧಿಷ್ಟ ಸ್ಥಳಗಳನ್ನೊಳಗೊಂಡಂತೆ ಲಭ್ಯವಿರುವ ಲಿಖಿತ ಮಾಹಿತಿ ಮೌಖಿಕ ವಿವರಗಳ ಮುಖೇನ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಡಿಟಿಪ್ಪಣಿಗಳು

೧. ವಿವರಗಳಿಗೆ ನೋಡಿ - ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ ರೊಮಿಲ ಥಾಫರ್ ಹರ್ಬನ್ಸ್ ಮುಖಿಯ ಮತ್ತು ಬಿಪಿನ್ ಚಂದ್ರ. ಪು. ೬೫

೨. ಸ್ವರಾಜ್ಯ ಲಕ್ಷ್ಮಿ - ದಿ.ಉರ್ದು ಇನ್ ಫ್ಲ್ಯೂಯನ್ಸ ಆನ್ ತೆಲುಗು. ಅಪ್ರಕಟಿತ ಪಿ.ಹೆಚ್.ಡಿ. ಮಹಾಪ್ರಬಂಧ ಪು.೧೦

೩. ವಿವರಗಳಿಗೆ ನೋಡಿ- ಎಮ್ .ಚಂದರಶೇಖರ್ .ಗಾಂಧೀಮತ್ತು ಅಂಬೇಡ್ಕರ್ ಪು.೪೩

೪. ಆರ್.ಎಂ.ಈಟನ್ - ಸೂಫೀಸ್ ಆಫ್ ಬಿಜಾಪುರ್ ಪು.೧೭೩

೫. ಶ್ರೀಮತಿ ವೀಣಾದಾಸ್ - 'ಸಿರಿಗನ್ನಡ'೧೯೯೩. ಅನು.ಓ.ಎಲ್.ನಾಗಭೂಷಣಸ್ವಾಮಿ. (ಸಂ) ಎಚ್.ಎಸ್.ರಾಘವೇಂದ್ರರಾವ್, ಪು.೧೩೦

೬.ಕೋಮುವಾದ ಹಾಗು ಭಾರತೀಯ ಇತಿಹಾಸಲೇಖನ ಪು. ೭೭

ಅಧ್ಯಾಯ - ೨

ಸೂಫಿಜಂ ಮತ್ತು ತತ್ವ ಪದಕಾರರ ತಾತ್ವಿಕ, ಸೈದ್ಧಾಂತಿಕ ನೆಲೆಗಳು

೨.೧ ಸೂಫಿಜಂ ಅರ್ಥ ಮತ್ತು ವ್ಯಾಖ್ಯಾನ :

ಇಸ್ಲಾಂನ ಅನುಭಾವಿಗಳಿಗೆ ಸ್ಥೂಲವಾಗಿ ಸೂಫಿಗಳೆಂದು ಕರೆಯುವುದು ವಾಡಿಕೆ. 'ಸೂಫಿ' ಪದಕ್ಕೆ ಪರಿಶುದ್ಧತೆ ಮತ್ತು ಒಂದು ವಿಧದ ಉಣ್ಣೆಯ ಬಟ್ಟೆ ಎಂಬ ಅರ್ಥವೂ ಇದೆ. ಮಹಮ್ಮದ್ ಪೈಗಂಬರರ ನಂತರ ಮೆಕ್ಕಾದ ಮಸೀದಿಗಳಲ್ಲಿ ಉಣ್ಣೆಯ ಬಟ್ಟೆತೊಟ್ಟು ಅಲ್ಲಾನ ಆರಾಧನೆಯಲ್ಲೇ ತನ್ಮಯರಾಗಿ ಲೌಕಿಕವನ್ನು ಅಷ್ಟಾಗಿ ಪರಿಗಣನೆಗೆ ತಾರದೆ 'ಋಜು' ಮಾರ್ಗದಲ್ಲಿದ್ದ ಕೆಲವು ಬೈರಾಗಿಗಳಿಗೆ ಸೂಫಿಗಳೆಂದು ಕರೆಯಲಾಯಿತು.

ಸಾಮಾನ್ಯವಾಗಿ ಜಗತ್ತಿನ ಎಲ್ಲ ಧರ್ಮಗಳಲ್ಲೂ ಕಂಡು ಬರುವ ಅನುಭಾವದಂತೆಯೇ ಸೂಫಿಜಂ ಸಹ ದೈವತ್ವದೊಂದಿಗಿನ ಮನುಷ್ಯನ ಸಂಬಂಧಗಳ ಹುಡುಕಾಟ, ಅನಂತದೊಂದಿಗೆ ಅವನು ಸಂಬಂಧ ಕಲ್ಪಿಸಿಕೊಳ್ಳುವ ಬಗೆ, ಅಂತಿಮವಾಗಿ ದೈವತ್ವದಲ್ಲಿಯೇ ಲೀನವಾಗುವ ಬಯಕೆಯನ್ನೇ ಒಳಗೊಂಡುದುದಾಗಿದೆ ಇಸ್ಲಾಂ ಕ್ರಮೇಣ ಮಹಮ್ಮದರ ಉಪದೇಶಗಳನ್ನು, ಆಚರಣೆಗಳನ್ನು ಒಗ್ಗೂಡಿಸಿಕೊಂಡು ಸಾಂಸ್ಥೀಕರಣಗೊಳ್ಳುತ್ತಾ ಹೆಚ್ಚು ಹೆಚ್ಚಾಗಿ ಸಾಂಪ್ರಾದಯಿಕವಾಗುತ್ತಿದ್ದಾಗ ಸೂಫಿಗಳು 'ಇಸ್ಲಾಂ'ನ ಮಾನವೀಯ ಸಂದೇಶಗಳನ್ನು ವಿಶ್ವದೆಲ್ಲೆಡೆ ಹರಡಲು ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಅವರು ಸಾಕಷ್ಟು ಯಶಸ್ವಿಯೂ ಆದರು. ಇಸ್ಲಾಂನಲ್ಲಿ ಪ್ರಗಾಢ ನಂಬಿಕೆಯನ್ನಿಟ್ಟುಕೊಂಡ ಸೂಫಿಗಳು ನಿಜವಾದ ಅರ್ಥದಲ್ಲಿ ಧಾರ್ಮಿಕರಾಗಿದ್ದರು. ಅಜ್ಮೀರ್ ನ ಪ್ರಖ್ಯಾತ ಸೂಫಿ ಹಜರತ್ ಖ್ವಾಜಾ ಮೊಯಿನುದ್ದೀನ್ ಚಿಶ್ತಿಯವರು ಮಾನವನ ಶಾಂತಿ ಮತ್ತು ಸುಖದ ಉದ್ದೇಶದಿಂದ ಒಬ್ಬನು ಸಂಸ್ಕರಿಸಿಕೊಳ್ಳಲೇಬೇಕಾದ ಮತ್ತು ಆಚರಿಸಲೇಬೇಕಾದ, ಒಬ್ಬ ವ್ಯಕ್ತಿಯು ಕಟ್ಟುನಿಟ್ಟಿನಿಂದ ಪಾಲಿಸುವ ನೈತಿಕ ಚಾರಿತ್ಯ ಮತ್ತು ಧಾರ್ಮಿಕ ಶಿಸ್ತು" ಎಂಬುದಾಗಿ ಸೂಫಿ ಸಿದ್ಧಾಂತವಾದ 'ತಸವ್ವೂಫ್ 'ನ ಬಗ್ಗೆ ವಿವರಿಸುತ್ತಾರೆ.[೧]

ಸೂಫಿಗಳು 'ಕುರಾನ್ ' 'ಹದೀಸ್ ' ಮತ್ತು ಕುರಾನಿನ ಪರಂಪರೆ, ಶರೀಯತ್ ನಿಯಮಗಳು ನಿರ್ದೇಶಿಸುವ ಇಸ್ಲಾಂನ ಜೀವನ ವಿಧಾನ, ದೈವತ್ವದ, ಆರಾಧನೆಯ ಪರಿಕಲ್ಪನೆಗಳಿಗಿಂತ ಭಿನ್ನವಾದ ನೆಲೆಯಲ್ಲಿ

[illegible]

[illegible]

[illegible]

[illegible]

[illegible]

ಯೋಚಿಸಿದರು. ಇಸ್ಲಾಂನ ಉಗ್ರಪ್ರತಿಪಾದಕರು, ಸಂಪ್ರದಾಯವಾದಿಗಳಿಂದ ರಕ್ಷಣೆಗೋಸ್ಕರವಾಗಿ 'ಶರೀಯತ್ 'ನ್ನೊಳಗೊಂಡಂತೆ 'ಇಸ್ಲಾಂ'ನ ಆವರಣದಲ್ಲಿರುವಂತೆ ತೋರಿದರೂ ನಿಜಕ್ಕೂ ಸೂಫಿಗಳ ಪ್ರಯತ್ನವಿದ್ದುದು ಎಲ್ಲ ನಿಯಮ, ನಿಬಂಧನೆಗಳನ್ನು ಮೀರಿದ ಸೃಷ್ಟಿಯ ಅಂದರೆ ದೈವತ್ವದ ಮತ್ತು ಮನುಷ್ಯನ ಸಂಬಂಧದ ಹುಡುಕಾಟದಲ್ಲಾಗಿತ್ತು. ದೈನದ ಮತ್ತು ಮನುಷ್ಯನ ಸಂಬಂಧದ ಬಗೆಗೆ ಯಾವುದೇ ಧರ್ಮಗ್ರಂಥದ ನಿರ್ವಚಿನಕ್ಕಿಂತ ಅಂತರಂಗದ ಸ್ಫುರಣೆಯು ಮುಖ್ಯವೆನ್ನಿಸಿತು. ಅಂದರೆ ಇಲ್ಲಿ ನಿರಂತರ ದೈವತ್ವದೊಂದಿಗಿನ ಸಂಪರ್ಕಕ್ಕಾಗಿ ಆ ಅನುಭೂತಿಗಾಗಿ ಧಾರ್ಮಿಕ ಕೃತಿಗಳನ್ನಾಶ್ರಯಿಸದೆ ವ್ಯಕ್ತಿಗತ ಆಧ್ಯಾತ್ಮಿಕ ಕ್ರಮವೊಂದನ್ನು ಗುರುತಿಸಿಕೊಳ್ಳುವ ನಿಟ್ಟಿನಲ್ಲಿ ಸೂಫಿಜಂ ಪ್ರಯತ್ನಿಸಿತು. ಆದರೆ ಇದೂ ಸಹ ಕ್ರಮೇಣ ಸಂಸ್ಥಾಗತ ಸ್ವರೂಪ ಪಡೆದುಕೊಂಡಿತಾದರೂ 'ಇಸ್ಲಾಂ' ಅನ್ನು ಸಮರ್ಥವಾಗಿ ಜಗತ್ತಿನ ವಿವಿಧತೆಗೆ ಹರಡಲು ಸಹಾಯಕವಾಯಿತು.

ಮುಖ್ಯವಾಗಿ 'ಸೂಫಿಜಂ' ಇಸ್ಲಾಮಿನ ಆಧ್ಯಾತ್ಮಿಕ ರೂಪವೆಂಬುದನ್ನು ಗಮನಿಸಿಬೇಕು. ಆರಾಧನಾ ಕ್ರಮವಾಗಿ ಹಜರತ್ ಮಹಮ್ಮದರ ನಿರ್ವಚೆನಗಳಿಗಿಂತ ತುಸು ಭಿನ್ನವಾಗಿ ಜಪ, ತಪಗಳನ್ನು ಒಳಗೊಂಡಿದೆ. 'ಸೂಫಿಜಂನ ಹಲವಾರು ವಿಚಾರಗಳು ಸನಾತನ ಇಸ್ಲಾಮಿನ ನಂಬಿಕೆಗಳಿಗೆ ವಿರೋಧವಾಗಿವೆ. ಸೂಫಿ ಮತದಲ್ಲಿ ಭಗವಂತನ ಬಗೆಗೆ ತೋರುವ ಪ್ರೇಮ ಮತ್ತು ಅವರು ವರ್ಣಿಸುವ ಮಿಲನ ಇಸ್ಲಾಮ್ ವಿರುದ್ಧ ಅನುಭಾವ, ಭಾವಾವಿಷ್ಟಾವಸ್ಥೆ ಮತ್ತು ಜಿಕ್ರ್, (ಸ್ಮರಣೆ) ಇವುಗಳಿಗೆ ಇಸ್ಲಾಮಿನಲ್ಲಿ ಸ್ಥಾನವಿಲ್ಲ. ಹಜರತ್ ಮಹಮ್ಮದರು ಸ್ವತಃ ಸನ್ಯಾಸಿಯಂತೆ ಜೀವನ ನಡೆಸಿದರೂ 'ಇಸ್ಲಾಂ'ನಲ್ಲಿ ಸನ್ಯಾಸ ಪ್ರವೃತ್ತಿಗೆ ಸ್ಥಾನವಿಲ್ಲ.ಪರಮಾತ್ಮನ ಸ್ವರೂಪದ ಬಗೆಗೆ ಕೂಡ ಇಸ್ಲಾಮ್ ಮತ್ತು ಸೂಫೀ ಮತದಲ್ಲಿ ಮತೈಕ್ಯವಿಲ್ಲ. ಸೂಫೀಗಳದು ಮಧುಕರೀ ವೃತ್ತಿ. ಅವರು ಹಲವಾರು ಧರ್ಮ, ಪಂಥಗಳ ಕುಸುಮ ರಸವನ್ನು ಹೀರಿ ತಮ್ಮದೇ ಆದ ಮಧ್ಯವನ್ನು ಸೃಷ್ಟಿಸಿ ಜಗತ್ತಿಗೆ ಉಣಬಡಿಸಿದರು. ಇಂಥ ಧರ್ಮದಲ್ಲಿ ದ್ವೇಷಕ್ಕೆ ತಿರಸ್ಕಾರ ಪ್ರೇಮಕ್ಕೆ ಪುರಸ್ಕಾರ ದೊರೆಯುವುದು ಸಹಜವೇ ಆಗಿದೆ.[3]

ಸೂಫೀ ಸಾಧಕನು ತನ್ನ ಆಧ್ಯಾತ್ಮಿಕ ಸಾಧನೆಗಾಗಿ, ಮಾರ್ಗದರ್ಶನಕ್ಕಾಗಿ ಒಬ್ಬ ಗುರುವನ್ನು ಆಯ್ದುಕೊಳ್ಳುತ್ತಾನೆ. ಈಗಾಗಲೆ ಈ ಕ್ಷೇತ್ರದಲ್ಲಿ ಆಧ್ಯಾತ್ಮಿಕ ಸಾಧನೆಯನ್ನು ಮಾಡಿದ ವ್ಯಕ್ತಿಯು ಇಂತಹ

ಸಾಧಕರಿಗೆ ಮಾರ್ಗದರ್ಶಕರಾಗಿ ಸಂತನ ಸ್ಥಾನದಲ್ಲಿರುತ್ತಾರೆ. ಇವರ ಚಟುವಟಿಕೆಗಳನ್ನೊಳಗೊಂಡ ಸ್ಥಳಗಳು ಸೂಫಿ ಉಪದೇಶಮಂದಿರಗಳಾಗಿ (ಕಾನ್ ಕಾ) ಪ್ರಚಲಿತಗೊಂಡವು. ಇಲ್ಲಿ ಆಧ್ಯಾತ್ಮಿಕ ಚಿಂತನೆಯೊಂದಿಗೆ. ಆಚರಣಾತ್ಮಕ ವಿಧಿಗಳ ಮೂಲಕ ತಮ್ಮ ಸಾಧನಾ ಪಥದತ್ತ ಸಾಗಲು ಅನುಯಾಯಿಗಳಿಗೆ ತರಬೇತಿ ಮತ್ತು ಸೌಲಭ್ಯಗಳನ್ನೊದಗಿಸಿ ಕೊಡಲಾಗುತ್ತಿತ್ತು. ಸ್ಥೂಲವಾಗಿ ನಾವು ಇಂತಹ ಆಚರಣಾ ಕ್ರಮಗಳನ್ನು ಪರಿಶೀಲಿಸಬಹುದಾಗಿದೆ.

ಸೂಫಿಗಳು ಇಸ್ಲಾಂನ ವಿಧಿಗಳಿಗನುಗುಣವಾಗಿಯೇ 'ಶರೀಯತ್ 'ನ ನಿಯಮಗಳನ್ನು ಪಾಲಿಸುತ್ತಲೇ ಸೂಫಿಜಂನ 'ತರೀಕತ್ ' ನೆಡೆಗೆ ಸಾಗಬೇಕಾಗುತ್ತದೆ. ತರೀಕತ್ ಅಂದರೆ 'ಉಪಾಸನಾಕಾಂಡ' ವೆಂದರ್ಥ. ಶರೀಯತ್ ಕೇವಲ ವಿಧಿ ವಿಧಾನಗಳ ಅನುಸರಣೆಯಾಗಿದೆ. ಕರ್ಮಕಾಂಡವು ಅದಕ್ಕಿಂತ ಭಿನ್ನವಾಗಿ 'ಉಪಾಸನಾ' ಹಂತವನ್ನು ಸೂಚಿಸುತ್ತದೆ. ಇಲ್ಲಿಂದ ಸಾಧಕನು ತನ್ನ ಅಂತಃಚುಕ್ಷುವಿನಿಂದ ಅರಿವನ್ನು ಪಡೆಯುತ್ತಾನೆ. ಈ ಹಂತಕ್ಕೆ ಮಾರಿಫತ್ (ಜ್ಞಾನಕಾಂಡ) ಎಂದು ಹೆಸರಿಸಲಾಗುತ್ತದೆ. ಇಲ್ಲಿಂದ ಸಾಧಕನು ಮುಂದೆ ಹಕೀಕತ್ ನ (ದೈವ ಸಾಕ್ಷಾತ್ಕಾರ) ದೆಸೆಗೆ ಸಾಗುತ್ತಾನೆ. (ವಿವರಗಳಿಗೆ ಮುಂದಿನ ಪುಟದಲ್ಲಿ ಈ ಕುರಿತಾದ ನಕ್ಷೆ ನೀಡಲಾಗಿದೆ).[೩]

ಸೂಫಿಗಳು 'ನಮಾಜ್ ' (ಪ್ರಾರ್ಥನೆ), 'ಜಕಾತ್ '(ದಾನ) 'ರೋಜಾ '(ದೈವಾಜ್ಞೆ, ಉಪವಾಸ) ಮತ್ತು 'ಹಜ್ ' (ತೀರ್ಥಯಾತ್ರೆ) ಈ ವಿಧಿಗಳನ್ನು ತಪ್ಪದೆ ಪಾಲಿಸಬೇಕಾಗುತ್ತದೆ. ಸಾಧಕನು ಅಂತಿಮವಾಗಿ ದೈವ ಸಾಕ್ಷಾತ್ಕಾರ ಪಡೆಯಲು ಏಳು ಬಗೆಯ ನಿಲುಗಡೆಗಳನ್ನು ದಾಟ ಬೇಕಾಗುತ್ತದೆ. ಇವು ಕ್ರಮವಾಗಿ ಇಶ್ಕ್ (ಪ್ರೇಮ), ಜಹದ್ (ತ್ಯಾಗ), ಮ್ಯಾರಿಫ್ (ಗುಣಸಂಪನ್ನತೆ), ಏಜ್ಹ್ (ಆನಂದದ ಸ್ಥಿತಿ), ಹಕೀಕ್ (ಪೂರ್ಣಜ್ಞಾನ), ವಸ್ಲ್ (ಐಕ್ಯ), ಪನಾ (ಮೋಕ್ಷ) ಎಂದು ಕರೆಯಲ್ಪಡುತ್ತವೆ. ಸಾಧಕನು ಈ ಕ್ರಮವನ್ನು ಚಾಚೂ ತಪ್ಪದೆ ಪಾಲಿಸಬೇಕೆಂದಿಲ್ಲ.ಇವನ್ನು ಮಾದರಿಯಾಗಿಟ್ಟುಕೊಂಡು ತನ್ನ ಗುರಿಯೆಡೆಗೆ ಸಾಗಬೇಕೆಂಬುದಾಗಿ ಇದು ಸೂಚಿಸುತ್ತದೆ. ಇಂಡಿಯಾದ ಭಕ್ತಿ ಪಂಥದಲ್ಲಿ ಕಂಡು ಬರುವ ದೈವದ ಮತ್ತು ಭಕ್ತನ ನಡುವಣ ರತಿಭಾವವು ಸೂಫೀ ಅನುಭಾವದಲ್ಲೂ ಕಂಡು ಬರುತ್ತಿದ್ದು ಇಲ್ಲಿ ದೈವವನ್ನು

ಸತಿಯನ್ನಾಗಿಸಿತಾವು ಪತಿಯೆಂದು ಪರಿಭಾವಿಸಿ 'ಪ್ರಿಯತಮೆ' ಯನ್ನು ಕೂಡಲು ತಪಿಸುವ ಪ್ರೇಮಿಯ ಮಾದರಿಯಲ್ಲಿ 'ಸಾಧಕ'ನು ಕಾತರಿಸುತ್ತಿರುತ್ತಾನೆ. ಇಲ್ಲಿನ ವಿರಹ ಇಲ್ಲಿ ದೈವವನ್ನು ಸತಿಯನ್ನಾಗಿಸಿ ತಾವು ಪತಿಯೆಂದು ಪರಿಭಾವಿಸಿ ಸಾಧಕನು ದೈವತ್ವದೊಂದಿಗೆ ಒಂದಾಗಲು ಬಯಸುವ ತೀವ್ರಕಾಮನೆಯಿಂದ ಕೂಡಿದ ಪ್ರತೀಕವಾಗಿದೆ. ಸೂಫಿಗಳು ಪ್ರತೀಕಗಳ ಮೂಲಕವೇ ತಮ್ಮ ಅನುಭಾವದ ಸ್ವರೂಪವನ್ನು ಪ್ರಕಟ ಪಡಿಸಲು ಇಚ್ಛಿಸಿದರು. ಇದು ಅವರಿಗೆ ಸಾಂಪ್ರದಾಯಿಕ ಇಸ್ಲಾಂ ವರ್ಗದಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಸಹಾಯಕವಾಯಿತು. ಸೃಷ್ಟಿಕರ್ತನನ್ನು 'ಸತಿ'ಯಾಗಿ

ಸೂಫೀ ಮುಕಾಮತ್ (ನಿಲುಗಡೆ) ಗಳ ನಕ್ಷೆ

ಸಂಖ್ಯೆ	ಅವಸ್ಥೆ	ಲೋಕದೆಸೆ	ಯಾತ್ರೆ	ಆರಂಭ	ಮಧ್ಯ	ಅಂತ
೧.	ಶರೀ ಅತ್	ನಾಸೂತ್	ಮೋಮಿನ್	ಅಬ್ದ್	ಇಶ್ಕ್	ಇಶ್ಕ್
೨.	ತರೀಕತ್	ಮಲಕೂತ್	ಸಾಲಿಕ್	ಇಶ್ಕ್	ಜಹದ್	ಮ್ಯಾರಿಫ್
೩.	ಮಾರಿಫತ್	ಜಬರೂತ್	ಆರಿಫ್	ಮ್ಯಾರಿಫ್	ವಜ್ದ್	ಹಕೀಕ್
೪.	ಹಕೀಕತ್	ಲಾಹೂತ್	ಹಕ್	ಹಕೀಕ್	ವಸ್ಲಾ	ಫನಾ

೧. ಅವಸ್ಥೆಗಳು ೧ ಶರೀ ಅತ್ : ವಿಧಿ ವಿಧಾನಗಳ ಅನುಸರಣೆ: ಕರ್ಮಕಾಂಡ.
೨ ತರೀಕತ್ : ಉಪಾಸನಾ ಕಾಂಡ
೩ ಮಾರೀಫತ್ : ಜ್ಞಾನಕಾಂಡ
೪ ಹಕೀಕತ್ : ದೈವಸಾಕ್ಷತ್ಕಾರ

೨. ಲೋಕದೆಸೆ ೧ ನಾಸೂತ್: ನರಲೋಕ: ೨ ಮಲಕೂತ್: ದೇವಲೋಕ ೩ ಜಬರೂತ್ : ಐಶ್ವರ್ಯಲೋಕ: ೪. ಲಾಹೂತ್ ; ಮಾಧುರ್ಯಲೋಕ:

೩. ಯಾತ್ರೆಗಳು ೧ ಮೋಮಿನ್: ಪೂರ್ವಾವಸ್ಥೆಯ ಯಾತ್ರೆ: ೨ ಸಾಲಿಕ್ ; ಸಾಧಕಾವಸ್ಥೆಯಯಾತ್ರೆ
೩. ಆರಿಫ್: ಜ್ಞಾನಾವಸ್ಥೆಯ ಯಾತ್ರೆ: ೪ ಹಕ್ :ಪರಮ ಜ್ಞಾನವಸ್ಥೆಯಯಾತ್ರೆ

[illegible]

[illegible]

[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]

[illegible]

[illegible]

[illegible]

೪ ಆರಂಭ ೧ ಅಬ್ದ್: ಕೃತಿ ೨ ಇಶ್ಕ್ : ಪ್ರೇಮ ೩ ಮ್ಯಾರಿಫ್ : ಗುಣಸಂಪನ್ನ:
೪. ಹಕೀಕ್: ಪೂರ್ಣಜ್ಞಾನ

೫. ಮಧ್ಯ ೧ ಇಶ್ಕ್ : ಪ್ರೇಮ ೨ ಜಹದ್ : ತ್ಯಾಗ ೪. ವಜ್ದ್ : ಆನಂದ ೪ ವಿಸ್ಲಾ: ಐಕ್ಯ

೬ ಅಂತ ೧ ಇಶ್ಕ್ : ಪ್ರೇಮ ೨ ಮ್ಯಾರಿಫ್ : ಗುಣಸಂಪನ್ನ: ೩ ಹಕೀಕ್ : ಪೂರ್ಣಜ್ಞಾನ :
೪ ಫನಾ: ಮೋಕ್ಷ.

ಪರಿಭಾವಿಸಿ ಅದರೊಂದಿಗೆ ಲೀನವಾಗುವ ಪರಿಯಿಂದ ಸಂಗೀತ, ಜಪ,ತಪ, ಮಾದಕ ವಸ್ತುಗಳ ವಲಯಕ್ಕೆ ಸಿಲುಕಿದ 'ಸೂಫೀ' ವರ್ಗವು ಸಹಜವಾಗಿಯೇ ಸಾಂಪ್ರಾದಾಯಿಕ ಇಸ್ಲಾಂ ವರ್ಗದ ಖಾಜೀ, ಮುಲ್ಲಾ, ಉಲೇಮಾ, ಮೌಲ್ವಿಗಳಿಂದ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಇದಕ್ಕೆ ಪ್ರತಿಯಾಗಿ ಸೂಫಿಗಳು ಸಹ ತಮ್ಮ ಉಪಸಾನಾ ಕ್ರಮವು ಕುರಾನ್ ನ ಪರಿಮಿತಿಯಲ್ಲಿಯೇ ಇದೆಯೆಂದು, ತಾವು 'ಷರೀಅತ್ ' ಅನ್ನು ಪಾಲಿಸುತ್ತಿರುವುದಾಗಿಯೂ ಆಧಾರಗಳನ್ನೊದಗಿಸಿ ಮುಸ್ಲಿಮರ ಮನಗೆದ್ದರು.[೪] ವಾಸ್ತವಾಗಿ ಈ ಸಾಂಪ್ರದಾಯಿಕ ವರ್ಗವು, ಸೂಫಿಗಳು, 'ಇಸ್ಲಾಂ'ನ್ನು ತಪ್ಪುದಾರಿಗೆಳೆಯುತ್ತಾರೆಂಬ ಆತಂಕದ ಜೊತೆಗೆ ತಮಗಿಂತಲೂ ಅಧಿಕವಾಗಿ ಸೂಫಿಗಳಿಗೆ ಜನಾದರಣೆ ದೊರೆಯುತ್ತಿರುವುದು ನುಂಗಲಾರದ ತುತ್ತಾಗಿತ್ತು. 'ಸೂಫಿಜಂ'ನ ಇತಿಹಾಸದುದ್ದಕ್ಕೂ ಈ ಘರ್ಷಣೆ ಕಂಡು ಬರುತ್ತಿದ್ದು ಇದು ಧರ್ಮ, ಆಧ್ಯಾತ್ಮಿಕ, ತಾತ್ವಿಕ ಸಂಬಂಧಿ ವಿಚಾರಗಳು, ಸಂವಾದಗಳಿಗೆ ಪ್ರೇರಕವಾಯಿತು. ಸೂಫಿ ಅನುಭಾವವು (ತಸವ್ವೂಫ್) ಇನ್ನು ವಿಕಾಸ ಗತಿಯಲ್ಲಿರುವಾಗ ಆರಂಭದ ಮುಖ್ಯ ಸೂಫಿಗಳಲ್ಲೊಬ್ಬರಾದದ ಮನ್ಸೂರ್ ಅಲಿ ಹಲ್ಲಾಜ್ ರು ಆಧ್ಯಾತ್ಮಿಕ ಪರವಶತೆಯಲ್ಲಿ 'ಅನಲ್ ಹಕ್ ' (ನಾನೇ ಅಲ್ಲಾ) ಎಂದದ್ದಕ್ಕಾಗಿ ಮರಣದಂಡನೆಗೊಳಗಾಗ ಬೇಕಾಯಿತು. ಇಂತಹ ನಿದರ್ಶನಗಳು ಸೂಫಿಗಳಿಗೆ ಎಚ್ಚರಿಕೆಯ ಪಾಠಗಳಾದವು. ಏನನ್ನೇ ಆಗಲಿ ಪ್ರತೀಕಗಳ ಮೂಲಕ ಇಂತಹ ಸೂಕ್ಷ್ಮ ವಿಚಾರಗಳನ್ನು ಮಂಡಿಸುವ ಪರಿಪಾಠ ಬೆಳೆದು ಬಂತು. ವಾಸ್ತವವಾಗಿ ಹಲ್ಲಾಜ್ ಪ್ರತಿಪಾದಿಸಿದ್ದು ಅದ್ವೈತದ ನಿರೂಪಣೆಯಾಗಿದ್ದು, ಅಲ್ಲಾನ ಅಂಶದಿಂದ ಜನಿಸಿದ ಪ್ರತಿಯೊಂದು ವಸ್ತುವು ಅವನಲ್ಲೇ ಲೀನವಾಗಿ ಕಡೆಗೆ ಅವನ ಸ್ವರೂಪವೇ ಆಗಿ ಬಿಡುವ ಪರಿಯನ್ನು ವಿವರಿಸುತ್ತದೆ. ಹಲ್ಲಾಜ್ ನು

[illegible]

[illegible]

[illegible]

[illegible]

[illegible]

[illegible]

ಆತ್ಮರಕ್ಷಣಾರ್ಥವಾಗಿ ಇದನ್ನು ಪ್ರತೀಕಗಳ ಮೂಲಕ ವಿವರಿಸಿದ್ದರೆ ಮರಣ ದಂಡನೆಯಿಂದ ಪಾರಾಗಬಹುದಿತ್ತು. ಈ ಅನರ್ ಹಕ್ ಅಂಶವು ಸೂಫಿಗಳಲ್ಲಿ ಕಂಡುಬರುವ ಸಾಮಾನ್ಯ ಅಂಶವಾಗಿದ್ದು ನಿದರ್ಶನವಾಗಿ ಕರ್ನಾಟಕದ ಸೂಫಿಗಳೊಬ್ಬರ ಉದಾಹರಣೆ ನೀಡಬಹುದು.

೧೭ನೆಯ ಶತಮಾನದ ಪೂರ್ವಾರ್ಧದಲ್ಲಿ ಬಿಜಾಪುರದ ಶಹಪುರ ಬೆಟ್ಟದ ಮೇಲಿದ್ದ ಸೂಫಿ ಸಂತ 'ಅಮೀನ್ ಅಲ್ - ದೀನಾ ಅಲಾ'ನು ಸಂಪ್ರದಾಯವಾರಿ ಇಸ್ಲಾಂ ನಿಂದ ದೂರನಿಂತು ಅಸಂಖ್ಯಾತ ಅನುಯಾಯಿಗಳನ್ನು ಪಡೆದು ಸಂಪ್ರದಾಯ ವರ್ಗಕ್ಕೆ ಸವಾಲಾಗಿ ನಿಂತಿದ್ದನು. ಆತನ ಜೀವನದ ವಿವರಗಳು ಅಚ್ಚರಿಗೊಳಿಸುವಷ್ಟರ ಮಟ್ಟಿಗೆ ಅಂದಿನ ವಸ್ತುಸ್ಥಿತಿಯನ್ನು ಸಂಪ್ರದಾಯಶರಣ ಇಸ್ಲಾಂ ವರ್ಗಕ್ಕೂ, ಸೂಫಿಗಳಿಗೂ ಮಧ್ಯದ ಸಂಘರ್ಷವನ್ನು ಸ್ಪಷ್ಟಪಡಿಸುತ್ತವೆ. ಅನಿರ್ಬಂಧಿತ ಸ್ವಾತಂತ್ರ್ಯ ಪ್ರಿಯನಾದ ಅಮೀನನು ರಾಜದರ್ಬಾರಿನಿಂದ ದೂರವಿದ್ದು, ತನ್ನ ವಿಚಾರಗಳ ಮತ್ತು ಬದುಕಿನ ವಿಧಾನದಿಂದ ಇಸ್ಲಾಂನ ಸಂಪ್ರದಾಯ ವರ್ಗವನ್ನು ಸಮರ್ಥವಾಗಿ ಎದುರಿಸಿದನು. ಅವನ ವ್ಯಕ್ತಿತ್ವಕ್ಕೆ ಮಾರು ಹೋದ ಆ ಭಾಗದ ಅಸಂಖ್ಯಾತ ಮುಸ್ಲಿಮೇತರ ವರ್ಗವು ಇಸ್ಲಾಂಗೆ ಮತಾಂತರಗೊಂಡಿತು. ಆವರೆಗಿನ ಇಸ್ಲಾಂನ ಮುಖ್ಯ ಧಾರ್ಮಿಕ ವಿಧಿವಿಧಾನಗಳ ಪ್ರಸ್ತುತತೆಯನ್ನೇ ಪ್ರಶ್ನಿಸುವ ಧೈರ್ಯ ಅಮೀನನಿಗಿತ್ತು. ಅಮೀನನು ಅಧ್ಯಾತ್ಮಿಕ ಆನಂದದ ಮನಸ್ಥಿತಿಯಲ್ಲಿದ್ದಾಗ ಆತನ ಶಿಷ್ಯರು ಸಂಗ್ರಹಿಸಿದ ವಿಚಾರಗಳಿಂದ ಇದು ಗೊತ್ತಾಗುತ್ತದೆ.

ಅಮೀನನು 'ದೇವರಿಗಾಗಿ ಮಸೀದಿಯೊಂದನ್ನು ನಿರ್ಮಿಸಿ ಅದರಲ್ಲಿ ಪ್ರಾರ್ಥಿಸಬೇಕೆಂದು ಹಲವು ಶ್ರೇಷ್ಠ ವ್ಯಕ್ತಿಗಳು ತಿಳಿಸುತ್ತಾರೆ. ಮತ್ತು ಹಗಲೆನ್ನದೆ, ಇರುಳೆನ್ನದೆ ದೇವರನ್ನು ಪ್ರಾರ್ಥಿಸುತ್ತಾರೆ. ಮೊಟ್ಟ ಮೊದಲ ಮಸೀದಿ ಎಂದರೆ ಸೃಷ್ಟಿ, ಮಿಬ್ ರಾಬ್ (MIBRAB ಮಸೀದಿಯಲ್ಲಿ ಪ್ರಾರ್ಥನೆಯ ದಿಕ್ಕನ್ನು ಸೂಚಿಸುವ ದಿಬ್ಬದ ಸಂಕೇತ). ಹೃದಯವೇ ಆಧ್ಯಾತ್ಮದ ಜ್ಯೋತಿ. ಅದು ಬೆಳಕಿನಿಂದ ತುಂಬಿದಾಗ ಮನುಷ್ಯನನ್ನು ಪ್ರಾರ್ಥನೆಗೆ ಸಿದ್ಧಗೊಳಿಸುತ್ತದೆ." ಎಂದು ನಿಜವಾದ ಪ್ರಾರ್ಥನೆಯ ಬಗೆಗೆ ವಿವರಿಸುತ್ತಾನೆ. ಡಾಂಭಿಕ ಭಕ್ತಿಯನ್ನು ವಿರೋಧಿಸುವ ಧ್ವನಿಯೂ ಇಲ್ಲಿದೆ. ಬಸವಣ್ಣನವರ 'ಉಳ್ಳವರು ಶಿವಾಲಯ ಮಾಡುವರು ನಾನೇನು ಮಾಡಲಿ ಬಡವನಯ್ಯಾ, ಎನ್ನಕಾಲೇ ಕಂಬ, ದೇಹವೇ ದೇಗುಲ, ಹೃದಯವೇ

ಹೊನ್ನ ಕಳಶ' ಎಂಬ ವಚನ ನೆನಪಾಗುತ್ತದೆ. ಪ್ರಾದೇಶಿಕವಾಗಿ ಬಸವಣ್ಣನವರ ಕಾರ್ಯಕ್ಷೇತ್ರವಾಗಿದ್ದ ಪ್ರದೇಶದಲ್ಲಿಯೇ ಅಮೀನನು ಇದ್ದುದರಿಂದ ವೀರಶೈವ ಧರ್ಮದ ಪ್ರಭಾವ ಅಮೀನನ ಮೇಲಾದುದನ್ನು ತಳ್ಳಿಹಾಕುವಂತಿಲ್ಲ. ಯಾಕೆಂದರೆ ಅಮೀನನಿಗೆ ಲಿಂಗಾಯಿತ ಧರ್ಮದ ಅನುಯಾಯಿಗಳೂ ಇದ್ದರು[5]. ಈ ಬಗ್ಗೆ ಮುಂದೆ ವಿಶದವಾಗಿ ಪರಿಶೀಲಿಸುವುದರಿಂದ ಅಮೀನನ ದಿಟ್ಟತನದ ಜೀವನ ಶೈಲಿಯ ಉದಾಹರಣೆಯೊಂದನ್ನು ಗಮನಿಸಬಹುದು. ಅನಲ್ ಹಕ್ (ಅಹಂಬ್ರಹ್ಮಾಸ್ಮಿ, ನಾನೇ ಅಲ್ಲಾ)ನ ವಿಚಾರವನ್ನು ಅಮೀನನು ಅಂಗೀಕರಿಸಿದ್ದನ್ನು ಪ್ರತಿಪಾದಿಸಿದ್ದನ್ನು ಆತನ ಜೀವನ ವಿವರಗಳಿಂದ ತಿಳಿಯಬಹುದಾಗಿದೆ. ಸ್ವತಃ ಈ ವಿಚಾರವು ಆತನ ಅನುಯಾಯಿಗಳ ಮೇಲೆ ಎಷ್ಟೊಂದು ಪ್ರಭಾವ ಬೀರಿತ್ತೆಂಬುದಕ್ಕೆ ಆತನ ಗೋರಿಯ ಮೇಲಿನ ದಖನಿ ಭಾಷೆಯಲ್ಲಿರುವ 'ಪದ್ಯ'ವೊಂದರಿಂದ ಅರಿಯಬಹುದಾಗಿದೆ. ಅಮೀನನ್ನೊಳಗೊಂಡಂತೆ ಆತನ ವಿಚಾರಗಳನ್ನು ಒಪ್ಪುತ್ತಿದ್ದ ಮತ್ತು ಪಾಲಿಸುತ್ತಿದ್ದ ಪಂಗಡವು ಸಂಪ್ರದಾಯಸ್ಥ ಮುಸ್ಲಿಂ ದೃಷ್ಟಿಕೋನದಿಂದ ಧರ್ಮ ವಿರೋಧಿಗಳಾಗಿದ್ದರೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಇಲ್ಲಿ ಕೊಡಲಾಗಿರುವ ಈ ಪದ್ಯವು ಬಹುಶಃ ಆತನ ಅನುಯಾಯಿಯೊಬ್ಬನಿಂದ ಆಧ್ಯಾತ್ಮಿಕ ಪರವಶತೆಯಲ್ಲಿದ್ದಾಗ ರಚಿಸಲ್ಪಟ್ಟಿರುವಂತೆ ತೋರುತ್ತದೆ. ದಖನಿ ಭಾಷೆಯಲ್ಲಿರುವ ಇದನ್ನು ಅಮೀನ್ -ಅಲ್ -ದೀನ್ ನ ದರ್ಗಾದ ಗುಂಬಜ್ ನ ಗೋಲಾಕಾರವನ್ನು ಹೋಲುವಂತಹ ಒಂದು ಚಿತ್ರದಲ್ಲಿ ಬರೆಯಲಾಗಿದೆ.

ಓ ಅಮೀನ್ ! ಸಹಾಯ ಮಾಡು
ನಮ್ಮ ಆಶೆಗಳ ಪೂರೈಸುವವನೇ
ಓ ಪವಾಡ ಪುರುಷನೇ
ಓ ಅಮೀನನೆ ಸಹಾಯ ಮಾಡು
ಪ್ರೇಮಿಗಳ ಸೂರ್ಯನೇ
ಓ ದಿವ್ಯ ಪ್ರೇಮಿಯೇ
ಚಂದ್ರನೇ ಮತ್ತು ಸೂರ್ಯನೇ
ಆಶೆಗಳ ಪೂರೈಸುವವನೇ

[illegible]

[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]

ಓ ಅಮೀನನೆ ಸಹಾಯ ಮಾಡು

ಓ ಪ್ರಿಯ ಗಿಡುಗನೇ ಸಹಾಯಮಾಡು

ನನ್ನ ಗೂಢದ ಗೂಢವೇ

ನನ್ನ ಜ್ಯೋತಿಯ, ಜ್ಯೋತಿಯೇ

ಅಲ್ಲಾನ ಸಾಕಾರವೇ

ಅಲ್ಲಾ ಮೊಹಮ್ಮದ್ 'ಅಲಿ'

ನನ್ನ, ಧನ್ವಂತರಿ ದೊರೆಯೇ

ಓ ಅಲ್ಲಾ

ನಿಜವಾಗಿ, ನಾನೇ ಅಲ್ಲಾ[೨]

ಈ ಪದ್ಯದ ಕೊನೆಯಲ್ಲಿನ ವಾಕ್ಯದ ಉಚ್ಛರಣೆಗಾಗಿಯೆ ಮನ್ಸೂರ್ - ಅಲ್ - ಹಜ್ ನನ್ನು ೧೦ನೇಯ ಶತಮಾನದಲ್ಲಿ ಬಾಗ್ದಾದಿನಲ್ಲಿ ಗಲ್ಲಿಗೇರಿಸಲಾಯಿತು. ಸೂಫಿಗಳಲ್ಲಿ ನಾಸ್ತಿಕತೆಯಿದೆ ಎಂಬುದನ್ನು ತೋರಿಸಲು ಈ ವಾಕ್ಯವು ಸೂಚಿಯಾಯಿತು. ಮನ್ಸೂರ್ - ಅಲ್ - ಹಚ್ ನ ನಿದರ್ಶನ ಸೂಫಿಗಳಿಗೊಂದು ಎಚ್ಚರಿಕೆಯ ಉದಾಹರಣೆಯಾದರೂ ಅಮೀನನು ಮತ್ತವನ ಅನುಯಾಯಿಗಳು 'ಅನಲ್ ಹಕ್ ' ತತ್ವವನ್ನು ಇಷ್ಟೊಂದು ನಿರ್ಭಯವಾಗಿ ಬಳಸಿರುವುದು ಆಸಕ್ತಿದಾಯಕ ಸಂಗತಿಯಾಗಿದೆ. ಬಹುಶಃ ಇದು ಅಮೀನನಿಗೆ ಮುಸ್ಲಿಮೇತರ ವರ್ಗಗಳಲ್ಲಿದ್ದ ಗೌರವ, ಬೆಂಬಲ ಮತ್ತು ಭಾರತದಂತಹ ಪೂರ್ತಿ ಇಸ್ಲಾಮಿಕ್ ಪರಿಸರವಲ್ಲದ ವಿಶಿಷ್ಟ ಸಾಂಸ್ಕೃತಿಕ ಸಂಧರ್ಭವು ಅಮೀನನಂತಹ ಆಧ್ಯಾತ್ಮಿಕ ವ್ಯಕ್ತಿಗಳ ಮುಕ್ತ ಅಭಿವ್ಯಕ್ತಿಗೆ ಸಹಾಯಕವಾಗಿರುವಂತಿದೆ. ಅದೇನೆ ಇದ್ದರೂ ಅಮೀನನ್ನು ಹೊರೆತು ಪಡಿಸಿಯೂ ಸೂಫಿಗಳೆಲ್ಲ ಮೂಲತಃ ಇದೇ ಬಗೆಯ ಸೈಂದ್ಧಾಂತಿಕ ನೆಲೆಗಟ್ಟನ್ನು ಹೊಂದಿದವರಾಗಿದ್ದರು. ಇಂತಹ ವಿಚಾರಗಳನ್ನು ಪ್ರತಿಪಾದಿಸಲು ಬಹುತೇಕ ಸೂಫಿಗಳು ಪ್ರತೀಕಗಳ ಮೊರೆಹೋದರೆ 'ಅಮೀನ'ನಂತಹವರು ಅದಕ್ಕೆ ಅಪವಾದವಾಗಿ ನೇರವಾಗಿಯೇ ಪ್ರತಿಕ್ರಿಯಿಸಿದರು.

ಪ್ರೇಮದ ಪ್ರತೀಕದ ಜೊತೆಗೆ ಸೂಫೀ ದರ್ಶನದಲ್ಲಿ ಸರ್ವೆ ಸಾಮಾನ್ಯವಾಗಿ ಕಂಡು ಬರುವ

ಮತ್ತೊಂದು ಪ್ರತೀಕವೆಂದರೆ, ಸುರೆಯದ್ದು. 'ಸುರೆ'ಯು ತಾತ್ಕಾಲಿಕವಾಗಿಯಾದರೂ ಕೊಡುವ ಜೋದಕ ಗುಣ, ಪ್ರಚೋದನೆಯಿಂದಾಗಿ ಸೂಫಿಗಳು ಇದನ್ನು ಸಹ ಮುಖ್ಯ ಪ್ರತೀಕವನ್ನಾಗಿ ಬಳಸಿದರು. ಆಧ್ಯಾತ್ಮಿಕ ಸಾಧನೆಯ ಉನ್ನತಿಯಲ್ಲಿದ್ದ ಸೂಫಿಗಳು ಇದನ್ನು ಅಭಿವ್ಯಕ್ತಿ ಕ್ರಮದಲ್ಲಿ ಬಳಸಿದರೆ ಆ ಮಟ್ಟಕ್ಕೇರದ ಉಳಿದವರು ಇದನ್ನು ದೈವ ಸಾಕ್ಷಾತ್ಕಾರದ ಸಲುವಾಗಿ ಆಧ್ಯಾತ್ಮಿಕ ಪರವಶತೆಗೆ ಇದೂ ಒಂದು ಮಾಧ್ಯಮ ಎಂಬ ನೆಪದಿಂದ ವ್ಯಕ್ತಿಗತ ಸೇವನೆಗೆ ತೊಡಗಿದರು. ಮಧ್ಯ, ಮಾದಕ ಪದಾರ್ಥಗಳ ಸೇವನೆ, ಸಂಗೀತ, ಸ್ತ್ರೀಯರು, ಸ್ವಚ್ಛಂದ ಧಾರ್ಮಿಕ ಅಭಿವ್ಯಕ್ತಿಯ ಒಲವುಗಳಿಂದಾಗಿ ಈ ವರ್ಗವು ಸಹಜವಾಗಿಯೇ ಸಾಂಪ್ರದಾಯಿಕ ಧಾರ್ಮಿಕ ವರ್ಗದ ಕೆಂಗಣ್ಣಿಗೆ ಗುರಿಯಾಗ ಬೇಕಾಯಿತು[೬]. ಇನ್ನು ಕೆಲವರಂತು ಮಧ್ಯ, ಮಾದಕ ವಸ್ತುಗಳ ಸೇವನೆಯನ್ನು ತಮ್ಮ ಸಮಾಜದ ಡಾಂಬಿಕ, ಕಂದಾಚಾರಿ ವರ್ಗದ ವಿರುದ್ಧದ ಪ್ರತಿಭಟನೆಯ ವಿಧಾನವನ್ನಾಗಿ ಬಳಸಿದರು. ಉದಾಹರಣೆಗೆ ೧೭ನೆಯ ಶತಮಾನದ ಕೊನೆಯಲ್ಲಿ ಗುಲುಬರ್ಗಾ ಜಿಲ್ಲೆಯ ಗೋಗಿಯಲ್ಲಿದ್ದ, ಚಿಷ್ತಿ ಸೂಫಿಜಂನೊಂದಿಗೆ ತನ್ನನ್ನು ಗುರುತಿಸಿಕೊಂಡ 'ಮೊಹಮ್ಮದ್ ಬಹರಿ'ಯು 'ಸುರೆ'ಯನ್ನು ಕೈಬಿಟ್ಟು, ವಿಶೇಷವಾಗಿ ಕೆಳವರ್ಗದವರು ಸೇವಿಸುವ 'ಭಂಗಿ'ಯನ್ನು ಪ್ರತೀಕವನ್ನಾಗಿ ಬಳಸಿ ಕಾವ್ಯವೊಂದನ್ನು ರಚಿಸಿದ್ದಾನೆ. ಬಹರಿಯು ಕೂಲಂಕಷವಾಗಿ ಈ ಕಾವ್ಯದಲ್ಲಿ ಸೂಫಿಗಳ 'ಬಂಗ್ ' ಸೇವನೆಯ ಬಗ್ಗೆ ಹಾಗು ಭಂಗ್ ಅನ್ನು ಸಂಪ್ರದಾಯಸ್ಥ ಸೂಫಿಜಂ ಹಾಗು ಸಂಪ್ರದಾಯಸ್ಥ 'ಇಸ್ಲಾಂ'ನ ವಿರುದ್ಧದ ಪ್ರತಿಭಟನೆಯ ಸಂಕೇತವಾಗಿ ಉಪಯೋಗಿಸುತ್ತಾನೆ. ದಖನಿ ಭಾಷೆಯಲ್ಲಿರುವ 'ಭಂಗಾಬ್ ನಾಮಾ' ಶೀರ್ಷಿಕೆಯ ಈ ಕೃತಿಯಲ್ಲಿನ ಕೆಲವು ಪದ್ಯಗಳನ್ನು ನಿದರ್ಶನವಾಗಿ ನೋಡಬಹುದು.

ನಿಮ್ಮ ಕಿರೀಟಗಳನ್ನು ಬೆಂಕಿಯಲ್ಲಿ ಸುಡಿ
ನಿಮ್ಮ ರಾಜ್ಯ ಹಾಗು ಸಂಪತ್ತನ್ನು ಅಳಿಸಿ ಹಾಕಿ
ನಿಮ್ಮ ಸುಂದರವಾದ ಭಾರವಾದ ಉಡಿಗೆಗಳನ್ನು ಕಿತ್ತೊಗೆದು
ಲಂಗೋಟಿ ಧರಿಸಿ ಅಷ್ಟೆ ಸಾಕು
ನಿಮ್ಮ ದೊಡ್ಡ ಹಣದ ಚೀಲಗಳಿಗೆ ಬದಲು ಸಣ್ಣವನ್ನು ಉಪಯೋಗಿಸಿ
ಬಹರಿಯು ಮತ್ತೆ ಮುಂದುವರೆದು
ಭಂಗ್ ಸೇವಕರು ತಮ್ಮ ಕೈಯಲ್ಲಿ ಜಾಮ್ (ಲೋಟ) ಹಿಡಿದ್ದಾರೆ

ಮತ್ತು ಗುರಾಣಿಯ ಮೇಲೆ ಮೂತ್ರ ವಿಸರ್ಜಿಸಿದ್ದಾರೆ
ಖಡ್ಗಗಳ ತೊರೆದು ಕುಟ್ಬಾಣಿ ಹಿಡಿದಿದ್ದಾರೆ
ಭಂಗ್ ಸೇವಕರು ತಮ್ಮ ಬಟ್ಟೆಗಳನ್ನು ತೊರೆದಿದ್ದಾರೆ
ಭಂಗ್ ಬಟ್ಟೆಯ ಮಾಡಲು
ಭಂಗ್ ಒಂದೇ ಅವರ ತೃಪ್ತಿಯ ಸಾಧನ
ಅವರಿಗರ್ಥವಾಗುವುದು ಭಂಗ್ ಒಂದೇ ಬೇರೇನೂ ಅಲ್ಲ
ಇಸ್ಲಾಂ ಅಥವಾ ಅಪನಂಬಿಕೆಯ ಬಗ್ಗೆ ಅವರಿಗೆ ಕಾಳಜಿ ಇಲ್ಲ.[8]

ಈ ಪದ್ಯದ ಕೊನೆಯ ಸಾಲು ಸೂಫಿಗಳು ಸಂಘಟಿತ ಧರ್ಮದಿಂದ ಅದರಲ್ಲೂ ಮುಖ್ಯವಾಗಿ ಸಂಪ್ರದಾಯಸ್ಥ ಮುಸ್ಲಿಂ ಪ್ರತಿನಿಧಿಗಳಿಂದ ದೂರವಿದ್ದುದನ್ನು ಸೂಚಿಸುತ್ತದೆ. ಇಸ್ಲಾಂನ ಕಾನೂನಿನ ಪ್ರಕಾರ ಬಹಿಸ್ಕರಿಸಲ್ಪಟ್ಟ ಮದಿರೆಯನ್ನು ಬಿಜಾಪುರದ ಆಸ್ಥಾನದಲ್ಲಿ ಮುಕ್ತವಾಗಿ ಸೇವಿಸಲಾಗುತ್ತಿತ್ತು. ರಾಜಸ್ಥಾನ, ಉಲೇಮಾಗಳು ಹಾಗು ಸಂಪ್ರದಾಯಸ್ಥ ಸೂಫಿ ವರ್ಗವು 'ಭಂಗಿ'ಯನ್ನು ಸಮಾಜದ ಕೆಳವರ್ಗದ ಜನರ ಜೊತೆಯಲ್ಲಿ ಮಾತ್ರವೆ ಗುರುತಿಸಲಾಗುತ್ತಿತ್ತು. ಮೊಹಮ್ಮದ್ ಬಹರಿಯು ಕೂಡ 'ಭಂಗಿ'ಯನ್ನು ಪ್ರತೀಕವಾಗಿ ಬಳಸಿರುವುದು ಆತನು ಸಾಮಾಜಿಕವಾಗಿ ಹಿಂದುಳಿದ ವರ್ಗದ ಜೊತೆ ಗುರುತಿಸಿಕೊಂಡಿದ್ದರ ಸಂಕೇತವಾಗಿತ್ತಲ್ಲದೆ ಅದು 'ದರವೇಶಿ' ಸೂಫಿಗಳ ಸಾಮಾಜಿಕ ಧೋರಣೆಯನ್ನು ವ್ಯಕ್ತಪಡಿಸುತ್ತೆದೆ ಯೆಂಬುದಾಗಿ ಈಟನ್ ವ್ಯಾಖ್ಯಾನಿಸುತ್ತಾರೆ.

'ಸೂಫಿಜಂ' ಆಂತರಿಕವಾಗಿ ಸಾಂಪ್ರದಾಯಿಕ ಮುಸ್ಲಿಂ ವರ್ಗದಿಂದ ಪ್ರತಿರೋಧವನ್ನೆದುರುಸುತ್ತಿದ್ದರೂ, ಅದರ ಜೊತೆ ಸದಾ ಸಂಘರ್ಷವೇರ್ಪಡುತ್ತಿದ್ದರೂ ಅದು 'ಇಸ್ಲಾಂ' ಅನ್ನು ಜನಪ್ರಿಯಗೊಳಿಸಿ ಮುಸ್ಲಿಮೇತರ ವರ್ಗಗಳು ಅದರತ್ತ ಆಕರ್ಷಿತವಾಗುವಂತೆ ಮಾಡಿದ್ದವು. 'ಮತಾಂತರೀಕರಣ' ಪ್ರಕ್ರಿಯೆಯು ಸೂಫಿಗಳು ಮುಸ್ಲಿಮೇತರ ವರ್ಗಗಳೊಂದಿಗೆ ಹೊಂದಿದ್ದ ಸೌಹಾರ್ದಯುತ ಸಂಬಂಧ, ಅರ್ಥಪೂರ್ಣ ಸಾಂಸ್ಕೃತಿಕ ಅಂತರ್ ಸಂಬಂಧಗಳ ಫಲವಾಗಿತ್ತು. ಇಂಡಿಯಾದ ಮುಸ್ಲಿಂ ಮತ್ತು ಮುಸ್ಲಿಮೇತರ ವರ್ಗಗಳೆರಡರಲ್ಲೂ ಜನಪ್ರಿಯ, ಪ್ರಭಾವೀ ವ್ಯಕ್ತಿಗಳಾಗಿದ್ದ ಸೂಫಿಗಳನ್ನು ಮುಸ್ಲಿಂ ರಾಜ್ಯಸತ್ತೆಯು ತನ್ನ ರಾಜಕೀಯ ಸುಭದ್ರತೆಗಾಗಿ ಗೌರವದಿಂದ ಕಂಡಿತಲ್ಲದೆ ಅವರ ಉಪದೇಶ ಮಂದಿರಗಳಿಗೆ, ದರ್ಗಾದಂತಹ

ಸಂಸ್ಥೆಗಳಿಗೆ ದಾನ, ದತ್ತಿ, ಸೌಲಭ್ಯಗಳನ್ನು ಒದಗಿಸಿಕೊಟ್ಟಿತು.

ಸೂಫಿಜಂ ಮೂಲತಃ ಅದರ ಆಂತರಿಕ ರಚನೆಯಿಂದಾಗಿಯೇ ಅತ್ಯಂತ ಜನಪ್ರಿಯವಾಯಿತು. ಮತ್ತು ಮುಸ್ಲಿಮೇತರ ವರ್ಗವನ್ನು ತನ್ನತ್ತ ಆಕರ್ಷಿಸಿತೆಂಬುದನ್ನು ನೋಡಿದೆವು. ಇಂತಹ ಪ್ರಕ್ರಿಯೆಯ ಸ್ವರೂಪವನ್ನು ಅರಿಯುವುದರಿಂದಾಗಿ ವರ್ತಮಾನದ ಸಾಂಸ್ಕೃತಿಕ ಸ್ಥಿತಿ ವಿಶೇಷಗಳನ್ನು ಸುಸಂಬದ್ಧವಾಗಿ ಅರ್ಥೈಸಲು ಮತ್ತು ವ್ಯಾಖ್ಯಾನಿಸಲು ಸಾಧ್ಯವಾಗುತ್ತದೆ. ಇಂಡಿಯಾದ ಸಂದರ್ಭದಲ್ಲಿ 'ಸೂಫಿಜಂ' ಯಾವರೀತಿಯ ಮಾರ್ಪಾಡಿಗೊಳಗಾಯಿತು ಮತ್ತದು ಸ್ಥಳೀಯ ಆಧ್ಯಾತ್ಮಿಕ ಸಿದ್ಧಾಂತಗಳಿಂದ ಪ್ರಭಾವಿತವಾಗಿದೆಯೇ ಎಂಬುದರ ಬಗೆಗೆ ಈ ಮುಂದೆ ನೋಡಬಹುದಾಗಿದೆ.

ಇಂಡಿಯಾದಲ್ಲಿನ ಸೂಫೀ ಸಾಧಕರು ಸಮಕಾಲೀನ ಭಕ್ತಿಪಂಥದ ಸಾಧಕರ ಅನೇಕ ಸಾಧನೆಯ ಅಂಶಗಳನ್ನು ಸ್ವೀಕರಿಸಿದರು ಅದನ್ನು ಮ.ಸು. ಕೃಷ್ಣಮೂರ್ತಿಯವರು ಈ ಕೆಳಗಿನಂತೆ ಪಟ್ಟಿ ಮಾಡುತ್ತಾರೆ[೧೦].

೧. ಹಜ್ವರಿ ಮೊದಲಾದ ಸೂಫೀ ಸಾಧಕರು ಸಾಧನಾ ಕ್ಷೇತ್ರದಲ್ಲಿ ಗುರುವಿಗೆ ವಿಶೇಷ ಮಹತ್ವ ನೀಡುತ್ತಾರೆ. ಆದರೆ ಕ್ರಮೇಣ ಈ ಕ್ಷೇತ್ರದಲ್ಲಿ ಗುರುವಿನ ಮಹತ್ವ ಮತ್ತೂ ಹೆಚ್ಚಾಯಿತು. ಹಿಂದೂ ಪ್ರಭಾವದಿಂದಾಗಿರಬೇಕು.

೨. ಉಪನಿಷತ್ತುಗಳಲ್ಲಿ ಒಂದು ವಿಶೇಷ ವಿಧವಾದ ಸೃಷ್ಟಿಕ್ರಮ ದೊರೆಯುತ್ತದೆ. ಪ್ರಾರಂಭಿಕ ಸೂಫೀ ಸಾಧಕರು 'ಅಲ್ಲಾ'ನ 'ನೂರ್' ಇಲ್ಲವೆ ಕಾಂತಿಯಿಂದ ಜಗತ್ತು ಸೃಷ್ಟಿಯಾಯಿತು ಎಂದು ನಂಬಿದ್ದರು. ಅನಂತರ ಹಿಂದೂಗಳ ಕಲ್ಪನೆಯನ್ನು ಹೋಲುವ ಅನೇಕ ಕಲ್ಪನೆಗಳನ್ನು ಸೂಫೀ ಸಾಧಕರು ಮುಂದಿಟ್ಟರು.

೩. ಸೂಫಿಗಳ 'ಜಾತಿನಿಯಾ' ಎಂಬ ವರ್ಗವೊಂದಿತ್ತು. ಇವರ ಮೇಲೆ ಹಿಂದೂ ವಿಚಾರ ಧಾರೆಯ ಎಷ್ಟೊಂದು ಪ್ರಭಾವ ಬಿದ್ದಿತೆಂದರೆ ಅದನ್ನು ಜನ 'ಬೇಶರಾ' ಎಂದು ಕರೆಯತೊಡಗಿದರು.

[illegible]

[illegible]

[illegible]

[illegible]

[illegible]

೪. ಪಶ್ಚಿಮ ಭಾರತದ ಅದರಲ್ಲೂ ಪಂಜಾಬಿನ ಸೂಫಿಗಳ ಮೇಲೆ ಯೋಗ ಮಾರ್ಗದ ಗಂಭೀರ ಪ್ರಭಾವ ಬಿದ್ದಿತು. ಕೆಲವು ಸಾಧಕರು ಆಸನ, ಷಡ್ ಚಕ್ರ, ಕಮಲ, ಭೇಧ ಮೊದಲಾದ ವಿಷಯಗಳ ಮೇಲೆ ಕೃತಿ ರಚನೆ ಮಾಡಿದರು.

೫. ಕೆಲ ಸೂಫೀ ಸಾಧಕರ ಮೇಲೆ ತಂತ್ರದ ಪ್ರಭಾವವೂ ಬಿದ್ದಿತು. ಆದರೆ ಅದು ಅಷ್ಟಾಗಿ ಜನಪ್ರಿಯವಾಗಲಿಲ್ಲ.

ಇಲ್ಲಿ ವಿವರಿಸಿರುವ ಪಟ್ಟಿಯು ಸ್ಥೂಲವಾಗಿ ಸೂಫಿಜಂನ ಭಾರತೀಯ ಪ್ರಭಾವದ ಬಗೆಗೆ ಸೂಚಿಸುತ್ತದೆ. ಇದನ್ನು ಹೊರೆತು ಪಡಿಸಿದಂತೆ ದೇಶದ ವಿವಿದೆಡೆ ಆಧ್ಯಾತ್ಮಿಕ ವಿಧ್ಯಾಮಾನಗಳೊಂದಿಗೆ ಪ್ರಾದೇಶಿಕವಾಗಿ ತನ್ನ ತನವನ್ನುಳಿಸಿ ಕೊಂಡಿರುತ್ತದೆ. ಸೂಫಿಗಳು ಸಾಮಾನ್ಯ ಜನರಿಗೆ ತಮ್ಮ ವಿಚಾರಗಳನ್ನು ಸ್ಥಳೀಯ ಭಾಷೆಗಳಲ್ಲಿಯೇ ಆ ಭಾಷೆಗಳಿಗೆ ಸಹಜವಾದ ನುಡಿಗಟ್ಟುಗಳು, ರೂಪಕಗಳು, ಗಾದೆಗಳ ಮೂಲಕ ಪ್ರತಿಪಾದಿಸಿದರು. ಚೈತನ್ಯ, ರಮಾನಂದ, ಕಬೀರರನ್ನೊಳಗೊಂಡಂತಹ ಭಕ್ತಿಪಂಥದ ಆಂದೋಲನಗಳಂತೆಯೇ ಸೂಫಿಜಂ ಸಹ ಸಮಾಜದ ಎಲ್ಲ ವರ್ಗಗಳಿಗೂ ತಲುಪಿತು. ಇಲ್ಲಿ ಒಂದೇ ವ್ಯತ್ಯಾಸವೆಂದರೆ ಸೂಫಿಗಳತ್ತ ಆಕರ್ಷಿತರಾದವರು ಕ್ರಮೇಣ 'ಮುಸ್ಲಿಂ' ಆಗಿ ಪರಿವರ್ತನೆಗೊಂಡರು. ಆದರೆ ಚೈತನ್ಯ, ರಮಾನಂದರಂತಹವರ ಆಂದೋಲನಗಳಲ್ಲಿ ಇಂಡಿಯಾದ ವರ್ಣವ್ಯವಸ್ಥೆ ಮೂಲಸ್ವರೂಪದಲ್ಲೇ ಉಳಿದುಕೊಂಡು ದೇವರು, ಮನುಷ್ಯನ ಅಸ್ತಿತ್ವಕ್ಕೆ ಸಂಬಂಧಿಸಿದ ವಿಚಾರಗಳು ಮಾತ್ರ ಪ್ರಸ್ತುತಕ್ಕೆ ಬಂದವು. ಇದರೊಂದಿಗೆ ಸೂಫಿಗಳ ಕ್ರಿಯೆಯನ್ನು ಹೋಲಿಸಿದರೆ ಕ್ರಾಂತಿಕಾರಿಯಾದದ್ದು ಮತ್ತು ಸ್ಪಷ್ಟ ಉದ್ದೇಶಗಳಿಂದ ಕೂಡಿದ್ದಿತು ಎನ್ನಬಹುದು. ಯಾಕೆಂದರೆ ಮೂಲತಃ ಏಕೇಶ್ವರವಾದವನ್ನು ಮಂಡಿಸಿದ ಭಕ್ತಿಪಂಥದ ಚಳುವಳಿಗಳು ವರ್ಣವ್ಯವಸ್ಥೆಯನ್ನು ಒಡೆಯುವಲ್ಲಿ ವಿಫಲಗೊಂಡವು. ಇಂತಹ ಲೋಪವೇ ಮತ ಪರಿವರ್ತನೆಗೆ ಅವಕಾಶವಿದ್ದ 'ಇಸ್ಲಾಂ' ಇಂಡಿಯಾದಲ್ಲಿ ಪ್ರಭಾವಶಾಲಿಯಾಗಿ ಹರಡಲು ಸಹಾಯಕವಾಯಿತು.

ಗಡಿಪ್ರದೇಶಗಳಿಗೆ ಸಂಬಂಧಿಸಿದಂತಹ ಕೆಲವು ಸೂಫಿಗಳನ್ನು, ಸೂಫಿ ಮಾದರಿಯ ಸಂತರು,

ತತ್ವಪದಕಾರರನ್ನು ಈಗ ಪರಿಶೀಲಿಸಬಹುದು.

೨.೨ ಗಡಿಭಾಗದ ಸೂಫಿಗಳು :

ಈ ಅಧ್ಯಯನದಲ್ಲಿ ಗಡಿಭಾಗದ ಸೂಫಿಗಳೆಂದು ಯಾರನ್ನು ಪರಿಗಣಿಸುತ್ತೇವೆಯೋ ಅವರೆಲ್ಲ ಯಾವುದಾದರೂ ಒಂದು ಪ್ರಮುಖ ಸೂಫಿಗಳ ಕೇಂದ್ರವೊಂದರಿಂದ ರಾಜಕೀಯ ಕಾರಣಗಳಿಗಾಗಿಯೋ ಮತ ಪ್ರಚಾರಕರಾಗಿಯೋ ಈ ಭಾಗಗಳಿಗೆ ಬಂದವರಾಗಿರುತ್ತಾರೆ. ಉದಾಹರಣೆಗೆ ಔರಂಗ ಜೇಬನ ಬಿಜಾಪುರ ದಾಳಿಯಿಂದಾಗಿ ಬಿಜಾಪುರದ ಸೂಫಿಗಳು ರಾಯಚೂರು, ಬಳ್ಳಾರಿ ಮತ್ತು ಕರ್ನಾಟಕದ ಗಡಿಗಂಟಿಕೊಂಡಂತಿರುವ ಜಿಲ್ಲೆಗಳ ಕೆಲವು ಕಡೆಗೆ ವಲಸೆ ಬಂದವರಾಗಿರುತ್ತಾರೆ.

ಅನಂತಪುರ ಜಿಲ್ಲೆಯ ಪೆನುಗೊಂಡೆಯ ಬಾಬಾ ಪಕ್ರುದ್ದೀನರಂತೂ ಅತ್ಯಂತ ಪ್ರಭಾವೀ ಸೂಫಿಗಳಲ್ಲಿ ಒಬ್ಬರಾಗಿದ್ದು ಆಂಧ್ರ, ಕರ್ನಾಟಕ ತಮಿಳುನಾಡಿನ ಸೂಫಿಗಳ ಮೇಲೆ ಮತ್ತು ಜನಸಾಮನ್ಯರ ಮೇಲೆ ತುಂಬಾ ಪ್ರಭಾವ ಬೀರಿದವರಾಗಿರುತ್ತಾರೆ.

ಕೋಲಾರ ಜಿಲ್ಲೆಯ ಗೌರಿಬಿದನೂರು ಸುತ್ತಮುತ್ತಣ ಪ್ರದೇಶಗಳಲ್ಲಿ 'ಮೊಹರಂ'ಗೂ ಸಹ 'ಬಾಬಾರ ಹಬ್ಬ' (ಬಾಬೋಳ್ಳಪಂಡುಗ - ತೆಲುಗು) ಎಂದೇ ಕರೆಯುವ ರೂಢಿ ಇದೆ. ಇದು ಬಾಬಾ ಫಕ್ರುದ್ದೀನ್ ರ ಜನಪ್ರಿಯತೆಯನ್ನು ಸ್ಪಷ್ಟ ಪಡಿಸುತ್ತದೆ. ಹೀಗೆಯೇ ಸೂಫೀ ಸಂತರಿಗೂ ಮತ್ತು 'ಮೊಹರಂ' ಗೂ ಸಂಬಂಧ ಕಲ್ಪಿಸಿದ ನಿದರ್ಶನ ಬಳ್ಳಾರಿಯ ಭಾಗದ ಗಡಿ ಭಾಗಗಳಲ್ಲೂ ಕಂಡು ಬರುತ್ತದೆ. ಬಳ್ಳಾರಿಯಿಂದ ೪೦ ಕಿಲೋಮೀಟರು ದೂರವಿರುವ ಆಂಧ್ರದ ಅನಂತಪುರ ಜಿಲ್ಲೆಗೆ ಸೇರಿದ ದರ್ಗಾ ಹೊನ್ನೂರಿನಲ್ಲಿದ್ದ ಸೂಫಿ ಹಜರತ್ ಸರ್ಮಸ್ತ್ ಹುಸೇನಿ ಚಿಷ್ತಿಯವರನ್ನು ಅವರಿದ್ದ ಊರಿನ ಹೆಸರಿನಿಂದ ಹೊನ್ನೂರು ಸ್ವಾಮಿಯೆಂದು ಕರೆಯಲಾಗುತ್ತಿದ್ದು ಬಳ್ಳಾರಿ ಅನಂತಪುರ ಜಿಲ್ಲೆಯ ಗಡಿಭಾಗದ ಬಹಳಷ್ಟು ಊರುಗಳಲ್ಲಿ ಮೊಹರಂನ ತಾಜಿಯಾಗಳನ್ನಿತುವ ಮಸೀದಿಗಳಿಗೆ ಹೊನ್ನೂರು ಸ್ವಾಮಿ ಗುಡಿಗಳೆಂದೆ ಕರೆಯುತ್ತಾರೆ. ಮುಸ್ಲಿಂ

ಮತ್ತು ಮುಸ್ಲಿಮೇತರರಿಬ್ಬರಲ್ಲೂ ಹೊನ್ನೂರ್ ವಲಿ, ಹೊನ್ನೂರು ಪಾಷಾ ಹೊನ್ನೂರುಸಾಬ್ , ಹೊನ್ನೂರಮ್ಮ, ಹೊನ್ನೂರಪ್ಪ ಹೆಸರುಗಳಿರುವುದನ್ನು ಗಮನಿಸಿದರೆ ಈ ಸಂತನ ಪ್ರಭಾವ ಈ ಭಾಗದಲ್ಲಿ ಅಪಾರವಾಗಿದ್ದುದನ್ನು ಮನಗಾಣಬಹುದಾಗಿದೆ.

ಬಹುತೇಕ ಈ ಭಾಗದ ಸೂಫಿಗಳು ಖ್ವಾದರಿಯಾ, ಚಿಷ್ತಿಯಾ ಎಂಬ ಆಧ್ಯಾತ್ಮಿಕ ಪಂಥಗಳಿಗೆ ಸೇರಿದವರಾಗಿರಬಹುದಷ್ಟೆ, ಹೊರತು ಉಳಿದಂತೆ ಅವರೆಲ್ಲರ ಆಧ್ಯಾತ್ಮಿಕ ಚಟುವಟಿಕೆಗಳು, ಮುಸ್ಲಿಮೇತರರೊಂದಿಗಿನ ಸೌಹಾರ್ದಯುತ ಸಂಬಂಧ, ತಾತ್ವಿಕ ಚಿಂತನೆ ಒಂದೇ ತೆರನಾಗಿತ್ತು. ಖ್ವಾದರಿಯಾ ಚಿಷ್ತಿಯಾ ಎಂಬ ಬೇಧಗಳು ಸಹ ನಾಮ ಮಾತ್ರವಾಗಿದ್ದವು. ಸೂಫಿಜಂನ ಒಟ್ಟು ತಾತ್ವಿಕ ಸ್ವರೂಪ, ಅದರ ಸೈದ್ಧಾಂತಿಕ ವಿವರಣೆಗಳ ಪರಿಧಿಯೊಳಗೆ ಎಲ್ಲ ಸೂಫಿಗಳೂ ಬರುತ್ತಿದ್ದರಾದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಾತಿನಿಧಿಕವಾಗಿ ಕೇಲವೇ ಸೂಫಿಗಳನ್ನಿಟ್ಟುಕೊಂಡು ಸೂಫಿಜಂನ ಕಾಣ್ಕೆಯನ್ನು ಪರಿಶೀಲಿಸಲಾಗುವುದು.

ಮೊದಲಿಗೆ ಬಂದೇನವಾಜ್ ಗೇಸುದರಾಜ್ ರ ಕುರಿತು ನೋಡಬಹುದು. ಕರ್ನಾಟಕದಲ್ಲಿಯೇ ಮಾತ್ರವಲ್ಲದೆ ಭಾರತದಲ್ಲಿಯೇ ಅತ್ಯಂತ ಪ್ರಭಾವೀ ಸಂತರಾದ ಗೇಸುದರಾಜ್ ರು ಹಿಜರಿ ಶಕೆ ೭೨೧. ರಜಬ್ ತಿಂಗಳು ೪ನೇ ತಾರೀಖು ಅಂದರೆ ೩೦ನೇ ಜುಲೈ ೧೩೨೧ರಲ್ಲಿ ದೆಹಲಿಯಲ್ಲಿ ಜನಿಸಿದರು. 'ಸೈಯದ್ ಮಹಮ್ಮದ್ ಅಲ್ - ಹುಸೇನಿ' ಮೂಲ ಹೆಸರಿನ ಬಂದೇ ನವಾಜ್ ರಿಗೆ ಗೇಸುದರಾಜ್ ಎನ್ನುವ ಹೆಸರು ಅವರ ಪೂರ್ವಿಕರಿಂದ ಬಂದುದಾಗಿದೆ. ಇವರ ಪೂರ್ವಿಕರು ಕುರ್ ಸಾನಿನ ಸೈಯದ್ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಮಹಮ್ಮದ್ ಬಿನ್ ತುಘಲಕ್ ನು ತನ್ನ ರಾಜಧಾನಿಯನ್ನು ದೆಹಲಿಯಿಂದ ದಖಿನ್ ಗೆ ವರ್ಗಾಯಿಸಿದಾಗ ಅಲ್ಲಿನ ಸೂಫಿಗಳೂ ಸಹ ದೇವಗಿರಿ (ದೌಲತಾಬಾದ್)ಗೆ ಬರಬೇಕಾಯಿತು. ಹೀಗೆ ಬಂದ ಹಲವಾರು ಸೂಫಿಗಳು ದಕ್ಷಿಣದಲ್ಲಿ ಹರಡಿಕೊಂಡರು. ವಾಸ್ತವವಾಗಿ ಗೇಸುದರಾಜ್ ರು ದಖಿನ್ನಿಗೆ ಬಂದಾಗ ೧೧ ವರ್ಷದ ಬಾಲಕರಾಗಿದ್ದರು. ದೌಲತಾಬಾದಿನಲ್ಲಿ ಅವರ ತಂದೆಯು ತೀರಿಕೊಂಡನಂತರ ಅವರ ತಾಯಿಯು ಗೇಸುದರಾಜ್ ರನ್ನು ಶಿಕ್ಷಣಕ್ಕಾಗಿ ಮತ್ತೆ ದೆಹಲಿಗೆ ಕಳುಹಿಸಿದರು. ಅಲ್ಲಿ ಪ್ರಖ್ಯಾತ

ಸಂತರಾಗಿದ್ದ 'ಹಜರತ್ ಖ್ವಾಜಾ ನಸೀರುದ್ದೀನ್ ಚಿರಾಘ್ 'ರವರ ಹತ್ತಿರ ಸೂಫಿ ಶಿಕ್ಷಣಕ್ಕೆ ತೊಡಗಿದರು. ಗೇಸುದರಾಜ್ ರು ೩೨ನೇ ವಯಸ್ಸಿನಲ್ಲಿ ತಮ್ಮ ಗುರುಗಳಿಂದಲೇ 'ಖಲೀಫಾ' (ಧಾರ್ಮಿಕ ಉತ್ತರಾಧಿಕಾರಿ) ಪದವಿಯನ್ನು ಪಡೆದರು.[೧೧]

ಗುರುಗಳ ಮರಣಾನಂತರ ಹಿಜರಿ ಶಕೆ ೮೦೧ರಲ್ಲಿ ತೈಮೂರನು ಭಾರತದ ಮೇಲೆದಂಡೆತ್ತಿ ಬರುವ ವಿಷಯ ತಿಳಿದು ತಮ್ಮ ಅನುಯಾಯಿಗಳೊಂದಿಗೆ ದಕ್ಷಿಣದತ್ತ ಪ್ರಯಾಣಿಸಿದರು. ದೌಲತಾಬಾದಿಗೆ ಬಂದ ಗೇಸುದರಾಜ್ ರಿಗೆ ಅಲ್ಲಿನ ಗೌರ್ನರ್ ಮೂಲಕ ಬಹುಮನಿ ಸುಲ್ತಾನ 'ಫಿರೋಜ್ ಶಹಾ'ನಿಂದ ಗುಲುಬರ್ಗಾಕ್ಕೆ ಬರಲು ಆಮಂತ್ರಣ ತಲುಪಿತು. ಗುಲುಬರ್ಗಾದ ಹೊರವಲಯದಲ್ಲಿ ಅಸಂಖ್ಯಾತ ಜನರೊಂದಿಗೆ ಸ್ವತಃ 'ಫಿರೋಜ್ ಶಹಾ' ಮತ್ತು ಅವನ ತಮ್ಮ 'ಅಹಮ್ಮದ್ ಖಾನ್ ' (ಅಹಮದ್ ಶಹಾವಲಿ) ರೇ ಅಭೂತಪೂರ್ವವಾಗಿ ಸ್ವಾಗತಿಸಿದರು[೧೨].

ಗೇಸುದರಾಜರ ಉಪದೇಶ ಮಂದಿರದಲ್ಲಿ (ಕಾನ್ ಕಾ) ಆತನ ಅನುಯಾಯಿಗಳಾಗಿ ಕುಲೀನರಾದ ಸೈಯದರು, ಶ್ಲೇಕರು, ರಾಜಕುಮಾರರೊಂದಿಗೆ ನೇಕಾರರು, ಚಮ್ಮಾರರು ಮತ್ತು ಕಮ್ಮಾರರು ಸಹಸೇರಿದರು. ಆಧ್ಯಾತ್ಮಿಕ ಸಾಧನೆಗಾಗಿ ಮುಸ್ಲಿಮೇತರ ವರ್ಗದ ಅತ್ಯಂತ ಕೆಳವರ್ಗದವರಿಗೂ ಸಮಾನವಕಾಶ ದೊರೆತುದುದರಿಂದ ಗೇಸುದರಾಜರು ಮುಸ್ಲಿಮೇತರ ವರ್ಗಗಳಿಂದ ಅಸಂಖ್ಯಾತ ಅನುಯಾಯಿಗಳನ್ನು ಪಡೆದರು. ಸ್ವತಃ ಗೇಸುದರಾಜರು ಭಾಷಾ ಪಂಡಿತರಾಗಿದ್ದುದಲ್ಲದೆ ಅರ್ಯಾಬಿಕ್ , ಪರ್ಶಿಯನ್ , ಹಿಂದುವಿ (ಪೂರ್ವದ ಹಿಂದಿ ಅಥವಾ ಉರ್ದು) ಮತ್ತು ಸಂಸ್ಕೃತ ಭಾಷೆಗಳ ಪರಿಚಯವಿದ್ದವರಾಗಿದ್ದು ಎಲ್ಲಾ ರೀತಿಯ ಜನರೊಂದಿಗೆ ಸಂವಾದವನ್ನು ಸಾಧ್ಯವಾಗಿಸಿಕೊಂಡಿದ್ದರು[೧೩].

ಗೇಸುದರಾಜರ ಸೂಫಿ ಸಂಸ್ಥೆಯು ಆಧ್ಯಾತ್ಮಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಬಹುಮನಿ ಸಂಸ್ಥಾನದಲ್ಲಿ ಬಹು ಮುಖ್ಯ ಪಾತ್ರ ವಹಿಸಿತು. ಚಿಷ್ತಿ ಪಂಥದ ಸಂತರು ಸೂಫೀ ಉಪದೇಶ ಮಂದಿರಗಳನ್ನು (ಕಾನ್ ಕಾಗಳು) ದಖನ್ನಿನಲ್ಲಿ 'ಜಮಾ ಅತ್ ಖಾನಾ' (ಭಕ್ತಿ ಮಂದಿರ) ಎಂಬುದಾಗಿ ಕರೆದರು. ಇದರ

ಮುಖ್ಯ ಉದ್ದೇಶವು ಸೂಫಿ ಸಮುದಾಯದ ಆಧ್ಯಾತ್ಮಿಕ ಚೈತನ್ಯದಿಂದ ಜನರಲ್ಲಿ ನೈತಿಕ ಆಧ್ಯಾತ್ಮಿಕ ಮೌಲ್ಯಗಳನ್ನು ಬೆಳಸುವುದಾಗಿತ್ತು. ಅತಿಥಿ ಸತ್ಕಾರವು ಚಿಷ್ತಿಸೂಫಿಗಳ ಮುಖ್ಯಗುಣವಾಗಿತ್ತು. 'ಜಮಾ ಅತ್', 'ಖಾನವು' ಬಡವ ಬಲ್ಲಿದರೆನ್ನದೆ ಎಲ್ಲರಿಗೂ ತೆರೆದುಕೊಂಡಿತ್ತು. ಇದರಿಂದಾಗಿ ಕೆಳವರ್ಗದ ಹಿಂದುಗಳು, ಹಿಂದೂ ಯೋಗಿಗಳಿಗೂ ಆಕರ್ಷಣೆಯ ಕೇಂದ್ರವಾಯಿತು. 'ಜವಾಮಿ ಅಲ್ - ಕಿಲಮ್' ಎನ್ನುವ ದಾಖಲೆಗಳ ವಿವರಗಳಿಂದ ತಿಳಿದು ಬರುವಂತೆ ಗೇಸುದರಾಜರು ಹಿಂದೂ ಯೋಗಿಗಳೊಂದಿಗೆ ಸುದೀರ್ಘವಾದ ಚರ್ಚೆ ಸಂವಾದಗಳಿಂದ ಸೂಫಿಜಂಗೆ ಸಂಬಂಧಿಸಿದ ವಿಷಯಗಳ ಬಗೆಗೆ ಅವರಿಗೆ ಮನವರಿಕೆ ಮಾಡಿದ್ದರು[39].

ಸದಾ ವಿವಾದಕ್ಕೊಳಗಾಗಿರುವ ಸೂಫಿಗಳ ಆಧ್ಯಾತ್ಮಿಕ ಸಂಗೀತ 'ಸಮಾಅ' ದ ಬಗೆಗೆ ಗೇಸುದರಾಜರಿಗೆ ವಿಶೇಷ ಪ್ರೀತಿ. ಪ್ರಾರ್ಥನೆ ಉಪವಾಸ ಮತ್ತು ಕುರಾನಿನ ಪಠಣವು ದೇವರ ಸಾಮೀಪ್ಯ ಪಡೆಯಲು ನೆರವಾಗುತ್ತದೆ, ಅದೇ ತರಹ 'ಸಮಆ' ಕೂಡ ಆಧ್ಯಾತ್ಮಿಕ ಪರವಶತೆಗೆ ಸಹಾಯ ಮಾಡುತ್ತದೆಯೆಂದು ನಂಬಿದ್ದರು. ಗೇಸುದರಾಜರು 'ಸಮಾಅ' ವನ್ನು ನ್ಯಾಯಶಾಸ್ತ್ರೀಯ ರೀತಿಯಲ್ಲಿ 'ಹಲಾಲ್ ' (ಸಮ್ಮತಿ ಪಡೆದ), 'ಹರಾಮ್ ' (ನಿಷಿದ್ಧ) ಮತ್ತು 'ಮುಬಾಹ್ ' (ಅಂಗೀಕೃತ) ಎಂದು ವಿಂಗಡಿಸುತ್ತಾರೆ. ಸತ್ಯ ಮತ್ತು ವಾಸ್ತವ ಸ್ಥಿತಿಯ ಯೋಚನೆಗಳಿಂದ ಕೂಡಿದ ಕೇಳುಗನು ಆಲಿಸುವ ಸಂಗೀತವು 'ಹಲಾಲ್ ' ಆದರೆ, ಪ್ರಾಪಂಚಿಕ ಯೋಚನೆಗಳಿಂದ (ಲೌಕಿಕ) 'ಹರಾಮ್ ' ಆಗುತ್ತದೆ. ಡೋಲಾಯಮಾನ ಮನಸ್ಥಿತಿಯಿರುವ ಕೇಳುಗನದು 'ಮಕರುಹ್ ' (ಚಂಚಲ) ಎಂದಾಗುತ್ತದೆ. ಗೇಸುದರಾಜರು ಸೂಫಿ ಆಧ್ಯಾತ್ಮಿಕ ನೃತ್ಯಗಳನ್ನು ದೋಷರಹಿತವೆಂಬುದಾಗಿ ಪ್ರತಿಪಾದಿಸಿದ್ದರು. ಕೆಲವರು ಅವರನ್ನು ಸೂಫಿಗಳು ಯಾಕೆ ಹಿಂದುವಿ ಭಾಷೆಯಲ್ಲಿಯೇ ಸೂಫೀ ಗೀತೆಗಳನ್ನು ರಚಿಸುತ್ತಾರೆಂದು ಕೇಳಿದಾಗ ಅವರು ಹಿಂದಿ ಒಂದು ಸರಳ ಹಾಗು ಮಧುರ ಭಾಷೆಯಾಗಿದ್ದು ಕೆಲವು ನಿರ್ದಿಷ್ಟ ಭಾವನೆಗಳನ್ನು ಶಿಷ್ಟ ರೀತಿಯಿಂದ ವಿಧೇಯ ಭಕ್ತಿ ಭಾವನೆಯಿಂದ ಅತ್ಯುತ್ತಮ ರೀತಿಯಲ್ಲಿ ಅಭಿವ್ಯಕ್ತಿಗೊಳಿಸಬಹುದೆಂಬುದಾಗಿ ಉತ್ತರವಿತ್ತರು[40].

ಇಂಡಿಯಾದ ಸೂಫಿಜಂನಲ್ಲಿ ಮುಖ್ಯವಾಗಿ ಕಂಡು ಬರುವ ಇಲ್ಲಿಯ ಪ್ರಭಾವದಿಂದಲೇ ರೂಪು

[illegible]

[illegible]

[illegible]

ಗೊಂಡ ಗುರು, ಶಿಷ್ಯ ಪರಂಪರೆ, ಗುರುವಿನ ಮಹತ್ವ ಚಿಷ್ತಿ ಪಂಥದಿಂದಾಗಿ ವಿಶೇಷ ಪ್ರಾಚುರ್ಯಕ್ಕೆ ಬಂತು. ಗೇಸುದರಾಜರು ತಮ್ಮ ಕೃತಿಗಳಲ್ಲಿ ಇದನ್ನು ವಿಶೇಷವಾಗಿ ಪ್ರಸ್ತಾಪಿಸಿದ್ದಾರೆ. ಅವರು ಸುಂದರವಾದ ರೂಪಕವೊಂದರ ಮೂಲಕ ಗುರುವಿನ ಮಹತ್ವದ ಬಗೆಗೆ ವಿವರಿಸುತ್ತಾರೆ. ಗುರುವಿನ ಮನಸ್ಸು ಹರಿಯುವ ನೀರಿನಂತಿದ್ದು ಅದು ತನ್ನ ಮೇಲೆ ಬೀಳುವ ಸೂರ್ಯ ಕಿರಣಗಳನ್ನು ಪ್ರತಿಫಲಿಸುತ್ತದೆ. ಆದರೆ ಶಿಷ್ಯನ ಮನಸ್ಸು ಮಂಕಾದ ಗೋಡೆಯಂತಿದ್ದು ಅದು ಬೆಳಕನ್ನು ಪ್ರತಿ ಫಲಿಸಲಾರದು. ಅದೇ ಗೋಡೆ ಹರಿಯುವ ನೀರಿನ ಪಕ್ಕವಿದ್ದರೆ ಅದರ ಬೆಳಕು ಗೋಡೆಯ ಮೇಲೆ ಬೀಳ ಬಲ್ಲದು. ಹೀಗೆ ಗುರು ಮತ್ತು ಶಿಷ್ಯನ (ಪೀರ್ , ಮುರೀದ್) ಸಂಬಂಧವನ್ನು ವಿವರಿಸಿದ್ದಾರೆ. ಗೇಸುದರಾಜರು ವಿವರಿಸುವ 'ಶಿಷ್ಯ' ನೊಬ್ಬನ ನಡವಳಿಕೆಗಳು ಸಹ ಕುತೂಹಲಕರವಾಗಿವೆ. ಶಿಷ್ಯನೊಬ್ಬ ಗುರುವಿನ ಮುಂದೆ ಕಾಣಿಸಿಕೊಳ್ಳುವಾಗ ಮೆಲು ಹೆಜ್ಜೆಯಿಂದ ಬರಬೇಕಲ್ಲದೆ , ಅವರ ಪಾದದ ಕೆಳಗೆ ದೃಷ್ಟಿ ಚೆಲ್ಲಿರಬೇಕು. ದೇಹದ ಹಿಂಬದಿಯನ್ನು ಅವರ ಕಡೆಗೆ ಪ್ರದರ್ಶಿಸಬಾರದು. ಗುರುಗಳ ಸನ್ನಿಧಿಯಲ್ಲಿ ತಾಂಬೂಲ ಸೇವಿಸಬಾರದು. ಮೆಲುನುಡಿಗಳಲ್ಲಿ ಮಾತಾಡಬೇಕಲ್ಲದೆ ಗುರುಗಳ ಆಜ್ಞೆಗಳಿಗೆ ವಿಧೇಯನಾಗಿರಬೇಕು. ಗೇಸುದರಾಜರು ವಿವರಿಸುವ ಈ ವಿವರಗಳು ಪೂರ್ಣವಾಗಿ ಸ್ಥಳೀಯ ಪ್ರಭಾವವನ್ನು ಸೂಚಿಸುತ್ತವೆ.

ಗೇಸುದರಾಜರು ಪರ್ಶಿಯನ್ ಮತ್ತು ಅರ್ಯಾಬಿಕ್ ಭಾಷೆಗಳಲ್ಲಿಯೇ ಹೆಚ್ಚಾಗಿ ಕೃತಿ ರಚನೆ ಮಾಡಿದ್ದು ಒಟ್ಟು ಒಂದು ನೂರಾ ಐದು ಕೃತಿಗಳ ಕರ್ತೃವಾಗಿದ್ದಾರೆ. ಗೇಸುದರಾಜರು ಗುಲುಬರ್ಗಾದಲ್ಲಿದ್ದಾಗ ಸ್ಥಳೀಯ ಭಾಷೆಯಾದ 'ದಖನಿ' ಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರೆಂಬುದಾಗಿ ತಿಳಿದು ಬರುತ್ತದೆ. ಗೇಸುದರಾಜರ ಕಾಲಕ್ಕಾಗಲೆ ಆಡಳಿತ ಮತ್ತು ಸಾಹಿತ್ಯಿಕ ಭಾಷೆಯಾಗಿ 'ದಖನಿ'ಯು ಪ್ರವರ್ಧಮಾನಕ್ಕೆ ಬರುತ್ತಿದ್ದು, ಅವರು ತಮ್ಮ ಸೂಫಿ ಕೇಂದ್ರದಲ್ಲಿ ಸಂಪರ್ಕ ಸಂವಾದಗಳಿಗಷ್ಟೆ ದಖನಿಯನ್ನು ಸೀಮಿತಗೊಳಿಸಿಕೊಂಡು ಆಧ್ಯಾತ್ಮಿಕ ವಿಚಾರಗಳನ್ನು ದಾಖಲಿಸಲು ಪರ್ಶಿಯನ್ ಭಾಷೆಯನ್ನು ಬಳಸಿಕೊಂಡಿರುವಂತಿದೆ. ಸೂಫಿ ಸಂಗೀತ ಮೇಳಗಳಲ್ಲಿ (ಸಮಾ ಅ) ಅತ್ಯಂತ ಆಸಕ್ತಿಯಿದ್ದ ಗೇಸುದರಾಜರು ಸ್ವತಃ ಸುಂದರವಾಗಿ ಹಾಡಬಲ್ಲವರಾಗಿದ್ದರು. ಸೂಫಿಗಳ ಸಂಗೀತ ಮೇಳಗಳು ಕಾಲಕ್ರಮೇಣ 'ಕವ್ವಾಲಿ'ಯಾಗಿ

ಮುಂದುವರೆದವು. ಕ್ರಮೇಣ ಮುಸ್ಲಿಮೇತರರಲ್ಲಿ ಇವು ಭಜನೆಯ ರೂಪು ತಳೆದು ಮುಸ್ಲಿಮ್ ಮತ್ತು ಮುಸ್ಲಿಮೇತರರಿಬ್ಬರಲ್ಲೂ ಧಾರ್ಮಿಕ ಆಚರಣೆಯ ಭಾಗವಾದವು. ಗೇಸುದರಾಜರ ದರ್ಗಾಗಳನ್ನೊಳಗೊಂಡಂತೆ ಬಹುತೇಕ ಎಲ್ಲಾ ದರ್ಗಗಳಲ್ಲೂ ಕವ್ವಾಲಿ, ಸಾಮೂಹಿಕ ಭಜನೆ, ಮತ್ತು ಸ್ತುತಿಯ ಆಚರಣೆಗಳಿರುತ್ತಿದ್ದವು. ಗೇಸುದರಾಜರ ಅತ್ಯಂತ ಜನಪ್ರಿಯ ವ್ಯಕ್ತಿತ್ವದಿಂದಾಗಿ ಮುಸ್ಲಿಂ ಮತ್ತು ಮುಸ್ಲಿಮೇತರರ ಎಲ್ಲಾ ವರ್ಗಗಳಿಂದ ಅಸಂಖ್ಯಾತ ಅನುಯಾಯಿಗಳನ್ನು ಪಡೆದರಲ್ಲದೆ ದಖ್ಖಿನಲ್ಲಿ ಸೂಫಿ ಸಂದೇಶದ ಮೂಲಕ ಇಸ್ಲಾಂ ಅನ್ನು ಜನಪ್ರಿಯಗೊಳಿಸಿದರು. ಅಸಂಖ್ಯಾತ ಮುಸ್ಲಿಮೇತರರು 'ಇಸ್ಲಾಂ'ಗೆ ಮತಾಂತರಗೊಂಡರು. ೧೮೮೪ ರ ಸಮೀಕ್ಷೆಯೊಂದರ ಪ್ರಕಾರ ಮುಸ್ಲಿಮೇತರರಲ್ಲಿ ಅದರಲ್ಲೂ ವಿಶೇಷವಾಗಿ ನೇಕಾರರು ಬಂದೇ ನವಾಜರಿಂದಾಗಿ ಇಸ್ಲಾಂಗೆ ಮತಾಂತರ ಗೊಂಡರೆಂಬುದಾಗಿ ತಿಳಿದು ಬರುತ್ತದೆ[୬୯]. ಗೇಸುದರಾಜರ ದರ್ಗಾವು ಗುಲುಬರ್ಗಾದ ಸುತ್ತಮುತ್ತಣ ಭಾಗದಲ್ಲಿ ಹಿಂದೂ ಮುಸ್ಲಿಂ ಸೌಹಾರ್ದಕ್ಕೆ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಈ ದರ್ಗಾಕ್ಕಿರುವ ಅಪಾರ ಜನಪ್ರಿಯತೆ ಮತ್ತು ಗೇಸುದರಾಜರ 'ಉರುಸಿ' ಗೆ ಬರುವ ಜನಸಂಖ್ಯೆಯನ್ನು ಗಮನಿಸಿದರೆ ಈ ಸಂತರ ಮಹತ್ವದ ಪ್ರಭಾವಮ ಅರ್ಥವಾಗದೇ ಇರದು. ೧೭ನೆಯ ಶತಮಾನದಿಂದಲೂ ಗೇಸುದರಾಜರ ಸೂಫಿ ಸಂಸ್ಥೆಯು (ಜಮಾಅತ್ ಖಾನಾ) ಮತ್ತವರ ದರ್ಗಾ ಪರಂಪರೆಯು ಹುಟ್ಟು ಹಾಕಿದ ಜನಪದ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಪರಿವರ್ತನೆಯು ಅಭೂತಪೂರ್ವವಾದುದಾಗಿದೆ. ಈಟನ್ ಗುರುತಿಸುವಮತೆ ಈ ದರ್ಗಾವು ೧೭ನೇ ಶತಮಾನದ ಮಧ್ಯಭಾಗದವರೆಗೆ ಅತಿದೊಡ್ಡ ಭಕ್ತಿ ಪಂಥದ ಕೇಂದ್ರವಾಗಿದ್ದು ಪಂಡರಾಪುರದ ವಿಠೋಬನ ದೇವಸ್ಥಾನಕ್ಕೆ ಪ್ರತಿಸ್ಪರ್ಧಿಯಂತೆ ಕಾರ್ಯ ನಿರ್ವಹಿಸುತ್ತಿತ್ತು. ಕ್ರಿ.ಶ. ೧೬೭೩ರ ಮಾರ್ಚ್ ತಿಂಗಳಲ್ಲಿ 'ಅಬ್ಬೇಕರ್ 'ಎಂಬ ಫ್ರೆಂಚ್ ಪ್ರತಿನಿಧಿಯೊಬ್ಬರು ಗೇಸುದರಾಜರ ಉರುಸಿನ ಸಮಯದಲ್ಲಿ ಗುಲುಬರ್ಗಾದ ಮೂಲಕ ಹಾದು ಹೋಗಿದ್ದು, ಉರುಸಿನ ಸುಂದರ ವರ್ಣನೆಯನ್ನು ನೀಡಿದ್ದಾನೆ.ಇದು ನಂಬಲರ್ಹವಾದ ಯೋಗ್ಯ ಸಮಕಾಲೀನ ವಿವರಣೆಯಾಗಿದ್ದು ಅಬ್ಬೇಕರನು ಈ ಕೆಳಗಿನಂತೆ ಬರೆಯುತ್ತಾನೆ[୭୦].

"ಗುಲುಬರ್ಗಾದ ರಸ್ತೆಯ ತುಂಬಾ ಫಕೀರರು ಮತ್ತು ಹಿಂದೂಗಳು ತಮ್ಮ ತಲೆಯ ಮೇಲೆ

ತೊಟ್ಟಿಲುಗಳನ್ನುಹೊತ್ತು ಮೆರವಣಿಗೆಯ ತುಂಬ ಹೊರಟಿದ್ದನ್ನು ನೋಡಿ ಆಶ್ಚರ್ಯ ಗೊಂಡೆ. ಹೆಂಗಸರು ಮತ್ತು ಮಕ್ಕಳು ಕೋಲನ್ನು ಮೇಲ್ಹೆತ್ತಿ ತಿರಿಗುಸುತ್ತಿದ್ದರು (ಇದು ಮಕ್ಕಳ ಆಟಿಗೆ 'ಗಿರಿಗಿಟ್ಟೆ' ಯಾಗಿದೆ). ಅವರ ಕೈಯಲ್ಲಿ ತಾಮ್ರದ ತಟ್ಟೆ, ಚಿಕ್ಕ ಕಳಶಗಳು ಇದ್ದವು. ತಲೆಯ ಕೂದಲು ತೆಗೆಸಿ ಬೋಳಾಗಿದ್ದ ಇತರ ಕೆಲವರು ಒಂದು ಕಟ್ಟಿಗೆಯ ತುದಿಯಮೇಲೆ ಕೂದಲನ್ನು ಕಟ್ಟಿ ಹಿಡಿದುಕೊಂಡಿದ್ದರು. ಇಲ್ಲಿ ಇದೇ ರೀತಿಯ ಕೆಲವು ಹಳ್ಳಿಗರು ರಸ್ತೆಯಲ್ಲಿ ಬರುತ್ತಿದ್ದರು. ಕುತೂಹಲದಿಂದ ಒಬ್ಬ ಸ್ಥಳೀಯ ಹಿಂದೂವನ್ನು ಅವುಗಳ ಅರ್ಥವೇ ನೆಂಬುದಾಗಿ ವಿಚಾರಿಸಿದೆ. ಆಗವನು ಉತ್ತರಿಸುತ್ತಾ ಬಹಳ ದೂರದಿಂದ ಬಂದಿರುವ ಈ ಜನರು ಮುಂಡನ್ ಲಾ - ಹೆಬ್ (ಬಂದಾನವಾಜ್) ಎಂದು ಕರೆಯಲ್ಪಡುವ ತಮ್ಮ ಗುರುವನ್ನು ಆರಾಧಿಸಲು ಇಲ್ಲಿಗೆ ಬಂದಿರುವರೆಂದು ಗೊತ್ತಾಗಲಿಲ್ಲವೇ? ಪ್ರತಿವರ್ಷವೂ ಇಲ್ಲಿಗೆ ಬಹಳಷ್ಟು ಜನರು ತೀರ್ಥಯಾತ್ರೆಯಾಗಿ ಇದೇ ರೀತಿ ಬರುತ್ತಾರೆ. ಅವರು ಮನೆಗೆ ಹಿಂದಿರುವಾಗ ಪವಿತ್ರರಾಗುತ್ತಾರೆಂದು ವಿವರಿಸಿದ. ಆದರೆ ಈ ಎಲ್ಲಾ ಉಪಕರಣಗಳು ಮತ್ತು ಆಯುಧಗಳ ಅರ್ಥವೇನೆಂದು ಕೇಳಿದಾಗ, ಅವುಗಳು ಆ ಸಂತನ ಸ್ಮಾರಕ ವಸ್ತುಗಳಾಗಿದ್ದು ವರ್ಷವಿಡೀ ಭಕ್ತರ ಮನೆಯಲ್ಲಿದ್ದು ತಮ್ಮನ್ನು ಕಾಪಾಡುತ್ತವೆಂದು ನಂಬಿತಂದಿದ್ದಾರೆ. ತಮ್ಮ ಮಕ್ಕಳು ಅನಾರೋಗ್ಯಕ್ಕೊಳಗಾದಾಗ ಈಗ ಕಾಣುವ ತೊಟ್ಟಿಲುಗಳಲ್ಲಿ ತಂದು ಮಲಗಿಸುತ್ತಾರೆಂದು ಹೆಂಗಸರು ಕೈಯಲ್ಲಿ ಹಿಡಿದಿರುವ ಪತಾಕೆಗಳು, ತಮ್ಮ ಮಗುವಿನ ಸುಖ ಪ್ರಸವಕ್ಕಾಗಿ ಬೇಡಿಕೆಯನ್ನರ್ಪಿಸಿದ್ದೆಂದು, ತುಂಬಾ ಅನಾರೋಗ್ಯ ಪೀಡಿತರಾದವರಿಗೆ ಅನ್ನ ಹಾಕಲು ತಾಮ್ರದ ಪಾತ್ರೆಗಳನ್ನು , ತಟ್ಟೆಗಳನ್ನು, ಕೋಲಿನ ತುದಿಗೆ ಕೂದಲನ್ನು ಸಿಕ್ಕಿಸಿಕೊಂಡು ಬರುತ್ತಿರುವ ಹೆಣ್ಣುಮಕ್ಕಳು ತಾವು ಉರುಸಿಗೆ ಬಂದಿದ್ದಾಗ ಇನ್ನೂ ಯುವತಿಯರಾಗಿದ್ದರೆಂಬುದನ್ನು ಮುಂದೆ ತೋರಿಸಲು ಮನೆಯಲ್ಲಿಡುವುದಕ್ಕಾಗಿಯೂ ತಂದಿದ್ದಾರೆಂಬುದನ್ನು ಆತನು ಹೇಳಿದನು. ಆ ಫಕೀರರು ಮತ್ತು ಹಿಂದೂಗಳು ದರ್ಗಾದ ಹೊರವಲಯದಲ್ಲಿ ಸೇರುತ್ತಿದ್ದರು. ಈ ಎರಡೂ ಜನಾಂಗದಕೆಳವರ್ಗದ ಜನ ಇದರಲ್ಲಿ ಸೇರುತ್ತಿದ್ದರೆಂದು ಹೇಳಿದನು. ಮೂರ್ಖರು, ಒರಟರೂ, ದಡ್ಡರೂ ಆದ ಈ ಬಡಜನ ಇಡೀ ಜಗತ್ತಿನಲ್ಲಿಯೇ ತುಂಬಾ ಕೀಳಾದ ಮತ್ತು ಅಸಂತುಷ್ಟ ಜನರೆಂಬುದಾಗಿ'ಅಬ್ಬೆಯು' ತೀರ್ಮಾನಿಸಿ ಬಿಡುತ್ತಾನೆ[30].



ಬಂದೇನವಾಜ್ ಗೇಸುದರಾಜರ ದರ್ಗಾ



ಗೇಸುದರಾಜರ 'ಮಜಾರ್ 'ನ ಪ್ರವೇಶ ದ್ವಾರ

ಕ್ರಿ. ಶ. ೧೬೭೩ರ ಮಾರ್ಚ್ ತಿಂಗಳಲ್ಲಿ ಅಬ್ಬೇಕರ್ ಎನ್ನುವ ಈ ಫ್ರೆಂಚ್ ಪ್ರವಾಸಿಯು ದಾಖಲಿಸಿದಂತೆ ಉರುಸಿನ ವಿವರಗಳು ಇಂದಿಗೂ ಬಹುತೇಕ ಮೂಲ ಸ್ವರೂಪದಲ್ಲಿವೆ. ೧೪೨೨ರಲ್ಲಿ ಗೇಸುದರಾಜರ ಸಾವಿನ ನಂತರ ರೂಪಗೊಂಡ ಈ 'ಉರುಸು' ಆಚರಣೆಯವಿವರಗಳು ಈಗಲೂ ಅವೇ ಮೂಲ ಸಾಂಸ್ಕೃತಿಕ ಗುಣಗಳನ್ನುಳಿಸಿಕೊಂಡಿರುವುದು ಗಮನಾರ್ಹ ಅಂಶವಾಗಿದೆ.

ಹದಿನೈದನೇ ಶತಮಾನದಲ್ಲಿನ ಗೇಸುದರಾಜರಂತಹ ಸೂಫಿಗಳು ರಾಜಸತ್ತೆಗೆ ಪೂರಕವಾಗಿಯೆ ತಮ್ಮ ಚಟುವಟಿಕೆಗಳನ್ನು ನಿರ್ದೇಶಿಸುತ್ತಿದ್ದರು. ಅಂದರೆ ಅವರ ಜೊತೆ ಯಾವುದೇ ರೀತಿಯ ಘರ್ಷಣೆಗಿಳಿಯಲು ಇಷ್ಟಪಡುತ್ತಿರಲಿಲ್ಲ. ಹಾಗೆಯೇ ಇಸ್ಲಾಂನ ಸಾಂಪ್ರದಾಯಿಕತೆಯ ಪರವಾಗಿ ಮೆದು ಧೋರಣೆಯನ್ನವಲಂಬಿಸುತ್ತಿದ್ದರು ಇದಕ್ಕೆ ಪ್ರತಿಯಾಗಿ ಮತ್ತೊಂದು ಮಾದರಿಯ ಸೂಫಿಗಳು ನಮಗೆ ಕಾಣಸಿಗುತ್ತಾರೆ. ೧೭ನೆಯ ಶತಮಾನದಲ್ಲಿ ಬಿಜಾಪುರದ ಶಹಪುರ ಬೆಟ್ಟದ ಮೇಲಿದ್ದ 'ಅಮೀನುದ್ದೀನ್ ಅಲಾ'ರಂತಹ ಕೆಲವು ಸೂಫಿಗಳು ಅತ್ಯಂತ ಸಾಹಸದಿಂದ ರಾಜ್ಯಶಾಹಿಯನ್ನು ಮತ್ತು ಸಾಂಪ್ರದಾಯಿಕ ವರ್ಗವನ್ನು ಎದುರುಸುತ್ತಿದ್ದರಲ್ಲದೆ ತಮ್ಮ ಸ್ವತಂತ್ರ ವಿಚಾರಗಳಿಂದ ಅಸಂಖ್ಯಾತ ಮುಸ್ಲಿಮೇತರ ಅನುಯಾಯಿಗಳನ್ನು ಪಡೆದಿದ್ದರು. 'ಅಮೀನುದ್ದೀನ್ ಅಲಾ'ರಂತಹ ಪ್ರಖ್ಯಾತ ಸೂಫಿ ಸಂತರಿಂದ ಸೂಫಿ ಧಾರ್ಮಿಕ ಉತ್ತರಾಧಿಕಾರವನ್ನು ಪಡೆದುಕೊಂಡು ಕರ್ನಾಟಕ ಆಂಧ್ರದ ಗಡಿಭಾಗದಲ್ಲಿನ ಆಂಧ್ರ ಪ್ರದೇಶಕ್ಕೆ ಸೇರಿದ ಕರ್ನೂಲು ಜಿಲ್ಲೆಯ ಆದೋನಿ ತಾಲೂಕಿನ 'ಕೌತಾಳಂ'ನಲ್ಲಿ ಸಮಾಧಿಯಾದ 'ಖಾದರ್ ಲಿಂಗ್' ಅವರು ಮುಖ್ಯರಾಗಿದ್ದಾರೆ. ಮೂಲ ಬಿಜಾಪುರದಲ್ಲಿದ್ದ ಅಮೀನುದ್ದೀನ್ ಅಲಾ ಅವರ ಸೂಫಿ ಪರಂಪರೆಯ ವಾರಸುದಾರರಾದುದರಿಂದ ಇವರ ಸೈದ್ಧಾಂತಿಕ ಹಿನ್ನಲೆಗಾಗಿ ಅಮೀನುದ್ದೀನರ ವಿಚಾರಗಳು ಮತ್ತವರು ನಂಬಿದ ಮೌಲ್ಯಗಳ ಬಗೆಗೆ ಸ್ಥೂಲವಾಗಿ ಪರಿಶೀಲಿಸಬಹುದಾಗಿದೆ.

- ಮುಖ್ಯವಾಗಿ 'ಅಮೀನುದ್ದೀನ್ ಅಲಾ' ಅವರಿಂದ ಪ್ರಭಾವಿತವಾದ ವರ್ಗದ ಸೂಫಿಗಳಿಗೆ ದರವೇಶಿಗಳು, ಮಜೂಬರೆಂದು ಕರೆಯುವ ವಾಡಿಕೆಯಿದೆ. ಸಾಧಾರಣವಾಗಿ ಸೂಫಿಗಳೆಂದು ಕರೆಯುವವರನ್ನು ದರವೇಶಿಗಳಿಂದ ಬೇರ್ಪಡಿಸುವುದು ಕಷ್ಟದ ಕೆಲಸ. ಜೆ.ಎಸ್ ಟ್ರಿಮಿಂಗ್ ಹ್ಯಾಮ್ ಅವರ ಪ್ರಕಾರ ದರವೇಶಿಗಳ

ಜೀವನ ಪದ್ಧತಿ ಸೂಫಿಜೀವನ ಪದ್ಧತಿಗೆ ವಿರೋಧವಾಗಿತ್ತು[೨೧]. ಸೂಫಿಗಳು ಒಂದು ನಿಗೂಢ ತತ್ವ ಅಥವಾ ಸಿದ್ಧಾಂತವನ್ನು ತಮ್ಮದಾಗಿಸಿ ಕೊಂಡಿದ್ದರು. ಆದರೆ ದರವೇಶಿಗಳ ಜೀವನವೆ ನಿಗೂಢವಾಗಿತ್ತು. ಸಿದ್ಧಾಂತದಲ್ಲಿ ದರವೇಶಿ ಮತ್ತು ಸೂಫಿಗಳನ್ನು ಬೇರ್ಪಡಿಸುವುದು ಕಷ್ಟಸಾಧ್ಯ. ಆದರೆ ಆಚರಣೆಯಲ್ಲಿ ತುಂಬಾ ವ್ಯತ್ಯಾಸಗಳಿದ್ದವು. ಕೆಲವು ದರವೇಶಿ ಸೂಫಿಗಳು ಬುದ್ಧಿಜೀವಿಗಳು ಹಾಗು ಸೃಜನಶೀಲರೂ ಆಗಿದ್ದರು. ತಮ್ಮ ಭಾವನೆ ಕಲ್ಪನೆ ಮತ್ತು ಆಚರಣೆಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದವರನ್ನು ದರವೇಶಿಗಳೆಂದು ಕರೆಯಲಾಗಿದೆ. ಸಮಕಾಲೀನ ಚರಿತ್ರಕಾರರು ೧೭ನೆಯ ಶತಮಾನದ ಬಿಜಾಪುರದ ದರವೇಶಿಗಳನ್ನು ಮಜೂಬರೆಂದು ಕರೆದಿದ್ದಾರೆ. ಸಾಮಾನ್ಯ ಅರ್ಥದಲ್ಲಿ ಮಜೂಬರೆಂದರೆ ದೇವರೆಡೆಗೆ ಆಕರ್ಷಿತರಾದವರು. ಆದರೆ ಮೂಲಾರ್ಥದಲ್ಲಿ ಯಾವ ವ್ಯಕ್ತಿ ಸಂಪ್ರದಾಯಸ್ಥ ಮುಸ್ಲಿಂ ಜೀವನವನ್ನು ತೊರೆದು ಅತ್ಯಂತ ಅಧ್ಯಾತ್ಮಿಕ ಆನಂದವನ್ನು ಪಡೆಯಲಿಚ್ಛಿಸುವವನೊ ಅವನನ್ನು ಮಜೂಬನೆಂದು ಕರೆಯಲಾಗುತ್ತದೆ. ಸಾಮಾಜಿಕ ದೃಷ್ಟಿ ಕೋನದಲ್ಲಿ ಯಾವ ವ್ಯಕ್ತಿ 'ಶರೀಯತ್ ' ನಿಂದ ದೂರ ಸರಿದು ಮುಸ್ಲಿಂ ಸಮುದಾಯದ ಅಸಮ್ಮತಿಗೆ ಗುರಿಯಾಗಿ ದೇವರೆಡೆಗೆ ಆಕರ್ಷಿತನಾಗುವನೊ ಅವನು 'ಮುಜಾಬ'. ಮುಜಾಬರು ಪ್ರತಿಪಾದಿಸಿದಂತಹ ಸಿದ್ಧಾಂತಗಳು ಸಂಪ್ರದಾಯಸ್ಥ ಸಿದ್ಧಾಂತಗಳಿಗೆ ವಿರೋಧವಾಗಿದ್ದವು ಹಾಗೂ ಅವರು ಕುಡಿತ ಮತ್ತು ಅಫೀಮು ಸೇವನೆಯಲ್ಲಿ ತೊಡಗಿ ತಮ್ಮನ್ನು ತಾವು 'ಉಲ್ಮಾ'ದಿಂದ ದೂರವಾಗಿಟ್ಟುಕೊಂಡು ಸಮಾಜದ ಸಾಧಾರಣ ಜನರ ಜೊತೆಯಲ್ಲಿ ಗುರುತಿಸಿಕೊಂಡರು[೨೨].

ಅಮೀನನು ೧೫೯೭ರಲ್ಲಿ ತನ್ನ ತಂದೆ ತೀರಿಕೊಂಡ ವರ್ಷವೆ ಜನ್ಮತಾಳಿದನು. ಆತನ ಶಿಕ್ಷಣವು ಶಹಪುರ ಬೆಟ್ಟದ ಮೇಲೆಯೆ ಮಹಮ್ಮದ್ ಕುಶ್ ದಹನ್, ಸಾಯಿದಿದಲಾಲ್ ಮತ್ತು ಸಾಯಿದಿ ಖುದಾ ಇವರ ಮಾರ್ಗದರ್ಶನದಲ್ಲಿ ನಡೆಯಿತು. ಬಿಜಾಪುರದ ಆದಿಲ್ ಷಾಹಿ ಸುಲ್ತಾನರಾದ ಎರಡನೆ ಇಬ್ರಾಹಿಂ ಮತ್ತು ಮೊಹಮ್ಮದ್ ಆದಿಲ್ ಷಾಹರು ಸಮಕಾಲೀನರಾದರೂ ಆಸ್ಥಾನದ ಜೊತೆ ಅಮೀನನಿಗೆ ಯಾವುದೇ ರೀತಿಯ ಸಂಬಂಧವಿರಲಿಲ್ಲ[೨೩]. ಒಂದು ಮೂಲದ ಪ್ರಕಾರ ಇವನು ತನ್ನ ಬಾಲ್ಯಾವಸ್ಥೆಯಲ್ಲಿ ಹನ್ನೆರಡು ವರ್ಷಗಳ ಕಾಲ ಏಕಾಂತವಾಗಿದ್ದನೆಂಬುದಾಗಿ ತಿಳಿದು ಬರುತ್ತದೆ. ಮತ್ತೊಂದು ದಾಖಲೆಯ ಪ್ರಕಾರ ತನ್ನ

ಬಾಲ್ಯ ಮತ್ತು ಕೌಮಾರ್ಯ ಅವಸ್ಥೆಯಲ್ಲಿ ತನ್ನ ತಂದೆಯ ಗೋರಿಯ ಮೇಲೆ ಧ್ಯಾನ ಮಗ್ನನಾಗಿ ಕುಳಿತಿರುತ್ತಿದ್ದನೆಂದು, ಚಂದ್ರೋದಯದ ರಾತ್ರಿಯೊಂದು ದೈವಸಾಕ್ಷಾತ್ಕಾರವಾದುದನ್ನು ಅನೇಕ ಭಕ್ತರ ಮುಂದೆ ಘೋಷಿಸಿದ. ಈ ಕಾರಣದಿಂದಾಗಿ ೧೬೦೦ರ ಮಧ್ಯಭಾಗದಲ್ಲಿ ಅಮೀನನನ್ನು ಗುರುವಾಗಿ ಸ್ವೀಕರಿಸಿದ ಒಂದು ಪಂಥ ಪ್ರಾರಂಭವಾಯಿತು. ಅಮೀನನು ತನ್ನ ವಿಚಾರಗಳನ್ನಾಗಲಿ, ಸಿದ್ಧಾಂತಗಳನ್ನಾಗಲಿ ಬರೆದಿಡಲು ಹೋಗಿಲ್ಲ. ಆತನ ಹೆಸರಲ್ಲಿ ಅರ್ಪಿಸಿರುವ ದಖ್ಖನಿ ಭಾಷೆಯಲ್ಲಿರುವ ಕೃತಿಗಳು ಅಮೀನನು ಆಧ್ಯಾತ್ಮಿಕ ಪರವಶತೆಯಲ್ಲಿ ಪ್ರಕಟ ಪಡಿಸಿದ ವಿಚಾರಗಳನ್ನು ಅವನ ಅನುಯಾಯಿಗಳು ದಾಖಲಿಸಿರುವಂತಿದೆ.

ಅಮೀನನ ಜೀವನ ವಿವರಗಳಿಂದ ತಿಳಿದು ಬರುವ ಹಾಗೆ ಆತನು ಉಳಿದ ಸೂಫಿಗಳಿಗಿಂತ ಭಿನ್ನವಾಗಿದ್ದನು. ಈ ಭಿನ್ನತೆಯು ಅವನ ಬದುಕಿನ ವಿಧಾನಗಳಿಂದಷ್ಟೆ ಮಾತ್ರವಲ್ಲದೆ ಆಧ್ಯಾತ್ಮಿಕ ಅಭಿವ್ಯಕ್ತಿಯಲ್ಲಿಯೂ ಕಂಡು ಬರುವ ಅಂಶವಾಗಿತ್ತು. ಇದುವರೆಗಿನ ಬಹುತೇಕ ಸೂಫಿಗಳು ಪ್ರತೀಕಗಳ ಮೂಲಕ ಸಂಪ್ರದಾಯ ನಿಷ್ಠ ಮುಸ್ಲಿಂ ವರ್ಗದ ಜೊತೆಶೀತಲವಾದ ಸಂಘರ್ಷಕ್ಕಿಳಿದಿದ್ದರು. ಆದರೆ ಅಮೀನನು ನೇರವಾಗಿಯೇ ಇದನ್ನು ಎದುರಿಸಿದನು. ವಸ್ತುಸ್ಥಿತಿಯನ್ನು ಅದು ಇರುವ ಹಾಗೆಯೇ ಗ್ರಹಿಸಿ ಸತ್ಯ ಸಂಗತಿಗಳನ್ನು ಸ್ಪಷ್ಟ ಮಾತುಗಳಲ್ಲಿ ಹೇಳಿ ಬಿಡುತ್ತಿದ್ದ. ಸೂಫೀ ಸಂಗೀತ 'ಸಮಾಅ' ದಂತೆಯೇ ದೇವರಸಹಭಾಗಿತ್ವವನ್ನು ಪ್ರತಿಪಾದಿಸುವ 'ವಹದತುಲ್ ವಜೂದ್ 'ಕೂಡ ತುಂಬಾ ವಿವಾದಕ್ಕೊಳಗಾದ ಸಂಗತಿಯಾಗಿತ್ತು. "ಚಿಷ್ತಿಪಂಥದ ಸೂಫಿಗಳು ಉಪನಿಷತ್ತುಗಳಲ್ಲಿ ಮೂಲ ನಿರೂಪಣೆ ತಡೆದ ವಿಶ್ವದೇವತ್ವದ ಏಕೇಶ್ವರವಾದ 'ವಹದತ್ - ಉಲ್ - ವಜೂದ್ ' ಜೀವೈಕ್ಯದಲ್ಲಿ ನಂಬುಗೆಯುಳ್ಳವರಾಗಿದ್ದರು. ಇದನ್ನು ಸ್ವೀಕರಿಸಿದ್ದರಿಂದಾಗಿ ಚಿಷ್ತಿಸೂಫಿಗಳು ಹಿಂದೂ ವೈಚಾರಿಕ ಮುಖ್ಯ ಸಾಧನೆಯೊಡನೆ ಭಾವೋತ್ಪತ್ತಿಯ ಸಂಬಂಧವನ್ನು ನೆಲೆಗೊಳಿಸಿದರು. ಕ್ರಿಯಾತ್ಮಕ ಭಾವದಂತೆ ಇದು ಎಲ್ಲ ಮಾನವರ ಸಮಾನತೆ, ಎಲ್ಲ ಧರ್ಮಗಳ ಸಮನ್ವಯ ಮತ್ತು ಎಲ್ಲ ಧಾರ್ಮಿಕ ಬಾಧೆಗಳಿಂದ ಮುಕ್ತಿ ಎಂದಾಗುತ್ತದೆ"[೫]. ಅಮೀನನು ಸಹ ಚಿಷ್ತಿಪರಂಪರೆಯಲ್ಲಿಯೇ ಬೆಳೆದು ಬಂದವನಾದುದರಿಂದ ಈ ಮೇಲಿನ ವಿಚಾರಗಳನ್ನು ಪ್ರತಿಪಾದಿಸುತ್ತಿದ್ದನು ಮತ್ತು ಅಂಗೀಕರಿಸಿದ್ದನು. ಅಮೀನನ ಇಂತಹ ವಿಚಾರಗಳು, ಮತ್ತವನ ಸ್ವತಂತ್ರ

[illegible]

[illegible]

ವ್ಯಕ್ತಿತ್ವದಿಂದಾಗಿ ಅವನ ಅನುಯಾಯಿಗಳು ಅವನನ್ನು ಸಾಕ್ಷಾತ್ ದೈವವೆಂದೇ ಪರಿಗಣಿಸಿದರು. ಅಮೀನನ ತಂದೆ 'ಬರ್ಹಾನ್ ಅಲ್ ದಿನ್ನ'ನು ಸಂಪ್ರದಾಯಸ್ಥ ಚಿಷ್ತಿಯಾಗಿದ್ದು ಸಾಧಕನು 'ಮಕಾಂ - ಐ - ಕಬ್ ' ಹಂತವನ್ನು ತಲುಪಿದಾಗ ದೇವರ ಸಾಮೀಪ್ಯವನ್ನು ಹೊಂದುಬಹುದೆ ಹೊರೆತು ದೇವರೊಡನೆ ಒಂದಾಗುವುದು ಅಥವಾ ಅವನೊಡನೆ ಗುರುತಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ತಿಳಿಸಿದ್ದನು. ಅಮೀನನು ಇದಕ್ಕೆ ಭಿನ್ನವಾಗಿ ನಾನು ದೈವದ ನೆಲೆಯ ಕಂಡಾಗ

ಒಂದೇ ವಸ್ತುವ ಸೂಚಿಸುವ ಎರಡು ಹೆಸರ ಕಂಡೆ
ನೀನದನ್ನು ತಿಳಿದುಕೋ ಮತ್ತು ಒಪ್ಪಿಕೋ ವಾಸ್ತವದಲ್ಲಿ
ಮನುಷ್ಯ ಹಾಗು ದೇವರು ಇಬ್ಬರೂ ಒಂದೇ
ಇಬ್ಬರೂ ಒಂದೇ ಸಂಕೇತವಾಗಿದ್ದಾರೆ[೨೪].
ಮತ್ತೊಂದು ಪದ್ಯದಲ್ಲಿ ಅವನು ಹೇಳುವಂತೆ
ಆ ಒಂದು ಹಂತದಲಿ ಮರೆಯುವೆವು ನಾವು
ಮನುಷ್ಯನಲಿ ಮನುಷ್ಯನ ಲಕ್ಷಣಗಳ ಗುರುತಿಸಲು
ಹಾಗೆ ದೇವರಲಿ ದೈವದ ಲಕ್ಷಣವನು ಗುರುತಿಸಲು
ದೈವ ಲಕ್ಷಣವನು ಬೇರ್ಪಡಿಸುವುದು ತಪ್ಪು
ಹಾಗೆ ಮನುಷ್ಯನ ಲಕ್ಷಣಗಳನ್ನು ಬೇರ್ಪಡಿಸುವುದೂಸಹ.[೨೫]

ಇಲ್ಲಿ ಅಮೀನನು ತನ್ನ ಬಗ್ಗೆ ಮಾತ್ರ ಹೇಳಿಕೊಳ್ಳದೆ ಜಾಗತಿಕವಾಗಿ ಮನುಷ್ಯ ಮತ್ತು ದೈವತ್ವದ ಸಂಬಂಧವನ್ನು ಕುರಿತು ವ್ಯಾಖ್ಯಾನಿಸುತ್ತಾನೆ. ಅಮೀನನ ಕಾಲಕ್ಕೆ ಪ್ರಸ್ತುತತೆಯಲ್ಲಿದ್ದ ವಿಚಾರವು ದೇವರ ಸಾಮೀಪ್ಯ ಹೊಂದಬಹುದಾದುದಕ್ಕೂ ದೈವತ್ವಕ್ಕೇರುವ ಅಥವಾ ದೈವತ್ವವನ್ನು ಹಂಚಿಕೊಳ್ಳವ ವಿಚಾರಕ್ಕೂ ತುಂಬಾ ವ್ಯತ್ಯಾಸವಿದ್ದು ಅಮೀನನು ಎರಡನೆಯದನ್ನು ಸ್ಪಷ್ಟ ಪಡಿಸಿದ್ದಾನೆ.

ಸೃಷ್ಟಿಯ ಆದಿನದಂದು ನೀನು ಸಾಕ್ಷಿಯಾಗಿದ್ದೆ
ಹಾಗೂ ಇದು ಸತ್ಯ,ನನ್ನ ಜ್ಯೋತಿಯೂ ಕೂಡ ಸಾಕ್ಷಿಯಾಗಿತ್ತು.
ನೀನು ಪ್ರಕಟಗೊಳ್ಳಬೇಕೆಂದು ಬಯಸಿದಷ್ಟು ಪ್ರಕಟಗೊಂಡೆ

ಅಂತೆಯೇ ನನ್ನ ಬೆಳಕಿನ ತೇಜಸ್ಸು ಪ್ರಕಟಗೊಂಡಿತು
ನನ್ನ ಬೆಳಕಿನ ಸೂರ್ಯ ಹೊಳೆದು ಹೊರಬಂದ
ಮತ್ತಿವೆಲ್ಲವೂ ನಮ್ಮ ಸಮ್ಮುಖದಲ್ಲಿಯೇ ನಡೆಯಿತು
ನನ್ನ ಜ್ಯೋತಿಯನು ನಿನ್ನ ಆತ್ಮದ ಕನ್ನಡಿಯಂತೆ ಮಾಡಿದೆ
ಆ ಜ್ಯೋತಿಯಲಿ ನಿನ್ನ ಗುಣಗಳನೆ ತುಂಬಿದೆ
ಅವಿತುಕೊಂಡಿಹ ಒಂದು ನಿಧಿಯಂತೆ
ಆ ಗುಣಗಳೆ ನನಗೆ ಕೊಡಮಾಡಿದೆ
ಆದರೂ ಕೀರ್ತಿ ಮಾತ್ರ ನಿನ್ನದು
ಹಾಗಾಗಿ ನನ್ನನ್ನು ನಿನ್ನಿಂದ ಹೇಗೆ ಬೇರ್ಪಡಿಸಿಕೊಳ್ಳಲಿ.[೨]

ಇಲ್ಲಿ ಅಮೀನನ ವಿಚಾರವು ಸ್ಪಷ್ಟವಾಗಿ ತಾನು ದೇವರ ಅಂಶ ಹೇಗೆಂಬುದನ್ನು ವಿಶದಗೊಳಿಸುತ್ತದೆ. ಜ್ಯೋತಿರ್ಮಯನಾದ ದೇವರ ಬೆಳಕಿನ ಪ್ರತಿಫಲವಾಗಿ ತಾನು ಸೃಷ್ಟಿಯಾದುದಾಗಿ, ಆತನು ಪ್ರಕಟಗೊಳ್ಳಬೇಕೆಂದು ಬಯಸಿದಷ್ಟು ಪ್ರಕಟಗೊಂಡೆನೆಂಬುದಾಗಿ ವಿವರಿಸುತ್ತಾನೆ. ಅಖಂಡ ಸೃಷ್ಟಿಯಿಡೀ ದೇವರ ಅಂಶದಿಂದಲೇ ಕೂಡಿದ್ದಾಗಿದ್ದು ತನ್ನ ಅಸ್ತಿತ್ವಕ್ಕೆ ಮೂಲನೆಲೆಯೇ ದೈವವೆಂಬುದಾಗಿ ತನ್ನನ್ನು ದೇವರಿಂದ ಬೇರ್ಪಡಿಸಿಕೊಳ್ಳಲಾಗದೆಂದು ಪರಿಭಾವಿಸಿದುದು ಅರ್ಥಪೂರ್ಣವಾಗಿದೆ.

ಯಾಕೆಂದರೆ ಸೂಕ್ಷ್ಮ ಸಂವೇದನಾ ಶೀಲ ಮನಸ್ಸುಗಳು ಯಾವತ್ತೂ ಮನುಷ್ಯ ಸಂಬಂಧಗಳ ಕುರಿತು ಚಿಂತಿಸತೊಡಗಿ ಕಡೆಗೆ ತನ್ನ ಅಸ್ತಿತ್ವ ಮತ್ತು ಅನಂತದೊಡನೆ (ಅಂದರೆ ದೇವರು, ದೈವ, ಸೃಷ್ಟಿ) ಯ ಸಂಬಂಧದ ಸ್ವರೂಪದ ಬಗೆಗೆ ಯೋಚಿಸತೊಡಗುತ್ತವೆ. ಅನಂತದೊಂದಿಗೆಯೇ ತನ್ನ ಸಂಬಂಧ ಕಲ್ಪಿಸಿಕೊಳ್ಳುವುದರ ಮೂಲಕ ಮೌಲ್ಯಗಳ ವಿವೇಚನೆಗೆ ತೊಡಗುವ ಮನುಷ್ಯ ಧರ್ಮದ ಪರಿಪ್ರೇಕ್ಷವೆಂದನ್ನು ಕಟ್ಟಿಕೊಳ್ಳುತ್ತಾನೆ. ಮನುಷ್ಯನ ವಿಕಾಸ ಪಥದಲ್ಲಿ ಅವನ ಮಸ್ತಿಷ್ಕದಲ್ಲಿ ದಾಖಲಾದ ದೇವರ ಕುರಿತಾದ ವಿಚಾರಗಳು ಯಾವತ್ತೂ ಭಯ, ರಕ್ಷಕ, ಅನಾಥ ಭಾವನೆಯಿಂದ ಕೂಡಿದವಾಗಿದ್ದು ದೇವರನ್ನು ಉದಾತ್ತವಾಗಿ ಕಾಣಲಾಗಿದೆ. ಕೆಡುಕಿನ ವಿರುದ್ಧ ಉತ್ತಮಿಕೆಯ ಲಕ್ಷಣಗಳನ್ನು ಆರೋಪಿಸಿ ಆದರ್ಶೀಕರಿಸಿದ ದೇವರು ಎಲ್ಲಾ ಮಿಥ್ಯಗಳನ್ನು ಮೀರಿದ

ಸತ್ಯದ ಸಾಕಾರವಾಗುತ್ತಾನೆ. ಅಮೀನನಿಂದಿಡಿದು ಗಾಂಧೀಜಿಯವರೆಗಿನ ಋಜು ಮಾರ್ಗಿಗಳೆಲ್ಲ ಸತ್ಯಕ್ಕೆ ಪರ್ಯಾಯವಾಗಿ ದೇವರನ್ನು ಕಂಡರು.

ಧರ್ಮ, ಆಧ್ಯಾತ್ಮ ಸಂಬಂಧಿ ವಿಚಾರಗಳು ವ್ಯಕ್ತಿಗತ ಪರಿಭಾವನೆಯ ಮಿತಿಯನ್ನು ದಾಟುತ್ತಿದ್ದಂತೆಯೇ ನಿಯಮ, ನಿಬಂಧನೆಗಳು ಏರ್ಪಟ್ಟು ಸಾಂಸ್ಥೀಕರಣ ಧರ್ಮವಾಗಿ ಅದು ಮೂಲ ಉದ್ದೇಶಗಳಿಂದ ಮರೆಯಾಗುತ್ತದೆ. ಸಾರ್ವಕಾಲಿಕವಾಗಿ ಅಮೀನನಂತಹ ವ್ಯಕ್ತಿಗಳು ನಿಜವಾದ ಅರ್ಥದಲ್ಲಿ ಧಾರ್ಮಿಕರಾಗಿದ್ದು ತಮ್ಮ ಸಮಕಾಲೀನ ವ್ಯವಸ್ಥೆಯಅಪಮೌಲ್ಯಗಳ ವಿರುದ್ಧ ದನಿಯೆತ್ತುತ್ತಾರೆ. ಸತ್ಯದ ಪ್ರತೀಕವಾಗುತ್ತಾರೆ. ಅಮೀನನ ಅನುಯಾಯಿಗಳು ಅಮೀನನನ್ನು ಇಂತಹ ದೈವತ್ವದ ಮಾದರಿಯಾಗಿ ಕಂಡಿದ್ದಾರೆ. ಅವನನ್ನು 'ಮಹದಿ'ಗೆ ಹೋಲಿಸಿದ್ದಾರೆ (ಮಹದಿ-ಎಲ್ಲ ಧರ್ಮ ವಿರೋಧಿ ಶಕ್ತಿಗಳ ಮೇಲೆನಿಂತು ಅಂತಿಮ ನಿರ್ಣಯದ ದಿನ ಪ್ರತ್ಯಕ್ಷವಾಗುವ ಆಧ್ಯಾತ್ಮಿಕ ಶಕ್ತಿ). ಅಮೀನನ ಅನುಯಾಯಿಗಳು ತಾವು ಅಮೀನನನ್ನು ಕಂಡ ಬಗೆಯನ್ನು ಹೀಗೆ ವರ್ಣಿಸುತ್ತಾರೆ.

> ಸ್ವತಃ ನಾನೇ ಕಣ್ಣಾರೆ ಕಂಡಿರುವೆ
> ಅಮೀನನ ಕಂಡವರೆಲ್ಲ ಅವನಿಂದ ಲಾಭಪಡೆದರು
> ಹಿಜರಿಶಕೆ ಹನ್ನೊಂದನೆಯ ಶತಮಾನದಲ್ಲಿ ಅವನು ನಮ್ಮ ದಾರಿ ದೀಪವಾದ
> ಹಾಗು ನಮ್ಮ ಪಾಲಿಗೆ ಅವನು ಮಹದಿಯಾದ
> ಎಲ್ಲರೂ ನಂಬಿದರು ಅವನ ಶಿಷ್ಯರೆಲ್ಲರೂ
> ದೇವರ ಪ್ರತಿಬಿಂಬವ ನಾವು ಕಾಣುವೆವೆಂದು
> ಜನರೆಲ್ಲ ಸಮ್ಮತಿಸಿದರು ಅಮೀನನು ಮುಜಾಬನೆಂದು
> ಒಬ್ಬ ಪಥಿಕ ಮತ್ತು ದೈವ ಮಿತ್ರನೆಂದು
> ಮತ್ತು ಆ ಸತ್ಯದಲಿ ಶಾಶ್ವತವಾಗಿದ್ದಾನೆಂದು.[೨೨]


ಅಮೀನನು ತನ್ನ ಪ್ರಗತಿಪರ ವಿಚಾರಗಳಿಂದಾಗಿ ಮುಸ್ಲಿಂ ಸಂಪ್ರದಾಯ ವರ್ಗವನ್ನು ಎದುರಿಸಬೇಕಾಯಿತು. ಉಲೇಮಾಗಳ ಮಾತು ಹಾಗಿರಲಿ, ಸೂಫಿ ಸಂಪ್ರದಾಯದ ಖ್ವಾದರಿ ಮೊದಲಾದ

[illegible]

[illegible]

[illegible]

[illegible]



'ಅಮೀನುದ್ದೀನ್ ಅಲಾ' ಅವರ ದರ್ಗಾ



ಅಮೀನುದ್ದೀನರ ಸೂಫಿ ಉಪದೇಶ ಮಂದಿರ (ಕಾನ್ ಕಾ)ದ ಅವಶೇಷ

ಪಂಗಡಗಳ ಸೂಫಿಗಳಿಂದಲೂ ಪ್ರತಿರೋಧವನ್ನೆದುರಿಸಬೇಕಾಯಿತು. ಅಮೀನನಿಂದ ಆರಂಭಗೊಂಡ ವಿಶಿಷ್ಟ ಧಾರ್ಮಿಕ ಪಂಗಡವು ಹಾಗೂ ಅನ್ಯ ಧರ್ಮಗಳೊಡನೆ ಸೇರುತ್ತಿದ್ದಂತಹ ಅವನ ನಡವಳಿಕೆ, ಬಹುದೇವತಾರಾಧಕರೊಂದಿಗೆ ನಡೆಸಿದ ಹೊಂದಾಣಿಕೆಯನ್ನು ಕಂಡು ಉಲೇಮಾಗಳು ಸಮ್ಮನಿರಲಿಲ್ಲ. ಉದಾಹರಣೆಗೆ ಅಮೀನನ ಶಿಷ್ಯ 'ಮೊಹಮ್ಮದ್ ಮುಫ್ ಜಾನ್ 'ನೆಂಬ ಒಬ್ಬ ಖಲೀಫನು ಹೇಳುವ ಹಾಗೆ ಲಕ್ಷಾಂತರ ಹಿಂದೂಗಳು ಅಮೀನ ನಡೆಗೆ ಆಕರ್ಷಿತರಾಗಿದ್ದರು. ಅವನು ವಿವರಿಸುವ ಹಾಗೆ

ಅವನ ಆತ್ಮಸಾಕ್ಷಾತ್ಕಾರದ ರಾತ್ರಿಯೇ
ನೂರಾರು ಜನ ಆತನ ಶಿಷ್ಯರಾದರು
ಇದನ್ನು ಕೇಳಿ ಲಕ್ಷಾಂತರ ಹಿಂದೂಗಳು ಬಂದರು
ಬಂದು ಆತನ ಪೂಜಿಸಿದರು
ಲಕ್ಷಜನ 'ಶಿವದಾರ'' ಜನಿವಾರ' ಧರಿಸಿದವರು
ಅವರೂ ಬಂದರು ತಮ್ಮ ಕಾಣಿಕೆಯ ಸಲ್ಲಿಸಿದರು
ಲಕ್ಷ ಜನ ಜಂಗಮರು ಬಂದರು ಆತನ ಪೂಜಿಸಿದರು
ಅಮೀನನು ಅವರ ಸ್ವಂತ ಅಸ್ತಿತ್ವದ ಬಗ್ಗೆ ಕೇಳಿದಾಗ
ತಮ್ಮ ಅಸ್ತಿತ್ವವ ಪ್ರಶ್ನಿಸಿಕೊಂಡರು
ನಾನು...ನಾನು...ನಾನು ಯಾರು ? ಎಂದು ಹೇಳುತ್ತಾ
ಅಮೀನನು ಸಾಕ್ಷಾತ್ಕಾರ ಮಾಡಿಕೊಂಡಾಗ
ಈ ಸತ್ಯವನು ನುಡಿಯುತ್ತಿದ್ದರು
ಆಧ್ಯಾತ್ಮಿಕ ಆನಂದದಲಿ ಈ ಮಾತ ಹೇಳಿಸಿದರು
ಶಿಷ್ಯರನು ಈ ರಹಸ್ಯಗಳ ಬಗ್ಗೆ ಕೇಳಿಹನು
ಬೋಧಿಸುವ ಅಮೀನನು ಹೇಳಿದನು
ಈ ರಹಸ್ಯಗಳ ಬಗ್ಗೆ
ಈ ರಹಸ್ಯಗಳ ಅರಿತು ಲಕ್ಷಾಂತರ ಜನ ಅವಿಶ್ವಾಸಿಗಳು ಮುಸ್ಲಿಮರಾದರು.[25]

ಈ ಪದ್ಯದಲ್ಲಿ ಕಂಡು ಬರುವ ಮಾಹಿತಿಯು ಅತಿಶಯೋಕ್ತಿಯೆನಿಸಿದರೂ ಮುಸ್ಲಿಮೇತರರನ್ನೂ

ಅವನು ತನ್ನ ಅನುಯಾಯಿಗಳನ್ನಾಗಿ ಸ್ವೀಕರಿಸಿದ್ದು ಮತ್ತು ಅಸಂಖ್ಯಾತ ಮುಸ್ಲಿಮೇತರರು ಅಮೀನನ ಕಾಲಕ್ಕೆ ಮತಾಂತರಗೊಂಡದ್ದು ನಿಜವಾಗಿದೆ. ಅಮೀನನಿಂದ ಖಲೀಫಾ ಪದವಿ ಪಡೆದು ಕರ್ನಾಟಕ ಮತ್ತು ಆಂಧ್ರದ ಗಡಿ ಭಾಗದಲ್ಲಿನ 'ಕೌತಾಳಂ' ನಲ್ಲಿ ಸ್ಥಿರಗೊಂಡ 'ಖಾದರ್ ಲಿಂಗ', ಅವರಿಗೂ ಸಹ ಮುಸ್ಲಿಮೇತರರಲ್ಲಿ ವಿಶೇಷವಾಗಿ ಲಿಂಗಾಯಿತರೇ ಹೆಚ್ಚಿನ ಅನುಯಾಯಿಗಳಿದ್ದುದಾಗಿ ತಿಳಿದು ಬರುತ್ತದೆ. 'ಖಾದರ್ ಲಿಂಗ' ಅವರ ಹೆಸರಿನ ಜೊತೆಗಿನ ಲಿಂಗ ಪದವು ಅವರ ವಂಶದ (ಲಿಂಗ್ ಬಂದ್) ಹೆಸರಾಗಿದ್ದು 'ಲಿಂಗಕ್ಕೂ ಆ ಹೆಸರಿಗೂ ಯಾವ ಸಂಬಂಧವೂ ಇಲ್ಲ. ಆದರೆ ಅಲ್ಲಿನ ದಂತ ಕಥೆಗಳ ಪ್ರಕಾರ 'ಖಾದರ್ ಲಿಂಗ' ಲಿಂಗಾಯಿತ ಸಮುದಾಯದೊಂದಿಗೆ ವಿಶೇಷ ಬಾಂಧವ್ಯ ಹೊಂದಿದ್ದರೆಂಬುದನ್ನು ತಿಳಿಸುತ್ತದೆ. ಖಾದರ್ ಲಿಂಗನ ಬಗೆಗೆ ಇಂತಹ ದಂತ ಕಥೆಗಳನ್ನೊರೆತು ಪಡಿಸಿದರೆ ಉಳಿದಂತೆ ವಿವರಗಳು ದೊರೆಯುವುದು ವಿರಳ. ವಿಶೇಷವಾಗಿ ಲಿಂಗಾಯಿತ ಸಮುದಾಯದವರು ಖಾದರ್ ಲಿಂಗನ ಕಡೆಗೆ ಯಾಕೆ ಆಕರ್ಷಿತರಾದರು ? ಮತ್ತು ಖಾದರ್ ಲಿಂಗನ ತಾತ್ವಿಕ್ ಸೈದ್ಧಾಂತಿಕ ನಿಲುವುಗಳೇನು ? ಎಂಬುದರ ಬಗೆಗೆ ಅರಿಯಲು ಈ ದಂತ ಕಥೆಗಳಷ್ಟೆ ಸಾಕಾಗಲಾರವು. ಖಾದರ್‌ಲಿಂಗನು ಅಮೀನನ ಶಿಷ್ಯನಾಗಿದ್ದು ಆ ಪರಂಪರೆಯ ವಾರಸುದಾರನಾಗಿ ಅಮೀನನಿಂದಲೇ ಖಲೀಫನಾದುದರಿಂದ ಆ ಪರಂಪರೆಯ ವಿವರಗಳಿಗಾಗಿ ನಾವು ಅಮೀನನನ್ನೇ ಗಮನಿಸಬೇಕಾಗುತ್ತದೆ.

ಅಮೀನನು ಮುಸ್ಲಿಮೇತರರೊಂದಿಗೆ ಸೇರುತ್ತಿದ್ದನಲ್ಲದೆ 'ಇಸ್ಲಾಂ'ನ 'ಶರೀಯತ್ ' ಅನ್ನು ಪಾಲಿಸುತ್ತಿಲ್ಲವೆಂಬುದಾಗಿ ದೇವರೊಬ್ಬನೆ ಪೂಜೆಗೆ ಅರ್ಹನು ಎಂಬ ತತ್ವವನ್ನು ಮುರಿದು ಪೀರ ಪೂಜೆಗೂ ಅನುವುಮಾಡಿಕೊಟ್ಟನೆಂದು ಉಲೇಮಾಗಳು ಅಮೀನನ ವಿರುದ್ಧ ಸಂಘಟಿತರಾದರು. ಯಾವುದು ಅಧಿಕೃತವಾಗಿ 'ಇಸ್ಲಾಂ'ನ ಜೀವನ ಪದ್ಧತಿಯಾಗಿತ್ತೋ ಅದರಂತೆ ಅಮೀನನು ತನ್ನ ಬದುಕನ್ನು ವ್ಯವಸ್ಥಿತಗೊಳಿಸಿಕೊಳ್ಳಲಾಗಲಿಲ್ಲ. ಅಮೀನನು ಪ್ರಾರ್ಥನೆಗಾಗಿ ಮಸೀದಿಗೆ ಸಹಹೋಗುತ್ತಿರಲಿಲ್ಲ. ಅಮೀನನು ದೇವರಿಗಾಗಿ ಮಸೀದಿಯೊಂದನ್ನು ನಿರ್ಮಿಸಿ ಅದರಲ್ಲಿ ಪ್ರಾರ್ಥಿಸಬೇಕೆಂದು ಹಲವರು ಶ್ರೇಷ್ಠವ್ಯಕ್ತಿಗಳು ಪ್ರತಿಪಾದಿಸುತ್ತಿದ್ದಾರೆ. ಮತ್ತು ಹಗಲೆನ್ನದೆ ಇರುಳೆನ್ನದೆ ದೇವರನ್ನು ಪ್ರಾರ್ಥಿಸುತ್ತಾರೆ. ಮೊಟ್ಟ ಮೊದಲ ಮಸೀದಿ ಎಂದರೆ ಸೃಷ್ಟಿ. ಈ ದೇಹನೇ ಮಿಬ್ ರಾಬ್ (MIBRAB ಮಸೀದಿಯಲ್ಲಿ ಪ್ರಾರ್ಥನೆಯ ದಿಕ್ಕನ್ನು

ಸೂಚಿಸುವ ದಿಬ್ಬದ ಸಂಕೇತ), ಹೃದಯವೇ ಆಧ್ಯಾತ್ಮಿಕ ಜ್ಯೋತಿ. ಅದು ಬೆಳಕಿನಿಂದ ತುಂಬಿದಾಗ ಮನುಷ್ಯನನ್ನು ಪ್ರಾರ್ಥನೆಗೆಸಿದ್ಧಗೊಳಿಸುತ್ತದೆ, ಎಂದು ನಿಜವಾದ ಪ್ರಾರ್ಥನೆಯ ಬಗೆಗೆ, ಮಸೀದಿಯ ಬಗೆಗೆ ವಿವರಿಸುತ್ತಾರೆ.[19] ಅಮೀನನ ವಿರುದ್ಧ ಸಂಘಟಿತರಾಗಿದ್ದ ಉಲೇಮಾಗಳ ಮುಖಂಡ 'ಮೊಹಮ್ಮದ್ ಬಖಾರಿ'ಯು ಅಮೀನನನ್ನು ದಿನನಿತ್ಯದ ಪ್ರಾರ್ಥನೆಗಾಗಿ ಜುಮ್ಮಾ ಮಸೀದಿಗೆ ಬರುವಂತೆ ಒತ್ತಡ ಹೇರಿದನು. ಆದರೆ ಕಡೆಯ ವರೆಗೂ ಅಮೀನನು ಮಸೀದಿಗೆ ಮಾತ್ರ ಹೋಗಲಿಲ್ಲವೆಂಬುದಾಗಿ ತಿಳಿದು ಬರುತ್ತದೆ.

ಅಮೀನನ ಸಮಕಾಲೀನನಾದ ಖ್ವಾದರಿಯಾ ಪಂಗಡಕ್ಕೆ ಸೇರಿದ 'ಕರೀಮುಲ್ಲ' ಎನ್ನುವ ಸೂಫಿಯು ಅಮೀನನ್ನು ಮತ್ತವನ ಅನುಯಾಯಿಗಳನ್ನು ಕಟುವಾಗಿ ಟೀಕಿಸಿದ್ದಾನೆ.

ಅಮೀನನ ಅನುಯಾಯಿಗಳೆಲ್ಲರು
ಸಂದೇಹವಾದಿಗಳು
ಕಾರಣ ಅವರೆಲ್ಲರು ದೇಹದ ಸ್ವ - ಅಸ್ತಿತ್ವಕ್ಕೆ ಪ್ರಾಮುಖ್ಯತೆ ನೀಡುವವರು
ಆದರೆ ಅವರು ಸ್ವ-ಅಸ್ತಿತ್ವದ ಬಗ್ಗೆ ಅರ್ಥತಿಳಿಯದವರು ಆ ಕತ್ತೆಗಳು
ಪಂಚ ಭೂತಗಳಿವೆಯೆಂದು ಹೇಳುತ್ತವೆ
ಇಪ್ಪತ್ತೈದು ಗುಣಗಳಿವೆಯೆಂದು ಹೇಳುತ್ತವೆ
ಯಾವ ಬುದ್ಧಿವಂತನು ಈ ಮಾತನ್ನೊಪ್ಪಲಾರ
ಈ ಪಂಚ ಭೂತಗಳು ಕೇವಲ ಪಂಚದೆವ್ವಗಳಷ್ಟೆ![20]

ಕರೀಮುಲ್ಲಾನ ಈ ಆಕ್ರೋಶಕ್ಕೆ ಕಾರಣವಾಗಿ ಈಟನ್ ವಿವರಿಸುವ ಹಾಗೆ ಅಮೀನನು ಹಾಗು ಇತರ ಸೂಫಿಗಳ ನಡುವೆ ಇದ್ದ ವೈಚಾರಿಕ ಭಿನ್ನಾಭಿಪ್ರಾಯ ಹಾಗು ಇದಕ್ಕೂ ಮುಖ್ಯವಾದದ್ದೆಂದರೆ ಸಂಪ್ರದಾಯಸ್ಥ ಸೂಫಿಗಳ ವಿಚಾರಗಳು ಮಧ್ಯ ಪೌರಾತ್ಯಪದ್ಧತಿಗಳನ್ನು ಆಧರಿಸಿದ್ದವು. ಆದರೆ ಅಮೀನನ ವಿಚಾರಗಳು ಹಿಂದೂ ತತ್ವ ಜ್ಞಾನದಲ್ಲಿ ಜನ್ಮ ಪಡೆದಿದ್ದವು.

ಖಾದರ್‌ಲಿಂಗನು ಅಮೀನನಿಂದ ಧಾರ್ಮಿಕ ಉತ್ತರಾಧಿಕಾರವನ್ನು ಪಡೆದು ಆ ಪರಂಪರೆಯನ್ನು

[illegible]

[illegible]

[illegible]

[illegible]

[illegible]

ಮುಂದುವರೆಸಿಕೊಂಡು ಹೋದವರಲ್ಲಿ ಪ್ರಮುಖನಾಗಿದ್ದಾನೆ. ಖಾದರ್ ಲಿಂಗನ ದರ್ಗಾವು ಈಗ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಆದೋನಿ ತಾಲೂಕಿನಲ್ಲಿದ್ದು ಕರ್ನಾಟಕದ ಗಡಿಯಲ್ಲಿದೆ. ಇಲ್ಲಿ ಕನ್ನಡ ಭಾಷಿಕರು ಅದಿಕವಾಗಿದ್ದು ದರ್ಗಾದ ಪ್ರಕಟಣೆಗಳು, ಕರಪತ್ರಗಳು ಹೆಚ್ಚಾಗಿ ಕನ್ನಡದಲ್ಲಿಯೇ ಮುದ್ರಣಗೊಳ್ಳುವುದು ಸಹ ಈ ದರ್ಗಾದ ಅಧಿಕ ಸಂಖ್ಯಾತ ಭಕ್ತರು ಕನ್ನಡಿಗರೇ ಎಂಬುದನ್ನು ಸೂಚಿಸುತ್ತದೆ.

ಖಾದರ್‌ಲಿಂಗನು ಅಮೀನುದ್ಧೀನ್ ಅಲಾ ಅವರಿಂದ ಖಲೀಫಾ ಪದವಿ ಪಡೆದುಕೊಂಡು 'ಕೌತಾಳಂ'ಗೆ ಬಂದಾಗ ಶೈವ ಸಂತ 'ಉರುಕುಂದಿ ಈರಣ್ಣ'ನನ್ನು ಸಂಧಿಸಬೇಕಾಯಿತು. ಅಲ್ಲಿ ಅವರಿಬ್ಬರ ಮಧ್ಯ 'ಲಿಂಗಧಾರಣೆ' ಯ ಅರ್ಥಪೂರ್ಣತೆ, ನಿರರ್ಥಕತೆಯ ಬಗೆಗೆ ವಾದ ನಡೆಯಿತು. ಕಡೆಗೆ ಉರುಕುಂದಿ ಈರಣ್ಣನೂ ಸೇರಿದಂತೆ ಆತನ ಶೈವ ಅನುಯಾಯಿಗಳೆಲ್ಲರೂ ಬಾವಿಯೊಂದರಲ್ಲಿ ಲಿಂಗಗಳನ್ನು ಎಸೆಯುವುದಾಗಿಯೂ ಖಾದರ್‌ಲಿಂಗನು ಸತ್ಯವಂತನೂ ಮತ್ತು ಜ್ಞಾನಿಯೂ ಆಗಿದ್ದರೆ, ಅವನ್ನು ಬಾವಿಯೊಳಗಿಂದ ಹೊರಬರುವಂತೆ ಮಾಡಲಿ ಎಂಬ ಶರ್ಥತ್ತು ಹಾಕುತ್ತಾರೆ. ಖಾದರ್‌ಲಿಂಗನ ಮಹಿಮೆಯಿಂದಾಗಿ ಅವು ನೀರೊಳಗಿಂದ ಮೇಲೆ ಬಂದು ಆತನ ಕಾಲಿಗೆ ಸುತ್ತಿಕೊಳ್ಳುತ್ತವೆ. ಸೋತ ಉರುಕುಂದಿ ಈರಣ್ಣನು ಆತನ ಕಣ್ಣಿಗೆ ಕಾಣದಂತೆ ದೂರ ಹೊರಟು ಹೋದನು. ಈ ಪವಾಡದ ನಂತರ ಲಿಂಗಾಯಿತ ಸಮುದಾಯದವರು ಆತನಲ್ಲಿ ನಂಬಿಕೆಯಿಟ್ಟದ್ದಾಗಿ ತಿಳಿದು ಬರುತ್ತದೆ.

ವಾಸ್ತವವಾಗಿ ಈ ಬಗೆಯ ದಂತಕಥೆಗಳಿಗಿಂತಲೂ 'ಸೂಫಿಜಂ'ನ ಅನುಭಾವದ ಜೊತೆಗೆ ವಚನಕಾಲದ ಶರಣರ ಅನುಭಾವವನ್ನು ತೌಲನಿಕವಾಗಿ ಪರಿಶೀಲಿಸುವುದರಿಂದ ಹೆಚ್ಚು ಖಚಿತವಾದ ತೀರ್ಮಾನಗಳಿಗೆ ಬರಬಹುದಾಗಿದೆ. ಸೂಫಿಜಂನ 'ತಸವ್ವೂಫ್ ' (ಸೂಫಿಸಿದ್ಧಾಂತ) ಗೂ ಶರಣರ ' ಅಷ್ಟಾವರಣ'ಗಳಿಗೂ ಆಶ್ಚರ್ಯಕರ ರೀತಿಯಲ್ಲಿ ಸಾಮ್ಯವಿದೆ (ವಿವರಗಳಿಗೆ ಅನುಬಂಧ ನೋಡಿ). ಶೈವ ಪರಂಪರೆಯ ಭಕ್ತಿ ಚಳುವಳಿಗೆ 'ಏಕೇಶ್ವರವಾದವಾಗಲಿ' ಸತಿಪತಿ ಭಾವವಾಗಲಿ ಹೊಸ ನಂಬಿಕೆಯಾಗಿರಲಿಲ್ಲ. ಹನ್ನೆರಡನೆಯ ಶತಮಾನದಲ್ಲಾಗಲೇ ವಚನಕಾರರು ಈ ತತ್ವಗಳನ್ನು ಪ್ರತಿಪಾದಿಸಿ ಆಚರಣೆಗೂ ತಂದಿದ್ದರು. ಶಿವಭಕ್ತನಾಗಿದ್ದ ಕೇರಳದ ದೊರೆ ಚೇರಮಾನ್ ಪೆರುಮಾಳನು 'ಇಸ್ಲಾಂ'ನ ಸಂಪರ್ಕದಿಂದ 'ಇಸ್ಲಾಂ'

[illegible]

[illegible]

[illegible]

ಧರ್ಮವನ್ನು ಸ್ವೀಕರಿಸಿ 'ಮೆಕ್ಕಾ'ನಗರಕ್ಕೆ ಹೋದದ್ದು ! ಶಿವಶರಣ ಮಳೆಯ ಮಲ್ಲೇಶನು ಎಂಟು ನೂರು ಸೂಫಿ ಖಲಂದರರೊಂದಿಗೆ ಮೆಕ್ಕಾ ನಗರಕ್ಕೆ ಹೋಗಿದ್ದುದು ಇಸ್ಲಾಂ ಮತ್ತು ಶೈವ ಪರಂಪರೆಗಳೆರಡರ ಮಧ್ಯೆ ಇದ್ದಿರಬಹುದಾದ ತಾತ್ತಿಕ ಸಂಬಂಧಕ್ಕೆ ಸೃಷ್ಟನಿದರ್ಶನಗಳಾಗಿವೆ.[೨೧]

ವಿರುಪಾಕ್ಷ ಪಂಡಿತ ವಿರಚಿತ 'ಚೆನ್ನಬಸವ ಪುರಾಣ' ದ ಪೀಠಿಕಾಸಂಧಿಯ ೧೯ ನೆಯ ಪದ್ಯವು 'ಮಳೆಯ ಮಲ್ಲೇಶ' ನು ಮೆಕ್ಕಾಕ್ಕೆ ಹೋದುದರ ಬಗೆಗೆ ವಿವರಿಸುತ್ತದೆ.

ವರಖಲಿಂಧರರೇಳು ನೂರ್ವ (ಗೆ) ಗುರುವಾಗಿ
ಹರುಷದಿಂ ಮಖ್ಖಕ್ಕೆ ಪೋಗಿ ಮಹಿಮೆಯ ತೋರಿ
ತುರುಕಾರಣ್ಯದೊಳಗನಾವೃಷ್ಟಿದೋಷಂ ಬಂದುಪಸರಿಸೆ ಪವಾಡದಿಂದೆ
ವರುಷಮಂ ಸುರಿಸಿ ಸುರಿ ತಾಳನಿಂ ಪೂಜೆಯಂ
ಪಿರಿದಾಗಿ ಕೈಕೊಂಡು ಘನ ತರದ ಕೀರ್ತಿಯಂ
ಧರಿಸಲಂದಂದಿತ್ತ ಮಳೆಯ ಮಲ್ಲೇಶನೆಂದೆಂಬನಾಮವನಾಂತನು ||[೨೨]

ಶ್ರೇಷ್ಠರಾದ ಏಳುನೂರು ಮುಸಲ್ಮಾನ ಬೈರಾಗಿಗಳಿಗೆ ಗುರುವಾದನು. ಸಂತೋಷದಿಂದ ಮುಸಲ್ಮಾನರ ಯಾತ್ರಾಸ್ಥಳವಾದ ಮಖ್ಖಾಕ್ಕೆ (ಮೆಕ್ಕಾ) ಹೋದನು. ಅಲ್ಲಿ ತನ್ನ ಮಹಿಮೆಯನ್ನು ತೋರಿಸಿದನು. ಅರಬ್ ದೇಶದಲ್ಲಿ ಅನಾವೃಷ್ಟಿ ದೋಷವುಹರಡಿತ್ತು. ತನ್ನ ಪವಾಡದಿಂದ ಮಳೆಯನ್ನು ಸುರಿಸಿದನು. ಮುಸಲ್ಮಾನ ಸುಲ್ತಾನನಿಂದ ದೊಡ್ಡದಾದಪೂಜೆಯನ್ನು ಸ್ವೀಕರಿಸಿ, ಹೆಚ್ಚಿನ ಕೀರ್ತಿಯನ್ನು ಗಳಿಸಿದನು. ಅಂದಿನಿಂದ ಮಳೆಯ ಮಲ್ಲೇಶ ಎಂಬ ಹೆಸರನ್ನು ಪಡೆದನು.

ತಾತ್ವಿಕವಾಗಿಯೂ ಮತ್ತು ಆಚರಣಾತ್ಮಕವಾಗಿಯೂ ಸೂಫಿಗಳು ಮತ್ತವರ ಚಟುವಟಿಕೆಗಳು ಲಿಂಗಾಯಿತ ಸಮುದಾಯದ ಆಧ್ಯಾತ್ಮಿಕ ಚಟುವಟಿಕೆಗಳು ಪರಸ್ಪರ ಒಂದನ್ನೊಂದು ಹತ್ತಿರ ತಂದವು. ಸೂಫಿಗಳ ಖಾನ್ ಕಾಗಳು ಲಿಂಗಾಯಿತರ ಮಠಗಳಲ್ಲಿ ಧಾರ್ಮಿಕ ಆಧ್ಯಾತ್ಮಿಕ ಚರ್ಚೆಗಳಿಗೆ ಮುಕ್ತ ಅವಕಾಶಸಿಕ್ಕಿ

ಲಿಂಗಾಯಿತರು ಸೂಫಿಗಳತ್ತ ಆಕರ್ಷಿತರಾಗಿರುವಂತಿದೆ. ಅಮೀನನ ಶಿಷ್ಯನೊಬ್ಬ ಪದ್ಯವೊಂದರಲ್ಲಿ ಅಮೀನನ ಆಧ್ಯಾತ್ಮಿಕ ಶಕ್ತಿಯ ಕುರಿತು ವಿವರಿಸುವಾಗ 'ಲಕ್ಷಾಂತರ ಜನ ಶಿವದಾರ ಧರಿಸಿದವರು ಬಂದರು ಮತ್ತು ತಮ್ಮ ಅಸ್ತಿತ್ವದ ಬಗೆಗೆ ಪ್ರಶ್ನೆಸಿಕೊಂಡರು. ಅಮೀನನಿಂದ ಸಮಾಧಾನಕರ ಉತ್ತರ ಪಡೆದು ಇಸ್ಲಾಂನಲ್ಲಿ ವಿಶ್ವಾಸ ತಾಳಿ ಮುಸ್ಲಿಂರಾದರು ಎಂಬ ವಿವರ ದೊರೆಯುತ್ತದೆ. 'ಹರಿಪ್ರಸಾದ ದ್ವಿವೇದಿ'ಯವರು ಕಬೀರರ ಕುರಿತು ಬರೆಯುತ್ತಾ ಭಾರತದಲ್ಲಿ ನೇಯ್ಗೆಯ ಉದ್ಯೋಗ ಮಾಡುವ ಜಾತಿಗಳು ಇಸ್ಲಾಂ ಬರುವುದಕ್ಕಿಂತ ಮುಂಚೆ ನಿರ್ಗುಣವಾದೀ ನಾಥ ಪಂಥದ ಯೋಗಿಗಳ ಪ್ರಭಾವಕ್ಕೊಳಗಾಗಿದ್ದವು. 'ಇಸ್ಲಾಂ'ನ ಪರಿಚಯವಾದಂದಿನಿಂದ ಅವರಿಗೆ ಒಂದು ಹೊಸ ಸಂಘಟಿತ ಧಾರ್ಮಿಕ ಸಂಪ್ರದಾಯದ ಆಶ್ರಯವು ಸಿಕ್ಕಿತು. ಮತ್ತವು ಸಾವಕಾಶವಾಗಿ ಮುಸಲ್ಮಾನವಾಗತೊಡಗಿದವು ಎಂದು ವಿವರಿಸುತ್ತಾರೆ.[66] ಇಂಡಿಯಾದಲ್ಲಿ ಅಸಂಖ್ಯಾತ ಮುಸ್ಲಿಮೇತರರು ಸೂಫಿಗಳತ್ತ ಆಕರ್ಷಿರಾದುದಾಗಲಿ ಮತ್ತು ಕ್ರಮೇಣ ಅವರ ದರ್ಗಾಗಳೊಂದಿಗೆ ಭಕ್ತಿಯ ಸಂಬಂಧ ಹೊಂದುವುದಾಗಲಿ, ಇಸ್ಲಾಂ ಅನ್ನು ಸ್ವೀಕರಿಸುವುದಾಗಲಿ, ಕೇವಲ ಮೌಢ್ಯವಾಗಿರದೆ ಅದಕ್ಕೊಂದು ತಾತ್ವಿಕ ನೆಲೆಗಟ್ಟು ಇತ್ತೆಂಬುದು ಇಂತಹ ನಿದರ್ಶನಗಳಿಂದ ಸ್ಪಷ್ಟಗೊಳ್ಳುತ್ತದೆ.

ಗಡಿ ಭಾಗದಲ್ಲಿನ 'ಕೌತಳಂ' ನ 'ಖಾದರ್ ಲಿಂಗ'ನ ನಂತರ ಆಂಧ್ರದ ಆಲೂರು ತಾಲೂಕಿನ 'ಎಳ್ಳಾರ್ತಿ','ಶ್ಹೇಕ್ ಶಹಾವಲಿ'ಯವರು ಮುಖ್ಯರಾಗುತ್ತಾರೆ. ಇವರು ಬಿಜಾಪುರದ ಔರಂಗಜೇಬನ ದಾಳಿಯಿಂದಾಗಿ ದಕ್ಷಿಣದ ಕಡೆಗೆ ನೆಮ್ಮದಿಯ ಮತ್ತು ಸುರಕ್ಷಿತ ತಾಣ ಹುಡುಕುತ್ತಾ 'ಎಳ್ಳಾರ್ತಿ'ಗೆ ಬಂದು ನೆಲೆನಿಂತವರಾಗಿದ್ದಾರೆ. ಕನ್ನಡಿಗರು ಅಧಿಕಸಂಖ್ಯಾತರಾಗಿರುವ 'ಎಳ್ಳಾರ್ತಿ'ಯ ದರ್ಗಾದ ಜೊತೆ ಕರ್ನಾಟಕದ ಬಳ್ಳಾರಿ, ರಾಯಚೂರು ಆಂಧ್ರದ ಕರ್ನೂಲು ಮತ್ತು ಅನಂತಪುರ ಜಿಲ್ಲೆಯ ಭಕ್ತರು ಸಂಬಂಧವಿರಿಸಿಕೊಂಡವರಾಗಿದ್ದಾರೆ. ಈ ದರ್ಗಾಕ್ಕೆ ವಿಶೇಷವಾಗಿ ಕೆಳವರ್ಗದ ಜನರೆ ಹೆಚ್ಚಾಗಿ ಆಕರ್ಷಿತರಾದರೂ ಮೇಲ್ವರ್ಗದವರೂ ಸಹ ಅಷ್ಟೆ ಭಯಭಕ್ತಿಯಿಂದ ಸಂತನ ಸಮಾಧಿಯನ್ನು ಗೌರವಿಸುತ್ತಾರೆ. ಗಂಡಸರಿಗಿಂತ ಹೆಚ್ಚಾಗಿ ಹೆಣ್ಣುಮಕ್ಕಳೆ ಈ ದರ್ಗಾದ ಭಕ್ತವರ್ಗಕ್ಕೆ ಸೇರಿದ್ದು ಪ್ರತಿ 'ಗುರುವಾರ'ವೂ ಸುತ್ತಲಿನ ಹಳ್ಳಿಗಳಿಂದ 'ಕಾಲ್ನಡಿ'ಗೆಯಲ್ಲಿ ಬಂದು ತೆಂಗಿನಕಾಯಿ ಒಡೆಯಿಸಿ, 'ಸಕ್ಕರೆ

ಓದಿಸಿ' ಕೊಂಡು ಹೋಗುತ್ತಾರೆ.

ಮನೋವೈಕಲ್ಯಕ್ಕೊಳಗಾದವರು, ಸತ್ತು ದೆವ್ವವಾಗಿ ಮೈಮೇಲೆ ಆವಾಹಿಸಿದವರೆಂದು ಹೇಳಲಾಗುವ ಹೆಣ್ಣು ಮಕ್ಕಳು ಪ್ರತಿಗುರುವಾರವು ತಪ್ಪದೆ ದರ್ಗಾಕ್ಕೆ ಭೇಟಿಯಿತ್ತು ಮಾನಸಿಕ ಕ್ಲೇಶಗಳಿಂದ ಮುಕ್ತಿ ಪಡೆಯುತ್ತಾರೆ. ಕೂಗುವುದು, ಕೇಕೆ ಹಾಕುವುದು, ಅಳುವುದು, ಹೊರಳಾಡುವುದರ ಮೂಲಕ ತಮ್ಮ ಬದುಕಿನಲ್ಲಿ ಘಟಿಸಿ ಹೋದ ದುರಂತ, ವಿಷಾದಗಳಿಂದ 'ಬಿಡುಗಡೆ' ಹೊಂದುತ್ತಾರೆ. ದರ್ಗಾಗಳಿಗೆ ವಿಶೇಷವಾಗಿ ಹೆಣ್ಣು ಮಕ್ಕಳು ಆಕರ್ಷಿತರಾದುದಕ್ಕೆ ಮತ್ತು ದರ್ಗಾದ ಜೊತೆ ಆಧ್ಯಾತ್ಮಿಕ ಸಂಬಂಧ ಪಡೆದುಕೊಂಡ ಪ್ರಕ್ರಿಯೆಗೆ ದೀರ್ಘಕಾಲದ ಪರಂಪರೆಯೇ ಇದೆ. ಅದನ್ನು ಮುಂದಿನ ಅಧ್ಯಾಯದಲ್ಲಿ ಸ್ಪಷ್ಟ ಪಡಿಸಲಾಗಿದ್ದು ಈಗ ಎಳ್ಳಾರ್ತಿಬಾಬಾರ ಬಗೆಗಿನ ಲಿಖಿತ ದಾಖಲೆಯ ವಿವರಗಳನ್ನು ಗಮನಿಸಬಹುದಾಗಿದೆ.

ಎಳ್ಳಾರ್ತಿ ಬಾಬಾ ಅವರ ಕುರಿತಂತೆ ಅತಿಮಾನುಷ ವಿವರಗಳನ್ನೊಳಗೊಂಡ ಘಟನೆಗಳು ದೊರಕುತ್ತಿವೆ. ಬಿಜಾಪುರದ 'ಶಂಶುದ್ದೀನ್ ಖಾದ್ರಿ' ಮತ್ತು ಸಿಂಧನೂರು ತಾಲೂಕಿನ ದಡೇಸೂಗೂರಿನ 'ಆಲಂಪಾಷಾ' ಅವರು 'ಹಜ್ ' ಯಾತ್ರೆಗೆ ಹೊರಟಾಗ 'ಕಾಬಾ'ದಲ್ಲಿ ಪರಸ್ಪರ ಭೇಟಿಯಾಗುತ್ತಾರೆ. ಶಂಶುದ್ದೀನ್ ಖಾದ್ರಿಯವರು ಯಾಕೋ ಆಲಂಪಾಷಾರಿಗೆ ತಾವು 'ಕಾಬಾ'ದಲ್ಲಿ ಭೇಟಿಯಾದುದನ್ನು ಯಾರಿಗೂ ತಿಳಿಸಬಾರದೆಂಬುದಾಗಿ ವಿನಂತಿಸಿಕೊಳ್ಳುತ್ತಾರೆ.ಆದರೆ ಆಲಂ ಪಾಶಾರು 'ಹಜ್ 'ನಿಂದ ಹಿಂದಿರುಗಿದಾಗ ಅದನ್ನು ಎಲ್ಲರಿಗೂ ತಿಳಿಸಿ ಬಿಡುತ್ತಾರೆ. ಶಂಶುದ್ದೀನ್ ಖಾದ್ರಿಯವರು ಐವತ್ತು ಜನ ಅನುಯಾಯಿಗಳೊಂದಿಗೆ ಸಮುದ್ರ ಮಾರ್ಗದಿಂದ ಹಿಂದಿರುಗುತ್ತಿದ್ದಾಗ ಹಡುಗು ಚಂಡ ಮಾರುತಕ್ಕೆ ಸಿಲುಕಿ ನಾಶವಾಯಿತು. 'ಶಂಶುದ್ದೀನ್ ಖಾದ್ರಿ' ಮತ್ತು 'ಅಂಬರ್ ಖಾನ್ ದೇಸಾಯಿ 'ಮಾತ್ರ ಎಳ್ಳಾರ್ತಿ ಬಾಬಾರ ಕೃಪೆಯಿಂದ ಮರದ ದಿಮ್ಮಿಯೊಂದರ ಆಶ್ರಯದಿಂದ ಬದುಕುಳಿದರು. ಮತ್ತು 'ಬಾಬಾ' ಅವರನ್ನು ಬೇಟಿಯಾಗುತ್ತಾರೆ. ಮನುಷ್ಯನ ಬದುಕಿಗೆ ಸಂಬಂಧಿಸಿದಂತೆ 'ಮಂಜುಗಡ್ಡೆಯರೂಪಕವೊಂದರ ಕುರಿತು ಬಾಬಾ ಅವರು ಮಾತಾಡುತ್ತಿದ್ದಾಗ ಖಾದ್ರಿಯವರು ತಾವು ಮಂಜುಗಡ್ಡೆಯನ್ನು ನೋಡೇ ಇಲ್ಲವೆಂಬುದಾಗಿ ತಿಳಿಸುತ್ತಾರೆ. ಆಗ ಬಾಬಾ ಅವರು 'ಆಲಿಕಲ್ಲಿ'ನ ಮಳೆಯ ಪವಾಡ ನಡೆಸುತ್ತಾರೆ.[13]ಮತ್ತು ಅವರು



ಎಳ್ಳಾರ್ತಿ ಬಾಬಾ'ರ ಮಜಾರ್ , ಮಜಾರ್ ನ ಮೇಲೆ

ಕೂತ 'ಬಿಳಿಯ ಪಾರಿವಾಳ'



ಎಳ್ಳಾರ್ತಿ ಶೈಕ್ ಶಹಾವಲಿಯವರ ದರ್ಗಾದ ಒಂದು ನೋಟ

ಜಪಮಾಡುವಾಗ ಜಪಸರವನ್ನು ಬಳಸುತ್ತಿದ್ದು ಅದು ಒಂದುನೂರು ಮಣಿಗಳಿಂದ (ತಸ್ ಬಿ)ಕೂಡಿದುದಾಗಿತ್ತು ಎಂಬುದಾಗಿ ತಿಳಿದು ಬರುತ್ತದೆ.[೩೫]

ಎಳ್ಳಾರ್ತಿ ಬಾಬಾ ಅವರ ಬಗೆಗೆ ಸೂಫೀ ಜೀವನ ಚರಿತ್ರೆಗಳಿಂದ ತಿಳಿದು ಬರುವುದು ಮೇಲಿನ ವಿವರ ಮಾತ್ರವಾದ್ದರಿಂದ ಅದನ್ನಿಲ್ಲಿ ಕೊಡಲಾಗಿದೆ. ಸ್ಥಳೀಯ ಮೌಖಿಕ ವಿವರಗಳ ಮೂಲಕ ತಿಳಿದು ಬರುವ ಹಾಗೆ ಶೇಕ್ ಶಹಾವಲಿಯವರು 'ನವಾಬರ' ದತ್ತಿ, ಜನರ ಕಾಣಿಕೆಗಳೆಲ್ಲವನ್ನು ತಿರಸ್ಕರಿಸಿ ಸ್ವತಃ ದುಡಿಮೆಯಿಂದ ತಮ್ಮ ಆಹಾರವನ್ನು ತಾವೇ ಸಂಪಾದಿಸಿಕೊಳ್ಳುತ್ತಿದ್ದರಲ್ಲದೆ ಮಸೀದಿಯೊಂದನ್ನು ಸಹ ಕಟ್ಟಿಸಿದ್ದರು. ಅವರ ದರ್ಗಾದ ಆವರಣದೊಳಗಡೆಯೇ ಇರುವ ಈ ಮಸೀದಿಯನ್ನು ನಾವೀಗಲೂ ಕಾಣಬಹುದಾಗಿದೆ.

ಇದಾದ ನಂತರ ಈ ಭಾಗದ ಹೆಸರಿಸಲೇ ಬೇಕಾದ ಮತ್ತೊಬ್ಬ ಸಂತರೆಂದರೆ ಸರ್ಮಸ್ತ್ ಹುಸೇನಿ ಚಿಷ್ತಿ. ಖಾದರ್ ಲಿಂಗ್ ಅವರಂತೆಯೇ ಅಮೀನುದ್ದೀನ್ ಅಲಾ ಅವರಿಂದ ೧೫ನೇ ಖಲೀಫರಾಗಿ ಅನಂತಪುರ ಜಿಲ್ಲೆಯ ಕಣೇಕಲು ತಾಲೂಕಿನ ಹೊನ್ನೂರಿ ನಲ್ಲಿ ನೆಲೆನಿಂತ ಇವರು ತಾವಿರುವ ಸ್ಥಳದ ಹೆಸರಲ್ಲಿಯೇ 'ಹೊನ್ನೂರುಸ್ವಾಮಿ' ಯೆಂದು ಪ್ರಖ್ಯಾತರಾದರು. ಅವರ ಈ ಹೆಸರೇ ಸ್ಪಷ್ಟ ಪಡಿಸುವಂತೆ ಮುಸ್ಲಿಮೇತರರಲ್ಲಿ ಅವರು ಅತ್ಯಂತ ಜನಪ್ರಿಯರಾದವರಾಗಿದ್ದಾರೆ. ಮುಸ್ಲಿಮರಲ್ಲಿ ಹೊನ್ನೂರ್ ವಲಿ, ಹೊನ್ನರ್ ಪೀರ್ , ಹೊನ್ನೂರು ಪಾಷಾ ಮುಂತಾದ ಹೆಸರುಗಳು ಮತ್ತು ಮುಸ್ಲಿಮೇತರರಲ್ಲಿ ಹೊನ್ನೂರಪ್ಪ, ಹೊನ್ನೂರಮ್ಮ, ಹೊನ್ನೂರುದಾಸು ಮುಂತಾದ ಹೆಸರುಗಳು ಇರುವುದು ಈ ಭಾಗದ ಜನರಿಗೆ ಈ ಸಂತನ ಮೇಲಿದ್ದ ಭಕ್ತಿ ಗೌರವಗಳನ್ನು ಸ್ಪಷ್ಟ ಪಡಿಸುತ್ತದೆ.

ಬಿಜಾಪುರದ ಅಮೀನುದ್ದೀನ್ ಅಲಾ ಅವರ ಅನುಯಾಯಿಯಾಗಿದ್ದು ಅವರಿಂದ ೧೫ನೇಯ 'ಖಲೀಫಾ' ಪದವಿ ಪಡೆದರೆಂಬ ವಿವರಣೆ ಮಾತ್ರ ದೊರಕುತ್ತಿದ್ದು[೩೬] ಉಳಿದಂತೆ ಇವರ ಕುರಿತಾಗಿ ಮೌಖಿಕ ವಿವರಗಳ ಮೂಲಕ್ಕೆ ಹೋಗಬೇಕಾಗುತ್ತದೆ. ಹೊನ್ನೂರು ಸ್ವಾಮಿಯು (ಸರ್ಮಸ್ತ್ ಹುಸೇನಿ ಚಿಷ್ತಿಯು)

ಬಿಜಾಪುರದಿಂದ ಹೊನ್ನೂರಿಗೆ ಬರುವಾಗ ಮಾರ್ಗ ಮಧ್ಯದಲ್ಲಿ 'ಹುಲಿಗಿ'ಯ ಸಮೀಪ ಬಂದು ವಿಶ್ರಾಂತಿ ಪಡೆಯುತ್ತಾರೆ. ಇವರನ್ನು ಹುಲಿಗೆಮ್ಮನ ಅಣ್ಣನೆಂದು ಭಕ್ತರು ಭಾವಿಸುತ್ತಿದ್ದು ಜಾತ್ರೆಯ ದಿವಸ ಇವರು ಕುಳಿತು ಹೋದ ಸ್ಥಳದಲ್ಲಿ 'ಫಾತೆಹಾ' ಮಾಡಿದ ನಂತರವೇ 'ತೇರು' ಎಳೆಯಲಾಗುತ್ತದೆ. ಅಲ್ಲಿಂದ ಬಂದವರು ಹೊನ್ನೂರಿನ ಸಮೀಪದ ದಿಬ್ಬದಲ್ಲಿ ಧ್ಯಾನ ಮಗ್ನರಾಗಿ ಧೀರ್ಘಕಾಲ ಕುಳಿತು ಬಿಟ್ಟರು. ಹೊನ್ನೂರಿನ ಗೌಡರ ಆಕಳೊಂದು ದನ ಕಾಯುವ ಬಾಲಕನ ಕಣ್ಣುತಪ್ಪಿಸಿ ಸರ್ಮಸ್ತ್ ರಿಗೆ ಹಾಲು ಕೊಟ್ಟು ಬರುತ್ತಿತ್ತು. ತಮ್ಮ ಮನೆಯ ಆಕಳು ಸರಿಯಾಗಿ ಹಾಲು ಕೊಡದಿರುವುದಕ್ಕೆ ಕಾರಣ ದನಕಾಯುವ ಬಾಲಕನೆ ಎಂದು ಶಂಕಿಸಿ ಗೌಡರು ಅವನನ್ನು ಹೊಡೆದರು. ಕಡೆಗೆ ಸತ್ಯ ತಿಳಿದ ಗೌಡರು ಅವರನ್ನು ಊರೊಳಗೆ ಕರೆದು ತಂದು ಈಗ ದರ್ಗಾ ಇರುವ ಸ್ಥಳದಲ್ಲಿ ಬಿಟ್ಟು ಗೌರವಾದರಗಳಿಂದ ನೋಡಿಕೊಳ್ಳತೊಡಗಿದರು. ಸರ್ಮಸ್ತ್ ರಿಗೆ ಹಾಲುಕೊಟ್ಟ ಆ ಹಸುವನ್ನು ಅದರ ಸಾವಿನ ನಂತರ ಅವರ ಉಪದೇಶ ಮಂದಿರದ ಸ್ಥಳದಲ್ಲಿಯೇ ಸಮಾಧಿ ಮಾಡಲಾಯಿತು. ಸರ್ಮಸ್ತ್ ರ ಸಮಾಧಿಯನ್ನು ಸಹ ಆ ಹಸುವಿನ ಸಮಾಧಿಯ ಪಕ್ಕದಲ್ಲಿಯೇ ಮಾಡಲಾಗಿದೆ.

ಮೌಖಿಕ ವಿವರಗಳ ಮೂಲಕ ತಿಳಿದು ಬರುವ ಕುತೂಹಲಕರವಾದ ಘಟನೆಯೊಂದು ಹೀಗಿದೆ. ರಾಯದುರ್ಗದ ರಾಜನಿಗೆ ತನ್ನ ರಾಣಿಯಿಂದ ತುಂಬಾ ವರ್ಷಗಳಿಂದ ಮಕ್ಕಳನ್ನು ಪಡೆಯಲಾಗಲಿಲ್ಲ. ಕಡೆಗೆ ಸರ್ಮಸ್ತ್ ರಲ್ಲಿ ಬಂದು ಬೇಡಿಕೊಂಡಾಗ ಅವರು ರಾಜನಿಗೆ ರಾಣಿಯನ್ನು ೪೦ ದಿನಗಳ ಕಾಲದವರೆಗೆ ಅಲ್ಲಿಯೇ ಬಿಟ್ಟು ಹೋಗಲು ಸೂಚಿಸುತ್ತಾರೆ. ಅವರು ಪ್ರತಿದಿನವೂ ಬಾಯಲ್ಲಿ ತಾಂಬೂಲವನ್ನು ಅಗಿದು ಅದನ್ನು ರಾಣಿಗೆ ತಿನ್ನಲು ಕೊಡುತ್ತಿದ್ದರು. ಈ ವ್ರತವು ಫಲಿಸಿ ರಾಣಿಯು ಗರ್ಭಧರಿಸಿ ಗಂಡು ಮಗುವಿಗೆ ಜನ್ಮವಿತ್ತಳು. ಒಮ್ಮೆ ಮಗುವು ತೀವ್ರ ಸ್ವರೂಪದ ಕಾಯಿಲೆಗೆ ತುತ್ತಾಗಿ ಜೀವನ್ಮರಣಗಳ ಮಧ್ಯೆ ಇದ್ದಾಗ ರಾಣಿಯು ಸರ್ಮಸ್ತ್ ರ ಬಳಿಗೆ ತಂದಾಗ ಅವರು ಆ ಮಗುವನ್ನು ಬದುಕಿಸಲು ಒಂದು ಶರ್ತು ಒಡ್ಡುತ್ತಾರೆ. ಮಗುವನ್ನು ಬಾವಿಯೊಳಗಡೆ ಬಿಡುವುದಾಗಿಯೂ ಮತ್ತು ಅದು ಬದುಕಿ ಉಳಿದರೆ ತನಗೇ ಕೊಡಬೇಕೆಂದು ಹೇಳುತ್ತಾನೆ. ಅದರಂತೆ ರಾಣಿಯ ಒಪ್ಪಿಗೆಯ ಮೇಲೆ ಸರ್ಮಸ್ತ್ ರ ಮಹಿಮಾ ಶಕ್ತಿಯಿಂದ ನೀರಲ್ಲಿ ತೇಲಿ ಆ ಮಗು ಬದುಕುಳಿಯಿತು. ಅದನ್ನು ಸರ್ಮಸ್ತ್ ಸಾಕಿ ಸಲುಹಿದನು. ಈಗಲೂ ದರ್ಗಾದ ಉತ್ತರಾಧಿಕಾರಿಗಳು

ರಾಯದುರ್ಗದ ರಾಣಿಯ ವಂಶಸ್ಥರೇ ಆಗಿದ್ದರೂ ಧಾರ್ಮಿಕವಾಗಿ ಮುಸ್ಲಿಂರಾಗಿದ್ದಾರೆ. ಇದನ್ನು ಸ್ವತಃ ದರ್ಗಾದ 'ಸಜ್ಜಾದನಿಶಿನ್ 'ರೇ (ದರ್ಗಾದ ಉತ್ತರಾಧಿಕಾರಿ) ಒಪ್ಪಿಕೊಳ್ಳುತ್ತಾರೆ. ಆ ಮಗುವನ್ನು ಸರ್ಮಸ್ತ್ರಿಗೆ ಕೊಟ್ಟ ಬಳಿಕ ರಾಣಿಗೆ ಮತ್ತೆ ಮಕ್ಕಳಾದುದರಿಂದ ಈ ಮಗುವಿನ ಮೇಲಿನ ಆಸೆ ಬಿಡಲಾಯಿತು.

ಸರ್ಮಸ್ತರು ಮುಸ್ಲಿಮೇತರ ವರ್ಗಗಳಲ್ಲಿ ಗಳಿಸಿದ ಜನಾದರಣೆಯು ಅಪೂರ್ವವಾದುದಾಗಿದೆ. ಈ ಭಾಗದ 'ಮೊಹರಂ'ನ ಸಂಧರ್ಭದ ಮಸೀದಿಗಳಿಗೆ 'ಹೊಸ್ನೂರು ಸ್ವಾಮಿ' ಗುಡಿಗಳೆಂದು ಕರೆಯಲಾಗುತ್ತದೆ. ಕರ್ಬಲಾದ ಬಲಿದಾನದ ವೀರ 'ಹುಸೇನ' ರೊಂದಿಗೆ ಇವರನ್ನು ಹೋಲಿಸಲಾಗುತ್ತದೆ. ಬಹುಶಃ ಇವರ ಹೆಸರಿನ ಹೋಲಿಕೆಯಿಂದಾಗಿಯೇ ಮೊಹರಂಗೂ ಇವರಿಗೂ ಮುಸ್ಲಿಮೇತರರು ಸಂಬಂಧ ಕಲ್ಪಿಸಿರುವಂತಿದೆ. ಸರ್ಮಸ್ತನನ್ನು ಈ ಭಾಗದ ಜನರು ಆರಾಧ್ಯ ದೈವವನ್ನಾಗಿ ಕಂಡಿದ್ದಾರೆ. ಉದಾಹರಣೆಗೆ ಜಾನಪದ ಹಾಡೊಂದರಲ್ಲಿ ಅವರ ವ್ಯಕ್ತಿ ಚಿತ್ರ ಈಕೆಳಗಿನಂತೆ ಮೂಡಿ ಬಂದಿದೆ[15]

ಕೇಳಯ್ಯಾ ಸಿವನೇs ನನ್ನಾಳ್ಳದ ಮರುಳೇs
ಗೂಳ್ಳ ಕ್ಯಾಣೇಗೆ ನೂರಯ್ಯೊ ||
ಹಗರೆ ಗಡ್ಡೆ ಮ್ಯಾಲೆ ಶರುಣ ಬಂದಿಳುದವನು
ಹೊರುವಾದ ಹೊನ್ನೂರು ಸ್ಥಳದಾಗೋs
ಹೊನ್ನೂರಪ್ಪೋ ನಿನದರ್ಗಾದ ಬೈಲೊಳಗೆ
ಸಣ್ಣಾ ವಂಕೀನ ಕೊಲುಬಾಯೋ
ಸಣ್ಣಾವಂಕಿನ ಕೊಲುಬಾಯಿ ಸುತ್ತಾಲ
ಯಾತಾ ಇಕ್ಕೀದರೊಂದೆಲಿದ್ವಾಟೋ
ಯಾವ ತಾಯಿಕ್ಕೀದ ಎಲಿದ್ವಾಟದೂವೋ
ಸಕ್ಕರೆ ಗೌಡ ಕೊಯ್ಕಿ ತಂದಾನೋ
ಸಕ್ಕರೆ ಗ್ವಾನದ ಮರವು
ಸಾರಂಗದ ಕುದುರೇ

ಎಲ್ಲೀ ಗೊನ್ನೂರು ಸ್ವಾಮಿ ನಿಮ ಪಯಣೋ
ದೇಸ ನ್ಯಾಡಲು ಓಗಿ ವಂದಿದನು ಈ ಭೂಮಿ
ಹಿಂಡು ದ್ಯಾವರ ನೆರಿಯ ಗೊಂಡಾನೋಽ
ಹಿಂಡೂ ದ್ಯಾವರ ನೆರಿಯಗೊಂಡ್ಹೊನ್ನೂರು ಸ್ವಾಮಿ
ಸ್ರುಂಗಾರದ ದರ್ಗಾವು ಸೇರ್ಯಾನೋ
ಹಸುರೇ ಮುಂಡಾಸಾದ ಬುಗುರಿ ಗಡ್ಡದಯ್ಯ
ನವುಲಾಟನಾಡುತ ಬರುತಾನೊ
ಬಿಡವೊದೊಂದ್ಹೋತಪ್ಪ ಮಾಡುವುದೊಂದುಟಗರು
ಕಂದೂರಿ ಮಾಡುವರು ಕಡಿಮಿಲ್ಲೋಽ
ಬಿಡವೊದೊಂದ್ಹೋತಪ್ಪ ಮಾಡುವುದೊಂದುಟಗರು
ಕಂದಾನ ಬೇಡುವರು ಕಡಿಮಿಲ್ಲೋಽ
ಬೂದುಗುದುರೇರ್ಯವನು ಭೂಮಿ ನೋಡುತಲ್ಹೋದ
ಸಂತೋಸದ ಮಳಿಗಾಳು ಸುರುದಾವೂ
ನೀಲಗುದುರೇರ್ಯವನು ನಿಂತು ನೋಡುತಲೋದ
ಸುಖವಾದ ಬೆಳಿಗಾಳು ಬೆಳುದಾವೊ
ನಾಡಿ ಊದಿನ ಕಡ್ಡಿ ಸಕ್ಕರಿ ಸಾಂಬ್ರಾಣಿ
ಸತಿಯುಳ್ಳ ಹೊನ್ನೂರಪ್ಪಗ ನಡದಾರೊ
ಬೇವಿನ ಮರಕಿನ್ನ ಬೆನ್ನಾಗಿ ಕುಂತವನು
ಬರುವಾ ಪರುಸಿಗೆ ತಾನೆದುರಾಗ್ಯೊ
ಗ್ಯಾನದ ಮರದಾಗೆ ಮಾಯವಾದೊನ್ಹೂರುಸ್ವಾಮಿ
ದೊರಿಗಾಳು ಕೈಯೆತ್ತಿ ಮುಗುದಾರೊ
ದ್ಯಾವರುಬಂದಾವೊ ಬನ್ನಿರೋ[21]

ಈ ಹಾಡಿನಲ್ಲಿ ಹೊನ್ನೂರು ಸ್ವಾಮಿಯು (ಸರ್ಮಸ್ ಹುಸೇನರು) ಹಗರಿಯದಂಡೆಯ ಮೇಲಿನ ಹೊನ್ನೂರಿಗೆ ಬಂದುದನ್ನು ಹೇಳಲಾಗಿದೆ. ಆತನು ನಂತರದಲ್ಲಿ ಊರೊಳಗೆ ಬಂದು ವಾಸ್ತವ್ಯ ಹೂಡಿದ ಸ್ಥಳ ಮತ್ತು ಮರಣಾನಂತರ ದರ್ಗಾವಾಗಿ ಮಾರ್ಪಟ್ಟ ಸ್ಥಳದ ಬಯಲಿನ ವರ್ಣನೆಯೊಂದಿಗೆ ಎಲೆ ಪೂಜೆ

ಮಾಡುವುದನ್ನು, 'ಗೌಡ' ಸಕ್ಕರೆ ತಂದು ಅರ್ಪಿಸುವುದನ್ನು ಸೂಚಿಸಲಾಗಿದೆ. ತಲೆಗೆ ಹಸಿರು ಮುಂಡಾಸು ಸುತ್ತಿದ್ದ ಗಡ್ಡ ಬಿಟ್ಟ (ಸಾಂಪ್ರದಾಯಿಕ ಮುಸ್ಲಿಂ ಶೈಲಿಯ) ಸರ್ಮಸ್ತರನ್ನು 'ಹಸುರೇ ಮುಂಡಾಸಾದ ಬುಗುರಿ ಗಡ್ಡಯ್ಯ, ನವುಲಾಟ ನಾಡುತ ಬರುತಾನೊ' ಎಂದು ವರ್ಣಿಸಲಾಗಿದೆ. ಅಲ್ಲದೆ ಆತನಿಗೆ ಹರಕೆ ಬಿಟ್ಟು ಕಂದೂರಿ ಮಾಡಿ 'ಸಂತಾನ'ವನ್ನು ಬೇಡುತ್ತಾರೆಂದು ಈ ಹಾಡು ವಿವರಿಸುತ್ತದೆ.

ಬಾಬಾ ಫಕ್ರುದ್ದೀನ್ ರು ದಕ್ಷಿಣದಲ್ಲಿ ಗೇಸುದರಾಜರ ನಂತರ ಅವರಷ್ಟೇ ಪ್ರಭಾವಶಾಲಿಯಾದ ಸಂತರಾಗಿದ್ದಾರೆ. ಇವರು ಇರಾಕ್ ನ 'ಶಿಸ್ತಾನ್ 'ಎನ್ನುವ ರಾಜ್ಯದ ರಾಜರಾಗಿದ್ದರು. ಜಗತ್ತಿನಲ್ಲಿ ಪ್ರೀತಿ ,ಮಾನವೀಯತೆ ಕರುಣೆ ಮುಂತಾದ ಮೌಲ್ಯಗಳು ಅಪಮೌಲ್ಯಕ್ಕೀಡಾದ ಬಗೆಗೆ ತುಂಬಾ ಆತಂಕಗೊಂಡು ಸಿಂಹಾಸನವನ್ನು ತೊರೆದು ಸೂಫಿಗಳಾದರು ಎಂದು ಹೇಳಲಾಗುತ್ತದೆ. ಇನ್ನೊಂದು ಮೂಲದ ಪ್ರಕಾರ ತಿಳಿದು ಬರುವಂತೆ ಫಕ್ರುದ್ದೀನರನ್ನು ಅವರು ತಮ್ಮ ಸಿಂಹಾಸನದಿಂದ ಪದಚ್ಯುತಗೊಳಿಸಿದುದರಿಂದಾಗಿ ಸಂತನಾದುದಾಗಿ ತಿಳಿದು ಬರುತ್ತದೆ.ಫಕ್ರುದ್ದೀನರು ಪಶ್ಚಿಮ ಕರಾವಳಿಯ ಮುಖಾಂತರ ದಕ್ಷಿಣ ಭಾರತವನ್ನು ಪ್ರವೇಶಿಸಿರುವಂತಿದೆ. ದಕ್ಷಿಣ ಕನ್ನಡದ ಬಂಟ್ವಾಳ ತಾಲೂಕಿನಲ್ಲಿ 'ಅಜಿಲ' ದೊರೆಗಳು ಅವರಿಗೆ ಮಸೀದಿಯೊಂದನ್ನು ಕಟ್ಟಿಸಲು ಸಹಾಯ ಮಾಡಿದರು. ಅಲ್ಲಿಂದ ಪೆನುಗೊಂಡಗೆ ಬಂದ ಬಾಬಾ ಅವರು ತಮ್ಮ ಅನುಯಾಯಿಗಳೊಂದಿಗೆ 'ಇಸ್ಲಾಂ' ಹರಡಲು ಶ್ರಮಿಸಿದರು.[೩೮]

ಇವರ ಕುರಿತಾಗಿ ತಿಳಿದು ಬರುವ ದಂತ ಕಥೆಯೊಂದರ ಪ್ರಕಾರ ಪೆನುಗೊಂಡೆಗೆ ಬಂದ ಬಾಬಾ ಅವರು ದೇವಸ್ಥಾನವೊಂದರಲ್ಲಿ ವಾಸ್ತವ್ಯ ಹೂಡಿದರು. ಸ್ಥಳೀಯ ರಾಜನಿಗೆ ಅವರು ತನ್ನ ರಾಜ್ಯಕ್ಕೆ ಬಂದುದು ಇಷ್ಟವಾಗಲಿಲ್ಲ . ಆದರೂ ರಾಜನಿಗೆ ದೇವಸ್ಥಾನದ ಪೂಜಾರಿ ಮತ್ತು ಫಕ್ರುದ್ದೀನ್ ಇವರಲ್ಲಿ ಯಾರು ಹೆಚ್ಚಾಗಿ ದೈವಿಕ ಶಕ್ತಿ ಉಳ್ಳವರೆಂಬುದನ್ನು ಪರೀಕ್ಷಿಸುವ ಬಯಕೆಯಾಯಿತು. ಎಲ್ಲ ಪರೀಕ್ಷೆಗಳಲ್ಲಿ ಫಕ್ರುದ್ದೀನರೆ ವಿಜಯಿಗಳಾದರು. ಕಡೆಗೆ ರಾಜನು ಪೂಜಾರಿ ಮತ್ತು ಫಕ್ರುದ್ದೀನರನ್ನು ಕೈಕಾಲು ಕಟ್ಟಿ ಕೆರೆಯೊಳಗೆ ಎಸೆಯುವಂತೆ ಆಜ್ಞಾಪಿಸಿದರು. ಪೂಜಾರಿಯು ಕೆರೆಯಲ್ಲಿ ನಾಪತ್ತೆಯಾದರೆ ಫಕ್ರುದ್ದೀನರು ತಮ್ಮ ಮಹಿಮಾ ಶಕ್ತಿಯಿಂದ ಮೇಲೆದ್ದು ಬಂದರು. ಇದರಿಂದ ಪ್ರಭಾವಿತನಾದ ರಾಜ ಮುಸ್ಲಿಂನಾಗಿ ಪರಿವರ್ತಿತನಾದ. ಉಳಿದ

ರಾಜನ ಅನುಯಾಯಿಗಳು ಸಹ ಮತಾಂತರಗೊಂಡರು.[೫] ಈ ಐತಿಹ್ಯ ಹೇಗೇ ಇರಲಿ, ಒಂದಂಶವಂತೂ ಸ್ಪಷ್ಟ .ದಕ್ಷಿಣದಲ್ಲಿ ವಿಶೇಷವಾಗಿ ನೇಕಾರರು ದೂದೇಕುಲ (ಪಿಂಜಾರರು) ಜನಾಂಗದವರು ಬಾಬಾಫಕ್ರುದ್ದೀನರಿಂದಾಗಿ ಮತಾಂತರಗೊಂಡವರೆಂಬುದಾಗಿ ತಿಳಿದುಬರುತ್ತದೆ.

೨.೩ ಸೂಫಿ ಮಾದರಿಯ ಸಂತರು ಮತ್ತು ತತ್ವಪದಕಾರರು

ಹದಿನೇಳು, ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ಕಂಡು ಬರುವ ಈ ಬಗೆಯ ಸಂತರು, ಆಧ್ಯಾತ್ಮಿಕ ವರ್ಗಗಳು ಸ್ವರೂಪದಲ್ಲಿ ಭಕ್ತಿಪಂಥವನ್ನು ಹೋಲುತ್ತಿದ್ದರೂ ಸಂಘಟನಾತ್ಮಕವಾಗಿ ಅವು ಭಕ್ತಿಪಂಥಗಳಷ್ಟು ವ್ಯಾಪಕತೆ ಪಡೆಯಲಿಲ್ಲ. ತಾತ್ವಿಕವಾಗಿ ಸೂಫಿಗಳಿಗೆ ಹೆಚ್ಚು ಹತ್ತಿರವಾದರೂ ಸೂಫಿಗಳೆಂದು ಇವರನ್ನು ಕರೆಯಲಾಗುವುದಿಲ್ಲ. ಏಕೆಂದರೆ ಸಾಂಪ್ರದಾಯಿಕವಾಗಿ ಸೂಫಿಗಳಾದವರು ಇಸ್ಲಾಂನ ದೀಕ್ಷೆ ಪಡೆದಿರಬೇಕಲ್ಲದೆ ಶರೀಯತ್ತನ್ನು ಪಾಲಿಸುತ್ತಿರಬೇಕಾಗುತ್ತದೆ.

ಇಲ್ಲಿ ವಿಶ್ಲೇಷಣೆಗೆ ಆರಿಸಿಕೊಂಡಿರುವ ಕೆಲವು ತತ್ವಪದಕಾರರು ಮುಸ್ಲಿಂರಾದರೂ ಅವರ್ಯಾರೂ ಸೂಫಿಜಂನ ಅರ್ಥಪೂರ್ಣ ಕಾಲಘಟ್ಟದಲ್ಲಿದ್ದವರಲ್ಲ. ಆದರೂ ಅವರು ಸೈದ್ಧಾಂತಿಕವಾಗಿ ಮತ್ತು ಆಚರಣಾತ್ಮಕವಾಗಿ ಸೂಫಿಗಳನ್ನು ಹೋಲುತ್ತಿದ್ದರು. ಅಂತಹ ಸೂಫಿ ಮಾದರಿಯ ಸಂತರಲ್ಲಿ ಪ್ರಾತಿನಿಧಿಕವಾಗಿ ಕೆಲವರನ್ನು ನೋಡಬಹುದು. ತಿಂಥಿಣಿ ಮೋನಪ್ಪಯ್ಯ, ವೀರಬ್ರಹ್ಮೇಂದ್ರಸ್ವಾಮಿ ಪೋತಲೂರಿ ಮತ್ತು ೧೯ನೆಯ ಶತಮಾನದ ಮುಸ್ಲಿಂ ತತ್ವ ಪದಕಾರರಾದ ಅಲ್ಲೀಪೀರ್ ಸಾಹೇಬ್, ಸಾಯಿಬಣ್ಣ ತಾತನವರನ್ನು ಗಮನಿಸಬಹುದು. ಮೊದಲಿಗೆ ತಿಂಥಿಣಿ ಮೋನಪ್ಪಯ್ಯನ ಬಗೆಗೆ ಪರಿಶೀಲಿಸಬಹುದು.

೧೭ನೆಯ ಶತಮಾನದಲ್ಲಿದ್ದ ಮೋನಪ್ಪಯ್ಯನವರು 'ಇಸ್ಲಾಂ'ನ ದಟ್ಟ ಪ್ರಭಾವಕ್ಕೊಳಗಾಗಿ ತನ್ನ ಸಂತತನ ಮತ್ತು ಉಪದೇಶಗಳಿಂದಾಗಿ ಪ್ರಖ್ಯಾತರಾದರು. ಕಮ್ಮಾರರ ಕುಟುಂಬದಲ್ಲಿ ಜನಿಸಿದ ಮೋನಪ್ಪಯ್ಯ ವರ್ಣವ್ಯವಸ್ಥೆಯ ತಾರತಮ್ಯಕ್ಕೆ ವಿರುದ್ಧವಾಗಿ ವಚನಗಳ ಮತ್ತು ಸೂಫಿಜಂನ ಆಧಾರಗಳ ಮೂಲಕ

ಜ್ಯಾತ್ಯಾತೀತ ಸ್ವರೂಪದ ಬಗೆಗೆ ಪ್ರಸ್ತಾಪಿಸುತ್ತಾರೆ. ಅವರು ಸ್ವರೂಪದಲ್ಲಿ ಏಕದೇವೋಪಾಸನೆ, ವರ್ಣ, ವರ್ಗರಹಿತ ಆಶಯುಗಳನ್ನು ಹೊಂದಿದೆವಚನ'ಗಳ ಮತ್ತು 'ಇಸ್ಲಾಂ'ನ ಉಪದೇಶಗಳತ್ತ ಆಕರ್ಷಿತರಾಗಿರುವುದೂ ಸಹ ಇದನ್ನೇ ಸ್ಪಷ್ಟ ಪಡಿಸುತ್ತದೆ. ಇಸ್ಲಾಂನ ಪ್ರವೇಶ, ರಾಜ್ಯಶಾಹಿ, ಸೂಫಿಗಳ ಆಧ್ಯಾತ್ಮಿಕ ಪ್ರಭಾವಗಳ ವಿಕಾಶಶೀಲ ಪರಂಪರೆಯಲ್ಲಿ ಜ್ಯಾತ್ಯಾತೀತ ಸಮಾಜದ ಧ್ವನಿಯಾಗಿ ಮೋನ ಪ್ರಯ್ಯನಂತಹವರು ಅರ್ಥಪೂರ್ಣ ಅಭಿವ್ಯಕ್ತಿಯಾಗಿ ಗೋಚರಿಸುತ್ತಾರೆ. ಇಲ್ಲಿ ಸ್ಪಷ್ಟವಾಗಿ ಮುಸ್ಲಿಂ ಮತ್ತು ಮುಸ್ಲಿಮೇತರ ವರ್ಗಗಳ ಸಾಂಸ್ಕೃತಿಕ ಅಂತಃಸಂಬಂಧಗಳ ಹೊಳಹುಗಳು ದೊರೆಯುತ್ತಿದ್ದು, ಅಂತಹ ಸ್ಥಿತಿಯೊಂದನ್ನು ಮೋನಪ್ಪಯ್ಯನವರು ಸಮರ್ಥವಾಗಿ ಪ್ರತಿನಿಧಿಸುತ್ತಿದ್ದರು. ಮೋನಪ್ಪಯ್ಯನವರ ಜ್ಯಾತ್ಯತೀತ ಗುಣ, ದೈವತ್ವದ ಪರಿಕಲ್ಪನೆ ಮತ್ತು ಆಧ್ಯಾತ್ಮಿಕ ಸ್ವರೂಪವನ್ನು ವಿವರಿಸುವ ಷಡ್ ಸ್ಥಲದ ವಚನವೊಂದು ಹೀಗಿದೆ.

ಓಂ ಪರಮಗುರು ನಿರಂಜನ ನಿರಾಕಾರ
ಪರಂಜ್ಯೋತಿ ಜಗದಗುರು ರಾಜಾಧಿರಾಜ ಮಹಾರಾಜ
ಪರಬ್ರಹ್ಮ ಅಖಿಳಾಂಡಕೋಟಿ ಬ್ರಹ್ಮಾಂಡನಾಯಕ
ಶ್ರೀ ಪರಶಿವ ವಿಶ್ವಬ್ರಹ್ಮಸರ್ವಜ್ಞ ನಿರಂಜನ ಉದ್ಭವಮಸ್ತು
ಶ್ರೀ ಮತ್ಪತಿಹಸ್ತ ದೇವತಾಲೋಕ ವಿಸ್ತಾರಕ ತ್ರಿಭುವನ ನಿರ್ಮಿತಾಕಾರ
ಶ್ರೀ ಪರಂಜ್ಯೋತಿ ಅಲಂಕಾರ ಅನಂತವೇದ ಶಬ್ದಶಾಸ್ತ್ರಪುರಾಣ
ಪಾರಾವಾರ ಗಂಭೀರ ಧೀರ ಧೀರೋದ್ಧರಣ ಜಗತ್ ಹಿತಕಾರಣ
ತ್ರೈಲೋಕ್ಯನಿರ್ಮಿತಾಧಾರ ಅಂಡಜಪಿಂಡಜ ಸ್ವೇದಜ ಉದ್ಭಿಜ ನಿರ್ಮಿತ
ಅತಳ ವಿತಳ ಸುತಳ ಸ್ಥಳಾಸ್ಥಳ ಮಹಾಸ್ಥಳ
ಪಾತಾಳಸ್ಥಳ ಭೂಲೋಕ ಭವಲೋಕ ಸುರಲೋಕ ಜನಲೋಕ
ಮಹಾಲೋಕ ತಪಲೋಕ ಸತ್ಯಲೋಕ
ಈ ಚತುರ್ದಶ ಭುವನ ನಿರ್ಮಿತಾಧಾರ
ಪೃಥ್ವಿ ಅಪ್ ತೇಜ ವಾಯು ಆಕಾಶ ಪಂಚಭೂತ
ಬ್ರಹ್ಮಾಂಡ ನಿರ್ಮಿತ ಸ್ಥಾಪನಾಚಾರ್ಯ ಶ್ರೀ ಪರಶಿವವಿಶ್ವಬ್ರಹ್ಮ

ಪಟ್ಟದ ಮೋನಪ್ಪಯ್ಯ ವೀರ ಬಸವಂತರಾಯ ಜಗದ್ಗುರು
ರಾಜಾಧಿರಾಜ ಶ್ರೀ ಓಂಕಾರಗುರುವೇ ನಮಃ
ಏಹೋ ಪಾಚೋ ಪೈಗಂಬರು ಮಲ್ಕುಸುಲ್ತಾನ
ಮನುಕಾ ಘರ ಲಂಕಾ ಮಯಕಾ ಘರ ದ್ವಾರಕಾ
ತ್ವಷ್ಟಿಕಾ ಘರ ಕಾಶಿ ಶಿಲ್ಪಿಕಾ ಘರ ಅಮರಾವತಿ
ವಿಶ್ವಜ್ಞಕಾ ಘರ ಮೇರು ಚಕ್ರವರ್ತಿ
ಆವಲು ಅಯಾನ ಘರ ದಾವತು ಪೈಗಂಬರುಲ್ವಹಕೀನ್ ಘರ್ ದಾವತ ಪೈಗಂಬರ
ಬಡಾಯಿ ಮುಸೆ ದಾವತ ಪೈಗಂಬರಕಾ ಸಾರಾ
ಶುಲೇಮಾನ ದಾನತ್ ಪೈಗಂಬರ ಸಂಗತರಾಸ ಜಗದ್ಗುರು ದಾವತು ಪೈಗಂಬರ
ಸುನಾರ ಏಹೋ ಪಾಚೋ ಪೈಗಂಬರ ಮಲ್ಕರಲುಕಮಾನ ಹಕೀಮವೊಹಿ ಆಯಾ
ಹೈ ವೊಹಿ ಹಿಂದು ವೊಹಿ ಮುಸಲ್ಮಾನ ಏಹೋ ಪಾಚೋ ಪೈಗಂಬರ ಮೌನೋದ್ದೀನ್
ಓಂಕಾರ ಪರಬ್ರಹ್ಮ ಜಗದ್ಗುರು
ದೇವದುರ್ಗಕ್ಕೆ ಪ್ರಭು ಬರುವುದೇ ಸಹಜ
ಸಾಹೇಬರ ಸಭೆಯವರು ತಿಳಿದಿರಬೇಕು
ಹಾವಳಿ ಬರುವುದನರಿದು ಕಾಯ್ವಾತನೆ ಜಗದ ಕರ್ತ
ಅಲ್ಲಮಪ್ರಭುವಿನ ಸೊಲ್ಲೆಲ್ಲ ಒಂದೆ.
ಅಲ್ಲ ಹೌದೆನಿಸಲಿಲ್ಲ ಧರ್ಮಕ್ಕೆ
ಮುಲ್ಲಾ ಮಹಮ್ಮದನಾಗಿ ಬರುತ್ತಾನೆ
ಆವಾಗ ದಿಲ್ಲಿ ಮಸೂತಿ ನಿಜಪಟ್ಟಾ
ಮಕಾರವೆ ಮುಡದಾರ ಲೆಕ್ಕಕ್ಕೆ ಹಲಾಲ
ಅಕ್ಕನಾಗಲಿಯ ಚಿಕ್ಕ ಚೆನ್ನಬಸವಣ್ಣಾ
ಅರ್ಕಸಾಲೆಯರ ಒಡಲೊಳು ಜನಿಸಿ
ರಕ್ಷಿಸುವ ಕರ್ತನಾಗಿ ಬರುತ್ತಾನೆ
ಕರ್ತರಿಗೆ ಒಕ್ಕಲಾದವರು ಉಳಿದಾರು
ಸೊಕ್ಕಿದವರು ಅಳಿದಾರ ಕಕ್ಕಯ್ಯನಾಣೆ ಸಟೆಯಲ್ಲ
ಹೇಳಲಿಕ್ಕೂ ಕೇಳದವರಿಗೆ ಮಿಗೆ ಮೀರಿದವರಿಗೆ

ಮೀರಾಸಾಹೇಬನ ಆಣೆ ಆಜ್ಞೆ ಹತ್ತು ಕೇಳಬೇಕು.
ತತ್ವವ ತಿಳಿಯಬೇಕು.
ದು:ಶ್ಚಿಂತಿ ಹಿಡಿಯಬೇಡಿರಿ ನಿಶ್ಚಿಂತಿ ಹಿಡಿಯಿರಿ
ಆಕಾರವು ಗುರುವಲ್ಲ ನಿರಾಕಾರವೇ ಗುರು
ಗುರುವಿನ ಗುರುವು ಪರಮಗುರು ಫಕೀರಪ್ರಧಾನಿ
ಸೈಯ್ಯದ ಖಾಜಿ ಮೌನಧೀನ ಅಮೀನಖಾಜಿ ಮೌನಧೀನ
ಅವಲ್ಲಾದಿ ಆತ್ಮನಬಿ ಮಹಾನಬಿ
ಸಬೀರುಹ ಮುಸನ್ನಬಿ ಮೊಹಮ್ಮದಕಾತ್ಮನ್ನಬಿ
ಕಲಿಮುಲ್ಲಾ ಮುಸನ್ನಬಿ ಮೊಹಮ್ಮದಕಾತ್ಮನ್ನಬಿ
ಅವಲ ಮೌನದೀನ ಅವಲಧೀನ್ ಅಖೈರಧೀನ ಬಖೈರಧೀನ್
ಧೀನ್ ಧೀನ್ ಮೊಹಮ್ಮದರ ಜೀತಪೀರ ಮೌನಧೀನ
ಹಮೇಷ ಡಂಬಾಬಜಾದಾವದ್ದವಲ್ ಪೈಗಂಬರ ಸುಲೇಮಾನ್
ಪೈಗಂಬರ ಈಸಾಪೈಗಂಬರ್
ಮುಸೇಪೈಗಂಬರ್ ಸರ್ವರ ಪೈಗಂಬರ್ ಕಲೀಂದ್ರ ಬಾದಶಹ
ಆಕಾಶವೆ ಡಂಕಾ ಕೈಲಾಸವೆ ವಲಿ
ಸೂರ್ಯಚಂದ್ರಾದಿಗಳು ತಮ್ಮ ಆಲಯಕ್ಕೆ ಬಂದವರು
ದೇವರು ರಾಯರು ಪಂಚೈವರು ಅರದೇಶಿ, ಪರದೇಶಿ, ಜೋಗಿ, ಜಂಗಮ
ಮುಲ್ಲಾಖಾಜಿ ಊರಗೌಡ ಸರನಾಡಗೌಡ
ಶಾನಭೋಗ ಸಬನೀಸ ಸಭೀ ಟೂಟಕರನಾ

ಅಲಿಮುಲ್ಕ ಸುಲ್ತಾನ ಆದ್ಮೀಕಾ ಹಾತಪಕಡ್ನಾ
ಕೌಲ ಚಲ್ನಾ ಮುಲ್ಕ ಛಪ್ಪನ್ನ ರಾಜನ್ ಪೋಟದೇಣಾ
ಕರ್ಮಕಂಟಕ ದೂರ ಹೋಣಾ
ಹಾಥಿ ಪರಡಾಲೆ ಚಲ್ನಾ ಖಾಜಿ ಅಮೀನಧೀನ
ಹಿಂದುವಲೀ ಆತ ಹೈ ರಸೂಲಿಲ್ಲಾ ಮೊರೆ ಕಮಚಿ
ತೋಡೇಕುಫರ ಮೌನದೀನ ಅಲೇವು ಸಲಾಮ್[10]

ಈ ವಚನವು ಸ್ಪಷ್ಟಪಡಿಸುವಂತೆ ಮೋನಪ್ಪಯ್ಯನು ಸೂಫಿಜಂನ ದಟ್ಟವಾದ ಪ್ರಭಾವಕ್ಕೊಳಗಾಗಿದ್ವನಲ್ಲದೆ, ಅಲ್ಲಮ ಪ್ರಭುವಿಗೂ ಮಹಮ್ಮದ್ ಪೈಗಂಬರರಿಗೂ ಸಾಮ್ಯವನ್ನು ಗುರುತಿಸಿದ್ದಾನೆ. ಮುಂದೆ ಗುರುವಿನ ಗುರುವು ಪರಮಗುರು ಫಕೀರ ಪ್ರಧಾನಿ ಸೈಯದ ಖಾಜಿ ಮೌನಧೀನ ಅಮೀನ ಖಾಜಿ ಮೌನಧೀನ, ಎಂದು ಸ್ಮರಿಸುವಲ್ಲಿ ಗುರುವಿನ ಪ್ರಸ್ತಾಪವಿದೆ. ಹದಿನೇಳನೆಯ ಶತಮಾನದಲ್ಲಿ ಬಿಜಾಪುರದಲ್ಲಿದ್ದ ಸೂಫಿ'ಅಮೀನುದ್ದೀನ್ ಅಲಾ' ಅವರು ಮೋನಪ್ಪಯ್ಯನ ಗುರುಗಳಾಗಿರುವುದನ್ನು ಇದು ಸೂಚಿಸುತ್ತದೆ. ಗುರುವಿನ ಗುರುವು ಪರಮಗುರುವು ಅಮೀನಖಾಜಿ ಎಂದಿರುವುದು ಇದನ್ನು ಸ್ಪಷ್ಟ ಪಡಿಸುತ್ತದೆ. ಅಲ್ಲದೆ ಮೋನಪ್ಪಯ್ಯನೊಂದಿಗೆ ಶಿರಹಟ್ಟಿ ಫಕೀರೇಶ್ವರರು ಸಹ ಅಮೀನನ ಸಮಕಾಲೀನರೇ ಆಗಿದ್ದು ಫಕೀರೇಶ್ವರರು ಸಹ ಅವರ ಶಿಷ್ಯರಾಗಿದ್ದುದನ್ನು ಗಮನಿಸಬಹುದು. ಮೋನಪ್ಪಯ್ಯನ ಧಾರ್ಮಿಕ ಪರಿಭಾವನೆಗಳ ಜೊತೆಗೆ ಆತನ ಶಿಷ್ಯಕಾವ್ಯವೊಂದರಲ್ಲಿ ವಿವರಿಸುವಂತೆ ಆತನು ನೋಡಲು ಫಕೀರ, ಜಂಗಮನಂತೆ ಎರಡು ರೀತಿ ತೋರುತ್ತಾನೆ.

ಕರದಿ ಕೊಡಲ್ಯಾತಕ್ಕೆ ಮೆರೆವುತ್ತಲಿರ್ಪನು
ಗೊರವ ಫಕೀರ ಜಂಗಮನು
ಅರಿಯದವರು ನಿಮ್ಮಿ‌ಪರಿಬ್ಯಾರೆಯ್ಯಾಗಿರೆ
ಅರಿಯ ಬೇಕೆಂದು ಕೇಳಿದೆವು[17]

ಇಲ್ಲಿನ ಪದ್ಯದ ಕವಿಗೆ ಮೋನಪ್ಪಯ್ಯನು ವಿಶಿಷ್ಟವಾಗಿ ಮತ್ತು ಭಿನ್ನವಾಗಿ ಗೋಚರಿಸುತ್ತಾನೆ. ಅವನು ಫಕೀರ, ಗೊರವ, ಜಂಗಮನಂತೆ ಕಾಣುಸುತ್ತಾನೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಮೋನಪ್ಪಯ್ಯನು ಪ್ರತಿನಿಧಿಸುವ ಆಧ್ಯಾತ್ಮಿಕ ಪಂಥವು ವಿಶಿಷ್ಟ ಬಗೆಯದಾಗಿದ್ದು ಅದು ಇಸ್ಲಾಂ ಮತ್ತು ಹಿಂದೂ ಪ್ರಭಾವಗಳೆರಡನ್ನು ರೂಡಿಸಿ ಕೊಂಡು ತನ್ನ ಮಿತಿಯಲ್ಲಿಯೇ ಅದು ವೈದಿಕ ಸಾಂಪ್ರದಾಯಿಕತೆಗೆ ಪ್ರತಿರೋಧವಾಗಿದ್ದುದಾಗಿತ್ತು. ಭಾರತದಲ್ಲಿ ಇಸ್ಲಾಂ ನತ್ತ ಆಕರ್ಷಿತರಾದವರಲ್ಲಿ ವಿಶೇಷವಾಗಿ ಕೆಳವರ್ಗಗಳ ನೇಕಾರರು, ಕುಶಲ ಕರ್ಮಿಗಳು ಮುಖ್ಯರಾಗಿದ್ದಾರೆ. ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿರುವ ಸೂಫಿ

[illegible]

[illegible]

[illegible]

ಮಾದರಿಯ ಸಂತರು, ತತ್ವಪದಕಾರರು ಬಹುತೇಕ ನೇಕಾರ ಮತ್ತು ಕುಶಲ ಕರ್ಮಿ ವರ್ಗದವರಾಗಿರುವುದು ವಿಶೇಷವಾಗಿದೆ. ಈ ವರ್ಗಗಳು ಮೂಲತಃ ಧಾರ್ಮಿಕವಾಗಿ ಅಸಂಘಟಿತವಾದವುಗಳಾಗಿದ್ದು ಉಚ್ಚವರ್ಣದ ದೃಷ್ಟಿಯಲ್ಲಿ ನಿರ್ಲಕ್ಷ್ಯಕ್ಕೊಳಗಾದವುಗಳಾಗಿದ್ದವು. ಇಂತಹ ಉಚ್ಚವರ್ಣಗಳ ಧಾರ್ಮಿಕ ಡಾಂಬಿಕತೆಯನ್ನು ವಿರೋಧಿಸುವಲ್ಲಿ ಇವರು ಪರಿಣಾಮಕಾರಿಯಾಗಿ ಇಸ್ಲಾಂ ಅನ್ನು ಬಳಸಿಕೊಂಡರು.

ಮೋನಪ್ಪಯ್ಯನವರ ವಚನಗಳಿಂದ ಈ ಮೇಲಿನ ಅನ್ನಿಸಿಕೆ ಸ್ಪಷ್ಟಗೊಳ್ಳುತ್ತದೆ. ಉದಾಹರಣೆಗೆ

ಡಾಂಬಿಕದ ವೇದವು ದೊಂಬಿಯ ಶಾಸ್ತ್ರವು
ನಂಬುಗೆಯಿಲ್ಲದೆ ಹಿಡಿದುಕೊಂಡು
ಅಂಬಿಗನೆಂದು ಎನಲಾರೆ ಸಕಲವು
ಕುಂಬಾರ ಮನೆಯ ಮಡಿಕೆಯ ಮಾಡಿಟ್ಟ ಸಂಭ್ರಮವು ಬಸವಣ್ಣ"[೪೧]

ಎನ್ನುವ ಈ ವಚನವು ವೈದಿಕ ಮೂಲದ ತಾತ್ವಿಕತೆಯನ್ನೇ ಪ್ರಧಾನವಾಗಿಟ್ಟುಕೊಳ್ಳದೆ ಬದುಕು ಕಲಿಸುವ ವಿಚಾರಗಳಿಗೆಮಹತ್ವ ನೀಡುತ್ತದೆ. ಮತ್ತೊಂದು ವಚನದಲ್ಲಿ ಮೋನಪ್ಪಯ್ಯನವರು

ವೇದಶಾಸ್ತ್ರಗಳ್ಯಾಕೆ? ವಾದತರ್ಕಗಳ್ಯಾಕೆ?
ಕಾದಡಲ್ಯಾಕೆ? ಕುಲಛಲಕೆ ! ಲೋಕದ
ಮಾದಿಗರ ಹಾಗೆ ಇರಬೇಕು ಬಸವಣ್ಣ"[೪೨]

ಎಂದು ಜೀವನ ವಿಧಾನವನ್ನು ನಿರ್ದೇಶಿಸುತ್ತಾರೆ. ಇಲ್ಲಿ ಮೋನಪ್ಪಯ್ಯನವರು 'ಲೋಕದ ಮಾದಿಗರ' ಹಾಗೆ ಇರಬೇಕೆಂದುಹೇಳುವಲ್ಲಿ ಧಾರ್ಮಿಕತೆಯ ಕಟ್ಟು ಪಾಡುಗಳು ಧಾರ್ಮಿಕ ಗ್ರಂಥಗಳು ಎಲ್ಲವನ್ನೂ ಮೀರಿದ ಬದುಕಿನ ಸಹಜತೆಯ ಬಗೆಗೆ ಹೇಳುತ್ತಾರೆ. ಇಂತಹ ದೃಷ್ಟಿಕೋನದ ಮೋನಪ್ಪಯ್ಯನವರು ಎಲ್ಲ ಜಾತಿ, ವರ್ಣಗಳನ್ನು ಸಮಾನವಾಗಿ ಕಂಡರು.

ಹಿಂದು ತುರುಕರಿಗೆ ಒಂದಾಗಿ ನಡೆದಾರು
ದೀನ್ ದಾರ್ ಬಸವಣ್ಣ ಬರುವಾಗ
ಅಂಧಕರಿಗೇನು ತಿಳಿಯದು ಬಸವಣ್ಣಾ

ಎಂದು ವಚನವೊಂದರಲ್ಲಿ ದೀನ್ ದಾರ್ ಬಸವಣ್ಣ ಎನ್ನುವವರ ಬಗೆಗೆ ವಿವರಿಸುತ್ತಾ ಅವರ ಪ್ರಭಾವಿದಿಂದಾಗಿ ಎಲ್ಲರೂ ಪರಸ್ಪರ ಸೌಹಾರ್ಧಯುತವಾಗಿ ಬಾಳುತ್ತಾರೆ ಎಂದಿದ್ದಾರೆ. ಹೈದರಾಬಾದ್ ಕರ್ನಾಟಕದೆಡೆ ಹಜರತ್ ಮೌಲಾನಾ ಸಿದ್ದಿಕ್ ಎನ್ನುವಂತಹ ತಾವು ದೀನ್ ದಾರ್ ಚೆನ್ನಬಸವಣ್ಣನ ಅವತಾರವೆಂಬುದಾಗಿ ಪ್ರತಿಪಾದಿಸಿ 'ದೀನ್ ದಾರ್ ಬಸವ ಸಮಾಜ' ಎನ್ನುವ ಆಧ್ಯಾತ್ಮಿಕ ಪಂಥವೊಂದನ್ನು ಹುಟ್ಟಿ ಹಾಕಿದ್ದಾರೆ ವಿವರಗಳಿಗೆ ಅನುಬಂಧ ನೋಡಿ). ಹೀಗೆ ಮೋನಪ್ಪಯ್ಯನು ಮುಸ್ಲಿಂ, ಮುಸ್ಲಿಮೇತರ ಸಮುದಾಯಗಳನ್ನು ಧಾರ್ಮಿಕವಾಗಿ ಹತ್ತಿರ ತಂದಿದ್ದದಲ್ಲದೆ ಆ ಮೂಲಕ ಅವುಗಳ ಸಾಂಸ್ಕೃತಿಕ ಸಮನ್ವಯಕ್ಕೆ ಪ್ರಾತಿನಿಧಿಕ ಅಭಿವ್ಯಕ್ತಿಯಾಗಿದ್ದರು.

ಈ ನಿಟ್ಟಿನಲ್ಲಿ ಮುಖ್ಯವಾಗಿ ಹೆಸರಿಸಬೇಕಾದ ಮತ್ತೊಬ್ಬ ಸಂತರೆಂದರೆ ಪೋತಲೂರಿ ವೀರಬ್ರಹೇಂದ್ರ ಸ್ವಾಮಿಗಳು. ವೀರಂಬೊಟ್ಲಯ್ಯ ಎಂಬ ಮೂಲ ಹೆಸರಿನ ಇವರಿಗೆ ತಮ್ಮ ಆಧ್ಯಾತ್ಮಿಕ ಸಾಧನೆಯ ಕುರುಹಾಗಿ ವೀರಬ್ರಹ್ಮೇಂದ್ರ ಸ್ವಾಮಿಗಳೆಂಬ ಹೆಸರು ಬಂದಿರುವಂತಿದೆ. ಹದಿನೇಳನೆಯ ಶತಮಾನದಲ್ಲಿದ್ದ ಇವರೂ ಸಹ ಸೂಫಿ ಮಾದರಿಯ ಸಂತರಾಗಿದ್ದು ಇವರು ಪ್ರತಿಪಾದಿಸುವ ಆಧ್ಯಾತ್ಮಿಕ ಪಥ, ಆಧ್ಯಾತ್ಮಿಕ ಸಾಧನೆಯ ವಿವಿಧ ಹಂತಗಳು ಸೂಫಿಜಂನ ಅನುಭಾವದಂತೆಯೇ ಇದ್ದು ಬಹುಶಃ ಅದರಿಂದ ಪ್ರಭಾವಿತಗೊಂಡಿರಬೇಕು.

ಇವರ ಕಾಲಜ್ಞಾನ ವಚನಗಳು ತೆಲುಗಿನಲ್ಲಿ ಅತ್ಯಂತ ಜನಪ್ರಿಯವಾದ ಸಾಹಿತ್ಯಿಕ ಪ್ರಕಾರವಾಗಿದ್ದು ಇವು ಈಗಲೂ ಈತನ ಪ್ರಭಾವವನ್ನು ಸ್ಪಷ್ಟಗೊಳಿಸುತ್ತವೆ. ಜಾತಿಯಿಂದ ವಿಶ್ವಕರ್ಮರಾದ ವೀರಬ್ರಹ್ಮೇಂದ್ರ ಸ್ವಾಮಿಗಳಿಗೂ ಮತ್ತು ಮೋನಪ್ಪಯ್ಯನವರಿಗೂ ಹಲವಾರು ಸಾಮ್ಯಗಳಿವೆ. ಇಬ್ಬರೂ 'ಇಸ್ಲಾಂ' ಅನ್ನು

ಪರ್ಯಾಯವಾಗಿಟ್ಟುಕೊಂಡು ಧಾರ್ಮಿಕ ವಿಚಾರಗಳನ್ನು ಮಂಡಿಸಲು ಪ್ರಯತ್ನಿಸಿದರಲ್ಲದೆ ಪೂರ್ತಿಯಾಗಿ ಇಸ್ಲಾಮೀಕರಣಗೊಳ್ಳಲಿಲ್ಲ. ಅಥವಾ ಗುರುನಾನಕರಂತೆ ಇಸ್ಲಾಮ್ ನ ಸಂಸರ್ಗದಿಂದ ಹೊಸದೊಂದು ಧರ್ಮದ ಹುಟ್ಟಿಗೆ ಕಾರಕರಾಗಲಿಲ್ಲ. ಬಹುಶಃ ಇದಕ್ಕೆ ಗುರುನಾನಕರಿಗಿದ್ದಂತಹ ರಾಜಕೀಯ, ಜನಾಂಗೀಯ ಒತ್ತಡಗಳು, ಸಂಘಟನಾತ್ಮಕ ಗುಣಗಳು ಇವರಿಗಿದ್ದಂತಿಲ್ಲ. ಅದೇನೆ ಹಾಗಲಿ ಇಂತಹ ಪ್ರಕ್ರಿಯೆಗಳು ಇಸ್ಲಾಂ ಅನ್ನು ಒಳಗೊಂಡಂತೆ ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಉತ್ತಮ ನಿದರ್ಶನಗಳಾಗಿವೆ. ಈ ಬಗೆಯ ಸಂತರಿಗೆ ಭಾರತೀಯ ಮೂಲದ ತಾತ್ವಿಕತೆಯ ಜೊತೆಗೆ ಇಸ್ಲಾಂನ ತಾತ್ವಿಕತೆಯ ಪರಿಚಯವೂ ಇದ್ದುದು ಇವರ ವಿಶಾಲ ದೃಕ್ಪಥಕ್ಕೆ ಹಾಗು ಜ್ಯಾತೀತ ಸ್ವರೂಪಕ್ಕೆ ತಳಹದಿಯಾಯಿತು. ಇವರು ಕುರುಡಾಗಿ 'ಇಸ್ಲಾಂ'ನ ಧಾರ್ಮಿಕತೆಯನ್ನಾಗಲಿ, ವೈಧಿಕ ಅಥವಾ ವೈದಿಕೇತರ ನೆಲೆಯ ಧಾರ್ಮಿಕತೆಯನ್ನು ವೈಭವೀಕರಿಸುವುದಾಗಲಿ, ಶ್ರೇಷ್ಠತೆಗೇರಿಸುವುದಾಗಲಿ ಮಾಡಲಿಲ್ಲ. ಪರಸ್ಪರ ಧಾರ್ಮಿಕ ಅರಿವು ಮತ್ತು ಅಂತರ್ ಮಥನಗಳಿಂದಾಗಿ ತಮ್ಮ ಕಾಲದ ಸೌಹಾರ್ದಯುತವಾದ ಸಾಮಾಜಿಕ ಸಂಬಂಧಗಳನ್ನು ಪ್ರತಿನಿಧಿಸುವವರಾಗಿದ್ದರು. ವೀರಬ್ರಹ್ಮೇಂದ್ರ ಸ್ವಾಮಿಗಳ ಶಿಷ್ಯನಾಗಿದ್ದ ಕಾಸೀಂ ಎನ್ನುವ ವ್ಯಕ್ತಿಯು ಮುಸ್ಲಿಂನಾಗಿದ್ದು ಇವರಿಬ್ಬರ ಪರಸ್ಪರ ಆಧ್ಯಾತ್ಮಿಕ ಸ್ನೇಹವು ಪ್ರಸಿದ್ಧವಾದುದಾಗಿದೆ. ಶಿಸುನಾಳಷರೀಫರು ಮತ್ತು ಗುರುಗೋವಿಂದ ಭಟ್ಟರನ್ನು ನೆನಪಿಗೆ ತರುವ ಇವರ ವ್ಯಕ್ತಿತ್ವ ಮತ್ತು ಜೀವನದ ಘಟನೆಗಳು ಆಕಾಲದಲ್ಲಿ ಇರಬಹುದಾದ ಮತೀಯ, ಸಾಂಸ್ಕೃತಿಕ ಸಂಘರ್ಷಗಳಿಗೆ ನಿದರ್ಶನಗಳಾಗಿವೆ. ಗುಲುಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ 'ಮೋತಕಪಲ್ಲಿ'ಯಲ್ಲಿ ವೀರಬ್ರಹ್ಮೇಂದ್ರ ಸ್ವಾಮಿಗಳ ಕುರಿತಾದ ಬಯಲಾಟದ ಹಸ್ತ ಪ್ರತಿಯೊಂದು ದೊರೆತಿದ್ದು, ಇದರಲ್ಲಿ ವೀರಬ್ರಹ್ಮೇಂದ್ರ ಸ್ವಾಮಿಗಳು ಮತ್ತವರ ಶಿಷ್ಯ ಕಾಸೀಮರ ಸ್ನೇಹ, ಕಾಸೀಮರ ತಂದೆ ತಾಯಿಗಳಿಂದ ಮಗನು ಧರ್ಮಭ್ರಷ್ಟನಾಗುತ್ತಾನೆಂಬ ಆತಂಕದಿಂದ ಎದುರಾದ ಪ್ರತಿರೋಧವು ಮತ್ತು ಕಡಪನವಾಬನ ವಿಚಾರಣೆ ಮುಂತಾದ ವಿವರಗಳು ಜನಪದರ ಸ್ಮೃತಿಯಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಮಂಥನಗಳ ಕುರುಹಾಗಿ ಉಳಿದು ಬಂದಿದೆ.

ಧರ್ಮದ ಚೌಕಟ್ಟಿನೊಳಗಿದ್ದುಕೊಂಡೇ ಜಾತ್ಯಾತೀತತೆಯನ್ನು ಪರಿಭಾವಿಸುವ ಸಾಮಾನ್ಯ

ವ್ಯಕ್ತಿತ್ವಗಳು ಹಲವಾದರೆ ಧೈರ್ಯದಿಂದ ಅದರ ಎಲ್ಲೆಗಳನ್ನು ದಾಟಿ ಮಾನವೀಯ ನೆಲೆಗಳಲ್ಲಿ ಒಂದಾಗುವ ಸಂತ ವ್ಯಕ್ತಿತ್ವಗಳು ವೀರಬ್ರಹ್ಮಯ್ಯ, ಕಾಸೀಮ, ಷರೀಫರಂತಹವರು ಕೆಲವರೇ ಆಗಿರುತ್ತಾರೆ. ಒಟ್ಟಿನಲ್ಲಿ ಇವರು ಸಾಮಾಜಿಕ ಸ್ಥಿತ್ಯಂತರಗಳ ಕಾಲದ ತುಮುಲಗಳ, ಆಂತರಿಕ ಸಂಘರ್ಷದ ಮತ್ತು ಸಾಂಸ್ಕೃತಿಕ ಪ್ರಕ್ರಿಯೆಯ ಪರಿಣಾಮವಾಗಿದ್ದಾರೆ.

ಇವರ ನಂತರದಲ್ಲಿ ಬರುವ ತತ್ವಪದಕಾರರು ಸೂಫಿಗಳ ಮತ್ತು ಸೂಫಿ ಮಾದರಿಯ ಸಂತರ ಪರಂಪರೆಯನ್ನು ಮುಂದವರೆಸಿಕೊಂಡು ಬಂದವರಾಗಿದ್ದಾರೆ. ಸಾಮಾನ್ಯವಾಗಿ ನಾವು ತತ್ವ ಪದಕಾರರು ಎಂದು ಗುರುತಿಸುವುದು ಶರಣಪರಂಪರೆಗಿಂತ ಸ್ವಲ್ಪ ಭಿನ್ನವಾದರೂ ಅವೇ ಆಶಯಗಳನ್ನೊತ್ತು ವ್ಯವಸ್ಥಿತವಾಗಿ ಕೆಳವರ್ಗದವರನ್ನು ತಲುಪಲುಯತ್ನಿಸಿದ ಗೇಯಕಾರರನ್ನು .ಇಲ್ಲಿ ಕೆಳವರ್ಗ ಎಂದಿರುವುದರ ಧ್ವನಿಯು ಪರಂಪರಾಗತ ವೈದಿಕ ಸಾಂಪ್ರದಾಯಿಕತೆಯ ವರ್ಗಕ್ಕಿಂತ ಭಿನ್ನವಾದ ಶ್ರೇಣೀಕೃತ ವ್ಯವಸ್ಥೆಯಲ್ಲಿನ ಧಾರ್ಮಿಕ ಅಪ್ರಾಮುಖ್ಯತೆಯನ್ನು ಪಡೆದು ಕೊಂಡ ವರ್ಗಗಳನ್ನು ಸೂಚಿಸುತ್ತದೆ. ತತ್ವ ಪದಕಾರರ ಅನುಭಾವವೂ ಸಹ ಶರಣ ಮತ್ತು ದಾಸ ಪರಂಪರೆಯ ಅನುಭಾವದಂತಿದ್ದರೂ 'ಸೂಫಿಜಂ' ನ ಪ್ರಭಾವದಿಂದಾಗಿ ಸ್ವಲ್ಪ ಮಟ್ಟಿಗೆ ಮಾರ್ಪಾಡಿಗೊಳಗಾಯಿತು. ಶರಣ ಮತ್ತು ದಾಸ ಪರಂಪರೆಯ ಗೇಯಕಾರರು ಇಹಕ್ಕೆ ನಿಷ್ಠರಾಗಿದ್ದುಕೊಂಡೇ ಅಲೌಕಿಕತೆಯ ಬಗೆಗೆ ಹಾಡಿದವರಾಗಿದ್ದರು. ಈಗೇಯಕಾರರಲ್ಲಿ ಬದುಕಿನ ಬಗೆಗೆ ಪ್ರೀತಿಯಿತ್ತು. ಲೌಕಿಕವು ಕೊಡಬಹುದಾದ ಎಲ್ಲ ಬಗೆಯ ಸಾರ್ಥಕ್ಯಗಳ ಮೂಲಕವೇ ಭಗವಂತನನ್ನು ಅರಸಲು ಯತ್ನಿಸಿದರು. ಆದರೆ ಈ ತತ್ವ ಪದಕಾರರಲ್ಲಿ ಇಂತಹ ಅಂಶಗಳಿದ್ದಾಗ್ಯೂ ಅವು ಗೌಣವಾಗಿಇಹದ ಸಂಸಾರ, ಜಂಜಡಗಳೆಲ್ಲವನ್ನು ನಿರಾಕರಿಸಿ ದೇವರಲ್ಲಿ ಸೇರುವ ಬಯಕೆಯೊಂದೆ ಅದಮ್ಯವಾಗಿತ್ತು. ಇಂತಹ ಈ ಅಂಶಕ್ಕೆ ಕಾರಣಗಳನ್ನು ನಾವು ವಸಾಹತುಶಾಹಿಯ ಆಕ್ರಮಣಶೀಲತೆಯ ರಾಜಕೀಯ ವಿಧ್ಯಾಮನಗಳ ಹಿನ್ನಲೆಯಲ್ಲಿ ಕಂಡುಕೊಳ್ಳಲು ಸಾಧ್ಯವಾಗಬಹುದು. ಕೈಗಾರೀಕೀಕರಣದ ಜೊತೆಜೊತೆಗೇ ಹುಟ್ಟಿಕೊಂಡ ಹೊಸ ಆತಂಕಗಳು ಮತ್ತು ಸವಾಲುಗಳ ಸಹ ಇಂತಹುದೊಂದು ಮನಸ್ಥಿತಿಗೆ ಕಾರಣವಾಗಿರಲೂಬಹುದು. ಒಟ್ಟಿನಲ್ಲಿ ಬದುಕಿನ ಬಗೆಗಿನ ನೈರಾಸ್ಯ ಭಾವಕ್ಕೆ ಆಧುನಿಕತೆಯ ಜೊತೆಗೆ ರಾಜಕೀಯ, ಸಾಮಾಜಿಕ ಒತ್ತಡಗಳು

ಕಾರಣವಾಗಿವೆಯೆಂದು ಧಾರಾಳವಾಗಿಹೇಳಬಹುದಾಗಿದೆ. ಸೂಫಿಜಂ ಮತ್ತದಕ್ಕೆ ಸಂವಾದಿಯಾಗಿ ಹುಟ್ಟಿಕೊಂಡ ಭಕ್ತಿ ಪಂಥಗಳ ಕಾವು ಇಳಿಮುಖವಾಗಿ ಅದರಿಂದಲೇ ಪ್ರೇರಿತಗೊಂಡು ಧಾರ್ಮಿಕ ಅರ್ಥಪೂರ್ಣತೆಗಾಗಿ ಹುಡುಕಾಟ ನಡೆಸಿದ, ಕೆಳವರ್ಗದ ಆಶಯಗಳಿಂದಲೇ ರೂಪುಗೊಂಡವರು ಈ ತತ್ವಪದಕಾರರಾಗಿದ್ದಾರೆ. ಸೂಫಿಗಳು ಸಹ ಕೆಳವರ್ಗದ ಇಂತಹ ನಾಡಿಮಿಡಿತವನ್ನಿಡಿದುಕೊಂಡೇ'ಇಸ್ಲಾಂ'ನ ಸಂದೇಶವನ್ನು ಇಂಡಿಯಾದಾದ್ಯಂತ ಕೊಂಡೊಯ್ದರು. ಸೂಫಿಜಂ ಕೇವಲ ಮೌಢ್ಯಾಚರಣೆಯಾಗಿ ಮಾರ್ಪಟ್ಟನಂತರದಲ್ಲಿ ನಿಜವಾದ ಸೂಫಿ ಸಂದೇಶಗಳನ್ನು ಜನರಿಗೆ ತಲುಪಿಸುವ ಮುಖ್ಯಕಾಳಜಿ ತತ್ವಪದಕಾರರಿಗಿತ್ತು. ಇದಕ್ಕೆ ನಿದರ್ಶನವಾಗಿ ಉತ್ತರ ಕರ್ನಾಟಕವನ್ನೊಳಗೊಂಡಂತೆ ಹಲವೆಡೆ ಮುಸ್ಲಿಂ ಮತ್ತು ಮುಸ್ಲಿಮೇತರ ತತ್ವಪದಕಾರರು ಕಾಣಿಸಿಕೊಂಡು ಪರಸ್ಪರರ ಗುರು, ಶಿಷ್ಯ ಪರಂಪರೆಯಲ್ಲಿ ಒಂದಾಗಿ ಎಲ್ಲಾವರ್ಗಗಳ ಜನ ಸಮುದಾಯವನ್ನು ತಲುಪಲು ಪ್ರಯತ್ನಿಸಿದರು. ಈ ತತ್ವ ಪದಕಾರರಲ್ಲಿ ಒಬ್ಬ ಗುರು ಮತ್ತು ಆತನಿಂದ ದೀಕ್ಷೆ ಪಡೆದ ಅನುಯಾಯಿಗಳು, ಧಾರ್ಮಿಕ ಉತ್ತರಾಧಿಕಾರ, ರಹಸ್ಯ ಉಪದೇಶಗಳನ್ನೊಳಗೊಂಡಂತೆ ಸೂಫಿ ಆಚರಣೆಗಳ ಮುಂದುವರಿಕೆಯನ್ನೇ ಕಾಣಬಹುದು. ಈ ಭಾಗದ ಮುಸ್ಲಿಂ ತತ್ವಪದಕಾರರಿಗೆ ಅವರ ಪುಣ್ಯತಿಥಿಯಾಗಿ ಉರುಸು ಆಚರಿಸುವುದು ಸಹ ಇದನ್ನು ಸ್ಪಷ್ಟ ಪಡಿಸುತ್ತದೆ. ತತ್ವಪದಕಾರರ ಧಾರ್ಮಿಕ ಪ್ರಕ್ರಿಯೆಯು 'ಸೂಫಿಜಂ'ನಷ್ಟು ವ್ಯಾಪಕತೆ ಪಡೆದುಕೊಳ್ಳದಿದ್ದರೂ ಶರೀಫರಂತಹವರಿಂದ ತಕ್ಕಮಟ್ಟಿಗೆ ಪರಿಣಾಮಕಾರಿಯಾಗಿತ್ತು.

ಇಲ್ಲಿ ಅಧ್ಯಯನಕ್ಕೆ ಆರಿಸಿಕೊಂಡು ತತ್ವಪದಕಾರರು ಹೆಚ್ಚಾಗಿ ಗಡಿಭಾಗದ ಪ್ರದೇಶದವರಾಗಿದ್ದು ತೆಲುಗು ಮತ್ತು ಕನ್ನಡಗಳೆರಡರಲ್ಲೂ ತತ್ವ ಪದಗಳನ್ನು ರಚಿಸಿದವರಾಗಿದ್ದಾರೆ. ಇವರಲ್ಲಿ ಆಂಧ್ರದ ಕರ್ನೂಲು ಜಿಲ್ಲೆಯ ಆಲೂರು ತಾಲೂಕಿನ ಹೊಳಲುಗುಂದಿಯ ಶ್ರೀ ಸಾಹೇಬ್ ರಾಜಯೋಗಿ (ಸಾಹೇಬಣ್ಣತಾತ) ಮತ್ತು ಬಳ್ಳಾರಿ ತಾಲೂಕಿನ ಹಂದ್ಯಾಳು ಗ್ರಾಮದ ಶಿಲಿವೇರಿ ಶಿವಪ್ಪನವರು, ಇವರ ಗುರುಗಳಾದ ಅಲ್ಲೀಪೀರ್ ಸಾಹೇಬರನ್ನು ಪ್ರಾತಿನಿಧಿಕವಾಗಿಟ್ಟುಕೊಂಡು ತತ್ವಪದಕಾರರ ಕಾಣ್ಕೆಯನ್ನು ವಿಶ್ಲೇಷಿಸಲಾಗುತ್ತದೆ. ಜೊತೆಗೆ ಸಾಹಿತ್ಯಿಕವಾಗಿ ತತ್ವಪದಕಾರರಲ್ಲಿಯೇ ವಿಶಿಷ್ಟ ಸಾಧನೆಗೈದಶಿಶುನಾಳ ಷರೀಫರನ್ನು ನಿದರ್ಶನವಾಗಿಟ್ಟುಕೊಂಡು

[illegible]

[illegible]

ಈ ತತ್ವಪದಕಾರರ ಕೊಡುಗೆಯನ್ನು ಗಮನಿಸಲಾಗುತ್ತದೆ.

ಶರೀಫರ ಮತ್ತು ಉಳಿದ ತತ್ವಪದಕಾರರನ್ನು ಹೋಲಿಸಿದರೆ ಶರೀಫರ ಕಾವ್ಯಗುಣದ ಮುಂದೆ ಇವು ಸಪ್ಪೆಯೆನಿಸುತ್ತವೆ. ಶರೀಫರ ತತ್ವಪದಗಳು ಅವುಗಳ ಕಾವ್ಯ ಗುಣದಿಂದ ಉಳಿದುಕೊಂಡು ಬಂದಿದ್ದರೆ, ಇಲ್ಲಿ ಪ್ರಸ್ತಾಪಿಸಲಾಗಿರುವ ತತ್ವಪದಗಳು ಆಚರಣೆಯ ಒಂದಂಗವಾಗಿ ಉಳಿದುಕೊಂಡು ಬಂದಿವೆ. ಹೆಚ್ಚು ಕಡಿಮೆ ಷರೀಫರ ಸಮಕಾಲೀನರಾದ ಇಲ್ಲಿನ ತತ್ವಪದಕಾರರು ಸಂಪ್ರದಾಯ ನಿಷ್ಠ ಮುಸ್ಲಿಂ ಮತ್ತು ಮುಸ್ಲಿಮೇತರರಿಂದ ಎದುರಿಸಿದ ವಿರೋಧವು ಮತ್ತು ಆ ಮೂಲಕ ಒಳಗಾಗ ಬೇಕಾದ ತಲ್ಲಣಗಳು ಮತ್ತು ಆತಂಕಗಳಿಂದಾಗಿ ಅಭದ್ರತೆಯ ಭಾವವನ್ನು ಅನುಭವಿಸುತ್ತಲೇ ಸವಾಲನ್ನೆದುರಿಸಲು ಗಟ್ಟಿಗೊಳ್ಳಬೇಕಾಯಿತು. ಇಂತಹ ಸ್ಥಿತಿ ವಿಶೇಷಗಳಿಂದಾಗಿಯೇ ಇವರಿಗೆ ಎಲ್ಲ ಮತಧರ್ಮದ ಎಲ್ಲೆಗಳನ್ನು ಮೀರಿ ನಿಜವಾದ ಮಾನವೀಯ ನೆಲೆಗಳ ಧಾರ್ಮಿಕತೆಯನ್ನು ಪ್ರತಿಪಾದಿಸಲು ಸಾಧ್ಯವಾಗಿರಬೇಕು.

ಇನ್ನು ಮುಂದೆ ಕ್ರಮವಾಗಿ ಈ ತತ್ವಪದಕಾರರ ಅನುಭಾವಿಕ ಚಿಂತನೆಗಳನ್ನು ೧. ಅನುಭಾವದ ಸ್ವರೂಪ. ೨. ಗುರುವಿನ ಮಹತ್ವ. ೩. ಗುರುಬೋಧವೆಂಬುದಾಗಿ ಪರಿಶೀಲಿಸಲಾಗವುದು.

೨.೩ ಅನುಭಾವದ ಸ್ವರೂಪ

ತತ್ವಪದಕಾರರು ಪ್ರತಿಪಾದಿಸುವ ಅನುಭಾವವು 'ಸೂಫಿಜಂ'ನ ಅನುಭಾವದ ಜೊತೆ ಸಾಮ್ಯವುಳ್ಳದ್ದಾಗಿದ್ದು ಅದರ ಪ್ರಭಾವವನ್ನು ಅಲ್ಲಗಳೆಯಲಾಗದು. ಸೂಫಿಗಳು ತಮ್ಮ ಅನುಭಾವಕ್ಕೆ 'ಸಿರ್ರ್' ಎಂದು ಕರೆಯುವುದು ವಾಡಿಕೆ. 'ಇಲ್ಮ್' ಎಂಬ ಮತ್ತೊಂದು ಹೆಸರಿನಿಂದಲೂ ಕರೆಯುತ್ತಾರೆ. ಇದರಲ್ಲಿ ಮೂರು ಹಂತಗಳಿವೆ. ೧. ಇಲ್ಮುಲ್ ಯಖೀನ್ ೨. ಹಕ್ಕುಲ್ ಯಖೀನ್ ೩ ಐನುಲ್ ಯಖೀನ್ . 'ಯಖೀನ್ ' ಎಂದರೆ ಜ್ಞಾನದ ಧೃಡತೆ ನಿಶ್ಚಿತತೆ ಎನ್ನಬಹುದು. ಇಂತಹ ಜ್ಞಾನದ ನಿಶ್ಚಿತತೆಯಿಂದ ಹೊರಹೊಮ್ಮುವುದೇ ಅನುಭಾವ. ಇದನ್ನೇ ಇಲ್ಮುಲ್ ಯಖೀನ್ ಎಂದಿರುವರು. ಈ ಸೃಷ್ಟಿಯು ಅಲ್ಲಾಹ್

ನಿಂದ ರಚಿತವಾಗಿದ್ದು ಸಚರಾಚಗಳಲ್ಲಿ ಆತನ ಅಂಶ ಮತ್ತು ಗುಣಗಳನ್ನು ಕಾಣುವ ಜ್ಞಾನವನ್ನೇ 'ಹಕ್ಕುಲ್ ಯಖೀನ್ ' ಎಂದು ಕರೆದರು. ಇಡೀ ಜಗತ್ತನ್ನೇ ಅಲ್ಲಾಹ್ ನ ಸ್ವರೂಪವೆಂದು ತಿಳಿದು ಪ್ರೇಮೋನ್ಮಾದದಲ್ಲಿ ಪದಮ ಸೌಂದರ್ಯದ ಸತ್ಯತೆಯನ್ನು ಕಾಣಲು ತವಕಿಸುವುದೇ 'ಐನುಲ್ ಯಖೀನ್' ಎಂದಿರುವರು[೪೬]

'ಸೂಫಿಜಂ'ನ ಮೂಲಕ 'ಇಸ್ಲಾಂ'ನ ಮತ್ತು 'ತಸವ್ವೂಫ್ ' (ಸೂಫಿ ಅನುಭಾವ)ನ ಪ್ರಭಾವವು ತತ್ವಪದಕಾರರ ಮೇಲಾದುದನ್ನು ಇದರ ಅನುಭಾವದ ಸ್ವರೂಪದ ಮೂಲಕ ಅರಿಯಬಹುದಾಗಿದೆ. ಉದಾಹರಣೆಗೆ ಶಿಲಿವೇರಿ ಶಿವಪ್ಪನವರ ಈ ಕೆಳಗಿನ ಹಾಡನ್ನು ಗಮನಿಸಬಹುದು.

ನೀಮರತಾಡಿದಿಷ್ಟಾಯಿತಲ್ಲಾ ಸೋಮಾರ್ಕ ಭೂಮಿ
ಗಗನ ಜನ ಮಹ ಪ್ರಭೂ ನೀಮರತಾಡಿದಿಷ್ಟಾಯಿತಲ್ಲಾ ‖ ಪ ‖
ಮರುವಿಲ್ಲದಿರುವೆ ನಿನ್ನರುವೆಂಬೊ ಕುರುಹಾನು (ಕುರ್ ಆನ್)
ಹೊರಗಾಗುವದಕಿದೊಂದಾಡಿಬಿಟ್ಟೇ ಮರುವು ಸಮೀಪಕೆ ಬರದಂತೆ ನೀನಿಂದು
ಶರೀರ ಜೀವೇಶಾಗೆ ಬೆರಶಿಬಿಟ್ಟೆಲ್ಲಾ
ಜೀವದಾಕಾರಕ್ಕೆ ಕೇವಲ ಸೂನ್ಯಕ್ಕೆ ತಾಯಿ
ರಕ್ತ ಬಿಂದೂ ತೊಡಕೀಸೀದೇ
ಜೀವ ನಿನ್ನನು ಮರದಸ್ಯೆಹ್ಯಾವೆ ಘನವೆಂದಾ
ಕಾಯವಾಗೊಪರೀ ಕಲ್ಪಿಶೀದಲ್ಲಾ
ಪ್ರಥಮ ಮಾಸಲಿ ಮುದ್ದೆದ್ವಿತಿ ಮಾಸಗಟ್ಯ್ಯಾಗಿ
ತ್ರಿತಿಯಮಾಸದಿ ಚಿಗರೇರೂವಂತೇ
ಚತುರ ಪಂಚಮಿ ಷಷ್ಟಿ ಸಪ್ತಷ್ಟ ನವಮಾಸ
ಜತೆಮಾಡಿ ಚೇತನ್ಯಗತಿ ನೀ ಕೊಟ್ಟೆಲ್ಲಾ
ಸಡಗರಾ ಶಿಶುಲೀಲ ವಡಗೂಡಾಡುವೊ
ವ್ಯಾಳ್ಯಾ ಸಿಡಿಲಿನಂತವಾಯು ಘಡಿ ಘಡಿಸೇ
ನಡುನೆತ್ತಿಗೊಡಿಯಲು ವಡದಿರಿಗಧೋಮುಖಿ
ತಡಿಯಾದೆ ಮಾಡಿ ತತ್ತರಗೊಂಡಿತಲ್ಲಾ

ತತ್ತರ ಬಡುತಾಗ ಯತ್ತೆತ್ತ ತಿರಗದೆ ಬತ್ತಲೆ ತಂದು ಮರ್ತೆಕ್ಕಾಕಿದೇ
ಹೆತ್ತಯ್ಯ ಮುತ್ತಯ್ಯ ಅತ್ತೆ ಮಾವ
ಭಾವ ಸುತ್ತ ಸಮೋಹಾವು ಸುತ್ತಿದರಲ್ಲಾ[೪೭]

ದೈವತ್ವ ಮತ್ತು ಆಧ್ಯಾತ್ಮ ಸಂಬಂಧಿ ವಿಚಾರಗಳಲ್ಲಿ ಸೂಫಿಜಂನ ಪ್ರಭಾವವನ್ನು ಇಲ್ಲಿ ಗಮನಿಸಬಹುದಾಗಿದೆ. ಇಂತಹ ಅರಿವಿನ ಅನುಭಾವಿಕ ಪ್ರಭೆಯಲ್ಲಿ ಹೊಳೆಯುವ ಬದುಕಿನ ಅರ್ಥ ದೈವಿಕ ಸಾಮೀಪ್ಯವನ್ನು ಅರಿತು ದೈವೋನ್ಮಾದದಲ್ಲಿ ಶಿಲಿವೇರಿ ಶಿವಪ್ಪನವರು ಈ ಕೆಳಗಿನಂತೆ ಹಾಡುತ್ತಾರೆ.

ಆನಂದವಾನಂದವಾಯಿತ್ತೆ
ನಾನತ್ವವಳಿದೂ ಸದಾನಂದ ಸಿಕ್ಕಿದ್ದರಿಂದೀಗ || ಪ ||
ವಾದಾ ಮತ ಭೇದಾ ಲಯವಾದಾ ನಿಜ ಭೋದಾ
ಆದಿಗುರುವಿನಿಂದಾದನುಭವ ವಿನೋದ ಕಂಡು ಸೂವಾದದೊಳಗೆಯನ್ನಾ

ಇಲ್ಲಾ ಜಗವೆಲ್ಲಾ ಕಾಣ್ದಲ್ಲಾ ಕಂಪಿಲ್ಲಾ
ಮುಳ್ಳು ಮೊನೆಯ ತುದಿಯೆಲ್ಲ ತಾನಾದ ಉಲ್ಲಾಸವು ಬಲ್ಲಾತಗಾಗುವಂತಾನಂದ ||
ದುಃಖಾ ಸುಖ ಮಿಕ್ಕಾ ಇರುತಕ್ಕಾ ನಿಜಸಿಕ್ಕಾ
ಲೆಕ್ಕದ ಗಣಿತಕ್ಕೆ ಮಿಕ್ಕು ಮೀರಿದಾ ಪಕ್ಷಪಾತಿಯೆನ್ನ ಪಕ್ಷವಾದ್ದರಿಂದಾನಂದ ||
ಲೋಕಾ ಸುರಲೋಕ ಯಮ ಲೋಕಾ ಪರಲೋಕಾ
ಯೇಕೋ ದೈಯ್ವರೂಪಾಕಾರಗಣಿತ ಸೋಕಲಿವೆಲ್ಲವು ನಾಶವಾದ್ದರಿಂದಾನಂದ ||
ಅಲ್ಲೀ ಪೂರ್ವದಲ್ಲೀ ಅರುವಿನಲ್ಲೀ ಅಖಂಡದಲ್ಲಿ
ಅಲ್ಲಿಂದಿರುತಿಹ ಅಲ್ಲಿ ಸಾಹೆಬು ಗುರು ಇಲ್ಲಿಂದೆ
ನ್ನೊಳಲ್ಲೀತನಕ ಕೊಟ್ಟಾನಂದವಾನಂದವಾಯಿತ್ತೆ[೪೮]

ಇಂಡಿಯಾದ ಗೋಜಲು ಗೋಜಲಾದ ಧಾರ್ಮಿಕ ವ್ಯವಸ್ಥೆ ಅದರಿಂದೇರ್ಪಟ್ಟ ಸಂಕೀರ್ಣ ಸಾಮಾಜಿಕ ಸ್ಥಿತಿ ವಿಶೇಷ ಇಲ್ಲಿ ಮನುಷ್ಯ ಮನುಷ್ಯರ ನಡುವೆ ಅರ್ಥಪೂರ್ಣ ಸಂಬಂಧಗಳನ್ನೇ ಗೌಣವಾಗಿಸಿಬಿಟ್ಟಿತ್ತು.

ಪರಸ್ಪರರ ಪ್ರಜ್ಞೆಗೆ ಅತೀತವಾಗಿ ಯಾವುದೋ ಕೇಂದ್ರವೊಂದರಿಂದ ನಿಯಮ ನಿಬಂಧನೆಗಳು ಏರ್ಪಟ್ಟು ಅಸಂಖ್ಯಾತ ಮನಸ್ಸುಗಳನ್ನು ರೋಗಗ್ರಸ್ತವಾಗಿಸಿತು. ಹುಸಿವರ್ಣಾಶ್ರಮ, ಧಾರ್ಮಿಕತೆಯ ನಿಜಸ್ವರೂಪವನ್ನು ಗ್ರಹಿಸಲೂ ಸಾಧ್ಯವಾಗದಷ್ಟು ಮನುಷ್ಯ ಸಂವೇದನೆಗಳನ್ನು ಬರಡಾಗಿಸಿತ್ತು. ಈ ಎಲ್ಲಾ ಸಿಕ್ಕುಗಳಿಂದ ಬಿಡಿಸಿಕೊಂಡು ಶಿವಪ್ಪನವರ ಚೇತನ ಅಲ್ಲೀಸಾಹೇಬರ ದಾರ್ಶನಿಕ ಬೆಳಕಲ್ಲಿ ಪುಟಿದು 'ವಾದಾ ಮತ ಭೇದಾ ಲಯವಾದ ನಿಜಭೋದವನ್ನು ಕಂಡುಕೊಂಡು ಮುಳ್ಳು ಮೊನೆಯ ತುದಿಯೆಲ್ಲ ತಾನಾದ ಉಲ್ಲಾಸವು ಬಲ್ಲಾತಗಾಗುವಂತಾನಂದ' ವನ್ನು ಪಡೆಯಲು ಸಾಧ್ಯವಾಯಿತು.

ಈ ಪದ್ಯದ ಪ್ರತಿ ಚರಣ ಚರಣದಲ್ಲೂ ಕಳೆದು ಹೋದ ಅಪೂರ್ವವಾದುದನ್ನು ಮತ್ತೆ ಪಡೆದುಕೊಂಡ ಅವರ್ಣನೀಯಆನಂದ ತಾನೇ ತಾನಾಗಿದ್ದು. ಅಭಿವ್ಯಕ್ತಿಕ್ರಮದಲ್ಲಿ ಅದನ್ನು ಹೇಳಿ ಬಿಡಬೇಕೆನ್ನುವ ತೀವ್ರತೆ ಕಂಡು ಬರುತ್ತದೆ. ಅಮಾನವೀಯತೆ. ಅವಮಾನಗಳಿಂದ ಮುದುಡಿ ಹೋಗುತ್ತಿದ್ದ ಇಂಡಿಯಾದ ಅಸಂಖ್ಯಾತ ಮನಸ್ಸುಗಳನ್ನು ಅರಳಿಸುವ ಕ್ರಿಯೆಗಿಳಿದಿದ್ದು ಸೂಫಿಗಳ ಮತ್ತು ಈ ಬಗೆಯ ತತ್ವಪದಕಾರರ ಅರ್ಥಪೂರ್ಣ ಕ್ರಿಯೆಯಾಗಿದೆ. ಬೇರೊಂದು ಪದ್ಯದಲ್ಲಿ ಶಿವಪ್ಪನವರು 'ಅಲ್ಲೀಶಾರ್ಯರ ಹೊಲದಿ ಬೀಜಾ ಚೆಲ್ಲಾ ಬಾರದೇ ಮಲ್ಲಿಗೆಯ ವನದಂಥ ಫಲವು ಮೆರೆಯುತಿಹುದೇ' ಎಂದು ತಮ್ಮ ಗುರುಗಳ ಚಿಂತನೆಯ ಪ್ರಸ್ತುತತೆ ಮತ್ತು ಅದನ್ನು ಹರಡಿ ಹಸನಾದ ಮಲ್ಲಿಗೆಯ ವನದಂತಹ ಫಸಲನ್ನು ಪಡೆಯುವ ಕನಸು ಕಾಣುತ್ತಾರೆ. ಈ ರೀತಿಯ ಅನುಭಾವಿಕ ಪ್ರಭೆಯಲ್ಲಿ ಹೊಳೆಯುವ ಬದುಕಿನ ಹೊಸ ಅರ್ಥಸಾಧ್ಯತೆಗಳ ಸ್ಫುರಣೆಯಿಂದ ಜ್ಞಾತ್ಯಾತೀತೆಯ ಗುಣಗಳಿಗೆ ತಾವೇ ಪ್ರತೀಕಗಳಾಗಿ ತಮ್ಮ ಅನುಯಾಯಿಗಳಲ್ಲಿ ಪಸರಿಸಲು ಇವರಿಗೆ ಸಾಧ್ಯವಾಯಿತು.[೯೯]

ಸಾಮಾನ್ಯವಾಗಿ ಸೂಫಿ ಸಾಹಿತ್ಯದಲ್ಲಿ ಪ್ರಕಟಗೊಳ್ಳುವ 'ಸುರೆ'ಯ ಪ್ರತೀಕದಂತೆ ಈ ತತ್ವ ಪದಕಾರರಲ್ಲಿ 'ಭಂಗಿ' ಅಥವಾ 'ಗಾಂಜಾ'ದ ಪ್ರತೀಕವೂ ಕಂಡು ಬರುತ್ತದೆ. ರತಿಭಾವದೊಂದಿಗೆ ಪ್ರೇಮೋನ್ಮಾದದಲ್ಲಿ ದೈವತ್ವದೊಂದಿಗೆ ಮಿಲನ ಗೊಳ್ಳಲು, ಅಂತಹಸ್ಥಿತಿಯೊಂದನ್ನು ಸಾಹಿತ್ಯಿಕ ರೂಪದಲ್ಲಿ ಪ್ರಕಟ ಪಡಿಸಲು ಮಾದಕ ವಸ್ತುಗಳ ಚೋದಕತೆಯನ್ನು ಅಭಿವ್ಯಕ್ತಿಯ ಕ್ರಮದಲ್ಲಿ ಪರಿಣಾಮ ಕಾರಿಯಾಗಿ ಬಳಸಿಕೊಳ್ಳುತ್ತಿದ್ದರು. ಷರೀಫರ ಪದ್ಯವೊಂದನ್ನು ಉದಾಹರಣೆಗೆ ನೋಡಬಹುದು.

ಮೋಜ ನೋಡಿರಿ ಗಾಂಜಿಯ ಗಮಕಿನ

ತೇಜಿಯೇರಿದ್ವಾಂಗ ಜುಲಾಸ್ತದ ಅಮಲಾ || ಪ ||

ಈ ಜನರೇನಿದ ಬಲ್ಲರು ದುರ್ಗುಣ ಮಾಜುವದಿದರೊಳಗೆ

ಬಹು ಮೌಜು ಬಹು ಮೌಜು || ಪ ||

--- --- --- --- --- --- --- --- --- ---

--- --- --- --- ---- --- --- --- --- ---

ಆ ಬೋಧಾ ಮೃತ ನಾದಾನಂದದಿ

ಸಾಧಕರು ಕೂಡಿ ಮೋದದಲಿ

ನೋಡಿ ಮೇದಿನಿ ಸ್ಥಲದಂತೀ ದೇಹಾಕೃತಿ ದಂಡಿಸಿದರು ತೀಡಿ

ಶೋಧಿಸಿ ಶರೀರದ ಬುರುಡಿಗೆ ತನುವಿನ ಮೇರು

ಅದಕೆ ಜೋಡಿ ಜಲದಿ ಒಡಗೂಡಿ

ಶ್ರೀಧರ ಬ್ರಹ್ಮ ಸದಾಶಿವ ಮೂವರ ಆಧಾರವ ಮಾಡಿ

ಕ್ರೋಧಾಧಿಗಳ ಭೇಧಿಸಿ ಜ್ಞಾನದ ಚಿಲುಮೆಯೊಳಗೆ ತೀಡಿ

ಅಗ್ನಿಯನು ತೋಡಿ

ಆ ದಶವಾಯ್ಗುಳ ಬಿಗಿದು ಸುಷಮ್ನನಾಡಿಯೊಳಗೆ ಹೂಡಿ

ಆದಿ ಸದ್ಗುರುವಿನ ಕೈಯೊಳಗೊಪ್ಪುವ

ನಾದದ ಗುಡಿಗುಡಿ ಸೇದಿ ನಲಿದಾಡಿ

ಬಾದಿ ದುರಿತಗಳ ಕರ್ಮಗಳನು ಭೇದಿಸಿ ಈಡ್ಯಾಡಿ[20]

ಸ್ವತಃ ವೈಯಕ್ತಿಕ ಜೀವನದಲ್ಲೂ ಶರೀಫರು ಗೋವಿಂದ ಭಟ್ಟರು ಮತ್ತು ಹೊಳಗುಂದಿಯ ಸಾಯಿಬಣ್ಣನವರು ಸಹ ಗಾಂಜಾ ಸೇದುತ್ತಿದ್ದರೆಂಬುದಾಗಿ ತಿಳಿದು ಬರುತ್ತದೆ. ಬಹುಶಃ ಶರೀಫರ ವಿಷಯದಲ್ಲಿ ಅವರ ಹಾಡುಗಳ ವಿವರಣೆಯಿಂದಾಗಿ ಅವರ ಭಕ್ತವೃಂದದವರು ಗಾಂಜಾ ಸೇದುತ್ತಿದ್ದರೆಂಬುದಾಗಿ ಅರ್ಥೈಸಿಕೊಂಡಿರಬೇಕು. ಆದರೆ ಸಾಯಿಬಣ್ಣತಾತನವರು ವೈಯಕ್ತಿಕ ಜೀವನದಲ್ಲಿ ಗಾಂಜಾ, ಮಧ್ಯ ಸೇವಿಸುತ್ತಿದ್ದರೆಂಬುದಾಗಿ ತಿಳಿದು ಬರುತ್ತದೆ. ಇವರ 'ಊರೂಸ್ ' ನ ಆಚರಣೆಯಲ್ಲಿ ನೈವೇದ್ಯವಾಗಿ 'ಮಧ್ಯ' ವನ್ನು ಸಹ ಅರ್ಪಿಸಲಾಗುತ್ತದೆ. ಅಲ್ಲೀಪೀರ್ ಸಾಹೇಬ್, ಶಿಲಿವೇರಿಶಿವಪ್ಪ ಮತ್ತು ಸಾಯಿಬಣ್ಣ

ತಾತನವರ ಪ್ರಭಾವವಿರುವ ಗಡಿಭಾಗದ ಪ್ರದೇಶಗಳಲ್ಲಿ ಈ ವರ್ಗಗಳಿಂದ ಗುರು ದೀಕ್ಷೆಪಡೆದ ಶಿಷ್ಯವೃಂದಗಳು ತಮ್ಮ ಆಧ್ಯಾತ್ಮಿಕ ಅಂಗವಾಗಿ ವೃತ್ತಾಕಾರವಾಗಿ ಕುಳಿತು ಭಂಗಿ ಸೇದುವುದನ್ನು ಈಗಲೂ ಕಾಣಬಹುದಾಗಿದೆ.

ದೇವರು ಮತ್ತು ಭಕ್ತನು ಒಂದುಗೂಡುವಿಕೆಯು ಅನುಭಾವದ ಮುಖ್ಯಸ್ವರೂಪವಾಗಿದ್ದು, ಈ ಮಿಲನದ ಆಧ್ಯಾತ್ಮಿಕ ಪರವಶತೆಯನ್ನು ವಿಸ್ತರಿಸಲು ಈ ರೀತಯ ಮಾದಕ ವಸ್ತುಗಳನ್ನು ಆಚರಣಾತ್ಮಕವಾಗಿ ಬಳಸುತ್ತಿರುವಂತಿದೆ.ಮೊದಲಿಗೆ ಇದು ಅಭಿವ್ಯಕ್ತಿಯ ಕ್ರಮದಲ್ಲಿ ಪ್ರತೀಕವಾಗಿ ಮೂಡಿದ್ದು ಕ್ರಮೇಣ ಆಚರಣೆಯಾಗಿ ಮಾರ್ಪಟ್ಟಂತಿದೆ.

೨.೩.೨ ಗುರುವಿನ ಮಹತ್ವ.

ತತ್ವ ಪದಕಾರರಲ್ಲಿ ಗುರುವಿನ ಮಹತ್ವ ಅಧಿಕವಾಗಿದ್ದು, ಸಾಧಕನು ಆತನಲ್ಲಿ ಶರಣಾದಾಗ ಮಾತ್ರ ಮೋಕ್ಷ ಪದವಿಯನ್ನೊಂದಲು ಸಾಧ್ಯವೆಂದು ಭಾವಿಸಲಾಗಿದೆ. ಗುರುವಿನ ಆಧಿಕ್ಯವನ್ನು ವಿವರಿಸುವ ಶರಣ ಮತ್ತು ದಾಸ ಪರಂಪರೆಯ ವಿವರಗಳೂ ಸಹ ಇವನ್ನು ಸ್ಪಷ್ಟ ಪಡಿಸುತ್ತವೆ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ದಾಸ ನುಡಿಗಳು ಮತ್ತು ನಿಜಗುಣ ಶಿವಯೋಗಿಗಳ 'ಶ್ರೀ ಗುರು ವಚನೋಪದೇಶವನಾಲಿಸಿ, ಆಗಳಹುದು ನರರಿಗೆ ಮುಕುತಿ' ಎಂಬುದನ್ನು ಉದಾಹರಿಸಬಹುದು.

ಉತ್ತರ ಕರ್ನಾಟಕದಲ್ಲಿ ಗುರುವಿನ ಆಧಿಕ್ಯವನ್ನು ಪ್ರಸ್ತಾಪಿಸುವ ಇಸ್ಲಾಂ ಮೂಲದ ಕತೆಯೊಂದು ಪ್ರಚಲಿತದಲ್ಲಿದೆ. ಪರಮಾತ್ಮ ಮೊದಲಿಗೆ ದೇವತೆಗಳನ್ನು, ರಾಕ್ಷಸರನ್ನು ಸೃಷ್ಟಿಸಿದ. ಅವರಿಗೆ ಅವರವರದ್ದೇ ಆದ ಪ್ರದೇಶ ಸುಖ ಸಂಪತ್ತುಗಳನ್ನು ನೀಡಿದ. ಅಷ್ಟಕ್ಕೆ ತೃಪ್ತರಾಗದೆ ಅತಿಯಾಸೆಯಿಂದ ಪರಸ್ಪರ ಹೋರಾಟಗಳಲ್ಲಿ ತೊಡಗಿದರು. ಈ ಘರ್ಷಣೆಗಳಿಂದ ಸಂಕಷ್ಟಗಳಿಗೀಡಾಗಿ ದುಃಖಿತರಾದರು. ಇಂತಹ ದುಃಖ ಅವರನ್ನು ಅಲೌಕಿಕದೆಡೆ ಪ್ರೇರೇಪಿಸುವ ಬದಲಿಗೆ ಮತ್ತೆ ಸಂಕಷ್ಟಗಳಿಗೆಡೆ ಮಾಡಿದುದರಿಂದ ಇನ್ನಿವರು ದೈವ ಸಾಕ್ಷಾತ್ಕಾರಕ್ಕೆ ಬಹುದೂರವೆಂದು ಭಗವಂತ ಚಿಂತೆಗೀಡಾಗಿ 'ಇಬ್ಲೀಶ್' (ಮಾಯೆ) ನನ್ನು ಕರೆದು

ಅವನಿಂದ ಮಾನವಾಕೃತಿಯನ್ನು ನಿರ್ಮಿಸಿ ಜೀವ ಬರಿಸಿದ. ಹೀಗೆ ಬಂದ ಮನುಷ್ಯ ಮಾಯೆಯಿಂದ ರೂಪಗೊಂಡದ್ದಕ್ಕೋ ಏನೋ ಅಪರಿಪೂರ್ಣನಾದ. ಭೂಮಿಗೆ ಬಂದ ಮೇಲೆ ಪ್ರಾಪಂಚಿಕ ಮೋಹ. ಸ್ವಾರ್ಥ, ದುರಾಶೆಗಳಿಂದ ಆತ್ಮವಿನಾಶದೆಡೆ ಸಾಗತೊಡಗಿದ. ಆಗ ಪರಮಾತ್ಮ ಗುರುವಿನ ರೂಪದಲ್ಲಿ ಬಂದು ಅವನ ಹೃದಯವನ್ನಾಕ್ರಮಿಸಿದ. ಇಬ್ಲೀಶನನ್ನು ಹೊಡೆ ದೋಡಿಸುವ ಕಾರ್ಯದಲ್ಲಿ ನಿರತನಾದ.[೫೧]

ಇಲ್ಲಿ ಚರ್ಚಿಸಲಾಗುವ ತತ್ವಪದಕಾರರೂ ಕೂಡ ಗುರುವನ್ನು ಸಾಕ್ಷಾತ್ ದೈವವೆಂಬಂತೆ ಪರಿಭಾವಿಸುತ್ತಾರೆ. ಉದಾಹರಣೆಗೆ ಶರೀಫರ ಹಾಡನ್ನು ಪರಿಶೀಲಿಸಬಹುದು.

ನನ್ನೊಳಗ ನಾ ತಿಳಕೊಂಡೆ
ನನಗ ಬೇಕಾದ ಗಂಡನ್ನ ಮಾಡಿಕೊಂಡೆ || ಪ ||
ಅಜ್ಞಾ ಪ್ರಕಾರ ನಡಕೊಂಡೆ
ನಾ ಎಲ್ಲಾರ ಹಂಗೊಂದು ಹರಕೊಂಡೆ
ಆರು ಮಕ್ಕಳನಡವಿ ಗಟ್ಟಿ
ಮೂರು ಮಕ್ಕಳ ಬಿಟಗೊಟ್ಟೆ
ಇವನ ಮೇಲೆ ಮನಸಿಟ್ಟೆ
ಎನ್ನ ಬದುಕು ಬಾಳೆವೆಲ್ಲಾ ಬಿಟಗೊಟ್ಟೆ || ೧ ||
ಒಂದನಾಡಿದರೆ ಕಡಿಮೆಯೆಂದೆ
ಮತ್ತೆರಡನಾಡಿದರೆ ಹೆಚ್ಚೆಂದೆ
ಬೆಡಗ ಮಾತಿದು ನಿಜವ್ಯೆತಂದೆ
ಇದು ಸುಜ್ಞಾನಿಗಳಿಗೇ ತಿಳಿತೆಂದೆ || ೨ ||
ಶಿವ ಶಿವಯೆಂಬ ಹಾದಿ ಬೇಡಿಕೊಂಡೆ
ಗುರೂಪದೇಶವ ಪಡಕೊಂಡೆ
ಈ ಭವಕೆ ಬಾರದಂತೆ ಮಾಡಿಕೊಂಡೆ
ಗುರುಗೋವಿಂದನ ಪಾದಾ ಹಿಡಕೊಂಡೆ[೫೨]

ಇಲ್ಲಿ ಷರೀಫರು ಸತಿ ಪತಿ ಭಾವವನ್ನು ಗೋವಿಂದ ಭಟ್ಟರ ಮತ್ತು ತಮ್ಮ ಮಧ್ಯೆ ಅನ್ವಯಿಸಿಕೊಂಡು

ಗುರೂ ಪದೇಶವ ತಡಕೊಂಡು ಭವವನ್ನು ಗೆದ್ದುದಾಗಿ ತಿಳಿಸುತ್ತಾರೆ. ಇಲ್ಲಿ ಗುರುವನ್ನು ಸಾಕ್ಷಾತ್ ದೈವತ್ವಕ್ಕೇರಿಸಿದ್ದು ಸ್ಪಷ್ಟವಾಗಿದೆ.

ಗುರುಗೋವಿಂದ ಭಟ್ಟರ ಮತ್ತು ಶರೀಫರ ಮಧ್ಯದ ಅನ್ಯೋನ್ಯ ಸಂಬಂಧ ಅವರಿಗೆ ಅನೇಕ ಸಂಕಷ್ಟಗಳನ್ನು ತಂದೊಡ್ಡುತ್ತದೆ. ಈ ಬಗೆಯ ಸಂತರು ತತ್ವಪದಕಾರರು ಮುಸ್ಲಿಂ ಮತ್ತು ಮುಸ್ಲಿಮೇತರ ಸಂಪ್ರದಾಯನಿಷ್ಠ ವ್ಯಕ್ತಿಗಳಿಂದ ವಿರೋಧವನ್ನು ಕಟ್ಟಿಕೊಂಡು ಸಹ ಜನಪ್ರಿಯವಾದುದು ಇಂಡಿಯಾದ ಸಾಮಾಜಿಕ ಸಂರಚನೆಯ ಜ್ಯಾತ್ಯಾತೀತ ಧೋರಣೆಗೆ ನಿದರ್ಶನವಾಗಿದೆ. ಅಂತೆಯೇ ಸಾಯಿಬಣ್ಣ ತಾತನವರ ಗುರುಗಳೂ ಕೂಡ ಕೂಡ್ಲೂರು ಆರೂಢ ಶಿದ್ದಲಿಂಗಸ್ವಾಮಿಯವರು ಜಂಗಮರಾಗಿದ್ದರು. ಶಿಲಿವೇರಿ ಶಿವಪ್ಪನವರ ಗುರುಗಳು ಅಲ್ಲೀಪೀರ್ ಸಾಹೇಬ್ ಮುಸ್ಲಿಂರಾಗಿದ್ದರು. ೧೭,೧೮, ಮತ್ತು ೧೯ನೇ ಶತಮಾನದ ಇಂತಹ ಮುಸ್ಲಿಂ - ಮುಸ್ಲಿಮೇತರ ಧಾರ್ಮಿಕ ಸಮನ್ವಯದ ಪ್ರಕ್ರಿಯೆಗಳು ಜೀವಂತ ಪರಂಪರೆಯಾಗಿ ಮುಂದುವರೆದುಕೊಂಡು ಬಂದುದು ಕುತೂಹಲಕರ ವಾದುದಾಗಿದೆ. ಸೂಫಿಗಳು ಇಸ್ಲಾಂನ ಸಂದೇಶಗಳನ್ನು ವಿಶೇಷವಾಗಿ ಕೆಳವರ್ಗಕ್ಕೆ ತಲುಪಿಸಿ ವಿಶಾಲ ಸಮುದಾಯವೊಂದನ್ನು ಇಸ್ಲಾಮೀಕರಣಗೊಳಿಸಿದರೆ, ಇಲ್ಲಿ ಅಂತಹ ಯಾವ ಉದ್ದೇಶಗಳೂ ಇಲ್ಲದೆ ಮುಸ್ಲಿಂ ಮತ್ತು ಮುಸ್ಲಿಮೇತರ ಸಮುದಾಯಗಳು ಒಟ್ಟೊಟ್ಟಿಗೇ ಸಮ್ಮಿಳನಗೊಂಡು ಧಾರ್ಮಿಕ, ಆಧ್ಯಾತ್ಮಿಕ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಿದ್ದುದು ಗಮನಾರ್ಹವಾಗಿದೆ.

ಸಾಯಿಬಣ್ಣ ತಾತನವರ ತತ್ವ ಪದಗಳಂತೂ ಪೂರ್ತಿಯಾಗಿ ಗುರುವಿನ ಮಹಿಮೆ, ಮಹತ್ವವನ್ನು ಕೊಂಡಾಡುತ್ತವೆ. ಸಾಯಿಬಣ್ಣನವರು ಈ ತತ್ವ ಪದಗಳಲ್ಲಿ ಹೆಚ್ಚಾಗಿ ಶಿವನನ್ನು ಸಂಕೇತಸಿಯೇ ದೈವವನ್ನು ಆತ್ಮೀಕರಿಸಿಕೊಂಡರೂ ಪ್ರವಾದಿ ಪೈಗಂಬರರು ಮತ್ತು ಅಲ್ಲಾಹ್ ನ ನ್ನೊಳಗೊಂಡ ಪದ್ಯವೊಂದು ಕುತೂಹಲ ಕೆರಳಿಸುತ್ತದೆ.

ಅಲ್ಲಾ ಮೊಹಮ್ಮದ ಭಜನೇ ನಿಲ್ಲದಲೆ ಧ್ಯಾನಿಸೊ ಯಲ್ಹೋದರೆ ಬಿಡದೆ ಜೀವೀ ಮುಲ್ಲ ಮುಸಲ್ಮಾನರು

ಅಲ್ಲ ಖುದಾನ ಭಜನೆ ಸೊಲ್ಗಿನೊಳು ಮಾಡುವರು ಜೀವೀ || ಪ ||

ಮುಸಲ್ಮಾನರೆಲ್ಲ ಗುಸಲ್ ದುರವರು (?) ಅಸಲಲ್ನಿಡೆಯು ಕೇಳು ಜೀವೀ ಕಸಜೀನ (?) ಮಾಡಲು ಬಿಸಮಿಲ್ಲ

ವೆಂಬುವರು ನಬಿರಸೂಲಲ್ಲ ಜನೀಯ ಜೀವೀ ‖ ೧ ‖

ಇಬ್ಬರೂ ವಂದಾಗಿ ಹಬ್ಬಿದರು ಜಗವೆಲ್ಲ ಒಬ್ಬರನು ಬಿಡದಲೆ ಜೀವೀ |

ಇಬ್ಬರೇ ತಾವಾಗಿ ಸುಖ ಜೀವ ಸಲಹವರುಗಬ್ಬಿ ಮಾತು ಬ್ಯಾಡಜೀವಿ

ಅಬ್ಬರದಿ ಜಗವೆಲ್ಲ ಉಬ್ಬಿ ಜನಿಸಿದಾವು ಸಖಿ ಹೇಳುವೆ ಕೇಳುಜೀವಿ

ಸರ್ವರೋಳ್ ಮೊಹ್ಮದು ಒಬ್ಬನೇ ತುಂಬಿಹನುದುರ್ಬಿಗಾಳರಿಯರು ಜೀವೀ ಇರುವೆ ಮೊದಲಾದ ಕಡೆ

ಸರ್ವವೆಲ್ಲ ಜನಿಸಿದವು ಗುರುಮೊಹಮೊದಲ್ಲದಿಂದ ಜೀವಿ |

ಗುರುಪೇಳಿದ ಮಾತು ಕುರುಹಿಡಿದು ಹೇಳುವೆನು ಅರುವಿಡಿದುಕೇಳುನೀ ಜೀವಿ

ಕಣ್ಣು ಮೂಗು ಬಾಯಿಯಲ್ಲ ತಾಳಿ ಬಂದರೂ ಅಲ್ಲ ಮೊಹಮ್ಮದಿಬ್ಬರು ಜೀವೀ ಸಂಣದೂ-ದೊಡ್ಡದೂ

ಅನ್ನದಲೆ ತುಂಬಿಹರು ಕುಲ್ಲರೇನ್ನಲ್ಲರೂ ಜೀವೀ ಓದಿದರೆ ತಿಳಿಯದು ಸಾಧು ಗುರುವು ಬಲ್ಲನಾದ

ಮೊಹಮೋದು ಜೀವ ಜೀವಿ ಶೋಧಿಸಿ ಹೇಳಿದೆನು ಸೈಯದ ಮಾರ್ಗದ ಮಾತು ಸಾಧುಗುರುಸೇವೆ ಮಾಡು

ಜೀವೀ

ಗುರುಮೊಹಮ್ಮದು ಭಜನೆ ಸ್ಥಿರದಿ ಮಾಡುಯೆಂದು ಗುರುಸಿದ್ಧ ಹೇಳಿದನು ಜೀವಿ ಇರಿವಿನೊಳಗೆ ಇರಿವಿ

ಭರಿತವಾಗೀ ಇರುವ ಪರಂಜ್ಯೋತಿ ಬೆಳಗೀಳೀ ಜೀವಿ‖[25]

ಗುರು ಮೊಹಮ್ಮದ ಭಜನೆ ಸ್ಥಿರದಿ ಮಾಡೂಯೆಂದು ಗುರುಸಿದ್ದ ಹೇಳಿದನು 'ಜೀವಿ' ಎಂಬುದಾಗಿ ತಮ್ಮ ಗುರುಗಳು ವಿವರಿಸಿದ್ದನ್ನು ತಿಳಿಸುತ್ತಾರೆ. ಇಲ್ಲಿ ಸಾಯಿಬಣ್ಣನವರಿಗಾಗಲಿ ಶರೀಫರಿಗಾಗಲಿ, ದೈವದ ಸಂಕೇತಗಳು ಸಾಮಾಜಿಕ ಧಾರ್ಮಿಕ ನೆಲೆಯಲ್ಲಿನ ಪರಿಚಿತ ಅಪ್ಯಾಯಮಾನ ಹೆಸರುಗಳಾಗಿವೆಯೇ ಹೊರೆತು ಬೇರೆಯಲ್ಲ. ಇದನ್ನು ಮತ್ತಷ್ಟು ಸ್ಪಷ್ಟ ಪಡಿಸುವುದಾದರೆ 'ಶರೀಫರು' ಕೆಳವರ್ಗದ 'ಎಲ್ಲಮ್ಮ'ನ ಕುರಿತು ಹಾಡಿದರೆ ಅವರಿಗೆ ಎಲ್ಲಮ್ಮನ ಬಗೆಗೆ ಅಪಾರ ಭಕ್ತಿ, ಶ್ರದ್ಧೆಯಿತ್ತೆಂಬುದಾಗಿ ಅರ್ಥೈಸುವುದಲ್ಲ. ಎಲ್ಲಮ್ಮನಾಗಲೀ ಇತರೇ ದೈವಗಳಾಗಲಿ ಅಂತಿಮ ದೈವಿಕ ಸತ್ಯದ ವೈವಿಧ್ಯಮಯ ಮುಖಗಳಷ್ಟೇ. ಅವು

ತಮ್ಮ ಪರಿಸರದೊಳಗಣ ಆಪ್ತ ದೈವಿಕ ಪ್ರತಿಮೆಗಳಾದುದರಿಂದ ಅವನ್ನು ಯಾವ ಸಂಕೋಚವೂ ಇಲ್ಲದೆ ಬಳಸಿಕೊಂಡಿದ್ದಾರೆ. ಒಟ್ಟಾರೆ ಇಲ್ಲಿ ಗಮನಿಸಬೇಕಾದುದಿಷ್ಟೆ. ಇಂತಹ ಚೇತನಗಳ ಮಾನವೀಯನೆಲೆಯ ಅಭಿವ್ಯಕ್ತಿಯು ಶುದ್ಧ ಧಾರ್ಮಿಕತೆಯ, ವಿಶ್ವ ಭ್ರಾತೃತ್ವದ ಆಶಯಗಳನ್ನು ಪ್ರಕಟಪಡಿಸುತ್ತವೆಯೆಂಬುದಾಗಿದೆ.

೨.೩೩ ಗುರುಬೋಧ

ಪಾರಮಾರ್ಥಿಕ ಪಥದಲ್ಲಿ ಮಾರ್ಗ ತೋರಿಸಲು ತತ್ವಪದಕಾರರಿಗೆ ಗುರುವು ಅಗತ್ಯವೆಂಬುದನ್ನು ಮನಗಂಡಿದ್ದಾಯಿತು. ಈಗ ಅವರು ತಮ್ಮ ಶಿಷ್ಯರಿಗೆ ಅರಹುವ ಅರಿವಿನ ಸ್ವರೂಪದ ಬಗ್ಗೆ ಪರಿಶೀಲಿಸಬಹುದು. ಅನುಭಾವಿಕ ನೆಲೆಗಳಲ್ಲಿ ವ್ಯಕ್ತಿಯ ವೈಯಕ್ತಿಕ ಧಾರ್ಮಿಕ ಅನುಭವಗಳಿಗಷ್ಟೆ ಹೆಚ್ಚಿನ ಪ್ರಾಮುಖ್ಯತೆಯಿದೆ. ಪ್ರಪ್ರಥಮವಾಗಿ ಅವನು ಆಧ್ಯಾತ್ಮಿಕ ಹಸಿವಿನಿಂದ ತುಂಬಿದವನಾಗಿರಬೇಕು. ಸೃಷ್ಟಿಯನ್ನು- ಅಂದರೆ ಇಲ್ಲಿ ವಿಶಾಲಾರ್ಥದಲ್ಲಿ ದೇವರು, ಮನುಷ್ಯಾತೀತವಾದದ್ದು , ಅನಂತವೆಂದರ್ಥ - ಪರಿಭಾವಿಸುತ್ತಲೇ ತನ್ನೊಳಗುಂಟಾಗುವ ಪರಿವರ್ತನೆಗಳ ಆವರ್ತನೆಗಳನ್ನು ಒಂದು ಕ್ರಮಕ್ಕೊಳ ಪಡಿಸುವ, ಮತ್ತದರಿಂದ ಕಾಣಬಯಸುವ ದರ್ಶನದ ಕಾಣ್ಕೆಯನ್ನು ಕಂಡು ಕೊಳ್ಳುವಲ್ಲಿ ಗುರುವಿನ ಸಹಾಯ ಪಡೆಯುತ್ತಾನೆ. ಸಾಮಾನ್ಯವಾಗಿ ವಾಚ್ಯಾರ್ಥದಲ್ಲಿ ಬಳಸಲ್ಪಡುವಂತೆ ಉಪದೇಶಕನ ಸ್ಥಾನದಲ್ಲಿ ಗುರುವು, ವಿಧೇಯನಾಗಿ ಆಲಿಸುವ ಶಿಷ್ಯನಂತಲ್ಲ. ಇಲ್ಲಿ ಗುರು ಸ್ನೇಹಿತ, ಹಿತೈಸಿ, ತಂದೆ, ತಾಯಿ, ಬಂಧು ಎಲ್ಲವೂ ಆಗಿರುತ್ತಾನೆ. ಅದರಂತೆಯೇ 'ಪಾರಮಾರ್ಥಿಪಥ',' ಅನುಭಾವ',' ಆಧ್ಯಾತ್ಮಿಕತೆ' ಮೊದಲಾದ ಪದಗಳನ್ನು ಸಹ ನಾವು ಅವುಗಳ ಸವಕಲಾರ್ಥದಲ್ಲಿ ಬಳಸಲ್ಪಟ್ಟರೆ ಅವುಗಳ ಮೂಲ ಉದ್ದೇಶವೇ ಮರೆಯಾಗಿ ವಿಪರೀತಾರ್ಥ ಬಂದು ಬಿಡುವ ಸಾಧ್ಯತೆಯಿದೆ. ಎಲ್ಲ ಮನುಷ್ಯರನ್ನು ಪ್ರೀತಿಸುವ, ಮಾನವೀಯತೆ, ದಯಾಪರತೆಯುಳ್ಳ, ತೀವ್ರ ಸಂವೇದನಾ ಶೀಲ ಮನುಸ್ಸುಗಳ ತುಡಿತವೇ ಧಾರ್ಮಿಕತೆಯ ಒಳಸ್ವರೂಪವಾಗಿದೆ. ಎಲ್ಲ ಪ್ರವಾದಿಗಳ, ಧರ್ಮದ ನೇತಾರರ ಮೂಲ ಆಶಯ ಕೂಡ ಮನುಷ್ಯನ ಕೆಡುಕಿನ ವಿರುದ್ಧದ ಹೋರಾಟವೇ ಆಗಿತ್ತು.

ಇಲ್ಲಿ ವಿವರಿಸಲಾಗಿರುವ ತತ್ವ ಪದಕಾರರ ಕುರಿತಂತೆ ಪ್ರಚಲಿತದಲ್ಲಿರುವ 'ಗುರುಭೋದ'ವು 'ಗುರುದೀಕ್ಷೆ,' 'ಜ್ಞಾನದೀಕ್ಷೆ' ಎಂಬ ಹೆಸರುಗಳಿಂದ ತುಂಬಾ ಹಿಂದಿನಿಂದಲೂ ಆಚರಣೆಯಲ್ಲಿದ್ದಂತಿದೆ. ಬಹುಶಃ ದರ್ಗಾಗಳ ಮೂಲಕ ಇದಕ್ಕೆ ವಿಶೇಷ ಪ್ರಾಶಸ್ತ್ಯ ದೊರಕಿ ಸೂಫಿ ಅನುಯಾಯಿಗಳಿಗೆ ಧಾರ್ಮಿಕೋಪದೇಶ ನಿಡುವ ಕ್ರಿಯೆಯಾಗಿ ಪರಿವರ್ತನೆಗೊಂಡಂತಿದೆ. ೧೭ನೆಯ ಶತಮಾನದ ಬಿಜಾಪುರ ಸೂಫಿ ಉಪದೇಶ ಮಂದಿರಗಳಲ್ಲಿ ಮುಸ್ಲಿಮೇತರ ಅನುಯಾಯಿಗಳಿಗೆ ಸೂಫಿಗಳು ಅಥವಾ ಅವರ ಉತ್ತರಾಧಿಕಾರಿಗಳು ಧಾರ್ಮಿಕ ಉಪದೇಶ ನೀಡಿ 'ಇಸ್ಲಾಂ'ನ ಪರಧಿಯೊಳಗೆ ಸೇರಿಸಿಕೊಳ್ಳುವ ಸಂಪ್ರದಾಯವಿತ್ತು. ನಿದರ್ಶನಕ್ಕೆ ೧೭ನೇಶತಮಾನದ ಹಾಶೀಮ್ ಪೀರನು (ಶಹಾ ಆಸಿಮ್) ತನ್ನ ಉಪದೇಶ ಸಮಾರಂಭಗಳಲ್ಲಿ(ಬೈಯಾತ್) ಮುಸ್ಲಿಮೇತರ ಶಿಷ್ಯನಿಗೆ ನೀಡುತ್ತಿದ್ದ ದೀಕ್ಷೆಯ ವಿವರಗಳು ಹೀಗಿವೆ. 'ಹಾಶಿಮ್ ಪೀರನ ಶಿಷ್ಯನು ಪೀರನ ಕೈಹಿಡಿದು ಮೆಕ್ಕಾದ ಕಡೆಗೆ ಮುಖಮಾಡಿ ಸ್ವಲ್ಪದೂರ ನಡೆಯುತ್ತಾನೆ. ಕುರಾನಿನ ಕೆಲವು ಮಂತ್ರಗಳನ್ನುಪಠಿಸಿ ಇಸ್ಲಾಂನ ನಂಬಿಕೆಗಳಿಗೆ ಶರಣು ಹೋಗುವ ಮಂತ್ರಗಳನ್ನು ಹೇಳಿ ದೇವರು ಮತ್ತು ಮಾನವರ ಮಧ್ಯೆ ಇರುವ ತನ್ನ ಹಾಶೀಮ್ ಪೀರನಿಗೆ ಸ್ವಾಮಿ ನಿಷ್ಟನಾಗಿ ಇರುವುದಾಗಿ ಪ್ರಮಾಣ ಮಾಡುತ್ತಾನೆ.[೫೪] 'ನಾನು ಅಪನಂಬಿಕೆ ಮತ್ತು ಅ - ಸ್ವಾಮಿ ನಿಷ್ಠೆಯಿಂದ ಹೊರಬಂದಿದ್ದೇನೆ. ಇಸ್ಲಾಂ ಧರ್ಮದ ಅಂತರಂಗನ್ನು ಸೇರಿದ್ದೇನೆ.ಎಂದು ಉಚ್ಚರಿಸುತ್ತಾನೆ. ಹಾಶೀಮ್ ಪೀರನನ್ನು ಅನುಸರಿಸಿ ಅವನು ಮುಸ್ಲಿಮೇತರ ತನ್ನ ಧರ್ಮವನ್ನು ಬಿಡುತ್ತಾನೆ ಎಂಬುದನ್ನು ಹಾಶೀಮ್ ಪೀರನ ಕುರಿತಾದ ಸಾಹಿತ್ಯದಲ್ಲಿ ಉಲ್ಲೇಖಿಸಲಾಗಿದೆ.

ಈ ಅಧ್ಯಾಯದಲ್ಲಿ ಚರ್ಚಿಸಲಾದ ಮುಸ್ಲಿಮ್ ಮತ್ತು ಮುಸ್ಲಿಮೇತರ ತತ್ವತಕಾರರಿಗೆ ಸಂಬಂಧಿಸಿದಂತೆ 'ಗುರುಭೋದ' ಹೆಸರಿನ ಕ್ರಿಯೆಯು, ಸ್ವರೂಪದಲ್ಲಿ ಮೇಲೆ ವಿವರಿಸಿದಂತೆ (ಹಾಶೀಮ್ ಪೀರ್ ಮತ್ತವರ ಮುಸ್ಲಿಮೇತರ ಶಿಷ್ಯ ವರ್ಗದ ಧಾರ್ಮಿಕ ಕ್ರಿಯೆ) ಇದ್ದರೂ ಇಲ್ಲಿದೀಕ್ಷೆ. ಪಡೆದ ಶಿಷ್ಯ ಇಸ್ಲಾಂಗೆ ಪರಿವರ್ತನೆಗೊಳ್ಳುವುದಿಲ್ಲ. ಬಹುಶಃ ಅದು ಈ ಹಿಂದಿನ ಮತಪರಿವರ್ತನೆಯ ಕುರುಹಾಗಿ ಉಳಿದುಕೊಂಡು ಬಂದಂತಿದೆ. ಕರ್ನೂಲು ಜಿಲ್ಲೆಯ ಗುಡೇಕಲ್ಲಿನಲ್ಲಿರುವ ಅಲ್ಲೀಪೀರ್ ಸಾಹೇಬರು ಮತ್ತವರ

ಉತ್ತಾರಾಧಿಕಾರಿಗಳಿಂದ ಅವರ ದರ್ಗಾ ಸಂಸ್ಥೆಯು ಈ ಬಗೆಯ ದೀಕ್ಷೆ ನೀಡುತ್ತದೆ. ಇದರ ಪ್ರಭಾವವು ಕರ್ನಾಟಕ ಮತ್ತು ಆಂಧ್ರದ ಬಳ್ಳಾರಿ, ರಾಯಚೂರು, ಚಿತ್ರದುರ್ಗ ಅನಂತಪುರ, ಕರ್ನೂಲು ಜಿಲ್ಲೆಗಳಲ್ಲಿ ಅದರಲ್ಲೂ ಗಡಿಭಾಗಗಳಲ್ಲಿ ಅಧಿಕವಾಗಿದೆ. ಇಲ್ಲಿ ದರ್ಗಾದೊಳಗಡೆ ಅಲ್ಲೀ ಪೀರ್ ಸಾಹೇಬರ ಉತ್ತರಾಧಿಕಾರಿ 'ಗುರುದೀಕ್ಷೆ' ಪಡೆಯುವವನನ್ನು ದರ್ಗಾದೊಳಗಡೆಯ ಏಕಾಂತ ಸ್ಥಳದಲ್ಲಿ ಕೊಂಡೊಯ್ದು ಉಪದೇಶ ನೀಡಲಾಗುತ್ತದೆ. ಇಲ್ಲೂ ಸಹ ಗುರುವು (ದರ್ಗಾದಉತ್ತರಾಧಿಕಾರಿ) ಶಿಷ್ಯನ ಕೈಹಿಡಿದು ಕುರಾನಿನ 'ಕೆಲವು' 'ಸೂರಾ' ಗಳನ್ನು ಹೇಳುತ್ತಾನೆ. ತುಂಬಾ ಸರಳವಾದ ಈ ಕ್ರಿಯೆ ಮುಗಿದ ನಂತರ ದೀಕ್ಷೆ ಪಡೆದವನು ಸಮಾಜದ ಉಳಿದವರಿಗಿಂತ ತುಂಬಾ ಭಿನ್ನನೆಂದು ಗುರುತಿಸಲ್ಪಡುತ್ತಾನೆ. ಅಂದಿನಿಂದ ಅವನು 'ಸಾತ್ವಿಕ' ವರ್ತನೆಗಳನ್ನು ಕಟ್ಟುನಿಟ್ಟಾಗಿ ರೂಢಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಇಂತಹ ಗುರುದೀಕ್ಷೆ ಪಡೆದ (ಇಲ್ಲಿನ ಪರಿಭಾಷೆಯಲ್ಲಿ ಹೇಳುವದಾದರೆ 'ಗುರುಬೋಧ' ತಗೊಂಡ ಅಥವಾ ಪಡಕೊಂಡ) ಅಸಂಖ್ಯಾತ ಮಂಡಳಿಗಳು ಅಂದರೆ ಗುರು ಭೋದದ ಆಶ್ರಮಗಳು ಈ ಭಾಗದಲ್ಲಿವೆ. ಈ ಅಧ್ಯಾಯದಲ್ಲಿ ಚರ್ಚಿಸಲಾಗಿರುವ, ತತ್ವಪದಕಾರ ಶಿಲಿವೇರಿ ಶಿವಪ್ಪನವರು 'ಅಲ್ಲೀಪೀರರ' ಶಿಷ್ಯನಾಗಿದ್ದುದಲ್ಲದೆ ಅವರ ತತ್ವಪದಗಳ ಅಂಕಿತನಾಮ 'ಅಲ್ಲೀಪಿರ್ 'ಎಂದಿದೆ. ಶಿಲಿವೇರಿ ಶಿವಪ್ಪನವರು ಕನ್ನಡಮತ್ತು ತೆಲುಗುಗಳೆರಡರಲ್ಲೂ ತತ್ವಪದಗಳನ್ನು ರಚಿಸಿದ್ದರೆ, ಅಲ್ಲೀಪೀರರು ತೆಲುಗು ಮತ್ತು ಉರ್ದುಗಳೆರಡರಲ್ಲೂ ತತ್ವಪದಗಳನ್ನು ರಚಿಸಿದ್ದಾರೆ.

ಶರೀಫರು ಗುರುಬೋಧೆಯನ್ನು ಸಾಂಕೇತಿಕವಾಗಿ ಹೀಗೆ ವಿವರಿಸುತ್ತಾರೆ.

ಬೋಧ ಒಂದೇ ಬ್ರಹ್ಮ
ನಾದ ಒಂದೇ
ಸಾಧನ ಮಾಡುವ ಹಾದಿ ಒಂದೇ
ಆದಿಪದ ಒಂದೇ
ಬಿಂದು ಒಂದೇ ನಿಜಾ
ನಂದ ಒಂದೇ
ತಂದೆ ಸದ್ಗುರು ಗೋವಿಂದಗ ಒಂದೇ

ಅಂದಿಗಿಂದಿಗೆ ಒಂದೇ
ದೋಷ ಒಂದೇ ನಿರ್
ದೋಷ ಒಂದೇ
ಶಿಶುನಾಳಧೀಶನ ಭಾಷೆ ಒಂದೇ
ಭವನಾಶ ಒಂದೇ[39]

ಈ ಹಾಡಿನಲ್ಲಿ ಗುರುವಿನ ಬೋಧೆ ಮತ್ತು ಅದರಿಂದ ಸಿಕ್ಕುವ ಅರಿವು ಅಖಂಡತೆಯ ಬಗೆಗಿನ ಅರಿವನ್ನು ಹೆಚ್ಚಿಸುತ್ತದೆಯೆಂಬ ಧ್ವನಿಯು ಅಡಕವಾಗಿದೆ. ಮತ್ತೊಂದು ಪದ್ಯದಲ್ಲಿ ತತ್ವ ಭೋವನೆಯಿಂದಾಗಿ ಇಹದ ಸಂಕಷ್ಟಗಳನ್ನೆಲ್ಲ ಗೆದ್ದುದಾಗಿ ವಿವರಿಸುತ್ತಾರೆ.

ತತ್ವಬೋಧದ ದೊಳಗಿದ್ದು ಭವ ಬಾಧೆಯನು ಗೆದ್ದು
ಪರನಾದದೊಳಗಿದ್ದ ಮೇಲೆ ಮರುಳೆ
ಬೋಧ ವಾದಿಕರು ಬಹುತರದಿ ಬಗಳುವ ಜನರಪ
ವಾದ ಕಂಜುವದ್ಯಾಕಲೇ ಮರುಳೆ

ಈ ಹಾಡು ವಿವರಿಸುವ ಹಾಗೆ 'ಬೋಧವಾದಿಕರು' ಅಂದರೆ 'ಗುರುಬೋಧ'ವನ್ನು ಸಮರ್ಥಿಸುವವರು, ಆ ವರ್ಗದವರು ಬಹುತರದಿ ಬಗಳುವ ಜನಾಪವಾದಕಂಜುವದ್ಯಾಕಲೇ ಮರುಳೆ ? ಎಂದು ಪ್ರಶ್ನಿಸುವುದನ್ನು ಗಮನಿಸಿದರೆ, ಈ ತರಹದ 'ಗುರುಬೋಧ'ದ ಪರಂಪರೆಯವರೆಲ್ಲರನ್ನುದ್ದೇಶಿಸಿ ಶರೀಫರು ಹೇಳುವಂತಿದೆ.

ಶರೀಫರ 'ಬುಡು ಬುಡಿಕ್ಯಾ' ಎಂಬ ದೀರ್ಘ ಪದ್ಯವೊಂದು ಗಮನಾರ್ಹವಾದುದಾಗಿದೆ. ಇಡಿಯಾಗಿ ಈ ಪದ್ಯ ಧಾರ್ಮಿಕತೆಯ ರಹಸ್ಯಾರ್ಥಗಳನ್ನು ತುಂಬಾ ಆಪ್ತವಾದ ಧ್ವನಿಯಲ್ಲಿ ತಿಳಿಸಿಕೊಡುತ್ತದೆ.

ಓಂ ದೇವ ದೇವರ ದೇವರ ಮಗನ
ದೇವ ಲೋಕದ ಬುಡು ಬುಡಿಕ್ಯಾನಾ
ಭಾವ ಶುದ್ಧವಾಗಿ ಕೇಳಿರಿ ಸುಮ್ಮನ

ದೇವ ಲೋಕದ ಸತ್ವಾಧೀನ
-- -- --- --- -- --- --- -- - -
--- --- --- -- --- - - --
--- - -- --- --- --- -- -
ತೈಲವಿಲ್ಲದೊಂದು ಜ್ಯೋತಿಯು ಉಂಟು
ತೆಲಿಯೊಳಗೆ ತಾ ಬೆಳಗುತದವ್ವಾ
ನಯನ ಹಿಡಿದು ನೀ ನೋಡವ್ವ ತಂಗಿ
ಬೈಲಿಗೆ ಬಯಲಾಗಿ ಹೋಯಿತು ಮಗಳೆ ||
ಸ್ವರ್ಗದ ಹಾದಿ ಬೇಡ ಬೇಕು ಮಗಳೆ
ಭಾರ್ಗವ ದೇವನ ನೆನಿಬೇಕು ತಂಗಿ
ನಿರ್ಗುಣ ಸಮಾಧಿ ಮಾಡಬೇಕವ್ವ
ದುರುಗಮ್ಮನ ಗುಡಿಗೆ ಹೋಗಬೇಕು ಮಗಳೆ[೫೬]

ಮುಂತಾಗಿ ಚೌಪದಿಯ ಈ ದೀರ್ಘಕಾವ್ಯದಲ್ಲಿ ಶರೀಫರು ಗ್ರಾಮೀಣ ಹೆಣ್ಣು ಮಗಳಿಗೆ ದುರ್ಗಿಗೆ ನಡೆದುಕೊಳ್ಳಲು ಸೂಚಿಸುತ್ತಾರೆ. ಶರೀಫರಿಗೆ ಅಥವಾ ಗೋವಿಂದ ಭಟ್ಟರಿಗೆ ದೊರಕಬಹುದಾದ ಅತ್ಯುನ್ನತ ಆಧ್ಯಾತ್ಮಿಕ ಸಿದ್ಧಿಯು, ದರ್ಶನವು ಪ್ರತಿಯೊಬ್ಬರಿಗೂ ಅಲಭ್ಯವಾದರೂ ಸಾಮಾನ್ಯ ಧಾರ್ಮಿಕ ಅನುಭವಗಳನ್ನು ಒಂದಲ್ಲ ಒಂದು ವಿಧದಲ್ಲಿ ದಕ್ಕಿಸಿಕೊಳ್ಳಲು ಸಮರ್ಥರೇ ಇದ್ದಾರೆ. ಮನುಷ್ಯನು ಸೃಷ್ಟಿ ವೈಚಿತ್ರ್ಯಗಳ ಅಗಣಿತ ಅನಂತದೊಡನೆ ಸಂಬಂಧ ಕಲ್ಪಿಸಿಕೊಳ್ಳುವಾಗಲೇ ಧಾರ್ಮಿಕತೆಯ ಬೀಜಾಂಕುರವಾಗುವುದು. ಈ ಅರ್ಥದಲ್ಲಿ ನೋಡಿದರೆ ಈ ಬಗ್ಗೆ ಪ್ರತಿಯೊಬ್ಬನಿಗೂ ಅವನಿಗೆ ಅವನವನವೇ ಆದಂತಹ ಪರಿಕಲ್ಪನೆಗಳಿರಲು ಸಾಧ್ಯ. ಈ ನೆಲೆಯಲ್ಲಿ ದುರುಗಮ್ಮನಾಗಲಿ, ಗಾಳೆಮ್ಮನಾಗಲಿ ಈ ಅನಂತದ ಪ್ರತೀಕಗಳೇ ಆಗಿದ್ದಾರೆ. ಶರೀಫರು ಅವರವರಿಗೆ ಇಷ್ಟವಾದ ಇಂತಹ ಪ್ರತೀಕಗಳೊಂದಿಗೆ 'ಆಧ್ಯಾತ್ಮದ ಅರಿವು" ಪಡೆಯಲು ಕೋರುತ್ತಿದ್ದಾರೆ. ಈ ಬಗೆಯ ದೈವತ್ವದ, ಆಧ್ಯಾತ್ಮಿಕತೆಯ ಸಾಮಾನ್ಯೀಕರಣವು ಭಕ್ತಿಪಂಥದ ಮುಖ್ಯ ಲಕ್ಷಣವಾಗಿದ್ದು ಅದು ವೈದಿಕ, ಅವೈದಿಕದ ಎಲ್ಲ ವರ್ಗಗಳನ್ನು ಸುಲುಭವಾಗಿ ತಲುಪಲು ಇದರಿಂದ ಸಹಾಯಕವಾಯಿತು.

ಈ ಗುರುವಿನ ಬೋಧದ ಮಹತ್ವ, ಅದರ ರಹಸ್ಯಾತ್ಮಕತೆ ಮತ್ತು ತಮ್ಮ ಅನುಭಾವಿಕ ಪ್ರಭೆಯಲ್ಲಿ

ಹೊಳೆದ ಹೊಸ ಅರ್ಥಗಳನ್ನು ವಿಶಾಲ ಸಮುದಾಯವೊಂದಕ್ಕೆ ತಲುಪಿಸುವ ಸಂದೇಶವಾಹಕ ಗುಣವನ್ನು ಈ ತತ್ವಪದಕಾರರ ಹಾಡುಗಳು ಪಡೆದುಕೊಂಡಿವೆ. ಇವನ್ನು ಜೀವಂತ ಪರಂಪರೆಯಾಗಿ ಮುಂದುವರೆಸಿಕೊಂಡು ಬರುವ ಭಕ್ತಗಣಗಳೂ ಇವೆ. ಶರೀಫರಂತಹ, ಸಾಯಿಬಣ್ಣನವರಂತಹ ಅನುಭಾವಿಗಳು ಈಗಿಲ್ಲದಿದ್ದರೂ ಅವರ ಸಂದೇಶಗಳನ್ನು ಜೀವಂತವಾಗಿಡುವ ವಿಶಾಲ ಜನಸಮುದಾಯವಿದೆ.

೧೭ನೆಯ ಶತಮಾನದಿಂದೀಚೆಗೆ ಹೆಚ್ಚಾಗಿ ಕಂಡು ಬರುವ ತತ್ವಪದಕಾರರಿಗೆ ಮತಾಂತರೀಕರಣ ಸಾಮಾಜಿಕಸ್ಥಾನಮಾನ ಯಾವ ಮಹತ್ವದ ಉದ್ದೇಶಗಳೂ ಇಲ್ಲದೆ ತಾರತಮ್ಯ ಭಾವವನ್ನು ಮೆಟ್ಟಿ ವೈಚಾರಿಕ ನೆಲೆಯಲ್ಲಿ ಧಾರ್ಮಿಕತೆಯ ಹೊಸ ಅರ್ಥ ಕಂಡುಕೊಳ್ಳಲು ಪ್ರಯತ್ನಿಸಿದರು ಇಲ್ಲಿನ ತತ್ವಪದಕಾರರಿಗೆ ಯಾವ ರಾಜಾಶ್ರಯದ ಹಂಗೂ ಇಲ್ಲ. ಮತದ ಕಟ್ಟಳೆಯೂ ಇಲ್ಲ. ದೇವರ, ಅಧ್ಯಾತ್ಮಿಕತೆಯ ನಿಜಸ್ವರೂಪವನ್ನು ಹುಡಕ ಹೊರಟು ಮನುಷ್ಯ ಸಂಬಂಧಗಳ ವಿಚ್ಛಿದ್ರತೆಯನ್ನು ಕಂಡು ದಿಗ್ಭ್ರಮೆಗೊಂಡು ಲೌಕಿಕದೆಡೆಗೆ ವಿಮುಖರಾದಂತೆ ತೋರುತ್ತದೆ. ಭಾಗಶಃ ಇದಕ್ಕೆ ವಸಾಹತುಶಾಹಿಯ ಆಕ್ರಮಣಶೀಲತೆ, ಆಧುನಿಕತೆಯ ವಿಕಾಸಶೀಲತೆಯೊಂದಿಗೆ ಎದುರಾದ ಹೊಸ ಆತಂಕಗಳು ಕಾರಣವಾದಂತಿವೆ. ಆದರೆ ಇದು ಬದುಕಿನಿಂದ ಪಲಾಯನವಾಗಿರದೆ ಎಲ್ಲಾ ಸಂವೇದನಾಶೀಲ ಮನಸ್ಸುಗಳು, ವಾಸ್ತವದ ತಲ್ಲಣಗಳನ್ನು, ಸಂದಿಗ್ಧಗಳನ್ನು ಕಂಡು ತಳೆಯುವ ಭಾವವಾಗಿದೆ ಮತ್ತು ಮನಸ್ಥಿಯಾಗಿದೆ. ಹೀಗೆ ತಲ್ಲಣಗೊಂಡ ಮನಸ್ಸುಗಳು ಕ್ರಿಯಾಶೀಲವಾಗುವುದು ಅಥವಾ ಜಡಗೊಳ್ಳುವುದು ಕಾಲಮಾನದ ಒತ್ತಡಗಳು ಪರಿಸ್ಥಿತಿಗಳನ್ನವಲಂಬಿಸಿದುದಾಗಿದೆ. ಈ ನೆಲೆಯಲ್ಲಿ ಅರ್ಥೈಸಿದಾಗ ಮಾತ್ರ ತತ್ವಪದಕಾರರನ್ನು ನಾವು ವಸ್ತುನಿಷ್ಠವಾಗಿ ಗ್ರಹಿಸಲು ಸಾಧ್ಯ. ಇಲ್ಲವೆಂದಾದಲ್ಲಿ ಇವರು ಬದುಕಿಗೆ ವಿಮುಖರಾದ ಶುಷ್ಕ ಧಾರ್ಮಿಕ ವ್ಯಕ್ತಿಗಳಾಗಿ ಬಿಡುವ ಅಪಾಯವಿದೆ.

ಈ ಅಧ್ಯಾಯದಲ್ಲಿ ಸೂಫಿಗಳು ಮತ್ತು ತತ್ವಪದಕಾರರ ಕಾಣ್ಕೆ ಮತ್ತು ತಾತ್ವಿಕ ನೆಲೆಗಳನ್ನು ವಿಶ್ಲೇಷಿಸಲಾಗಿದೆ. ಮುಂದಿನ ಅಧ್ಯಾಯದಲ್ಲಿ ಪ್ರಸ್ತುತ ಇದರ ಅರ್ಚಣಾತ್ಮಕಸ್ವರೂಪವನ್ನು ಗಮನಿಸುವುದರೊಂದಿಗೆ ಹಿಂದೂ - ಮುಸ್ಲಿಂ ಸಾಂಸ್ಕೃತಿಕ ಸಮನ್ವಯವನ್ನು ಅರ್ಥೈಸಲಾಗುವುದು.

[illegible]

[illegible]

[illegible]

ಅಡಿಟಿಪ್ಪಣಿಗಳು

೧.ಅಬ್ದುಲ್ ಮಜೀದ್ ಖಾನ್ - 'ಜಲಾಲುದ್ದೀನ್ ರೂಮಿ' ಪು.೧೦

೨.ಮ.ಸು.ಕೃಷ್ಣಮೂರ್ತಿ - 'ಸೂಫಿ ಪ್ರೇಮಕಾವ್ಯ' ಪು.೧೬

೩. ಅದೇ ಪು.೫೫

೪. ಅದೇ ಪು.- ೬೦

೫. ಆರ್.ಎಂ.ಈಟನ್ - 'ಸೂಫೀಸ್ ಆಫ್ ಬಿಜಾಪುರ್' ಪು.೨೪೫

೬. ಅದೇ ಪು.೨೪೬

೭. ಅದೇ ಪು.೨೪೮

೮. ವಿವರಗಳಿಗೆನೋಡಿ: ಮ.ಸು.ಕೃಷ್ಣಮೂರ್ತಿ,
-'ಸೂಫಿಪ್ರೇಮಕಾವ್ಯ' ಪು.೬೦

೯. ಈಟನ್ ಆರ್.ಎಂ. - 'ಸೂಫೀಸ್ ಆಫ್ ಬಿಜಾಪುರ್ ' ಪು.೨೬೦

೧೦.ಮ.ಸು.ಕೃಷ್ಣಮುರ್ತಿ - 'ಸೂಫಿಪ್ರೇಮಕಾವ್ಯ' ಪು.೧೦೮

೧೧.ಸೈಯದ್ ಶಹಾ ಕುಸ್ರೋಹುಸೇನಿ - 'ಸೈಯದ್ ಮಹಮ್ಮದ್ ಅಲ್ -ಹುಸೇನಿ ಗೇಸುದರಾಜ್
'ಆನ್ -ಸೂಫಿಜಂ' ಪು.೧೦

೧೨. ಅದೇ ಪು.೧೧

೧೩. ಮೊಹಮ್ಮದ್ ಸುಲೇಮಾನ್ ಸಿದ್ದಿಕ್ -'ಬಹಮನಿಸೂಫೀಸ್ ' ಪು.೫೦

೧೪. ಅದೇ ಪು.೬೦

೧೫. ಅದೇ ಪು.೬೪

೧೬. ಅದೇ ಪು.೬೫

೧೭. ಸೈಯದ್ ಮೊಹಮ್ಮದ್ -'ದಿವಾಲ್ಯೂ ಆಫ್ ದಖನಿಲಾಂಗ್ವೇಜ್ ಅಂಡ್ ಲಿಟಲೇಚರ್'ಪು.-೧೫

೧೮. ಗೆಜೆಟಿಯರ್ ಆಫ್ ಬಾಂಬೆಪ್ರೆಸಿಡೆನ್ಸಿ-'ಬಿಜಾಪುರ್ ಡಿಸ್ಟ್ರೀಕ್ಟ' ಪು.೨೯.೮೮೪.೨೩

೧೯.ಸೂಫೀಸ್ ಆಫ್ ಬಿಜಾಪುರ - ಪುಸ್ತಕದಿಂದ ಉದ್ಧೃತ ಪು.೨೨೮

೨೦. ಅದೇ ಪು.೨೨೯

೨೧. ಟ್ರಮಿಂಗ್ ಹ್ಯಾಮ್ - 'ಸೂಫಿ ಆರ್ಡರ್ಸ್' ಪು.೨೬೪

೨೨. ಆರ್.ಎಂ.ಈಟನ್ - ಸೂಫೀಸ್ ಆಫ್ ಬಿಜಾಪುರ್ ಪು. ೨೬೧

೨೩.ಸೈಯದ್ ಮೊಹಮ್ಮದ್ - 'ದಿವ್ಯಾಲ್ಯೂ ಆಫ್ ದಖನಿ ಲಾಂಗ್ವೇಜ್ ಅಂಡ್ ಲಿಟರೇಚರ್ ' ಪು. ೧೮

೨೪.ಭಾರತದ ಗ್ಯಾಸಿಟಿಯರ್ - ಭಾರತದೇಶ ಕೋಶ ಪು.೪೬೭

೨೫. ಆರ್ .ಈ. ಈಟನ್ - 'ಸೂಫೀಸ್ ಆಫ್ ಬಿಜಾಪುರ' ಪು.೨೪೬

೨೬. ಅದೇ ಪು.೨೪೬

೨೭. ಅದೇ ಪು.೨೪೭

೨೮. ಅದೇ ಪು.೨೫೫

೨೯. ವಿವರಗಳಿಗೆ ಇದೇ ಅಧ್ಯಾಯದಪುಟ(೧೨)ನೋಡಿ.

೩೦.ಆರ್.ಎಂ.ಈಟನ್ - 'ಸೂಫೀಸ್ ಆಫ್ ಬಿಜಾಪುರ' ಪು. ೨೫೫

೩೧.ವಿವರಗಳಿಗೆ ನೋಡಿ -ಷಣ್ಮುಕಯ್ಯ ಅಕ್ಕೂರಮಠ 'ಸೂಫಿಮತ್ತು ಶರಣರ ಅನುಭವ ಪಥ'ಪು. ೩೦

೩೨. ವಿರುಪಾಕ್ಷಪಂಡಿತ ವಿರಚಿತ - 'ಚೆನ್ನಬಸವ ಪುರಾಣ' ದಪೀಠಿಕಾ ಸಂಧಿಯ ೧೯ನೇಯ 'ಪದ್ಯ'

೩೩.'ಕಬೀರ ವಚನಾವಳಿ' - ಅನು; ದ.ರಾ.ಬೇಂದ್ರೆ. ಇದಕ್ಕೆ ಹಜಾರಿಪ್ರಸಾದ್ ದ್ವಿವೇದಿಯವರು ಬರೆದ ಮುನ್ನುಡಿಯಿಂದ

೩೪. ಗಜ್ಜಿಮಹಲ್ ಷರೀಫ್ ಸಾಹೇಬ್ - 'ತರೀಕ ಶಂಸ್ -ಇ-ದಖಿನ್ ' ಪು.೧೧೯

೩೫. ಅದೇ ಪು.೧೨೧

೩೬. ಡಾ॥ಹುಸೇನಿಶಾಹಿದ್ - 'ಸೈಯದ್ ಶಹಾ ಖ್ವಾಜಾ ಅಮೀನುದ್ದೀನ್ ಅಲಾ' ಪು ೧೬೫

೩೭. ಈಹಾಡು ಹಾಡಿದವರು -ಶ್ರೀನಾಗಪ್ಪ (ಹಾವಳಿಗೀಗ್ರಾಮ)ಕಣೇಕಲ್ಲು ತಾಲೂಕು, ಆಂಧ್ರಪ್ರದೇಶ.ಪು

೩೮. ವಹಬ್ ದೊಡ್ಡಮನಿ - 'ಮುಸ್ಲಿಮ್ಸ್ ಇನ್ ದಕ್ಷಿಣ ಕನ್ನಡ' ಪು : ೨೮

೩೯. ಹಜರತ್ ಇನಾಯತ್ ಖಾನ್ - 'ದಿ ಸೂಫಿ ಮೆಸೇಜ್' ಪು: ೪

೪೦. ಸಿ.ಬಿ.ಕಡಕೋಳ,ಕೆ.ಪಿ.ಈರಣ್ಣ - ತಿಂಥಿಣಿ ಮೌನೇಶ್ವರರ ವಚನಗಳು ಪು.೧೨೪.೧೨೭

೪೧. ಶಂಕರಕವಿ 'ಶರಣಮೋನಶೈಯ್ಯನ ಚರಿತ್ರೆ' ಕಾವ್ಯದಿಂದ ಪಡಶೆಟ್ಟಿ ಇವರ 'ತಿಂಥಿಣಿಮೋನಪ್ಪಯ್ಯ' ಒಂದು ಅಧ್ಯಯನದ ಪ್ರಕಟಿತ ಮಹಾಪ್ರಬಂಧದ ೧೯೮ನೆಯ ಪುಟದಿಂದ ಉದೃತ.

೪೨. ಸಿ.ಬಿ.ಕಡಕೋಳಿ.ಕೆ.ಪಿ.ಈರಣ್ಣ - ತಿಂಥಿಣಿಮೌನೇಶ್ವರರ ವಚನಗಳು ಪು.೭೩

೪೩. ಅದೇ ಪು.೯೩

೪೪. ಅದೇ ಪು.೮೧

೪೫. ದೀನ್ ವಾಲ್ ಚನ್ನಬಸವಣ್ಣನವರ ವಿವರಣಗಳಿಗೆ ಅನುಬಂಧ(೩)ನೋಡಿ

೪೬. ಅಬ್ದುಲ್ ಹಮೀದ್ - ಸೂಫಿಪಥವೂ ಮತ್ತು ಶರಣಪಥವೂ' ಅಪ್ರಕಟಿತ ಪಿ.ಹೆಚ್ .ಡಿ.ಮಹಾಪ್ರಬಂಧ ಪು. ೧೫೭

೪೭. ಶಿಲಿವೇರಿ ಶಿವಪ್ಪನವರ ಈ ತತ್ವ ಪದವನ್ನು ಹಾಡಿದವರು ಶ್ರೀ ಹೊನ್ನೂರಪ್ಪ ವಗೇನೂರು, ಬಳ್ಳಾರಿ ತಾಲೂಕು.

೪೮. ಅದೇ

೪೯. ಡಾ|| ಶಿವಾನಂದ ಗುಬ್ಬಣ್ಣನವರ -'ಶಿಶುನಾಳಷರೀಫರ ಗೀತೆಗಳು' ಪು.೨೫೭

೫೦. ಡಾ|| ಜೋಗನ್ ಶಂಕರ್ -ಮಲ್ಲಿಕಾರ್ಜುನವಣೇನೂರು 'ಗುರುಬೋಧ ಹೆಸರಿನ ಸೂಫಿ ಪಂಥವು' ಲೇಖನ 'ಕಂಸಾಳೆ.ಸಂಚಿಕೆ-೨ಜುಲೈ ೧೯೯೩

೫೧. ಡಾ||ಜೋಗನ್ ಶಂಕರ್. ಮಲ್ಲಿಕಾರ್ಜುನವಣೇನೂರು. 'ಗುರುಬೋಧ ಹೆಸರಿನ ಸೂಫಿಪಂಥವು, ವಿವರಣೆಗೆ ನೋಡಿ ಕಂಸಾಳೆ.೧೯೯೩

೫೨. ಡಾ|| ಶಿವಾನಂದ ಗುಬ್ಬಣ್ಣನವರ -ಶಿಶುನಾಳಷರೀಫರ ಗೀತೆಗಳು' ಪು. ೩೯

೫೩. ಇಲ್ಲಿ ಕೊಡಲಾದ ಶ್ರೀಸಾಯಿಬಣ್ಣ ತಾತನವರ ತತ್ವಪದ ಹಾಡಿದವರು ಶ್ರೀ ಅಗಸರ ಹನುಮಂತಪ್ಪ 'ವಣೇನೂರು' ಬಳ್ಳಾರಿ ತಾಲೂಕು.

೫೪. ಆರ್.ಎಂ.ಈಟನ್ -'ಸೂಫೀಸ್ ಆಫ್ ಬಿಜಾಪುರ್' ಪು.೧೯೮

೫೫. ಶಿವಾನಂದ ಗುಬ್ಬಣ್ಣನವರ್ -'ಶಿಶುನಾಳಷರೀಫರ ಪದಗಳು' ಪು.೪೫.

೫೬. ಅದೇ ಪು.೩೯.

ಅಧ್ಯಾಯ : ೩

ಸೂಫಿಜಂನ ಆಚರಣಾತ್ಮಕ ನೆಲೆಗಳು :

ದರ್ಗಾಗಳು, ಸಂತಾರಾಧನೆ, ಉರುಸು ಇತ್ಯಾದಿ

೩.೧ ದರ್ಗಾಗಳು ಮತ್ತು ಸಂತಾರಾಧನೆ :

ಇಂಡಿಯಾದಲ್ಲಿನ ಹಿಂದೂ- ಮುಸ್ಲಿಂರ ಸಾಂಸ್ಕೃತಿಕ ಜೀವನದಲ್ಲಿ ಸೂಫಿಗಳ ಉಪದೇಶ ಮಂದಿರಗಳು ಮತ್ತವರ ಸಮಾಧಿ ಸ್ಥಳಗಳಾದ ದರ್ಗಾಗಳು ಅತ್ಯಂತ ಪ್ರಾಮುಖ್ಯತೆ ವಹಿಸಿವೆ. ಮಧ್ಯಯುಗೀನ ಭಕ್ತಿಪಂಥವು ಧಾರ್ಮಿಕ ಆಂದೋಲಗಳ ಮುಖೇನ ಹಲವಾರು ಸಾಮಾಜಿಕ ಸಾಂಸ್ಕತಿಕ ಸ್ಥಿತ್ಯಂತರಗಳಿಗೆ ಕಾರಣವಾಯಿತು. ಸೂಫಿಗಳ ವೈಯಕ್ತಿಕ ಆಕರ್ಷಣೆಯಿಂದಾಗಿ ಮುಸ್ಲಿಮೇತರರು ಸೂಫಿ ಕೇಂದ್ರಗಳತ್ತ ಆಕರ್ಷಿತರಾಗತೊಡಗಿದರು. ಆವರೆಗೆ ಒಂದು ಪರಂಪರೆಯ ಹಿನ್ನಲೆಯಿದ್ದ ಸೂಫಿಜಂ ಬಹುಸಂಖ್ಯಾತ ಮುಸ್ಲಿಂಮೇತರರತನ್ನು ಒಳಗೊಳ್ಳತೊಡಗಿತು. ಸೂಫಿಗಳ ಉಪದೇಸ ಮಂದಿರಗಳು ಅವರ ಮರಣಾನಂತರ ದರ್ಗಾಗಳಾಗಿ ಪರಿವರ್ತನೆ ಗೊಂಡು ಧಾರ್ಮಿಕ ಕೇಂದ್ರಗಳಾಗಿ ವಿಶಾಲ ಜನಸಮೂಹವನ್ನು ಆಕರ್ಷಿಸತೊಡಗಿದವು. ತಾತ್ವಿಕವಾಗಿ ಸೂಫಿಜಂನ ಉತ್ಕರ್ಷದ ಘಟ್ಟ ಅಂತ್ಯಗೊಂಡು ಅದರ ಅರ್ಥಪೂರ್ಣತೆ ಗೌಣವಾಗಿ ಆಚರಣಾತ್ಮಕವಾಗಿ ಅದರ ಸ್ವರೂಪ ಮುಂದುವರೆದು ಕೊಂಡು ಬಂದಿತು. ಈಪ್ರಕ್ರಿಯೆಯಕಾಲಾನು ಕ್ರಮದ ಗತಿಯಲ್ಲಿ ದರ್ಗಾಗಳಿಗೆ ವಿಶೇಷ ಪ್ರಾಮುಖ್ಯತೆ ಒದಗಿತು. ಇವು ಮುಖ್ಯ ಸಾಂಸ್ಕೃತಿಕ-ಕೇಂದ್ರಗಳಾಗಿ ಈಗಲೂ ತಮ್ಮ ಅಸ್ತಿತ್ವವನ್ನುಳಿಸಿಕೊಂಡು ಮುಂದುವರೆದಿವೆ.

ಮುಖ್ಯವಾಗಿ ಸೂಫಿಗಳ ಸಮಾಧಿಸ್ಥಳಗಳನ್ನು ಮಾತ್ರ 'ದರ್ಗಾ'ಗಳೆಂದು ಕರೆಯುವುದು ವಾಡಿಕೆ. ಆರಂಬದಲ್ಲಿ ಇವನ್ನು 'ಮಖ್ ಬರಾ' (Maqbara, Tomb), 'ಟುಬಾನ' (Turba) (heapof dust) ಅಥವಾ 'ಮಕ್ಕಾಂ' (Muqam) (place) ಎಂದೂ ನಂತರದಲ್ಲಿ 'ಮಜಾರ್' (mazar), ಜಿಯಾರ್ಥ್ ಗ್ಹಾ (Ziyartagah) ಅಥವಾ ದರ್ಗಾವೆಂದು ಕರೆಯಲಾಯಿತು.[೧] ಸಂದರ್ಶಿಸುವ ಪುಣ್ಯಸ್ಥಳ, ಪುಣ್ಯಕ್ಷೇತ್ರವೆಂಬುದಾಗಿ ಅರ್ಥಬರುವ ಈದರ್ಗಾಗಳನ್ನು ನೋಡಿ ಕೊಳ್ಳಲು ಮೇಲ್ವಿಚಾರಕರಿರುತ್ತಾರೆ. ಸಾಮಾನ್ಯವಾಗಿ ಇವರನ್ನು 'ಮುಜಾವರ್' ಗಳೆಂದು ಕರೆಯಲಾಗುತ್ತದೆ. ಕೆಲವು ಪ್ರಸಿದ್ಧದರ್ಗಾಗಳಲ್ಲಿ ಸೂಫಿಗಳ ವಂಸದ ಮುಖ್ಯಸ್ಥ ಧಾರ್ಮಿಕ ಮುಖಂಡನಾಗಿ ದರ್ಗಾಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾನೆ. ಇವರನ್ನು 'ಪೀರ್ ಜಾಟಾ'ಗಳೆಂದು ಕರೆಯಲಾಗುತ್ತದೆ. ದರ್ಗಾಗಳ 'ಮುಜಾವರ್' ಗಳು ದರ್ಗಾಗಳಿಗೆ

ಬರುವ ಭಕ್ತರು ತರುವ ಕಾಣಿಕೆ, ನೈವೇದ್ಯಗಳನ್ನು ಸಂತನ ಸಮಾಧಿಗೆ ಅರ್ಪಿಸಿ ಭಕ್ತನಿಗೆ ಒಳಿತಾಗುವಂತೆ ಪ್ರಾರ್ಥಿಸುತ್ತಾರೆ. ಇಲ್ಲಿ ಭಕ್ತ ಮತ್ತು ಸಂತನ ಮಧ್ಯೆ ಮಧ್ಯವರ್ತಿಯಾಗಿ 'ಮುಜಾವರ್' ಪುರೋಹಿತನ ಕಾರ್ಯ ನಿರ್ವಹಿಸುತ್ತಾನೆ. ಸಂತನ ಮಹಿಮಾ ಶಕ್ತಿಯು ಆತನು ತೀರಿಕೊಂಡ ನಂತರವೂ ಅಲ್ಲಿಯೇ ನೆಲೆಗೊಂಡಿರುತ್ತದೆಂಬುದಾಗಿಯೂ, ದೇವರೊಂದಿಗಿನ (ಅಲ್ಲಾಹ್ ನೊಂದಿಗೆ) ಸಂತನ ಸಂಬಂಧದ ಪುಣ್ಯವಿಶೇಷದಿಂದ ದರ್ಗಾಗಳಿಗೆ ನಡೆದು ಕೊಳ್ಳುವ ಭಕ್ತರೂ ಸಂತನ ಮೂಲಕ ದೇವರನ್ನು ಸುಪ್ರೀತಗೊಳಿಸಲು ಸಮರ್ಥರಾಗುತ್ತಾರೆಂಬುದಾಗಿಯೂ ಭಾವಿಸಲಾಗುತ್ತದೆ.

ದರ್ಗಾದ ಸಂರಚನೆಯನ್ನು ಗಮನಿಸುವುದಾದರೆ ಇದು ಮೂಲತಃ ಉಪದೇಶ ಮಂದಿರವಾಗಿದ್ದು. ಆ ಸಂತನ ಮರಣದ ನಂತರ ಅಲ್ಲಿನ ಸಮಾದಿಸ್ಥಳವನ್ನೊಳಗೊಂಡಂತೆ ಇಡಿಯಾದ ಆ ಭಾಗಕ್ಕೆ 'ದರ್ಗಾ' ವೆಂದು ಹೆಸರಿಸಲಾಗಿದೆ. ನಿದರ್ಶನಕ್ಕೆ ಬಿಜಾಪುರದ ಪ್ರಸಿದ್ಧ ಸೂಫೀ ಸಂತ ಅಮೀನುದ್ದೀನ್ ಅಲಾ ಅವರ ದರ್ಗಾ ಉಪದೇಶ ಮಂದುರವನ್ನೊಳಗೊಂಡಂತೆಯೇ ಅವರ ಸಮಾಧಿ ಸ್ಥಳವನ್ನೊಳಗೊಂಡಿದೆ. ಒಮ್ಮೊಮ್ಮೆ ಅಷ್ಟೇನೂ ಪ್ರಸಿದ್ಧರಲ್ಲದ ಸೂಫಿಗಳ ನಂತರದ ಅವರ ವಂಶಿಕರ ಆಧ್ಯಾತ್ಮಿಕ ವ್ಯಕ್ತಿಗಳ ಸಾಮಾಧಿಗಳನ್ನು ದರ್ಗಾಗಳ ಸುರ್ಪದಿಯಲ್ಲಿಯೇ ನಿರ್ಮಿಸಲಾಗಿದೆ. ದರ್ಗಾದ ಆವರಣದೊಳಗೆಯೇ ಅಥವಾ ದರ್ಗಾಕ್ಕಂಟಿ ಕೊಂಡಂತೆಯೇ ಸಾಮೂಹಿಕ ನಮಾಜಿನ ಮಸೀದಿಗಳಿರುತ್ತವೆ.

ಹಿಂದೂ-ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯವ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ದರ್ಗಾ, ಅದರಸುತ್ತಣ ಆಚರಣೆಗಳು ದರ್ಗಾವೊಂದರ ಸಾಮಾಜಿಕ ಹಿನ್ನಲೆ ಇವನ್ನೆಲ್ಲ ಇಲ್ಲಿ ಗಮನಿಸುವುದರೊಂದಿಗೆ ವರ್ತಮಾನದ ವಿದ್ಯಾಮಾನಗಳು (ಧಾರ್ಮಿಕ ಮೂಲಭೂತವಾದದಂತಹ) ಇಂತಹ ಬಾಂದವ್ಯದ ಸ್ವರೂಪಕ್ಕೆ ಧಕ್ಕೆಯೇನಾದರೂ ಉಂಟು ಮಾಡಿವೆಯೇ ಎಂಬುದನ್ನಿಲ್ಲಿ ವಿಶ್ಲೇಷಿಸಲಾಗುತ್ತದೆ.

ಮೊದಲನೆಯದಾಗಿ ದರ್ಗಾಗಳಿಗೆ ಸಂಬಂಧ ಪಟ್ಟ ಹಾಗೆ ಅವುಗಳ ಆಚರಣೆಯ ಸ್ವರೂಪವನ್ನು ಪರಿಶೀಲಿಸಬಹುದು. ಇವು ಬಹುತೇಕ ಇಸ್ಲಾಮೇತರ ಪ್ರಭಾವದಿಂದ ರೂಪುಗೊಂಡವಾಗಿದ್ದು

ಮತೀಯವಾದಿಗಳ ಆಕ್ಷೇಪಗಳಿಗೆ, ಆಗ್ರಹಗಳಿಗೆ ಕಾರಣವಾಗುವಂತವುಗಳಾಗಿವೆ. ಸೂಫಿಗಳ ಚಟುವಟಿಕೆಗಳು, ಅವರ ಸಿದ್ಧಾಂತ ಮತ್ತು ನಂತರದ ಬೆಳವಣಿಗೆಯಾಗಿ ಮೂಡಿಬಂದ ಸೂಫೀ ಸಂತ ಸಂಸ್ಕೃತಿಯು ಸಂಪ್ರದಾಯನಿಷ್ಠ ಇಸ್ಲಾಂ ವರ್ಗಗಳಿಂದ ಪ್ರತಿರೋಧವನ್ನೆದುರಿಸಬೇಕಾಯಿತು. ಪ್ರವಾದಿಮಹಮ್ಮದರ ಜೀವನ, ಉಪದೇಶಗಳು ಮತ್ತವರ ಅನುಯಾಯಿಗಳು, ಬಹುದೇವತಾರಾಧಕರು, ವಿಗ್ರಹಾರಾಧಕರನ್ನು ಅನುಕರಿಸಿ ಸಂತರ ಗೋರಿಗಳಿಗೆ ಪೂಜಿಸುವುದು, ಅವರ ಮಾದರಿಯಲ್ಲಿಯೇ ಪುಣ್ಯಸ್ಥಳಗಳು, ಆಧ್ಯಾತ್ಮಿಕ ಕ್ಷೇತ್ರಗಳನ್ನು ಗುರುತಿಸಿ ಕೊಂಡು ಉತ್ಸವಗಳನ್ನು ನಡೆಸುವುದು ಮೊದಲಾದುವನ್ನು ಕಟುವಾಗಿ ವಿಮರ್ಶಿಸಲಾಗಿದೆ. ಈ ಅಧ್ಯಯನದಲ್ಲಿ ಯಾವುದನ್ನು ಸಂಸ್ಕೃತೀಕರಣ ಮತ್ತು ದ್ವಿ- ಸಾಂಸ್ಕೃತಿಕತೆ ಎಂದು ಗುರುತಿಸಲಾಗಿದೆಯೋ ಅದು ಮತಸಂಬಂಧಿತ ಆಚರಣೆಗಳನ್ನೂ ಒಳಗೊಂಡಂತೆ ಜೀವನದ ಪದರು ಪದರುಗಳಲ್ಲಿ ವ್ಯಾಪಿಸಿರುವ ಸಾಂಸ್ಕೃತಿಕ- ಸಮನ್ವಯತೆಯ ಅಂಶಗಳನ್ನು ಸಮಗ್ರವಾಗಿ ಒಳಗೊಂಡುದಾಗಿದೆ.

ಮತ ಸಂಬಂಧಿತ ಆವರಣದಲ್ಲಿಯೇ ಅಭಿವ್ಯಕ್ತಿ ಗೊಳ್ಳಲು ಇಚ್ಛಿಸುವ ಸಾಂಸ್ಕೃತಿಕ ರೂಪಕಗಳು ಹೊರ ತೋರಿಕೆಗಾದರೂ ಅವು ಮತೀಯ ಕವಚತೊಟ್ಟಂತೆ ಕಾಣುತ್ತಿದ್ದರೂ ಧಾರ್ಮಿಕ ಸಾಂಪ್ರಾದಾಯಿಕತೆಯ ತೀಕ್ಷ್ಣ ದೃಷ್ಟಿಯಿಂದ ಪಾರಾಗಲಷ್ಟೆ , ಅವು ಈ ತಂತ್ರ ಬಳಸುತ್ತವೆ. ಭಾರತದಂತಹ ಬಹುಸಾಂಸ್ಕೃತಿಕ-ಪರಿಸರದಲ್ಲಿ ಅದರಲ್ಲೂ ಭಾರತೀಯ ಮುಸ್ಲಿಮರ ಆಚರಣೆಗಳು, ನಂಬಿಕೆಗಳ ವಿಷಯದಲ್ಲಿ ನಾವು ಅವುಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವಾಗಿ ಈ ಮೇಲಿನಂತೆ ವಿವರಿಸಬಹುದಾಗಿದೆ. ಸ್ವಭಾವತಃ ಸೂಫಿಗಳು ಸೈದ್ಧಾಂತಿಕವಾಗಿ ಸ್ವತಂತ್ರ ಪ್ರವೃತ್ತಿಯವರಾಗಿದ್ದು ಯಾವುದೇ ನಿಯಮ, ನಿಬಂಧನೆಗಳು ಕಟ್ಟು, ಪಾಡುಗಳಿಗೆ ತಮ್ಮನ್ನು ಬಂಧಿಸಿಕೊಳ್ಳತ್ತಿರಲಿಲ್ಲ. ಇಂತಹ ವೃತ್ತಿ ಇವರಿಗೆ ಮುಸ್ಲಿಮೇತರ ವರ್ಗದೊಂದಿಗೆ ಹೆಚ್ಚು ನಿಕಟಸಂಬಂಧ ಬೆಳೆಯಲು ಸಹಾಯ ಮಾಡಿತಲ್ಲದೆ ಮಧ್ಯಕಾಲೀನ ಭಕ್ತಿಪಂಥದ (ಶೈವ, ವೈಷ್ಣವ) ಇತರೆ ವರ್ಗಗಳೊಂದಿಗೂ ವೈಚಾರಿಕವಾದಂತಹ ಸಂಬಂಧ ಬೆಳೆಸಲು ಸಹಾಯಕವಾಯಿತು. ಕಾಲಾನುಕ್ರಮದಲ್ಲಿ ಇಂತಹ ಸಂಪರ್ಕವೇ ಸಂತಾರಾಧನೆಯಂತಹ ಅಂಶಗಳಿಗೆ ಕಾರಣವಾಯಿತು. ಸಂಪೂರ್ಣ ಇಸ್ಲಾಮಿಕ್ ಪರಿಸರದಿಂದ ಹೊರಗೆ ಕಾಲ, ಸಂದರ್ಭ, ಭಿನ್ನವಾದ ಸಾಮಾಜಿಕ ಸಂದರ್ಭದಲ್ಲಿ ಬಾಳಬೇಕಾಗಿ

[illegible]

ಬಂದ ಇಸ್ಲಾಂ ಅನಿವಾರ್ಯವಾಗಿ ಭಾರತೀಯ ರೂಪುಪಡೆದು ಕೊಳ್ಳಬೇಕಾಯಿತು. ಸಾಂಸ್ಕೃತಿಕವಾಗಿ ತಾವಿರುವ ಪ್ರದೇಶವನ್ನು ಪ್ರತಿನಿಧಿಸುತ್ತಿದ್ದರಾದ್ದರಿಂದ ಅವರ ಜೀವನ ವಿಧಾನವು ಮುಸ್ಲಿಮೇತರರ ಜೀವನ ವಿಧಾನವನ್ನೇ ಅನುಸರಿಸಬೇಕಾಗಿ ಬಂತು. ಸಂತಾರಾಧನೆ, ಉರುಸು, ದರ್ಗಾಗಳಿಗೆ ದಿನನಿತ್ಯದ, ವಾರದ, ವಿಶೇಷದಿನಗಳ ಪೂಜೆ ಇತ್ಯಾದಿಯಾಗಿ ಧಾರ್ಮಿಕ ಆವರಣವನ್ನೂ ಇದು ಪ್ರವೇಶಿಸಿತು. ಹೀಗಾಗಿ ಸಾಂಪ್ರಾದಾಯಿಕ 'ಇಸ್ಲಾಂ' ಪ್ರಿಯರಿಗೆ , ಮತ್ತು ಪ್ರವಾದಿ ಮಹಮ್ಮದರ ಜೀವನ ಶೈಲಿ, ಉಪದೇಶಗಳಿಗೆ ಒತ್ತು ಕೊಡುವವರಿಗೆ ಇದು ಘೋರ ಅಪರಾಧವಾಗಿ ಕಂಡು ಬರತೊಡಗಿತು.

ಮುಸ್ಲಿಂ ಸಂಪ್ರದಾಯಸ್ಥ ವರ್ಗಗಳಲ್ಲಿ ಕಂಡುಬರುವ ಇಂತಹ ಆತಂಕಗಳಿಗೆ ಧರ್ಮವನ್ನೇ ಅಂದರೆ ಮತ ಸಂಬಂಧಿ ಆಚರಣೆಗಳು, ನಂಬಿಕೆಗಳನ್ನು ಪ್ರಧಾನವನ್ನಾಗಿಸಿ ಉಳಿದ ಸಾಂಸ್ಕೃತಿಕ ವಿವರಗಳನ್ನು ಗೌಣವಾಗಿಸುವ ಮನೋಭಾವ ಕಾರಣವಾಗಿರುವಂತಿದೆ. ಇಂಡಿಯಾದ ಮುಸ್ಲಿಮರ ಆಚರಣಾತ್ಮಕ ವಿಶಿಷ್ಟತೆಗಳು ಪರಸ್ಪರ ದ್ವಿ-ಸಾಂಸ್ಕೃತಿಕ ಪ್ರಕ್ರಿಯೇ ಫಲಗಳೆಂವುದನ್ನು ಅವುಗಳ ಸ್ವರೂಪದಿಂದ ಅರಿಯಬಹುದಾಗಿದೆ. ಇವು ದೀರ್ಘಕಾಲದ ವಿಕಾಸ್ ಕ್ರಮದಲ್ಲಿ ಮುಸ್ಕಿಂ ಮತ್ತು ಮುಸ್ಲಿಮೇತರರ ನಡುವಿನ ಸಾಂಸ್ಕೃತಿಕ ಅಂತಃ ಸಂಬಂಧಗಳನ್ನು ಸಂಕೇತಿಸುವ ಕುರುಹುಗಳಾಗಿವೆಯಷ್ಟೆ . ಧಾರ್ಮಿಕ ಸಾಂಪ್ರದಾಯಿಕ ವರ್ಗ ಮತ್ತು ಸುಧಾರಣಾವಾದಿ ವರ್ಗಗಳು, ಇಂತಹ ಆಚರಣೆಯ ವಿವರಗಳನ್ನು ಅಲ್ಲಗಳೆಯಲು ಬಳಸುತ್ತಿದ್ದ ಸಮರ್ಥನೆಗಳ ಮುಖೇನ ನಾವು ನಮ್ಮ ಸಂಸ್ಕೃತೀಕರಣದ ಸ್ವರೂಪವನ್ನು ಮತ್ತಷ್ಟು ಸ್ಪಷ್ಟವಾಗಿ ಅರಿಯಬಹುದಾಗಿದೆ. ಸ್ವತಃ ಇವು ಯಾವುದು ಇಸ್ಲಾಂ ಮೂಲದ್ದು ಮತ್ತು ಇಸ್ಲಾಮೇತರದ್ದು ಎಂದು ಆಧಾರಗಳ ಸಮೇತ ಗುರುತಿಸುವುದರಿಂದ ಈ ಕಾರ್ಯ ಮತ್ತಷ್ಟು ಸುಲಭವಾಗುತ್ತದೆ.[2] ಇದಕ್ಕೆ ಪೂರಕವಾಗಿ 'ಸುಧಾರಣಾವಾದಿಗಳು' ಮಂಡಿಸಬಹುದಾದ ಪುರಾವೆಗಳನ್ನು ಗಮನಿಸಬಹುದು. ಸುಧಾರಣವಾದಿಗಳು ಭಾರತೀಯ ಮುಸ್ಲಿಂರಿಗೆ ನಿಜವಾದ 'ಇಸ್ಲಾಂ' ನ ಸ್ವರೂಪವನ್ನು ತಿಳಿಸುವ ಹಲವುಪ್ರಯತ್ನ ನಡೆಸಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ನಿಜವಾದ ಇಸ್ಲಾಂ ಯಾವುದು ಮತ್ತು ಪ್ರವಾದಿ ಮಹಮ್ಮದರ ಅನುಯಾರಿಲಗಳು ಹೇಗಿರಬೇಕೆಂಬುದನ್ನು ವಿವರಿಸುವ ಕರಪತ್ರಗಳು, ಧಾರ್ಮಿಕ ಪ್ರಬಂಧಗಳು, ಪುಸ್ತಕಗಳ ಮುಖಾಂತರ

[illegible]

ಮುಸ್ಲಿಂರಲ್ಲಿ ತಿಳುವಳಿಕೆ ಮೂಡಿಸಲು ಪ್ರಯತ್ನಿಸಿದ್ದರು. KHORAM 'ALI' BILHAUR' (ಕುರುಮ್ -ಅಲಿ- ಬಿಲಾಹುರ್) ಎನ್ನುವ ಲೇಖಕರ ೧೮೭೩ ರಲ್ಲಿ ಪ್ರಕಟನೆಗೊಂಡ 'ನಸಿಯತ್ ಸಲ್ - ಮುಸ್ಲಿಮಿನ್ ' ಎನ್ನುವ ಪುಸ್ತಕದ ಮುನ್ನುಡಿಯಲ್ಲಿನ ಕೆಲವು ಸಾಲುಗಳನ್ನು ಪರಿಶೀಲಿಸಬಹುದು.

ಈಚಿನ ದಿನಗಳಲ್ಲಿ ಇಂಡಿಯಾದಲ್ಲಿ ಪ್ರವಾದಿಯ ಅನುಯಾಯಿಗಳು ಬಹುದೇವತಾ ಪೂಜೆಯಲ್ಲಿ ನಂಬಿಕೆಯಿರಿಸಿದ್ದಾರೆ. ಆದುದರಿಂದ ನಾನು ಕುರಾನಿನ ಮತ್ತದರ ಪರಂಪರೆಯ ಬೆಳಕಲ್ಲಿ ಸತ್ಯದ ಹಾದಿ ಯಾವುದೆಂಬುದನ್ನು ತೋರಿಸಿಕೊಡಲು ನಿರ್ಧಸಿದ್ದೇನೆ...... ಭಾರತದಲ್ಲಿನ ಎಲ್ಲಾ ಮುಸ್ಲಿಮರಿಗೆ ಅರ್ಥವಾಗ ಬೇಕೆಂದು ನಾನಿದನ್ನು ಹಿಂದಿ ಭಾಷೆಯಲ್ಲಿ ರಚಿಸಿದ್ದೇನೆ.

ಮುಸ್ಲಿಮರು ಸಹ ವಿಗ್ರಹಾರಾಧಕರಂತೆ ಸಂತರ ಗೋರಿಗಳಿಗೆ ಪೂಜೆಸಲ್ಲಿಸುತ್ತಿದ್ದು ಆ ಸಂತರು ಅಲ್ಲಾನಿಗಿಂತ ಸಾಮರ್ಥ್ಯವುಳ್ಳವರೆಂದು ನಂಬಲಾಗುತ್ತದೆ. .....ಈಧಾರ್ಮಿಕ- ಪ್ರಬಂಧವನ್ನು ಓದಿದವರು ಅನಕ್ಷರಸ್ಥಮುಸ್ಲಿಂ ಪುರುಷರು ಮತ್ತು ಮಹಿಳೆಯರಿಗೆ ಇದನ್ನು ವಿವರಿಸ ಬೇಕಾಗಿ ವಿನಂತಿಸ ಕೊಳ್ಳುತ್ತಿದ್ದೇನೆ. ಅವರು ಸತ್ಯದ ಹಾದಿಯನ್ನು ಗುರಿತಿಸುವರೆಂದು ನನಗೆ ನಂಬಿಕೆಯಿದೆ. ಎಂದು ಮುನ್ನುಡಿಯಲ್ಲಿ ವಿವರಿಸುತ್ತಾರೆ.ದರ್ಗಾಗಳಿಗೆ ಸಂಬಂಧಿಸಿದಂತೆ ಆಚರಣೆಗಳು, ಉತ್ಸವಗಳು, ಇತ್ಯಾದಿಗಳನ್ನು ಖಿಡಿಸಲು ವಸಾಹತುಶಾಹಿಯ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ 'ವಹಬ್ಬಿ' ಸುಧಾರಣಾವಾದಿ ಪಂಥದ ಅಲ್ -ಬಲಾನ್ - ಮುಬಿನ್ (A- Balos o- mubin) ಎಂಬ ಚಿಕ್ಕ ಪುಸ್ತಕವೊಂದರಲ್ಲಿ ಸೂಫಿ ಸಂತ ಸಂಸ್ಕೃತಿಯನ್ನು ಖಂಡಿಸಲು ಮೂರು ಬಗೆಯ ವಾದಗಳನ್ನು ಮಂಡಿಸಲಾಗುತ್ತದೆ. ಮೊದಲನೆಯದಾಗಿ ಧರ್ಮಶ್ಯಾಸ್ತ್ರೀಯ ರೀತಿ. ಎರಡನೆಯದಾಗಿ ಇಸ್ಲಾಮೀಧಾರ್ಮಿಕ ನಿಯಮಗಳ ರೀತಿ ಮತ್ತು ಮೂರನೆಯದಾಗಿ ಮುಸ್ಲಿಮೇತರರೊಂದಿಗೆ (ಬಹು ದೇವತಾರಾಧಕರೊಂದಿಗೆ - ಹಿಂದೂಗಳೊಂದಿಗೆ) ಸಾದೃಶ್ಯ ಸಂಬಂಧಗಳನ್ನು ಖಂಡಿಸುವುದರ ಮೂಲಕ ಹೇಗೆ ಸೂಫೀ ಸಂತಸಂಸ್ಕೃತಿಯು ಇಸ್ಲಾಂ, ವಿರೋಧಿ ಎಂಬುದನ್ನು ವಿವರಿಸಲು ಈ ಪುಸ್ತಕದಲ್ಲಿ ಪ್ರಯತ್ನಿಸಲಾಗಿದೆ. (ಮೊದಲ ಎರಡು ವಾದಗಳಿಗಾಗಿ ಅನುಬಂಧ ೨ ನೋಡಿ)

ಮೂರನೆಯದಾಗಿ 'ವಹಬ್ಬಿ' ಸುಧಾರಣಾವಾದಿ ಪಂಥದ ಅಲ್ - ಬಲಾಸ್ ಅಲ್ - ಮುಬಿನ್ ಕೃತಿಯುಮಂಡಿಸುವ ವಾದವು ಅತ್ಯಂತ ಕುತೂಹಲರಕಾರಿಯಾದುದಲ್ಲದೆ ಮುಖ್ಯವಾದುದೂ ಆಗಿದೆ. ಹಿಂದೂಗಳೊಂದಿಗಿನ ಸಾದೃಶ್ಯಸಂಬಂಧಗಳನ್ನು ಬಿಡಿ ಬಿಡಿಯಾಗಿ ವಿವರಿಸುತ್ತಾ ಸೂಫಿ ಸಂತ ಸಂಸ್ಕೃತಿಯನ್ನು ಖಂಡಿಸಲಾಗಿದೆ.

ಇಲ್ಲಿ ವಿವರಿಸಲ್ಪಡುವ ಅಂಶಗಳು ತುಂಬಾ ಮುಖ್ಯವಾಗಿದ್ದು ಅವು ತಮಗೆ ತಾವೇ ಇಂಡಿಯಾದ ಮುಸ್ಲಿಮರು ಪೂರ್ಣವಾಗಿ ಈ ನೆಲದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಾರೆ ಎಂಬುದಕ್ಕೆ ಖಚಿತ ಆಧಾರಗಳನ್ನೊದಗಿಸುತ್ತವೆ. ಇಲ್ಲಿ ಮತಾಚರಣೆಗೆ ಸಂಬಂಧಿಸಿದ ವಿವರಗಳನ್ನು ಸಂಸ್ಕೃತೀಕರಣದ ಕುರುಹುಗಳೆಂದಷ್ಟೇ ಪರಿಗಣಿಸಿದಾರೂ ಉಳಿದಂತೆ ಜೀವನದ ವಿವರಗಳು- ಸಾಂಸ್ಕೃತಿಕ ಅಂಶಗಳು - ನಮಗೆ ಮುಸ್ಲಿಮರು, ಮುಸ್ಲಿಮೇತರರು ಎಂದು ವರ್ಗೀಕರಣಕ್ಕೆ ಸಾಧ್ಯವಾಗದಷ್ಟು ಅಖಂಡ ಸಂಸ್ಕೃತಿಯ ಭಾಗವೊಂದರಂತೆ ತೋರಿ ಬರುತ್ತಾರೆ. ಕಲೆ, ಭಾಷೆ, ವಾಸ್ತುಶಿಲ್ಪ, ಆಹಾರ ಪದ್ಧತಿ ಆಚಾರ ವಿಚಾರಗಳಿಗೆ ಸಂಬಂಧಿಸಿದಂತೆ ಇಸ್ಲಾಂ ಸಂಸ್ಕೃತಿಯ ಅಂಶಗಳು, ಭಾರತೀಯ ಸಂಸ್ಕೃತಿಯ ಅಂಶಗಳೂ ಒಂದರೊಡನೊಂದು ಮೇಳೈಸಿಕೊಂಡು ಇಂಡಿಯಾದ್ದೇ ಆದ ವಿಶಿಷ್ಟ ಸಂಸ್ಕೃತಿಯೊಂದು ರೂಪುಗೊಂಡಿತು. ಅದಕ್ಕಾಗಿಯೇ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಇಂತಹ ಪ್ರಕ್ರಿಯೆಗೆ ದ್ವಿ- ಸಾಂಸ್ಕೃತಿಕತೆಯೆಂದು ಹೆಸರಿಸಲಾಗಿದೆ .ಮತಾಚರಣೆಗೆ ಸಂಬಂಧಿಸಿದಂತಹ ಧಾರ್ಮಿಕ ವಿವರಗಳಲ್ಲೂ ಮುಸ್ಲಿಮೇತರ ಪ್ರಭಾವ ಎಷ್ಟಿತ್ತೆಂದರೆ ಅವರು ಅರಿತೋ, ಅರಿಯದೆಯೋ. ಹಿಂದೂಗಳನ್ನೇ ಅನುಸರಿಸಿತೊಡಗಿದರು. ಅವರ ಕಲ್ಪನೆಯ ದೇವರು, ಅಧ್ಯಾತ್ಮಿಕ ನಂಬಿಕಗಳು, ಆಚರಣೆಯರೂಪಗಳು ಎಲ್ಲದರಲ್ಲೂ ನಾವು ಈ ಪ್ರಭಾವವನ್ನು ಗುರುತಿಸಬಹುದು. ಧಾರ್ಮಿಕರು ಮೂಲಭೂತವಾದಿಗಳು ಮತ್ತು ಇಸ್ಲಾಂ ಅನ್ನು ಶುದ್ಧೀಕರಿಸ ಬಯಸುವ ಸುಧಾರಣಾವಾದಿಗಳು ಇದನ್ನು ಅಪರಾಧವೆಂದಾಗಲೀ, ಧರ್ಮಭ್ರಷ್ಟತೆಯೆಂದಾಗಲಿ ಮುಂತಾಗಿ ಏನೇ ಹೇಳಲಿ ಅದು ಇಲ್ಲಿ ಮುಖ್ಯವಲ್ಲ, ಆದರೆ ಅವರು ಇದನ್ನು ಅಲ್ಲಗಳೆಯಲು ಮಂಡಿಸುವ ಸಮರ್ಥನೆಗಳು, ಒದಗಿಸುವ ಆಧಾರಗಳು ತಮಗೆ ತಾವೇ ಸಂಸ್ಕೃತೀಕರಣದ ತೀವ್ರತೆಯನ್ನು ಅದರ ಸ್ವರೂಪವನ್ನು ಸ್ಪಷ್ಟಪಡಿಸುತ್ತವೆ.

'ವಹಬ್ಬಿ' ಸುಧಾರಣಾವಾದೀ ಪಂಥದ ಕೃತಿಯು ಈಕೆಳಗಿನಂತೆ ಹಿಂದೂಗಳೊಂದಿಗಿನ ಸಾದೃಶ್ಯಸಂಬಂಧಗಳನ್ನು[೬] ಗುರುತಿಸುತ್ತಾ ಸೂಫೀ ಸಂತ ಸಂಸ್ಕೃತಿಯನ್ನು ಖಂಡಿಸಿದೆ.

'ಸಂತಾರಾಧನೆಯು ಅತ್ಯಂತ ನಿಷೇಧಾತ್ಮಕವಾದುದು, ಎಕೆಂದರೆ ಅದು ಮುಸ್ಲಿಮರನ್ನು ಹಿಂದೂಗಳ ಪ್ರಭಾವವಲಯದೊಳಗೆ ಸಿಲುಕಿಸುತ್ತದೆ. ನಿರ್ಧಿಷ್ಟವಾಗಿ ಇಸ್ಲಾಮೀ ಪ್ರಪಂಚದಿಂದ ಹೊರಗಿರುವ ಈ ದೇಶದಲ್ಲಿ ಹಿಂದೂ ವಿಗ್ರಹಾರಾಧಕರು, ತಮ್ಮ ಮೂರ್ತಿಗಳನ್ನು ಹೇಗೆ ನೋಡಿಕೊಳ್ಳುವರೋ ಹಾಗೆಯೇ ಗೋರಿಪೂಜಕರು ಕೋಡ ಸರಿಯಾಗಿ ಅದನ್ನೆ ಮಾಡುತ್ತಾರೆಂಬುದನ್ನು ಯಾರಾದರೂ ಗುರುತಿಸಬಲ್ಲರು. ಎಂದುವಿವರಿಸಿ ಆಕೃತಿಯಲ್ಲಿ ಈ ಕೆಳಗಿನಂತೆ ಇಂತಹ ಉಳಿದ ಅಂಶಗಳನ್ನು ಕ್ರಮವಾಗಿ ಪಟ್ಟಿ ಮಾಡಿ ಕೊಡಲಾಗಿದೆ.

೧) ವಿಗ್ರಹಾರಾಧಕರು ವಿಗ್ರಹಾಗಳಿಗೆ ರೇಷ್ಮೆಯ ಬಂಗಾರದ ಕುಶರಿಕಲೆಯ ವಸ್ತ್ರಗಳನ್ನು ಕೊಡಿಸುವಂತೆ ಸಂತರ ಗೋರಿಗಳಿಗೂ ವಾಸ್ತ್ರಗಳನ್ನು ತೊಡಿಸಲಾಗುತ್ತದೆ.

೨) ವಿಗ್ರಹಾರಾಧಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ವಿಗ್ರಹಗಳಿಗೆ ಮತ್ತು ಪೂಜಾರಿಗಳಿಗೆ ಕಾಣಿಕೆ -ತಂದು ಬೇಡಿಕೊಳ್ಳುವರು. ಅದೇ ತರಹ ಸಂತರಾಧಕರು ಸಹ ಎಲ್ಲ ರೀತಿಯ ಕಾಣಿಕೆಗಳನ್ನು ಗೋರಿಗಳಿಗೆ ಮತ್ತು ಮುಜಾವಕರುಗಳಿಗೆ ತರುತ್ತಾರೆ.

೩) ವಿಗ್ರಹಾರಾಧಕರು ಧಾರ್ಮಿಕ ವಿಧಿಯಾಗಿ ಸೌರ್ಯಮಾನ ಪಂಚಾಗದ ಪ್ರಕಾರ ವಿಗ್ರಹಗಳಿಗೆ ಉತ್ಸವಗಳನ್ನೆರ್ಪಡಿಸುವರು. ಅವರು ಅಂದಿನ ದಿವಸ ಹೂ, ಹಣ್ಣು, ಸಿಹಿ ಮತ್ತು ಎಲ್ಲಾ ರೀತಿಯ ಕಾಣಿಕೆಗಳನ್ನು ವಿಗ್ರಹಗಳಿಗೊಪ್ಪಿಸುವರು. ಹೆಬ್ಬಾಗಿಲಿಗೆ ತಲೆಯನ್ನಿಟ್ಟು, ಸಾಷ್ಟಾಂಗ ಬೀಳುವರು. ಇದೇ ತರಹ ಸಂತಾರಾಧಕರು ಸಹ ಉತ್ಸವದ ದಿನವೊಂದನ್ನು ಚಂದ್ರಮಾನ ಪಂಚಾಂದಗ ಪ್ರಕಾರ ನಿರ್ಧಸುತ್ತಾರೆ. ಗುಂಪು, ವಿಧಿಗಳನ್ನು ಸಧರಿ ಸರಿಯಾಗಿ ವಿಗ್ರಹಾರಾಧಕರಂತೆಯೇ ಧಾರ್ಮಿಕ ವಿಧಿಗಳನ್ನು ನಿರ್ವಹಿಸುತ್ತಾರೆ.

ಅದಕ್ಕೂ ಮಿಗಿಲಾಗಿ ಇಲ್ಲಿ ನೃತ್ಯದ ಹುಡುಗಿಯರು (ದೇವಾದಾಸಿಯರು?) ಮತ್ತು ಸಂಗೀತಗಾರರು ನೃತ್ಯ ಮತ್ತು ಸಂಗೀತದಿಂದ ಕಾರ್ಯಕ್ರಮ ನೀಡುವರು. ಇದು ಅತಿ ದೊಡ್ಡ ಪಾಪವಾಗಿದ್ದು, ಅಂತಿಮ ನಿರ್ಣಯದ ದಿನ ಈ ಎಲ್ಲಾ ಅಜ್ಞಾನಿಗಳ ನಾಚಿಕೆಗೆಟ್ಟ ವರ್ತನೆಗಳು ಕುಕೃತ್ಯಗಳ ದಾಖಲೆಯಲ್ಲಿ ಪರಿಗಣನೆ ಗೊಳಾಗಾಗಾತ್ತವೆ.

೪) ವಿಗ್ರಹಾರಾಧಕರು ಸಹ ಧಾರ್ಮಿಕ ವಿಧಿಯೊಂದನ್ನು ಅನುಸರಿಸುವರು. ನಿರ್ಧಿಷ್ಟಪಡಿಸಿದ ದಿನದಂದು ವಸ್ತ್ರಾಭರಣಗಳಿಂದ ಅಲಂಕರಿಸಿದ ವಿಗ್ರಹವನ್ನು ಮೆರವಣಿಗೆಯ ಮೂಲಕ ತರುತ್ತಾರೆ. ಅದೇ ತರಹ ಮುಸ್ಲಿಮರು 'ಮೊಹರಂ' ನ ಸಂದರ್ಭದಲ್ಲಿ ಗೋರಿಯ ಪ್ರತೀಕಗಳಾದ 'ತಾಜಿಯಾ' ಗಳನ್ನು ಮೆರವಣಿಗೆಯ ಮೂಲಕ ಪ್ರದರ್ಶಿಸುತ್ತಾರೆ.

೫) ವಿಗ್ರಹಾರಾಧಕರು ವಿಗ್ರಹಗಳ ಹೆಸರುಗಳಿಂದ ಧ್ವಜಗಳನ್ನು ಮೆರುವಣಿಗೆಯಲ್ಲಿ ತರುತ್ತಾರೆ. ತಾವು ಸಾಕ್ಷಾತ್ ದೇವರನ್ನೇ ಕರೆತರುವುದಾಗಿ ಬಹುವಿದೇಯತೆಯನ್ನು ಪ್ರಕಟಿಸುತ್ತಾರೆ. ಅದೇ ತರಹ ಮುಸ್ಲಿಮರೂ ಸಹನಿರ್ಧಿಷ್ಟ ದಿನಗಳಲ್ಲಿ ಗೋರಿಗಳಿಗೆ ಧ್ವಜಗಳನ್ನು ತರುತ್ತಾರೆ. ಅವುಗಳನ್ನವರು ತಮ್ಮ ಇಷ್ಟಾರ್ಥಗಳನ್ನೀಡೇರಿಸುವ ಸಂಕಷ್ಟಗಳ ನಿವಾರಣೆಯ ಸಂಕೇತಗಳನ್ನಾಗಿ ನಂಬುತ್ತಾರೆ. ಸತ್ಯಸಂಧ 'ಉಲೇಮಾ' ಒಬ್ಬರು ವಿದೇಶದಿಂದ ಭಾರತಕ್ಕೆ ಬಂದಿದ್ದರು. ಅವರು ಸಂತಾರಾಧಕರ ವರ್ತನೆಗಳು ಮತ್ತು ಸಂಕಥನಗಳನ್ನು ಕೇಳಿ 'ಇವರು ಹಿಂದೂಗಳ ವಿಗ್ರಹ ಪೂಜೆಯನ್ನು ಅನುಸರಿಸಿಯೇ ಸಂತರ ಮತ್ತು ಗೋರಿಗಳ ಪೂಜೆ ಮಾಡುತ್ತಾರೆಂಬುದಾಗಿ ಅಭಿಪ್ರಾಯಪಟ್ಟಿದ್ದರು.

೬) ವಿಗ್ರಹಾರಾಧಕರು ನಿರ್ಧಿಷ್ಟ ದಿನಗಳಲ್ಲಿ ವಿಗ್ರಹಗಳನ್ನು ಜನಸ್ತೋಮದ ಮೂಲಕ ಮೆರವಣಿಗೆಯಲ್ಲಿ ತಂದು ಉತ್ಸವ ನಡೆಸುವಂತೆ ಸಂತಾರಾಧಕರು ಸಹ ಉರುಸು ಆಚರಿಸುತ್ತಾರೆ. ವಿಗ್ರಹಾರಾಧಕರಂತೆ ಇವರೂ ಸಹ ವಿನೋದದ, ತಮಾಷೆಯ ಆಟಗಳನ್ನು ಆಡುತ್ತಾರೆ. ಅವರು ಅಪವಿತ್ರ ಚೈತನ್ಯದ ಆತ್ಮಗಳನ್ನು ಪ್ರಾರ್ಥಿಸುತ್ತಾರೆ. ಸಂತರ ಆತ್ಮಗಳನ್ನು ರೋಗಗ್ರಸ್ತಗೊಳಿಸುತ್ತಾರೆ.

೭) ವಿಗ್ರಹಾರಾಧಕರು ಕೃಷ್ಣ ರಾಮಜನ್ಮದಿನಗಳನ್ನಿ ಆಚರಿಸುವಂತೆ ಮುಸ್ಲಿಮರೂ ಸಹ ಅಲಿಯ ಜನ್ಮದಿನವನ್ನು ಆಚರಿಸುತ್ತಾರೆ.

೮) ವಿಗ್ರಹಾರಾಧಕರು ದೇವರ ಹೆಸರಲ್ಲಿ ನಮಸ್ಕರಿಸುವಂತೆ (ಯ್ಯಾರಾಮಾ) ಮುಸ್ಲಿಮರೂ ಸಹ 'ಸಲಾಮ್ ಅಲೈಕುಂ' 'ಯ್ಯಾ ಅಲಿ ಮದಾದ್ 'ಎನ್ನುತ್ತಾರೆ .

೯) ಸಾವಿನ ಆಚರಣೆಗಳಿಗೆ ಸಂಬಂಧಿಸಿದಂತೆ ವಿಗ್ರಹಾರಾಧಕರು ಶವದ ಮೆರವಣಿಗೆಯಲ್ಲಿ ವಾಧ್ಯಗಳಿಂದ ಸಂಗೀತ ನುಡಿಸುತ್ತಿರುತ್ತಾರೆ. ಸಂತರಾಧಕರು ಸಹ ತಮ್ಮ ಸಾವಿನಲ್ಲೂ ಅದನ್ನೇ ಮಾಡುತ್ತಾರೆ. (ಇಲ್ಲಿನ ವ್ಯಂಗವನ್ನು ಗಮನಿಸಿ)

೧೦) ವಿಗ್ರಹಾರಾಧಕರು ದೇವಸ್ಥಾನಗಳಲ್ಲಿ ಗಂಟೆ, ಜಾಗಟೆ, ನಗಾರಿ ಮೊದಲಾದ ವಾದ್ಯಗಳನ್ನು ಬಳಸುತ್ತಾರೆ. ಇದು ಪೂಜೆಯ ಭಾಗವಾಗಿದ್ದು ದೇವರ ಬಳಿ ಸಾರಲು ಉಪಯುಕ್ತವೆಂದು ನಂಬಲಾಗಿದೆ. ಅದೇ ತರಹ ಸಂತಾರಾಧಕರು ಸಹ ನಗಾರಿ ಮೊದಲಾದ ವಾದ್ಯಗಳನ್ನು ಗೋರಿಗಳ ಮುಂದೆ ಬಾರಿಸುತ್ತಾರೆ. ಇದಾದನಂತರ ಮತ್ತೊಂದು ಹೆಜ್ಜೆ , ಮುಂದೆಹೋಗಿ ಕಾನೂನು ಬಾಹಿರ ಗೀತೆಗಳನ್ನು (ಕವ್ವಾಲಿಗಳನ್ನು) ಆಧ್ಯಾತ್ಮಿಕ ಸಂಗೀತ ಮೇಳಗಳಲ್ಲಿ ಆಲಿಸಲಾಗುತ್ತದೆ.

೧೧) ವಿಗ್ರಹರಾಧಕರು ತಮ್ಮ ಮಾರ್ಗದರ್ಶಕರಿಂದ ಒಂದು ಲೋಟ ಮಾದಕ ದ್ರವ್ಯವನ್ನು ಸೇವಿಸುವ ಅವಕಾಶಸಿಕ್ಕಲ್ಲಿ ಯಾವುದೇ ಸಂಕೋಚ, ಹಿಂಜರಿಕೆಯಿಲ್ಲದೆಯೆ ಅದನ್ನೊಂದು ಅನುಗ್ರಹವೆಂದು ಭಾವಿಸಿ ಕುಡಿದು ಬಿಡುತ್ತಾರೆ. ಅದೇ ತರಹ ಸಂತಾರಾಧಕರು ಸಹ ಮಾದಕ ಪದಾರ್ಥಗಳನ್ನು ಗೋರಿಗಳ ಮೇಲ್ವಿಚಾರಕರಿಂದ ಸ್ವೀಕರಿಸಿ ಸೇವಿಸುತ್ತಾರೆ.

೧೨) ವಿಗ್ರಹಾರಾಧಕರು ದೈವದ ಹೆಸರು ವಂಶಾವಳಿಯನ್ನು ಸೂತ್ರರೂಪದಲ್ಲಿ ಪ್ರಾರ್ಥನೆಯಲ್ಲಿ ಸ್ತುತಿಸುತ್ತಾರೆ. ಸಂತಾರಾಧಕರು ಸಹ ಅಲ್ಲಾನ ಸ್ಮರಣೆಯೊಂದನ್ನು ಹೊರತು ಪಡಿಸಿ ಸಂತರ ವಂಶಾವಳಿಯ



ದರ್ಗಾವೊಂದರ ದೈನಂದಿನ ಪೂಜಾ ವಿಧಾನದ ದೃಶ್ಯಗಳು





ಭಕ್ತರಿಂದ ನೈವೇದ್ಯ ಸ್ವೀಕರಿಸುವ ಮುಜಾವರ್



ನೈವೇದ್ಯ, ಪೂಜಾ ಪರಿಕರಗಳನ್ನೊಳಗೊಂಡ ಮಜಾರ್ ನ ಒಳಗಡೆಯ ದೃಶ್ಯ



‘ಉರೂಸ್ ’ನ ಆಚರಣೆಯಲ್ಲಿ ‘ಗಂಧ’ದ ದಿನದಂದು ಊರ ಹಿರಿಯರ - ವಿಶೇಷವಾಗಿ ಮುಸ್ಲಿಮೇತರ ಗೌಡ, ಶಾನುಬೋಗ, ಶೆಟ್ಟಿ, ಮಾರ್ವಾಡಿ - ಮನೆಗಳಲ್ಲಿ ಇಲ್ಲವೆ ಮುಜಾವರ್ ನ ಮನೆಯಲ್ಲಿ ಅಲಂಕರಿಸಿದ ‘ಸಂತನ’ ಪಾದುಕೆಗಳು



‘ಮಜಾರ್ ’ನ ಒಳಗಡೆಯ ಪೂಜಾವಿಧಿ



‘ಉರೂಸ್ ’ ಆಚರಣೆಯ ಗಂಧದ ಮೆರವಣಿಗೆಯ ದೃಶ್ಯ. ಸಂತನ ಗೌರವಾರ್ಥ ಬಿಟ್ಟ ಅಲಂಕೃತ ಕುದುರೆ, ಆ ಕುದುರೆಯ ಹಿಂದೆ ‘ತೇಯ್ದ’ ಗಂಧದವನ್ನು ಹೊತ್ತುಕೊಂಡ ಬಾಲಕನನ್ನು ನೋಡಬಹುದು.



ಮೆರವಣಿಗೆಯ ಇನ್ನೊಂದು ದೃಶ್ಯ.



ಮೆರವಣಿಗೆಯ ಮುಂಭಾಗದ ದೃಶ್ಯ, ಫಕೀರನ ವೇಷದವರೊಬ್ಬರನ್ನು ಕಾಣಬಹುದು



ಪಂಜಿನ ಮೆರವಣಿಗೆ



ಉರೂಸ್ ಆಚರಣೆಯ 'ಗಂಧ'ದ ಮೆರವಣಿಗೆಯ ರಾತ್ರಿಯ ದೃಶ್ಯ. ಅಲಂಕರಿಸಿದ ಕುದುರೆ, ಹಿಂಬಾಗದಲ್ಲಿ 'ಬಿದಿಗೆಯ ಚಂದ್ರ'ನ ಗುರುತಿರುವ ಧ್ವಜ.



ಶಸ್ತ್ರ ಪವಾಡದಲ್ಲಿ ನಿರತರಾದ 'ಫಕೀರರು'



'ಮಜಾರ್ 'ನ ಎದುರಲ್ಲಿ 'ಶಸ್ತ್ರ ಪವಾಡ' ನಡೆಸಿದ ಮುಜಾವರ



'ಶಸ್ತ್ರ ಪವಾಡ'ದ ಫಕೀರ



. 'ಉರೂಸ್ ' ಆಚರಣೆಯಲ್ಲಿ ಹಸಿರು ಧ್ವಜಗಳಿಂದ 'ಹಲಗೆ' ಬಾರಿಸುತ್ತಾ ಮುಜಾವರರ ನೇತೃತ್ವದಲ್ಲಿ ಕಾಣಿಕೆ ಸಂಗ್ರಹಿಸಲು ಹೊರಟಿರುವುದು.



. ಸಂಗ್ರಹಿಸಿದ ಹಣವನ್ನು ಕೋಲಿನ ತುದಿಗೆ ಕಟ್ಟಿರುವುದು



ಮಾನಸಿಕ ಉನ್ಮಾದಕ್ಕೊಳಗಾದ (ದೆವ್ವ ಹಿಡಿದ) ಹೆಣ್ಣು ಮಗಳು ಸಂತನ ಮಜಾರ್ ನ ಮುಂದುಗಡೆ 'ಬಿಡುಗಡೆ'ಗಾಗಿ ಯತ್ನಿಸುವುದು.



ದರ್ಗಾದ ಆವರಣದೊಳಗೆ ಮಕ್ಕಳ 'ಹುಟ್ಟುಗೂದಲ'ನ್ನು ತೆಗೆಸುವುದು.

ಸ್ತುತಿ ಸ್ತೋತ್ರವನ್ನು ಪ್ರಾರ್ಥನೆಯಾಗಿ ಉಸುರುತ್ತಾರೆ.

೧೩) ವಿಗ್ರಹಾರಾಧಕರು ಯಾರಾದರೂ ಪವಿತ್ರ ವ್ಯಕ್ತಿಗಳು ತೀರಿಕೊಂಡರೆ ಅವರ ನೆನಪಲ್ಲಿ ಅರವಟಿಗೆಗಳನ್ನು ಸ್ಥಾಪಿಸುತ್ತಾರೆ. ಸಂತಾರಾಧಕರು ಸಹ 'ಹುಸೇನರ' ಹೆಸರಲ್ಲಿ ಈರೀತಿಯ ಅರವಟಿಗೆಗಳನ್ನು ಸ್ಥಾಪಿಸುತ್ತಾರೆ. ಅಲ್ಲಾನ ಹೊರತು ಬೇರ್ಯಾರಿಗೂ ಪ್ರಾರ್ಥನೆ, ಮುಡುಪು ಸಲ್ಲಿಸುವುದನ್ನು ನಿಷೇಧಿಸಲಾಗಿದೆಯೆಂಬುದು ಅವರಿಗೆ ಗೊತ್ತಿಲ್ಲ. ವಾಸ್ತವಾಗಿ ಅಲ್ಲಾನ ಅನುಗ್ರಹ ಮತ್ತು ತೃಪ್ತಿಗಾಗಿ ಅವಶ್ಯಕತೆಯಿರುವವರಿಗೆ ಆಹಾರ ಮತ್ತು ನೀರನ್ನು ನೀಡಲು ಅನುಮತಿಯಿದೆ. ಈರೀತಿಯ ಉದ್ದೇಶದಲ್ಲಿ ಅಲ್ಲಾನ ಶ್ರೇಷ್ಠತೆಯನ್ನು ಇಮಾಮ್ ಹುಸೇನ್ ಅಥವಾ ಬೇರ್ಯಾರಿಗೋ ಅಪಾದಿಸಲಾಗುತ್ತದೆ.

೧೪) ವಿಗ್ರಹಾರಾಧಕರಲ್ಲಿ ವಿಗ್ರಹಗಳಿಗೆ ಪ್ರಾಣಿಗಳನ್ನು ಹರಕೆ ಬಿಡುವ ಸಂಪ್ರಾದಾಯವಿದೆ. ಮುಸ್ಲಿಮರೂ ಸಹ ಗೋರಿಗಳ ಹೆಸರಲ್ಲಿ ಹರಕೆ, ಬಿಡುತ್ತಾರೆ.

೧೫) ವಿಗ್ರಾಹಾರಧಕರು ದೇವಾಲಯಗಳನ್ನು ನಿರ್ಮಿಸುತ್ತಾರೆ. ಅದೇ ತರಹ ಮುಸ್ಲಿಮರೂ ಇಮಾಮ್ ಬರಾಸ್ ಗಳನ್ನು (ಮೊಹರಂನ ತಾಜಿಯಾಗಳನ್ನಿಡುವ ಆಲಯಗಳು) ನಿರ್ಮಿಸುತ್ತಾರೆ.

೧೬) ವಿಗ್ರಹಾರಾಧಕರು ವಿಗ್ರಹಗಳ ಮುಂದೆ ಸಿಹಿತಿಂಡಿಗಳನ್ನಿಟ್ಟು ಅದನ್ನು ಬಹು ಭಕ್ತಿಯಿಂದ ಸೇವಿಸುತ್ತಾರೆ. ಮುಸ್ಲಿಮರೂ ಸಹ ಗೋರಿಗಳು ಮತ್ತು ತಾಜಿಯಾಗಳ ಮುಂದೆ ಸಿಹಿತಿಂಡಿಗಳನ್ನಿಟ್ಟು (ಅದಕ್ಕೆ ಮುಫರಿತ್ mufrit) ಎನ್ನುತ್ತಾರೆ ಬಹು ಭಕ್ತಿಯಿಂದ ಸೇವಿಸುತ್ತಾರೆ. ಬಲಿಯ ಮಾಂಸ ಕೂಡ ಲಭ್ಯವಿದ್ದು, ಅವರದಕ್ಕೆ ಅಂತಹ ವಿಧೇಯತೆಯನ್ನೇನೂ ತೋರಿಸಲಾರರು''

೧೭) ಹಿಂದೂಗಳು ದೇವಸ್ಥಾನದಿಂದ ಹಿಂದಿರುಗುವಾಗ ಹಣೆಯ ಮೇಲೆ ಬಣ್ಣದ ಚಿಹ್ನಗಳು, ಕಿವಿಗಳಲ್ಲಿ ಹೂವುಗಳನ್ನು ಧರಿಸುತ್ತಾರೆ. ಅದೇ ತರಹ ಮುಸ್ಲಿಮರು ಸಹ ಗೋರಿಗಳ ಬಟ್ಟೆಗಳ ಮೇಲೆ ಸುಗಂದ ದ್ರವ್ಯಗಳನ್ನು ಸಿಂಪಡಿಸುತ್ತಾರೆ. ಆ ಬಟ್ಟೆಗಳಿಗೆ ಮುತ್ತಿಟ್ಟು, ಕೈಯಿಂದ ಮುಟ್ಟುತ್ತಾರೆ.

ಮೇಲ್ವಿಚಾರಕರಿಂದ ಈಬಟ್ಟೆಗಳ ರಾಶಿಯಿಂದ ಹರಿದ ಬಟ್ಟೆಯ ತುಂಡುಗಳನ್ನು ತಲೆಯ ಸುತ್ತ ಕಟ್ಟಿಕೊಳ್ಳುತ್ತಾರೆ. ಈ ಕ್ರಿಯೆ ಮುಗಿದ ನಂತರ ಅಲ್ಲಿಂದ ರಾಜದರ್ಬಾರಿನ ಮೂಲಕ 'ಖಿಲ್ಲತ್ತು'ಪಡೆದಂತೆ ಉಲ್ಲಸಿತರಾಗಿ ಮನೆಗೆ ಹಿಂದಿರುಗುತ್ತಾರೆ.

೧೮) ವಿಗ್ರಹಾರಾಧಕರು ದೇವಾಲಯಗಳ ಮೇಲ್ವಿಚಾರಕ (ಪೂಜಾರಿಗಳು) ರೊಂದಿಗೆ ಗೆಳೆತನ ಬೆಳೆಸಿಕೊಳ್ಳುತ್ತಾರೆ. ದೇವರ ಅನುಗ್ರಹ ಸಂಪಾದಿಸಲು ಅವರನ್ನು ಮಧ್ಯವರ್ತಿಗಳು ಮತ್ತು ರಾಯಭಾರಿಗಳೆಂದು ಪರಿಗಣಿಸುತ್ತಾರೆ. ಗೋರಿಪೂಜಕರು ಸಹ ದರ್ಗಾಗಳ ಮೇಲ್ವಿಚಾರಕನ್ನು ಇದೇ ರೀತಿ ಭಾವಿಸುವರಲ್ಲದೆ ಅವರನ್ನು ಅಸಂತುಷ್ಟಗೊಳಿಸಲು ತುಂಬಾ ಅಂಜುತ್ತಾರೆ.

ಹಾಗಾದರೆ ಧಾರ್ಮಿಕ -ಸುಧಾರಣಾವಾದಿಗಳು ಮತ್ತು ಮೂಲಭೂತ ವಾದಿಗಳಿಗೆ ನಮ್ಮ ಪರಂಪರೆ, ಸಂಸ್ಕೃತಿ (ಇಸ್ಲಾಂ ಮತ್ತು ಭಾರತೀಯ ಸಂಸ್ಕೃತಿಗಳೆರಡೂ ಒಳಗೊಂಡು ದೀರ್ಘಕಾಲ ಘಟ್ಟದಲ್ಲಿ ವಿಕಾಸ ಗೊಂಡ ಸಂಕರ ಸಂಸ್ಕೃತಿ- ಇದನ್ನೇ ದ್ವಿ- ಸಾಂಸ್ಕೃತಿಕತೆ ಎಂದು ಈ ಅಧ್ಯಯನದ ಪರಿಭಾಷೆಯಲ್ಲಿ ಕರೆಯಲಾಗಿದೆ.) ಯ ಬಗೆಗೆ ಸಂದೇಹ ಮೂಡಬಹುದು . ಇಂತಹ ಪ್ರಕ್ರಿಯೆಗಳು (ಧಾರ್ಮಿಕ ಮೂಲಭೂತವಾದ, ಧಾರ್ಮಿಕ ಸುಧಾರಣಾವಾದದಂತಹ) ಯಾಕೆ ಕಾಣಿಸಿಕೊಂಡವು? ಮತ್ತು ಇವು ಯಾವ ಸಂದರ್ಭ, ಕಾಲಘಟ್ಟದಲ್ಲಿ ಕಾಣಿಸಿಕೊಂಡವು ? ಎಂಬ ಪ್ರಶ್ನೆಗಳಿಗೆ ಉತ್ತರ ಪಡೆಯುವಲ್ಲಿಯೇ ಮೇಲಿನ ಸಂದೇಹಗಳಿಗೆ ಸಮಾಧಾನವಿದೆ.

ನಮಗೆ ತಿಳಿದಿರುವ ಹಾಗೆ ಧಾರ್ಮಿಕ- ಸುಧಾರಣೆಗಳು ಮತೀಯ ಸಂಘಟನೆಗಳು ಸ್ಪಷ್ಟವಾಗಿ ಕಾಣಿಸಿ ಕೊಂಡದ್ದು ಸ್ವಾತಂತ್ರ್ಯ ಪೂರ್ವದ ಬ್ರಿಟೀಷ್ ವಸಾಹತುಶಾಹಿಯ ಕಾಲದಲ್ಲಾಗಿದೆ. ಕೋಮುವಾದದ ಮೂಲ ಬೀಜಗಳಿರುವುದೂ ಸಹ ಇಲ್ಲಿಯೇ. ಸ್ವಾತಂತ್ರ್ಯ ಹೋರಾಟದ ಅಗತ್ಯವಾಗಿ ಹುಟ್ಟಿಕೊಂಡ ರಾಷ್ಟ್ರೀಯತಾವಾದವು ಇಂಡಿಯಾದಪರಂಪರೆ, ಸಂಸ್ಕೃತಿಯನ್ನು ಅರ್ಥೈಸಲು ಆಗ ತಾನೆ ಕಣ್ಣು ಬಿಡುತ್ತಿದ್ದ ಚರಿತ್ರೆ ಮೊದಲಾದ ಸಮಾಜಶಾಸ್ತ್ರಗಳನ್ನು ಬಳಸಿಕೊಂಡಿತು. ಆವರೆಗೆ ಯಾವುದೇ ಪೂರ್ವಗ್ರಹಗಳಿಲ್ಲದೆ

ಸೌಹಾರ್ದಯುತವಾಗಿ ಬದುಕುತ್ತಿದ್ದ ಜನರ ನಡುವೆ ಧರ್ಮ, ಸಂಸ್ಕೃತಿ, ರಾಷ್ಟ್ರೀಯತೆಯ ಹೆಸರಲ್ಲಿ ವಿಷ ಹರಡಲಾಯಿತು.ಹಿಂದೂ- ಮುಸ್ಲಿಂ ಎಂಬಎರಡು ಕಾಲ್ಪನಿಕ ವರ್ಗಗಳನ್ನು ವಿಭಜಿಸಿ ಕೊಂಡು ಅದಕ್ಕೆ ಪೂರಕವಾದ ಪರಂಪರೆ, ಸಂಸ್ಕೃತಿಯ ವಿವರಗಳನ್ನು ಹೆಕ್ಕಿ ತೆಗೆದು ಜೋಡಿಸಲು ಪ್ರಯತ್ನಿಸಲಾಯಿತು. ಶತಶತಮಾನಗಳ ಕಾಲದ ಹಿಂದೂ-ಮುಸಿಈಲ ಸಾಂಸ್ಕೃತಿಕ ಪರಂಪರೆಯನ್ನು ಅಖಂಡವಾಗಿ ಗ್ರಹಿಸದೆ ಕೇವಲ ಮತೀಯ ದೃಷ್ಟಿಕೋನದಿಂದ ಎರಡಾಗಿ (ಹಿಂದೂ-ಮುಸ್ಲಿಂ) ವಿಭಜಿಸಿ ನಮ್ಮ ಪರಂಪರೆಯನ್ನು ಅರ್ಥೈಸಲು ಹೊರಟಿದ್ದು ದೊಡ್ಡ ವಿಪರ್ಯಾಸದ ಸಂಗತಿಯಾಗಿದೆ.

ಇಂತಹ ಸಂಕೀರ್ಣ ಸ್ಥಿತಿಯಲ್ಲಿ ಕಾಣಿಸಿಕೊಂಡ ಮತೀಯ ಸಂಘಟನೆಗಳು, ಧಾರ್ಮಿಕ-ಸುಧಾರಣವಾದವು ಸಹಜವಾಗಿಯೇ ವಿಕೃತವಾಗಿ ತಿರುಚಲ್ಪಟ್ಟ, ಪರಂಪರೆ, ಸಂಸ್ಕೃತಿಯ ವ್ಯಾಖ್ಯಾಗಳಿಗೆ ಜೋತುಬಿದ್ದು ಪರಸ್ಪರರ ಮೇಲೆ ದ್ವೇಷಕಾರುವಂತೆ ಪ್ರಚೋದಿಸತೊಡಗಿದವು. ಸುಧೀರ್ಘಕಾಲದ ಸಹಬಾಳ್ವೆ, ಭಕ್ತಿಪಂಥದ ಕಾಣ್ಕೆ, ಮತಾಂತರೀಕರಣ, ಸಂಸ್ಕೃತೀಕರಣ, ಮುಂತಾದ ಪ್ರಕ್ರಿಯೆಗಳ ಮೂಲಕ ಸಂತರಿಸಿಕೊಂಡಿದ್ದ ಸಾಂಸ್ಕೃತಿಕ ಸಮನ್ವಯತೆಯನ್ನು ಬದಿಗಿಟ್ಟು ದುರುದ್ದೇಶಪೂರಿತ ಮತೀಯ ಭಾವನೆಗಳ ಅಮಲಿಗೆ ಸಿಕ್ಕಿಕೊಳ್ಳಬೇಕಾಯಿತು. ಸಂಸ್ಕೃತಿಯ ಬೇರುಗಳನ್ನು ಹುಡುಕ ಹೊರಟು ತಪ್ಪು ಗ್ರಹಿಕೆಗಳ ಭ್ರಾಮಕ ಜಗತ್ತಿನಲ್ಲಿ ಬದುಕುತಿದ್ದ ಧಾರ್ಮಿಕ ಮೂಲಭೂತವಾದ ಧಾರ್ಮಿಕ ಸುಧಾರಣಾವಾದಿ ವರ್ಗಕ್ಕೆ ವರ್ತಮಾನದ ವಾಸ್ತವಗಳು ಅರ್ಥವಾಗುತ್ತಿರಲಿಲ್ಲ. ಇಂತಹದೊಂದು ಸ್ಥಿತಿಗೆ ಬಹುಮಟ್ಟಿಗೆ ಕಾರಣವಾಗಿರುವಂತೆ ವಸಾಹತು ಶಾಹಿಯ ಕಾಲಘಟ್ಟದ, ಆಧುನಿಕಶಾಸ್ತ್ರ, ಪರಿಜ್ಞಾನಗಳಿಗೆ ಪಕ್ಕಾಗಿ ಭಾರತೀಯ ಸಮಾಜವು ತನ್ನ ಪರಂಪರೆಯೊಂದಿಗೆ ಅರ್ಥಪೂರ್ಣ ಸಮನ್ವಯವನ್ನು ಸಾಧಿಸಿಕೊಳ್ಳಲಾಗದೆ. ಇಂತಹ ಸಾಂಸ್ಕೃತಿಕ ತಲ್ಲಣಗಳಿಗೆ, ತಪ್ಪು ಗ್ರಹಿಕೆಗಳಿಗೆ ಒಳಗಾಗಬೇಕಾಯಿತು. ಇಂತಹ ಸಂದರ್ಭದಲ್ಲಿ ಕಾಣಿಸಿಕೊಂಡ ಮತೀಯ ಸಂಘಟನೆಗಳಾಗಲಿ, ಧಾರ್ಮಿಕ- ಸುಧಾರಣೆಗಳಾಗಲಿ ಇದಕ್ಕೆಹೊರತಾಗಿರಲಿಲ್ಲ.ಹಾಗಾಗಿ ಇವ್ಯಾವೂ ನಮ್ಮ ಪರಂಪರೆಯ ಜೊತೆ ಸಾವಯವ ಸಂಬಂಧ ಪಡೆದು ಕೊಳ್ಳಲಾಗದೆ ಮತೀಯ ಮುಖವಾಡಗಳನ್ನು ಧರಿಸಬೇಕಾಯಿತು. ಮತ್ತು ಈರೀತಿಯ ಸಂಬಂಧ ಸಾಧ್ಯವಾಗದಷ್ಟು, ತಪ್ಪು ಗ್ರಹಿಕೆಗಳು ತುಂಬಿ ಹೋಗಿದ್ದವು.

ಹಾಗಾಗಿ ಮತೀಯ ಸಂಘಟಕರಾಗಲಿ ಧಾರ್ಮಿಕಸುಧಾರಕರಾಗಲಿ ನಮ್ಮ ಪರಂಪರೆಯನ್ನು, ಸಂಸ್ಕೃತಿಯನ್ನು ದ್ವೇಷಿಸುತ್ತಿದ್ದರು ಎಂದಲ್ಲ. ಆ ಕಾಲಮಾನದ , ದ್ವಂದ್ವ ಗೊಂದಲಗಳ ವಿಕ್ಷಿಪ್ತ ಸ್ಥಿತಿಯನ್ನು ಮಾಸಿಕವಾಗಿ ಪ್ರತಿನಿಧಿಸುತ್ತಿದ್ದರು. ದುರಂತವೆಂದರೆ ಇಂತಹುದೊಂದು ಸ್ಥಿತಿಯನ್ನು ತಿಳಿಗೊಳಿಸಲು ಯತ್ನಿಸದೆ ಉಲ್ಬಣಗೊಳಿಸಿ ದುರ್ಲಾಭ ಪಡೆದರೆಂಬುದು ಕಟು ಸತ್ಯವಾಗಿದೆ.

ನಮ್ಮ ಸಾಂಸ್ಕೃತಿಕ- ಪರಂಪರೆಯನ್ನು ವಸ್ತು ನಿಷ್ಠವಾಗಿ ಗ್ರಹಿಸಲು ಇರುವ ತೊಡಕುಗಳಿಂದ ಬಿಡಿಸಿಕೊಂಡಾಗ ಕಾಣಬರುವ ಸತ್ಯ ಸಂಗತಿಗಳು ನಮ್ಮನ್ನು ಅಚ್ಚರಿ ಗೊಳಿಸಿದೇ ಇರಲಾರವು. ನಿದರ್ಶನಕ್ಕೆ ಈಟನ್ ಬಿಜಾಪುರದ ಸೂಫಿ ಮತ್ತವರ ದರ್ಗಾಸಂಸ್ಥೆಗಳು, ಸೂಫೀ ಜನಪದ ಸಾಹಿತ್ಯವನ್ನು ಕುರಿತು ವಿವರಿಸುತ್ತಾ ಇವನ್ನು ಸೂಫಿಗಳು ಮತಾಂತರ ಮಾಧ್ಯಮವನ್ನಾಗಿ ಬಳಸಲಿಲ್ಲ ಮತ್ತು ಅವರು ತಮ್ಮನ್ನು ತಾವೇ ಮುಸ್ಲಿಂ ಪಾದ್ರಿಗಳೆಂದು ಯಾವತ್ತೂ ಭಾವಿಸಿರಲಿಲ್ಲ. ಮತಾಂತರ ಮತ್ತು ಮತ ಪ್ರಚಾರಕರು ಎನ್ನುವ ಕಲ್ಪನೆಯು ಕ್ರೈಸ್ತ ಚಳುವಳಿಯ ಕಾರಣ ೧೯ ಮತ್ತು. ೨೦ ನೆಯ ಶತಮಾನಗಳಲ್ಲಿ ಕಾಣಿಸಿಕೊಂಡದ್ದಾಗಿಯೂ, ಈ ಕ್ರಿಶ್ಚಿಯನ್ ಪಾದ್ರಿಗಳ ಮತ್ತು ಮತಾಂತರದ ಪರಿಭಾಷೆಯಲ್ಲಿ ಸೂಫಿಗಳನ್ನು ಅರ್ಥೈಸುವುದು ತಪ್ಪಾಗುತ್ತದೆ ಎಂಬುದಾಗಿ ವಿವರಿಸುತ್ತಾರೆ. ಬಿಜಾಪುರದ ಸೂಫಿಗಳು ಅವರಸಾಹಿತ್ಯಮತ್ತು ದರ್ಗಾಗಳಿಗೆ ಆಕರ್ಷಿತರಾಗಿ ಕ್ರಮೇಣ ಪರಂಪರೆಯೊಂದಿಗೆ ಬೆರೆತುದನ್ನು ಮತಾಂತರ ಎಂದು ನಾವು ಭಾವಿಸಲಾಗುವುದಿಲ್ಲ. ಮತಾಂತರವು ಅಂತಃ ಪ್ರಜ್ಞೆಯಿಂದ ಮೂಡಿ ಬಂದುದಾಗಿರಬೇಕಲ್ಲದೆ ದೀಕ್ಷೆಕೊಡುವವನು ಮತ್ತು ಸ್ವೀಕರಿಸುವವನು ಇಬ್ಬರೂ ಪ್ರಜ್ಞಾಪೂರ್ವಕ ವಾಗಿರಬೇಕಾಗುತ್ತದೆ. ಆದರೆ ಇಲ್ಲಿ ಈ ಪ್ರಕ್ರಿಯೆಯಲ್ಲಿ ಅಂತಹ ಲಕ್ಷಣಗಳು ಕಂಡು ಬರುತ್ತಿಲ್ಲ. ಈಟನ್ ಇದನ್ನು ಮತಾಂತರೀಕರಣವೆಂದು ಹೆಸರಿಸದೆ ' ಸಂಸ್ಕೃತಿಕರಣ' ಪ್ರಕ್ರಿಯೆಯೆಂದು ಹೆಸರಿಸಿರುವುದು ಅರ್ಥಪೂರ್ಣವಾಗಿದೆ. ವಸಾಹತುಶಾಹಿಯ ಪ್ರಭಾವ, ಪೂರ್ವಗ್ರಹಗಳಿಂದ ಬಿಡಿಸಿಕೊಂಡು ಸಂಸ್ಕೃತಿ, ಪರಂಪರೆಯೊಂದನ್ನು ಹೇಗೆ ಅರ್ಥೈಸಬಹುದೆಂಬುದಕ್ಕೆ ನಿದರ್ಶನವಾಗಿ ಈ ಉದಾಹರಣೆ ನೀಡಬೇಕಾಯಿತು."

ದರ್ಗಾಗಳ ದೈನಂದಿನ ಆಚರಣೆಗಳಿಂದ ವಾರ್ಷಿಕ ಆಚರಣೆಗಳ ಸಂಕ್ಷಿಪ್ತ ವಿವರಗಳನ್ನು

ನೋಡಬಹುದು. ಈ ಆಚರಣೆಗಳು ದರ್ಗಾದಿಂದ ದರ್ಗಾಕ್ಕೆ ಅಲ್ಪಸ್ವಲ್ಪ ವ್ಯತ್ಯಾಸವಾದರೂ ಸ್ವರೂಪದಲ್ಲಿ ಬಹುತೇಕ ಅವು ಒಂದೇ ಆಗಿವೆ. ದಿನಂಪ್ರತಿ ದರ್ಗಾಗಳಲ್ಲಿ (ಕೆಲವು ಪ್ರಸಿದ್ಧ ದರ್ಗಾಗಳನ್ನು ಹೊರತು ಪಡಿಸಿದಂತೆ) ಅಂತಹ ಹೇಳಿಕೊಳ್ಳುವ ಆಚರಣೆಗಳೇನು ನಡೆಯುವುದಿಲ್ಲ. ಅಲ್ಲಿನ ಮುಜಾವರ ದೈನಂದಿನ ಪ್ರಾರ್ಥನೆಗಳಲ್ಲಿ ಪಾಲ್ಗೊಂಡು ದರ್ಗಾಕ್ಕೆ ಬರುವ ಭಕ್ತರ ಮೇಲ್ವಿಚಾರಣೆ ನಡೆಸಿ ಅವರು ತರುವ ಕಾಣಿಕೆ-, ನೈವೇದ್ಯವನ್ನು ಗೋರಿಗೆ ನಿವೇದಿಸುವ ಕಾರ್ಯ ಕೈಗೊಳ್ಳುತ್ತಾನೆ. ಇಂಡಿಯಾದ ಬಹುತೇಕ ದರ್ಗಾಗಳು 'ಗುರುವಾರ' ವನ್ನು ವಿಶೇಷ ದಿನವನ್ನಾಗಿ ಪರಿಗಣಿಸಿರುವುದು ಗಮನಿಸತಕ್ಕ ಅಂಶವಾಗಿದೆ. ಈ ಅಧ್ಯಯನಕ್ಕೆ ಸಂಬಂಧಿಸಿದ ಪ್ರಾದೇಶಿಕ ದರ್ಗಾಗಳ ವಿಷಯದಲ್ಲೂ ಇದು ಅನ್ವಯಿಸುತ್ತದೆ. ಗುರುವಾರದ ದಿವಸ, ಕೆಲವೆಡೆ ಶುಕ್ರವಾರದ ದಿವಸ ಖವ್ವಾಲಿ ಅಥವಾ ಭಜನೆ ಕಾರ್ಯಕ್ರಮವಿರುತ್ತದೆ . ಅಂದು ಬರುವ ಭಕ್ತರ ಸಂಖ್ಯೆಯು ಅಧಿಕವಾಗಿರುತ್ತದೆ. ಮೊಹರಂನ ತಾಜಿಯಾಗಳನ್ನಿಡುವ 'ಅಷುರಖಾನ' (ಇಮಾಮ್ ಬರಾಸ್ , ಪೀರಲುಗುಡಿ ಅಥವಾ ಮಸೀದಿ)ಗಳಿಗೆ ಸಹ ' ಪ್ರತಿಗುರುವಾರ' ವನ್ನು ವಿಶೇಷ ದಿನವನ್ನಾಗಿ ಪರಿಗಣಿಸಲಾಗಿದೆ. ಅಂದು ಹೆಣ್ಣು ಮಕ್ಕಳು ಸಕ್ಕರೆ, ಎಣ್ಣೆ, ಊದುಬತ್ತಿ, ತೆಂಗಿನಕಾಯಿ ಹೊಯ್ದು 'ನಿವೇದಿಸಿ' ಕೊಂಡು (ಅಥವಾ 'ಓದಿಕೆ' ಮಾಡಿಸಿಕೊಂಡು) ಬರುತ್ತಾರೆ. ತಿಂಗಳಿಗೊಮ್ಮೆ ಅಮವಾಸ್ಯೆಯ ದಿವಸ, ಅಸಂಖ್ಯಾತ ಮುಸ್ಲಿಮ್ ಮತ್ತು ಮುಸ್ಲಿಮೇತರ ಭಕ್ತರು ದರ್ಗಗಳಿಗೆ ಬಂದು ರಾತ್ರಿ ಅಲ್ಲಿ ನಿದ್ದೆ ಮಾಡು ಹೋಗುವ ಪರಿಪಾಠವಿದೆ. ದರ್ಗಾಕ್ಕೆ ಕಾರಣನಾದ ಸಂತನ ಮರಣದ ತಾರೀಖಿನಂದು ವರ್ಷಪ್ರತಿ 'ಪುಣ್ಯತಿಥಿ' ಆಚರಿಸಲಾಗುತ್ತದೆ. 'ಉರೂಸ್ ' ಎಂದು ಕರೆಯಲಾಗುವ ಇದು 'ಜಾತ್ರೆ' (ರಥೋತ್ಸವ) ಯ ಮಾದರಿಯಲ್ಲಿ ವಿಜೃಂಭಣೆಯಿಂದ ನಡೆಯುತ್ತದೆ. ವಾಸ್ತವವಾಗಿ ಇದು ತೀರಿಕೊಂಡ ಸಂತನು ದೈವತ್ವದೊಂದಿಗೆ ಲೀನವಾಗುವ ಸಂಕೇತವಾಗಿ ಆಚರಿಸಲ್ಪಡುತ್ತದೆ. 'ಊರೂಸ' ಎಂದರೆ ಪರ್ಶಿಯನ್ ಭಾಷೆಯಲ್ಲಿ 'ವಿವಾಹ' ಎಂಬರ್ಥವಿದೆ. ಒಟ್ಟಾಗಿ ಈ ಆಚರಣೆಯ ವಿವರಗಳು ಸ್ಪಷ್ಟ- ಪಡಿಸುವಂತೆ ಅವು ಅವುಗಳ ಸ್ವರೂಪದಲ್ಲಿ ಇಸ್ಲಾಮೇತರ ವೆಂಬುದಾಗಿಯೂ ತದ್ವತ್ತಾಗಿ ಅವು ಹಿಂದೂ ಪುಣ್ಯಕ್ಷೇತ್ರಗಳ ಆಚರಣಾ ವಿಧಾನಗಳಿಗೆ ಸಂವಾದಿಯಾದುದಾಗಿವೆ ಎಂಬುದನ್ನು ಮುಖ್ಯವಾಗಿ ಗಮನಿಸಬೇಕು.

ಪ್ರಸ್ತುತ ಅಧ್ಯಯನಕ್ಕಾಗಿ ಆರಿಸಿಕೊಂಡ 'ಉರೂಸ್ ' ಗಳು ಕ್ರಮವಾಗಿ ಬೀದರಿನ ಸಮೀಪದ ಬಹುಮನಿ ಸಂಸ್ಥಾನದ ರಾಜನೂ ಮತ್ತು ಸಂತನೂ ಆಗಿದ್ದ ಅಷ್ಟೂರಿನ ಅಹಮ್ಮದ್ ಶಹಾವಲಿಯವರ ಉರುಸು, ನಂತರದಲ್ಲಿ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಆದೋನಿ ತಾಲೂಕಿನ 'ಕೌತಾಳಂ' ನ ಖಾದರ್ ಲಿಂಗ' ನ ಉರುಸು. ಖಾದರಲಿಂಗನು ಬಿಜಾಪುರದ ಪ್ರಖ್ಯಾತ ಸಂತ ಅಮೀನುದ್ದೀನ್ -ಅಲಾ' ನ ಶಿಷ್ಯ ಮತ್ತು ವಿಶೇಷಬಾಗಿ ' ಲಿಂಗಾಯಿತ' ಸಮುದಾಯದೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದವನು. ಅದರ ಕುರುಹಾಗಿ ಈಗಲೂ 'ಖಾದರ್ ಲಿಂಗನ' ದರ್ಗಾಕ್ಕೆ ಬರುವ ಭಕ್ತರಲ್ಲಿ ಹೆಚ್ಚಾಗಿ ಲಿಂಗಾಯಿತ ಕೋಮಿನವರು ಸೇರಿದ್ದಾರೆ. ಮೂರನೆಯದಾಗಿ ಇದೇ ಜಿಲ್ಲೆಯ ಆಲೂರುತಾಲೂಕಿನ 'ಎಳ್ಳಾರ್ತಿ' ಯ ಶ್ನೇಕ್ ಶಹಾವಲಿಯವರ ಉರುಸು. ಇಲ್ಲಿನ ದರ್ಗಾಕ್ಕೆ ಬರುವ ಭಕ್ತರು ಹೆಚ್ಚಾಗಿ ಕೆಳವರ್ಗದವರಾಗಿದ್ದು ವಿಶೇಷವಾಗಿ ಅಸ್ಪೃಷ್ಯರು ಸಂಪರ್ಕವಿರಿಸಿಕೊಂಡಿರುತ್ತಾರೆ. ಹಾಗೆ ನೋಡಿದರೆ ಬಹುತೇಕ ಎಲ್ಲಾ ದರ್ಗಾಗಳಲ್ಲಿ ಯಾವುದೇ ರೀತಿಯ , ವರ್ಣ, ಜಾತಿ ವ್ಯವಸ್ಥೆಯ ವಿಭಜನೆ, ಕಟ್ಟು ಪಾಡುಗಳಿಲ್ಲದಿರುವುದು ಮುಸ್ಲಿಮೇತರ ಕೆಳವರ್ಗಗಳಿಗೆ ವಿಶೇಷ ಆಕರ್ಷಣೆಯಾಗಿತ್ತು. ಎಳ್ಳಾರ್ತಿ ಬಾಬಾ ಅವರು ಮೂಲತಃ ಅರೇಬಿಯದವರಾದರೂ ಬಿಜಾಪುರದಲ್ಲಿ ನೆಲೆನಿಂತು ಔರಂಗಜೇಬನ ದಕ್ಷಿಣದ ದಾಳಿಯಿಂದ ಎಳ್ಳಾರ್ತಿಗೆ ಬಂದು ನೆಲೆಸಿದವರಾಗಿದ್ದರು.

ಬಳ್ಳಾರಿ ಜಿಲ್ಲೆಗಂಟಿಕೊಂಡಂತೆ ಗಡಿ ಭಾಗದಲ್ಲಿರುವ ಆಂಧ್ರ, ಪ್ರದೇಶಕ್ಕೆ ಸೇರಿದ ದರ್ಗಾ ಹೊನ್ನೂರಿನ 'ಉರುಸ್ ' ನ್ನು ಸಹ ಪ್ರಸ್ತುತತ ಅಧ್ಯಯನಕ್ಕೆ ಆರಿಸಿಕೊಂಡಿದೆ. ಅನಂತಪುರ,ಕರ್ನೂಲು, ಕರ್ನಾಟಕದ ಬಳ್ಳಾರಿ , ಚಿತ್ರದುರ್ಗದ ಜಿಲ್ಲೆಗಳ ಬಹುತೇಕ ಕಡೆ ಹೊನ್ನೂರು ಸ್ವಾಮಿ ಎಂದು ಜನಪ್ರಿಯವಾಗಿರುವ ಹಜರತ್ ಸರ್ಮಸ್ತ್ ಹುಸೇನಿ ಚಿಷ್ತಿಯವರ ದರ್ಗಾವು ಅನಂತಪುರ ಜಿಲ್ಲೆಯ 'ದರ್ಗಾ ಹೊನ್ನೂರಿ'ನಲ್ಲಿದೆ. ಹೊನ್ನೂರು ಸ್ವಾಮಿ ಎಂಬ ಹೆಸರೇ ಸೂಚಿಸುವಂತೆ ಮುಸ್ಲಿಮೇತರ ವರ್ಗಕ್ಕೆ ಅತ್ಯಂತ ಸನ್ನಿಹಿತನಾದವನು. ಅದಲ್ಲದೆ ಇಲ್ಲಿನ ಮತ್ತೊಂದು . ವೈಶಿಷ್ಟ್ಯವೆಂದರೆ ಈ ಭಾಗದ ' ಮೊಹರಂ'ನ ಆಚರಣೆಯ ಕರ್ಬಲಾದ ಧರ್ಮವೀರ 'ಹುಸೇನ' ನ ಹೆಸರಿಗೆ ಪರ್ಯಾಯವಾಗಿ 'ಹೊನ್ನೂರು ಸ್ವಾಮಿ' ಯೆಂದೇ ಕರೆಯುತ್ತಾರೆ . ಮೊಹರಂನ ಮಸೀದಿಗಳಿಗೆ 'ಹೊನ್ನೂರು ಸ್ವಾಮಿ ಗುಡಿ ಎಂದೇ ಕರೆಯುವವಾಡಿಕೆ - ಈ ಭಾಗದಲ್ಲಿದೆ.

[illegible]

[illegible]

ಇಂತಹುದೇ ನಿದರ್ಶನವು ಕೋಲಾರ, ಚಿತ್ತೂರು, ಅನಂತಪುರಜಿಲ್ಲೆಗಳ ಗಡಿಭಾಗದಲ್ಲೂ ಕಂಡು ಬರುತ್ತದೆ. ಅಲ್ಲಿ 'ಪೆನುಗೊಂಡೆ' ಯ ಬಾಬಾ ಪಕ್ರುದ್ದೀನ್ ರ ಹೆಸರಿನಿಂದಲೇ 'ಮೊಹರಂ' ಆಚರಣೆನ್ನು 'ಬಾಬೋಳ್ಳ ಪಂಡುಗ' (ಬಾಬಾ ಅವರ ಹಬ್ಬ) ಎಂದು ಕರೆಯಲಾಗುತ್ತದೆ. ಇದಲ್ಲದೆ ೧೮ನೇ ಶತಮಾನದ ಪಿಂಜಾರ ಜನಾಂಗದ 'ಸಾಯಿಬಣ್ಣತಾತ' ಎನ್ನುವವರ ಉರುಸನ್ನೂ ಇಲ್ಲಿ ಗಮನಿಸಲಾಗುವುದು. ಮತಾಂತರೀಕರಣ ಪ್ರಕ್ರಿಯೆಯಲ್ಲಿ ಕಾರಣಾಂತರಗಳಿಂದ ಮಧ್ಯದ ಸ್ಥಿತಿ ತಲುಪಿದ , ಎರಡೂ ಧರ್ಮದ ಧಾರ್ಮಿಕಾವಾರಣೆಗಳನ್ನು ಮೈಗೂಡಿಸಿಕೊಂಡು ಧಾರ್ಮಿಕ ಅಭದ್ರತೆಯ ಭಾವದಿಂದ, ಒಂದು ವಿಧದ ಕೀಳಿರಿಮೆಗೆ ಸಿಲಿಕಿದ ವರ್ಗವಿದು. ನಮ್ಮ ಸಾಂಸ್ಕೃತಿಕ ಸ್ಥಿತ್ಯಂತರದ ಕಾಲದಲ್ಲಿ ಏರ್ಪಡ-ಬಹುದಾದ ಗೊಂದಲಗಳಿಗೆ, ಆತಂಕಗಳಿಗೆ ಈ ವರ್ಗ ಸ್ಪಷ್ಟ- ಉದಾಹರಣೆಯಾಗಿದೆ. ಇಂತಹ ಜನಾಂಗದ ಹಿನ್ನಲೆಯೇ ಸಾಯಿಬಣ್ಣ ತಾತನಂತವರ ಸಂತ ವ್ಯಕ್ತಿತ್ವವು ಸಿದ್ಧಲಿಂಗಸ್ವಾಮಿಗಳ ಶಿಷ್ಯತ್ವದಲ್ಲಿ ಜಾತಿ ಧರ್ಮಗಳ ಎಲ್ಲೆಯನ್ನು ದಾಟಿ ಮಾವೀಯ ನೆಲೆಯಲ್ಲಿ ಅಭಿವ್ಯಕ್ತಿಗೊಳ್ಳಲು ಸಾಧ್ಯವಾಯಿತು.

ಈ ಮೇಲೆ ಸೂಚಿಸಿದ ಉರೂಸ್ ಗಳ ಅಂತರ್ ರಚನೆಯು ಬಿಟ್ಟು ಕೊಡುವ ಸಾಂಸ್ಕೃತಿ- ಸತ್ಯಗಳೇನು? ಅವುಗಳ ಆಚರಣಾತ್ಮಕ ವಿವರಗಳು ಏನನ್ನು ಧ್ವನಿಸುತ್ತವೆ? ಸಾಂಸ್ಥಿಕ -ಧರ್ಮವೊಂದರ ಕ್ರಿಯೆ, ಅದರ ಧಾರ್ಮಿಕ ಸಾಂಪ್ರದಾಯಿಕತೆಯು ಇಲ್ಲಿ ಗೌಣವಾದುದರ ಹಿನ್ನಲೆ ಮತ್ತದರ ಪರಿಮಿತಿ ಏನು? ಸಾಂಸ್ಕೃತಿಕ- ವಿಕಾಸಗತಿಯಲ್ಲಿ ಪ್ರಸ್ತುತ ಆಚರಣೆಗಳಿಗೂ ಮತ್ತು ಪರಂಪರೆಗೂ ನಡುವಿನ ಕೊಂಡಿಗಳೇನಾದರೂ ಕಳಚಿವೆಯೇ? ಅಥವಾ ಅದರ ಅರ್ಥ ಪೂರ್ಣ ವಿವರಗಳು ವಿಸ್ಮೃತಿಗೆ ಸಂದು ಕೇವಲ ಅಲ್ಪಸ್ವಲ್ಪ ಉಳಿಕೆಗಳು ನಾಮರೂಪದ ಆಚರಣೆಯಲ್ಲಿ ಮಾತ್ರ ಉಳಿದುಕೊಂಡಿವೆಯೇ ? ಮುಂತಾದ ಪ್ರಶ್ನೆಗಳಿಗೆ ಈ ಅಧ್ಯಾಯದಲ್ಲಿ ಉತ್ತರ ಕಂಡು ಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಸಾಮಾನ್ಯವಾಗಿ ಉರೂಸ್ ' ನ ಮುಖ್ಯಕ್ರಿಯೆಗಳು ಎಲ್ಲೆಡೆಗೂ ಒಂದೇ ತೆರನಾದವುಗಳಾಗಿವೆ. ಉರೂಸ್ ನ ಮೊದಲ ದಿನ ರಾತ್ರಿ ಮೆರವಣಿಗೆಯಲ್ಲಿ ' ಗಂಧ' ವನ್ನು ದರ್ಗಾಕ್ಕೆ ತಂದು ಸಂತನ ಮಜಾರ್ ಗೆ ಅಭಿಷೇಕ ಮಾಡುವ ಕಾರ್ಯ ಕ್ರಮವಿರುತ್ತದೆ. ಎರಡನೆಯ ದಿನವನ್ನು 'ಉರೂಸ್ ' ಎಂದು

[illegible]

[illegible]

[illegible]

ಕರೆಯಲಾಗುತ್ತದೆ. ಸಾಮಾನ್ಯವಾಗಿ ಗಂಧ ತರುವ ಕ್ರಿಯೆಯು ಉರೂರ್ಸನ ಆರಂಭದ ದಿನದ ರಾತ್ರಿ ಇರುತ್ತಾದ್ದರಿಂದ ದೂರದಿಂದ ಬಂದ ಭಕ್ತಾದಿಗಳು ರಾತ್ರಿಯೇ ದರ್ಗಾರುವ ಸ್ಥಳಗಳಿಗೆ ಬಂದು ಸೇರಿರುತ್ತಾರೆ. ಗಂಧವಾದ ಮರುದಿನವನ್ನೇ ' ಉರೂಸ್ ' ಎಂಉ ಕರಯುತ್ತಿದ್ದು ಸಂತನ ಮರಣದ ದಿನವಾಗಿದೆ. ಮುಸ್ಲಿಂ ಮತ್ತು ಮುಸ್ಲಿಮೇತರರಿಬ್ಬರಲ್ಲೂ ಈ ದಿನವು ' ರಥೋತ್ಸವ' (ತೇರು, ಜಾತ್ರೆ)ದ ದಿನದಷ್ಟೆ ಸಂಭ್ರಮದ ದಿನವಾಗಿರುತ್ತದೆ. ತಾವು ಹರಕೆ, ಹೊತ್ತಂತೆ, ಬಲಿಕೊಡುವುದಾಗಿ ಬೇಡಿಕೊಂಡು ದರ್ಗಾದ ಸಂತನಿಗೆ ಬಿಟ್ಟ ಮೇಕೆ, ಹೋತು ಗಳನ್ನು ಬಲಿಕೊಟ್ಟು 'ಕಂದೂರಿ' ಎಡೆ ಮಾಡಿ ಅರ್ಪಿಸಲಾಗುತ್ತದೆ. ಮೂರನೆಯ ದಿನವನ್ನು 'ಜಿಯಾರತ್' ಎಂದು[೬] ಕರೆಯಲಾಗುತ್ತದೆ. ವಿಶೇಷವಾಗಿ ದರ್ಗಾಕ್ಕೆ ಸಂಬಂಧಿಸಿದ ಆಚಳಿತವರ್ಗ, ಮುಜಾವರರು ಫಕೀರರು ಮೊದಲಾದವರೆಲ್ಲ ಸಂತನ ಸಮಾಧಿಗೆ 'ವಿಶೇಷ 'ಪ್ರಾರ್ಥನೆಸಲ್ಲಿಸುವ ಕಾರ್ಯಕ್ರಮವಿದಾಗಿದೆ. ಇವಿಷ್ಟು ಸಾಮಾನ್ಯವಾಗಿ ಇಂಡುಯಾದ ಎಲ್ಲೆಡೆಗೂ ನಡೆಯುವ ಉರುಸಿನ ಮುಖ್ಯ ಕ್ರಿಯೆಗಳಾಗಿದ್ದು ಅವುಗಳ ಹೊರರೂಪ ಮಾತ್ರ ಅಲ್ಲಲ್ಲಿ ಬದಲಾವಣೆಗೊಂಡಿರಬಹುದು. ಉದಾಹರಣೆಗೆ ತಮಿಳುನಾಡಿನ ನಾಗೂರಿನ ಶಾಹಯಲ್ ಅಮೀದ್ ದರ್ಗಾದ 'ಉರುಸ್ ' ನ ಧಾರ್ಮಿಕ ವಿಧಿಗಳು ಸ್ಪಷ್ಟವಾಗಿ ರಥೋತ್ಸವದ ಅನುಕರಣೆಯಾಗಿದೆ. ಉರುಸಿನ ಮೊದಲ ದಿನ ತೇಯ್ದ ಶ್ರೀಗಂಧವನ್ನು ಹರಿವಾಣದಲ್ಲಿ ಅಥವಾ ಕೊಡದಲ್ಲಿ ಅಲಂಕರಿಸಿದ ರಥದಲ್ಲಿಟ್ಟು ಕೊಂಡು ನಾಗೂರಿನ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ದರ್ಗಾಕ್ಕೆ ತರಲಾಗುತದೆ. ಈ ದರ್ಗಾದ ಪ್ರಕಟಣೆಗಳು ಸಹ ಈ ವಾಹನಗಳನ್ನು ' ತೇರು' ಎಂಬ ಹೆಸರಿನಲ್ಲಿಯೇ ಪ್ರಕಟಿಸುತ್ತವೆ.[೭]

೩.೧೨ ಅಷ್ಟೂರಿನ ಅಹಮದ್ ಶಹಾ ವಲಿ ಬಹಮನಿಯ ಉರುಸು : ಕೆಲವು ಸಾಂಸ್ಕೃತಿಕ ವೈಶಿಷ್ಟ್ಯತೆಗಳು

ಪ್ರಸ್ತುತ ಅಧ್ಯಯನಕ್ಕಾಗಿ ಆರಿಸಿಕೊಂಡ ಉರುಸುಗಳನ್ನು ಕ್ರಮಶಃ ವಿವರಿಸುತ್ತಾ ಹೋದರೆ ಮತ್ತೆ ಮತ್ತೆ ಅವೇ ವಿವರಗಳು ಪುನಾರವರ್ತನೆಯಾಗುವುದರಿಂದ ಇವುಗಳಲ್ಲಿ ತುಂಬಾ ಭಿನ್ನವಾದ, ವಿಶಿಷ್ಟವಾದ ಬೀದರ್ ನ 'ಅಷ್ಟೂರಿ' ನ 'ಅಹಮದ್ ಶಹಾವಲಿ' ಯವರ ಉರುಸನ್ನು ಪ್ರಾತಿನಿಧಿಕವಾಗಿಟ್ಟುಕೊಂಡು ಉರೂಸ್ ನ ಸಾಂಸ್ಕೃತಿಕ ವೈಶಿಷ್ಟ್ಯಗಳ ಬಗೆಗೆ ಪ್ರಸ್ತಾಪಿಸಲಾಗುವುದು. (ಉಳಿದಂತೆ ಇತರ ಉರುಸುಗಳ

[illegible]

[illegible]

ಬಗೆಗೆ ಲಿಖಿತ ವಿವರಗಳನ್ನು ನೀಡದೆ ಛಾಯ ಚಿತ್ರಗಳನ್ನು ಕೊಡಲಾಗುವುದು.)

ಅಹಮದ್ ಶಹಾಬಹುಮನಿ (೧೪೨೨-೧೪೩೬) ಯು ಸ್ವತಃ ಬಂದೇ ನವಾಜ್ ಗೇಸುದರಾಜ್ ರಿಂದ 'ಸೂಫಿ' ಎಂದೂ ಇನ್ನೊಬ್ಬ ಸಂತ ನೈಮುತ್ತುಲ್ ಕಿರ್ ಮಾನಿಯವರಿಂದ 'ವಲಿ' ಯೆಂದು ಗುರುತಿಸಲ್ಪಟ್ಟಿದ್ದ. ಅಣ್ಣಫಿರೋಜ್ ಶಾನ ಕಾಲದಲ್ಲಿಯೇ ಆಡಳಿತ ಮತ್ತು ಧಾರ್ಮಿಕ ಕ್ಷೇತ್ರಗಳೆರಡರಲ್ಲೂ ವಿಶಿಷ್ಟ ಅನುಭವಗಳಿಸಿದ್ದ. ಅಹಮದ್ ಶಹಾವಲಿಯು ಖ್ವಾದರಿಯಾ ಪಂಥದಲ್ಲಿನ ದರವೇಶಿಗಳದ್ದೇ ಆದ 'ಮಶ್ಹಾಯಿಕ್ ' ಉಪಪಂಗಡದೊಡನೆ ವಿಶೇಷ ಸಂಬಂಧವಿರಿಸಿಕೊಂಡಿದ್ದನು. ಈ ಮಶ್ಹಾಯಿಕರು ತಮ್ಮ ಪಾಂಡಿತ್ಯ ಜ್ಞಾನದಿಂದಾಗಿ ಆಧ್ಯಾತ್ಮಿಕತೆಯ ಕುರಿತಂತೆ ವಿಶಿಷ್ಟ ಒಳನೋಟಗಳನ್ನು ಪಡೆದವರಾಗಿದ್ದರು. ಅಹಮದ್ ಶಹಾವಲಿಯು ರಾಜನಾಗಿ ಅಧಿಕಾರ ವಹಿಸಿದೊಡನೆ ಪರ್ಶಿಯಾದಿಂದ ಹೊಸ ಸೂಫಿಗಳನ್ನು ತನ್ನ ರಾಜ್ಯಕ್ಕೆ ಬರಮಾಡಿಕೊಂಡನು . ಹೀಗೆ ಬಂದ ಸೂಫಿಗಳೊಂದಿಗೆ ರಾಜನ ವೈವಾಹಿಕ ಸಂಬಂಧವಿದ್ದುದು ಮತ್ತವರು ಬೀದರನಲ್ಲಿಯೇ ನೆಲೆ ನಿಂತುದು ಇಲ್ಲಿನ ಕಲೆ, ಸಂಸ್ಕೃತಿಗಳ ಮೇಲೆ ಪರ್ಶಿಯಾದ ವಿಶಿಷ್ಟ ಪ್ರಭಾವ ಬೀರಲು ಸಹಾಯಕವಾಯಿತು. ಅಹಮದ್ ಶಹಾವಲಿಯ ಸಂತವ್ಯಕ್ತಿತ್ವವು ಅವನ ಜೀವನದ ವಿವರಗಳಲ್ಲೂ ಸ್ಪಷ್ಟವಾಗಿ ಗೋಚರಿಸುತ್ತದೆ. ಗುಲುಬರ್ಗಾದಿಂದ ಬೀದರ್ ಗೆ ತನ್ನ ರಾಜಧಾನಿಯನ್ನು ಬದಲಾಯಿಸುವಲ್ಲಿ ಸಹ ' ಸೂಫಿ' ಕೇಂದ್ರವೊಂದರ ವಿವಾದವು ಮುಖ್ಯ ಪ್ರೇರಕವಾಗಿ ಕೆಲಸ ನಿರ್ವಹಿಸಿದೆ. ಬಂದಾನವಾಜ್ ಗೇಸುದರಾಜ್ ರೊಂದಿಗೆ ಅತ್ಯುತ್ತಮ ಸಂಬಂಧ ವಿರಿಸಿಕೊಂಡಿದ್ದ ಅಹಮದ್ ಶಹಾನು ಅವರ ಮರಣಾನಂತರ ಉದ್ಭವಿಸಿದ ಉಪದೇಶ ಮಂದಿರದ (ಕಾನ್ ಶಾ) ಮುಂದಿನ ಧರ್ಮಿಕಾಧಿಕಾರದ (ಖಲೀಫಪದವಿ) ವಿವಾದದಿಂದ ಬೇಸತ್ತಿದ್ದು ಸಹ ಬೀದರ್ ಗೆ ರಾಜಧಾನಿಯನ್ನು ವರ್ಗಾಯಿಸಲು ಪ್ರಚೋದಕವಾಯಿತು.[೮]

ಅಹಮ್ಮದ್ ಶಹಾವಲಿಯ ಸಂತ ವ್ಯಕ್ತಿತ್ವಕ್ಕೆ ಸಹಾಯಕವಾದ ಕಾರಣಗಳು, ಆಗಿನ ಪರಿಸರವನ್ನು ಸೂಚಿಸಲಷ್ಟೆ ಈ ವಿವರಗಳನ್ನು ಪರಶೀಲಿಸಲಾಯಿತು. ಅಹಮದ್ ಶಹಾವಲಿಯ ವಿದೇಶಾಂಗನೀತಿಯಿಂದಾಗಿ ಆತನ ಆಸ್ಥಾನದಲ್ಲಿ ತಶೀಯಾ ಮೂಲದ ಆಡಳಿತಾಧಿಕಾರಿಗಳೆ ತುಂಬಿಹೋದುದರಿಂದ ಪರ್ಶಿಯನ್ ಭಾಷೇ

ಆರಂಭದಲ್ಲಿ ರಾಜ್ಯಪೀಠದೊರಕಿದರೂ ಕ್ರಮೇಣ ಅದರ ಸ್ಥಾನವನ್ನು 'ದಖನಿ' ಭಾಷೆ ಆಕ್ರಮಿಸಿಕೊಳ್ಳತೊಡಗಿತು. ಆಡಳಿತ ಮೊದಲಾಗಿ ಜೀವನ ವಿಧಾನವು ದೇಶೀಯ ಸೆಲೆಗಳತ್ತಲೇ ವಾಲುತ್ತಿತ್ತೆಂಬುದಕ್ಕೆ ಇದನ್ನು ನಿದರ್ಶನವಾಗಿ ಸೂಚಿಸಬಹುದು.

ಸುಲ್ತಾನರ ಕಾಲಕ್ಕಾಗಲೇ ಮುಸ್ಲಿಂ ಸಮುದಾಯದಲ್ಲಿ ವಿದೇಶಿ ಮತ್ತು ದೇಶೀಯ ವರ್ಗಗಳೆಂದು ಎರಡು ಪಂಗಡಗಳಾಗಿ ಆಡಳಿತದ ಮೇಲೆ ಪ್ರಭಾವ ಬೀರತೊಡಗಿದ್ದವು.[6] ಈ ಎರಡು ವರ್ಗಗಳೊಂದಿಗೆ ವಿಶಾಲವಾದ ಮುಸ್ಲಿಮೇತರ ವರ್ಗವೊಂದರ ಅಸ್ತಿತ್ವ ಇದ್ದೇ ಇತ್ತು. ಇವುಗಳೊಳಗಿನ ಪರಸ್ಪರ ಸಮನ್ವಯ, ಅಸಹನೆ, ತಿರಸ್ಕಾರಗೊಳೊಂದಿಗೆ ನಡೆದ ಅಂತರ್ ಮಥನವು ವಿಶಿಷ್ಟ ಸಾಂಸ್ಕೃತಿಕ ಆವರಣವನ್ನು ನಿರ್ಮಿಸಲು ಸಹಾಯಕವಾದವು. ಕೇವಲ ಆತ್ಮರಕ್ಷಣೆ ಗೋಸ್ಕರ ಧಾರ್ಮಿಕ ಚೌಕಟ್ಟಿಗೆ ಬದ್ಧರಾಗಿದ್ದೇವೆಂದು ತೋರಿಸಿಕೊಳ್ಳುತ್ತಲೇ ಧಾರ್ಮಿಕಮೂಲಭೂತತೆಯನ್ನು ವಿರೋಧಿಸಿದ ಸೂಫಿಗಳು ತಮ್ಮ ಕಾಲದ ಅರ್ಥಪೂರ್ಣ ಸಾಂಸ್ಕೃತಿಕ ಸಂಘರ್ಷದ ಶಕೆಯನ್ನು ಆರಂಭಿಸಿದ್ದರು. ಸೂಫಿಗಳ ವಿಕಾಸಗತಿಯನ್ನು ಗಮನಿಸುವುದಾದರೆ ಒಂದಲ್ಲ ಒಂದೆಡೆ ಧರ್ಮಪಂಡಿತರುಗಳ, ಉಲೇಮಾಗಳೊಂದಿಗೆ ವೈಚಾರಿಕ ಘರ್ಷಣೆಗಳಿದಿರುವುದು ಕಂಡು ಬರುತ್ತದೆ. ಧಾರ್ಮಿಕತೆಯು ಅಂದರೆ ಮತಸಂಬಂಧಿತ ಕಟ್ಟುಪಾಡುಗಳು ಗೌಣವಾಗಿ, ಜ್ಞಾನದ (ಅರಿವಿನ) ಹಸಿವು ಮತ್ತು ಹುಡುಕಾಟ ಮುಖ್ಯವಾಗಿ ಸ್ವಚ್ಛಂಧ, ಮುಕ್ತ ಪರಿಸರಕ್ಕಾಗಿ ಪ್ರಯತ್ನಗಳು ನಡೆದವು. ಈ ಪ್ರಯತ್ನದ ಯಶಸ್ಸಿನಲ್ಲಿಯೇ ಗೆಲುವು ಮತ್ತು ಸಾರ್ಥಕತೆಯನ್ನು ಕಂಡು ಕೊಂಡಸೂಫಿಗಳು ಹಾಗು ಅದೇ ಬಗೆಯ ವ್ಯಕ್ತಿತ್ವವುಳ್ಳವರು ಎಲ್ಲಾ ಕಾಲಕ್ಕೂ ಸಲ್ಲುವ ಮೌಲ್ಯಗಳ ಅಭಿವ್ಯಕ್ತಿಯ ಪ್ರತಿನಿಧಿಗಳಾದರು.

ಪ್ರಸ್ತುತ ಅಹಮದ್ ಶಹಾವಲಿಯ ಊರೂಸ್ ಆಚರಣೆಯ ಮೂಲಕ ಮೂಲದ ಮತ್ತು ವರ್ತಮಾನದ ಸಾಂಸ್ಕೃತಿಕ ಆಶಯಗಳನ್ನು ಅರ್ಥೈಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ೬೦೦ ವರ್ಷಗಳ ಹಿಂದಿನ ಸಾಂಸ್ಕೃತಿಕ ಪ್ರಕ್ರಿಯೆ ಮತ್ತು ಸಂದರ್ಭದ ಫಲವಾದ ಈ 'ಊರೂಸ್ ' ಆಚರಣೆಯು ಅರವತ್ತು ತಲೆಮಾರುಗಳ ನಂತರವೂ ಅವೇ ಆಶಯಗಳನ್ನು ಉಳಿಸಿಕೊಂಡಿದೆಯೇ? ಅಥವಾ ಈಗ ಉಳಿದಿರುವುದು

[illegible]

[illegible]

[illegible]

ಅಂದಿನ ಸಾಂಸ್ಕೃತಿಕ ಉಳಿಕೆಗಳು ಮಾತ್ರವೇ? ಎಂಬುದನ್ನು ಮೌಖಿಕ ವಿವರಗಳ ಮತ್ತು ಜನಾಂಗೀಯ ಅನುಭವಗಳ ಸ್ಮೃತಿ ಕೋಶಗಳ ಸಹಾಯದಿಂದ ಸ್ಫುಟಗೊಳ್ಳುವ ಸಂಗತಿಗಳನ್ನು ಕ್ರಮ ಬದ್ಧತೆಯಲ್ಲಿಡುವ, ಅರ್ಥೈಸುವ ಮತ್ತು ವ್ಯಾಖ್ಯಾನಿಸುವ ಮೂಲಕ ಚರಿತ್ರೆ ಹಲವೊಮ್ಮೆ ಕಟ್ಟಿಕೊಡಲಾರದ ವಾಸ್ತವಾಂಶಗಳನ್ನು ಕಂಡು ಕೊಳ್ಳಬಹುದಾಗಿದೆ. ಇಂತಹ ಪ್ರಯತ್ನದೊಂದಿಗೆ ಇಲ್ಲಿಯವರೆಗೆ ದಾಖಲಿತ ಚರಿತ್ರೆಯಲ್ಲಿನ ಅಂಶಗಳೊಂದಿಗೆ ತುಲನೆ ಮಾಡುವ ಕ್ರಮವನ್ನೂ ಅನುಸರಿಸಲಾಗುವುದು.

ಉರುಸಿಗೆ ಸಂಬಂಧಿಸಿದ ಆಚರಣಾತ್ಮಕ ವಿವರಗಳಿಗೆ ಹೋಗುವುದಕ್ಕೆ ಮುಂಚೆ ಅದರ ಒಟ್ಟು ಸ್ವರೂಪವನ್ನು ಗಮನಿಸಬಹುದು. ಮೊದಲಿಗೆ ಇದು ಒಬ್ಬ ಮುಸ್ಲಿಂ ಸುಲ್ತಾನ ಮತ್ತು ಸೂಫಿಸಂತನೂ ಆಗಿರುವ ಅಹಮದ್ ಶಹಾವಲಿಯ 'ಊರೂಸ್ ' ಎಂಬುದನ್ನು ಗಮನಿಸಬೇಕು. ಲಿಂಗಾಯಿತ ಜಂಗಮರ ನೇತೃತ್ವವಿಲ್ಲದೆಯೇ ಈ ಉರೂಸ್ ನಡೆಯುವುದಿಲ್ಲ. ಮುಸ್ಲಿಂ ಮುಜಾವರರುಗಳಿದ್ದಾಗ್ಯೂ ಅವರೂ ಸಹ ಸ್ವಾಮಿಗಳ ನೇತೃತ್ವದ ಆಚರಣಾ ವಿಧಿಗಳಲ್ಲಿ ಸಹಾಯಕರಾಗಿರುತ್ತಾರೆ ಅಷ್ಟೇ. ಪ್ರತಿವರ್ಷ ಹೋಳಿ ಹುಣ್ಣಿಮೆಯಾದ ಮೂರನೆಯದಿನ ಗುಲುಬರ್ಗಾ ಜಿಲ್ಲೆಯ ಆಳಂದ ತಾಲೂಕಿನ 'ಮಾಡ್ಯಾಳ' ಗ್ರಾಮದಿಂದ ಲಿಂಗಾಯಿತ ಪುರೋಹಿತರು ಕಾಲ್ನಡಿಗೆಯಿಂದ ಬೀದರ್ ನ ಸಮೀಪದ 'ಅಷ್ಟೂರ'ಗೆ ಬಂದು ಉರೂಸ್ ನ ನೇತೃತ್ವ ಸಹಿಸಿ ನಡೆಸಿಕೊಡಬೇಕು. ಇವಿಷ್ಟು ಇದಕ್ಕೆ ಸಂಬಂಧಿಸಿದ ಮೇಲು ನೋಟದ ವಿವರಗಳಾಗಿವೆ.

ಸ್ಥಳೀಯವಾಗಿ ಅಹಮ್ಮದ್ ಶಹಾವಲಿಯುವರ ಗೋರಿಯಿರುವ ಅಷ್ಟೂರಿನಲ್ಲಿ ಮುಸ್ಲಿಮರನ್ನೊರೆತು ಪಡಿಸಿ ಉಳಿದವರೆಲ್ಲ ಈ ಗೋರಿ ಮತ್ತು ಗೋರಿಯ ಕಟ್ಟಡವನ್ನು 'ಅಲ್ಲಮಪ್ರಭುಗಳ' ದೇವಸ್ಥಾನವೆಂಬುದಾಗಿ ಕರೆಯುತ್ತಾರೆ.ಇತರ ಮೇಲ್ವಿಚಾರಣೆಗಾಗಿ ಮುಸ್ಲಿಂ ಕುಟುಂಬದ ಮುಜಾವರ್ ಗಳಿದ್ದರೆ. ಲಿಂಗಾಯಿತರಲ್ಲಿ ಕವಡೆ- ಪೂಜಾರಿಗಳಿದ್ದಾರೆ. ಇವರಿಬ್ಬರಿಗೂ ಅಧಿಕೃತವಾಗಿ ಬಹುಮನಿ ಸುಲ್ತಾನರಿಂದಲೇ ಈ ಸೇವೆಗಾಗಿ ಜಮೀನಿನ ದತ್ತಿಯಿದೆ. ಇದಕ್ಕೆ 'ಪರ್ ಮಾನ್' ಗಳೂಸಹ ಇವೆ. ಇಷ್ಟಲ್ಲದೆ ಮುಖ್ಯವಾಗಿ ಉರುಸಿನ ನೇತೃತ್ವ ವಹಿಸುವ ಮಾಡ್ಯಾಳದ ಲಿಂಗಾಯಿತ ಪುರೋಹಿತರಿಗೆ ೩೦೦ ಎಕರೆಯ ಜಮೀನಿನ ದತ್ತಿಯಿದೆ. ಇದೂ ಸಹ ಬಹುಮನಿ ಸುಲ್ತಾನರಿಂದಲೇ ನೀಡಲ್ಪಟ್ಟ ದತ್ತಿಯಾಗಿದೆ.

[illegible]

ಹೋಳಿ ಹುಣ್ಣಿಮೆಯಾದ ಮೂರನೆಯ ದಿನ ಕಾಲ್ನಡಿಗೆಯಿಂದ ಮಡ್ಯಾಳ ಗ್ರಾಮದಿಂದ ಹೊರಟ ಗುಂಪು'ಅಷ್ಠೂರ'ನ್ನು ತಲುಪಲು ಐದು ದಿನಗಳ ಕಾಲ ತೆಗೆದು ಕೊಳ್ಳುತ್ತದೆ. ರಾತ್ರಿಯ ವೇಳೆಯಲ್ಲಿ ಉಳಿದು ಕೊಳ್ಳಲು ನಿರ್ಧಿಷ್ಟ ಪಡೆಸಿದ ಕೆಲವು ಕಾರಣಗಳಿವೆ. ಸಾಮಾನ್ಯವಾಗಿ ಅಲ್ಲಿ ಊಟದ ವ್ಯವಸ್ಥೆಯನ್ನು ವರ್ಷ ಪ್ರತಿ ನಡೆಸುವವರೇ ವಹಿಸಿ ಕೊಂಡಿರುತ್ತಾರೆ. ಇಲ್ಲವೆಂದರೆ ಆಸಕ್ತಿ ಮತ್ತು ಭಕ್ತಿಯಿರುವ ಯಾರಾದರೂ ಈ ಹೊಣೆ ಹೊರಬಹುದು. ಆದರೆ ಮಾಡ್ಯಾಳದಿಂದ ಬರುವ ಪೌರೋಹಿತ್ಯದ ಗುಂಪು ಮಾತ್ರ ತನ್ನ ಊಟದ ವ್ಯವಸ್ಥೆಗೆ ಬೇಕಾದಷ್ಟು ಸರಂಜಾಮುಗಳನ್ನು ಕಂಟ್ಲೆಗಳ ಮೇಲೆ ಹೇರಿಹೊಂಡು ಪೂರ್ತಿ ಸ್ವಾಲಂಬನೆಯಿಂದ ಯಾತ್ರೆ ಕೈಕೊಂಡಿರುತ್ತದೆ. ಮಧ್ಯ ದಾರಿಯಲ್ಲಿ ಯಾರದರೂ ದಾಸೋಹದ ವ್ಯವಸ್ಥೆ ಮಾಡಿಯಾರೆಂದು ಅದು ನಿರೀಕ್ಷಿಸಿಯೇನೂ ಇರುವುದಿಲ್ಲ. ಅಂತಹ ವ್ಯವಸ್ಥೆ ಕಂಡು ಬರದಿದ್ದಲ್ಲಿ ತನ್ನ ಆಹಾರದ ವ್ಯವಸ್ಥೆಯನ್ನು ತಾನೇಸಿದ್ದ ಮಾಡಿಕೊಳ್ಳುತ್ತದೆ. ಬಹುಶಃ ಇದೇ ಕಾರಣಕ್ಕಾಗಿ ಪುರೋಹಿತರಿಗೆ ದೊಡ್ಡಮೊತ್ತದ ಜಹಗೀರು ನೀಡಿರುವಂತಿದೆ. ಆ ಗುಂಪಿನ ಪೂರ್ತಿ ವೆಚ್ಚಗಳನ್ನು ಮಾಡ್ಯಾಳದ ಸ್ವಾಮಿಗಳೇ ಭರಿಸುತ್ತಾರೆ. ದೀವಟಿಗೆ ಹಿಡಿಯುವವರು, ಚಾಮರ ಬೀಸುವವರು, ನಗಾರಿ ಹೊಡೆಯುವವರು, ನಂದಿ ಕೋಲು ಧ್ವಜವನ್ನು (ಸುಮಾರು೨೫ ಅಡಿಗಳ ಭಾರೀ ಗಾತ್ರದ ಧ್ವಜ) ಹೊರುವವರು ಇವರೆಲ್ಲ ೬೦೦ ವರ್ಷಗಳ ಕಾಲದಿಂದಲೂ ಒಂದೇ ಗ್ರಾಮದ ನಿರ್ದಿಷ್ಟ ಕುಟುಂಬಗಳ ಸದಸ್ಯರು ವಂಶಪಾರಂಪರ್ಯವಾಗಿ ಈ ಉತ್ಸವದಲ್ಲಿ ಸೇವೆ ಸಲ್ಲಿಸುವವರಾಗಿದ್ದಾರೆ.

ಉರುಸಿನ ನೇತೃತ್ವ ವಹಿಸುವ ಸ್ವಾಮಿಯು ಅಡಿಯಿಂದ ಮುಡಿಯವರೆಗೆ ಸಂಪೂರ್ಣ 'ಸೂಫಿ' ಸಂತನ ವಸ್ತ್ರಗಳನ್ನೇ ಧರಿಸಿರುತ್ತಾನೆ. ೬೦೦ ವರ್ಷಗಳ ಸುಧೀರ್ಘ ಕಾಲಾವಧಿಯಲ್ಲಿ ಬಹುಶಃ ಈ ವಸ್ತ್ರಗಳ ಕುಸುರಿ ಕೆಲಸದ ಅಲಂಕಾರಗಳು, ಸಣ್ಣಪುಟ್ಟ ಮಾರ್ಪಾಡುಗಳು ಕಣ್ಮರೆಯಾಗಿರಬಹುದೆ ಹೊರೆತು ಉಳಿದಂತೆ ಯಥಾವಿಧಿ ಸೂಫಿಗಳ ವಸ್ತ್ರಗಳೇ ಆಗಿವೆ. ಆದರೆ ಈ ವಸ್ತ್ರಗಳ ಬಣ್ಣ ಹಸಿರು ಅಥವಾ ಬಿಳುಪಾಗಿರದೆ ಖಾವಿ ಬಣ್ಣದ್ದಾಗಿವೆ. ಕೈಯಲ್ಲಿ ಚಿಮಟಿಗೆ, ಬೆಳ್ಳಿಯ ದಂಡ- ಹಿಡಿದು ಕುದುರೆಯ ಮೇಲೆ ಹತ್ತಿ ಬರುವ ಸ್ವಾಮಿಗೆ ಆಚರಣೆಗಳ ಸಂದರ್ಭದಲ್ಲಿ ಉಳಿದವರೆಲ್ಲ ಸಹಾಯಕರಾಗಿರುತ್ತಾರೆ. ಮಾಡ್ಯಾಳದಿಂದ ಯಾತ್ರೆ



ಸೂಫಿ 'ದರವೇಶಿ' ವೇಷದ ಮಾಡ್ಯಾಳದ 'ಲಿಂಗಾಯತ' ಸ್ವಾಮಿಗಳು



ಅಹಮದ್ ಶಹಾನ ಗೋರಿಯ ಎದುರುಗಡೆ ಬಯಲಲ್ಲಿ ಪೂಜೆ ಸಲ್ಲಿಸುತ್ತಿರುವುದು

ಹೊರಟ ಗುಂಪು ಅಷ್ಠೂರಿನ ಅಹಮದ್ ಶಹಾವಲಿಯ ಗೋರಿಯ ಎದುರಿಗೆ ಎರಡು ಮೂರು ಕಿಲೋಮೀಟರು ದೂರದ ನರಸಿಂಹ ಝುರಣಾ ಬೆಟ್ಟದ ಮೇಲೆ ನಿಂತು ನಂದಿಯ ಧ್ವಜವನ್ನು ಕೆಳಗಿಳಿಸಿ ಅಲ್ಲಿನ ಪಾದಗಟ್ಟೆಗಳಿಗೆ ಪೂಜೆಸಲ್ಲಿಸಿ ಬೆಟ್ಟದ ಕೆಳಗಿಳಿದು ಅಹಮ್ಮದ್ ಶಹಾನ ಗೋರಿಯ ಕಡೆಗೆ ನಡೆಯುತ್ತಾರೆ. ಗೋರಿಯ ಎದುರುಗಡೆಯ ಹೊಲಗಳ ಬಯಲಲ್ಲಿ ಡೇರೆ ಹೂಡಿ ಜಾತ್ರೆ ಮುಗಿಯುವವರೆಗೆ ಒಟ್ಟು ಐದು ದಿನಗಳ ಕಾಲ ಅಲ್ಲಿಯೇ ವಾಸ್ತವ್ಯ ಹೂಡುತ್ತಾರೆ. ಮಾಡ್ಯಾಳದ ಈ ಸ್ವಾಮಿಗಳ ಆಗಮನ ಮತ್ತು ಪ್ರಥಮ ಪೂಜೆಯ ನಂತರ ಜಾತ್ರೆಗೆ ಅಧಿಕೃತವಾಗಿ ಉದ್ಘಾಟನೆ ನಡೆದಂತಾಗುತ್ತದೆ. ಪ್ರತಿದಿನವೂ ಐದು ಪೂಜೆಯಂತೆ ಇರುವ ಐದು ದಿನಗಳ ಕಾಲವೂ ಪೂಜೆ ನಡೆಯುತ್ತದೆ. ಈ ಉರೂಸ್ ಆಚರಣೆಯಲ್ಲಿ ಕಂಡು ಬರುವಂತೆ ಐದರ ಸಂಖ್ಯೆಯ ಮೇಲಿನ ಒತ್ತು ವಿಶೇಷಾರ್ಥದಿಂದ ಕೂಡಿದುದಾಗಿದೆ. ಮಾಡ್ಯಾಳದಿಂದ ಅಷ್ಠೂರಿಗೆ ಬರಲು ಐದುದಿನಗಳು, ಪ್ರತಿದಿನದಂತೆ ಐದು ಪೂಜೆಗಳು, ಜಾತ್ರೆಯ ದಿನ ಒಟ್ಟು ಐದುದಿನಗಳು, ಮತ್ತು ಅಹಮ್ಮದ್ ಶಹಾವಲಿಯ ಅಷ್ಠೂರಿನ ಮೂಲ ಗೋರಿಯೂ ಸೇರಿದಂತೆ ಗುಲಬರ್ಗಾ ಜಿಲ್ಲೆಯ ಮಾಡ್ಯಳ , ಹೆಬಿಳಿ, ಜೀರೊಳ್ಳಿ ಹುಣಿಚೊಡ್ಡಿಗಳಲ್ಲಿನ ಒಟ್ಟು ಗೋರಿಗಳ ಸಂಖ್ಯೆ ಐದಾಗುತ್ತದೆ. ಇಲ್ಲಿನ ಅತ್ಯಂತ ಮುಖ್ಯವಾದ ಅಂಶವೆಂದರೆ ಅಷ್ಠೂರಿನ ಮೂಲ ಅಹಮದ್ ಶಹಾನ ಗೋರಿಯ ಯಥಾವತ್ತಾದ ಮಾದರಿಯ ಗೋರಿಗಳು ಈ ಸ್ಥಳಗಳಲ್ಲಿವೆ. ಐದೂ ಕಡೆಗೂ ಒಬ್ಬೇ ವ್ಯಕ್ತಿಯ ಐದು ಗೋರಿಗಳಿರುವುದು ವಿಲಕ್ಷಣವಾದ ಸಂಗತಿಯಾಗಿದೆ. ಮುಸ್ಲಿಂ ಮತ್ತು ಮುಸ್ಲಿಮೇತರರಲ್ಲಿ ಅಹಮದ್ ಶಹಾವಲಿಯವರ ಬಗೆಗಿನ ಗೌರವ ಮತ್ತು ಜನಪ್ರಿಯತೆಯನ್ನು ಇದು ಸೂಚಿಸುಸತ್ತದೆ.

ಮಾಡ್ಯಾಳದ ಸ್ವಾಮಿಗಳು ತಮ್ಮ ಪರಿವಾರದೊಂದಿಗೆ ಗೋರಿಯ ಎದುರುಗಡೆ ಡೇರೆ ಹೊಡೆಯುವ ಸ್ಥಳಕ್ಕೆ ಬಂದೊಡನೆ ಅಲ್ಲಿನ ಎರಡು ನೀರಿನ ಕೊಳಗಳಿಗೆ ಮೊದಲು ಪೂಜೆಸಲ್ಲಿಸಲಾಗುತ್ತದೆ. ನಂತರ ನೇರ ಅಹಮ್ಮದ್ ಶಹಾನ ಗೋರಿಯ ಹೊಸ್ತಿಲ ಹತ್ತಿರ ನಡೆದು ಅಲ್ಲಿ ಹೊಸ್ತಿಲಿಗೆ ಪೂಜೆ ಸಲ್ಲಿಸಿದ ನಂತರ ಒಳಗಡಿಯಿಡುತ್ತಾರೆ. ಅಹಮ್ಮದ್ ಶಹಾನಮಜಾರ್ ನ ತಲೆಯ ಭಾಗದ ಮೇಲು ವಸ್ತ್ರವನ್ನು ಓಸರಿಸಿ ಗಂದ ಹಚ್ಚಲಾಗುತ್ತದೆ. ನಂತರ ಅಲ್ಲಿನ ಲಿಂಗಾದಾಕಾರದ ಬಿಡಿ ಬಿಡಿ ಕಲ್ಲುಗಳನ್ನು ತೊಳೆದು ಗಂಧ

ಹಚ್ಚಲಾಗುವುದು. ಸಕ್ಕರೆ ಹೂವುಗಳನ್ನು ನಿವೇದಿಸಿದ ಮೇಲೆ ಮಜಾರ್ ನ ಇನ್ನೊಂದು ಪಕ್ಕ ಕೂತಿರು ಮುಜಾವರ್ ಧೂಪದ ಬಟ್ಟಲು ತಂದು ಸ್ವಾಮಿಗೆ ನೀಡುತ್ತಾನೆ. ಧೂಪ ಹಾಕಿದ ನಂತರ ತೆಂಗಿನ ಕಾಯಿ ಒಡೆಯಲಾಗುತ್ತದೆ. ಇಷ್ಟರವರೆಗೆ ಸಣ್ಣದಾಗಿ ನಗಾರಿ ಹೊಡೆದು ಕೊಳ್ಳುವುದು ಬಿಟ್ಟರೆ ಉಳಿದೆಲ್ಲಾ ನಿಶ್ಯಬ್ದವಾಗಿರುತ್ತದೆ. ಪೂಜೆಮುಗಿಯುತ್ತಿದ್ದಂತೆ 'ಅಲ್ಲಮ ಪ್ರಭೂಕೀ ಜೈ' 'ಅಹಮದ್ ಪಾಷಾಕಿ ದೋಸ್ತಾರುದ್ದೀನ್ ' ಎಂದು ಘೋಷಣೆ ಹಾಕಲಾಗುತ್ತದೆ. ಹಲಗೆಗಳ ಹೊಡೆತ ಮತ್ತು ಜನರ ಜಯಕಾರ ಮುಂದುವರೆಯುತ್ತದೆ. ಇದೇ ರೀತಿಯಾಗಿ ಗೋರಿಯ ಐದೂ ಕಡೆಗೆ ಪೂಜೆ ನಡೆದ ನಂತರ ಅಕ್ಕಪಕ್ಕದ ಅದೇ ಕುಟುಂಬದ ಬೇರೆಬೇರೆ ಗೋರಿಗಳಿಗೂ ಪೂಜೆ ಸಲ್ಲಿಸಲಾಗುತ್ತದೆ. ಪೂಜೆ ನಡೆಯುವಾಗ ಪೂಜೆಗೆ ಮುಖ್ಯ. ಸಹಾಯಕನಾಗಿ ಸ್ಥಳೀಯ ಅಷ್ಟೂರಿನ ಪೂಜಾರಿಯಿರುತ್ತಾನೆ. ಈತನಿಗೆ 'ಕವಡೆಪೂಜಾರಿ' ಎಂದು ಕರೆಯಲಾಗುತ್ತಿದ್ದು ಈ ಸೇವೆಗಾಗಿ ಬಹುಮನಿ ಸುಲ್ತಾನರಿಂದ ದತ್ತಿ ನೀಡಲ್ಪಟ್ಟಿದೆ.

ಮಾಡ್ಯಾಳದ ಸ್ವಾಮಿಗಳು ಗೋರಿಯ ಎದುರಿಗೆ ಒಂದು ಡೇರೆ ಹೊಡೆಯುವುದಕ್ಕೆ ಐದು ದಿನಗಳ ಮುಂಚೆ ಅಂದರೆ ಅವರು ಹೋಳಿ ಹಬ್ಬದ ಮಾರನೆದಿನ ಊರು ಬಿಡುವ ಸಮಯ ಅಷ್ಟೂರಿನಲ್ಲಿ ಅಹಮದ್ ಶಹಾವಲಿಯ ದರ್ಗಾಕ್ಕೆ ಮೆರವಣಿಗೆಯಲ್ಲಿ ಗಂಧ ತಂದು ಅರ್ಪಿಸಲಾಗುತ್ತದೆ. ಅಷ್ಟೂರಿನ ಅಹಮದ್ ಶಹಾವಲಿಯ ಗೋರಿಯ ಹಿಂದೆ ಸ್ವಲ್ಪ ದೂರದಲ್ಲಿ ಮುಸ್ಲಿಮರ ಮನೆಗಳಿವೆ. ಅಧಿಕೃತವಾಗಿ ಜಾತ್ರೆ ಆರಂಭವಾಗುವುದಕ್ಕಿಂತ ಮುಂಚಿನ ದಿನ ಗಂಧವನ್ನು ಊರಿನ ಪಟೇಲರ ಮನೆಯಿಂದ ಮತ್ತು ಮುಸ್ಲಿಂ ಮುಜಾವರ್ ರ ಮನೆಯಿಂದ ಬೇರೆ ಬೇರೆಯಾಗಿ ಮೆರವಣಿಗೆಯಲ್ಲಿ ತರುತ್ತಾರೆ. ಬಾಜಾಬಜಂತ್ರಗಳಿಂದ ಲಿಂಗಾಯಿತ ಪಟೇಲರ ಮನೆಯಿಂದ ಗಂಧ ಹೊರಡುತ್ತದೆ. ಇದನ್ನು ನಿರ್ವಹಿಸುವ ಮನೆಯವರು ವಿವರಿಸುವಂತೆ ಇದು ಲಿಂಗಾಯಿತ ಸಂಪ್ರದಾಯದ ಕ್ರಮದಲ್ಲಿಯೇ ನಡೆಯುತ್ತದ್ದು ಗಂಧದ ಜೊತೆಗೆ ನೈವೇದ್ಯಕ್ಕೆ ಮಾಲ್ದಿ, ಅನ್ನ, ಸಾರು, ತಂದರೆ ಮುಸ್ಲಿಮರು ಶರಬ್ಬತ್ತು, ಅಳ್ಳು(ಮಂಡಕ್ಕಿ) ,ಬೆಂಡು ಬಟಾಸು, (ಒಂದುರೀತಿಯಸಿಹಿತಿನಿಸು) ಗಳ ಮಿಶ್ರಣವನ್ನು ತರುತ್ತಾರೆ. ಮಾಲ್ದಿಯನ್ನು ಮುಸ್ಲಿಂರಿಗೆ ಹಂಚಿದರೆ ಮುಸ್ಲಿಮರು ಇವರಿಗೆ ಅರಳು ಹಂಚುತ್ತಾರೆ. ಎರಡೂ ಕಡೆಗಳಿಂದಲೂ ಬರುವ ಗಂಧದ ಮೆರವಣಿಗೆಗಳಲ್ಲಿ

ಯಾವುದಾದರೊಂದು ಗೋರಿಯ ಹತ್ತಿರ ಸ್ವಲ್ಪ ಮುಂಚಿತವಾಗಿ ಬಂದರೆ ಅದು ಇನ್ನೊಂದು ಗುಂಪು ಬರುವವರೆಗೆ ಕಾಯುತ್ತದೆ. ಪರಸ್ಪರ ಎರಡೂ ಕಡೆಯವರು ಸೇರಿಯೇ ಈಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ. ಹೆಣ್ಣುಮಕ್ಕಳು ಹೊರಗಡೆಯೇ ಕೂತಿರುತ್ತಾರೆ.

ಹೋಳಿ ಹುಣ್ಣಿಮೆ ದಿವಸದ ಈ ಕ್ರಿಯೆಯಾದ ಐದು ದಿನಗಳ ನಂತರದಲ್ಲಿ ಮಾಡ್ಯಾಳದ ಸ್ವಾಮಿಗಳು ಬಂದ ಎರಡನೆಯ ದಿನಕ್ಕೆ 'ಸರ್ಕಾರದ ಗಂಧಾಭಿಷೇಕ ' ಕಾರ್ಯಕ್ರಮವಿರುತ್ತದೆ. ಇದು ಬಹುಮನಿ ಸುಲ್ತಾನರ ವಂಶದವರ ಮನೆಯಿಂದಲೇ ನಡೆಯುವ ಕಾರ್ಯಕ್ರಮವಾದುದರಿಂದ ಬಹು ಹಿಂದಿನಿಂದಲೇ ಇದಕ್ಕೆ 'ಸರಕಾರಿ ಗಂಧ' ವೆಂಬುದಾಗಿ ಕರೆಯಲಾಗುತ್ತದೆ. ಮುಂಚೆ ಇದನ್ನು ವೈಭವಯುತವಾಗಿ ಬೀದರಿನಿಂದ ಒಂಟೆಯ ಮೇಲೆ ತರಲಾಗುತ್ತಿತ್ತು. ಆದರೆ ಈಗ ಅದರ ಹಿಂದಿನ ವೈಭವ ಕಣ್ಮರೆಯಾಗಿ ಕೈಗಾಡಿಯೊಂದರ ಮೂಲಕ ತರಲಾಗುತ್ತದೆ. ಡೋಲು, ನವಬತ್ ನಗಾರಿ ಬಾರಿಸಿಕೊಂಡು ಬರಲಾಗುತ್ತದೆ.

ಸರಕಾರದ ಗಂಧಾಭಿಷೇಕದ ಮಾರನೆಯ ದಿನ ರಾತ್ರಿ 'ಅಧ್ಭುತ ದೀಪ ಪೂಜೆ' ಕಾರ್ಯಕ್ರಮವಿರುತ್ತದೆ. ರಾತ್ರಿ ಗೋರಿಯೊಳಗಿನ 'ಮಜಾರ್ ' ನ ಸುತ್ತ ಗೋರಿಯೊಳಗೆ ಖಾಲಿ ಇರುವ ಸ್ಥಳಗಳೆಲ್ಲೆಲ್ಲ ಮತ್ತು ಹೊರಗಡೆ ಸಾಲಾಗಿ ಹಣತೆಯ ದೀಪಗಳನ್ನು ಹಚ್ಚಿಡಲಾಗುತ್ತದೆ. ಭಜನೆ, ಕವ್ವಾಲಿ, ಕಲ್ಗಿತುರಾಯಿ ಕಾರ್ಯ ಕ್ರಮಗಳು ಜಾತ್ರೆಗೆ ಮತ್ತಷ್ಟು ರಂಗನ್ನು ನೀಡುತ್ತವೆ. ಇದಾದ ಮಾರನೆಯ ದಿವಸ 'ನಂದಿಕೋಲು' ಮೆರವಣಿಗೆಯಿರುತ್ತದೆ. ವಾಸ್ತವವಾಗಿ ಇದನ್ನು ನಂದಿಕೋಲು ಎಂದು ಕರೆಯುವ ವದಲು 'ಧ್ವಜದಮೆರವಣಿಗೆ' ಎಂದು ಕರೆಯಬಹುದಾಗಿದೆ. ಈಧ್ವಜವು ಕೂಡ ತನ್ನ ವಿಶಿಷ್ಟ ರಚನೆಯಿಂದಾಗಿ ಕುತೂಹಲ ಕೆರಳಿಸುತ್ತದೆ. ಕೆಂಪು ಬಿಳಿ ಪಟ್ಟಿಗಳ ಅರ್ಧ ಚಂದ್ರಾಕೃತಿ ಮತ್ತು ನಕ್ಷತ್ರಗಳ ಗುರುತಿರುವ ಇದು ಬಹುಶಃ ಅಹಮ್ಮದ್ ಶಹಾವಲಿಯ ಸಮಕಾಲೀನ ಸೂಫಿ ಸಂದೇಶಗಳ ಸಂಕೇತಗಳಾಗಿರಬೇಕು. ಯಾಕೆಂದರೆ ಧ್ವಜದ ಮೇಲೆ ಎಲ್ಲಿಯೂ ನಂದಿಯ ಚಿತ್ರವಾಗಲಿ, ಶೈವ ಧರ್ಮದ ಸಂಕೇತಗಳಾಗಲಿ ಇಲ್ಲ. ಉರುಸಿಗೆ ಸಂಬಂಧಿಸಿದ ಕರಪತ್ರಗಳಲ್ಲಿ ಮಾತ್ರ ಇದನ್ನು ಶಿಷ್ಟ ಭಾಷೆಯಲ್ಲಿ ಕರೆಯುವ ಪ್ರಯತ್ನವಾಗಿ ' ನಂದಿಕೋಲು' ಮೆರವಣಿಗೆ ಎಂದಿದೆ. ಆದರೆ ಅಷ್ಟೂರಿನ ಮತ್ತು ಮಾಡ್ಯಾಳದ ಸುತ್ತ ಮುತ್ತಣ ಜನರ್ಯಾರು ಇದನ್ನು



ಮಾಡ್ಯಾಳದಿಂದ ಬರುವ 'ಧ್ವಜ'





ಚಿತ್ರದಲ್ಲಿ ಸುಣ್ಣ ಹೊಡೆದ ಮೊಲನೆಯ ಗೋರಿಯೇ 'ಅಹಮದ್ ಶಹಾನ ಗೋರಿ'
ಸ್ಥಳ: ಅಷ್ಟೂರು, ಬೀದರ್ ಜಿಲ್ಲೆ



ಅಹಮದ್ ಶಹಾನ ದರ್ಗಾದ ದೈನಂದಿನ ಧಾರ್ಮಿಕ ವಿಧಿಗಳನ್ನು ನಿರ್ವಹಿಸುವ 'ಕವಡೆ' ಪೂಜಾರಿ

ನಂದಿಕೋಲು ಮೆರವಣಿಗಬೆ ಎಂದು ಕರೆಯದೆ 'ಪಟಾಕ್ಷಿ' (ಧ್ವಜ) ಎಂದೇ ಕರೆಯುತ್ತಾರೆ. ತಮಿಳುನಾಡಿನ ಕೆಲವು ಪ್ರಸಿದ್ಧ ದರ್ಗಾಗಳಿರುವ ಕಡೆ ಸಾಂಕ್ರಾಮಿಕ ರೋಗಗಳು ಹರಡಿದಾಗ, ದರ್ಗಾಕ್ಕೆ ಕಾರಣನಾದ ಸಂತನ ಹಸ್ತ ಗುರುತೋ ಅಥವಾ ಪ್ರವಾದಿ ಮಹಮ್ಮದರ ಸಂಕೇತ ರೂಪದ ಪಾದದ ಗುರುತುಗಳಿರುವ ಧ್ವಜವನ್ನೋ ನಗರ ಅಥವಾ ಹಳ್ಳಿಗಳ ಬೀದಿಯಲ್ಲಿ ಮೆರವಣಿಗೆಯ ಮೂಲಕ ತರಲಾಗುತ್ತದೆ. ಈ ರೀತಿಯ ಧ್ವಜಗಳ ಬಳಕೆಯು ' ಮೊಹರಂ' ನ ಸಂಧರ್ಭದಲ್ಲಿಯೂ ಸಹ ಕಂಡು ಬರುತ್ತದೆ. 'ಪಟಾಕ್ಷಿಯ'(ಧ್ವಜದ) ಮೆರವಣಿಗೆಯಾದ ಮಾರನೆಯ ದಿನ ಕುಸ್ತಿ ಮತ್ತು ಕಲ್ಗಿತುರಾಯಿ ಕಾರ್ಯಕ್ರಮವಿರುತ್ತದೆ. ಇವಿಷ್ಟು ಸ್ಥೂಲವಾಗಿ ಉರುಸಿನ ವಿವರಗಳು ಮತ್ತು ಉರುಸು ನಡೆಯುವ ಕ್ರಮವಾಗಿದೆ.

ಈ ಆಚರಣಾತ್ಮಕ ವಿವರಗಳನ್ನು ಮುಂದಿಟ್ಟುಕೊಂಡು ಅಂತಿಮವಾಗಿ ಯಾವ ತೀರ್ಮಾನಕ್ಕೆ ಬರಬಹುದು? ಆರು ನೂರು ವರ್ಷಗಳ ಹಿಂದಿನ ಸಾಂಸ್ಕೃತಿಕ ಆಶಯಗಳು ಅದರ ಸ್ವರೂಪವನ್ನು ನಾವು ಮೂಲ ರೂಪದಲ್ಲಿ ಇದ್ದಂತೆಯೇ ಗ್ರಹಿಸಬಹುದೇ? ವರ್ತಮಾನದಲ್ಲಿಯೂ ಅವು ಮುಂದುವರೆದಿದ್ದು ಮೂಲ ಆಶಯಗಳ ಗುಣ ಸ್ವರೂಪಗಳನ್ನು ಅವು ಉಳಿಸಿಕೊಂಡಿವೆಯೇ? ಅಥವಾ ವಿಸ್ಮೃತಿಗೆ ಸಂದು ಕೇವಲ ಕಂದಾಚಾರವಾಗಿ ಮುಂದುವರೆದಿವೆಯೇ? ಈ ಪ್ರಶ್ನೆಗಳಿಗೆ ಉತ್ತರ ಕಂಡು ಕೊಳ್ಳುವ ಮೂಲಕ ನಾವು ಹಿಂದೂ-ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯದ ಸ್ವರೂಪವನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ.

ಸಾಮಾನ್ಯವಾಗಿ ಮುಸ್ಲಿಮೇತರ ಕೆಳವರ್ಗವು ವಿಶೇಷವಾಗಿ ಇಸ್ಲಾಂನತ್ತ ಆಕರ್ಷಿತವಾಯಿತು ಎಂದು ನಂಬಲಾಗಿದೆ. ಆದರೆ ಜಾತಿಯಿಂದ ಮೇಲು ವರ್ಗಕ್ಕೆ ಸೇರಿದವರೂ ಸಹ ಇಸ್ಲಾಂಗೆ ಆಕರ್ಷಿತರಾದುದನ್ನು ಇಲ್ಲಿ ಕಾಣಬಹುದಾಗಿದೆ. ಮುಸ್ಲಿಂ ಮತ್ತು ಮುಸ್ಲಿಮೇತರರ ನಡುವಣ ಸಂಸ್ಕೃತೀಕರಣವಾಗಲಿ ಮತಾಂತರೀಕರಣವಾಗಲಿ ಕೇವಲ ಅನುಕರಣೆಯ ಮೂಲಕ ಪರಿಸ್ಥಿತಿಗಳ ಅನಿವಾರ್ಯತೆಗಳ ಮೂಲಕ ಘಟಿಸಿದ್ದಲ್ಲ (ಇದೂ ಒಂದಂಶವಾಗಿರಬಹುದಷ್ಟೆ). ಮುಖ್ಯವಾಗಿ ಇಂತಹುದೊಂದು ಪ್ರಕ್ರಿಯೆಗೆ ತಾತ್ವಿಕತೆಯ ನಂಟೂ ಇದ್ದಿತು. ಸೂಫಿಗಳ ಮತ್ತು ಮುಸ್ಲಿಮೇತರರಲ್ಲಿ ಅದಕ್ಕೆ ಸಂವಾದಿಯಾಗಿದ್ದ ಆಧ್ಯಾತ್ಮಿಕ ಪಂಥಗಳ ನಡುವೆ ಅರ್ಥಪೂರ್ಣ ಸಂವಾದಗಳ ಮೂಲಕ ಪ್ರೀತಿ, ಮಾನವತೆಯ ನೆಲೆಯಲ್ಲಿ ಒಂದಾಗಿ ಧರ್ಮದ

ಎಲ್ಲೆ ಕಟ್ಟುಗಳನ್ನು ಮೀರಲು ಪ್ರಯತ್ನಸಿ ತಮ್ಮ ವಿಶಿಷ್ಟತೆಯನ್ನುಳಿಸಿಕೊಂಡ ಪರಿಣಾಮವಾಗಿ ಇಂತಹ ಪ್ರಕ್ರಿಯೆಗಳು ಮೂಡಲು ಸಾಧ್ಯ. ಅಷ್ಟೂರಿನ ಉರುಸಿನ ಆಚರಣೆಯ ವಿವರಗಳು ಇದನ್ನು ಮತ್ತಷ್ಟು ಸ್ಪಷ್ಟ ಗೊಳಿಸುತ್ತವೆ. ಅಹಮ್ಮದ್ ಶಹಾವಲಿಯನ್ನು ಅಲ್ಲಮ ಪ್ರಭುವಿಗೆ ಹೋಲಿಸಲಾಗಿದ್ದು ಅಷ್ಟೂರಿನ ಮುಸ್ಲಿಮೇತರ ವರ್ಗವೆಲ್ಲ ಅಹಮದ್ ಶಾಹನ ಗೋರಿಯನ್ನು ' ಅಲ್ಲಮ ಪ್ರಭುಗಳ ಗುಡಿ' ಎಂದೇ ಕರೆಯುತ್ತಾರೆ. ಅಹಮದ್ ಶಹಾನ ಕಾಲಘಟ್ಟದಲ್ಲಿ ಸೂಫಿಗಳಿಗೂ ಮತ್ತು ಶೈವ ಪರಂಪರೆಯ ವಿರಕ್ತ ವರ್ಗಕ್ಕೂ ಇದ್ದ ತಾತ್ವಿಕತೆಯ ಸಂಬಂಧವನ್ನು ಇದು ಬಹುಮಟ್ಟಿಗೆ ಸೂಚಿಸುತ್ತದೆ.

ಗುಲುಬರ್ಗಾ ಜಿಲ್ಲೆಯ ಅಳಂದ ತಾಲೂಕಿನ ಮಾಡ್ಯಾಳ ಗ್ರಾಮದಿಂದ ಬೀದರಿನ ಅಷ್ಟೂರಿಗೆ ಕಾಲ್ನಡಿಗೆಯಲ್ಲಿ ಬಂದು 'ಉರೂಸ್ ' ನ ನೇತೃತ್ವ ವಹಿಸುವ ಸ್ವಾಮಿಗಳಿಗೆ ಆಚರಣೆಗಳ ದೃಷ್ಟಿಯಿಂದ ವಿಶೇಷ ಮಹತ್ವವಿದೆ. ಸುಧೀರ್ಘಕಾಲದಿಂದಲೂ ಉರೂಸ್ ಗೆ ಸಂಬಂಧಿಸಿದ ಸಂತನ ಅನಯಾಯಿಗಳ ಗುಂಪೇ ಆತನ ಪುಣ್ಯತಿಥಿಯಲ್ಲಿ ಪಾಲ್ಗೊಳ್ಳಲು ಬಯಸುತ್ತಿತ್ತು ಹಾಗೂ ಇದಕ್ಕೊಂದು ,ಶಾಶ್ವತವಾದ ರೂಪ ನೀಡಲು ಕ್ರಮ ಬದ್ಧಗೊಳಿಸಲು ದತ್ತಿಯಂತಹ ವ್ಯವಸ್ಥೆಯನ್ನು ಕಲ್ಪಿಸಿರುವಂತೆ ತೋರುತ್ತದೆ. ಈ ಭಾಗದಲ್ಲಿ ಅಹಮದ್ ಶಹಾವಲಿಯು ಅತ್ಯಂತ ಪೂಜಾರ್ಹ ವ್ಯಕ್ತಿಯಾಗಿದ್ದನೆಂಬುದಕ್ಕೆ ನಿದರ್ಶನವಾಗಿ ಅಷ್ಟೂರನ್ನು ಸೇರಿದಂತೆ ಒಟ್ಟು ಐದು ಕಡೆಗೆ ಅಹಮದ್ ಶಹಾವಲಿಯ ಗೋರಿಗಳನ್ನು ನಿರ್ಮಿಸಲಾಗಿದೆ. ಇವು ಆತನನ್ನು ಆರಾಧಿಸಲು ಬಯಸುವ ಸಮುದಾಯಗಳ ಆಪೇಕ್ಷೆಯಿಂದಾಗಿಯೇ ಮೂಡಿವೆಯೆಂಬುದರಲ್ಲಿ ಅನುಮಾನವಿಲ್ಲ. ಬೀದರಿನ ಅಷ್ಟೂರ , (ಮೂಲಗೋರಿ). ಗುಲುಬರ್ಗಾ ಜಿಲ್ಲೆಯ ಅಳಂದ ತಾಲೂಕಿನ ಮಾಡ್ಯಾಳ, ಹೆಬಿಳಿ, ಜೀರೊಳ್ಳಿ ಹುಣಸೆ ಅಡಿಗಿಲಿಗಳಲ್ಲಿ ಕ್ರಮವಾಗಿ ಅಹಮದ್ ಶಹಾನ ಗೋರಿಗಳಿವೆ. ಮೂಲಗೋರಿಯಿರುವ ಅಷ್ಟೂರಿನಲ್ಲಿ ಉರುಸು ಆಚರಿಸಿದ ನಂತರ ಮಾಡ್ಯಾಳದಲ್ಲಿ ಅದೇ ಸ್ವಾಮಿಗಳ ನೇತೃತ್ವದಲ್ಲಿ ಉರೂಸ್ ನಡೆಯುತ್ತದೆ. ಇಲ್ಲಿನ ಧಾರ್ಮಿಕ - ವಿಧಿಗಳು ಮುಗಿದನಂತರ ಆಚರಣಾ ಪರಿಕರಣಗಳನ್ನು ಮುಖ್ಯವಾಗಿ ಧ್ವಜ, ಕೊಡೆ ಮೊದಲಾದವುಗಳನ್ನು ಉಳಿದೆಡೆಗೆ ತೆಗೆದು ಕೊಂಡು ಹೋಗಿ ಕ್ರಮವಾಗಿ ಆಯಾಕಡೆ ' ಉರುಸು' ಆಚರಿಸಲಾಗುತ್ತದೆ.

ಉರಿಸಿನ ಆಚರಣಾವಿಧಿಗಳ ಅರ್ಥಪೂರ್ಣತೆಯನ್ನು ಮನವರಿಕೆ ಮಾಡಿಕೊಂಡ ಮುಸ್ಲಿಮೇತರರು 'ಅಷ್ಟೂರಿ'ನಲ್ಲಿ ಅಷ್ಟಾಗಿ ಇಲ್ಲ. ಮುಸ್ಲಿಮರಲ್ಲಿ ಮಜಾವರರು ಸ್ಪಷ್ಟ ಪಡಿಸುವಂತೆ ಮಾಡ್ಯಾಳದಿಂದ ಬರುವ ಸ್ವಾಮಿಗಳು ಅಹಮದ್ ಶಹಾನ ಮುಖ್ಯ ಅನುಯಾಯಿಗಳಾಗಿದ್ದರಂತೆ. ಅದರ ಕುರುಹಾಗಿಯೇ ಮೂಲದಲ್ಲಿ ಆತನ ಆಪ್ತ ಅನುಯಾಯಿಗಳ ಉಪಸ್ಥಿತಿಯಿಲ್ಲದೆಯೇ 'ಪುಣ್ಯತಿಥಿ' ನಡೆಯದ ಮಟ್ಟಿಗೆ ಪರಸ್ಪರರ ಸಂಬಂಧ ಗಾಢವಾದುದಾಗಿತ್ತು. ಈ ವಿವರಣೆಯು ಸಮಂಜಸವಾಗಿದ್ದು ಇಲ್ಲಿನ ಧಾರ್ಮಿಕ ವಿಧಿಗಳಿಗೊಂದು ಸುಸಂಬದ್ಧತೆಯ ರೂಪ ನೀಡುತ್ತದೆ. ಮುಸ್ಲಿಮೇತರ ವರ್ಗದಲ್ಲಿ ಸುಧೀರ್ಘ ಕಾಲಾವಧಿಯಲ್ಲಿ ಈ ವಿವರಗಳು ವಿಸ್ಮೃತಿಗೆ ಸಂದು ತಮ್ಮ ಆಚರಣೆಗಳಿಗೆ ಅರ್ಥಪೂರ್ಣತೆಯನ್ನು ಆರೋಪಿಸಿಕೊಳ್ಳಲು ಮಾಡಿದ ಪ್ರಯತ್ನವಾಗಿ ಕೇವಲ ಅಲ್ಲಮ ಪ್ರಭುವಿನ ನಾಮಕರಣದ ಕ್ರಿಯೆ ನಡೆದಿರುವಂತಿದೆ. ಅಷ್ಟೂರಿನ ಪ್ರಾಥಮಿಕ ಶಾಲಾಶಿಕ್ಷಕರಾಗಿದ್ದು ಅದೇ ಊರಿನವರೊಬ್ಬರು ಅಲ್ಲಮ ಪ್ರಭುವಿನ ಚರಿತ್ರೆ (ಅಹಮದ್ ಶಹಾನ) ರಚಿಸಲು ಪ್ರಯತ್ನಿಸಿ ೧೨ನೇಸ ಶತಮಾನದ ' ಅಲ್ಲಮ' ನಿಗೆ ಹಿಂತಿರಿಗಿ ವಿಫಲಗೊಂಡರು.. ಆದರೆ ಅವರು ತಮ್ಮ ಶಿಷ್ಯರಿಗೆ (ತಮ್ಮ ಪುಸ್ತಕದಲ್ಲಿ ನಮೂದಿಸದೇ ಇರುವ ಸಂಗತಿಯೊಂದನ್ನು) ತಮ್ಮ ಹಿರಿಯರಿಂದ ಕೇಳಿದ್ದ ಐತಿಹ್ಯವೊಂದನ್ನು ವಿವರಿಸಿ ಜಿಜ್ಞಾಸೆ ವ್ಯಕ್ತಿಪಡಿಸಿದ್ದುದು ತುಂಬಾ ಕುತೂಹಲಕರವಾಗಿದೆ. ತೊಂಬತ್ತು ವರ್ಷಗಳ ನರಸಪ್ಪ ಮಾಸ್ತರರು ಕಳೆದ ವರ್ಷವೆ ತೀರಿಕೊಂಡರು. ಅವರ ಶಿಷ್ಯರೊಬ್ಬರು (ಶಂಕರಪ್ಪಕೋಳಿ ವಯಸ್ಸು೬೫) ವಿವರಿಸುವ ಐತಿಹ್ಯದ ಸಂಕ್ಷಿಪ್ತ ಪಾಠ ಹೀಗಿದೆ.

'ಅಹಮದ್ ಶಹಾವಲಿ ಬಹಮನಿ' ಯು ಗುಲುಬರ್ಗಾದಲ್ಲಿ ಅವರ ದಾಯಾದಿಗಳಿಂದ ತೀವ್ರ ಮತ್ಸರ ದ್ವೇಷಗಳಿಗೆ ಗುರಿಯಾಗ ಬೇಕಾಗಿ ಬಂತು. ಒಮ್ಮೆ ಆತನ ವಿರುದ್ಧ ಕೊಲೆಯ ಸಂಚೊಂದು ನಡೆದಾಗ ಬಂದೇನವಾಜ್ ಗೇಸುದ ರಾಜ್ ರು ಅಲ್ಲಿಂದ ಪಾರಾಗಲು ತಮ್ಮ ಸೂಫಿ ವಸ್ತ್ರಗಳನ್ನು ಅಹಮದ್ ಶಹಾನಿಗೆ ನೀಡಿ ಬೀದರ್ ಗೆ ಹೊರಟು ಹೋಗಲು ಸೂಚಿಸಿದರಂತೆ. ಅಲ್ಲಿಂದ ಫಕೀರನ ವೇಷದಲ್ಲಿ ಅಷ್ಟೂರಿನವರೆಗೆ ಬರುತ್ತಿದ್ದಾಗ ಕೊಲೆಗಾರರು ಬೆನ್ನಟ್ಟಿ ಅಹಮದ್ ಶಹಾನನ್ನು ಪತ್ತೆ ಹಚ್ಚಲು ಶತಾಯ ಗತಾಯ ಪ್ರಯತ್ನ ನಡೆಸಿದ್ದರು . ಫಕೀರನ ವೇಷದಲ್ಲಿರುವ ಅಹಮದ್ ಶಹಾನು ಗುರುತು ಸಿಗದಂತಿದ್ದರೂ ಸುರಕ್ಷತೆಗಾಗಿ

ಅಷ್ಟೂರಿನಲ್ಲಿ ನೆರೆದಿದ್ದ ವೀರಶೈವ ವಿರಕ್ತಿಗಳ ಗುಂಪಲ್ಲಿ ನುಸುಳಿಕೊಂಡು ಪಾರಾದನು. ಮುಂದೆ ಅವನು ರಾಜ್ಯ ಸ್ಥಾಪಿಸಿ ಸುಲ್ತಾನನಾದಾಗ ಬಂದೇನವಾಜ್ ರ ಪವಿತ್ರ ವಸ್ತ್ರಗಳನ್ನು ಅಂದು ಅಷ್ಟೂರಿನಲ್ಲಿ ನೆರೆದಿದ್ದ ವೀರಶೈವ ವಿರಕ್ತರ ಮುಖ್ಯಸ್ಥನಿಗೆ ಗೌರವಾರ್ಥ ನೀಡಿದನು. ಆತನೇ ಅಲ್ಲಮ ಪ್ರಭೂ ಎಂಬುದಾಗಿ ಮತ್ತು ಅದೇ ವಸ್ತ್ರಗಳನ್ನು ಧರಿಸಿ ಪ್ರತಿವರ್ಷ ಅಹಮ್ಮದ್ ಶಹಾರ ಪುಣ್ಯತಿಥಿಗೆ ಅವರ ವಂಶಜರು ಆವಸ್ತ್ರಗಳನ್ನು ಧರಿಸಿಯೇ ಹಾಜರಾಗಿತ್ತಿದ್ದು ಅವರ ಉಪಸ್ಥಿತಿಯಿಲ್ಲದೆಯೇ 'ಉರೂಸ್ ' ನಡೆಯುವುದಿಲ್ಲವೆಂಬುದಾಗಿ ಈ ಐತಿಹ್ಯ ವಿವರಿಸುತ್ತದೆ.

ಈ ಐತಿಹ್ಯವು 'ಉರುಸಿನ' ಆಚರಣೆಯ ಹಿಂದಿರುವ ಅರ್ಥಪೂರ್ಣ ಉದ್ದೇಶಗಳನ್ನು ವಸ್ತು ನಿಷ್ಠವಾಗಿ ವಿವರಿಸುವುದರ ಮೂಲಕ ಹಲವಾರು ಸತ್ಯ ಸಂಗತಿಗಳನ್ನು ಒಡಲೊಳಗಿಟ್ಟು ಕೊಂಡಿರುವಂತಿದೆ. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಕಾರ್ಯ ಕ್ಷೇತ್ರವಾಗಿದ್ದ ಬೀದರ್ ನಲ್ಲಿ ವೀರಶೈವ ಧರ್ಮದ ಪ್ರಾಬಲ್ಯ ಅಧಿಕವಾಗಿಯೇ ಇತ್ತು.ಬಸವಣ್ಣನ ಆಶಯಗಳಿಂದ ದೂರವಾಗಿ ವೀರಶೈವ ಧರ್ಮವು ಹೆಚ್ಚು ಸಾಂಸ್ಥಿಕವಾಗುತ್ತಾ ಲಿಂಗಾಯಿತ ಮತವಾಗಿ ರೂಪಾಂತರಗೊಳ್ಳುತ್ತಿದ್ದರೂ ಮೂಲ ಆಶಯಗಳನ್ನುಳಿಸಿಕೊಂಡ ಶೈವ ಧಾರ್ಮಿಕ-ಪಂಥಗಳು ಸೂಫಿ ಪಂಥಗಳೊಡನೆಅರ್ಥಪೂರ್ಣ ಸಂಪರ್ಕ ಮತ್ತು ಸಂವಾದಗಳನ್ನು ಸಾಧ್ಯವಾಗಿಸಿಕೊಂಡುದರ ಪರಿಣಾಮವೇ ಇದಾಗಿರುವಂತಿದೆ . ಅಲ್ಲದೆ ಸೂಫಿಗಳ ಮತ್ತು ಶರಣರು ಅಧ್ಯಾತ್ಮಿಕ ಸಾಧನ ಪಥಗಳೆರಡೂ ಆಶ್ಚರ್ಯಕರವಾಗಿ ಪರಸ್ಪರ ಒಂದೇ ಎನ್ನುವಷ್ಟರ ಮಟ್ಟಿಗೆ ಸಾಮ್ಯವುಳ್ಳವುಗಳಾಗಿವೆ. ಇವು ತಾತ್ವಿಕವಾಗಿ ಪರಸ್ಪರ ಒಂದರೊಡನೊಂದು ಗುರುತಿಸಿಕೊಂಡ ಕುರುಹುಗಳೇ ಈಗಲೂ ಆಚರಣೆಗಳಲ್ಲಿ ಕಂಡಲುಬರುವ ಅಂಶಗಳಾಗಿದ್ದು ನಮ್ಮ ಸಂಸ್ಕೃತಿಯ ಜಾತ್ಯಾತೀತ ಪ್ರತೀಕಗಳೊಡನೆ ನೂರಾರು ವರ್ಷಗಳ ಸುಧೀರ್ಘಕಾಲವನ್ನು ಅಧಿಗಮಿಸಿ ಬೆಸೆದು ಕೊಳ್ಳುತ್ತವೆ. ದರವೇಶಿ ವೇಷ ಧರಿಸಿದ ಲಿಂಗಾಯಿತ ಜಂಗಮರು ಅವರ ಅನುಯಾಯಿಗಳು, ಮುಸ್ಲಿಂ ಮಜಾವರರುಗಳು ನಾಮಮಾತ್ರವಾಗಿ ಆಚರಣಾ ವಿಧಿಗಳಲ್ಲಿ ಅಭಿನಯಿಸುವ ಪಾತ್ರಧಾರಿಗಳಂತೆ ಕಂಡರೂ, ಅವರು ಪರಂಪರೆಯ ಅವ್ಯಾವಹತ ಮುಂಬರಿಕೆಯ ಕೊಂಡಿಗಳಾಗಿ ನಮ್ಮ ಸಂಸ್ಕೃತಯ ಹರಿಕಾರರಂತೆ ತೋರುತ್ತಾರೆ.

ಉರುಸಿನ ವಿವರಗಳೊಂದಿಗೆ ' ಅಷ್ಠೂರಿ' ನ ಜನರ ಭಾಷಿಕ ಪರಿಸರ ಗುಡಿಗುಂಡಾರಗಳು ಜಾತಿವಾರು ಜನಸಂಖ್ಯೆ , ಸಧಾರ್ಮಿಕ ಮೂಲಭೂತವಾದದಂತಹ ಸಂಘಟನೆಗಳ ಪ್ರಭಾವವನ್ನು ಅರ್ಥಮಾಡಿ ಕೊಳ್ಳಲು ಪ್ರಯತ್ನಿಸಲಾಗಿದೆ. ಮೊದಲಿಗೆ ಬೀದರ್ ತಾಲೂಕಿನ ಅಲ್ಪಸಂಖ್ಯಾತ ಜಾತಿವಾರು ಜನಸಂಖ್ಯೆಯನ್ನು ೧೯೮೧ ಜನಗಣತಿಯ ಪ್ರಕಾರ ನೋಡಬಹುದು.

ಬೀದರ್ ತಾಲೂಕಿನ ಒಟ್ಟು ಜನಸಂಖ್ಯೆ	೨೪೭೧೦೬
೧) ಜೈನ್	೧೭೩
೨) ಮುಸ್ಲಿಮ್ಸ್	೭೨,೨೨೫
೩) ಸಿಖ್	೩೪೦
೪)ಇತರೆ	೧೬

ಒಟ್ಟು ಜನಸಂಖ್ಯೆಯನ್ನು ಗಮನಿಸಿದಾಗ ಮುಸ್ಲಿಮರ ಜನಸಂಖ್ಯೆ ಶೇಕಡಾವಾರು ೨೯.೧ ಇದೆ. ಮುಸ್ಲಿಮೇತರ ವರ್ಗಗಳಲ್ಲಿ ಪ್ರತಿಯೊಂದುನ್ನು ಲಿಂಗಾಯಿತ, ಗೊಂಡಾ , ಎಂದು ವಿಭಾಗಿಸುತ್ತಾ ಹೋದರೆ ಮುಸ್ಲಿಮರದೇ ಬಹುಸಂಖ್ಯಾತ ವರ್ಗವಾಗುತ್ತದೆ. ಭಾಷಿಕವಾಗಿ ವ್ಯವಹಾರದಲ್ಲಿ ಇವತ್ತಿಗೂ ಉರ್ದುವಿನ ಪ್ರಭಾವವೇ ಅಧಿಕವಾಗಿದೆ. ಉರ್ದು ಮತ್ತು ಕನ್ನಡ, ಉರ್ದು ಮರಾಠಿ , ಉರ್ದು ತೆಲುಗು ಹೀಗೆ ದ್ವಿ-ಭಾಷಿಕ ಮತ್ತು ಬಹು ಭಾಷಿಕ ಪರಿಸರವಿದ್ದರೂ ಉರ್ದುವೇ ಪ್ರಧಾನವಾದ ಭಾಷೆಯಾಗಿದೆ. ಇದು ಉತ್ತರ ಭಾರತದ ಉರ್ದುವಿನೊಂದಿಗೆ ಹೋಲಿಸಿದರೆ ತನ್ನದೇ ಆದ ದಖನ್ನಿನ ವೈಶಿಷ್ಟ್ಯಗಳಿಂದ ಕೂಡಿದ 'ದಖನಿ' ಭಾಷೆಯಾಗಿದೆ. ಅಹಮದ್ ಶಹಾವಲಿಯ ಗೋರಿಯಿರುವ ಅಷ್ಠೂರಿನಲ್ಲಿ ಕನ್ನಡ , ತೆಲುಗು ಭಾಷಿಕರಿಗೆಲ್ಲ ಉರ್ದು ದ್ವಿ- ಭಾಷಿಕವಾಗಿ ಚೆನ್ನಾಗಿ ಗೊತ್ತು. ಮುಸ್ಲಿಮರು ತುಂಬಾ ಅಪರೂಪದ ಸಂಧರ್ಭಗಳಲ್ಲಿಯಷ್ಟೆ ಕನ್ನಡ ಬಳಸುವುದನ್ನು ಬಿಟ್ಟರೆ ಉಳಿದಂತೆ ಮುಸ್ಲಿಮೇತರರ ಜೊತೆ ವ್ಯವಹಾರಿಕವಾಗಿ ಮಾತೃಭಾಷೆಯಾದ 'ದಖನಿ' ಯನ್ನೇ ಬಳಸುತ್ತಾರೆ. ಮುಸ್ಲಿಮೇತರರೂ ಸಹ ತಮ್ಮ ಭಾಷಿಕ ಪರಿಸರದಲ್ಲಿಯೇ ದಖನಿಯನ್ನು

ಕಲಿತಿರುತ್ತರಾದ್ದರಿಂದ ಇದನ್ನು ಮಾತೃಭಾಷೆಯಷ್ಟೇ ಸಮರ್ಥವಾಗಿ ಬಳಸಬಲ್ಲರಾದ್ದರಿಂದ ಸಂವಹನದ ಸಮಸ್ಯೆ ಇರಲಿಲ್ಲ ಬಹುತೇಕ ಸೂಫಿಕಾವ್ಯಗಳು , ಸೂಫಿಸೈದ್ಧಾಂತಿಕ ವಿವರಣೆಗಳು' ದಖಿನಿ' ಭಾಷೆಯಲ್ಲಿರುತ್ತಿದ್ದವಾದ್ದರಿಂದ ಮುಸ್ಲಿಮೇತರ ವರ್ಗಕ್ಕೆ ಸುಲುಭವಾಗಿ ತಲುಪುತ್ತಿದ್ದವು. ಇಂತಹ ಬಹು ಭಾಷಿಕ ಪರಿಸರವು ಸಾಂಸ್ಕೃತಿಕವಾಗಿ ಮುಸ್ಲಿಂ- ಮುಸ್ಲಿಮೇತರ ವರ್ಗಗಳನ್ನು ಒಂದೇ ವೇದಿಕೆಗೆ ತರುವಲ್ಲಿ ಸಹಾಯಕವಾಯಿತು. ಇಷ್ಟಲ್ಲದೆ ಕಲೆ, ವಾಸ್ತುಶಿಲ್ಪ, ಬದುಕಿನ ರೀತಿ ರಿವಾಜುಗಳ ಮೇಲೆ ಪ್ರಭಾವ ಬೀರಿದ ಮುಸ್ಲಿಂರ ಜೀವನ ವಿಧಾನ ಇವೆಲ್ಲವುಗಳಿಂದಾಗಿ ಈ ಭಾಗದಲ್ಲಿ ದ್ವಿ- ಸಾಂಸ್ಕತಿಕ ಪರಿಸರವೊಂದನ್ನು ನಿಚ್ಚಳವಾಗಿ ನೋಡಬಹುದಾಗಿದೆ.

ಸಾಮಾನ್ಯವಾಗಿ ಧಾರ್ಮಿಕ ಶಿಲ್ಪಕಲೆ, ವಾಸ್ತುವಿನಲ್ಲಿ ಇಸ್ಲಾಂನ ಪ್ರಭಾವವಾಗಿಲ್ಲವೆಂದು ನಂಬಲಾಗಿದೆ. ಆದರೆ ಬೀದರ್ ನ ಸುತ್ತ ಮುತ್ತಣ ದೇವಸ್ಥಾನಗಳನ್ನು ಗಮನಿಸಿದರೆ ಈ ಅಭಿಪ್ರಾಯವು ಸರಿಯಲ್ಲವೆಂಬುದಾಗಿ ತಿಳಿಯುತ್ತದೆ. ಈ ಭಾಗದ ಶಿವ, ಆಂಜನೇಯನ ದೇವಸ್ಥಾನಗಳಿಂದ ಹಿಡಿದು ಗ್ರಾಮದೇವತೆಗಳವರೆಗಿನ ಕಟ್ಟಡ ರಚನೆಗಳೆಲ್ಲ ಗಾಢವಾಗಿ ಇಸ್ಲಾಮಿಕ್ ಶೈಲಿಯ ಪ್ರಭಾವಕ್ಕೊಳಗಾಗಿವೆ.

ಮುಖ್ಯವಾಗಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಧಾರ್ಮಿಕ- ಮೂಲಭೂತವಾದವು ಮತ್ತದರ ಸಂಘಟನೆಯು ಸಂಸ್ಕೃತೀಕರಣ ಮತ್ತು ಈ ಬಗೆಯ ಆಚರಣೆಗಳ ಮೇಲೇನಾದರೂ ಪ್ರಭಾವ ಬೀರಿದೆಯೇ ಎಂದು ವಿಚಾರಿಸಲಾಗಿ ಅದು ಅಷ್ಟೇನು ಇವುಗಳನ್ನು ಪ್ರಭಾವಿತಗೊಳಿಸಿಲ್ಲವೆಂಬುದಾಗಿ ತಿಳಿದು ಬಂದಿದೆ. ಧಾರ್ಮಿಕ ಮೂಲಭೂತವಾದವು ಮತ್ತು ಕೋಮುವಾದವು ನಮ್ಮ ಸಂಸ್ಕೃತಿಯ ಜಾತ್ಯಾತೀತ ಸ್ವರೂಪಕ್ಕೆ ದಕ್ಕೆತರುವಷ್ಟು ಪ್ರಭಾವಶಾಲಿಯಾಗಿಲ್ಲವಷ್ಟೆ ಅಲ್ಲದೆ ಅವುಗಳ ಇಂತಹ ಪ್ರಯತ್ನದ ಹಿಂದಿನ ಅಪಾಯಕಾರಿ ಮನೋಭಾವವನ್ನು ಅರ್ಥ ಮಾಡಿಕೊಳ್ಳಬಲ್ಲ ಮತ್ತದನ್ನು ತಿರಸ್ಕರಿಸುವ ಗುಣ ಅದಕ್ಕಿದೆ.

ಹೈದರಾಬಾದಿನ ರಜಾಕಾರ ಕಾಲದಲ್ಲಿ ಅಹಮ್ಮದ್ ಶಹಾವಲಿಯವರ ಗೋರಿಗೆ ಬೀಗ ಹಾಕಿ ಅಲ್ಲಿ ಯಾವುದೇ ರೀತಿಯ ಧಾರ್ಮಿಕ ವಿಧಿಗಳನ್ನು ಕೈಗೊಳ್ಳದಂತೆ ಕಟ್ಟೆಚ್ಚರ ವಿಧಿಸಲಾಯಿತಂತೆ.



ರಾಮನ ಭಕ್ತ ಆಂಜನೇಯನ ದೇವಸ್ಥಾನ, ಮುಸ್ಲಿಂ ಶೈಲಿಯಲ್ಲಿ ಸ್ಥಳ: 'ಅಪ್ಪೂರು'



ಬೀದರ್ ಸಮೀಪದ 'ಕುಮುಟಾಣ'ದಲ್ಲಿನ ಆಂಜನೇಯನ ದೇವಸ್ಥಾನ.
ಇದೂ ಮುಸ್ಲಿಂ ಶೈಲಿಯಲ್ಲಿದೆ

ಗೋರಿಯೊಳಗಡೆ ಮಾಂಸ ಹಾಕಿ 'ಉರೂಸ್ ' ನಡಯು ಗೊಡುವುದಿಲ್ಲವೆಂದು ಮಾಡ್ಯಾಳದ ಸ್ವಾಮಿಗಳನ್ನು ಹಿಂದಕ್ಕೆ ಓಡಿಸಿದ್ದರಂತೆ. ಆದರೆ ಅಮಲ್ದಾರರ ಹೆಂಡತಿಗೆ ತೀವ್ರ ಕಾಯಿಲೆಯದುದರಿಂದ ಇದು ತಮ್ಮ ತಪ್ಪಿನ ಫಲವೆಂದಬುದಾಗಿ ಅರಿತು ಅಮಲಾಪಪುರದವರೆಗೆ ಹೋಗಿದ್ದ ಸ್ವಾಮಿಗಳನ್ನು ವಾಪಾಸು ಕರೆಸಿದರಂತೆ. ಸ್ವಾಮಿಗಳು ಗುಡಿಯ ಬಳಿ (ಗೋರಿ) ಬಂದು ಶಂಖ ಊದಿದ ಕೂಡಲೆ, ಹಾಕಿದ್ದ ಬಾಗಿಲ ಬೀಗ ಕಳಚಿ ಬಿತ್ತು. ಮತ್ತು ಗುಡಿಯೊಳಗಿನ ಮಾಂಸ ಗೂಲಾಬಿ ಹೂ ಆಯ್ತು ಎಂದು ಸ್ಥಳೀಯರು ಪವಾಡವೊಂದನ್ನು ವಿವರಿಸುತ್ತಾರೆ. ತುಂಬಾ ವಯಸ್ಸಾದ ಮಾಡ್ಯಾಳದಿಂದ ಸ್ವಾಮಿಗಳ ಜೊತೆ ಬಂದಿದ್ದ ಹಿರಿಯರೊಬ್ಬರು ರಜಾಕಾರರ ಹಾವಳಿಯಕಾಲದಲ್ಲಿ ಕೇವಲಹದಿಮೂರೇ ಜನ ಬಂದು ಜಾತ್ರೆ ನಡೆಸಿದ್ದಾಗಿ ವಿವರಿಸುತ್ತಾರೆ.

ಇಂಡಿಯಾದಲ್ಲಿ 'ಇಸ್ಲಾಂ' ಮುಸ್ಲಿಮೇತರರೊಂದಿಗಿನ ವಿಶಿಷ್ಟರೂಪು ಪಡೆದು ಕೊಂಡಿತು. ಇದಕ್ಕೆ ಮುಖ್ಯಕಾರಣ ಸೂಫಿಗಳು ಮುಕ್ತವಾಗಿ ಮುಸ್ಲಿಮೇತರ ವರ್ಗಗಳೊಡನೆ ಬೆರೆತದ್ದಾಗಿದೆ. ಸೂಫಿಜಂ ತಾತ್ವಿಕವಾಗಿ ಅರ್ಥಪೂರ್ಣತೆಯ ಕಾಲಘಟ್ಟವನ್ನು ಹಾದು ಕೇವಲ ಆಚರಣಾ ವಿಧಿಗಳಾಗಿ, ದರ್ಗಾಗಳು, ದರ್ಗಾಗಳಿಗೆ ಸಂಬಂಧಿಸಿದ ಧಾರ್ಮಿಕ ವಿಧಿಗಳಲ್ಲಿ ಪರ್ಯಾವಸಾನವಾದರೂ ಅದು ಇಸ್ಲಾಂ ಸಂಸ್ಕೃತಿಯನ್ನು ಅತ್ಯಂತ ಜನಪ್ರಿಯವಾಗಿ ಮುಸ್ಲಿಮೇತರ ಸಮುದಾಯಗಳಲ್ಲಿ ಪಸರಿಸಲು ಸಾಧ್ಯವಾಯಿತು. ಈಟನ್ ವಿವರಿಸುವಂತೆ ಕೇವಲ ಮಸೀದಿಗಳ ಸುತ್ತಲೇ ಇದ್ದ ಇಸ್ಲಾಂ ಸಂಸ್ಕೃತಿಯನ್ನು ದರ್ಗಾಗಳ ಸಮೀಪಕ್ಕೆ ತಂದು ಅದನ್ನು ಇಂದಿಗೂ ಜೀವಂತವಾಗಿಡಲು ಸೂಫಿಗಳು ನಿರ್ವಹಿಸಿದ ಭೂಮಿಕೆ ಮಹತ್ವದ್ದಾಗಿದೆ.[೧೦]

ದರ್ಗಾಗಳು ಹೇಗೆ ರೂಪುಗೊಂಡವು ಎಂಬುದನ್ನು ಅರ್ಥಮಾಡಿಕೊಂಡರೆ ಪ್ರಸ್ತುತ ಅಸ್ತಿತ್ವದಲ್ಲಿರುವ ಆಚರಣೆಗಳ ಹಿಂದಿನ ಉದ್ದೇಶಗಳು ಸ್ಪಷ್ಟವಾಗುತ್ತವೆ. ಸೂಫಿಗಳ ಉಪದೇಶ ಮಂದಿರಗಳನ್ನೊಳ (ಕಾನ್ ಕಾಗಳು) ಗೊಂಡಂತೆ ಅಥವಾ ಅದರ ಸಮೀಪದಲ್ಲಿ ದರ್ಗಾಗಳನ್ನು ನಿರ್ಮಿಸಿಕೊಂಡು ಸೂಫಿಗಳು ಮುಸ್ಲಿಮೇತರ ಸಮುದಾಯಕ್ಕೆ ಅವೇ ಒಂದು ಸಂಸ್ಥೆಯಾಗುವಂತೆ ವ್ಯವಸ್ಥೆ ಮಾಡಿದರು. ಸಮಾಧಿಯೊಳಗಿದ್ದ ಸಂತನ ಭೌತಿಕ ಕಾಯವು ತನ್ನೊಂದಿಗೆ 'ಬರ್ಕತ್ ' ಅನ್ನು ಇಟ್ಟುಕೊಂಡಿರುವುದಾಗಿ (ಬರ್ಕತ್ =ಉದ್ಧಾರದ ಗುಣ) ನಂಬಿಕೆಯಿದ್ದುದರಿಂದ ಸಮಾಧಿಯೊಳಗಿದ್ದ ಸೂಫಿಗಳು ಪುನಃ ಸಂತರಾಗಿ ಹೊಸ ರೂಪು ಪಡೆದು

ಕೊಂಡರು. ಅಯಸ್ಕಾಂತವೊಂದು ಕಬ್ಬಿಣದ ರಜಗಳನ್ನು ಅಗೋಚರವಾಗಿ ಆಕರ್ಷಿಸುವಂತೆ ಈ ಸೂಫಿಗಳಲ್ಲಿರಬಹುದಾದ ಆತ್ಮಿಕ ಶಕ್ತಿಗೆ ವಿಶಾಲ ಜನಸಮುದಾಯವು ಆಕರ್ಷಿತಗೊಂಡಿತು ಎಂಬುದಾಗಿ ಈಟನ್ ವಿವರಿಸುತ್ತಾರೆ. ತಾತ್ವಿಕ ಸೈದ್ಧಾಂತಿಕ ವಿವಸರಣೆಗಳಿಂದ ತುಂಬಿರುತ್ತದ್ದ ಸೂಫಿ ಕಾವ್ಯಗಳು, ಸೂಫಿ ಚರಿತ್ರೆಗಳು ದರ್ಗಾದಂತಹ ಸಂಸ್ಥೆಗಳು ರೂಪುಗೊಂಡಾಗ ಅವುಗಳ ಸಾಹಿತ್ಯಿಕ ರೂಪು ಮಾರ್ಪಾಡು ಗೊಂಡು ಸಾಮಾನ್ಯ ಜನರಿಗೆ ತಲುಪುವಂತಾಯಿತು. ಇಸ್ಲಾಂ ಮೂಲದ ದೈವಿಕ ನಂಬಿಕೆ, ಅಧ್ಯಾತ್ಮಿಕತೆಯನ್ನು ವಸ್ತುವಾಗುಳ್ಳ ಹಾಡುಗಳು ಸರಳವಾಗಿ, ಜನಸಾಮಾನ್ಯರ ಆಡು ಮಾತಿನಲ್ಲಿ ರಚನೆಗೊಂಡು ಪ್ರಚಲಿತಕ್ಕೆ ಬಂದವು. ಸೂಪಿಗಳು ಇಲ್ಲವೆ ಸೂಫಿ ಸಂಸ್ಥೆಗಳ ಉತ್ತರಾಧಿಕಾರಿಗಳಿಂದ ರಚನೆಗೊಂಡ ಈ ಹಾಡುಗಳು ಸ್ಥಳೀಯ ಪ್ರತಿಮೆ, ರೂಪಕ, ಜಾನಪದ ರೀತಯ ಗುಣಗಳಿಂದಾಗಿ ಅತ್ಯಂತ ಜನಪ್ರಿಯ ಗೋಂಡವು. ನಿದರ್ಶನಕ್ಕೆ ದಖನಿ ಭಾಷೆಯ ಇಂತಹ ಗೀತೆಗಳನ್ನು 'ಚಕ್ಕೀನಾಮಾ' (ಬೀಸುವ ಹಾಡುಗಳು) ಚರಕಾನಾಮ (ನೇಯ್ಗೆಯ ಪದಗಳು), ಲೋರಿನಾಮ (ಜೋಗುಳ ಹಾಡುಗಳು), ಶಾದಿನಾಮ (ದಿಬ್ಬಣದ ಹಾಡುಗಳು) ಮತ್ತು ಸುಹಾಗನ್ ನಾಮಾ (ಮುತ್ತೈದೆ ಪದಗಳು). ಹಾಡುಗಳು ಕನ್ನಡದಲ್ಲಿ ಪ್ರಚಲಿತದಲ್ಲಿದ್ದ ಜನಪದಸಾಹಿತ್ಯದ ಪ್ರಕಾರಗಳಿಂದಲೇ ಜನ್ಮತಾಳಿದವುಗಳಾಗಿವೆ. ಈಟನ್ ನ ಈ ಬಗೆಗಿನ ವಿವರಣೆಯು ಅತ್ಯಂತ ಮಹತ್ವದ್ದಾಗಿದೆ.

'ದಖನ್' ಪ್ರಸ್ಥಭೂಮಿಯ ಅನಕ್ಷರಸ್ಥ ಜನಪದರಲ್ಲಿ ದಖನಿ ಜನಪದ ಸಾಹಿತ್ಯವನ್ನು ಬಿತ್ತುವಲ್ಲಿ ಸೂಫಿಗಳು ವಿಶೇಷ ಶ್ರಮ ವಹಿಸಿದ್ದಾರೆ. ದಖನಿಯ ಜನಪದ ಸಾಹಿತ್ಯದ ಸ್ವರೂಪವು ಸಹ ಇದನ್ನು ಸ್ಪಷ್ಟಪಡಿಸುತ್ತದೆ. ನೂಲುವಾಗ, ಬೀಸುವಾಗ ಹಾಡುಗಳನ್ನು ಹಾಡುಬೇಕು ಎಂಬ ಕಲ್ಪನೆಯು ಸೂಫಿಗಳಿಂದಲೇ ಹುಟ್ಟಲಿಲ್ಲ. ಆದಕ್ಕೆ ಪೂರ್ವದಲ್ಲಿಯೇ ಮರಾಠಿ ಮತ್ತು ಕನ್ನಡದ ಮೌಖಿಕ ಪರಂಪರೆಯಲ್ಲಿ ಬೀಸುವ, ನೂಲುವ,ಸಂಧರ್ಭಗಳಲ್ಲಿ ಹಾಡುವ ಹಾಡುಗಳಿದ್ದವು. ಸೂಫಿಗಳು ಅವುಗಳ ಸಾಹಿತ್ಯಕ ರೂಪ, ಪ್ರತೀಕ, ಪ್ರತಿಮೆಗಳನ್ನು ಉಪಯೋಗಿಸಿಕೊಂಡು ಮರಾಠಿ ಮತ್ತು ಕನ್ನಡ ಭಾಷೆಗಳಿಗೆ ಬದಲಾಗಿ ದಖನಿ ಭಾಷೆಯಲ್ಲಿ ಸಾಹಿತ್ಯ ರಚಿಸಿದರು.ಇಸ್ಲಾಂನ ಸಾರವನ್ನು ಸೂಫಿಗಳು ಈ ಸಾಹಿತ್ಯದ ಮೂಲಕ ಪ್ರಚುರ ಪಡಿಸಿದರು.

ಇಂತಹ ಪ್ರಕ್ರಿಯೆಯು ದಖನ್ನಿನ ಸಾಂಸ್ಕೃತಿಕ ಇತಿಹಾಸದ ವಿಕಾಸಕ್ರಮದಲ್ಲಿ ಪ್ರಮುಖ ಘಟ್ಟವೆಂಬುದಾಗಿ ಈಟನ್ ವ್ಯಾಖ್ಯಾನಿಸುತ್ತಾರೆ.[೧೧]

ದರ್ಗಾಗಳು ಮತ್ತವಕ್ಕೆ ಸಂಬಂಧಿಸಿದ ಆಚರಣೆಗಳು ಭಾರತದ ಜನಪದ ಇಸ್ಲಾಮಿನ ಸ್ಥಿತ್ಯಂತರಗೊಂಡ ರೂಪವಾದರೂ ಅದರ ಜೀವ ಸೆಲೆ ಇರುವುದು ಇಲ್ಲಿನ ಸಂಸ್ಕೃತಿಯ ನೆಲೆಯಲ್ಲಾಗಿದೆ. ಇಸ್ಲಾಂನ ನಂಬಿಕೆಗಳು, ಧಾರ್ಮಿಕ ವಿಧಿಗಳು ಸ್ಥಳೀಯ ಪರಿಭಾಷೆಯಲ್ಲಿ, ಸಂಸ್ಕೃತಿಯ ಆವರಣದಲ್ಲಿ ಜೀವ ಪಡೆದಾಗ ಅವು ಸಹಜವಾಗಿಯೇ ಎಲ್ಲ ಮನುಕುಲದ ಪ್ರೀತಿ,ಕರುಣೆ,ಮಾನವೀಯತೆಗಳೊಂದಿಗೆ ಏಕವಾಗಿ ಸ್ವಭಾವತಃ ಜಾತ್ಯಾತೀತ ಗುಣಗಳನ್ನು ಪ್ರಕಟಪಡಿಸುತ್ತವೆ. ಭಿನ್ನ ನಂಬಿಕೆಗಳ,ಸಂಪ್ರದಾಯಗಳ, ರೀತಿರಿವಾಜುಗಳ ಸಾಂಸ್ಕೃತಿ ಸಂಸರ್ಗದಲ್ಲಿ ಮೂಡುವುದು ಪ್ರೀತಿಯೇ ಹೊರೆತು ದ್ವೇಷವಂತೂ ಆಗಲಾರದು.

ಅಡಿಟಿಪ್ಪಣಿಗಳು

೧. ಕ್ರಿಶ್ಚಿಯನ್.ಡಬ್ಲ್ಯೂ.ಟ್ರಲ್ -'ಮುಸ್ಲಿಂ ಶ್ರೈನ್ಸ್, ಇನ್ ಇಂಡಿಯಾ' ಪು.೨೧೯

೨. ಅನುಬಂಧ ಎರಡು ನೋಡಿ

೩. ಕ್ರಿಶ್ಚಿಯನ್ ಡಬ್ಲ್ಯೂ.ಟ್ರಲ್ -'ಮುಸ್ಲಿಂ ಶ್ರೈನ್ಸ್ ,ಇನ್ ಇಂಡಿಯಾ' ಪು.೨೨೨

೪. ದಕ್ಷಿಣ ಭಾರತದ ದರ್ಗಾಗಳಲ್ಲಿ 'ಮೊಹರಂ' ಮತ್ತು 'ಊರುಸ್ ' ಗಳ ಸಂದರ್ಭದಲ್ಲಿ 'ಕಂದೂರಿ' ಹೆಸರಿನಲ್ಲಿ ಬಲಿಯ ಮಾಂಸದ ಅಡುಗೆಯನ್ನು ನೈವೇದ್ಯಮಾಡಿ ಭಕ್ತಿಯಿಂದ ಅರ್ಪಿಸಲಾಗುತ್ತದೆಯೆಂಬುದನ್ನು ಗಮನಿಸಬಹುದು.

೫. ವಿವರಗಳಿಗೆ ನೋಡಿ 'ಈಟನ್ 'ಅವರ ಸೂಫೀಸ್ ಆಫ್ ಬಿಜಾಪುರ್ ಪು. ೧೨-೨

೬. 'ಜೆಹಾರತ್ ' ಎಂದರೆ ಅರಬ್ಬಿ ಭಾಷೆಯಲ್ಲಿ 'ಪವಿತ್ರದರ್ಶನ' ಎಂಬರ್ಥವಿದೆ. ಪವಿತ್ರ ತೀರ್ಥ ಸೇವನೆಯೆಂಬ, ಮತ್ತು ಧರ್ಮ ವೀರರ ಸಮಾಧಿಯ ಮೇಲಿಡುವ ಹೂಗಳೆಂಬ ಅರ್ಥವಿದೆ. ಶವಸಂಸ್ಕಾರದ ನಂತರ ಮೂರನೆಯ ದಿನ ಸಮಾಧಿಯನ್ನು ಸಂದರ್ಶಿಸಿ, ಹೂಚೆಲ್ಲಿ 'ಕುರಾನಿನ' ಕೆಲವು ಸೂರಾಗಳನ್ನು ಪಠಿಸುವುದು ಜೆಹಾರತ್ ನದಿನ ಮಾಡುವ ಕಾರ್ಯ ಕ್ರಮವಾಗಿದೆ.

೭. ಸಸೇನ್ ಬ್ಯಾಲಿ, -'ಸೇಂಟ್ಸ್ ಗಾಡೆಸೆಸ್ ಅಂಡ್ ಕಿಂಗ್ಸ್ ' ಪು.೧೪೬

೮. ಸುಲೇಮಾನ್ ಸಿದ್ಧಿಕಿ. -'ಬಹಮನಿ ಸೂಫೀಸ್ ' ಪು. ೬೩

೯. ಅದೇ ಪು. ೬೫

೧೦. ಈಟನ್ -'ಸೂಫೀಸ್ ಆಫ್ ಬಿಜಾಪುರ್ ' ಪು ೧೭೪

೧೧. ಅದೇ ಪು. ೧೬೯

ಅಧ್ಯಾಯ -- ೪

ಮೊಹರಂ

೪.೧ ಹಿನ್ನಲೆ:

ಇರಾನ್ ಇರಾಕಿನ ಮೂಲದ 'ಮೊಹರಂ' ದಕ್ಷಿಣ ಭಾರತದ ಅದರಲ್ಲೂ ಕರ್ನಾಟಕ ಮತ್ತು ಆಂಧ್ರುದ ಗಡಿಯುದ್ದಕ್ಕೂ ವಿಶಿಷ್ಟವಾಗಿ ಆಚರಿಸುವ ಹಬ್ಬವಾಗಿದೆ. ಈ ಭಾಗದ ಬಹುಸಂಖ್ಯಾತ ಹಿಂದೂಗಳಿಗೆ ದೀಪಾವಳಿ, ಯುಗಾದಿ ಸಂಕ್ರಾಂತಿಗಳಷ್ಟೆ ಮಹತ್ವದ ಹಬ್ಬ ಈ ಮೊಹರಂ. ಮೊಹರಂನ ಆಚರಣೆಯನ್ನು ಅದರ ಮೂಲ ಸ್ವರೂಪದಲ್ಲಿ ಗಮನಿಸುವುದಾದರೆ ಅದು ಶೋಕಾಚರಣೆಯಾಗಿದ್ದು ಅದನ್ನು ಇಲ್ಲಿನ ಪರಿಭಾಷೆಯಲ್ಲಿ ಹಬ್ಬವೆಂದು ಕರೆಯಲಾಗಿದೆ.

'ಮೊಹರಂ' ಅರಬ್ಬಿ ಭಾಷೆಯ ಪದವಾಗಿದೆ. ಹಿಜರಿ ಸಂವತ್ಸರದ ಮೊದಲನೆಯ ತಿಂಗಳೇ ಮೊಹರಂ ತಿಂಗಳಾಗಿದೆ. ಈ ಪದಕ್ಕೆ 'ನಿಷಿದ್ಧವಾದದ್ದು' ವರ್ಜಿತವಾದದ್ದು ಎಂಬರ್ಥವಿದೆ. 'ಇಸ್ಲಾಂ' ಧರ್ಮದ ಹುಟ್ಟಿಗೆ ಮುಂಚೆ ಈ ತಿಂಗಳಲ್ಲಿ ಯುದ್ಧ ಮತ್ತು ರಕ್ತಪಾತ ನಿಷಿದ್ಧವಾಗಿತ್ತು. ಇದರ ಮತ್ತೊಂದು ಹೆಸರು 'ಸೈಯದ್ ಅಶಹರ್' (ಎಲ್ಲ ತಿಂಗಳು ರಾಜ) 'ಮೊಹರಂ' ಆಚರಣೆಗೆ ಕಾರಣವಾದಂತೆ ಈ ತಿಂಗಳಲ್ಲಿ ಹಜರತ್ ಇಮಾಮ್ ಹುಸೈನ್ ಹುತಾತ್ಮರಾದರು. ಈ ಕಾರಣಕ್ಕಾಗಿ ಮೊಹರಂ ತಿಂಗಳು ಅಶುಭ ಮತ್ತು ದುಃಖದಾಯಕವೆಂದು ಭಾವಿಸಲ್ಪಟ್ಟಿದೆ.[೧] ಸಂಕ್ಷಿಪ್ತವಾಗಿ ಇದರ ಹಿನ್ನೆಲೆಯನ್ನು ಪರಿಶೀಲಿಸಬಹುದು.

ಕ್ರಿ.ಶ. ೬೩೨ರಲ್ಲಿ ಹಜರತ್ ಮಹಮ್ಮದ್ ಪೈಗಂಬರ್ ಕಾಲವಾದರು. ಅವರ ನಂತರ ಧರ್ಮ ಗುರುವಿನ ಸ್ಥಾನಕ್ಕೆ ಯಾರು ಬರಬೇಕೆಂಬುದಕ್ಕೆ ಭಿನ್ನಾಭಿಪ್ರಿಯ ಶುರುವಾಯಿತು. ಮೊದಲನೆಯ ವರ್ಗವೊಂದರ ಪ್ರಕಾರ ಬಹುಮತದಿಂದ ಆರಿಸಲ್ಪಡುವವರು ಖಲೀಫರಾಗಬೇಕೆಂಬುದಾಗಿತ್ತು. ಅದರಂತೆ ಹಜರತ್ ಅಬೂಬಕರ್ ಹ ಉಮರ್ ಹ. ಉಸ್ಮಾನ್ ಮತ್ತು ಅಲೀ ಖಲೀಫರಾದರು.

ಎರಡನೆಯ ವರ್ಗವೊಂದರ ಅಭಿಪ್ರಾಯದಂತೆ ಖಲೀಪರಾಗಲು ನಿಜವಾದ ಅರ್ಹತೆ ೪ನೆಯ ಖಲೀಫ ಹಜರತ್ ಅಲೀಯವರಿಗೆ ಸೇರಿದುದಾಗಿದೆ. ಈ ವರ್ಗದ ಜನ ಮೊದಲ ಮೂರು ಮಂದಿಯನ್ನು ಖಲೀಫರೆಂದು

ಒಪ್ಪುವುದಿಲ್ಲ. ಇವರನ್ನು 'ಶಿಯಾ' ಅನ್ನುತ್ತಾರೆ. ಶಿಯಾ ಅಂದರೆ ಸಮುದಾಯ ಎಂಬರ್ಥ ಬರುತ್ತದೆ. ಮಹಮ್ಮದ್ ಪೈಗಂಬರರ ನಂತರ ಖಲೀಫರ ಸ್ಥಾನಕ್ಕೆ ಭಿನ್ನಾಭಿಪ್ರಾಯ ಬಂದ ಈ ಎರಡು ವರ್ಗಗಳಲ್ಲಿ ವಂಶ ಪಾರಂಪರ್ಯ ದ್ವೇಷವಿತ್ತು. ಎರಡನೆಯ ವರ್ಗವನ್ನು ಶಿಯಾ ಎಂದು ಕರೆದಂತೆ ಮೊದಲನೆಯ ಪಂಗಡವನ್ನು ಸುನ್ನಿಗಳೆಂದು ಕರೆಯಲಾಗುತ್ತದೆ. ಸುನ್ನಿಗಳು ಆರಂಭದ ಇಸ್ಲಾಂ ಧರ್ಮದ ಹರಡುವಿಕೆಯ ಕೇಂದ್ರ ಪ್ರದೇಶದಲ್ಲಿದ್ದವರೂ ಮತ್ತು ಮಹಮ್ಮದ್ ಪೈಗಂಬರರ ಪ್ರಭಾವ ಮತ್ತು ಜನಪ್ರಿಯತೆಗೆ ಮಣಿದು ಇಸ್ಲಾಂ ಅನ್ನು ಸ್ವೀಕರಿಸಿದವರಾಗಿದ್ದರು. ಗಮನಿಸಬೇಕಾದ ಅಂಶವೆಂದರೆ ಮಹಮ್ಮದ್ ಪೈಗಂಬರರನ್ನೊಳಗೊಂಡಂತೆ ಇಸ್ಲಾಂ ಧರ್ಮ ಸ್ವೀಕರಿಸಿದ ಕ್ರಮೇಣ ಸುನ್ನಿಗಳೆಂದು ಕರೆಯಿಸಿಕೊಂಡವರೂ ಸಹ ಪ್ರದೇಶಿಕವಾಗಿ ಒಂದೇ ಬುಡಕಟ್ಟಿಗೆ, ವಂಶಕ್ಕೆ ಸೇರಿದರಾಗಿದ್ದುದ್ದು ಇವರ ವಂಶವೃಕ್ಷವನ್ನು ಈ ಕೆಳಗಿನಂತೆ ತೋರಿಸಬಹುದಾಗಿದೆ.

'ಕುರೈಸ್' ವಂಶ

ಹಾಶಿಮ್ — ಉಮ್ಮೈಯಾ

ಬನೀ ಹಾಶಿಮ್ — ಬನೀ ಉಮ್ಮೈಯಾ

ಮಹಮ್ಮದ್ ಪೈಗಂಬರ್

ಬೀಬಿ ಪಾತಿಮಾ

(ಮ. ಪೈಗಂಬರ್ ರ ಮಗಳು ಮತ್ತು
ಹ. ಅಲಿಯ ಸತಿ. ಹ. ಅಲಿಯೂ
ಕೂಡ ಕುರೈಶ್ ವಂಶದವನಾಗಿದ್ದ)

ಹಸನ್ — ಹುಸೇನ್

(ಮೊಹರಂನ ಬಲಿದಾನದ ವೀರ)

ಮಹಮ್ಮದ್ ಪೈಗಂಬರರ ನಂತರದಲ್ಲಿ ಹಜರತ್ ಅಬೂಬಕರ್ ಎನ್ನುವವರು ಎರಡು ವರ್ಷಗಳ ಕಾಲ ಖಲೀಫರಾಗಿದ್ದು ತೀರಿಕೊಂಡರು. ಇವರ ನಂತರ ಹಜರತ್ ಉಮರ್ ಖಲೀಫರಾದರು. ಹನ್ನೊಂದು

ವರ್ಷಗಳ ಕಾಲ ಖಲೀಫರಾದ ಇವರಿಗೆ ಬನೀ ಹಾಶೀಮ್, ಬನೀ ಉಮ್ಮೆಯಾ (ವಂಶ ವೃಕ್ಷದಲ್ಲಿ ತೋರಿಸಿರುವಂತೆ) ಪಂಗಡಗಳೊಂದಿಗೆ ಯಾವುದೇ ರೀತಿಯ ಸಂಬಂಧವಿರಲಿಲ್ಲ. ಇದಾದ ನಂತರ ಉಮ್ಮೆಯಾ ಪಂಗಡಕ್ಕೆ ಸೇರಿದ ಹಜರತ್ ಉಸ್ಮಾನರು ಹನ್ನೆರಡು ವರ್ಷಗಳ ಕಾಲ ಖಲೀಫರಾದರು. ಕ್ರಿ. ಶ. ೬೫೬ರಲ್ಲಿ ಇವರು ತೀರಿಕೊಂಡಾಗ ಕೆಲವರು ಬನೀ ಹಾಶಿಮ್ ವಂಶಕ್ಕೆ ಸೇರಿದ ಹಜರತ್ ಅಲಿಯುವರನ್ನು ನಾಲ್ಕನೆಯ ಖಲೀಫರಾಗಿ ಆರಿಸಿದರು. ಉಮ್ಮೆಯಾ ಪಂಗಡದ 'ಮು ಆವಿಯಾ' ಇದನ್ನೊಪ್ಪಲಿಲ್ಲ. ಪ್ರತಿಯಾಗಿ ಎರಡೂ ಪಂಗಡಗಳ ನಡುವೆ ಸಂಘರ್ಷವೇರ್ಪಟ್ಟಿತು. ಕೊನೆಗೆ ಒಪ್ಪಂದಕ್ಕೆ ಬಂದು ಶಿರಿಯಾ ಮತ್ತದರ ಪಶ್ಚಿಮಕ್ಕಿರುವ ಭಾಗವನ್ನು 'ಮುಆವಿಯಾ 'ಆಳಬೇಕೆಂದೂ, ಪೂರ್ವವಿಭಾಗ ಹಜರತ್ ಅಲಿಯ ಅಧೀನದಲ್ಲಿರ ಬೇಕೆಂದೂ ತೀರ್ಮಾನವಾಯಿತು.

ಆದರೆ ಕ್ರಿ.ಶ. ೬೬೧ರಲ್ಲಿ ಇರಾಕಿನ ಯೂಫ್ರಟಿಸ್ ನದಿಯ ದಡದಲ್ಲಿರುವ 'ಕೂಫಾ' ನಗರದಲ್ಲಿ ಹಜರತ್ ಅಲಿಯ ಕೊಲೆಮಾಡುವ ಉದ್ದೇಶದಿಂದ ಆಕ್ರಮಣ ನಡೆಯಿತು. ಆಕ್ರಮಣದ ಎರಡು ದಿನಗಳ ನಂತರ ಅವರ ಬಲಿದಾನವಾಯಿತು. ಅವರ ಸ್ಥಾನಕ್ಕೆ ಅವರ ಪುತ್ರ ಹಸನ್ನನನ್ನು ಬಹುಮತದಿಂದ ಆರಿಸಿದರು. ಇದಕ್ಕೂ ಒಪ್ಪದ 'ಮುಆವಿಯಾ' ಯುದ್ಧಸಾರಿದ.ಹಸನ್ ಶಾಂತಿ ಪ್ರಿಯ ವ್ಯಕ್ತಿಯಾಗಿದ್ದು ರಕ್ತಪಾತವನ್ನು ಬಯಸದ ಫಲವಾಗಿ ಹಸನ್ನರ ಹತ್ತಿರ ಸಂಬಂಧಿಕರನ್ನು ಖಲೀಫರನ್ನಾಗಿ ಮಾಡುವುದೆಂದು ಒಪ್ಪಂದವಾಯಿತು. ಈ ಒಪ್ಪಂದವಾದ ಆರುತಿಂಗಳೊಳಗೆ ಹಸನ್ನರು ತೀರಿಕೊಂಡರು. ಕ್ರಿ.ಶ. ೬೮೦ರಲ್ಲಿ ಮುಆವಿಯಾ ಕೂಡ ತೀರಿಕೊಂಡನು. ಒಪ್ಪಂದದಂತೆ ಹಸನ್ನರ ತಮ್ಮನಾದ ಹುಸೇನನಿಗೆ ಖಿಲಾಫತ್ ಪದವಿ ದೊರಕಬೇಕಾಗಿತ್ತು. ಖಿಲಾಫತ್ ಪದವಿಗೆ ಬಹುಮತದಿಂದ ಆಯ್ಕೆ ನಡೆಯುತ್ತಿದ್ದುದು ಮುಆವಿಯಾ ಕಾಲಕ್ಕೆ ಪರಂಪರಾಗತ ಪದವಿಯಾಗಿ ಮಾರ್ಪಟ್ಟಿತು. ಮುಆವಿಯಾ ನಂತರ ಆತನ ಮಗ ಯುಜೀವ್ ಹುಸೇನರ ಅಳಿದುಳಿದ ಹಕ್ಕನ್ನು ಕಸಿದುಕೊಂಡು ಇಸ್ಲಾಂ ಜನಾಂಗಕ್ಕೆ ಖಲೀಫನಾದ.

ಇದಾದ ಸ್ವಲ್ಪದಿನಗಳ ಬಳಿಕ ಇರಾಕ್ ನ ನಿವಾಸಿಗಳು ಹುಸೇನರನ್ನೆ ಖಲೀಫರನ್ನಾಗಿಸುವ ನಿರ್ಧಾರ ತಳೆದು 'ನಾವು ನಿಮ್ಮನ್ನು ನಮ್ಮ ಖಲೀಫರನ್ನಾಗಿ ಮಾಡುಬಯಸುತ್ತೇವೆ. ಅಂತೆಯೇ ತಾವು ಇಲ್ಲಿಗೆ ದಯ

[illegible]

[illegible]

[illegible]

ಮಾಡಿಸಬೇಕು. ಎಂಬ ಸಂದೇಶ ಕಳುಹಿದರು. ಹುಸೇನರು ಸಂಸಾರ ಸಮೇತ ಹತ್ತಿರದ ಬಂಧುಗಳನ್ನೊಳಗೊಂಡು ಮೆಕ್ಕಾದಿಂದ ಕೂಫಾ ನಗರಕ್ಕೆ ಹೊರಟರು. ದಾರಿಯಲ್ಲಿಯೇ ಬರುವ 'ಕರ್ಬಲಾ' ನಗರವನ್ನು ಮೊಹರಂ ನ ಒಂದನೇ ತಾರೀಖು ತಲುಪಿದರು. ಹುಸೇನರು ಸಂಸಾರ ಸಮೇತ ಕರ್ಬಲಾ ಮೈದಾನದ ಬಿಡಾರದಲ್ಲಿದ್ದಾಗ ಸೈನ್ಯಮುತ್ತಿಗೆ ಹಾಕಿತು. ಮುತ್ತಿಗೆ ಬಲಗೊಂಡು ಹುಸೇನರ ಕಡೆಯವರಿಗೆ ನೀರೂ ಸಹ ಸಿಕ್ಕದಾಯಿತು. ಕಡೆಗೆ ಧರ್ಮ ಯುದ್ಧ ಮಾಡುವುದೆಂದು ನಿರ್ಣಯಿಸಿ ದ್ವಂದ್ವ ಯುದ್ಧದಲ್ಲಿ ತೊಡಗಿದರು. ದ್ವಂದ್ವ ಯುದ್ಧದಲ್ಲಿ ಯುಜೀದನ ಕಡೆಯ ಸೈನಿಕರು ಬಹುಸಂಖ್ಯೆಯಲ್ಲಿ ಕೊಲ್ಲಲ್ಪಟ್ಟರು. ಧರ್ಮಯುದ್ಧದಂತೆ ನಡೆದರೆ ತಮಗೆ ಉಳಿಗಾಲವಿಲ್ಲವೆಂದು ಬಗೆದ ಯುಜೀದನ ಕಡೆಯವರು ಅಧರ್ಮಯುದ್ಧಕ್ಕೆ ತೊಡಗಿ ಹುಸೇನರನ್ನೊಳಗೊಂಡಂತೆ ಅಲ್ಲಿ ಬಿಡಾರದಲ್ಲಿದ್ದವರನ್ನೆಲ್ಲ ಅಕ್ರಮವಾಗಿ ಕೊಲೆಗೈದರು. ಈ ಬಲಿದಾನದಿಂದಾಗಿ ಹುಸೇನರು 'ಸೈಯದ್ ಶುಹದಾ '(ಹುತಾತ್ಮರಾಜ) ಮತ್ತು 'ಶಹೀಲ್ ಅಜಮ್ ' (ಶ್ರೇಷ್ಠಹುತಾತ್ಮ) ಎಂಬುದಾಗಿ ಪ್ರಸಿದ್ಧಿಗೆ ಬಂದರು[೭].

ಇರಾಕ್ ನ ಕರ್ಬಲಾ ಪ್ರದೇಶದಲ್ಲಿ ಮೊಹರಂ ತಿಂಗಳು ನಡೆದ ಬಲಿದಾನಕ್ಕೆ ಸಂಬಂಧಿಸಿದ ಪ್ರಮುಖ ಘಟನೆಗಳು ಹೀಗಿವೆ.

೧ನೇ ತಾರೀಖು ಕರ್ಬಲಾದಲ್ಲಿ ಹುಸೇನರು ಸಿಕ್ಕಿ ಬಿದ್ದುದು(ಮೊಹರಂನ ಆರಂಭ)

೭,೮,೯ನೆಯ ತಾರೀಖಿನ ದಿನಗಳಲ್ಲಿ ನೀರುಸಿಕ್ಕದಿರುವುದು

೯,೧೦ನೇ ತಾರೀಖುಗಳ ನಡುವಣ ರಾತ್ರಿ ಕೊಲೆಯ ರಾತ್ರಿಯಾಗಿತ್ತು. ಈ ರಾತ್ರಿ ಹುಸೇನರು ಸಂಗಡಿಗರಿಗೆ ಧರ್ಮೋಪದೇಶ ಮಾಡಿದ್ದರು.

ಈ ದುರಂತ ನಡೆದ ತರುವಾಯ 'ಮೊಹರಂ' ನ ಮೂಲ ಅರ್ಥ 'ವರ್ಜಿತ' 'ನಿಷಿದ್ಧ'ಪ್ರಯೋಗ ತಪ್ಪಿ 'ಶೋಕ' ಎಂಬರ್ಥ ರೂಢಿಗೆ ಬಂದಿತು. ಈ ಘಟನೆಯಾದ ೪೦೦ ವರ್ಷಗಳವರೆಗೆ ಬಾಗ್ ದಾದಿನ

ಖಲೀಫರ ಪ್ರಭುತ್ವ ಪ್ರಬಲವಾಗಿತ್ತು. ಭಯದಿಂದ ಶೀಯಾಗಳು ಶೋಕ ಪ್ರದರ್ಶಿಸಲು ಹಿಂಜರಿಯುತ್ತಿದ್ದರು. ೧೧ನೆಯ ಶತಮಾನದಲ್ಲಿ ಬಗದಾದಿನ ರಾಜ ಮನೆತನದ ಪತನದ ನಂತರ ಶಿಯಾ ಜನರು ರಾಜಕೀಯವಾಗಿ ಪ್ರಾಮುಖ್ಯತೆ ಗಳಿಸಿ ಕೊಂಡರು. ಬೂಯಾ ರಾಜ್ಯದ ಸಮಯದಲ್ಲಿ ಅಂದರೆ ೧೧೦ನೆಯ ಇಸವಿಯಲ್ಲಿ ಶೋಕವನ್ನಾಚರಿಸುವ ಪದ್ಧತಿ ರೂಢಿಗೆ ಬಂತು.[೨]

ಆರಂಭದಲ್ಲಿ ಜನರು ಅಂಗಡಿ ಬೀದಿಗಳಲ್ಲಿ ಕಪ್ಪು ಕಂಬಳಿಯನ್ನು ಹೆಗಲ ಮೇಲೆ ನೇತಾಡಿಸಿಕೊಂಡು ಅಳುತ್ತಿದ್ದರು.[೩] ನಂತರ ಶೋಕ ಪ್ರದರ್ಶಿಸುವ ಬೇರೆ ವಿಧಾನಗಳು ಹುಟ್ಟಿಕೊಂಡವು.

ಇಸ್ಲಾಂನೊಂದಿಗೆಯೇ ಮೊಹರಂ ಸಹ ಭಾರತದಲ್ಲಿ ಪ್ರವೇಶ ಪಡೆಯಿತು. ಮುಸ್ಲಿಮೇತರರು ಸೂಫಿಗಳತ್ತ ಆಕರ್ಷಿತರಾಗಿ ಇಸ್ಲಾಂನ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗುತ್ತಲೇ ಮೊಹರಂ ಅನ್ನು ಸಹ ವಿಶಿಷ್ಟವಾಗಿ ಆಚರಿಸತೊಡಗಿದರು. ಪ್ರಸ್ತುತ ಮೂಲದ ವರ್ತಮಾನದಲ್ಲಿಯೂ ಸಹ ಚಾಚೂ ತಪ್ಪದೆ ಮೂಲದ ಆಚರಣೆಯ ವಿವರಗಳು ಉಳಿದುಕೊಂಡು ಬಂದಿದ್ದು ಅವು ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಜೀವಂತವಾಗಿ ಬೆಸೆಯುವ ಕೊಂಡಿಗಳಾಗಿವೆ. ಮೊಹರಂನ ಆಚರಣೆಯ ಕುರಿತಂತೆ ಅದರ ಹಿನ್ನಲೆಯ ವಿವರಗಳು ಬಹುತೇಕ ಜನರಿಗೆ ತಿಳಿದಿಲ್ಲ. ಅದರ ವಿವರಗಳು ಸುದೀರ್ಘ ಕಾಲಾವಧಿಯಲ್ಲಿ ವಿಸ್ಮೃತಿಗೆ ಸರಿದು, ಕೇವಲ ಆ ಪರಂಪರೆಯನ್ನು ಧಾರ್ಮಿಕ ನಿಷ್ಠೆಯಿಂದ ಪಾಲಿಸಿಕೊಂಡು ಹೋಗುವ ಇಚ್ಛೆಗೆ ಬದ್ಧರಾಗಿ ಮುಸ್ಲಿಮೇತರರು ಇದನ್ನು ಮುಂದುವರೆಸಿಕೊಂಡು ಬಂದಿರುತ್ತಾರೆ. ಇದೇ ಮಾತನ್ನು ಎಲ್ಲೆಡೆಗೂ ಅನ್ವಯಿಸಿ ಹೇಳಲು ಬಾರದು. ಯಾಕೆಂದರೆ ಮೊಹರಂನ ಆಚರಣೆಗಳಿಗೆ ಸಂಬಂಧಿಸಿದಂತೆ ಮೊಹರಂ ದಿನಗಳಲ್ಲಿ ಹಾಡಲಾಗುವ ಹಾಡು, ಕಥನ ಗೀತೆಗಳಲ್ಲಿ ಶೋಕಾಚರಣೆಗೆ ಸಂಬಂಧಿಸಿದ ಪ್ರತಿ ವಿವರಗಳು ಕಾಣ ಸಿಗುತ್ತವೆ. ಇದನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಪ್ರಜ್ಞಾಪೂರ್ವಕಾವಾಗಿಯೇ ಮುಸ್ಲಿಂ ಮತ್ತು ಮುಸ್ಲಿಮೇತರ ವರ್ಗಗಳೆಂಡರಲ್ಲೂ ಇಸ್ಲಾಂನ ಉದಾತ್ತ ಮೌಲ್ಯಗಳನ್ನು ಪ್ರತಿನಿಧಿಸುವ 'ಕರ್ಬಲಾ'ದ ಬಲಿದಾನದ ವೀರರನ್ನು ಸ್ಮರಿಸುವುದರ ಮೂಲಕ ಜಾತ್ಯಾತೀತತೆಯನ್ನು ಪ್ರಕಟಿಪಡಿಸುವುದೇ ಆಗಿದೆ. ಮತ್ತು ಮುಂದುವರೆದು ಹೇಳುವುದಾದರೆ ಈಗ ಮೊಹರಂ ಹೆಚ್ಚುಕಡಿಮೆ ಮುಸ್ಲಿಮೇತರರ ವಿಶಿಷ್ಟ ಆಚರಣೆ

(ಹಬ್ಬ)ಯಾಗಿದೆ. ದಸರೆ, ದೀಪಾವಳಿ, ಯುಗಾದಿಗಿಂತ ಮಹತ್ವದ ಹಬ್ಬವಾಗಿ ಪರಿವರ್ತನೆಗೊಂಡಿದೆ. 'ಮೊಹರಂ' ಅನ್ನು ಅದರ ಶೋಕಾಚರಣೆಯ, ಸ್ವರೂಪದಿಂದಾಗಿ ಹಬ್ಬವಾಗಿರದಿದ್ದರೂ ಕ್ರಮೇಣ ಹಬ್ಬದ ಎಲ್ಲ ಲಕ್ಷಣಗಳನ್ನೂ ರೂಢಿಸಿಕೊಂಡಿತು. ಬಹುಶಹ ಮುಸ್ಲಿಮೇತರರಲ್ಲಿ ಅದರಲ್ಲೂ ವೈದಿಕೇತರ ವರ್ಗಗಳಲ್ಲಿ ಪಿತೃಗಳ ಆತ್ಮಗಳನ್ನು ಪೂಜಿಸುವ, ತರ್ಪಣ ಕೊಡುವ ಆಚರಣೆಯಾಗಿ 'ಹಿರಿಯರ ಹಬ್ಬ' ರೂಢಿಯಲ್ಲಿದೆ. ಮೊಹರಂ ಸಹ ಹಬ್ಬವಾಗಿ ಪರಿವರ್ತನೆಗೊಂಡಿರುವುದು ಇಂತಹದುರ ಪ್ರೇರಣೆಯಾಗಿರುವಂತಿದೆ.ಒಟ್ಟು ಹತ್ತು ದಿನಗಳ ಕಾಲ ನಡೆಯುವ ಮೊಹರಂನ ಆರಂಭ ಮಸೀದಿಯ ಮುಂದಿನ ಅಲಾಯಿ (ಅಲಾವಿ) ಕುಣಿತೋಡುವುದರೊಂದಿಗೆ ಆರಂಭವಾಗುತ್ತದೆ. ಅಲ್ಲಿಂದಲೆ ಹಬ್ಬದ ಸಂಭ್ರಮ ಗರಿಬಿಚ್ಚುತ್ತದೆ. ಇದಕ್ಕೆ ಗುದ್ದಲಿ ಹಾಕುವುದು ಎನ್ನುತ್ತಾರೆ.

ಆರು ಮಂದಿ ತುರಕರು ಕೂಡಿ ವಾರೆಲಿ ಚಂದಪ್ಪನ ನೋಡಿ
ಗುದ್ದಾಲಿ ಹಾಕೋ ಸಡಗಾರ ಯಮ ಹೊನ್ನೂರುಸ್ವಾಮಿ
ಗುದ್ದಲ್ಹಾಕ ಸಡಗಾರ || ಯಮ ||
ಹತ್ತು ಮಂದಿ ತುರಕರು ಕೂಡಿ ವಾರೆಲಿ ಚಂದಪ್ಪನ ನೋಡಿ
ಹಲಗೀಯ ಸಬೂದ ದಿಮಿ ದಿಮಿ[1]

ಮೊಹರಂನ ಸಿದ್ಧತೆ ಅದನ್ನು ಮುಸ್ಲಿಮೇತರರು ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳು ಆಚರಿಸುವ ಬಗೆಯನ್ನು ಈ ಹಾಡು ವಿವರಿಸುತ್ತದೆ. ಮುಸ್ಲಿಂ ಬಾಂಧವರೊಡಗೂಡಿ ಗುದ್ದಲಿ ಹಾಕುವುದು ಸಡಗರದ ವಿಷಯವಾಗಿದೆ. ಈ ಹಾಡಿನೊಳಗೆ ಬರುವ 'ಕುದೂರಿ' ಬುಕ್ಕಿಟ್ಟು ಮಾಲದಿ, ಮುಂಪಾಸು ಹಚ್ಚಡ, ಗಂಧ, ದರ್ಗಾ ಇವೆಲ್ಲ ದರ್ಗಾಗಳಲ್ಲಿ ಮತ್ತು ಮೊಹರಂನ ಮಸೀದಿಗಳಲ್ಲಿ ಬಳಸುವ ಪರಿಕರಗಳಾಗಿವೆ. ಗುದ್ದಲಿ ಹಾಕಿದ ನಂತರ ಮಸೀದಿಯೊಳಗೆ ಕೂಡಿಸುವ ಪಂಜಾಗಳು, ಅವುಗಳ ಮೇಲಿನ ವಸ್ತ್ರಗಳನ್ನು 'ತೆಳ್ಳಾನೆ ನೀರಿಗೆ ಬೆಳ್ಳಾನೆ ಕೊಲ್ಲೀಗೆ (ಕಲ್ಲಿಗೆ), ಹೊಗೆದು ಸ್ವಚ್ಛಗೊಳಿಸುವ ವಿವರವಿದೆ. 'ಮೊಹರಂ'ನ ಪೂಜಾ ವಿಧಿಯು 'ಶಿವಪೂಜೆ' ಯಂತಿರುವುದಾಗಿದೆ ಎಂಬುದಾಗಿ ಈ ಹಾಡು ವಿವರಿಸುತ್ತದೆ.(ವಿವರಗಳಿಗೆ ಇದೇ ಅಧ್ಯಾಯದ

'ಮೊಹರಂ ಹಾಡುಗಳ' ವಿಶ್ಲೇಷಣೆಯ ಭಾಗ ನೋಡಿ).

ಮೊಹರಂನ ಸಂದರ್ಭದಲ್ಲಿ ಪಂಜಾಗಳನ್ನು ಮತ್ತು ತಾಚಿಯಾಗಳನ್ನು ಇಡುವ ಸ್ಥಳ ತಾತ್ಕಾಲಿಕವಾಗಿರಬಹುದು, ಇಲ್ಲವೆ ಶಾಶ್ವತವಾಗಿರಬಹುದಾಗಿದೆ. ಬಹುತೇಕ ಇವು ಶಾಶ್ವತವಾಗದ ಕಟ್ಟಡಗಳಾಗಿರುವುದೇ ಹೆಚ್ಚು, ಇವುಗಳನ್ನು ಪೀರ್ಲ ಮಸೀದಿ, ಪೀರ್ಲ ಚಾವಡಿ ಮುಂತಾದ ಹೆಸರುಗಳಿಂದ ಕರೆಯುವುದು, ರೂಢಿ, ಪೀರ್ಲಭಾವಡಿಯ ಮುಂದಿನ 'ಅಲಾಯಿಕುಣಿ' (ಬೆಂಕಿಯ ಹೊಂಡ) ತೋಡಿದ ಮೂರುದಿನಕ್ಕೆ ಪಂಜಾಗಳಿರುವ ಪೆಟ್ಟಿಗೆ ಮೆರವಣಿಗೆಯ ಮೂಲಕ ಮಸೀದಿಗೆ ಬರುತ್ತದೆ. ಇಲ್ಲವೇ ಅದು ಮಸೀದಿಯಲ್ಲಿರುವುದಾದರೆ 'ಮಸೀದಿ' ಯಿಂದ ಊರಲ್ಲಿ ಮೆರವಣಿಗೆ ಹೊರಟು ವಾಪಾಸು ಮಸೀದಿಗೆ ಸೇರುತ್ತದೆ. ಪೆಟ್ಟಿಗೆಯೊಳಗಿರುವ ಪಂಜಾಗಳನ್ನು ಬಟ್ಟೆಗಳನ್ನು ಶುಭ್ರಗೊಳಿಸಿ ಆರುದಿನಗಳ ಕಾಲ ಮಸೀದಿಯಲ್ಲಿಡಲಾಗುತ್ತದೆ. ೭ ನೆಯ ದಿನ ಸಾಯಂಕಾಲ ಪ್ರತ್ಯೇಕ ಅಲಂಕಾರದೊಂದಿಗೆ ಮೆರವಣಿಗೆ ಹೊರಡುತ್ತವೆ. ಆ ದಿನದ ಮೆರವಣಿಗೆಯನ್ನು 'ಸಣ್ಣ ಸರಗಸ್ತಿ' ಎಂದು ಕರೆಯುತ್ತಾರೆ.

ಒಂದೊಂದು ಪಂಜಾವನ್ನು ಒಬ್ಬೊಬ್ಬರು ಕೈಯಲ್ಲಿಡಿದ 'ಫಾತೇಹಾ' (ನೀವೇದನೆ) ಆದ ಕೂಡಲೆ ಅಲಾವಿಕುಣಿಯನ್ನು ಮೂರುಸಲ ಪ್ರದಕ್ಷಿಣೆ ಹಾಕಿದ ಮೇಲೆ ಅಗ್ನಿಕುಂಡವನ್ನು ಹಾದು ಮೆರವಣಿಗೆ ಹೊರಡುತ್ತಾರೆ. ಮೊಹರಂನ ಹತ್ತನೆಯ ದಿನವನ್ನು ದೊಡ್ಡ ಸರಗಸ್ತಿ,' ಎಂಬುದಾಗಿ ಕರೆಯುತ್ತಾರೆ. ಅಂದು ಬೆಳಗಿನ ಜಾವ ಮೆರವಣಿಗೆ ಹೊರಟ ಪಂಜಾಗಳು, ಮೆರವಣಿಗೆ ಮುಗಿದ ನಂತರ ಮಸೀದಿಗೆ ವಾಪಾಸಾಗುತ್ತವೆ. ಹಿಂದಿನ ದಿನಗಳಂತೆ ಇಂದು ಸಹ ಅವನ್ನು ಪ್ರದರ್ಶನಕ್ಕಿಡದೆ ಅಡ್ಡಪರದೆಯೊಂದನ್ನು ಇಳಿಬಿಡುತ್ತಾರೆ. ಇದು ಕರ್ಬಲಾದ ವೀರರು ರಣರಂಗದಲ್ಲಿ ಮೂರ್ಛಾವಸ್ಥೆಗೆ ಸಂದ ಪ್ರತೀಕವಾಗಿರುವಂತಿದೆ. ಇಲ್ಲಿನ ಸಾಮಾನ್ಯ ಪರಿಭಾಷೆಯಲ್ಲಿ ದೇವರುಮಲಗಿದ್ದಾನೆ ಎಂದೂ ಮತ್ತು ಹತ್ತನೆಯ ದಿನ 'ದೇವರು' ಸಾಯುವ ದಿನ ಎಂಬುದಾಗಿ ಕರೆಯುವ ವಾಡಿಕೆಯಿದೆ. ಇಲ್ಲಿದೇವರು ಸಾಯುವುದೆಂದರೆ ಕರ್ಬಲಾದ ವೀರರು ರಣರಂಗದಲ್ಲಿ ದುರ್ಮರಣಕ್ಕೀಡಾದುದಾಗಿದೆ. ಸಾಯಂಕಾಲ ಕಡೆಯ ಮೆರವಣಿಗೆ ನಡೆಯುತ್ತದೆ. ಸಂಜೆಯಾಗುತ್ತಿದ್ದಂತೆಯೇ 'ಫಾತೇಹಾ' ಮುಗಿದ ನಂತರ ಅಲಾಯಿ ಕುಣಯನ್ನು ಮಣ್ಣಿನಿಂದ ಮುಚ್ಚಿ ಅದರ ಮೇಲೊಂದು ಬೋರೆಯ

ಹಣ್ಣಿನ ಕೊಂಬೆಯೊಂದನ್ನು ಸಿಕ್ಕಿಸುತ್ತಾರೆ. ಈ ಮೊಹರಂನ ದಿನಗಳಲ್ಲಿ ಕೆಂಪನೆಯ ಲಾಡಿ ಧರಿಸಿ ಫಕೀರರಾದವರು ತಮ್ಮ ದೀಕ್ಷೆಯ ಮುಕ್ತಾಯ ಸೂಚಕವಾಗಿ ಅವನ್ನು ಮುಚ್ಚಿದ ಅಲಾಯಿ ಕುಣಿಯ ಮೇಲಿನ ಬೋರೆಯ ಹಣ್ಣಿನ ಕೊಂಬೆಗೆ ನೇತು ಹಾಕುತ್ತಾರೆ. ಊರಿನ ಮುಖ್ಯ ಬೀದಿಗಳಲ್ಲಿ ಪಂಜಾಗಳ ಮೆರವಣಿಗೆ ಮುಗಿದ ನಂತರ ಅವನ್ನು ಊರ ಹೊರಗೆ ಬಾವಿಯ ಹತ್ತಿರವೋ ಅಥವಾ ಹೊಳೆಯ ಹತ್ತಿರವೋ ಕೊಂಡೊಯ್ದು ಅವುಗಳಿಗೆ ಸುತ್ತಿರುವ ವಸ್ತ್ರಗಳು, ಆಭರಣಗಳನ್ನೆಲ್ಲ ಕಳಚಿ ಒಂದು ಪೆಟ್ಟಿಗೆಯಲ್ಲಿಡುತ್ತಾರೆ. ಕೆಲವಡೆ ಅಲ್ಲಿಂದ ಇವನ್ನೆಲ್ಲ ಒಂದು ಮೂಟೆಯಲ್ಲಿಟ್ಟುಕೊಂಡು ಬಂದು ಮಸೀದಿಯಲ್ಲಿನ ಪೆಟ್ಟಿಗೆಯಲ್ಲಿ ಭದ್ರಗೊಳಿಸಿ ಮಸೀದಿಯೊಳಗಿನ ಜಂತೆಗೊ, ತೊಲೆಗೊ ನೇತುಹಾಕುತ್ತಾರೆ. ಮತ್ತು ಬರುವ ವರ್ಷದ ಮೊಹರಂನ ವರೆಗೂ ಅವನ್ನು ತೆಗೆಯಲಾಗುವುದಿಲ್ಲ. ಊರ ಹೊರಗಿನಿಂದ ಬರುವಾಗ 'ಅಲ್ವಿದಾ' ಎನ್ನುವ ಶೊಕಗೀತೆಯನ್ನು ಹಾಡುತ್ತಾ ಬರುತ್ತಾರೆ. ಮೂಲ ಉರ್ದುವಿನಲ್ಲಿ ಅಲ್ವಿದಾ ಎಂದರೆ 'ಬೀಳ್ಕೊಡಿಗೆ' ಎಂದರ್ಥ. ಅಂದು ರಾತ್ರಿ ಬಲಿದಾನವಾದ ವೀರರ ಹೆಸರಲ್ಲಿ 'ಕಂದೂರಿ' ಓದಿಸಲಾಗುತ್ತದೆ. ಇವಿಷ್ಟು ಮೊಹರಂನ ಕುರಿತಾದಂತಹ ಸ್ಥೂಲವಿವರಗಳಾಗಿವೆ.

'ಮೊಹರಂ'ನ ಪಂಜಾಗಳನ್ನು ಕೂಡಿಸುವ ಮತ್ತು ದಿನ ನಿತ್ಯದ ಪೀರಲು ಭಾವಡಿಯ ಮೇಲ್ವಿಚಾರಣೆಯನ್ನು ನಿರ್ವಹಿಸುವವರಿಗೆ 'ಮುಲ್ಲಾ'ಗಳು ಅಥವಾ 'ಮುಜಾವರ್ ' ಗಳೆಂದು ಕರೆಯುವುದು ವಾಡಿಕೆ. ಚಿಕ್ಕಮಕ್ಕಳು, ಬಾಣಂತಿಯರ, ಮತ್ತಿತರ ಕಾಯಿಲೆಗಳಿಗೆ ಔಷದೋಪಚಾರ ಮಾಡುವುದು ಇವರ ಉಪ ಕಸುಬು. ಇವರು ಸ್ವರೂಪದಲ್ಲಿ ಗ್ರಾಮಗಳ ಪೂಜಾರಿ ವರ್ಗವನ್ನೋ ಹೋಲುತ್ತಿದ್ದು ಇಸ್ಲಾಂನ ಅಷ್ಟೇನೂ ಪ್ರಭಾವಶಾಲಿಯಲ್ಲದ, ಮುಸ್ಲಿಮೇತರ ಮುಖ್ಯ ಪ್ರವಾಹದೊಂದಿಗೆ ಬೆರೆತ ಇಸ್ಲಾಂ ಪುರೋಹಿತ ವರ್ಗವೆಂದು ಕರೆಯ ಬಹುದಾಗಿದೆ. ಭಾರತಕ್ಕೆ ಇಸ್ಲಾಂನ ಪ್ರವೇಶದೊಂದಿಗೆಯೇ ಪರಸ್ಪರ ಸಾಂಸ್ಕೃತಿಕ ಸಂಘರ್ಷ, ಆತಂಕಗಳೊಂದಿಗೆಯೇ ವಿಕಾಸಗೊಂಡು, ಸಾಂಸ್ಕೃತಿಕ ಅಂತರ್ ಸಂಬಂಧಗಳು ಅರ್ಥಪೂರ್ಣವಾದ ಹಂತಕ್ಕೆ ತಲುಪಲು ಈ ಬಗೆಯ ಇಸ್ಲಾಂನ ಪರೋಹಿತ ವರ್ಗ ಹಾಗು ಮುಸ್ಲಿಮೇತರ ಮುಖ್ಯವಾಗಿ ವೈದಿಕೇತರ ಪೌರೋಹಿತ ವರ್ಗದೊಂದಿಗೆ ನಡೆದ ಸಾಂಸ್ಕೃತಿಕ ಸಂಘರ್ಷಣೆಯು ಕುತೂಹಲ ಕಾರಿಯಾದುದಾಗಿದೆ. ಈ

ಬಗೆಯ ಸಾಂಸ್ಕೃತಿಕ ಸಂಘರ್ಷವೊಂದನ್ನು ಚಿತ್ರಿಸುವ ಜನಪದ ಗೀತೆಯೊಂದು ಈ ಕೆಳಗಿನಂತಿದೆ.

ಕೇಳಯ್ಯ ಸಿವನೇ ನನ್ನಾಳ್ಯಾದ ಮರುಳೇ
ಗೂಳ್ಯ ಕ್ಯಾಣೀಗೆ ನೂರಯ್ಯೋ
ಕರಿಯೋ ದ್ಯಾವರ ಬಿರುದು ಸರಿಯಿಲ್ಲೊದರಿಯೊಳಗೆ
ಬಿರಮು ತಪಪವನೊಬ್ಬ ಢಿಳ್ಳೀಯಾ ಕಾಣಾಲು
ಕೊಟ್ಟು ಬೆಳಸಿದ ಮಾಯಾ ಮುರುವಾನೊ
ಬೆಂಬೊಗೊಂಡಿಲಿ ಬಿರಮು ಗೆದ್ದಾವನೇಳೊ
ಜಂಗಾಮ ಕ್ಯಾಣೆಗೆ ನೂರಯ್ಯೋ
ನುಡವು ತಮ್ಮಟೆ ಬೇರೊ ಕಡಿಮಾಗಲಿಲ್ಲೋ
ಯಿಡವೊ ಚತ್ರಿಕೆ ನೆರಳು ಜೆಂಪಾಲೋ
ಜಂಬೋ ಗಂಡೀನ ಪಡುವಾಲಿಗ ಹೇರಿ ಹೊಡಿಯೆಂದವರಾಯಭೇರಿ
ರಾಯಾಯ ಭೇರಿ ಹೊಡಿಯಾಲ ಓತ್ತ್ಹೀಗೆ
ಬಿಡ್ಡೋಡಿ ಬಿಡದೊಡಿ ಬಂದಾರೋ
ದೀಡಿಯ ಬಿಟಕಂಡು ಸೇದೀಯಾ ಏರಿಕಂಡು
ನೂರೊಂದು ಮುಲ್ಲಾರ ಬಂದಾರೋ
ಬಾಯಾಗಳ ಮಾತು ಬಾಯಾಗ ಇರಲಿಕ್ಕೆ
ನೂರೊಂದು ಬಿರದು ಕಸುಗೊಂಡಾರೊ
ನೂರೊಂದು ಬಿರದು ಕಸಗೊಂಡು ಮಾಳಪ್ಪಗೆ
ಕಾಲು ಬೆಂಡಿಗಳನ್ನೊರಿಸ್ಯಾರೋ
ಜಂಬೋಗೊಂಡೇಲಿ ಪಟ್ಟಾಣೇದೊಳಗೆ
ಏಳೂ ಮಂದೀ ಗೌಡಾರೋ
ಏಳೂ ಮಂದೀ ಗೌಡಾರ ಮನೆಯೊಳಗೆ
ಉಂಡುಟ್ಟು ಸೃಂಗಾರನಾಗ್ಯಾನ
ಕೊಂಡಾಗಳಾದಾವೊ ಕೆಂಡಾಗಳೇ ಮಾರ್ಯಾವು
ಮಾಳಪ್ಪನ ಬದಿಗೆ ಬಂದಾವೊ

ಕೊಂಡಾವನೇರಿ ಹೇಮಾಳಪ್ಪೋ
ಹಿಂದಾಯ ಮುಂದಾಯ ನೋಡ್ಯಾನೋ
ಹಿಂದಾಯ ಮುಂದಾಯ ನೋಡಾಲ ಓತ್ತೀಗೆ
ನೋಡಾಲ ಓತ್ತೀಗೆ ಕರಿಯದ್ಯಾವರ
ಕೇಣ್ಣೀಗೆ ಕಂಡಾನೊ
ಕರಿಯಾ ದ್ಯಾವರ ಕಣ್ಣಿಗೆ ಕಂಡಾರೆ ಮಾಳಪ್ಪಗೆ
ಕೇರಸಿ ಕೊಂಡಗಳೇ ದುಮುಕ್ಯಾನೋ
ಕರಿಯಾ ದ್ಯಾವರು ಕೇಣ್ಣೀಗೆ ಕಾಣಲು ಹೊತ್ತಿಗೆ
ಹೆಣ್ಣೋ ಹಡದಾ ಮುತ್ತೈದವರೂ ಕೊಳಗಮ್ಮ ದ್ಯಾವಾರ ಪರುಸಾದ
ಹತ್ತೇನೇ ವಾರಕ್ಕೆ ಎತ್ತೀನೆ ಮಾರೀ ಮುತ್ತೀನಾ ಸೆತ್ರಿಕೆ ಮಾಡುಸಂದಾನ
ಮುತ್ತೀನ ಸೆತ್ರಿಕೆ ಮರೆ ಮಾಡಿ ಕೊಟ್ಟವನು
ಕೇಪ್ಪ ಗೊರಳಯ್ಯ ಕರಿಯ ದ್ಯಾವಾರೋ
ದ್ಯಾವಾರು ಬಂದಾವೊ ಬನ್ನಿರೋ... *

ಈ ಮೇಲಿನ ಹಾಡು ವೈದಿಕೇತರ ವರ್ಗದ ಕುರುಬ ಜನಾಂಗದ ಮಾಳಪ್ಪ ಎನ್ನುವ ವ್ಯಕ್ತಿಯು ಮುಲ್ಲಾಗಳೊಂದಿಗೆ ಘರ್ಷಣೆಗಿಳಿದು ದೈವತ್ವಕ್ಕೇರಿದ ಸಂಗತಿಯನ್ನು ವಿವರಿಸುತ್ತದೆ. ಹಾಡಿನ ವಿವಿಧ ಪಾಠಾಂತರಗಳನ್ನು ಸಂಗ್ರಹಿಸಿ ಪರಿಸೀಲಿಸಿದರೆ ಪೂರ್ಣಮಾಹಿತಿ ದೊರಕಬಹುದಾಗಿದೆ. ಮುಖ್ಯವಾಗಿ ಈ ಹಾಡು ಪ್ರಸ್ತಾಪಿಸುವಂತೆ 'ಡಿಳ್ಳಿ' ಮತ್ತು, 'ಮುಲ್ಲಾ'ಗಳು, ಅವರು ಮಾಳಪ್ಪನಿಗೆ ಶಿಕ್ಷೆಕೊಡುವುದು ಮುಂತಾದ ವಿವರಗಳು ಅಂದಿನ ಸಾಂಸ್ಕೃತಿಕ, ಸಾಮಾಜಿಕ, ಸ್ಥಿತ್ಯಂತರದ ಕಾಲಘಟ್ಟದ ಆತಂಕಗಳನ್ನು ಬಿಚ್ಚಿಡುತ್ತವೆಯೆಂಬುದನ್ನು ಗಮನಿಸಬೇಕು. ಈ ಹಾಡು ವಿವರಿಸುವಂತೆ, 'ದೀಡಿಯಾ ಬಿಟಕಂಡು ಸೇದಿಯಾ ನೇರಿಕೊಂಡು, ಬಂದ ನೂರೊಂದು ಮುಲ್ಲಾರು' ಚೆದುರಿದಂತೆ ಅಲ್ಲಲ್ಲಿ ನೆಲೆನಿಂತಿರಬೇಕು. ಇಸ್ಲಾಂನ ಕಟ್ಟಾ ಸಂಪ್ರದಾಯಿಕ ವರ್ಗವೊಂದನ್ನು ಪ್ರತಿನಿಧಿಸುವ ಈ ವರ್ಗವು ಮುಖ್ಯ ಜನಪ್ರವಾಹದೊಂದಿಗಿನ ಅರ್ಥೈಕೆಗೆ ಅರ್ಥಪೂರ್ಣ ಸಂಬಂಧಕ್ಕೆ ಕಾರಣವಾಗುವಂತೆ ಪ್ರೇರಣೆ ದೊರಕಿದ್ದು ಸೂಫಿಗಳಿಂದ ಮತ್ತು ಸೂಫಿ ಮಾದರಿಯ ಸಂತರಿಂದಾಗಿರುವಂತಿದೆ. ಇದಕ್ಕೆ ನಿದರ್ಶನವಾಗಿ ಮೇಲೆ ವಿಶ್ಲೇಷಣೆಗೆ ಆರಿಸಿಕೊಂಡ ಜನಪದ ಗೀತೆಯು

ದೊರಕಿದ ಸ್ಥಳದ ಸುತ್ತಮುತ್ತ ನೂರಾರು ಹಳ್ಳಿಗಳಲ್ಲಿ ಮೊಹರಂನ ಮುಖ್ಯ ಪಂಜಾವನ್ನು (ಅಂದರೆ ಮೊಹರಂನ ಬಲಿದಾನದ ವೀರ ಹುಸೇನನ ಪ್ರತಿಮೆ) ಸಮೀಪದ ದರ್ಗಾಹೊನ್ನೂರಿನ ಸಂತನ ಹೆಸರಿನಿಂದ ಕರೆಯಲಾಗುತ್ತದೆ. ಸಾಂಕೇತಿಕವಾಗಿ ಮೊಹರಂ ಇಸ್ಲಾಂನ ಉದಾತ್ತ ಮೌಲ್ಯಗಳಿಗಾಗಿ ಪ್ರಾಣಗಳನ್ನರ್ಪಿಸಿದ ಬಲಿದಾನದ ವೀರರ ಸಂಸ್ಮರಣೆಯಾದುದರಿಂದ ಸೂಫಿಗಳಿಗೂ ಅದು ಪ್ರಿಯವಾದ ವಿಷಯವಾಗಿತ್ತು.

ವೈದಿಕಧರ್ಮ ಒಂದು ವರ್ಗದಲ್ಲಷ್ಟೇ ಪರಿಮಿತವಾಗಿ ತಾತ್ವಿಕ ಸ್ವರೂಪದಲ್ಲಿ, ಆಚರಣೆ, ವಿಧಿವಿಧಾನಗಳನ್ನು ರೂಢಿಸಿಕೊಂಡರೆ ಬಹುಸಂಖ್ಯಾತ ಅವೈದಿಕ ವರ್ಗವು ಗ್ರಾಮ ದೇವತೆಗಳನ್ನೊಳಗೊಂಡಂತೆ ವೈವಿಧ್ಯಮಯ ಧಾರ್ಮಿಕ ಆಚರಣೆಗಳನ್ನು ರೂಢಿಸಿಕೊಂಡಿತು. ಅವೈದಿಕವರ್ಗವು ವೈದಿಕ ವರ್ಗಕ್ಕೆ ಪ್ರತಿಯಾಗಿ ಧಾರ್ಮಿಕ ಶ್ರೇಷ್ಠತೆಗೆ ಸಂಬಂಧಿಸಿದಂತೆನ ಕೀಳಿರಿಮೆಯನ್ನು ಅನುಭವಿಸಬೇಕಾಗಿಬಂತು.

ಸೂಫಿಗಳ ಮಹತ್ವದ ಕಾರ್ಯವೆಂದರೆ ದೇವರು, ಧರ್ಮದ ವಿಷಯದಲ್ಲಿ ಜಿಜ್ಞಾಸೆಗೆ ಹಚ್ಚಿ ಆ ಮೂಲಕ ವೇದಾಂತ ಮತ್ತು ಇಸ್ಲಾಂನ ತತ್ವಗಳನ್ನು ಇವರ ಚಿಂತನೆಗೆ ಗ್ರಾಸವಾಗಿಸಲು ಯತ್ನಿಸಿದುದು. ವೈದಿಕ ಸಾಂಪ್ರದಾಯಿಕತೆಯನ್ನು ಪ್ರತಿರೋಧಿಸಲು ಈ ವರ್ಗಕ್ಕೆ ಇಸ್ಲಾಂ ಆಸರೆಯಾಯಿತು. ಇಂತಹ ಅವಸ್ಥಾಂತರದ ಘಟ್ಟದಲ್ಲಿ 'ಮೊಹರಂ' ತನ್ನೆಲ್ಲ ವೈವಿಧ್ಯತೆಯೊಂದಿಗೆ ಮುಸ್ಲಿಮೇತರರ ಧಾರ್ಮಿಕ ಬದುಕಿನ ಭಾಗವಾಗಿರುವಂತಿದೆ.

೪.೨ ಆಚರಣೆಯ ಸ್ವರೂಪ

ಮೊಹರಂನ ೮,೯, ಮತ್ತು ೧೦ನೆಯ ದಿನಗಳು ಅತ್ಯಂತ ಮುಖ್ಯವಾದವು. ಕರ್ಬಲಾ ಮೈಧಾನದಲ್ಲಿ ಯುಜೀದನಕಡೆಯ ಸೈನ್ಯದಿಂದ ನಿರ್ಬಂಧಕ್ಕೊಳಗಾಗಿ ನೀರು ಸಹ ಸಿಕ್ಕದ ದಿನಗಳಿವು. ಅದಕ್ಕಾಗಿಯೇ ಮೊಹರಂನ ಒಂಬತ್ತನೆಯ ದಿನ ಸಾಯಂಕಾಲದ ಹೊತ್ತು ಬೆಲ್ಲದ ಪಾನಕ, ಅಥವಾ ಶರಬತ್ತನ್ನು ಗುಂಪುಗಳ ಮೂಲಕ ತಂದು ಪಂಜಾಗಳಿಗೆ ಪಾತೆಹಾ ಮಾಡಿದ ನಂತರ ಮಸೀದಿಯ ಮುಂದಿನ ಅಲಾವಿ ಕುಣಿಯನ್ನು

ಮೂರುಸಲ ಪ್ರದಕ್ಷಿಣೆ ಮಾಡಿ ಅದರಲ್ಲಿ ಬೆಲ್ಲದ ಪಾನಕ (ಬೆಲ್ಲದ ನೀರು) ಅಥವಾ ಶರಬತ್ತನ್ನು ಸುರಿಯುತ್ತಾರೆ. ಇದು ಕರ್ಬಲಾದ ಬಲಿದಾನದ ವೀರರಿಗೆ ನೀರು ಸಹ ಸಿಕ್ಕದ ಸಂಕೇತವಾಗಿದ್ದು ಮೊಹರಂನ ಆಚರಣೆಯಾಗಿ ಹೀಗೆ ಅವರನ್ನು ಸ್ಮರಿಸಿಕೊಂಡು ಶರಬತ್ತು ಅಥವಾ ಪಾನಕ ನೀಡುವುದು ಗೌರವ ಸೂಚಿಸುವ ವಿಧಾನವಾಗಿದೆ.

ಈ ಕ್ರಿಯೆ ಮುಗಿಯುವ ಹೊತ್ತಿಗೆ ಕತ್ತಲಾಗಿ ರಾತ್ರಿಸುಮಾರು ೮ ಗಂಟೆಗಳ ಮೇಲಾಗಿರುತ್ತದೆ. ಆಗ ಮಸೀದಿಯ ಮುಂದಿನ ಅಲಾಯಿ ಕುಣಿಯಲ್ಲಿ ಒಟ್ಟಿದ್ದ ಕಟ್ಟಿಗೆಯ ರಾಶಿಗೆ ಬೆಂಕಿಕೊಡಲಾಗುತ್ತದೆ. ತಕ್ಕಮಟ್ಟಿನ ವಿಸ್ತಾರದ ಮತ್ತು ಮನುಷ್ಯನಾಳದ ಹೊಂಡವಲ್ಲಿ ಧಗಧಗಿಸುವ ಬೆಂಕಿಯ ಸುತ್ತ ಅಲಾಯಿ ಕುಣಿತ ಶುರುವಾಗುತ್ತದೆ. ಕಿವಿಗಡಚಿಕ್ಕುವ ಹಲಗೆಗಳತಾಳಕ್ಕೆ ಕ್ರಮವಾಗಿ ಹೆಜ್ಜೆಹಾಕುತ್ತಾ ಕುಣಿಯುವವರ ಹುಮ್ಮಸ್ಸು ಕುಂದುವುದೇ ಅಪರೂಪ. ಎದುರುಗಡೆ ಮಸೀದಿಯೊಳಗೆ ತಲೆಗೆ ಮುಂಡಾಸುಸುತ್ತಿಕೊಂಡು ಮುಲ್ಲಾರೊಂದಿಗೆ ಏಳೆಂಟು ಜನ ಪಂಜಾಗಳನ್ನೊರುವವರು ಕೂತಿರುತ್ತಾರೆ. ಹೊರಗಡೆ ಪೌಳಿಯಂತಹ ಭಾಗದಲ್ಲಿ ಕಿಕ್ಕಿರಿದುಕೂತ ಸ್ತ್ರೀಯರು ಮತ್ತು ಪುರುಷರು ಭಯಭಕ್ತಿಗಳಿಂದ ಮಸೀದಿಯೊಳಗೆ ನಡೆಯುವ ಪ್ರತಿ ವಿವರಗಳನ್ನೂ ಸೂಕ್ಷ್ಮವಾಗಿ ವೀಕ್ಷಿಸುತ್ತಿರುತ್ತಾರೆ. ಈ ಬಗೆಯಾಗಿ ವೀಕ್ಷಿಸುವುದು ಅವರ ಭಕ್ತಿಯ ಒಂದು ಭಾಗವೂ ಹೌದು. ತಾವು ಹರಕೆ ಹೊತ್ತಂತೆ ತಮ್ಮ ಇಷ್ಟಾರ್ಥಗಳು ಈಡೇರಿದುದರ ಫಲವಾಗಿ ಮೊಹರಂನ ಪಂಜಾಗಳಿಗೆ ಮಾಡಿಸಿ ತಂದ ಬೆಳ್ಳಿಯ ಬಂಗಾರದ ತೊಟ್ಟಿಲು, ಛತ್ರಿಕೆಗಳನ್ನರ್ಪಿಸುವುದು ಈ ವೇಳೆಯಲ್ಲಿಯೇ.

ಮೊಹರಂನ ಪಂಜಾಗಳನ್ನೊರುವವರು ಭಕ್ತಿಶ್ರದ್ಧೆಗಳಿಂದ ಒಳಗಡೆ ಕೂತಿರುತ್ತಾರೆ. ಅದರಲ್ಲಿ ಮುಖ್ಯ ಪಂಜಾವನ್ನೊ (ಹುಸೇನನ ಪ್ರತೀಕವಾದ ಪಂಜಾ) ರುವವರು ಭಕ್ತಿಯ ಆವೇಶದಿಂದ ಚಡಪಡಿಸುತ್ತಿರುತ್ತಾರೆ. ಲೋಭಾನದ ಹೊಗೆಯಿಂದ ಮತ್ತು ಬುಕ್ಕಿಟ್ಟಿನ ದೂಳಿನಿಂದ ತುಂಬಿದ ಮಸೀದಿಯಲ್ಲಿ ದೇವರು ಮೇಲೇಳುವುದನ್ನು ಕಾಯುತ್ತಾ ಕೂತವರ ನಿಲುವು, ಪೌಳಿಯಂತಹ ಭಾಗದಲ್ಲಿ ಮೌನವಾಗಿ ನೆರೆದ ಭಕ್ತ ಸಮೂಹದೊಂದಿಗೆ, ಎದುರುಗಡೆ ಬಿಡುವಿಲ್ಲದೆ ಮುಂದುವರೆಯುವ ಅಲಾಯಿ ಕುಣಿತ; ಇವೆಲ್ಲಾ ಈ

[illegible]

[illegible]

[illegible]

ಜನರ ದೈನಂದಿನ ಬದುಕಿನಲ್ಲಿ ಅನುಭವಕ್ಕೆ ಬಂದಿರದಂತಹ ಅಪೂರ್ವ, ಅಲೌಕಿಕಪರಿಸರವೊಂದನ್ನು ಅನಾವರಣಗೊಳಿಸಿಬಿಡುತ್ತವೆ. ಅಲ್ಲಿದ್ದವರ ಲಹರಿಯೆಲ್ಲಾ ಏಮ್ಮುಖವಾಗಿ ದೇವರಕಡೆಗೇ ತುಯ್ಯುವಂತೆ ಪ್ರೇರೇಪಿಸುತ್ತದೆ. ಮೊಹರಂನ ಈ ಕ್ರಿಯೆ ಉಂಟುಮಾಡುವ ಇಂತಹ ಅನನ್ಯತೆಯಿಂದಾಗಿಯೇ ಈ ಆಚರಣೆಯು ಜನರ ಬದುಕಿನ ಬೇರ್ಪಡಿಸಲಾಗದ ಭಾಗವಾಗಿ ಬಿಟ್ಟಿದೆ. ಬಹುಶಃ ಇಂತಹ ಅಪೂರ್ವ ಕ್ಷಣಗಳಲ್ಲಿಯೇ ಜರುಗುವ ಅತಿ ಸಾಮಾನ್ಯ ಘಟನೆಗಳೂ ದೈವಿಕ ಅರ್ಥ ಪಡೆದು ಕೊಂಡು ಪ್ರಚಲಿತಕ್ಕೆ ಬರುತ್ತವೆಯೆನ್ನಿಸುತ್ತದೆ. ಮೊಹರಂನ ಮೂಲ ಘಟನೆಗಳಿಗೆ ಸಂಬಂಧ ಪಡೆದ ಎಷ್ಟೋ ವಿವರಗಳು ಈ ಮೂಲಕ ಸೇರಿಕೊಂಡಿರಬಹುದಾಗಿದೆ. ನಿದರ್ಶನಕ್ಕೆ ಮೊಹರಂನ ಒಂಭತ್ತನೆ ದಿನದ ರಾತ್ರಿಯ ವೇಳೆ ಬೆಳಗಿನ ಜಾವ ಗುಂಗಾಡಿಯೊಂದು ದೇವರುಗಳು ಸುತ್ತ ಸುತ್ತುವರಿದ ಮೇಲೆಯೇ ದೇವರುಗಳ ಮೇಲೆದ್ದು ಊರಲ್ಲಿ ಸವಾರಿ ಹೊರಡುವವೆಂಬ ನಂಬಿಕೆ ಪ್ರಚಲಿತದಲ್ಲಿದೆ. ಇಂತವೇ ನಂಬಿಕೆಗಳು ಸಾಕಷ್ಟು ಪ್ರಚಲಿತದಲ್ಲಿವೆ.

ಮೊಹರಂನ ಒಂಬತ್ತನೆ ರಾತ್ರಿಯ ದಿನ ಬೆಳಗಿನ ಜಾವ ಎದ್ದ ದೇವರುಗಳು ಊರಲ್ಲಿ ಸವಾರಿ ಹೊರಡುತ್ತವೆ. ಅಥವಾ ಊರ ಹೊರಗೆ ದರ್ಗಾಗಳೇನಾದರೂ ಇದ್ದರೆ ಪಂಜಾಗಳು ಅಲ್ಲಿಗೆ ಹೋಗಿ ಪೂಜೆಸಲ್ಲಿಸಿ ಊರಲ್ಲಿ ಸವಾರಿಗೆ ಬರುತ್ತವೆ. ಇಲ್ಲಿನ ಪಂಜಾಗಳನ್ನು ಸಾಮಾನ್ಯ ಪರಿಭಾಷೆಯಲ್ಲಿ ದೇವರೆಂದು ಕರೆಯುವುದುವಾಡಿಕೆ. ದೇವರು ಸವಾರಿಹೊರಟವು, ದೇವರು ಹೊಳೆಗೆ ಹೋದನು, ದೇವರು ಸತ್ತವು ಹೀಗೆ ಈ ನುಡಿಗಟ್ಟುಗಳು ಬಳಕೆಯಲ್ಲಿವೆ.

ಊರ ಓಣಿಗಳಲ್ಲಿ ಸವಾರಿ ಹೊರಟಾಗ ಜನರ ಭಕ್ತಿಯ ಪ್ರದರ್ಶನಕ್ಕೊಂದು ತಿರುವು ಮೂಡುತ್ತದೆ. ತುಂಬಿದ ಕೊಡಗಳಿಂದ ಮನೆಯ ಮುಂದೆ ನೆರೆದ ಹೆಂಗೆಳೆಯರು ಬಂದ ದೇವರ ಕಾಲಿಗೆ ನೀರು ಸುರುವಿ ಊದುಬತ್ತಿ ಹಚ್ಚಿ ನಮಿಸುತ್ತಾರಲ್ಲದೆ ಮೊಹರಂನ ಮುಖ್ಯ ಪಂಜಾ ಹೊತ್ತವರಿಗೆ ತಮ್ಮನ್ನು ತುಳಿದು ಹೋಗಲು ಬೇಡಿಕೊಳ್ಳುತ್ತಾರೆ. ಇಲ್ಲವೆ ತಾವಾಗಿಯೇ ತುಳಿದು ಹೋದರೆ ಒಳ್ಳೆಯದಾಗುವುದೆಂಬ ನಂಬಿಕೆಯಿದೆ. ಅದಕ್ಕೂ ಮುಂಚೆ ಗುಡಿಯಿಂದ ದರಗಾಕ್ಕೆ ಹೊರಟಾಗ ಅಲ್ಲಿ ಸೇರಿದ ದೇವರುಗಳೆಲ್ಲಾ ಮುಖ್ಯ ದೇವರ ನೇತೃತ್ವದಲ್ಲಿ ದರ್ಗಾಕ್ಕೆ ಕಾರಣನಾದ ಸಂತನಿಗೆ ನಮಿಸುತ್ತಾರೆ. ಆ ವೇಳೆಯಲ್ಲಿಯೇ ಐದಾರು



ಊರೊಂದರ ಮುಖ್ಯ 'ಬಜಾರ್'ನಲ್ಲಿ ಪಂಜಾಗಳ ಮೆರವಣಿಗೆಯ ದೃಶ್ಯ.



ದೇವರ ದಂಡ (ಬೆತ್ತ), ನವಿಲು ಗರಿ ಹಿಡಿದವರೊಡಗೂಡಿ ಸಾಲಾಗಿ ಪೂಜಿಸಿಕೊಳ್ಳಲು ನಿಂತ ಪಂಜಾಗಳು



'ಮೊಹರಂ'ನ ದೇವರ ಬೆತ್ತ (ದಂಡ) ಹಿಡಿದು, ದೇವರ ಆವಾಹನೆಗಾಗಿ ಸಿದ್ಧಗೊಳ್ಳುವುದು



ಊರಲ್ಲಿ ಸವಾರಿ ಹೊರಟ ಪಂಜಾಗಳು



ಮೊಹರಂನ ಹತ್ತನೆಯ ದಿನ ಮಸೀದಿಯ ಮುಂದಿನ ಅಲಾಯಿ ಕುಣಿ (ಅಗ್ನಿ ಗುಂಡ)ಯನ್ನು ಮುಚ್ಚಿ ಮೇಲೆ ಬೋರೆಯ ಹಣ್ಣಿನ ಕೊಂಬೆಗಳನ್ನು ಸಿಕ್ಕಿಸಿರುವುದು. ಇದು ಬಲಿದಾನದ ವೀರರಿಗೆ 'ಮಣ್ಣು' ಕೊಡುವುದರ ಸಂಕೇತವಾಗಿದೆ.



ಪಂಜಾಗಳ 'ಸವಾರಿಯ' ಒಂದು ದೃಶ್ಯ

ಜನ ಹಿರಿಯರೊಡಗೂಡಿ 'ಮೊಹರಂನ ಮುಖ್ಯದೇವರು ದರ್ಗಾದ ಪಶ್ಚಿಮ ದಿಕ್ಕಿಗೆ ಸುಮಾರು ದೂರ ಆವೇಶದಿಂದ ಓಟದ ನಡಿಗೆಯಲ್ಲಿ ಸಾಗುತ್ತಾರೆ. ಅವರ ಹಿಂದೆ ಪಂಜು ಹಿಡಿದವರು , ನವಿಲುಗರಿ ಬೀಸುವವರು ಮಾತ್ರ ಹೋಗಬೇಕು. ಅಲ್ಲಿ ಬರುವ, ಊರ ದೇವತೆ ಯಾದ ಬುಡ್ಡೇಕಲ್ಲಪ್ಪನಿಗೆ ಪೂಜೆಸಲ್ಲಿಸಿ, ಕಾಯಿ, ಹಣ್ಣು, ಸಕ್ಕರೆ, ಉತ್ತುತ್ತಿ ಮೊದಲಾದವುಗಳನ್ನು ಗುಂಡಿ ತೋಡಿ ಹೂಳಲಾಗುತ್ತದೆ. ಮೊಹರಂನ ಸಮಯದಲ್ಲಿ ಊರ ದೇವತೆಗಳಿಗೆಲ್ಲಾ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಈ ದೇವತೆಗಳಲ್ಲಿ ಪ್ರಥಮ ಪೂಜೆಗೆ ಅರ್ಹನಾದವನು ಬುಡ್ಡೇಕಲ್ಲಪ್ಪ ಮಾತ್ರ.

ಗ್ರಾಮವನು ರಕ್ಷಿಸುವ ಬುಡ್ಡೆಕಲ್ಲಪ್ಪ
ಅಗಸೆ ದ್ವಾರದಲಿ ವಾಸವನು ಮಾಡಿ
ದೇವ ದೇವರಿಗೆಲ್ಲ ನೀ ಹೆಚ್ಚಾದಿಯಪ್ಪಾ
ಕಾಯಲು ಅಧ್ಯಕ್ಷ ಕಾಯಿ ನೀನಪ್ಪ'

ಇಂತಹ ಮಹಿಮೆಯಿಂದಾಗಿ ಬುಡ್ಡೇಕಲ್ಲಪ್ಪನಿಗೆ ಹೆಚ್ಚಿನ ಮಹತ್ವ ಬಂದಿರುವಂತಿದೆ. ಈ ಭಾಗದಲ್ಲಿ ಇಂತಹ ನಿದರ್ಶನಗಳು ಹೇರಳವಾಗಿ ಸಿಕ್ಕುತ್ತವೆ.

ಮೊಹರಂ ದೇವರುಗಳು ಸವಾರಿ ಹೊರಟಾಗ ಈ ದೇವತೆಗಳ ಗುಡಿಗೆ ಭೇಟಿ ಕೊಡುವುದಲ್ಲದೆ ಹೇಳಿಕೆ (ಕಾರಣಿಕ) ಹೇಳುವಾಗ ಯಾವುದಾದರೊಂದು ದೇವಸ್ಥಾನವನ್ನಾರಿಸಿ ಕೊಳ್ಳುವುದು ವಾಡಿಕೆ. ಆಂಧ್ರದ ಅನಂತಪುರ ಜಿಲ್ಲೆಯ ಕರ್ನಾಟಕದ ಗಡಿಯಲ್ಲಿ ಬರುವ ಹಳ್ಳಿ 'ಹಾವಳಿ'ಗಿಯಲ್ಲಿ ಮೊಹರಂ 'ದೇವರ ' ಹೇಳಿಕೆ

ರಾಮನ ಭಕ್ತ ಆಂಜನೇಯನ ಗುಡಿಯಲ್ಲೇ ನಡೆಯಬೇಕು. 'ಮಳೆ, ಬೆಳೆ, ಬೆಲೆಗಳೊಂದಿಗೆ ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ಕೇಳುವುದು ಸರ್ವೇ ಸಾಮಾನ್ಯ. ಊರೊಟ್ಟಿನ ಸಮಸ್ಯೆಗಳನ್ನು ವಿವರಿಸಿ ಅವಕ್ಕೆ ಪರಿಹಾರ ಹತ್ತಿರದಲ್ಲಿದೆಯೇ ದೂರದಲ್ಲಿದೆಯೇ ಎಂಬ ವಿಷಯದ ಬಗೆಗೆ ಹೆಚ್ಚಿನ ಆಸ್ಥೆ ಬಹುತೇಕ

ಹಿರಿಯರದಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ದೇವರು ಮನುಷ್ಯ ಸಹಜವಾಗಿ ವರ್ತಿಸಿ ಅದಾಗದೆಂದು ಪಟ್ಟು ಹಿಡಿಯುವುದು. ಅಲ್ಲಿನ ಭಕ್ತರೆಲ್ಲಾ ಇದು ಆಗಲೇಬೇಕೆಂದು ಹಟ ಹಿಡಿಯುವುದು ಆಪರಿಸರದಿಂದ ಹೊರಗೆ ನಿಂತು ನೋಡುವವರಿಗೆ ಬಹು ಮೋಜಿನದಾಗಿ ಕಂಡು ಬರುತ್ತದೆ. ಇಲ್ಲಿ ದೇವರ ಮತ್ತು ಭಕ್ತವೃಂದದ ಸಂಬಂಧ ತಂದೆ ಮಕ್ಕಳ ಬಾಂದವ್ಯವಾಗಿ ತಂದೆ, ಮಕ್ಕಳ ಮೇಲೆ ಕೋಪಿಸಿಕೊಂಡಾಗ ವರ್ತಿಸುವಂತೆ ದೇವರೂ, ಭಕ್ತ ವೃಂದ ಅಷ್ಟೆ ಹಟಮಾರಿಯಾಗಿ ಚಂಡಿ ಹಿಡಿಯುವುದು ಮನೋಜ್ಞನವಾಗಿರುತ್ತದೆ. ಇಂತಹ ಬೇಡಿಕೆಗಳ್ಯಾವುವು ಸ್ವಂತವ್ವಾಗಿರದೆ ಹೆಚ್ಚಾಗಿ ಸಾರ್ವಜನಿಕವಾಗಿರುತ್ತವೆ.

ಕಾರಣಿಕ (ಹೇಳಿಕೆ) ತಾಜಿಯಾದ ಮೆರವಣಿಗೆಯ ದಿನದಂದೂ ನಡೆಸಲಾಗುವುದು. ತಾಜಿಯಾಕ್ಕೆ ಹೆಚ್ಚಾಗಿ ಈ ಭಾಗದಲ್ಲಿ ದೇವರ ಪೆಟ್ಟಿಗೆಯೆಂದು' ಕರೆಯುತ್ತಾರೆ. ಈ ಮೆರವಣಿಗೆ ಎಲ್ಲಾ ಕಡೆಗೂ ಕಡ್ಡಾಯವಾಗಿ ನಡೆಯಬೇಕೆಂದಿಲ್ಲ. ಖತಲ್ ರಾತ್ರಿಯ ಮರುದಿನ ಅಲಾಯಿ ಕುಣಿ ಮುಚ್ಚುವುದರೊಂದಿಗೆ ಮೊಹರಂ ಆಚರಣೆ ಮುಕ್ತಾಯಗೊಳ್ಳುತ್ತದೆ. ಖತಲ್ ರಾತ್ರಿಯ ಮರುದಿನ ದೇವರು ಹೊಳೆಗೆ ಹೋಗಿ ಬಂದ ಮೇಲೆ ಪಂಜಾಗಳ ಮೇಲಿನ ವಸ್ತ್ರ ಆಭರಣಗಳನ್ನು ಕಳಚಿ ಪೆಟ್ಟಿಗೆಯಲ್ಲಿಟ್ಟು ಮರುದಿನ ಮೆರವಣಿಗೆ ಮಾಡುವಂತಿದ್ದರೆ ಅದನ್ನು ಮುಗಿಸಿ ಮಸೀದಿಯಲ್ಲಿ ತೂಗು ಹಾಕುತ್ತಾರೆ. ಮುಂದಿನ ಮೊಹರಂನಲ್ಲಿ ಇದೇ ತಾಜಿಯಾವನ್ನು ಬಳಸುತ್ತಾರೆ. ಕೆಲವೆಡೆ ತಾಜಿಯಾದ ಬೆಲೆಬಾಳುವ ಭಾಗಗಳನ್ನುಳಿಸಿಕೊಂಡು ಬೇಡವಾದುದನ್ನು ನೆಲದಲ್ಲಿ ಹೂಳುತ್ತಾರೆ. ಬಳ್ಳಾರಿ ತಾಲೂಕು ಜಾಲಿಹಾಳಿನಲ್ಲಿ ಹಲವು ತಲೆ ಮಾರುಗಳಿಂದ ಸೇರಿದ ಬೆಳ್ಳಿಬಂಗಾರದ ಆಭರಣಗಳಿಂದ ತುಂಬಿದ ಮೂರು ದೊಡ್ಡ ಪೆಟ್ಟಿಗೆಗಳನ್ನು (ತಾಜಯಾಗಳನ್ನು) ಮಸೀದಿಯ ಸುತ್ತಮುತ್ತಿನ ಸ್ಥಳದಲ್ಲೆಲ್ಲೋ ಹೂಳಾಲಾಗಿದೆಯಂತೆ. ಭಕ್ತಾದಿಗಳಿಂದ ಅಧಿಕವಾದ ಆಭರಣಗಳಿಗೆ ಸುರಕ್ಷಿತ ಸ್ಥಳಸಿಕ್ಕದೆ ಪಜೀತಿಯೆ ಬೇಡವೆಂದು ಹೀಗೆ ಮಾಡಲಾಗಿದೆಯಂತೆ. ಈ ಆಭರಣಗಳಿಂದ ಬಂದ ಹಣವನ್ನು ಮಸೀದಿಗೆ, ಮೊಹರಂನ ಸಂದರ್ಭದಲ್ಲಿ ಬಳಸಬಾರದೆಂಬ ನಂಬಿಕೆ ಇಲ್ಲಿದೆ.

ತಾಜಿಯಾದ ಮೆರವಣಿಗೆ ರೂಢಿಯಲ್ಲಿರುವ ಕಡೆ ಮೊಹರಂನ ಅತ್ಯಂತಿಕ ಕ್ಷಣಗಳು ಅಂದಿನ



‘ಮೊಹರಂ’ನ ಹತ್ತನೆಯ ದಿನದ ರಾತ್ರಿ ಊರ ಹೊರಗಡೆ ಬಾವಿಯ ಹತ್ತಿರವೋ, ಹೊಳೆ, ಹಳ್ಳಗಳ ಹತ್ತಿರವೋ ‘ಪಂಜಾ’ಗಳ ವಸ್ತ್ರಗಳನ್ನು ಕಳಚಿ ಗಂಟು ಮೂಟೆ ಕಟ್ಟಿಕೊಂಡು ಬರುವ ಮುಂಚೆ ಸಾಲಾಗಿ ಮಲಗಿರುವುದು. ಈ ಕ್ರಿಯೆಯನ್ನು ‘ದೇವರು ಸಾಯುವುದು’, ‘ ದೇವರು ಹೊಳೆಗೆ ಹೋದವು’ ಎಂಬುದಾಗಿ ಕರೆಯಲಾಗುತ್ತದೆ



‘ದೇವರು ಸಾಯುವ’ ಮುಂಚೆ ನೈವೇದ್ಯವಾಗಿ ತಂದ ‘ಚೊಂಗ್ಯಾ ರೊಟ್ಟಿ’, ‘ಹೋಳಿಗೆ’, ‘ಅನ್ನ’ವನ್ನು ಚಿತ್ರದಲ್ಲಿ ಕಾಣಬಹುದು. ಹಾಗೆಯೇ ‘ಪಂಜಾಗಳ ತಲೆಯಭಾಗ ಕಾಣಿಸುವುದನ್ನು ಗಮನಿಸಬಹುದು.

ಮೆರವಣಿಗೆಯ ದಿನದ್ದಾಗಿವೆ. ಉತ್ತರ ಕರ್ನಾಟಕದಂತೆ ಬಳ್ಳಾರಿ, ಚಿತ್ರದುರ್ಗ ಕೋಲಾರ ಮತ್ತದರ ಅಕ್ಕಪಕ್ಕದ ಆಂಧ್ರದ ಜಿಲ್ಲೆಗಳಲ್ಲಿ ಮೊಹರಂ ಹಾಡುಗಳು ಲಭ್ಯವಿದ್ದರೂ ಅಲಾವಿ ಹೆಜ್ಜೆಗಳನ್ನಾಕುತ್ತಾ ಇವನ್ನು ಹಾಡುವುದಿಲ್ಲ. ಹಾಗಾಗಿ ಕುಣಿತಕ್ಕೆ ಹೆಚ್ಚು ಒತ್ತು ಮೂಡಿ ಆವೇಶಭರಿತದ್ದಾಗಿರುತ್ತದೆ. ಅಲಾಯಿ ಕುಣಿತ ಕರ್ಬಲಾ ಯುದ್ಧದ ಅಭಿನಯವಾದುದರಿಂದ ಕೈಯಲ್ಲಿ ಲಭ್ಯವಿರುವ ಆಯುಧಗಳನ್ನಿಡಿದು (ದೊಣ್ಣೆ, ಕೊಡಲಿ, ಕುಡುಗೋಲು, ಒನಕೆ ಇತ್ಯಾದಿ) ಕುಣಿಯುತ್ತಾರೆ. ಕೆಲವಡೆ ಕತ್ತಿವರಸೆಯೊಂದಿಗೆ ರೋಮಾಂಚಕಾರಿಯಾಗಿ ಯುದ್ಧವನ್ನೇ ಅಭಿನಯಿಸುತ್ತಾರೆ. ಮೊಹರಂನ ಮುಖ್ಯ ಮೆರವಣಿಗೆಯ ಸಂಧರ್ಭದಲ್ಲಿ ಮುಂಭಾಗದಲ್ಲಿ ಅಲಾಯಿ ಕುಣಿಯಲು ಸ್ಪರ್ಧೆಯುಂಟಾಗಿ ಊರಲ್ಲಿಯೆ ಎರಡು ಗುಂಪುಗಳ (ಮುಸ್ಲಿಮೇತರರ ನಡುವೆಯೇ ಎರಡು ಗುಂಪುಗಳಾಗಿ) ನಡುವೆ ಘರ್ಷಣೆ ಏರ್ಪಟ್ಟು, ಮೊಹರಂನ ಆಚರಣೆಯೇ ನಿಂತು ಹೋಗುವ ಸಂದರ್ಭಗಳೇರ್ಪಡುತ್ತವೆ. ಮುಖ್ಯ ಮೆರವಣಿಗೆಯ ಮುಂದೆ ಕುಣಿಯುವುದು ಪ್ರತಿಷ್ಠೆಯ ವಿಷಯವಾಗಿರುತ್ತದೆ.

ಮೊಹರಂನ ಸಂದರ್ಭದಲ್ಲಿ ಮಧ್ಯ, ಮಾಂಸ ಮತ್ತು ಆಚರಣೆಯ ಸ್ವರೂಪದಲ್ಲಿಯೆ ಅಡಕವಾಗಿರುವ ರಣರಂಗದ ವಾತಾವರಣದ ಕಾರಣವಾಗಿ ಹೊಡೆದಾಟಗಳು ಹುಟ್ಟಿಕೊಳ್ಳುತ್ತವೆ. ಆಂಧ್ರದ ರಾಯಲ ಸೀಮೆ ಮತ್ತು ಕರ್ನಾಟಕದ ಗಡಿ ಭಾಗದ ಹಲವಾರು ಕಡೆ ಮೊಹರಂ ಆಚರಣೆಯನ್ನೇ ನಿಷೇಧಿಸಬೇಕಾಗಿ ಬರುತ್ತದೆ. ಕುತೂಹಲಕರ ಸಂಗತಿಯೆಂದರೆ ಇವ್ಯಾವು ಕೋಮು ಗಲಭೆಗಳಾಗಿರದೆ ಹಳ್ಳಿಗಳಲ್ಲಿನ ಪಾರಂಪರಿಕ ದ್ವೇಷದ ನಡುವೆ ಮುಸ್ಲಿಮೇತರರಲ್ಲಿಯೇ ಹುಟ್ಟಿಕೊಳ್ಳುವ ಗಲಭೆಗಳಾಗಿರುತ್ತವೆ. ಮುಸ್ಲಿಮೇತರರ ಬೇರ್ಯಾವ ಹಬ್ಬಗಳಲ್ಲೂ ಕಾಣಸಿಗದ ವೈವಿಧ್ಯತೆ ಮತ್ತು ವಿಶಿಷ್ಟತೆಯಿಂದಾಗಿ ಇದು ಅತ್ಯಂತ ನೆಚ್ಚಿನ ವರ್ಣರಂಜಿತ ಆಚರಣೆಯಾಗಿ ಶತಮಾನಗಳಿಂದಲೂ ತನ್ನ ಜೀವಂತಿಕೆಯನ್ನು ಉಳಿಸಿಕೊಂಡೇ ಬಂದಿದೆ. ಮೊಹರಂ ಈಗ ಹೆಚ್ಚು ಕಡಿಮೆ ಮುಸ್ಲಿಮೇತರರ ಹಬ್ಬವಾಗಿ ಮಾರ್ಪಟ್ಟು ಯುಗಾದಿಗಿಂತಲೂ ಮಹತ್ವದ ಆಚರಣೆಯಾಗಿದೆ. ಉದಾಹರಣೆಗೆ ತೆಲುಗಿನ ಜಾನಪದ ಹಾಡೊಂದರಲ್ಲಿ



ಮಸೀದಿಯ ಮುಂದಿನ ‘ಅಲಾಯಿಕುಣಿ’ (ಅಗ್ನಿಗುಂಡ)ಯಲ್ಲಿ ಹಾರಲು ಸಜ್ಜಾದ ‘ಪಂಜಾಗಳು’



ಮೊಹರಂನ ಬಲಿದಾನದ ವೀರ ‘ಇಮಾಮ್ ಹುಸೇನರ’ ಗೋರಿಯ ಪ್ರತೀಕವಾದ
‘ತಾಜ್ಜೀಯಾ’ (ಶವಪೆಟ್ಟಿಗೆ)ದ ಮೆರವಣಿಗೆ. ಮೆರವಣಿಗೆಯ ಮುಂದೆ
‘ಅಲಾಯಿ’ ಕುಣಿಯುವುದನ್ನು ಗಮನಿಸಬಹುದು.

'ಮಾಲಪುನ್ನಮ ರಾವೆ ಮಾಯಮ್ಮ, ರಾವೇ
ಪೆದ್ದಲ ಪಂಡಗ ರಾವೆ ಪೆದ್ದಮ್ಮ ರಾವೆ
ಪೀರ್ಲ ಪಂಡಗ ರಾವೆ ಪಿನ್ನಮ್ಮರಾವೆ
ಉಗಾದಿಪಂಡುಗ ರಾವೆ ಊಡ್ಚು ಕೊನಿ ಪೋವೆ'

"ಹೊಲೆಯರ ಹುಣ್ಣಿಮೆಯೇ ನೀನು ನನ್ನ ಹೆತ್ತಮ್ಮನಂತೆ ನೀನು ಬಾ (ಇಲ್ಲಿ 'ಬಾ'ಎಂದು ಹೇಳುವಲ್ಲಿ ದಿನಗಳು ಬೇಗಕಳೆದು ಹಬ್ಬ ಹತ್ತಿರವಾಗಲೆಂಬ ಹಾರೈಕೆ ಇದೆ). ಹಿರಿಯರ ಹಬ್ಬವೇ ದೊಡ್ಡಮ್ಮನ ಹಾಗೆ ನೀನು ಬಾ, ಮೊಹರಂ ಹಬ್ಬವೇ (ಪೀರ್ಲುಪಂಗಡ) ನನ್ನ ಚಿಕ್ಕಮ್ಮನ ಹಾಗೆ ನೀನು ಬಾ, ಯುಗಾದಿ ಹಬ್ಬವೆ ನೀನು ಹಾಳಾಗಿ ಹೋಗು." ಹೀಗೆ ಯುಗಾದಿ ಹಬ್ಬವನ್ನು ಹಾಳಾಗಿ ಹೋಗಲೆಂದು ಶಪಿಸಲಾಗಿದೆ. ಮೊಹರಂನ ಸಂದರ್ಭದಲ್ಲಿ ಯುದ್ಧದ ಅಭಿನಯವಾಗಿ ಅಲಾಯಿ ಕುಣಿಯುವಾಗ 'ಸಾಹುಸೇನ್' ಸಾಹುಸೇನ್ ಧೂಲ್ಲೇವ್ , ಹೋಲಿ, ಅಲಿಹೇ, ಮುಂತಾದ ಉಘ್ಘಡಣೆಗಳು ಕೇಳಿಬರುತ್ತವೆ. ಇವು ಕರ್ಬಲಾದ ಬಲಿದಾನದ ವೀರರನ್ನು ಸ್ಮರಿಸಿಕೊಂಡು ನೋವಿನ ಉದ್ಗಾರಗಳನ್ನು ತೆಗೆದುದಾಗಿದೆ. ಉತ್ತರ ಪ್ರದೇಶದ ಲಕ್ನೋದಲ್ಲಿಯು ಮತ್ತು ದಕ್ಷಿಣಭಾರತದ, ಮುಸ್ಲಿಂರು ಬಹುಸಂಖ್ಯಾತರಾದ ಕಡೆಯೂ ಸಹ, ಮೊಹರಂ ಅನ್ನು ಸಂಪೂರ್ಣ ಶೋಕಾಚರಣೆಯನ್ನಾಗಿಯೇ ಆಚರಿಸಲಾಗುತ್ತದೆ. ಇಲ್ಲಿ ಮೊಹರಂನ ತಾಜಿಯಾದ ಮೆರವಣಿಗೆಯ ಮುಂದುಗಡೆ ಕೈಯಿಂದ ಎದೆಗೆ ಜೋರಾಗಿ ಹೊಡೆದು ಕೊಳ್ಳುತ್ತಾ' ಯ್ಯಾಹುಸೇನ್ , ಯ್ಯಾ ಅಲೀ,' ಎಂದು ಉದ್ಗರಿಸುತ್ತಾ ಮೆರವಣಿಗೆಯೊಂದಿಗೆ ಸಾಗುತ್ತಾರೆ. ಮತ್ತೆಕೆಲವರು ಕತ್ತಿ ಮೊದಲಾದ ಆಯುಧಗಳಿಂದ ಗಾಯ ಮಾಡಿಕೊಂಡು ರಕ್ತ ಹರಿಸುತ್ತಾರೆ. ಇದನ್ನು ಉರ್ದುವಿನಲ್ಲಿ 'ಮಾತಮ್' ಎಂದು ಕರೆಯಲಾಗುತ್ತಿದ್ದು ಕರ್ಬಲಾದಲ್ಲಿ ಯುಜೀದನ ಅಧರ್ಮಯುದ್ಧದ ಸಂದರ್ಭದಲ್ಲಿ ನಾವೇನಾದರೂ ಇದ್ದಿದ್ದರೆ ಹೀಗೆ ರಕ್ತವನ್ನರ್ಪಿಸಿ ನಮ್ಮ ಪ್ರಾಣಗಳನ್ನರ್ಪಿಸುತ್ತಿದ್ದೆವು ಎಂಬುದನ್ನು ಇದು ಸೂಚಿಸುವುದಾಗಿದೆ.

ಮೂಲದ ಇದರ ಉಳಿಕೆಯಾಗಿ ಕೇವಲ ಇದರ ಉಗ್ಘಡಣೆ ಮಾತ್ರ ಈಗ ಈ ಅಧ್ಯಯನದ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ಉಳಿದುಕೊಂಡಿದ್ದು ಅದಕ್ಕೆ ಬೇರೆ ರೀತಿಯ ನುಡಿಗಟ್ಟುಗಳೂ ಸೇರಿಕೊಂಡಿವೆ.

ಉದಾಹರಣೆಗೆ "ಸಾಹುಸೇನ್ , ಸಾಹುಸೇನ್ , ನ್ಯಾಯಿಭೋಮ್ , ಧೂಲ್ಮೇವ್ , ಹೋಲಿ, ಅಲಿಹೇ, ಅಲಿಹೇ, ಸಾಹುಸೇನ್ , ಸಾಹುಸೇನ್ ಕೊರ್ರಸೇನ್ , ಪತ್ತಿಸೇನ್ , ಜೊನ್ನಲಸೇನ್ , ದನಿಯಾಲಸೇನ್ ಧೂಲ್ಲೇವ್ , ಅಯ್ಯೀಪೋಯಾ ಪೀಲ್ಲುರ್ ಪಂಡುಗ, ಮಾತಂಡ್ರಿಪೋಯ, ಇಂಕೇಮಿ ಪೀರ್ಲುಪಂಡುಗ ಮುಗುಸ್ಯಾ "ಎನ್ನುವ ಘೋಷಣೆ ಗಡಿಭಾಗದಲ್ಲಿ ಕಂಡುಬರುತ್ತದೆ. ಹುಸೇನ್ ಹೆಸರಿನ ಕೊನೆಯಲ್ಲಿ ಬರುವ ಸೇನ್ ಎಂಬುದಕ್ಕೆ ತೆಲುಗಿನಲ್ಲಿ (ಸೇನು ಹೊಲ) ಹೊಲ ಎಂಬರ್ಥವಿದೆ. ಇದರಿಂದಾಗಿ ಅದು ಸಾಹುಸೇನ್ ಎಂಬ ಉಚ್ಛ್ಛಾಡಣೆ ಮುಂದುವರೆದು ಸವಣೆಯ ಹೊಲ ..... ಹತ್ತಿಯ ಹೊಲ....ಜೋಳದ ಹೊಲ..ಮಸಾಲೆಹೊಲ (ಅಂದರೆ ಈ ಬೆಳೆಗಳೆಲ್ಲ ಬೆಳೆಯಲೆಂದು ಹಾರೈಸುವುದು) ಧೂಲ್ಗೇವ್ , ಮುಗ್ಸು ಹೋಯ್ತು.

ಪೀರ್ಲು ಹಬ್ಬ, ನಮ್ ತಾತ ಹೋದಾ ಇನ್ನೇನು ಪೀರ್ಲು ಹಬ್ಬ ಮುಗೀತ್ಯ" ಎನ್ನುವ ಘೋಷಣೆ ಅಲಾಯಿ ಕುಣಿಯುವವರಿಂದ ಮುಗಿಲು ಮುಟ್ಟುತ್ತದೆ.

ಮೊಹರಂನ ಪಂಜಾಗಳಿಗೆ ಪೂಜೆಸಲ್ಲಿಸುವ ವಿಧಾನಗಳು ಪ್ರದೇಶಕ್ಕನುಗುಣವಾಗಿ ವಿಶಿಷ್ಟವಾಗಿದ್ದರೂ ಅವು ನಿಚ್ಚಳವಾಗಿ ಮುಸ್ಲಿಮೇತರ ಪ್ರಭಾವದಿಂದಾದವುಗಳಾಗಿವೆ. ಅಥವಾ ನೇರವಾಗಿ ಆ ಪೂಜಾ ವಿಧಾನವನ್ನೇ ಇದಕ್ಕೂ ಅನ್ವಯಿಸಲಾಗಿದೆ. ಉದಾಹರಣೆಗೆ ಮೊಹರಂಗೆ ಸಂಬಂಧಿಸಿದಂತೆ "ಅಗಸನೂರು ಕಾಯಿ, ಮುದುಗಲ್ ಕಾಣಿಕೆ, ಐನೂರು ಸಕ್ಕರೆ" ಎಂಬ ನುಡಿಗಟ್ಟೊಂದು ಪ್ರಚಲಿತದಲ್ಲಿದೆ. ಬಳ್ಳಾರಿ ಜಿಲ್ಲೆಯ ಶಿರುಗುಪ್ಪ ತಾಲೂಕಿನ ಅಗಸನೂರಿನಲ್ಲಿ ಮೊಹರಂನ ದಿನಗಳಂದು ಲಾರಿಗಟ್ಟಲೆ ತೆಂಗಿನ ಕಾಯಿಗಳು ಬಳಸಲ್ಪಡುತ್ತಿದ್ದರೆ, ಐನೂರಿನಲ್ಲಿ ಪಂಜಾಗಳಿಗೆ ಹರಕೆಯೊತ್ತವರು ತಮ್ಮ ದೇಹದ ತೂಕದಷ್ಟು ಸಕ್ಕರೆಯನ್ನರ್ಪಿಸುತ್ತಾರೆ. ರಾಯಚೂರು ಜಿಲ್ಲೆಯ ಮುದುಗಲ್ ನಲ್ಲಿ ಕಾಣಿಕೆಯಾಗಿ ಹಣವನ್ನು ಸಲ್ಲಿಸುತ್ತಾರೆ. ಅಗಸನೂರಿನ ಮೊಹರಂನ ಮತ್ತೊಂದು ವಿಶೇಷವೆಂದರೆ ಮೊಹರಂನ ದಿನಗಳಂದು ಸ್ತ್ರೀಯರು ಕುಂಕುಮ ಮತ್ತು ಹೂಮುಡಿಯುವುದಿಲ್ಲ ಮೊಹರಂ ಶುರುವಾದಂದಿನಿಂದ ಮುಗಿಯುವವರೆಗೂ ಲೈಂಗಿಕ ಸಂಪರ್ಕ ನಿಷಿದ್ಧವಾಗಿರುತ್ತದೆ. ಪಂಜಾಗಳಿಗೆಂದು ತರುವ ಕೆಂಪುಸಕ್ಕರೆ, ತೆಂಗಿನಕಾಯಿ, ಊದುಬತ್ತಿ ಮೊದಲಾದವುಗಳನ್ನು

ಮುಲ್ಲಾ ಅಥವಾ ಮುಜಾವರರು ತೆಗೆದುಕೊಂಡು "ಪಾತೆಹಾ(ನಿವೇದನೆ) ಮಾಡುತ್ತಾರೆ. ಕುರಾನಿನ ಒಂದೆರಡು ಸೂರಾಗಳನ್ನುಚ್ಚರಿಸುವುದು ಪ್ರಾರ್ಥನಾ ವಿಧಿಯಾಗಿರುತ್ತದೆ. ಕೆಲಪರು ಎಲೆಹಸಿರು ಇಲ್ಲವೆ ಕೆಂಪುಬಣ್ಣದ ಹೊಸ ಬಟ್ಟೆಯಲ್ಲಿ ಅಕ್ಕಿ, ಎರಡು ಒಣಕೊಬ್ಬರಿ ಬಟ್ಟಲುಗಳು, ಉತ್ತುತ್ತಿಯನ್ನು ನಿವೇದನೆಗೆ ಅರ್ಪಿಸಲಾಗುತ್ತದೆ. ಪಾತೆಹಾ ಮಾಡಿದನಂತರ ನೈವೇದ್ಯವಾಗಿ ಮುಲ್ಲಾ ಸಾಹೇಬರು ಮೂರ್ನಾಲ್ಕು ಹಿಡಿ ಅಕ್ಕಿಯನ್ನು, ಹೊಸಬಟ್ಟೆ, ಕೊಬ್ಬರಿ ಮತ್ತು ಉತ್ತುತಿಯನ್ನು ತೆಗೆದುಕೊಂಡು ಉಳಿದ ಅಕ್ಕಿಯನ್ನು ಮಾತ್ರ ವಾಪಸು ಕೊಡುತ್ತಾನೆ. ಮಾಮೂಲಿನ ದೇವಸ್ಥಾನಗಳಲ್ಲಿಯಂತೆಯೆ ತೆಂಗು ಒಡೆಯಲಾಗುತ್ತದೆ.

ಗಡಿ ಭಾಗದ ಹಲವಾರು ಕಡೆ ಮೊಹರಂ ಗ್ರಮ ದೇವತೆಯ ಹಬ್ಬದ ಆಚರಣೆಗಳನ್ನಳವಡಿಸಿಕೊಂಡು ವೈಶಿಷ್ಟ್ಯ ಮಯವಾಗಿದೆ ಒಂದೂರಿನ ಹುಲುಸು ಬೇರೊಂದೂರಿಗೆ ಹೋಗದಂತೆ ಊರ ಹೊಲಿಮಾರಿಗಳ (ಊರಗಡಿಗಳಸುತ್ತ) ಹಾಲುಪತ್ರಿ ಕಟ್ಟುವ ವಾಡಿಕೆಯಿದೆ.

ಇಂತಲೆಲ್ಲಾ ಅಕ್ಕಪಕ್ಕದ ಊರುಗಳ ಮೊಹರಂ ದೇವರುಗಳು ಭಿನ್ನಭಿನ್ನ ವ್ಯಕ್ತಿತ್ವ ಮತ್ತು ಮನಸ್ತತ್ವಗಳುಳ್ಳವರಾಗಿರುತ್ತಾರೆ. ಹಸೇನ್, ಹುಸೇನ್, ಬೀಬಿಫಾತಿಮಾ, ಕಾಸಿಮ್, ಮೌಲಾಲಿ ದೇವರುಗಳೆಲ್ಲ ತಂತಮ್ಮ ಊರುಗಳ ಪಕ್ಷಪಾತಿಗಳಾಗಿ ಭಕ್ತರನ್ನು ಸಂತೃಪ್ತಿಗೊಳಿಸುತ್ತಾರೆ. ಅಥವಾ ಹೀಗೂ ಹೇಳಬಹುದಾಗಿದೆ. ಮೊಹರಂ ದೇವರು ಶ್ರೀಕೃಷ್ಣನಂತೆ ಸರ್ವಾಂತರ್ಯಾಮಿಯಾಗಿ ಅಕ್ಕಪಕ್ಕದೂರುಗಳ ಭಕ್ತರಿಗೆ ಪಕ್ಷಪಾತವಹಿಸಿದಂತೆ ನಟನೆಮಾಡಿ ಪರಸ್ಪರರಿಗೆ ಗೊತ್ತಾಗದಂತೆ ಎಲ್ಲಾ ಊರವರನ್ನು ಸಂತೃಪ್ತಿಗೊಳಿಸುತ್ತಾನೆ.

೪.೩ ಐತಿಹ್ಯಗಳು ಮತ್ತು ಸ್ಥಳಪುರಾಣಗಳು

ಮೊಹರಂನ ಬಗೆಗೆ ದೊರಕುವ ಐತಿಹ್ಯಗಳು, ಸ್ಥಳ ಪುರಾಣಗಳು ಮತ್ತು ನಂಬಿಕೆಗಳನ್ನು ಪರಿಶೀಲಿಸಿದಾಗ ಈ ಆಚರಣೆಯ ದೀರ್ಘಕಾಲೀಕತೆ ತಿಳಿದು ಬರುತ್ತದೆಯಲ್ಲದೆ ಮೊಹರಂ ಯಾಕೆ ಮುಸ್ಲಿಮೇತರರನ್ನು ಆತ್ಮೀಯವಾಗಿ ತಟ್ಟಿ ಮನಸ್ಸಿನಾಳಕ್ಕೆ ಇಳಿಯುವಂತೆ ಮಾಡಿತು ಎನ್ನುವುದರ ಬಗೆಗೆ

ಹೊಳಹುಗಳು ಗೋಚರಿಸುತ್ತವೆ. (ಮೊಹರಂನ ಪ್ರಾಚೀನತೆಗಾಗಿ ೧೭ನೇ ಶತಮಾನದ ಪ್ರವಾಸಿಯೊಬ್ಬನ ದಾಖಲೆಗಳಿಗೆ ಅನುಬಂಧ ೩ ನೋಡಿ)

ಮನುಷ್ಯರು ತಮ್ಮೆಲ್ಲ ಸಣ್ಣತನ, ಕ್ಷುದ್ರತೆಗಳ ನಡುವೆ ಬದುಕುತ್ತಾ ಎದುರಾದ ಕಾರ್ಪಣ್ಯಗಳಿಗೆ ಅರ್ಥವೇ ಹೊಳೆಯದೆ ಯಾವುದೋ ಆಸರೆಗಾಗಿ ತಡಕಾಡುತ್ತಲೆ ದೇವರನ್ನವಲಂಬಿಸಿದನೆಂದು ಕಾಣುತ್ತದೆ. ಇಂತಲ್ಲಿ ತಮ್ಮ ನಿಜ ಬದುಕಿನ ವೈಫಲ್ಯ ಹತಾಶೆಗಳೆಲ್ಲವರ ಮೂಲಕವೇ ದೈವತ್ವವನ್ನು ಕಾಣಲು ಸಾಧ್ಯವಾದುದರಿಂದ ದೇವರೂ ಕೂಡ ಮನುಷ್ಯನಷ್ಟೆ ಸಂಕೀರ್ಣನಾದ. ಈ ಧಾರ್ಮಿಕತೆಯ ವಿಕಾಸದ ಪೂರ್ವದಲ್ಲಿ ದೇವರು ಮತ್ತು ಮನುಷ್ಯನ ನಡುವಣ ಸಂಬಂಧ ನೇರವಾದುದ್ದು ಮತ್ತು ಸರಳವಾದುದಾಗಿತ್ತು. ಅದು ಜ್ಯಾತ್ಯಾರೀತತೆಯ ಲಕ್ಷಣಗಳನ್ನೊಳಗೊಂಡಿದ್ದು ಮಾನವೀಯ ಸ್ವರೂಪದಿಂದ ಕೂಡಿದುದಾಗಿತ್ತು. ಆಧುನಿಕ ಅರ್ಥದ ಧಾರ್ಮಿಕ ಮೂಲಭೂತವಾದದ ಹಿಡಿತದಿಂದ ದೂರವಿರುವ ಯಾವುದೇ ಧರ್ಮವಾಗಲಿ ಅದು ಲಕ್ಷಣಗಳಲ್ಲಿ ಈ ಮೇಲೆನಿರೂಪಿಸಿರುವ ಧಾರ್ಮಿಕತೆಯ ವಿಕಾಸದ ಕಾಲಘಟ್ಟದ ಸರಳ ಧಾರ್ಮಿಕತೆಗೆ ಹತ್ತಿರ ವಾದುದಾಗಿರುತ್ತದೆ. ಇಂಡಿಯಾದ ಜಾತಿವ್ಯವಸ್ಥೆ ಅದರ ಗೋಜಲುಗಳನಡುವೆ ಸಾಂಸ್ಕೃತಿಕವಾಗಿ ಮೇಲಿರಿಮೆಯಿಂದ ಬೀಗುವ ಸಣ್ಣ ವರ್ಗವೊಂದೆಡೆ, ಇನ್ನೊಂದೆಡೆ ಆ ವರ್ಗವನ್ನುಕಂಡು ಸಿಡಿಮಿಡಿಗೊಳ್ಳುತ್ತಲೇ ಆ ನೆಲೆಯಿಂದ ಹೇರಿಕೆಯ ರೂಪದಲ್ಲಿ ಬಂದ ಧಾರ್ಮಿಕ ನಿಯಮ ನಿಯಮಾವಳಿಗಳಿಗೆ ಸಿಲುಕಿ ಅದರಿಂದ ಪಾರಾಗಲು ತಮ್ಮ ಜೀವನ ವಿಧಾನಕ್ಕೊಪ್ಪುವ ದೇವಗಣಗಳನ್ನು (ಗ್ರಾಮದೇವತೆಗಳು) ಆರಾಧಿಸತೊಡಗಿದ್ದ ಬಹುಸಂಖ್ಯಾತ ವರ್ಗವೊಂದೆಡೆಯಿತ್ತು.

ಈ ಎರಡನೆಯ ವರ್ಗವೇ ನಿಜವಾದ ಅರ್ಥದಲ್ಲಿ ಧಾರ್ಮಿಕ ವಿಷಯದಲ್ಲಿ ಹೆಚ್ಚು ಉದಾರಿಯೂ ಅನ್ಯಧರ್ಮೀಯರನ್ನು ಮಾನವೀಯತೆಯಿಂದ ಕಾಣುವ ಮನೋಧರ್ಮವುಳ್ಳದಾಗಿತ್ತು. ಯಾಕೆಂದರೆ ಈ ವರ್ಗದವರು ಧಾರ್ಮಿಕತೆಯನ್ನು ಅತಿಗೆ ಕೊಂಡೊಯ್ದು ವಿಕೃತಗೊಳಿಸಲಿಲ್ಲ. ವಾಸ್ತವದ ನೆಲೆಯಲ್ಲೆ ದೇವರನ್ನು, ಧಾರ್ಮಿಕತೆಯನ್ನು ಅನ್ವಯಿಸಿಕೊಂಡು ಈ ನೆಲದ ಬದುಕಿಗೆ ನಿಷ್ಠರಾದರು. ಇಂತಹ ಬಹು ಸಂಖ್ಯಾತ ಮುಸ್ಲಿಮೇತರ ವರ್ಗವು ಮೊದಮೊದಲು ಮುಸ್ಲಿಂ ಬಾಂಧವರೊಡಗೂಡಿ ಮೊಹರಂನ

ಆಚರಣೆಯಲ್ಲಿ ಪಾಲ್ಗೊಳ್ಳುತ್ತಿದ್ದವರು ತಮ್ಮ ದೇವತೆಗಳಲಿಲ್ಲದ ವೈಶಿಷ್ಟ್ಯಗಳನ್ನು, ವೈವಿಧ್ಯತೆಯನ್ನು ಮೊಹರಂನ ಆಚರಣೆಯಲ್ಲಿ ಗುರುತಿಸಿಕೊಂಡು ಮನಸೋತಿರಬೇಕು. ಮೊಹರಂನ ಆಚರಣೆಯಲ್ಲಿ ಗುರುತಿಸಿಕೊಂಡು ಮನಸೋತಿರಬೇಕು. ಮುಖ್ಯವಾಗಿ ಯಾವುದೇ ವರ್ಣವೈಷಮ್ಯವಿಲ್ಲದೆ ಮುಸ್ಲಿಮೇತರ ಎಲ್ಲ ವರ್ಗದವರೂ ಸಮಾನವಾಗಿ ಪಾಲ್ಗೊಳ್ಳುವ ಆಚರಣೆಯಾದುದರಿಂದ ಸಹಜವಾಗಿಯೇ ಇದು ಜನಪ್ರಿಯವಾಗತೊಡಗಿತು. ಮುಸ್ಲಿಮರಿಲ್ಲದ ಕಡೆಯೂ ಸಹ ಮೊಹರಂನ ಛಾವಡಿಗಳನ್ನೇರ್ಪಡಿಸಿಕೊಂಡು ಮೊಹರಂನ ವೇಳೆಯಲ್ಲಿ ಮಾತ್ರ ಬೇರೆಯಕಡೆಯಿಂದ ಮುಸ್ಲಿಂ ಮುಜಾವರರನ್ನು ಕರೆತಂದು ಮೊಹರಂ ಆಚರಿಸುವುದು ಸಹ ಇವನ್ನು ಸ್ಪಷ್ಟ ಪಡಿಸುತ್ತದೆ. ಹಬ್ಬ ಹರಿದಿನ ಉತ್ಸವಗಳೆಂದರೆ ಉತ್ಸಾಹಪುಟಿಯುವ ಮುಸ್ಲಿಮೇತರ ಬಹುಸಂಖ್ಯಾತ ವರ್ಗಕ್ಕೆ ಮೊಹರಂನ ವರ್ಣರಂಜಿತ ಪಂಜಾಗಳು, ಹಾಡು, ಕುಣಿತ, ಹುಲಿವೇಷಗಳು ಮನಸ್ಸನ್ನಾಕ್ರಮಿಸಿವೆ. ಕ್ರಮೇಣ ಮೊಹರಂ ದೇವರು ಇವರ ದೇವಗಣದಲ್ಲಿ ಸೇರಿಹೋದ. ನಿದರ್ಶನಕ್ಕೆ ಐತಿಹ್ಯ ಮತ್ತು ಸ್ಥಳ ಪುರಾಣವನ್ನೋಲುವಂತಹ ಒಂದೆರಡು ನಿದರ್ಶಗಳನ್ನು ಪರಿಶೀಲಿಸಬಹುದು.

ಬಳ್ಳಾರಿ ತಾಲೂಕು 'ವಣೇನೂರಿನ' ಮೊಹರಂ ದೇವರಿಗೂ ಸುಮಾರು ೬೦ ಕಿಲೋಮೀಟರು ದೂರವಿರುವ 'ಪೆನ್ನಂಪಳ್ಳಿ' (ಇದು ಗಡಿಭಾಗದಲ್ಲಿನ ಆಂಧ್ರದ ಅನಂತಪುರ ಜಿಲ್ಲೆಯ ಹಳ್ಳಿ) ಯ ಮೊಹರಂ ದೇವರ ಸುತ್ತಹಬ್ಬಿಕೊಂಡ ಐತಿಹ್ಯವೊಂದು ಹೀಗಿದೆ. ಎತ್ತಲಿಂದಲೋ ಬದುಕಲು ಬಂದ ಮುಲ್ಲಾಸಾಹೇಬರೊಬ್ಬರು ವಣೇನೂರಿಗೆ ಒಂದು ಸ್ವಲ್ಪ ದಿನಗಳ ಕಾಲ ನೆಲಸಿದ್ದರು. ಅವರೊಂದಿಗಿದ್ದ ಮೊಹರಂನ ಪಂಜಾವು ಊರಲ್ಲಿನ ಮಸೀದಿಯ ಇತರೇ ಪಂಜಾಗಳಿಗಿಂತ ದೊಡ್ಡದೂ ಮತ್ತು ಸುಂದರ ವಾದುದರಿಂದ ಅದನ್ನು ದೊಡ್ಡ ದೇವರೆಂದು (ಅಂದರೆ ಕರ್ಬಲಾ ಬಲಿದಾನದ ಹಿರಿಯ ವೀರ ಹುಸೇನರ ಪ್ರತೀಕವೆಂದು) ಒಪ್ಪಿಕೊಂಡು ಪೂಜೆ ಸಲ್ಲಿಸತೊಡಗಿದರು. ಕಾರಣಾಂತರಗಳಿಂದ 'ಮುಲ್ಲಾ'ರು ಪೆನ್ನಂಪಳ್ಳಿಗೆ ಹೋಗಿ ನೆಲಸಬೇಕಾಗಿ ಬಂದುದರಿಂದ ತಾನು ಪ್ರತಿಷ್ಠಾಪಿಸಿದ್ದ 'ಪಂಜಾ' ವನ್ನು ತನ್ನೊಂದಿಗೇಕೊಂಡೊಯ್ದು ತಾನಿರುವಲ್ಲಿ ಮತ್ತೊಮ್ಮೆ ಪ್ರತಿಷ್ಠಾಪಿಸಿದ. ಊರವರೆಲ್ಲ ಸೇರಿ ನಿರ್ಗಮಿಸಿದ ದೇವರ ಬದಲಿಗೆ ಬೇರೊಂದು

ದೇವರನ್ನು ನಿರ್ಮಿಸುವುದೆಂದು ನಿರ್ಣಯಿಸಿ ಪ್ರಶಸ್ತ ಸ್ಥಳವೊಂದನ್ನಾರಿಸಿಕೊಂಡರು. ಊರ ಆಂಜನೇಯನ ಗುಡಿಯ ಪೌಳಿಯಲ್ಲಿ ಕುಲುಮೆ ಹಾಕಿ ಮಡಿಯಿಂದ (ದೇವರ) ಪಂಜಾ ತಯಾರಿಯಲ್ಲಿ ನಿರತರಾದರು. ಮಡಿ ಮೈಲಿಗೆಯ ವಿಷಯದಲ್ಲಿ ಅದೆಷ್ಟು ಕಟ್ಟುಪಾಡಿತ್ತೆಂದರೆ ಆಕೆಲಸದಲ್ಲಿ ನಿರತರಾದವರು ಯಾರಾದರೂ ದೇಹ ಭಾದೆ ತೀರಿಸಿಕೊಳ್ಳಲು ಮೇಲೆದ್ದರೆ ಆ ಕೆಲಸವನ್ನು ಅಲ್ಲಿಗೇ ನಿಲ್ಲಿಸಿ ಬಿಡಲಾಗುತ್ತಿತ್ತು. ಮತ್ತೆ ಮರುದಿನ ಆರಂಭಿಸುತ್ತಿದ್ದರು. ಸುಮಾರು ದಿನ ಹೀಗೆ ಮಾಡಿದರೂ ಸುತ್ತಿಗೆಯ ಹೊಡೆತಕ್ಕೆ ದೇವರ ಆಕಾರ ಮೂಡವೆ ಲೋಹ ಚೂರು ಚೂರಾಗುತ್ತಿತ್ತು. ಹಿರಿಯರೆಲ್ಲ ತಲೆಯ ಮೇಲೆ ಕೈ ಹೊತ್ತುಕೂತರು. ಊರಲ್ಲಿ ಆ ಮುಂಚೆ ಪೀರಲು ದೇವರ ಅನುಗ್ರಹವಾಗಿರುವುದೆಂದು ನಂಬಿದ್ದ ಇಳಿವಯಸ್ಸಿನ ಹೆಣ್ಣುಮಗಳೊಬ್ಬಳನ್ನು ವಿಚಾರಿಸಿದಾಗ ಆಕೆ ತನ್ನ ಅಡಿಗೆ ಮನೆಯ ಒಲೆಯಲ್ಲಿನ ಹಿಡಿಯಷ್ಟು ಬೂದಿ ಮತ್ತು ಮಣ್ಣನ್ನು ಕೊಟ್ಟು ಕುಲುಮೆಯಲ್ಲಿ ಹಾಕಲು ಹೇಳಿದಳಂತೆ ನಂತರ ಕಮ್ಮಾರರಿಗೆ ದೇವರ ಪಂಜಾ ಮಾಡಲು ಸುಲುಭವಾಯಿತಂತೆ. ಊರಲ್ಲಿ ಈಗಲೂ ಇರುವ ಈ ಪಂಜಾ ಆಗ ತಯಾರಿಸುದುದೇ ಆಗಿದೆ. ಅಂದಿನಿಂದ ಇಂದಿನವರೆಗೂ ಬೂದಿ ಮತ್ತು ಹಿಡಿ ಮಣ್ಣುಕೊಟ್ಟ ಹೆಣ್ಣುಮಗಳ ವಂಶಸ್ಥರು ಮಸೀದಿ ಗುಡಿಗೆ ಬಂದು ಲೋಭಾನದ ಹೊಗೆ ಹಾಕುವವರೆಗೂ ಮೊಹರಂನ ದಿನ ದೇವರು ಎದ್ದು ಸವಾರಿಗೆ ಹೊರಡುವಂತಿಲ್ಲ.[೧೦]

ಇಷ್ಟಾದರೂ ಮೂಲದ ಈಗ ಪೆನ್ನಂಪಳ್ಳಿಯಲ್ಲಿರುವ ದೇವರ ಬಗೆಗಿನ ವ್ಯಾಮೋಹ ಸ್ವಲ್ಪವೂ ಕಡಿಮೆಯಾಗಿಲ್ಲ. ಆದೇವರು ಹೋಗಿ ಮೂರ್ನಾಲ್ಕು ತಲೆಮಾರುಗಳಾದರೂ ಚಿಕ್ಕಮಕ್ಕಳಾದಿಯಾಗಿ ಹಿರಿಯರವರೆಗೆ ಇಂದಿಗೂ ಮೂಲ ದೇವರ ಬಗ್ಗೆ ಭಾವನಾತ್ಮಕ ಸಂಬಂಧವನ್ನುಂಟುಮಾಡುವ ವಿವರಗಳು ದೊಡ್ಡವರಿಂದ ಹರಿದು ಬಂದಿವೆ. ಪೆನ್ನಂಪಳ್ಳಿಯ ಮೊಹರಂ ದೇವರು ಇಲ್ಲಿಗೇನಾದರೂ ಬಂದು ಬಿಟ್ಟರೆ ಊರಿಗೆ ಸಮೃದ್ಧಿಯ ಕಾಲ ಬಂದಂತೆಯೇ ಎಂದು ಧೃಡವಾಗಿ ನಂಬಲಾಗಿದೆ. ಪೆನ್ನಂಪಳ್ಳಿಯಲ್ಲಿರುವ ದೊಡ್ಡ ದೇವರನ್ನು ಈಗಲೂ ಎಣೇನೂರಿನ ದೇವರೆಂದೇ ಕರೆಯುವ ವಾಡಿಕೆಯಿದೆ. ವಣೇನೂರವರು ಯಾರಾದರೂ ಪೂಜೆಗೆ ಬಂದರೆ ಪೂಜಾರಿಗಳು ಮಸೀದಿಯಿಂದ ಹೊರ ಬಂದು ನಿಂತು ಬಿಡುತ್ತಾರೆ. ಅಲ್ಲಿ ಹೋದವರು ತಾವೇ ಕಾಯಿ ಹೊಡೆದು ಪೂಜೆ ಸಲ್ಲಿಸಿ ಬರುತ್ತಾರೆ. ಅಲ್ಲಿನ ಪೂಜಾರಿಯೇನಾದರು ಕಾಯಿ ಹೊಡೆದು

[illegible]

[illegible]

ಕೊಟ್ಟರೆ ಮೊಹರಂ ದೇವರು ಪೂಜೆಗೆ ಬಂದವರ ಹಿಂದೆಯೇ ಹೋಗಿ ಬಿಡುತ್ತಾನೆಂಬ ಪ್ರತೀತಿಯಿದೆ. ಈ ಕಥೆ ಚಿಕ್ಕ ಮಕ್ಕಳಾದಿಯಾಗಿ ಹಿರಿಯರವರೆಗೆ ಎಲ್ಲರಲ್ಲಿ ಕುತೂಹಲ ಕೆರಳಿಸಿ 'ದೇವರ ಪಂಜಾ ತಾನೇ ತಾನಾಗಿ ಹಿಂದೆ ಹಿಂದೆ, ತೆಂಗಿನ ಕಾಯಿ ಹೋಳುಗಳನ್ನಿಡಿದು ಮುಂದೆ ಮುಂದೆ ನಡೆದು ಊರು ಸಮೀಪಿಸುತ್ತಿರುವ ಹಿರಿಯರ' ಚಿತ್ರ ಮಾಡಿ ಮೈ ಜುಮ್ಮುಗುಟ್ಟಿಸಿ ಬಿಡುತ್ತದೆ. ಎಂದಾದರೊಂದುದಿನ ಖಂಡಿತ ಆ ದೇವರು ಊರಿಗೆ ಹಿಂದಿರುಗುತ್ತಾನೆಂದು ಬಹಳಷ್ಟು ಜನ ಈಗಲೂ ಪ್ರತೀಕ್ಷೆಯಲ್ಲಿರುತ್ತಾರೆ. ಮೊಹರಂ ಸಮೀಪಿಸುತ್ತಿದ್ದಂತೆ ಇಂತಹ ಕಲ್ಪನೆಗಳು ಗರಿಗೆದರಿ ಬಿಡುತ್ತವೆ. ಮೂಲದ ಆ ದೇವರು ಪೂರ್ವ ಸ್ಮರಣೆಯಿಂದ ಮೊಹರಂನ ಖತಲ್ ರಾತ್ರಿಯ ಬೆಳಗು ಜಾವ ಗುಂಗಾಡಿಯ ರೂಪದಲ್ಲಿ ವಣೇನೂರಿಗೆ ಬಂದು ಹೋದ ಮೇಲೆಯೇ ದೇವರು ಮೇಲೆದ್ದು ಸವಾರಿಗೆ ಹೊರಡುವುದೆಂಬ ನಂಬಿಕೆ ದಟ್ಟವಾಗಿದೆ.

ಇನ್ನು ಮೊಹರಂಗೆ ಸಂಬಂಧಿಸಿದ ಸ್ಥಳ ಪುರಾಣವೊಂದನ್ನು ಪರಿಶೀಲಿಸಬಹುದು. ಮಾರೆಮ್ಮ, ಸುಂಕ್ಲಮ್ಮ, ಹುಲಿಗೆಮ್ಮ ಮೊದಲಾದ ದೇವತೆಗಳು ಅಕ್ಕತಂಗಿಯರಾಗಿದ್ದು ತಂತಮ್ಮ ನಡುವಿನ ವೈಷಮ್ಯಗಳಿಂದ ಜಗಳವಾಡುತ್ತ ಕರ್ತವ್ಯ ನಿರ್ವಹಿಸಲು ಮರೆತು ಭಕ್ತರಿಗೆ ತೊಂದರೆಯುಂಟು ಮಾಡುತ್ತಿರುತ್ತಾರೆ. ಇನ್ನು ಮಾರೆಮ್ಮ (ಮಾರಿ)ಳಂತೂ ಒಳಿತಿಗಿಂತಲೂ ಅಧಿಕವಾಗಿ ಕೆಡುಕನ್ನುಂಟುಮಾಡುವವಳು. ಒಟ್ಟಾರೆ ಸರ್ವನಾಶವಾಗದಿರಲೆಂದು ಅವಳಿಗೆ ಪೂಜೆ, ಬಲಿಸಲ್ಲಿಸಿ ಸಂತೃಪ್ತಿಗೊಳಿಸುತ್ತಾರೆ. ಮಾರೆಮ್ಮನೊಂದಿಗೆ ಉಳಿದ ಅಕ್ಕತಂಗಿಯರ ಸ್ವಭಾವ ಮಾರೆಮ್ಮಳಷ್ಟು ರೌದ್ರವಲ್ಲದಿದ್ದರೂ ಅವರ ಮೂಲೋದ್ದೇಶ ಜನರನ್ನು ಭಯ ಭ್ರಾಂತರನ್ನಾಗಿಸಿ ಗೌರವಾದರಗಳನ್ನು ಪಡೆಯುವುದಾಗಿದೆ. ಮಾರೆಮ್ಮಳ ಸ್ವಭಾವ ಮತ್ತು ವ್ಯಕ್ತಿ ಚಿತ್ರಣವನ್ನು ನೀಡುವ ಜಾನಪದವೊಂದು ಹೀಗಿದೆ.

ಕೇಳಯ್ಯಾ ಸಿವನೇ, ಎನ್ನಾಳ್ಯಾದ ಮರುಳೇ
ಗೂಳ್ಯದ ಕ್ಯಾಣೇಗೆ ನೂರಯ್ಯೋ
ಬಡಿಗೇರು ಮಗಳಮ್ಮ ಕಿಡಿಗಣ್ಣಿನ ದ್ಯಾವಮ್ಮಾ
ಜೈಕೊಬ್ಬಿನ ಮಾನ್ಸವನ ಕೊಂದಾಳೋ
ಬಡಿಗೇರು ಮನೆ ಮುಂದೆ

[illegible]

[illegible]

[illegible]

ಸಡಗರನ ಮರನುಟ್ಟಿ
ಕಡದು ನಾಲ್ಕುಸವುಗೋಲಿ ಮಾಡ್ಯಾಳೋ
ಹೇ ಕುಳ್ಳಡಿಗೆ ಹೊತಗೊಂಡು ಕೂಸೀನ ತಾಯಾಗಿ
ಕಲ್ಯಾಣ ಪುರಿ ಪಟ್ಣ ಹೊಕ್ಕಾಳೋ
ಆರಾರು ಓಣ್ಯಾಗ ಆಡುಂಬ ಕ್ವಾಣಾನ
ಜೋಡು ಮಿಣೆಗಳು ಹಾಕಿ ಹಿಡಿದರಿಸ್ಯಾಳೋ
ಹೊಕ್ಕಾಲಗೇರ್ಯಾಗೆ ಒಕ್ಕುಂಬ ಕ್ವಾಣಾನ
ಮಸವಾ ಕತ್ತೀಲಿ ಕುತಿಗೆ ಕೊಯ್ಯಿಸ್ಯಾಳೋ
ಗಂಡಾನ ಹೊಟ್ಟೇನು ಬಗಿಸ್ಯಾಳೋ ಮಾರೆಮ್ಮ
ಗುಂಡಿನ ಮ್ಯಾಗಳ ಕೊಬ್ಬು ತೆಗಿಸ್ಯಾಳೋ ಮಾರೆಮ್ಮ
ನಂದ ಜ್ಯೋತಿಯ ಮಾಡೊಂಮರಿಸ್ಯಾಳೋ
ನಂದ ಜ್ಯೋತಿಯ ಮಾಡೊಂಮರಿಸ್ಯಾಳೋ ಮಾರೆಮ್ಮ
ದ್ಯಾವಾರು ಬಂದಾವೊ ಬನ್ನಿರೋ ''

ಇಂತಹ ರೌದ್ರ ವ್ಯಕ್ತಿತ್ವವುಳ್ಳ ಮಾರೆಮ್ಮಳೊಂದಿಗೆ ಆಕೆಯ ಅಕ್ಕತಂಗಿಯರ ಆಟಗಳಿಗೆ ಮೊಹರಂ ದೇವರಿಂದಾಗಿ ಕಡಿವಾಣಬಿದ್ದಂತಾಗಿದೆ. ಮೊಹರಂ ದೇವರು ಸಾವು ನೋವುಗಳನ್ನೆಲ್ಲ ಯಶಸ್ವಿಯಾಗಿ ತಡೆಯುತ್ತಾ ಆಪ್ರಯುಕ್ತ ಈ ದೇವತೆಗಳೊಂದಿಗೆ ಹೋರಾಟ ನಡೆಸಿದ ಚಿಹ್ನೆಗಳಾಗಿ ಕೈಬಳೆ ಹೊಡೆದಿರುವುದು, ತಲೆಯೊಳಗಿನ ಕೂದಲು ಕಿತ್ತಿ ಬಂದಿರುವುದನ್ನು ಕಂಡವರಿದ್ದಾರೆ. ಮಾರೆಮ್ಮ ಬೇರೆ ಬೇರೆ ಕಡೆಯಿಂದ ಊರುಗಳೊಳಗೆ ಹಾದು ಹೋಗುವಾಗ ಮೊಹರಂ ದೇವರಿಂದಾಗಿ ಸಾವು ನೋವುಗಳನ್ನುಂಟು ಮಾಡಿ ತನ್ನ ತೃಷೆ ನೀಗಿಸಿಕೊಳ್ಳಲು ಸಾಧ್ಯವಾಗದೆ, ಬಿಡಲೂ ಮನಸ್ಸಿಲ್ಲದೆ ಏನಾಗುವುದೋ ಎಂದು ಭಯದಿಂದ ತತ್ತರಿಸುತ್ತಾ 'ಏನ್ ಮಾಡ್ಲಿ' ಈ ಗಡ್ಡದಯ್ಯ (ಮೊಹರಂ ದೇವರು) ವಂದಿಲ್ ದಿದ್ರೆ, ಬೇಸಿತ್ತು (ಈಗಡ್ಡದಯ್ಯ ಒಬ್ಬ ಇರದಿದ್ದರೆ ಚೆನ್ನಾಗಿತ್ತು) ಎಂದು ಹತಾಶಳಾಗಿ ಊರನ್ನು ಹಾದು ಹೋಗುತ್ತಾಳೆಂಬ ನಂಬಿಕೆ. ಇದು ಸ್ಥಳ ಪುರಾಣವಾಗಿದ್ದು, ಪಾರಂಪರಿಕವಾಗಿ ವೈದಿಕೇತರ ವರ್ಗವೊಂದು ಅವರೆಗೆ ತನಗೆ ಅಪರಿಚಿತವಾಗಿದ್ದ ಬೇರೊಂದು ಸಂಸ್ಕೃತಿಯನ್ನು ಒಳಗು ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಇದು

ಸೂಚಿಸುತ್ತದೆಯಾದ್ದರಿಂದ ಇದನ್ನಿಲ್ಲಿ ವಿವೇಚಿಸಲಾಗಿದೆ.

೪.೪ ಮೊಹರಂ ಹಾಡುಗಳು

ಸಾಮಾನ್ಯವಾಗಿ ಮೊಹರಂನ ದಿನಗಳಲ್ಲಿ ಮೂಲ ಕರ್ಬಲಾದ ವಿವರಗಳನ್ನೊಳಗೊಂಡು ಹಾಡಲಾಗುವ ಹಾಡುಗಳನ್ನು ಮೊಹರಂ ಹಾಡುಗಳೆಂದು ಕರೆಯುವುದು ವಾಡಿಕೆ. ವರ್ಷದ ಬೇರೆ ಬೇರೆ ಸಂದರ್ಭಗಳಲ್ಲಿ ದೈಹಿಕ ಶ್ರಮದ ನಡುವೆ ಹಾಡುವ ಮೊಹರಂನ ವಸ್ತು, ವಿಷಯಗಳನ್ನು ಹೊಂದಿದ ಹಾಡುಗಳೂ ಸಹ ಮೊಹರಂ ಹಾಡುಗಳೇ ಆಗಿವೆ. ಇವು ಹೆಚ್ಚಾಗಿ ಹೈದರಾಬಾದ್ ಕರ್ನಾಟಕ ಮತ್ತು ತೆಲಂಗಾಣ ಪ್ರದೇಶಗಳನ್ನೊರೆತು ಪಡಿಸಿ ಆಂಧ್ರದ ರಾಯಲ ಸೀಮೆ ಮತ್ತು ಕರ್ನಾಟಕದ ಗಡಿ ಭಾಗದ ಜಿಲ್ಲೆಗಳಲ್ಲಿ ಪ್ರಚಲಿತದಲ್ಲಿವೆ. ವಾಸ್ತವವಾಗಿ ಉರ್ದುವಿನಲ್ಲಿರುವ ಮೊಹರಂನ ಗೀತೆಗಳನ್ನು ಹಾಡುತ್ತಾರೆನ್ನುವುದಕ್ಕಿಂತ ಪಠಿಸುತ್ತಾರೆನ್ನುವುದು ಹೆಚ್ಚು ಸಮಂಜಸವಾಗಿರುತ್ತದೆ. ಹಾಡು ಸಂತೋಷ ಸೂಚಕವಾಗಿರುವುದರಿಂದ ಮೊಹರಂನ ಶೋಕ ಸೂಚಕ ದಿನಗಳಲ್ಲಿ ಎದೆಗೆ ಕೈಯಿಂದ ಹೊಡೆದು ಕೊಳ್ಳುತ್ತಾ ಲಯಬದ್ಧವಾಗಿ ಅದನ್ನು ಹೇಳುತ್ತಾರೆ. ಉರ್ದುವಿನಲ್ಲಿರುವ ಮೊಹರಂನ ಹಾಡುಗಳನ್ನು ವಿವಿಧ ರೀತಿಗಳಿಂದ ಕರೆಯುತ್ತಾರೆ. ೧. ಮರ್ಸಿಯಾ. ೨. ನೌಹಾ. ೩ ಸಲಾಮ್. ೪. ಸೋಜ್. ೫. ವಾದೈಲಾ. ೬. ಜಾರೀ. ೭. ಬಿವಾ. ಎಂಬುದಾಗಿ.[೨]

ಕರ್ಬಲಾ ಯುದ್ಧವು ವಾಸ್ತವಾಗಿ ಎರಡು ಸೈನ್ಯಗಳು ಮಧ್ಯೆನಡೆದ ಯುದ್ಧವಲ್ಲ. 'ಕುಫಾ' ನಗರಕ್ಕೆ ಹೊರಡುತ್ತಿದ್ದ ಹುಸೇನನ ಪರಿವಾರದ ಮೇಲೆ ನಡೆದ ದಾಳಿ ಇದಾಗಿದೆ. ಕಡೆಯವರೆಗೂ ಹುಸೇನ್ ಪರಿವಾರವು ಹೋರಾಟಕ್ಕೆ ಸಿದ್ಧವಾಗಿರಲಿಲ್ಲ. ಹತ್ತುದಿನಗಳು ಕಾಲ ವಿವಿಧ ರೀತಿಯ ಹಿಂಸೆಗೆ ಗುರಿಪಡಿಸಿ ಹಸು ಗೂಸುಗಳನ್ನೊಳಗೊಂಡಂತೆ ಎಪ್ಪತ್ತೆರಡು ಜನರನ್ನು ಯುಜೀದನ ಸೈನ್ಯ ಕೊಂದು ಹಾಕಿತು. ಹುಸೇನನ ಪರಿವಾರದಲ್ಲಿ ಜೈನುಲ್ಲಾಬದೀನ್ . ಹೆಸರಿನ ಒಂದೇ ಒಂದು, ಮಗು ಮಾತ್ರ ಬದುಕಿ ಉಳಿಯಿತು. ಈತನ ಸಂತತಿಯವರೇ 'ಮಾಯ' ವಂಶಸ್ಥರಾಗಿದ್ದಾರೆ. ತಮ್ಮ ಪೂರ್ವಿಕರ ಬಗೆಗಿನ ಸಹಾನುಭೂತಿ ಹಾಗೂ ಹುಸೇನನ ಪ್ರಾಮಾಣಿಕತೆಯ ಮೇಲಿನ ಗೌರವದಿಂದಾಗಿ ಇಂದಿಗೂ ಮೊಹರಂನ ಆಚರಣೆ ಪ್ರಚಲಿತವಲ್ಲಿದೆ. ಮಾತಮ್

[illegible]

[illegible]

[illegible]

[illegible]

(ದೇಹವನ್ನು ಹಿಂಸಿಸಿಕೊಂಡು ರಕ್ತವನ್ನು ಚೆಲ್ಲುವುದು) ಮಾಡಿಕೊಳ್ಳುತ್ತಾ. 'ಓಹುಸೇನ್... ನಾವೇನಾದರೂ ಕರ್ಬಲಾಯುದ್ಧದಲ್ಲಿ ಬದುಕಿದ್ದಿದ್ದರೆ ನಿನಗಾಗಿ ನಮ್ಮ ಪ್ರಾಣವನ್ನರ್ಪಿಸಲೂ ಹಿಂದೆ ಮುಂದೆ ಯೋಚಿಸುತ್ತಿರಲಿಲ್ಲ'ವೆಂದು ಇದಕ್ಕೆ ಕುರುಹಾಗಿ ಮೈಮೇಲೆ ಗಾಯ ಮಾಡಿಕೊಂಡು ರಕ್ತ ಹರಿಸಿಕೊಳ್ಳುತ್ತಾರೆ.

ಉರ್ದುವಿನಲ್ಲಿರುವ ಮೊಹರಂಗೀತೆಗಳು ಹೆಚ್ಚಾಗಿ 'ಕರ್ಬಲಾ' ಬಲಿದಾನದ ವಿವರಗಳನ್ನು ವಸ್ತುನಿಷ್ಠರವಾಗಿ ಹೇಳುತ್ತವೆ. ಆದರೆ ಕನ್ನಡ ಮತ್ತು ತೆಲುಗಿನಲ್ಲಿರುವ ಮೊಹರಂ ಗೀತೆಗಳು ಮೂಲ ವಿವರಗಳನ್ನು ಮಾರ್ಪಡಿಸಿಕೊಂಡ ರಚನೆಗಳಾಗಿವೆ. ಬಹುಶಃ ಮುಸ್ಲಿಮೇತರ ವರ್ಗವು 'ಮೊಹರಂ'ಗೆ ಉತ್ಸವವನ್ನಾಗಿಯೇ ಪ್ರಾಮುಖ್ಯತೆ ನೀಡಿ ಆ ಚರಣೆಯ ಮೂಲ ವಿವರಗಳನ್ನು ಕ್ರಮಶಃ ಮರೆತದ್ದರಿಂದಾಗಿ ಮೊಹರಂನ ತೆಲುಗು, ಕನ್ನಡ ಹಾಡುಗಳಲ್ಲಿ ಈ ವಿವರಗಳು ಕಣ್ಮರೆಯಾಗಿರಬಹುದಾಗಿದೆ. ಇದನ್ನು ಮುಂದೆ ವಿವರವಾಗಿ ಪರಿಶೀಲಿಸಲಾಗುವುದರಿಂದ ಈಗ ಉರ್ದುವಿನ 'ಮೊಹರಂಗೀತೆ' ಯೊಂದನ್ನು ಉದಾಹರಣೆಗೆ ನೋಡಬಹುದು.

ಈ ಕೆಳಗೆ ಕೊಡಲಾಗಿರುವ ಆ ಹಾಡಿನ ಸಾರಾಂಶ ಹೀಗಿದೆ. ವಂದನೆಗಳು ಹುಸೇನ್, ಕರ್ಬಲಾ ವೀರರು ಕಷ್ಟಗಳನ್ನು ಸಹಿಸಿದವರಾಗಿದ್ದಾರೆ. ದೇವರು ನಿಮ್ಮವನು, ನೀವು ಅವನಿಗೆ ಸೇರಿದವರು. ನೀರಲ್ಲಿಳಿದೂ ಕೂಡ ದಾಹದಿಂದ ಹೊರಟು ಹೋದೆ. ನಂಬಿಕೆಯು ಕೂಡ ಹೇಳುತ್ತದೆ. ಅಬ್ಬಾಸ್ ನಂಬಿಕೆಯುಳ್ಳವನೆಂದು. ನಿರಾಡಂಬರವಾಗಿದ್ದಾರೆ, ಇಸ್ಲಾಂನ ಅನುಯಾಯಿಗಳು. ಕಷ್ಟಗಳನ್ನು ಸಹಿಸಿದ ನಿಮ್ಮೆಲ್ಲರಿಗೂ ವಂದನೆಗಳು. ಎಂದು ಮುಂದುವರೆಯುವ ಈ ಹಾಡು ಹೀಗಿದೆ.

ಸಲಾಂ ಸಾಬಿರೋ ಮಜ್ ಲೂಮ್ ಕರ್ಬಲಾವಾಲೇ ||
ಖುದಾ ಹೈ ಆಫ್ ಕಾ ಔರ್ ಆಪ್ ಹೈ ಖುದಾ ಹಲೇ ||
ಅಗರ್ ರಸೂಲ್ ಕಿ ನೌಹಬತ್ ಮಕಾಂ ದೇತಿ ಹೈ
ಸಲಾಂ ಸಾಬಿರೋ... ||

[illegible]

[illegible]

[illegible]

[illegible]

[illegible]

[illegible]

ಉತರ್ ಕೆ ಪಾನಿ ಮೇ ಪ್ಯಾಸೇ ಹಿ ಹೋ ಗಯೆ ವಾಪಸ್
ವಫಾ ಭಿ ಕಹತೀ ಹೈ ಅಬ್ಬಾಸ್ ಹೈ ವಫವಾಲೇ
ಸಲಾಂ ಸಾಬಿಕೋ....||

ಥಾಚರ್ ಚ ಪಾಮ್ನೆ ಆವೋ ಚಲೋ ಕೆ ದೇಖಾಯೇ
ಬೈಗರ್ ಪರ್ದಾ ಹೈ ತತ್ ಹೀರ್ ಕಿರ್ ದಾವಾಲೆ
ಸಲಾಂ ಸಾಬಿರೋ... ||

ಜ ಹ ಭಿ ಬಾಚಾದರೇ ಜೈನಬ್ ಕಜಿಕಲ್ ಸುನ್ ತೇ ಹೈ
ತೋ ಪೂಟ್ ಪೂಟ್ ಕೇ ರೋತೇ ಹೈ ಸಬ್ ಹಯಾವಾಲೇ
ಸಲಾಂ ಸಾಬಿರೋ ಮಜ್ ಲೂಮ್ ಕರ್ಬಾಲಾವಾಲೆ
ಖುದಾ ಹೈ ಆಫ್ ಕಾ ಔರ್ ಆಫ್ ಹೈ ಖುದಾವಲೆ

ಉರ್ದು ಮೊಹರಂ ಹಾಡುಗಳಿಗಿರದ ವಿಶಿಷ್ಟತೆಯು ತೆಲುಗು ಮತ್ತು ಕನ್ನಡ ಮೊಹರಂ ಹಾಡುಗಳಿಗಿದೆ. ಮೂಲ ಕರ್ಬಲಾದ ಘಟನೆಗಳನ್ನು ಇಲ್ಲಿನ ಧಾರ್ಮಿಕ ನೆಲೆಯಿಂದ ಪರಿಭಾವಿಸಲಾಗುತ್ತದೆ. ಮುಸ್ಲಿಂ ಮತ್ತು ಮುಸ್ಲಿಮೇತರರ ಮಧ್ಯೆ ಸುಧೀರ್ಘಕಾಲದ ಸಹಬಾಳ್ವೆ, ಸೂಫಿಜಂ, ಮತಾಂತರೀಕರಣ ಮತ್ತು ಭಕ್ತಿ ಪಂಥದಂತಹ ಸಾಂಸ್ಕೃತಿಕ ಪ್ರಕ್ರಿಯೆಗಳ ಕಾಲಘಟ್ಟದಲ್ಲಿ ಹುಟ್ಟಿಕೊಂಡ ಹಾಡುಗಳು ಇವಾಗಿವೆ. ಹೀಗಾಗಿ ವಿಭಿನ್ನ ಆಶಯ ನಂಬಿಕೆ ಆಚರಣೆಗಳಿಂದ ಸೃಷ್ಟಿಗೊಂಡ ಈ ಹಾಡುಗಳು ಇತರೆ ಜಾನಪದ ಪ್ರಕಾರಗಳಿಗಿರದ ವೈವಿಧ್ಯತೆ ಮತ್ತು ಹೊಸ ನುಡಿಗಟ್ಟುಗಳನ್ನು ಪಡೆದುಕೊಂಡು ವಿಶಿಷ್ಟವಾಗಲು ಸಾಧ್ಯವಾಯಿತು.

ಮೊಹರಂನ ದಿನ ಸಾಮಾನ್ಯವಾಗಿ ಪಂಜಾಗಳಿಗೆ ಸಕ್ಕರೆ, ತೆಂಗು, ಊದು ಬತ್ತಿಗಳಿಂದ ಪೂಜೆ ನಡೆಸಲಾಗುತ್ತದೆ. ವಾಸ್ತವಾಗಿ ಇದನ್ನು ನಿವೇದನೆ ಎಂದು ಕರೆಯುವುದೇ ಹೆಚ್ಚು ಸಮಂಜಸವಾದುದು ಕಾಯಿ, ಸಕ್ಕರೆ ಮುಂತಾಗಿ ಏನೇ ತೆಗೆದು ಕೊಂಡು ಹೋದರು ಅದನ್ನು ಸಾಮಾನ್ಯ ಪರಿಭಾಷೆಯಲ್ಲಿ 'ಓದಿಕೆ'

ಮಾಡಿಸಿಕೊಂಡು ಬರುವುದು ಎನ್ನುತ್ತಾರೆ. ಮುಲ್ಲಾನು ಭಕ್ತರಿಂದ (ವಿಶೇಷವಾಗಿ ಹೆಣ್ಣುಮಕ್ಕಳೇ ಸಂಖ್ಯೆಯಲ್ಲಿ ಜಾಸ್ತಿ) ಪಡೆದುಕೊಂಡ ಸಕ್ಕರೆ ಮೊದಲಾದ ಓದಿಕೆಗೆ ತಂದ ವಸ್ತುವಿನ ಸ್ವಲ್ಪ ಭಾಗವನ್ನು ತೆಗೆದು ಪಕ್ಕಕ್ಕಿಟ್ಟು ಕುರಾನಿನ ಒಂದೆರಡು ಸೂರಾಗಳನ್ನು ಉಚ್ಚರಿಸುತ್ತಾನೆ. ಇದಕ್ಕಿಂತ ಭಿನ್ನವಾಗಿ ಪೂಜಾ ವಿಧಾನ ಇರಬಹುದೆಂಬುದನ್ನು ಈ ಕೆಳಗಿನ ಹಾಡು ಸ್ಪಷ್ಟಪಡಿಸುತ್ತದೆ.

ಆರುಮಂದಿ ತುರಕರು ಕೂಡಿ ವಾರೆಲಿ ಚಂದಪ್ಪನ ನೋಡಿ
ಗುಪ್ಪಲಿ ಹಾಕೋ ಸಡಗಾರ ಯಮ ಹೊನ್ನೂರು ಸ್ವಾಮಿ
ಗುಪ್ಪಲಾಕಾದು ಸಡಗಾರ

ಹತ್ತು ಮಂದಿ ತುರಕಾರು ಕೂಡಿ ವಾರೆಲಿ ಚಂದಪ್ಪನ ನೋಡಿ
ಹಲಗೀಯ ಸಬೂದ ದಿಮಿ ದಿಮಿ
ಬಿಳಿ ಕುದುರಿ ಏರಿಕ್ಯಂಡು ನೀನು ಬಾರೊನ್ನೂ್ಹರುಸ್ವಾಮಿ
ಮಾಲೂದಿ ನನ್ನಾ ಮನಿಯಾಗ
ಮಾಲೂದಿಯೇ, ನನ್ನ ಮನಿಯಾಗೊನ್ನೂ್ಹರುಸ್ವಾಮಿ
ಕಂದಾನ ಜವಳಿ ಇಳಿವೇನು
ಕಂದಾನೇ, ಜವಳಿ ಇಳಿವೇನೊನ್ನೂ್ಹರುಸ್ವಾಮಿ
ಕಂದಾನ ಜವಳಿ ಇಳಿವೇನು
ಕಂದಾನೇ, ಜವಳಿ ಇಳಿವೇನೊನ್ನೂ್ಹರುಸ್ವಾಮಿ
ಕಂದಾನ ಮ್ಯಾಲೆ ದಯೆವಿರಲೋ
ಕೆಂಗುದಿರಿ ಏರಿಕ್ಯಂಡು ನೀ ಬಾರೊನ್ನೂ್ಹರು ಸ್ವಾಮಿ
ಕಂದೂರಿ ನನ್ನ ಮನಿಯಾಗ
ಕಂದೂರಿಯೇ, ನನ್ನ ಮನಿಯಾಗೊನ್ನೂ್ಹರು ಸ್ವಾಮಿ
ಕಂದಾನ ಜವಳಿ ಇಳಿವೇನು
ಓರಿಯೆಂಡೆ ತಂದು ರಾಮಸಾಲಿಗೆ ಸರಿಸಿ
ಸಾದಾಮಲ್ಲಿಗೆ ಎಡೆ ಮಾಡಿ ಕೋಲನ್ನ ಕೋಲೆ
ಸಾದಾ ಮಲ್ಲಿಗೆ ಎಡೆ ಮಾಡೊನ್ನೂರು ಸ್ವಾಮಿ

ಅಪ್ಪೋನ್ನೂರ ಸ್ವಾಮಿಗೆ ಶಿವಪೂಜೇ ಕೋಲನ್ನ ಕೋಲೆ
ಎತ್ತೀನ ಯೆಂಡೆ ತಂದು ಆವರಿಗೆ ಸಾರಿಸಿ
ಮಚ್ಚು ಮಲ್ಲಿಗೆಯೆಡೆ ಮಾಡೀ ಕೋಲನ್ನ ಕೋಲೆ
ಸಾದೀನೆ ಮಲ್ಲಿಗೆಯೆಡೆ ಮಾಡೆನ್ನೂರು ಸ್ವಾಮಿ
ಅಣ್ಣೋನ್ನೂರು ಸ್ವಾಮಿಗೆ ಶಿವಪೂಜೆ ಕೋಲನ್ನ ಕೋಲೆ
ಗಟ್ಟಿಸಿ ನಾಬಡಿಯೋ ಬಿಸಲೀಗೊನ್ನೂರು ಸ್ವಾಮಿ
ವಲ್ಲಿ ಮುಂಡಾಸವಣಿಗ್ಯಾವ್ರೋ ಕೋಲನ್ನು ಕೋಲೆ
ಇಟ್ಟೀನ ಕೊಲ್ಲೀಗೆ ತೆಳ್ಳಾನ ನೀರಿಗೆ
ಜಾಡಿಸಿ ಬಡಿಯೊ ಬಿಸಲೀಗೆ ಕೋಲನ್ನ ಕೋಲೆ
ಜ್ಯಾಡಿಸ್ಯನ್ನಾ ಬಡಿಯೋ ಬಿಸಿಲೀಗೊನ್ನೂರು ಸ್ವಾಮಿ
ಹಚ್ಚಡ ಮುಂಡಾಸವಣಿಗ್ಯಾವ್ರೊ ಕೋಲನ್ನ ಕೋಲೆ
ಅಪ್ಪ ಅದ್ಯಾನೆಂದು ಇಪ್ಪತ್ತು ಗಾವುದ ಬಂದೆ
ಅಪ್ಪ ಇಲ್ಲಲೋ ಗುಡಿಯಾಗೆ ಕೋಲನ್ನು ಕೋಲೆ
ಅಪ್ಪ ಇಲ್ಲಲ್ಲೋ ಗುಡಿಯಾಗೊನ್ನೂರು ಸ್ವಾಮಿ
ಲೋಬಾನದಾಗಡಿಗ್ಯಾನೆ ಕೋಲನ್ನ ಕೋಲೆ
ಲೋಬನಾದೊಗಿಯ್ಯಾಗ ಅಡಗ್ಯಾನೊನ್ನೂರುಸ್ವಾಮಿ
ಬಾಲಾನ ಸಂತಾನ ಕೊಡು ನಮಗೇ ಕೋಲನ್ನ ಕೋಲೆ
ಅಣ್ಣ ಐದ್ಯಾನೆಂದು ಹನ್ನೊಂದು ಗಾವುದ ಬಂದೆ
ಅಣ್ಣ ಇಲ್ಲಲ್ಲೋ ಗುಡಿಯ್ಯಾಗ ಕೋಲನ್ನ ಕೋಲೆ
ಅಣ್ಣ ಇಲ್ಲವಲ್ಲೋ ಗುಡಿಯಾ ಗೊನ್ನೂರು ಸ್ವಾಮಿ
ಬುಕ್ಕಿಟ್ಟಿನ್ಯಾಗಡಿಗ್ಯಾನೆ ಕೋಲನ್ನ ಕೋಲೆ
ಅಂದುಳ್ಳ ವಣೇನೂರೆ ಚಂದವುಳ್ಳ ಬಜಾರದಾಗೆ”
ಗಂಧ ಆರ್ಯಾವೆ ಕೋಳನ್ನ ಕೋಲೆ
ಗಂದಾನೆ ಆರ್ಯಾವೆಲ್ಲ ಗಗನಕ್ಕೊನ್ನೂರುಸ್ವಾಮಿ
ಗುಡೀಲಿಂದ ದರ್ಗಾಕ್ಕೆ ಬರುವಾಗೆ ಕೋಲನ್ನ ಕೋಲೆ
ಇಟ್ಲಿಂಗರುಡಿಗೆ ಸಡಿಲ್ಯಾವೆ ಕೋಲನ್ನಕೋಲೆ “

ಈ ಹಾಡು 'ಮೊಹರಂ' ನ ಆರಂಭ ಮತ್ತು ಆದರ ಮುಕ್ತಾಯದವರೆಗಿನ ವಿವರಗಳನ್ನೊಳಗೊಂಡು, ಮುಸ್ಲಿಮೇತರ ಹೆಣ್ಣುಮಕ್ಕಳು ಧಾರ್ಮಿಕ ಆಧ್ಯಾತ್ಮಿಕವಾಗಿ ಪೀರ್ಲ ಮಸೀದಿಗಳನ್ನು ಅವಲಂಬಿಸಿದ್ದಾರೆನ್ನುವುದನ್ನು ಸ್ಪಷ್ಟ ಪಡಿಸುತ್ತದೆ. ಮಾಲದಿ, ಕಂದೂರಿ ಎಡೆಯೊಂದಿಗೆ ಕಂದನ ತಲೆ ಮುಡಿಯನ್ನು ತೆಗೆಸುತ್ತಿದ್ದೇನೆ. ನನ್ನ ಕಂದನ ಮೇಲೆ ದಯವಿರಲಿ ಎಂದು ಪ್ರಾರ್ಥಿಸುತ್ತಾಳೆ. ಈ ಹಾಡಿನಲ್ಲಿ ಬರುವ ಹೊನ್ನೂರು ಸ್ವಾಮಿಯು ಅನಂತಪುರ ಜಿಲ್ಲೆಯ ದರ್ಗಾಹೊನ್ನೂರಿನಲ್ಲಿದ್ದ ಸಂತ ಹಜರತ್ ಸರ್ಮಸ್ತ್ ಹುಸೇನಿ ಚಿಷ್ತಿಯಾಗಿದ್ದು ಹೊನ್ನೂರು ಸ್ವಾಮಿಯೆಂಬುದಾಗಿ ಸ್ಥಳೀಯ ಹೆಸರಿನಿಂದ ಕರೆಯಲ್ಪಡುತ್ತಿದ್ದಾನೆ. ಈ ಭಾಗದ ಬಹುತೇಕ ಪೀರ್ಲ ಮಸೀದಿಗಳಿಗೆ (ಅಷುರಾಖಾನ್) ಹೊನ್ನೂರು ಸ್ವಾಮಿಗುಡಿಯೆಂಬುದಾಗಿಯೇ ಕರೆಯುತ್ತಾರಲ್ಲದೆ ಮೊಹರಂನ ಮುಖ್ಯ ದೇವರಿಗೆ. (ಅಂದರೆ ಹುಸೇನನ ಪ್ರತಿಮೆ - ಆಲಂ - ಗೆ ಅಥವಾ ಪಂಜಾಗೆ) ಹೊನ್ನೂರು ಸ್ವಾಮಿಯೆಂತಲೇ ಕರೆಯುತ್ತಾರೆ. ಮೊಹರಂನ ದಿನ ಸಗಣಿಯಿಂದ ಮನೆಯೊಳಗಿನ ನೆಲಸಾರಿಸಿ ಅಣ್ಣೆನ್ನೂರುಸ್ವಾಮಿಗೆ ಶಿವಪೂಜೆ ಮಾಡುವುದಾಗಿ ಹೇಳಿಕೊಳ್ಳುತ್ತಾಳೆ. ಮೊಹರಂನ ಪಂಜಾಗಳ ವಸ್ತ್ರಗಳು, ಹಚ್ಚಡ ಮುಂಡಾಸಗಳನ್ನು 'ಇಟ್ಟೀನ ಕೊಲ್ಲೀಗೆ, ತೆಳ್ಳಾನ ನೀರಾಹರಿಗೆ ಜಾಡಿಸಿ ಬಡಿದು ಸ್ವಚ್ಛಗೊಳಿಸುವ ಕ್ರಿಯೆಯು ಸಹ ಮೊಹರಂನ ಸಿದ್ಧತೆಗಳನ್ನು ಸೂಚಿಸುತ್ತದೆ. 'ಅಂದುಳ್ಳ ವಣೇನೂರೆ ಚಂದವುಳ್ಳ ಬಜಾರದಾಗೆ, ಗಂದ ಆರ್ಯಾದೆ ಕೋಲನ್ನ ಕೋಲೆ' ಎಂದು ಹಾಡಲ್ಲಿ ಬರುವುದು ಉರುಸಿನ ವಿವರಣೆಯಾದರೂ ಈ ಊರಲ್ಲಂತೂ ಯಾವ ಉರುಸನ್ನೂ ಆಚರಿಸುವುದಿಲ್ಲ. ಉರುಸೂ ಸಹ ಸೂಫಿಗಳ ಪುಣ್ಯತಿಥಿಯಾಗಿರುವುದರಿಂದ 'ಮೊಹರಂ' ಹಾಗು 'ಉರುಸ' ನ್ನು ಸಹ ಒಂದೇ ನೆಲೆಯಲ್ಲಿ ಕಾಣಲಾಗುತ್ತದೆ. ಇಂತಹದೇ ತೆಲುಗಿನ ಈ ಹಾಡನ್ನು ಗಮನಿಸಬಹುದು.

ಮೋಪಿಡಿ ೧ ಮುಷ್ಟೂರು ೨ ಮೊದಲಾಮಿದಾಲ ೩
ದಿನ ಮಿಂದ ಕೊಟಾಲ ೪ ದಿಗುವ ಪಾಪಿಲಿ ೫
ರಾಂಪುರಪು ೬ ರಾಸೆರ್ಲ ೭ ರಾಮ ಸಾಗ್ರಾಮು ೮
ಪೇರ್ಲೈನ ರಾಕಟ್ಲ ೯ ಪೀರ್ಲದೇವುಳ್ಳೂ

ಪೆನ್ನೇಟಿ ರೇವುಲೋ ಪೆದ್ದ ವುರುಸಮ್ಮ
ಪಾತ ಚಿಂತಾಪಂಡು ಪುಳಿಕಾಪು ಜೇಸಿ
ಸಿರಿಮುಗ್ಗು ಪಿಂಡಿತೋ ನಿಕಿಲಿಜೀಪಿಚ್ಚಿ
ಕೋರಿನ್ನ ನೂನೆಲ್ಲು ಕೊಬ್ಬರಿನೂನೀ
ಪೇರಿನ್ನ ನೇತಿಬೊಟ್ಟು ಪೆಟ್ಟಿತಿಕ್ಕಂಗಾ
ಅದಿಯೇಮಿ ಮೆರುಪಮ್ಮ ಅಪರಂಜಿಮೆರುಪೂ
ಅಸೇನಿ ಮೆರುಪೆಲ್ಲ ಅಂಗತ್ಲೊ ಮೆರಿಸೆ
ಪೂಸೇನಿ ಮೆರುಪೆಲ್ಲ ಪೂರಿಲೋ ಮೆರಿಸೇ
--- - -- --- --- -- ---
--- --- -- -- ---- ---
-- -- -- --- --- --- --
ಕೋರಿ ತೆಚ್ಚೂಕುಂಟಿ ಕೊಂಗು ಬಂಗಾರೂ
ಮೊಕ್ಕಿತೆಚ್ಚೂಕುಂಟಿ ಮುತ್ತಯಿದ ತನಮೂ [೨]

ಮೇಲಿನ ಕನ್ನಡದ ಮೊಹರಂ ಹಾಡಿನಂತೆಯೇ ತೆಲುಗಿನ ಈ ಹಾಡು ಸಹ ಮಹಿಳೆಯರಿಗೆ 'ಮೊಹರಂ'ನ ಮೇಲಿರುವ ವ್ಯಾಮೋಹವನ್ನು ತಿಳಿಸುತ್ತದೆ. ಅಲ್ಲದೆ ಎರಡೂ ಹಾಡುಗಳ ಆಶಯಗಳು ಸಮಾನವಾಗಿದ್ದು ವಿವರಗಳೂ ಸಹ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿವೆ. ಕನ್ನಡದ ಹಾಡಿನಲ್ಲಿ ಮೊಹರಂನ ಮಸೀದಿಗೆ ಸಂಬಂಧಿಸಿದ ವಸ್ತುಗಳನ್ನು ಸ್ವಚ್ಛಗೊಳಿಸುವ ವಿವರ ಬಂದರೆ ತೆಲುಗಿನ ಹಾಡಲ್ಲಿ ಪೀರ್ಲ ಪಂಜಾಗಳನ್ನು ರಂಗೋಲಿಪುಡಿಯಿಂದ ಚೆನ್ನಾಗಿ ತಿಕ್ಕಿ ತೊಳೆದು ನಂತರ ಅದನ್ನು ಹೆಪ್ಪುಗಟ್ಟಿದ ತುಪ್ಪ ಅಥವಾ ಬೆಣ್ಣೆಯನ್ನು ಲೇಪಿಸಿ ಬಟ್ಟೆಯಿಂದ ಉಜ್ಜಿದಾಗ ಅದೆಂತಹ ಹೊಳಪು ಮಾಡುತ್ತದೆಯೆಂದರೆ ಅಪಂಜಿ ಹೊಳಪು ಎಂದು ಆಶ್ಚರ್ಯ ಪಟ್ಟು ಹಸನ್ನನ ಹೊಳಪೆಲ್ಲ ಅಂಗಡಿಗಳಲ್ಲಿ ಮೆರೆದರೆ, ಹುಸೇನನ ಹೊಳಪೆಲ್ಲ ಊರೊಳಗೆ ಮೆರೆಯಿತು ಎಂದು ಸಂಭ್ರಮಿಸುತ್ತಾರೆ. ಮತ್ತೆ ಮುಂದೆ ಮೈತುಂಬುವ ದೇವರಿಗೆ ಬೆಳ್ಳಿತೊಟ್ಟಿಲು. ಬತ್ತಾಸಿನ (ಸಿಹಿತಿಂಡಿ) ಸರಗಳು, ವಸ್ತ್ರಗಳೊಂದಿಗೆ, ಸಕ್ಕರೆ, ಪಾನೀಯ ಶ್ಯಾವಂತಿಗೆ ಹೂವು ಇವೆಲ್ಲವನ್ನು ತಂದು ಮೊಹರಂನ ಪೂಜೆ ನೆರವೇರಿಸುತ್ತೇನೆ ಬಯಸಿ ನಾನು ಬಂಗಾರ ತಂದುಕೊಂಡೆ, ನಿನ್ನಲ್ಲಿ ಬೇಡಿಕೊಂಡು



ಮೊಹರಂ'ನ ಪಂಜಾ, ಕರ್ಬಲಾ ಬಲಿದಾನದ ವೀರರ ಪ್ರತೀಕ



ಊರಲ್ಲಿ ಸವಾರಿ ಹೊರಟಾಗ ಪಂಜಾಗಳೆರಡರ ಪ್ರೀತಿಯ ಸ್ಪರ್ಶ. ಹಲವೆಡೆ ಅಕ್ಕಪಕ್ಕದ ಊರುಗಳ ಪಂಜಾಗಳು ಒಂದಡೆ ಸೇರಿ ಈ ಚಿತ್ರದಲ್ಲಿ ತೋರಿಸಿರುವಂತೆ ಸ್ಪರ್ಶ ಕ್ರಿಯೆಯಲ್ಲಿ ಭಾಗವಹಿಸುವುದು ಸಾಮಾನ್ಯ. ಇದನ್ನು 'ದೇವ್ರು ನಮಸ್ಕಾರ ಮಾಡ್ತಾವ' ಎನ್ನುತ್ತಾರೆ.

ನಾನು ಮುತ್ತೈದೆ ತನವನ್ನು ತಂದುಕೊಂಡೆ ಎಂಬುದಾಗಿ ಹೇಳಿಕೊಳ್ಳುತ್ತಾಳೆ.

ಮೊಹರಂನ ಈ ರೀತಿಯ ಜನಪ್ರಿಯತೆಗೆ ಅದರ ಆಚರಣೆಯ ಸ್ವರೂಪವೇ ಕಾರಣವಾದಂತಿದೆ. ಶೋಕಸೂಚಿಕ ಆಚರಣೆಯಾಗಿದ್ದುದು ಉತ್ಸವವಾಗಿ ಮಾರ್ಪಟ್ಟು, ಕರ್ಬಲಾದ ಯುದ್ಧದ ಅಭಿನಯದಂತೆ ಕೈಯಲ್ಲಿ ಆಯುಧಗಳನ್ನು ಹಿಡಿದು (ಈಗೀಗ ಕೇವಲ ಕೋಲು ಮತ್ತು ಅಪಾಯಕಾರಿಯಲ್ಲದ ಆಯುಧದಂತಹ ಉಪಕರಣವನ್ನು) ಅಲಾಯಿ ಕುಣಿವುದು, ಮದ್ಯ, ಮಾಂಸ, ಹಾಡು, ಹುಲಿವೇಷಗಳಿಂದಾಗಿ ವರ್ಣರಂಜಿತ ರೂಪು ಪಡೆದುಕೊಂಡುದ್ದರಿಂದಾಗಿ ಇದು ಅತ್ಯಂತ ಪ್ರಮುಖ ಆಚರಣೆಯಾಗಿ ಪ್ರಚಲಿತವಲ್ಲಿದೆ. ಯಾವುದಾದರೂ ಸಂತೋಷ ಪಡಬಹುದಾದ ಘಟನೆಗಳಿಗೆ, ಕ್ರಿಯೆಗಳಿಗೆ ಪೀರಲು ಹಬ್ಬಮಾಡಿಬಿಡೋದು ಎಂಬ ನುಡಿಗಟ್ಟು (ಪೀರ್ಲು ಪಂಡುಗ ಜೇಸಿಡಿಸೇದಿ) ಈ ಭಾಗದ ಬಳ್ಳಾರಿ, ಅನಂತಪುರ, ಕರ್ನೂಲು, ರಾಯಚೂರು ಜಿಲ್ಲೆಯ ಗಡಿಭಾಗದ ಹಲವಾರು ಕಡೆ ಪ್ರಚಲಿತದಲ್ಲಿದೆ.

ಬೀದರ್, ಗುಲ್ಬರ್ಗಾ, ಮೊದಲಾದ ಕಡೆ ಕರ್ಬಲಾ ಹಾಡುಗಳೊಂದಿಗೆ ರಿವಾಯತ್ ಪದಗಳನ್ನು ಹಾಡುತ್ತಾರೆ. ಇವನ್ನು ಸವಾಲ್ ಜವಾಬ್ ಪದಗಳೆಂದೂ ಕರೆಯುವುದು ವಾಡಿಕೆ. ಈ ಪ್ರದೇಶಗಳ ಮೊಹರಂ ಹಾಡುಗಳ ಭಾಷೆ ಮತ್ತು ರೂಪದಿಂದ ಭಿನ್ನವಾದ ಹಾಡುಗಳೂ ಇಲ್ಲಿವೆ. ಆಂಧ್ರದ ಕರ್ನೂಲು ಜಿಲ್ಲೆಯ ಆದವಾನಿಯಲ್ಲಿ ದೊರೆತ ಕನ್ನಡದ ಹಾಡುಗಳನ್ನು ನಿದರ್ಶನಕ್ಕೆ ನೋಡಬಹುದು. ಬೀದರ, ಗುಲ್ಬರ್ಗಾ ಮುಂತಾದೆಡೆಯ ಮೊಹರಂ ಹಾಡುಗಳಲ್ಲಿ ಕರ್ಬಲಾದಲ್ಲಿ ಯುದ್ಧಕ್ಕೆ ತೊಡಗುವವರು ಬಿಲ್ಲು ಬಾಣಗಳನ್ನುಪಯೋಗಿಸುತ್ತಿದ್ದರೆ ಇಲ್ಲಿ ಮದ್ದುಗುಂಡುಗಳನ್ನುಪಯೋಗಿಸಲಾಗುತ್ತದೆ. ಎಜೀದನಂತೂ ಯುದ್ಧಕ್ಕೆ ಹೊರಡುವ ಮುನ್ನ ಮದ್ದು ಗುಂಡುಗಳನ್ನು ಸಂಗ್ರಹಿಸುತ್ತಾನೆ. ಆದಿಲ್ ಶಾಹಿ, ಬಹುಮನಿ ಮತ್ತು ವಿಜಯನಗರದ ಅರಸರಿಗೆ ಇದು (ಆದವಾನಿ) ಆಯಕಟ್ಟಿನ ಸ್ಥಳವಾದುದರಿಂದ ಇಲ್ಲಿ ಮೇಲಿಂದ ಮೇಲೆ ಯುದ್ಧ ಸಂಭವಿಸುತ್ತಿರಬೇಕು. ಹೀಗಾಗಿ ಈ ಭಾಗದ ಜನರಿಗೆ ಮದ್ದುಗುಂಡುಗಳ ಪರಿಚಯ ಸಾಕಷ್ಟಿರುವಂತಿದೆ.

ಏಜೀದನಿಗೆ ಕಗಾದು ಬರಾದು
ನೀವು ಲಡಾಯಕೆ ಬರ್ಯೋ ಜಲಾದು
ನಿಮ್ ಹೆಂಡರ ತಾಳಿ ಹರಾದು
ಹೀಗೆಂದು ಕಗಾದ ಬರಾದು ||

ಆ ಕಾಗದ ಏಜೀದ ಕಂಡೂ
ಅವ ನೋಡಿ ಎದೆ ಹೊಡಕೊಂಡು
ಕರೆ ಕಳುಹಿಸ್ಯಾನೆಲ್ಲಾ ದಂಡು
ಕೂಡ್ಯಾಕನೆ ಮದ್ದೇ ಗುಂಡು
ತುಬಾಕಿ ಕೈಯೊಳಗಿಡಕೊಂಡು
ಅವ ಲಡಾಯಿಕಿ ಹೊಂಟವನು ಗಂಡು ||

ಹೋಗಿ ಕರ್ಬಲಾದೊಳಗೆ ಇಳಕಂಡು
ಅಲ್ಲಿ ಮಹಮ್ಮದ್ ಹನೀಪನ ಕಂಡು
ಮಳಿಯಂಗೆ ಸುರಿಸ್ಯರೋ ಗುಂಡು
ಕಬ್ಬಕ್ಕಿ ಕವಿದ ಹಿಂಡು
ಸುಟ್ಟರಿಸಿ ಬಿಟ್ಟನೋಗುಂಡು ||

ಬಾಣಾ ದಿರಿಸು ಬಿಟ್ಟ ಏಜೀದ
ಇಪರೀತ ಸುಟ್ಟನೋ ಮೊದ್ಲಾ
ಕೇಳರಿ ಲಡಾಯಿ ಮುಂದೆ
ಮಹಮ್ಮದ್ಹನೀಫ ಬಂದೆ|| [೨]

ಈ ಮೇಲಿನ ಹಾಡಿನಲ್ಲಿ ಮೂಲದ ಕರ್ಬಲಾ ಘಟನೆಗಳು ವ್ಯತ್ಯಸ್ತಗೊಂಡಿವೆ. ಇಲ್ಲವೆ ರೂಪಾಂತರಕ್ಕೊಳಪಟ್ಟಿವೆ. ಕೂಫಾ ನಗರದ ಜನರು ಹುಸೇನನ್ನು ಆಹ್ವಾನಿಸಿ ಖಲೀಫರಗುವಂತೆ ಕೋರಿದುದರಿಂದ ಹುಸೇನನ ಸೀಮಿತ ಪರಿವಾರ 'ಕೂಫಾ'ದ ಕಡೆಗೆ ಪ್ರಯಾಣ ಬೆಳೆಸಿ ಮಾರ್ಗ ಮಧ್ಯದಲ್ಲಿ

ಕರ್ಬಲಾ ಮೈದಾನದಲ್ಲಿ ಏಜೀದನ ಸೈನ್ಯದಿಂದ ಸುತ್ತುವರಿಯಲ್ಪಟ್ಟು ನಿರ್ಬಂಧಕ್ಕೊಳಗಾಗುತ್ತದೆ. ಆದರೆ ಈ ಹಾಡಲ್ಲಿ ಏಜೀವನಿಗೆ ಕಾಗದ ಬರೆದು ಯುದ್ಧಕ್ಕೆ ಆಹ್ವಾನಿಸಲಾಗುತ್ತದೆ. ಆ ಕಾಗದವನು ಏಜೀದನು ಕಂಡು ಎದೆ ಹೊಡುಕೊಂಡು, ಮದ್ದುಗುಂಡುಗಳನ್ನು, ದಂಡನ್ನು ಕೂಡಿಸಿ ಕರ್ಬಲಾ ಮೈದಾನಕ್ಕೆ ಹೋಗುತ್ತಾನೆ. ಈ ಹಾಡಿನಲ್ಲಿ ಯುದ್ಧದ ಚಿತ್ರಣ ಸಮರ್ಪಕವಾಗಿ ಮೂಡಿ ಬಂದಿದ್ದು, ನಿದರ್ಶನವಾಗಿ ಈ ಸಾಲುಗಳನ್ನು ಗಮನಿಸಬಹುದು.

ಬಡಿಯಕ್ಕೆ ಹೊರಟರೋ ಸರದಾರಾ
ಹಾರಿ ಹೋದವೊ ಲಕ್ಷಾಶಿರಾ
ದಂಡೆಲ್ಲಾ ಆಯಿತು ಸಂಹಾರ
ಹರಿಸ್ಯಾರೊ ರಕ್ತ ಸಮುದ್ದೂರ ‖ ಕೇಳಿ ‖

ಏಜೀದನೆಂಬೋ ಹೇಷಾರ
ಉಳಿಲಿಲ್ಲ ವಂಶಕೆ ಯಾರ್ಯಾರಾ
ಲೂಟಿ ಮಾಡ್ಯಾನ ರಮ್ಮಸಗಾರಾ
ಕಿಲೇವು ತಗಂಡು ಸಂಹಾರಾ ‖ ಕೇಳಿ ‖

ದೇವಲೋಕದೊಳಗೆ ಹೇಷಾರ
ಕರ್ಬಾಲ ನಡುಗೀತು ಥರಥಾರ
ಭೂಮಿ ಆಯಿತು ನೀರ್ ನೀರಾ
ಅವರು ಕುದುರೆ ಮೇಲೆ ಸಂಹಾರಾ ‖ ಕೇಳಿ ‖ [೧೮]

ಹಜರತ್ ಅಲಿಯವರ ಪುತ್ರ ಮತ್ತು ಹುಸೇನನ ಸಹೋದರ ಅಬ್ಬಾಸ್ ಕರ್ಬಲಾದಲ್ಲಿ ಹುಸೇನನ ಪರಿವಾರದ ಸೇನಾನಿಯಂತಿರುತ್ತಾನೆ. ಏಜೀದನ ಸೈನ್ಯ ಹುಸೇನನ ಸಣ್ಣ ಪರಿವಾರವನ್ನು ನಿರ್ಬಂಧಕ್ಕೊಳಪಡಿಸಿ ನೀರು ಸಹ ಸಿಕ್ಕದಂತೆ ಮಾಡಿಬಿಡುತ್ತಾನೆ. ಶಿಬಿರದಲ್ಲಿನ ಹಸುಗೂಸುಗಳು ನೀರಿಗಾಗಿ ತಹ ತಹ ಪಡುತ್ತವೆ. ಅಬ್ಬಾಸ್ ಧೈರ್ಯದಿಂದ ಶತ್ರು ಸೈನ್ಯದ ಕಣ್ಣು ತಪ್ಪಿಸಿ ನೀರ ಬಳಿಗೆ ಹೋಗಿ ಚರ್ಮದ ಚೀಲದಲ್ಲಿ (ಮಷ್ಕ್)

ನೀರು ತೆಗೆದುಕೊಂಡು ವಾಪಾಸಾಗುವಾಗ ಹತನಾಗುತ್ತಾನೆ. ಅಬ್ಬಾಸ್ ದಾಹದಿಂದ ನೀರಬಳಿಹೋಗಿ, ನೀರು ಕೈಯಲ್ಲಿಡಿದಿದ್ದರೂ ಸಹ ದಾಹದಿಂದಲೇ ಪ್ರಾಣಬಿಡುತ್ತಾನೆ. ಮೊಹರಂನ ೯ನೇ ದಿನ ಕರ್ಬಲಾದ ಮೃತವೀರರಸ್ಮೃತಿಗಾಗಿ ಪಾನಕ, ಶರಬತ್ತನ್ನು ಅಲಾವಿ ಕುಣಿಯಲ್ಲಿ ಸುರಿಯುವುದು ಇದೇಕಾರಣಕ್ಕಾಗಿಯಾಗಿದೆ.

ಈ ಕೆಳಗೆ ಉದಾಹರಿಸಹಲಾಗಿರುವ ಹಾಡಲ್ಲಿ ಹುಸೇನನು ಒಂಬತ್ತು ತಿಂಗಳ ಸಣ್ಣ ಬಾಲಕ ಅಸಗರ್ ಅಲಿಯನ್ನು ಎತ್ತಿಕೊಂಡು ನೀರಿಗಾಗಿ ಹೊರಟನೆಂದಿದೆ. ಹಾಗೆ ಹೊರಟಾಗ ಏಜೀದನ ಸೈನ್ಯವು ಬಾಣ ಹೊಡೆದು ಅಸಗರ್ ಅಲಿಯನ್ನು ಸಾಯಿಸುತ್ತದೆ. ಕರ್ಬಲಾದ ಮೂಲ ವಿವರಗಳು ಏರುಪೇರಾದರೂ ಆ ದುರಂತವನ್ನು ಮುಖ್ಯವಾಗಿಟ್ಟುಕೊಂಡು ಸೃಷ್ಟಿಯಾದ ಈ ಹಾಡುಗಳು ಮೊಹರಂ ಆಚರಣೆಯ ಬಗೆಗೆ ಜನಪದರಿಗೆ ಇರುವಗೌರವಾದರಗಳನ್ನು ಸ್ಪಷ್ಟಪಡಿಸುತ್ತವೆ.

ಅಸಗಾರಾಲಿ ಉತುಪನ್ನದೊಳು ಸುಕಕಾಣಲಿಲ್ಲ
ಎರವು ಆದವರೀಗೆ ತಾಯಿ ಹಾಲಾ
ಹೇ ಒಂಬತ್ತು ತಿಂಗಾಳ ಸಣ್ಣ ಬಾಲಾ || ಅಸಗಾ ||

ಎರಡೇ ತೂಕಿ ಒಣಗ್ಯಾರೆ ಮೊಳೆತಾರ ಗಾಲಾ ಮೇಲಾ
ಕುಡುದೇನಂದರೆ ಗುಕ್ಕೆ ನೀರೇ ಇಲ್ಲಾ
ಹೇ ಬಿದ್ದೈತೆ ಬೆಂಕ್ಯಂತ ಮಧ್ಯಾಹ್ನ ಬಿಸಲಾ || ಅಸಗಾ ||

ಪೀರ್ ಹುಸೇನ್ ಮಗನೀಗೆ ತಾಗಂಡ ಕುದುರೆ ಮೇಲಾ
ನೀರ ಹುಡುಕೂತ ಹೊಂಟಾ ಆರಣ್ಯ ಮೇಲಾ
ಹೇ ಬಿದ್ದೈತೆ ಬೆಂಕ್ಯಂತ ಮಧ್ಯಾಹ್ನ ಬಿಸಲಾ || ಅಸಗಾ ||

ಹೊಳೀಯಾ ದಂಡೇಲಿ ಬಂದು ನಿಂತು ಭಕ್ತಿ ಮಾಡ್ಯಾರೆಲ್ಲಾ
ಏಜೀದ್ನ ದಂಡೂ ಭರ್ತಿ ಕಬುರಾ

ಹೇ ಹತ್ತು ದಂಡು ರಾತ್ರಿಯಾಯಿತು ಹಗಲ || ಅಸಗಾ ||

ಅಂದ್ಹಾರುಸೇನ್ ದಯಮಾಡಿ ನೀರುಕೊಡ್ರಿ ವಂದೇ ಬಟ್ಲಿ
ಎನ್ನ ಅಣ್ಣನ ಮಗನಿಗೆ ಚೈನಾವಿಲ್ಲ
ಹೇ ಪುಣ್ಯಾಶರತ ನಿಮಗಾಗೋತಲ್ಲ || ಅಸಗಾ ||

ಕೆಟ್ಟಾ ಮನಿಸ್ಯಾ ಹುಸೇನಣ್ಣನಿಗೆ ಬಾಣಾ ಬಿಟ್ಟಾನಲ್ಲ
ತಪ್ಪಡಿ ಬಡಿದು ತಿಳಿಸುವೆನು ಮೋರಿ ಮ್ಯಾಲೆ
ಹೇ ಕಾಕೀಕಿ ಅಂತ ಪ್ರಾಣ ಬಿಟ್ಯಾನಲ್ಲ || ಅಸಗಾ ||

ಎದೆಗೆ ಕಕ್ಕಿ ರಕ್ತ ಕೆಳಗೆ ಬೀಳಗೊಡಲಿಲ್ಲ
ರಕ್ತದೊಳಗೆ ಆದಾವು ವಜ್ರಸಾಲಾ
ಹೇ ಒಂಬತ್ತು ತಿಂಗಳ ಸಣ್ಣ ಬಾಲಾ || ಅಸಗಾ ||

ರಾಜಾಬೀದಿಯೊಳ್ ಮೋಜೀಲಿ ಎನಕಂದ ಆಡಾಲಿಲ್ಲ
ಎನ್ನ ಕಣ್ಣಲಿ ನಾನು ನೋಪಾಲಿಲ್ಲ
ಹೆಣ ಯಾರಿಗೆ ಕೈಯ ಕೊಡಲಿಲ್ಲ. || ಅಸಗಾರಾ ||

ಸತ್ಯಶಂಕಾ ಮಾಡೀದರಿದ ಯಾರೋ ಹೇಳೇವಲ್ಲಾ
ಖಿಳಿಗಿ ಸಾಹೇಬನ ದಯನಮ್ಮ ಮ್ಯಾಲೆ
ಪ್ರಿಯ ಆತಗೆ ಮಾಡುವೆ ಸೊಲ್ಲೇ ಆಳಾ || ಅಸಗಾ || [೧೯]

ಬಾಣಾಬಿಟ್ಟಾಗ ಮಡಿದದ್ದು ಹುಸೇನರ ಕೈಯಲ್ಲಿನ ಕೂಸು. ಆ ಸಂಗತಿಯನ್ನು ಈ ಹಾಡುಗಾರ ಅದು ಸಂಪೂರ್ಣ ಸತ್ಯವೆಂದು ಮತ್ತದನ್ನು ಕದ್ದು ಮುಚ್ಚಿ ಹೇಳಬೇಕಾದ್ದೇನಿಲ್ಲ ತಪ್ಪಡಿ ಬಡಿದು (ಹಲಗೆ ಬಾರಿಸಿ, ಡಂಗುರ ಹೊಡೆದು) ತಿಳಿಸುತ್ತೇನೆ ಎಂದಿದ್ದಾನೆ. ಇಲ್ಲಿ ಏಜೀದನನ್ನು ತಿರಸ್ಕಾರದಿಂದ ಕಾಣುವುದೆಂದರೆ ಕೆಡುಕನ್ನು ದ್ವೇಷಿಸುವುದೆಂದಾಗುತ್ತದೆ. ಕರ್ಬಲಾ ಮೈದಾನದಲ್ಲಿ ಹುಸೇನನ್ನೊಳಗೊಂಡ ೭೦ ಜನ ವೀರರನ್ನು

ಅಮಾನವೀಯತೆಯಿಂದ ಕೊಂದ ಏಜೀದ ಕೇಡುಕಿನ ಪ್ರತೀಕವಾಗುತ್ತಾನೆ.

ಕರ್ಬಲಾ ಯುದ್ಧ ಸಮಯದಲ್ಲಿ ಕಾಸೀಮ ಹೊಸ ಮದುಮಗನಾಗಿರುತ್ತಾನೆ. ಯುದ್ಧ ಸಮಯದಲ್ಲಿಯೇ ಹಸನ್ನನ ಮಗನಾದ ಕಾಸೀಮನಿಗೆ ಹುಸೇನನು ತನ್ನ ಮಗಳಾದ 'ಕುಬ್‌ರಾ' ಳನ್ನು ಮದುವೆ ಮಾಡಿಕೊಡುತ್ತಾನೆ. ಈ ಮದುವೆಯ ಹಿಂದೆ ಸಣ್ಣ ಕಥೆಯೊಂದು ಪ್ರಚಲಿತವಲ್ಲಿದೆ. ಹಸನ್ನನು ಕಾಸೀಮನಿಗೆ ಕಷ್ಟಕಾಲದಲ್ಲಿ ಮಾತ್ರ ಬಿಚ್ಚಿ ನೋಡುವಂತೆ ಕಟ್ಟಾಳೆ ವಿಧಿಸಿ ಕೈಗೆ 'ತಾಯಿತ' ವೊಂದನ್ನು ಕಟ್ಟಿರುತ್ತಾನೆ. ಪ್ರಸ್ತುತ ಕರ್ಬಲಾ ರಣರಂಗದಲ್ಲಿ ಹೋರಾಡುವುದಕ್ಕೆ ಚಿಕ್ಕಪ್ಪ ಹುಸೇನನು ಅನುಮತಿಕೊಡದೇ ಇರುವಾಗ ವ್ಯಾಕುಲನಾಗಿ 'ತಾಯಿತ' ಬಿಚ್ಚಿನೋಡಿದಾಗ ಅದರಲ್ಲಿ ನಾನೇನಾದರೂ ಜೀವಂತವಾಗಿದ್ದರೆ ಕಾಸೀಮನನ್ನು 'ಕುಬ್ ರಾಳಿಗೆ ಕೊಟ್ಟು, ಮದುವೆ ಮಾಡುತ್ತಿದ್ದೆ'[25] ಎಂಬ ವಿಷಯವನ್ನು ಬರೆದಿದ್ದ. ಅದನ್ನು ಕಾಸೀಮ್ ಚಿಕ್ಕಪ್ಪ ಹುಸೇನ್ ಗೆ ತೋರಿಸಿದಾಗ ಅಣ್ಣನ ಆಶೆಯನ್ನು ಈಡೇರಿಸುವ ಉದ್ದೇಶದಿಂದ ತಕ್ಷಣವೇ ಮದುವೆ ಮಾಡಿಮುಗಿಸಿದ. ಮದುವೆ ಮುಗಿದ ಕೂಡಲೆ ಕಾಸೀಮ್ ಯುದ್ಧದಲ್ಲಿ ಹೋರಾಡಿ ಅಸುನೀಗಿದ. ಅದಕ್ಕಾಗಿಯೆ ಕಾಸೀಮನನ್ನು ಎಂದೆಂದಿಗೂ ಮದುಮಗನೆಂಬುದಾಗಿ ಕರೆಯುತ್ತಾರೆ. ಮೊಹರಂನ ತಾಜಿಯಾಗಳ ಅಥವಾ ಪಂಜಾಗಳ ಮೆರವಣಿಗೆ ಸಂಧರ್ಭದಲ್ಲಿ ದ್ದೂಲ್ಹಾ ದೂಲ್ಹೇವು ಎಂಬ ಉಘ್ಘಡಣೆ ಕಾಸೀಮನನ್ನು ಸ್ಮರಿಸುವುದೇ ಆಗಿದೆ. ದೂಲ್ಹಾ ಪದವು ಹಿಂದಿಯಿಂದ ಬಂದದ್ದಾಗಿದ್ದು ಅದರರ್ಥ ಹೊಸಮದುಮಗ ಎಂಬುದಾಗಿದೆ.

ಕಾಸೀಮನ ಮದುವೆ 'ಕುಬರಾ' ವಿಧವೆಯಾದದ್ದು ಮುಂತಾದ ಸಂಗತಿಗಳಿಗೆ ಸಂಬಂಧಿಸಿದಂತೆ ಉರ್ದು, ಕನ್ನಡ ಮತ್ತು ತೆಲುಗಗಳಲ್ಲಿ ಅನೇಕ ಹಾಡುಗಳಿವೆ. ಉರ್ದುವಿನ ಹಾಡೊಂದರಲ್ಲಿ 'ಕುಬರಾ'ಳ ವೇದನೆ ಈ ಕೆಳಗಿನಂತೆ ವ್ಯಕ್ತವಾಗಿದೆ.

"ಎಂತಹ ವಿಚಿತ್ರ ಮದುವೆನನ್ನದು, ಕ್ಷಣಗಳಲ್ಲೇ ನಾನು ವಿಧವೆಯಾದೆ. ಸಹೋದರಿ 'ಸುಗುರಾ' ಕೂಡಾ ನನ್ನ ಜೊತೆಯಲ್ಲಿಲ್ಲ. ಯಾರ ಹತ್ತಿರ ನನ್ನ ದೀನಕಥೆಯನ್ನು ಹೇಳಿಕೊಳ್ಳಲಿ.

[illegible]

[illegible]

[illegible]

[illegible]

ಎಲ್ಲಿಯೇ ಆಗಲಿ ವಧುವಿಗೆ ಹೊಸಬಟ್ಟೆಗಳನ್ನು ತೊಡಿಸಿ ಮದರಂಗಿಯನ್ನು ಹಚ್ಚುತ್ತಾರೆ. ನನಗೆ ಮಾತ್ರ ವಿಧವೆಯ ಬಟ್ಟೆಗಳನ್ನೇಕೆ ತೊಡಿಸುತ್ತಿದ್ದೀರಿ. ನಮ್ಮನ್ನು ಕೇಳುವವರೇ ಇಲ್ಲದಾಗಿದೆ. ನೋಡು ನೋಡುತ್ತಲೇ ನನ್ನ ಜೀವನ ನಾಶವಾಗಿ ಹೋಯಿತು". [20]

ಕನ್ನಡ ಮತ್ತ ತೆಲುಗು ಹಾಡುಗಳಲ್ಲಂತೂ ಕಾಸೀಮನ ಮದುವೆ, ದಿಬ್ಬಣ, ಆಚಾರ, ವಿಚಾರಗಳೆಲ್ಲ ಪೂರ್ತಿಯಾಗಿ ಮುಸ್ಲಿಮೇತರ ಸಂಪ್ರದಾಯದಂತಿದ್ದು, ಕಾಸೀಮ್ ಯುದ್ಧದಲ್ಲಿ ಮಡಿವಾಗ ಮಡದಿಯನ್ನು ಬಳೆ ಒಡೆದು ವಿಧವೆಯನ್ನಾಗಿಮಾಡಲಾಗುತ್ತದೆ. ಈ ಕೆಳಗಿನ ಹಾಡಿನಲ್ಲಿ ಕಾಸೀಮ ಕಂಕಣ ಬಾಸಿಂಗದ ಹೂವಿನಿಂದಲೇ ಯುದ್ಧವಲ್ಲಿ ಭಾಗವಹಿಸಿದುದನ್ನು ವರ್ಣಿಸಲಾಗಿದೆ.

ಸತಿವಂತರ ಕತಿಕೇಳರಿ ಕುಂತ ನಿಂತಾ ಜನಾ
ಕರ್ಬಾಲ ಅಡಿಯಾಗ ಮೂಡಿತ್ರೀ ಕದುನಾ
ಕಾಸೀಮ ಎದುರುಬಿದ್ದ ಬಾಳ್ ದೆರ್ಯವಾನ
ಲಾಡಂಗಿ ಯುದ್ಧಕಂತ ಮಾಡಿ ಯೋಚನಾ || ಸತಿ ||

--- --- --- --- --- --- --- --- --- --- --- ---
--- --- --- --- --- --- --- --- --- --- ---
ಕಾಕಾನ ಮಗಳೀಗಿ ಎಣ್ಣೆ ಹಚ್ಯಾರ ಸಣ್ಣ ಸುಕ್ರವಾರದಿನಾ
ಕೈಗಿ ಕಂಕಣವಿತ್ರೀ ಹಣೆಗಿ ಬಾಸಿಂಗನ
ಎಂತ ಯ್ಯಾಳ ಸಾಧಿಸಿ ಬಂದಿತೋ ತಾನಾ
ಬಾಸಿಂಗ ಹೂವದಿಂದೆ ನಡುದೀತೋ ಕಮನಾ || ಸತಿ ||

ಮಡದೀಯ ಕೇಳುತಾಳ್ರಿ ಪದವಿಡಿದು ಚಯ್ ನಾ
ಏನು ಹೇಳತ್ರಿ ಹೇಳ್ರಿ ಜುಬಾನs
ಮುಂದ ಬರೂಲೂಕ ಇನ್ನೆಸೋ ದಿನಾs
ನಮದು ನಿಮದು ಅರಸಿಣದೆ ಕೂನಾs || ಸತಿ ||

[illegible]

೧. ತೆಲುಗು, ಉರ್ದು, ಮೊಹರಂಗೀತೆಗಳು, ತುಲನಾತ್ಮಕ ಅಧ್ಯಯನಂ ಮೊಹಮ್ಮದ್ , ಪ್ರ:೮೧, ಈ ಉರ್ದು ಹಾಡಿನ ಪೂರ್ತಿ ಪಾಠವನ್ನು ಅನುಬಂಧದಲ್ಲಿ ಕೊಡಲಾಗಿದೆ.

ಮಡದೀಗಿ ಯೇಳಿ ಕೇಳಿ ಸಮಜ ಮಾಡ್ಯಾನ
ಸಂದು ಮಾಡಿ ಕುದಿರೀಗಿ ಬಿಗುದಾನ್ರಿ ಜೀನs
ಕುದರಿ ಮ್ಯಾಲ ಕುಂತನ್ರಿ ಕಾಸೀಮ್ ಸಾಹೇಬನs
ಲಾಡಂಗಿ ನಡುದಾನ್ರಿ ಎಂತ ದರ್ಯಾದವನಾ || ಸತಿ ||
ಹೇ ಕೈಲೊಳಗಿನ ಸಮ್ ಸಾನ ನಡೀತೊಂದೆ ನವನಾs
ಕೈಲಾಕೋ ಜನರೆಲ್ಲ ಪಡುದಾನ್ರಿ ಬಾಣಾs
ಕೈಯಸೋತು ನಿಂತಾನ್ರಿ ಆಗಿ ನಿತ್ರಾಣಾs
ಸಂದ ನೋಡಿ ವಡುದಾನ್ರಿ ಯಜೀತು ಪ್ರಾಣಾs[೨೨]

ಮತ್ತೊಂದು ಹಾಡಿನಲ್ಲಿ ಕಾಸೀಮ್ ನನ್ನು ಕೊಂದದಕ್ಕೆ 'ಈಸಾ' ಮತ್ತು 'ಹರ' ಇಬ್ಬರು ಮುನಿದರು ಎಂದು ಹೇಳಲಾಗಿದ್ದು ಬ್ರಹ್ಮಲಿಖಿತವನ್ನು ತಪ್ಪಿಸಲು ಯಾರಿಂದ ಸಾಧ್ಯವಿದೆ ಎಂದು ಸಮಧಾನಪಟ್ಟುಕೊಳ್ಳಲಾಗಿದೆ.

ಕಾಸೀಮ್ ಕಂದಾನ ಕರ್ಮಾವು ಕೇಳಿರಣ್ಣಾ
ಸಣ್ಣಾ ಬಾಲಕ ಹಸುಮಗನ ಮರಣಾವಾನ
ಕರ್ಬಾಲದೊಳಗೆ ಹೋಗಿ ಕೊಟ್ಟಾರೋ ಶಿರಸಾವನ
ಪೂರ್ವಲಿಖಿತವು ಬ್ರಹ್ಮ ಲಿಖಿತವು
ತಪ್ಪಾದುದಾರೀಗನ್ನ || ಕಾಸೀಮ್ ||[೨೩]

ಕಾಸೀಮ ತಂದೆ ತಾಯಿಯರ ಅಪ್ಪಣೆ ಪಡೆದು ಕೊಂಡು ಏಜೀದನ ಸೈನದ ವಿರುದ್ಧ ವೀರಾವೇಶದಿಂದ ಹೋರಾಡುತ್ತಾನೆ. ಲಕ್ಷ ಜನ ಪೈಲವಾನರು ಸಹ ಮಡಿದರು. ಕಡೆಗೆ ಏಜೀವನ ಕಡೆಯ ಸೈನ್ಯವೆಲ್ಲ ಒಂದಾಗಿ

ಮಳೆಯಂತೆ ಬಾಣಸುರಿಸುತ್ತಾರೆ.

ಕಾಸೀಮ್ ಮಡಿದಿದ್ದು ನೋಡಿದಾರೋ ಹುಸೇನ
ಕೂಸೀನ್ ತಂದಾರೋ ಡೇರಾಕ್ಕೆ ಆಕ್ಷಣಾನಾ
ಸೀಸ್ ಕಾಸೀದಂತೆ ಆಯಿತು ಇಳಿದಿಳಿದು ತಾಯೀಗಿನ್ನ
ಈಸಾ ಮುನಿದಾನೋ ಹರನೇ ಮುನಿದಾನೋ
ಎರವಾದೆ ಕಂದಾನೀನು || ಕಾಸೀಮ್ ||[೨೪]

ಬಳ್ಳಾರಿ ತಾಲೂಕು ವಣೇನೂರಿನಲ್ಲಿ ದೊರೆತ ತೆಲುಗಿನ ಕಥನ ಗೀತೆಯೊಂದಿದೆ. ಈ ಹಾಡು ತೆಲುಗಲ್ಲಿರುವುದರಿಂದ ಇಡೀ ಹಾಡನ್ನು ಅನುಬಂಧದಲ್ಲಿ ಕೊಟ್ಟು ಅದರ ಅನುವಾದವನ್ನು ಮಾತ್ರ ಇಲ್ಲಿ ಕೊಡಲಾಗಿದೆ.[೨೫] ಈ ಗೀತೆಯಲ್ಲಿ ಸಣ್ಣ ಕಾಸೀಮ್ ಮತ್ತು ದೊಡ್ಡಕಾಸೀಮ್ ಎಂಬ ಇಬ್ಬರು ಅಣ್ಣತಮ್ಮಂದಿರಿದ್ದು, ಇದರ ಕಥನ ಕಲೆ, ನಿರೂಪಣೆಯಿಂದಾಗಿ ಈ ಹಾಡು ಉಳಿದ ಮೊಹರಂ ಹಾಡುಗಳಿಗಿಂತ ವಿಶಿಷ್ಟವಾದುದು ಮತ್ತು ಅಪರೂಪದ್ದಾಗಿದೆ.

ಅರೇಬಿಯಾದಲ್ಲಿ ಕೆಂಪು ಬೀಬಿಯ ಮಕ್ಕಳು ಸಣ್ಣಕಾಸೀಮ್ ಮತ್ತು ದೊಡ್ಡ ಕಾಸೀಮ್ ಎನ್ನುವವರಿದ್ದರು. ಇಬ್ಬರನ್ನೂ ಒಂದೇ ಶಾಲೆಗೆ ಹಾಕಿದರು. ಓದಲು, ಬರೆಯಲು ಮತ್ತು ಯುದ್ಧ ವಿಧ್ಯೆಗಳನ್ನು ಕಲಿತರು. ಯೌವನಕ್ಕೆ ಬಂದಾಗ ಅಂತಸ್ತಿನಲ್ಲಿ ಅವರಿಗಿಂತ ಮೇಲಿನ ವಂಶಸ್ಥರ ಹುಡುಗಿಯರಿಂದ ಪ್ರೇಮ ಪತ್ರಗಳೂ ಬರತೊಡಗಿದವು. ಪ್ರೇಮ ಪತ್ರಗಳನ್ನು ಕಾಗೆಯ ಕಾಲಿಗೆ ಕಟ್ಟಿ ಕಳುಹಿಸುತ್ತಿದ್ದರು. ಪ್ರೇಮ ವ್ಯವಹಾರ ಒಂದು ಹಂತಕ್ಕೆ ಬಂದು ಮದುವೆಯಾಯಿತು. ಅದೂ ಮದುವೆ ಹೇಗಾಯಿತೆಂದರೆ ಯಾರಿಗೂ ಗೊತ್ತಾಗದಂತೆ ಎಲೆಹಂಚಲಾಯಿತು (ನಿಶ್ಚಿತಾರ್ಥವಾಯಿತು). ವಾಸ್ತವಾಗಿ ಈ ಹಾಡು ವಿವರಿಸುವಂತೆ ಕಳ್ಳತನದಲ್ಲಿ (ದೊಡ್ಡಿವಾರಿ ಆಡಬಿಡ್ಡಕಿ ದೊಂಗ ಪೆಂಡ್ಲಿ ಚೇಸರೇ) ಮದುವೆಯಾಯಿತು. ಕುಶಿಯಿಂದ ಕುದುರೆಗಳ ಮೇಲೆ ಹತ್ತಿ ಸವಾರಿ ಮಾಡಿದರು. ಕಾಗೆಗಳಿಗೂ ಕುಶಿಯಾಯಿತು. ಅವು ತಮ್ಮ ಕೆಲಸಕ್ಕೆ ಪ್ರತಿಫಲವಾಗಿ ಕಾಣಿಕೆ ಕೇಳಿದಾಗ ಅವರು ಅವುಗಳ ಕೂಗುವ ಕೊರಳಿಗೆ ಅಲಂಕಾರದ ಕುಚ್ಚು ತಂದು

ಕೊಡುವೆವೆಂದು ಮತ್ತು ಅವುಗಳಿಗೆ ತಿನ್ನಲು ಅನುಕೂಲವಾಗುವಂತೆ ಬೀಳು ಬಿದ್ದ ಹೊಲಗಳಿಗೆ ನೆಲಗಡಲೆ ಹಾಕಿಸುವುದಾಗಿ, ನೀರು ಕುಡಿಯಲು ಚಿಲುಮೆಗಳನ್ನು ತೋಡಿಸುವುದಾಗಿಯೂ ಆಶ್ವಾಸನೆ ಕೊಟ್ಟರು.

ಅಷ್ಟರೊಳಗೆ ತಮಗೆ ಯುದ್ಧ ಸಂಭವಿಸುವುದಾಗಿ ತಿಳಿದು ಬಂತು. ಅರಶಿಣ ಬಟ್ಟೆ ಬಿಟ್ಟು ಯುದ್ಧದ ಬಟ್ಟೆ ತೊಟ್ಟರು. ಆಯುಧಗಳನ್ನು ತೆಗೆದು ಕಲ್ಲಿಗೆ ಉಜ್ಜಿ ಹರಿತ ಗೊಳಿಸಿಕೊಂಡರು ಮುಂದೆ ಬೇಟೆನಾಯಿಗಳನ್ನು ಬಿಟ್ಟು, ತಾಯಿಯನ್ನು ಬಲವಂತದಿಂದ ಒಪ್ಪಿಸಿ, ಬುತ್ತಿಕಟ್ಟಿಸಿಕೊಂಡು ಕುದುರೆಹತ್ತಿ ಹೊರಟರು. ಬುತ್ತಿ ಕಟ್ಟಲು ಹೇಳಿದಾಗ ತಾಯಿ ಬಟ್ಟೆ ಇಲ್ಲವೆಂದು ಹೇಳಿದಾಗ 'ಏನಮ್ಮಾ ನೀನು ಬಟ್ಟೆ ಇಲ್ಲಾಂತ ಹೇಳಿಬಿಟ್ಟೆಯಲ್ಲ ಎಂಬ ಆಕ್ಷೇಪ ಎತ್ತುತ್ತಾರೆ. ಬಹುಶಃ ಇದು ಅಪಶಕುನವೆಂದು ಭಾವಿಸಿರಬೇಕು. ಹೋಗುವುದಕ್ಕಿಂತ ಮುಂಚೆ ಕಟ್ಟೆಯ ಮೇಲೆ ಮಲ್ಲಿಗೆಯ ಬಳ್ಳಿ ಹಾಕಿ, ಮನೆಯೊಳಗೆ ದೀಪ ಮುಡಿಸಿ ಹೋಗುವುದಾಗಿ, ಮಲ್ಲಿಗೆಯ ಬಳ್ಳಿ ಒಣಗಿ ಹೋದರೆ, ದೀಪ ಆರಿ ಹೋದರೆ ತಾವು ಮರಣ ಹೊಂದಿದೆವೆಂದು ತಿಳಿಯಬೇಕು ಎಂದು ಸೂಚಿಸಿ ಕುದುರೆಗಳನ್ನೆತ್ತಿ ಛೀಕರಿಸಿ ಹೊರಟರು.

ಹೋಗುತ್ತಿರುವಾಗ ತುಂಬಾ ದೂರದ ನಂತರ ತಮ್ಮೆದುರಿಗೆ ಬರುವ ದಂಡು ಎರಡು ಲಕ್ಷದ ದಂಡಾದರೂ ಎರಡೇ ಏಟಿಗೆ ಸಂಹರಿಸಿದರು. ಅದರ ಹಿಂದೆ ಬರುವ ಮೂರು ಲಕ್ಷದದಂಡನ್ನೂ ಸಹ ಮೂರೆ ಏಟಿಗೆ ಹೊಡೆದರು. ಅದರ ಹಿಂದೆ ಬರುವ ದಂಡು ಏಳುಲಕ್ಷದ ದಂಡಾಗಿತ್ತು. ಅದು ಕ್ರೂರ ಮತ್ತು ಪಾಪಿಷ್ಟ ದಂಡೆಂದು ಅನುಮಾನಿಸಿ ಅದರ ಸಹವಾಸ ನಮಗೆ ಬೇಡವೆಂದು ಕುದುರೆಗಳನ್ನು ಬಿಟ್ಟು ಬಾವಿಯೊಳಗಡೆ ಇಳಿದರು. ಆ ಪಾಪಿಷ್ಟ ದಂಡು ಬಾವಿಯ ಸಮೀಪ ಬಂತು . ಅಲ್ಲಿ ಅವರನ್ನು ಕಾಣದೆ ಹಿಂದಿರುಗಿ ಹೋಗುವಾಗ ಬಾವಿಯ ದಂಡೆಯ ಮೇಲೆ ಓತಿಕ್ಯಾತವೊಂದು ತಲೆಯಾಡಿಸುತ್ತ ಇವರೆಡೆ ನೋಡಿತು. ಬೆರಳಿಟ್ಟು ತೋರಿಸುವಂತೆ ಬಾವಿಯೊಳಗಿದ್ದವರನ್ನು ತೋರಿಸಿತು. ಸಣ್ಣ ಕಾಸೀಮ್ , ದೊಡ್ಡ ಕಾಸೀಮರನ್ನು ಎರಡೇ ಏಟಿಗೆ ಕತ್ತರಿಸಿದರು.

ಇತ್ತ ದಾರಿ ಕಾಯುತ್ತಿದ್ದ ಮಡದಿಯರು ಅವರ ಬೇಟೆನಾಯಿಗಳು, ಕುದುರೆಗಳು ಹಿಂದಿರುಗಿದರೂ

ಅವರು ಹಿಂದಿರುಗದಿರುವುದನ್ನು ಗಮನಿಸಿದರು. ಅಷ್ಟರಲ್ಲಿ ಅವರು ತೊಟ್ಟ ಬಟ್ಟೆಗಳೂ ಬಂದವು. ಅದೇ ವೇಳೆಯಲ್ಲಿ ಮನೆಯಲ್ಲಿನ ದೀಪ ಆರಿಹೋಯಿತು. ಯುದ್ಧದಲ್ಲಿ ಕಾಸೀಮರು ಮರಣ ಹೊಂದಿದ್ದರಿಂದ ಅವರ ಹೆಂಡತಿಯರ ಕೈ ಬಳೆ ಹೊಡೆದರು. ಕೆಂಪು ಬೀಬಿ ದುಃಖಿಸುತ್ತಾ ಯುದ್ಧರಂಗದಲ್ಲಿನ ಅವರ ಕೈಗಳು ಕಬ್ಬಿನ ತುಂಡುಗಳು, ರಕ್ತವು ಬೆಲ್ಲದ ಪಾನಕವು ಕರುಳು ಕೊರಳಲ್ಲಿ ಲಾಡಿಯ ಸಂಕೇತಗಳೆಂದು ಹೇಳುತ್ತಾಳೆ. ಕುರಿಯನ್ನು ಬಲಿಗೊಟ್ಟು 'ಕಂದೂರಿ' ಎಡೆ ಮಾಡಿ ಸೇವಿಸಬೇಕೆಂದು ಬಯಸುತ್ತಾಳೆ. ಅದಕ್ಕಾಗಿಯೇ ಇಂತಹ ದಿನ (ಮೊಹರಂ) ವರ್ಷಕ್ಕೊಂದು ಸಲ ಬರಲಿ ಎಂದು ಬಯಸುತ್ತಾಳೆ. ಇಲ್ಲಿಗೆ ಈ ಕಥನ ಗೀತೆ ಮುಗಿಯುತ್ತದೆ.

ಈ ಕಥನಗೀತೆಯು ಎರಡು ಕಾರಣಗಳಾಗಿ ಮುಖ್ಯವಾಗುತ್ತದೆ. ಮೊದಲನೆಯವಾಗಿ ಮೊಹರಂನ ಆಚರಣೆಯ ಹಿನ್ನಲೆ ಅದರ ಅರ್ಥಪೂರ್ಣತೆಯನ್ನು ಸಿಧಾಂತವಾಗಿ ವಿವರಿಸಲು ಈ ಹಾಡು ಪ್ರಯತ್ನಿಸುತ್ತದೆ. ಒಟ್ಟು, ಮೊಹರಂಗೆ ಸಂಬಂಧಿಸಿದ ಸಂಘಟನೆಯ ದುರಂತಮಯವಾಗಿದ್ದು ಅದರ ಸ್ಮರಣೆಗಾಗಿಯೇ ಮೊಹರಂ ಆಚರಣೆ ವರ್ಷಕ್ಕೊಮ್ಮೆ ಬರುತ್ತದೆಯೆಂಬ ವಸ್ತುವನ್ನಿಟ್ಟುಕೊಂಡು ಕಥನ ಗೀತೆಯು ಸೃಷ್ಟಿಗೊಂಡದ್ದಾಗಿದೆ. ಅರೇಬಿಯಾದ ಮೂಲ ಘಟನೆ, ಯುದ್ಧ, ಮದುವೆ, ಮೊದಲಾದವುಗಳನ್ನು ನಮ್ಮ ಸಾಂಸ್ಕೃತಿಕನೆಲೆಯಲ್ಲಿಯೇ ಪರಿಭಾವಿಸುತ್ತಿದ್ದರೂ ಅಪ್ರಜ್ಞಾಪೂರ್ವಕವಾಗಿಯೇ ಭಿನ್ನ ಸಂಸ್ಕೃತಿಯ ಅಂಶಗಳು ವಿಭಿನ್ನ ಪ್ರತಿಮೆಗಳ ಮೂಲ ವ್ಯಕ್ತಗೊಂಡಿವೆ. ಉದಾಹರಣೆಗೆ ಕಾಗೆಯು ಇಲ್ಲಿ ಪಾರಿವಾಳದ ಕೆಲಸ ನಿರ್ವಹಿಸುತ್ತದೆ.

ಹಾಗೆಯೆ ಬೀಬಿಪಾತಿಮಾಳು, ಕೆಂಪುಬೀಬಿಯಾಗಿದ್ದಾಳೆ. ಇಲ್ಲಿ ಬಣ್ಣ ಕೂಡ ಬೇರೊಂದು ಬುಡಕಟ್ಟು, ಜನಾಂಗವನ್ನು ಸೂಚಿಸುವುದಾಗಿದೆ.

ಎರಡನೆಯದಾಗಿ ಇದು ಕಾವ್ಯ, ಕಥನಕಲೆ ಮತ್ತು ನಿರೂಪಣೆಗಳಿಂದಾಗಿ ಅತ್ಯುತ್ತಮ ರಚನೆಯಾಗಿದೆ. ಕಾಸೀಮ ಸಹೋದರರ ಬಾಲ್ಯ, ಓದು, ಪ್ರೇಮ, ಮದುವೆ, ಯುದ್ಧ ಮತ್ತು ಅವರ ಮರಣದವರೆಗೆ ನಿರೂಪಣೆ ಒಂದೇ ರೀತಿಯದಾಗಿದ್ದು ಪ್ರತಿಪಾದದ ಕೊನೆಗೆ ಸ್ವಾಮಿ ನೀಲಾಭರಣಂ ಎಂದು ಪುನರುಕ್ತಿಯಾಗುತ್ತದೆ.

ಇಲ್ಲಿಂದ ನಂತರ ಯುದ್ಧರಂಗಕ್ಕೆ ಹೋಗಿದ್ದ ಕಾಸೀಮ್ ಸಹೋದರರ ಕುದುರೆಗಳು, ನಾಯಿಗಳು, ಬಟ್ಟೆಗಳು ವಾಪಾಸಾಗಿ ಮನೆಯಲ್ಲಿನ ದೀಪ ಆರಿ, ಕಟ್ಟೆಯ ಮೇಲಿನ ಮಲ್ಲಿಗೆಯ ಬಳ್ಳಿ ಒಣಗಿ ಒಣಗಿ ಹೋದಾಗ ಸಾವು ಅಧಿಕೃತವಾಗಿ ಖಚಿತವಾಗುತ್ತದೆ. ಕಥನಗೀತೆಯ ಇಲ್ಲಿಯವರೆಗಿನ ಭಾಗ ಎರಡನೆಯ ಹಂತವಾಗುತ್ತದೆ. ಕಡೆಯ ಹಂತವಾಗಿ ಬೀಬಿಪಾತಿಮಾ ವಿಧವೆಯಾದ ಸೊಸೆಯನ್ನು ಕಂಡು ನಿನ್ನ ಈ ಸ್ಥಿತಿಯನ್ನು ಹೇಗೆ ಸಹಿಸಲಿ ಎಂದು ನೋವಿನಿಂದ ಹೇಳುತ್ತಾ ಭೂಮಿಯ ಮೇಲೆ ಅವರ ಹೆಸರು 'ಮೊಹರಂ' ಆಚರಣೆಯೊಂದಿಗೆ ಸ್ಥಿರಸ್ಥಾಯಿಯಾಗಿ ಉಳಿಯಲೆಂದು ಆಶೀರ್ವದಿಸುತ್ತಾಳೆ. ಗೀತೆಯಲ್ಲಿನ ಮೂರು ಹಂತಗಳ ಲಯವು ಕಥೆಯಲ್ಲಿನ ಘಟನೆಗಳಿಗೆ ತಕ್ಕಂತೆ ಭಾವ ವ್ಯಂಜಕವಾಗಿ ಅಪೂರ್ವ ರೀತಿಯ ಧ್ವನಿ ರಮ್ಯತೆಯನ್ನು ಪಡೆದುಕೊಳ್ಳುತ್ತದೆ.

ಆತಡು ಪೆಟ್ಟಿನ ಕುಕ್ಕಾಲೋಚ್ಚಿ
ಆತಡು ಪೆಟ್ಟಿನ ಕುಕ್ಕಾಲೋಚ್ಚಿ
ಆತಡು ರಾಲೇದನ್ನಯ್ಯೋ
ಆತಡು ರಾಲೇದನ್ನಯ್ಯೋ

(ಆತನು ಸಾಕಿದ ನಾಯಿಗಳು ಬಂದರೂ ಸಹ ಆತನು ಬರಲಿಲ್ಲವೇಕೆ ಅಣ್ಣಯ್ಯ)

ಎಂದು ಕೇಳುತ್ತಾಳೆ. ಇದೇ ತರಹ ಕುದುರೆ, ಬಟ್ಟೆಗಳೂ ಸಹ ಬಂದರೂ ಆತನು ಬರಲಿಲ್ಲವೇಕೆ ಅಣ್ಣಯ್ಯ ಎಂದು ಕೇಳುತ್ತಾಳೆ. ಇಲ್ಲಿನ ದ್ವಿರುಕ್ತಿ ಈ ಹಿನ್ನಲೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿದೆ. ಆ ಬಾಲಕಿಗೆ ಅಣ್ಣ 'ಎನಕೊಚ್ಚೇ ದಂಡುಲ ವಸ್ತಾಡು ಯೇಡಿವದ್ದೇ ಲಾಲೆಮ್ಮ' (ಹಿಂದೆ ಬರುವ ದಂಡಿನಲ್ಲಿ ಬರುತ್ತಾನೆ ಅಳಬೇಡ ಲಾಲೆಮ್ಮ) ಎಂದು ಸಮಾಧನಿಸುತ್ತಾನೆ. ಆದರೆ ಅವಳ ತಳಮಳ, ಅತಂಕ ನಿಜಗೊಳ್ಳುವಂತೆ ಕಟ್ಟೆಯ ಮೇಲಿನ ಮಲ್ಲಿಗೆಯ ಬಳ್ಳಿ, ಒಣಗಿ, ಮನೆಯೊಳಗಿನ ದೀಪ ಆರಿಹೋಯಿತು. ಕಾಸೀಮ್ ದುರ್ಮರಣಕ್ಕೀಡಾದುದು ಸ್ಪಷ್ಟವಾಗುತ್ತದೆ.

ನಂತರ

ಒಂಟೀಲೆ ಆಡ ಬಿಡ್ಡನಿ ನಿಲಸಿ ರಂಡಲು ತೆಂಚಿರೀ[3]

ಅರೇಬಿಯಾದಲ್ಲಿ ಆ ಹೆಂಗಸನ್ನು ನಿಲ್ಲಿಸಿ ಬಳೆಹೊಡೆವರೋ

ಆಗಸೊಸೆಯ ಆಸ್ಥಿತಿಯನ್ನು ಕಂಡು ಕೆಂಪು ಬೀಬಿಯು 'ನಿನು ತಾಳಲೇನಮ್ಮಾ,' (ನಿನ್ನ ಈ ಸ್ಥಿತಿಯನ್ನು ನಾನು ಸಹಿಸಲಾರೆ) ಎಂದು ಕಾಸೀಮ್ ನ ಹೆಸರು ಭೂಮಿಯ ಮೇಲೆ ಚಿರಸ್ಥಾಯಿಯಾಗಿ ನಿಲ್ಲಲೆಂದು ಆಶೀರ್ವದಿಸುತ್ತಾಳೆ. ಸಣ್ಣಕಾಸೀಮ್ , ದೊಡ್ಡಕಾಸೀಮ್ ಇವರ ಬಾಲ್ಯ, ಓದು, ಚಟುವಟಿಕೆಗಳು, ಪ್ರೇಮ ಪತ್ರ ಬರೆಯುವ ವಿವರಗಳೊಂದಿಗೆ ಅತ್ಯಂತ ಲವಲವಿಕೆಯಿಂದ ಸಾಗುವ ಈ ಗೀತೆ ಅಂತ್ಯದಲ್ಲಿ ಘಟಿಸುವ ದುರಂತದಿಂದಾಗಿ ದಟ್ಟೈಸುವ ವಿಷಾದವನ್ನು ಅಸದೃಶವಾಗಿ ಕಟ್ಟಿಕೊಡುತ್ತದೆ.

ಪರ್ಶಿಯಾ ಮೊದಲಾದ ಕಡೆಗೆ ಮೊಹರಂನ ದಿನಗಳಲ್ಲಿ ಊರ ಹೊರಬಯಲುಗಳಲ್ಲಿ ಕರ್ಬಲಾದ ದುರಂತ ಘಟನೆಯ ದೃಶ್ಯರೂಪಕಗಳು ಪ್ರದರ್ಶನಗೊಳ್ಳುತ್ತಿದ್ದವು. ಪ್ರಸ್ತುತ ಮೊಹರಂನ ಉತ್ಸವ, ಮೆರವಣಿಗೆಗಳಿಗೆ ಮೂಲ ಪ್ರೇರಣೆ ಅಂದಿನ ದೃಶ್ಯ ರೂಪಕಗಳೇ ಆಗಿವೆ ಎಂಬ ಅಭಿಪ್ರಾಯವಿದೆ. ಇಂದು ಬಹುತೇಕ ಇಂಡಿಯಾದಾದ್ಯಂತ ಮುಸ್ಲಿಂ ಮತ್ತು ಮುಸ್ಲಿಮೇತರರಿಗಿಬ್ಬರಿಗೂ ಮೊಹರಂ ಬಹುಮುಖ್ಯ ಆಚರಣೆಯಾಗಿದೆ. ಸೂಫಿಸಂತರು, ದರ್ಗಾಗಳು, ಉರೂಸ್ ಆಚರಣೆಗಳಿಗಿಂತ ಭಿನ್ನವಾಗಿ ಏಕಕಾಲಕ್ಕೆ ಎಲ್ಲೆಡೆಗೆ ಆಚರಿಸಲ್ಪಡುವ ಉತ್ಸವ ಇದಾಗಿದೆ.

ಮೊಹರಂನ ವ್ಯಾಮೋಹ ಮುಸ್ಲಿಮೇತರರಲ್ಲಿ ಎಷ್ಟೊಂದು ಅಧಿಕವಾಗಿದೆಯೆಂದರೆ ಊರಲ್ಲಿ ಮುಸ್ಲಿಮರಿಲ್ಲದಿದ್ದರೆ ಬೇರೊಂದು ಊರಿಂದ ಉತ್ಸವವನ್ನು ನಡೆಸಿಕೊಡಲು ಮುಸ್ಲಿಮ್ ಮುಲ್ಲಾರನ್ನು ಕರೆತರಲಾಗುತ್ತದೆ. ಪಂಜಾಗಳನ್ನು (ಪೀರಲು ದೇವರು) ಪ್ರತಿಷ್ಠಾಪಿಸಲು ಮಸೀದಿಯೇ ಇಲ್ಲದ ಕಡೆ ಊರ ಹೊರಬಯಲಲ್ಲಿ ತಾತ್ಕಾಲಿಕವಾಗಿ ಗುಡಾರ ಹೊಡೆದು ಸ್ಥಳವನ್ನು ಅಣಿಗೊಳಿಸಲಾಗುತ್ತದೆ. ಶಾಶ್ವತವಾಗಿ

ಮಸೀದಿಯ ಕಟ್ಟಡಗಳಿರುವ ಕಡೆಗೆ ಪ್ರತಿ ಗುರುವಾರ ಮಹಿಳೆಯರು ಸಕ್ಕರೆ, ಊದು ಬತ್ತಿಯೊಂದಿಗೆ ಹೋಗಿ 'ಓದಿಕೆ' ಮಾಡಿಸಿಕೊಂಡು ಬರುತ್ತಾರೆ. ಸಂತಾನೇಪೇಕ್ಷೆಯಿಂದ ಹರಿಕೆ ಹೊತ್ತು ಮಕ್ಕಳನ್ನು ಪಡೆದ ಸಲುವಾಗಿಯೋ ಅಥವಾ ಪೀರಲು ದೇವರ ಬಗೆಗೆ ಇರುವ ಭಕ್ತಿಯಿಂದಲೋ ತಮ್ಮ ಮಕ್ಕಳಿಗೆ ಹುಸೇನ ಸಾಬು (ಮುಸ್ಲಿಂರು), ಹುಸೇನಪ್ಪ, ಹುಸೇಸದಾಸು, ಕಾಸೀಮ, ಫಕ್ಕೀರಪ್ಪ, ಹೋಲೆಪ್ಪ (ಹಜರತ್ ಅಲಿ) ಹೊನ್ನೂರಪ್ಪ ಎಂಬ ಹೆಸರಿಡುತ್ತಾರೆ. ಅದೇ ಹೆಣ್ಣು ಮಕ್ಕಳಿಗಾದರೆ ಹುಸೇನಮ್ಮ, ಕಾಸೀಮಮ್ಮ, ಫಕ್ಕೀರಮ್ಮ, ಹೋಲೆಮ್ಮ, ಹೊನ್ನೂರಮ್ಮ ಎಂಬ ನಾಮಕರಣವಾಗುತ್ತದೆ. ಇದರಿಂದ ಮುಸ್ಲಿಮೇತರರಲ್ಲಿ 'ಮೊಹರಂ'ಗಿರುವ ಮಹತ್ವ ಅರ್ಥವಾಗುತ್ತದೆ. ಇಂಡಿಯಾದ ಮಧ್ಯಕಾಲೀನ ಭಕ್ತಿ ಪಂಥದ ಚಳುವಳಿಗಳು 'ಮತಾಂತರೀಕರಣ' ಮೊದಲಾದ ಅಂಶಗಳನ್ನೊಳಗೊಂಡ ಸಾಂಸ್ಕೃತಿಕ ಅವಸ್ಥಾಂತರ ಘಟ್ಟದಲ್ಲಿ 'ಮೊಹರಂ' ತನ್ನೆಲ್ಲ ವೈವಿಧ್ಯತೆಯೊಂದಿಗೆ ಮುಸ್ಲಿಮೇತರರ ಧಾರ್ಮಿಕ ಬದುಕನ್ನು ಪ್ರವೇಶಿಸಿದೆ. ನಿಸ್ಸಂದೇಹವಾಗಿ ವರ್ತಮಾನದಲ್ಲಿಯೂ ಸಹ ಮೂಲದ ಸಾಂಸ್ಕೃತಿಕ ಆಶಯಗಳು ಜೀವಂತವಾಗಿದ್ದು ನಮ್ಮ ಪರಂಪರೆಯ ಅರ್ಥಪೂರ್ಣ ವಾಹಕಗಳಾಗಿ ಜೀವಸೆಲೆಯನ್ನುಳಿಸಿಕೊಂಡಿವೆ. ನಮ್ಮ ಲಿಖಿತ ಚರಿತ್ರೆಯ, ಸಂಸ್ಕೃತಿಯ, ಪರಂಪರೆಯ ವ್ಯಾಖ್ಯಾನಗಳನ್ನು ಪೂರ್ತಿಯಾಗಿ ಬದಿಗಿಟ್ಟು ಕೇವಲ ಆಚರಣಾತ್ಮಕ ವಿವರಗಳನ್ನಷ್ಟೆ ಗಮನಿಸಿದರೂ ಸಾಕು, ಅವುಗಳ ಅಂತರಂಗ ಬಿಟ್ಟು ಕೊಡುವ ಸಂಗತಿಗಳು ನಮ್ಮ ಪರಂಪರೆಯ ಜ್ಯಾತ್ಯಾತೀತ ಅಂಶಗಳನ್ನು ಸ್ಪಷ್ಟಪಡಿಸುತ್ತವೆ.

ನೇಪಾಳದ ಪಶ್ಚಿಮ ಭಾಗದಲ್ಲಿ ೧೯೬೩ ಮತ್ತು ೧೯೬೮ರಲ್ಲಿ 'ಮಾರ್ಕ್ ಗೆಬೋರಿಯೋ' ಎನ್ನುವ ಸಂಶೋಧಕರು 'ಮೊಹರಂಗೆ' ಸಂಬಂಧಿಸಿ ಸಂಗ್ರಹಿಸಿದ ಮಾಹಿತಿಯು ಕುತೂಹಲಕರವಾಗಿದೆ. ಗೆಬೋರಿಯು ಅವರು ಸಂಬಂಧಿಸಿದ ಮುಸ್ಲಿಂ ವಕ್ತೃಗಳಿಗೆ 'ನೀವು ಮೊಹರಂನ ವೇಳೆ ಪ್ರವಾದಿಗಳ ಮೊಮ್ಮಕ್ಕಳಾದ ಹಸನ್ ಮತ್ತು ಹುಸೇನರ ಶೋಕಾಚರಣೆಯ ಸಂದರ್ಭದಲ್ಲಿ 'ತಾಜ್ಜಿಯಾ'ಗಳನ್ನು ಹಳ್ಳಿಯ ಬೀದಿಗಳಲ್ಲಿ ಮೆರವಣಿಗೆಗಳಲ್ಲಿ ತರುವುದು, ಪಂಜಾಗಳನ್ನು ಪೂಜಿಸುವುದು, ಕರ್ಬಲಾಯುದ್ಧವನ್ನು ಪ್ರತಿನಿಧಿಸುವ ನಕಲಿ ಹೋರಾಟಗಳನ್ನು ಪ್ರದರ್ಶಿಸುವುದು, ಇವೆಲ್ಲ ಧರ್ಮ ಬಾಹಿರವಲ್ಲವೇ ? ಎಂದು ಪ್ರಶ್ನಿಸಿದಾಗ ಅವರಿಂದ

ಇಲ್ಲವೆಂಬ ಉತ್ತರವೇಬಂತು. ಇದು ಶಿಯಾ ಮೂಲದ ಆಚರಣೆಯಾದರೂ ಇಂಡಿಯಾದಲ್ಲಿ 'ಸುನ್ನಿಗಳು' ಕೂಡ 'ಮೊಹರಂ' ಅನ್ನು ಆಚರಿಸುತ್ತಾರೆ. ಹೊರಗಿನವರು ವಿಚಾರಿಸಿದಾಗ (ಮಾರ್ಕ್ ಗೆಬೋರಿಯು ಕ್ಷೇತ್ರ ಪರಿವೀಕ್ಷಣೆ ಕೈಗೊಂಡ ನೇಪಾಳದ ಪಶ್ಚಿಮ ಭಾಗದ 'ಮುಸ್ಲಿಂ' ವಕ್ತೃಗಳು ವಿವರಿಸಿದಂತೆ) ತಾವು 'ಮೊಹರಂ' ಆಚರಿಸುವುದನ್ನು ನಿಲ್ಲಿಸಿ ಬಿಟ್ಟಿರುವುದಾಗಿ ಖಂಡಿತವಾಗಿ ಉತ್ತರಿಸುತ್ತಾರೆ. ಆದರೆ ಕೂಲಂಕಷವಾಗಿ ಪರಿಶೀಲಿಸಿದಾಗ ಅವರು ಅದನ್ನು ಮುಂದುವರಿಸಿಕೊಂಡು ಹೋಗಿರುವುದು ತಿಳಿದು ಬರುತ್ತದೆ. ಇದು ಈದ್ ಗಿಂತಲೂ ಜೀವಂತಿಕೆಯಿಂದ ಕೂಡಿದ್ದು ಅವರು ಈ ಹಬ್ಬವನ್ನು ತುಂಬಾ ಪ್ರೀತಿಸುವುದಾಗಿ ತಿಳಿದುಬರುತ್ತದೆ.[35]

'ಉರೂಸ್ ' ನಂತಹ ಆಚರಣೆಗೆ 'ಸೂಫಿಜಂ' ನ ಸಾತ್ವಿಕ, ಸೈದ್ಧಾಂತಿಕ ಹಿನ್ನಲೆಯಿದ್ದು ಅದು ಇಲ್ಲಿಯವರೆ ಅಥವಾ ಬೇರೆಡೆಯಿಂದ ಬಂದು ತೀರಿಕೊಂಡ ಸಂತರ ಪುಣ್ಯತಿಥಿಗಳಾಗಿವೆ. ಆದರೆ 'ಮೊಹರಂ' ಇಸ್ಲಾಂನ ಆರಂಭದ ಕಾಲಘಟ್ಟದಲ್ಲಿ 'ಇರಾಕ್ 'ನಲ್ಲಿ ಘಟಿಸಿದ ಧಾರ್ಮಿಕ ದುರಂತದ ಶೋಕಾಚರಣೆಯಾಗಿದ್ದು ಇಂಡಿಯಾದಲ್ಲಿ ಅತ್ಯಂತ ವರ್ಣರಂಜಿತ ರೂಪು ಪಡೆದು ಕೊಂಡದ್ದು ಕುತೂಹಲಕರವಾಗಿದೆ. 'ಉರೂಸ್ 'ಸಂತನು ತೀರಿಕೊಂಡ ತಾರೀಖಿನಂದು ನಡೆಯುವುದರಿಂದ ವರ್ಷವಿಡೀ ಅಸಂಖ್ಯಾತ ಸಂತರ ಪುಣ್ಯತಿಥಿಗಳು ಒಂದಲ್ಲ ಒಂದೆಡೆ ನಡೆಯುತ್ತಲೇ ಇರುತ್ತವೆ. ಆದರೆ ಮೊಹರಂ ಏಕಕಾಲಕ್ಕೆ ಎಲ್ಲೆಡೆಗೂ ಸಾರ್ವತ್ರಿಕವಾಗಿ ಆಚರಿಸಲ್ಪಡುವ ಆಚರಣೆಯಾಗಿದೆ.

ವಾಸ್ತವವಾಗಿ 'ಮೊಹರಂ' ಶೋಕಾಚರಣೆಯಾದರೂ ಅದು ಉತ್ಸವ ರೂಪ ಪಡೆದುಕೊಂಡು ಮುಸ್ಲಿಂ ಮತ್ತು ಮುಸ್ಲಿಮೇತರರಿಬ್ಬರಿಂದಲೂ ಉತ್ಸಾಹದಿಂದ ಆಚರಿಸಲ್ಪಡುವ ಆಚರಣೆಯಾಗಿ ಮಾರ್ಪಟ್ಟಿದೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಬರುವ ಭಾಗಗಳಲ್ಲಿ ಇದು ಯುಗಾದಿ,ದೀಪಾವಳಿಗಳಿಗಿಂತಲೂ ಮಹತ್ವದ ಆಚರಣೆಯಾಗಿದೆ.'ಮೊಹರಂ'ನ ಈ ಜನಪ್ರಿಯತೆಯು ಏನನ್ನು ಸೂಚಿಸುತ್ತದೆ? ಮತ್ತು ಅದು ಶೋಕಾಚರಣೆಯಾಗಿದ್ದೂ ಹಬ್ಬವಾಗಿ ಆಚರಿಸಲ್ಪಡಲು ಕಾರಣಗಳೇನು? ಈ ಆಚರಣೆಯು ಭಕ್ತಿಪಂಥದ ಚಳುವಳಿಗಳ ಕಾಲದಲ್ಲಿ ಇಂಡಿಯಾದಲ್ಲಿ ಚಲಾವಣೆಗೆ ಬಂದಿತೆ? ಮತ್ತು ಏಕೆ ಮುಸ್ಲಿಮೇತರರು 'ಮೊಹರಂ'

ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

ಉರೂಸ್ ನಿರ್ದಿಷ್ಟ ಸಂತನ, ಉಪದೇಶ ಮತ್ತು ಆಧ್ಯಾತ್ಮಿಕ ಆಚರಣೆಗಳ ಫಲವಾಗಿ ಆತನ ಅನುಯಾಯಿ ಭಕ್ತ ಪರಂಪರೆಯಿಂದ ಉಂಟಾದ ಪ್ರಕ್ರಿಯೆಯಾಗಿದ್ದು ಅದಕ್ಕೊಂದು ತಾತ್ವಿಕ ,ಸಾಂಸ್ಕೃತಿಕ ನೆಲೆಗಟ್ಟಿದೆ. ಆದರೆ ಇರಾಕ್ ನ 'ಕರ್ಬಲಾ' ಮೈದಾನದಲ್ಲಿ ಘಟಿಸಿದ ದುರಂತ ಘಟನೆಯು ಇಂಡಿಯಾದ ಮುಸ್ಲಿಮೇತರ ವರ್ಗಗಳಲ್ಲಿ ಆಚರಣಾತ್ಮಕ ಅಭಿವ್ಯಕ್ತಿ ಪಡೆಯುವುದು ಅಭಾಸಕರವಲ್ಲವೇ ? ಎಂಬ ಪ್ರಶ್ನೆಯೇಳಬಹುದು.ಆದರೆ ಇದಕ್ಕೆ ಉತ್ತರವನ್ನು ಕ್ರಮವಾಗಿ ಹೀಗೆ ಕಂಡುಕೊಳ್ಳಬಹುದಾಗಿದೆ. ಕರ್ಬಲಾವಂತಹ ಇಸ್ಲಾಂನ ಅಂತರಿಕ ಸಂಘರ್ಷಗಳ ಸ್ಪಷ್ಟತಿಳಿವು ಅಂದರೆ ಇಸ್ಲಾಂನ ಜ್ಞಾನ ಮುಸ್ಲಿಮೇತರ ವರ್ಗಕ್ಕಿದ್ದು ಅದು ಪ್ರಜ್ಞಾಪೂರ್ವಕವಾಗಿ ಆತ್ಮಬಲಿದಾನದ ಧಾರ್ಮಿಕ ವ್ಯಕ್ತಿಗಳಿಗೆ ಗೌರವ ಸೂಚಿಸುತ್ತಿರಬೇಕು. ಮೊಹರಂನ ಸಂದರ್ಭದಲ್ಲಿ ಹಾಡು ,ಕಥೆ,ಲಾವಣಿಗಳಲ್ಲಿ ಇವಕ್ಕೆ ಸ್ಪಷ್ಟ ಆಧಾರಗಳಿವೆ. ಎರಡನೆಯದಾಗಿ ಸುದೀರ್ಘಕಾಲಾವಧಿಯಲ್ಲಿ ಮುಸ್ಲಿಂರೊಂದಿಗೆ ಸಹಬಾಳ್ವೆ ನಡೆಸುತ್ತಿದ್ದ ಮುಸ್ಲಿಮೇತರರು ಅವರ ಅನುಕರಣೆಯಿಂದಾಗಿ ಮೌಢ್ಯಾಚಾರಣೆಯಾಗಿ 'ಪಂಜಾ'ಗಳಿಗೆ, 'ತಾಜಿಯಾ'ಗಳಿಗೆ ಪೂಜೆ ಸಲ್ಲಿಸುವ ಪರಿಪಾಠ ಬೆಳೆಸಿಕೊಂಡಿರಬೇಕು.

ಇಂಡಿಯಾದಲ್ಲಿ ಮುಸ್ಲಿಂ ರಾಜ್ಯಸತ್ತೆಯನ್ನು ಸ್ಥಾಪಿಸಿ 'ಮತಾಂತರ 'ಗೊಳಿಸುವುದರ ಮೂಲಕ 'ಇಸ್ಲಾಂ' ಅನ್ನು ಹರಡುವುದಕ್ಕಿಂತ ಹೇಗಾದರೂ ಮಾಡಿ ಇಂಡಿಯಾವನ್ನಾಳಬೇಕೆಂಬ ಉತ್ಕಟಾಪೇಕ್ಷೆ ಹೊಂದಿದ್ದ ಸುಲ್ತಾನರಿಗಿಂತ ಭಿನ್ನವಾಗಿ ಸೂಫಿಗಳು ತಮ್ಮ ಆಧ್ಯಾತ್ಮಿಕ ಚಟುವಟಿಕೆಗಳಿಂದ 'ಇಸ್ಲಾಂ'ನ ಸಂದೇಶಗಳನ್ನು ಹರಡಿದರು. ಅವರ ಸೂಫಿ ಕೇಂದ್ರಗಳತ್ತ ಆಕರ್ಷಿಸಲು ಅಸಂಖ್ಯಾತ ಮುಸ್ಲಿಮೇತರರು ಸೂಫಿ ನಂಬಿಕೆ ,ಆಚರಣಾತ್ಮಕ ಸ್ವರೂಪದಿಂದಾಗಿ 'ಇಸ್ಲಾಂ'ನ ಜೀವನ ಪದ್ಧತಿಯನ್ನು ರೂಪಿಸಿಕೊಳ್ಳಬೇಕಾದುದರಿಂದ ಅನಿವಾರ್ಯವಾಗಿ ಮುಸ್ಲಿಮರಾಗಬೇಕಾಯಿತು. ಇಲ್ಲಿ ಸೂಫಿಗಳಿಂದಾಗಲಿ ,ರಾಜ್ಯಾಧಿಕಾರದ ಮೂಲಕವಾಗಲಿ ಒತ್ತಾಯದ ಮುಖಾಂತರ ನಡೆದ ಮತಾಂತರ ಇದಾಗಿರದೆ ಕೇವಲ ನಂಬಿಕೆ ಮುಖಾಂತರ ಇದು ಘಟಿಸಬೇಕಾದುದರಿಂದ ಇಂತಹ ಪ್ರಕ್ರಿಯೆಯು ಹಂತ ಹಂತವಾಗಿ ನಡೆಯಿತು.

ಈ ವಿವಿಧ ಹಂತಗಳಲ್ಲಿ ಮೊಹರಂ ಮುಸ್ಲಿಂ ಮತ್ತು ಮುಸ್ಲಿಮೇತರರ ವರ್ಗಗಳಲ್ಲಿ ಸಮಾನ ಆಸಕ್ತಿ ಹುಟ್ಟಿಸುವ ಆಚರಣೆಯಾಯಿತು. ಇಲ್ಲಿ ಸ್ಪಷ್ಟವಾಗಿ ವಿವರಿಸಬಯಸುವುದಿಷ್ಟೆ, ಮೊಹರಂ ಮುಸ್ಲಿಮೇತರರು 'ಇಸ್ಲಾಂ'ನಂತಹ ಆಕರ್ಷಣೆಯ ವಿವಿಧ ಮಜಲುಗಳಲ್ಲಿ ಸಂತರಿಸಿಕೊಂಡ ಆಚರಣೆಯಾದುದರಿಂದ ಅದು ಸಂಸ್ಕೃತೀಕರಣದ ಕುರುಹುಗಳನ್ನು ದಾಖಲಿಸಿಕೊಂಡಿದೆ.

ಅಡಿಟಿಪ್ಪಣಿಗಳು

೧. ಮೂಲಃ ಶ್ರೀಪಾದ ಜೋಶಿ, ಅನು: ಡಾ|| ಹಿರಣ್ಮಯ,

-'ಮುಸ್ಲಿಂ ಉತ್ಸವಗಳು ಮತ್ತು ಸಂಸ್ಕಾರಗಳು'ಪು. ೯

೨. ಅದೇ ಪು.೧೨

೩. ಮೊಹರಂನ ಈ ಹಾಡು ಹಾಡಿದವರು ಶ್ರೀಮತಿ ಲಸುಮ್ಮಮ 'ವಣೇನೂರು' ಬಳ್ಳಾರಿ ತಾಲೂಕು

೪. 'ಸರಗಸ್ತಿ' ಎನ್ನುವ ಈಪದವು 'ಶಹರ್ ಗಸ್ತ್ ' ಎನ್ನುವ ಪದದಿಂದ ಬಂದುದಾಗಿದೆ.

೫. ಈ ಹಾಡು ಹಾಡಿದವರು ಶ್ರೀ ಅಂಜಿನಪ್ಪ, ಶ್ರೀ ನಾಗಪ್ಪ, ಮತ್ತು ಎಲ್ಲಪ್ಪ ಹಾವಳಿಗಿ ಗ್ರಾಮ, 'ಕಣೇಕಲ್ಲು' ತಾಲೂಕು ಅನಂತಪುರ ಜಿಲ್ಲೆ, ಆಂಧ್ರ ಪ್ರದೇಶ.

೬. **ಮಾರ್ನವಮಿ ಪದಗಳು** ಅಥವಾ **ಪೆಂಟಿಗೆ ಪದಗಳು** ಎಂದು ಕರೆಯುವ ಈ ಹಾಡುಗಳು ಜಾನಪದ ಹಾಡುಗಳಾಗಿವೆ ದಸರೆ ಸಮೀಪಿಸುತ್ತಿದ್ದಂತೆ ಶಾಲಾ ಮಕ್ಕಳು ಮತ್ತು ಉಪಾಧ್ಯಾಯರು ಮನೆಮನೆಗೆ ಈ ಹಾಡುಗಳನ್ನಾಡುತ್ತಾ ಹೋಗಿ ಹಣ, ಧಾನ್ಯ ಪಡೆಯುತ್ತಿದ್ದರು. ಈ ಸಂಪ್ರದಾಯ ನಶಿಸಿ ಎರಡು ಮೂರು ದಶಕಗಳಾಗುತ್ತ ಬಂದಿದೆ. ಈ ಹಾಡು ಬಳ್ಳಾರಿ ತಾಲೂಕು ಜಾಲಿಹಾಳಿನಲ್ಲಿ ಮೊಹರಂನ ವಿವರ ಹೇಳುತ್ತಾ ಶ್ರೀ ಪಂಪನ ಗೌಡ ಎನ್ನುವವರು ನಿರೂಪಿಸಿದ್ದಾಗಿದೆ.

೭. ತೂಮಾಟಿ ದೋಣಪ್ಪ, 'ಜಾನಪದ ಕಳಾಸಂಪದಮು', ಪು.೧೪೬

೮. **ಹುಲುಸು:** ಊರದೇವತೆಯ ಹಬ್ಬದಲ್ಲಿ ಕೋಣವನ್ನುಬಲಿಗೊಡುವಾಗ ಚಿಮ್ಮಿದ ರಕ್ತವನ್ನು ಹೆಬ್ಬೆರಳಿಗೆ ಹಚ್ಚಿಕೊಂಡು ಊರ ಬುಡ್ಡೆಕಲ್ಲಪ್ಪನ ಬಳಿನಿಂತು ಕೇಕೆಹಾಕಿ ತಮ್ಮ ಊರಿಗೆ ತಪ್ಪಿಸಿಕೊಂಡು ಓಡಿದರೆ ಹಬ್ಬದ ಊರಿನ ಹುಲುಸು (ಸಮೃದ್ಧತೆ) ಇನ್ನೊಂದು ಊರಿಗೆ ಹೋಯಿತು ಎಂದರ್ಥ. ಹೀಗೆ ಮಾಡುವಾಗ ಊರವರ ಗಮನಕ್ಕೇನಾದರೂ ಬಂದರೆ ಹುಲುಸು ತೆಗೆದು ಕೊಂಡು ಹೋಗುವವನನ್ನು ಊರ ಹೊಲಿಮ್ಯಾರೆಯ ಈ ಕಡೆಯೆ ಕಡಿದು ಸಾಯಿಸಿದರೆ ಮಾತ್ರ ಹುಲುಸು ಊರಲ್ಲಿ ಉಳಿಯುತ್ತದೆ. ಆತನೇನಾದರೂ ತಪ್ಪಿಸಿಕೊಂಡು ಹೋದರೆ ಹುಲುಸು ಹೋಯಿತೆಂದರ್ಥ.

೯. **ಹಾಲು ಪತ್ತಿ:** ಮೊಹರಂನ ವೇಳೆಯಲ್ಲಿ ಕೋಣಕಡಿಯುವ ಆಚರಣೆಯಿಲ್ಲದುದರಿಂದ ಮಧ್ಯರಾತ್ರಿಯ ವೇಳೆ ಊರಸುತ್ತ ಹಾಲಿನ ಬಿಂದಿಗೆಗೆ ಚಿಕ್ಕ ರಂಧ್ರ ಕೊರೆದು ಹಾಲು ಚೆಲ್ಲುತ್ತಾ ಸುತ್ತುವರಿಯುತ್ತಾರೆ. ಇದು ಹುಲುಸು ಆಚೆಯ ಊರಿಗೆ ಹೋಗದಂತೆ ರಕ್ಷಣೆಯ ಬೇಲಿಯನ್ನು ನಿರ್ಮಿಸುತ್ತದಂತೆ !

೧೦. ಈ ವಿವರ ಹೇಳಿದವರು ಶ್ರೀಮತಿ ಬಡಿಗೇರು ಯಂಕಮ್ಮ ವಣೇನೂರು ಬಳ್ಳಾರಿ -ತಾಲೂಕು.

೧೧. ಈ ಹಾಡು ಹಾಡಿದವರು ಶ್ರೀಕುರುಬರ ನಾಗಪ್ಪ, ವಣೇನೂರು ಬಳ್ಳಾರಿ ತಾಲೂಕು.

೧೨. ಮೊಹಮ್ಮದ್ `ಉರ್ದು, ತೆಲುಗು ಮೊಹರಂಗೀತಿಕಲು, ತುಲನಾತ್ಮಕ ಸಮನ್ವಯಂ' ಪು. ೬೭

೧೩. ಅದೇ ಪು. ೭೮

೧೪. ಶ್ರೀಮತಿ ಲಸುಮಮ್ಮ ವಣೇನೂರು ಗ್ರಾಮ, ಬಳ್ಳಾರಿ ತಾಲೂಕು ಈ ಹಾಡು ಹಾಡಿದವರಾಗಿದ್ದಾರೆ.

೧೫. `ಕಂದೂರಿ' ಯೆಂದರೆ ಮೂಲತಃ ಮಹಮ್ಮದ್ ಪೈಗಂಬರರ ಮಗಳು `ಫಾತಿಮಾ' ಗೌರವಾರ್ಥ ಮುಸ್ಲಿಂ ಸ್ತ್ರೀಯರು ಕೊಡುವ ಔತಣ ಎಂಬರ್ಥವನ್ನುಳ್ಳದ್ದಾಗಿದೆ. ಇದರಲ್ಲಿ ಪುರಷರು ಪಾಲ್ಗೊಳ್ಳುವಂತಿರಲಿಲ್ಲ. ಇದು ಹೇಗೋ ತಪ್ಪಿ ಇಂಡಿಯಾದಲ್ಲಿ 'ಉರುಸ್ ' ಮತ್ತು 'ಮೊಹರಂ' ನ ಸಂದರ್ಭಗಳಲ್ಲಿ ನೈವೇದ್ಯವನ್ನಾಗಿ ಅರ್ಪಿಸುವ 'ಪದಾರ್ಥ' ವೆಂದಾಗಿದೆ. ಪರಿಶುದ್ಧವಾದ ಮಾಂಸ ಇಲ್ಲವೆ, ಮಧುರವಾದ ಆಹಾರ ಪದಾರ್ಥಗಳಿಂದ ಮಾಡಿದ ಅಡುಗೆ ಇದು.

೧೬. `ತೂಮಾಟಿ ದೇಣಪ್ಪ,' ಜಾನಪದ ಕಳಾಸಂಪದಮು, ಪು.೧೫೮

೧,೨,೩,೪,೫,೬,೭,೮, ಇವೆಲ್ಲ ಅನಂತಪುಜಿಲ್ಲೆಯ ಪೂರ್ವಕ್ಕೆ ಕರ್ನಾಟಕದ ಗಡಿಭಾಗಕ್ಕಿರುವ ಊರುಗಳು

೧೭. ಅದೇ ಪು.೧೪೬

೧೮. ಈ ಹಾಡು ಹಾಡಿದವರು ಶ್ರೀ ಇಸ್ಮಾಯಿಲ್ ಸಾಹೇಬ್ ಆದೋನಿ, ಕರ್ನೂಲುಜಿಲ್ಲೆ, ಆಂಧ್ರ ಪ್ರದೇಶ

೧೯. ಅದೇ

೨೦. ಈ ಹಾಡು ಹಾಡಿದವರು ಶ್ರೀ ಹೊನ್ನೂರ್ ಸಾಬ್, ಆದೋನಿ,ಕರ್ನೂಲುಜಿಲ್ಲೆ, ಆಂಧ್ರಪ್ರದೇಶ .

೨೧. ಶ್ರೀಮೊಹಮ್ಮದ್ ತೆಲುಗು, ಉರ್ದು ಮೊಹರಂಗೀತಿಕಲು, ತುಲನಾತ್ಮಕ ಅಧ್ಯಯನಂ, ಪು.೭೯

೨೨. ಅದೇ ಪು.೮೧

೨೩. ಈ ಹಾಡು ಹಾಡಿದವರು ಶ್ರೀಮಾಣಿಕ್ ಹಲಗಿ,ಸುಲ್ತಾನಬಾದ್ ವಾಡಿ, ಹುಮನಾಬಾದ್, ತಾಲೂಕು, ಬೀದರ ಜಿಲ್ಲೆ.

೨೪. ಈ ಹಾಡು ಹಾಡಿದವರು, ಶ್ರೀ ಮಹಮ್ಮದ್ ಬಾಬುಸಾಬ್ , ಆದೋನಿ, ಕರ್ನೂಲು ಜಿಲ್ಲೆ, ಆಂಧ್ರಪ್ರದೇಶ್

೨೫. ಅದೇ

೨೬. ಈ ಹಾಡು ಹಾಡಿದವರು ಶ್ರೀಮತಿ ಲಸುಮಮ್ಮ ಮತ್ತು ಶ್ರೀಮತಿ ಮಾರಮ್ಮ, ವಣೇನೂರು, ಬಳ್ಳಾರಿ-ತಾಲೂಕು

೨೭. ಇಲ್ಲಿ 'ರಂಡಲು ತೆಂಚರಿ' ಎನ್ನುವಲ್ಲಿ ಒಟ್ಟು ವಿಧವೆಯನ್ನಾಗಿಸುವ ಎಲ್ಲ ಕ್ರಿಯೆಗಳನ್ನೊಳಗೊಂಡ ವಿವರಣೆಯಾಗಿದೆ. ರಂಡಲು- ವಿಧವೆಯಾಗುವವಳನ್ನು ವಿಧವೆಯರು ಮುತ್ತೈದೆಯ ಲಕ್ಷಣಗಳನ್ನು ತೆಗೆದು ಹಾಕಿದರು. ಅಥವಾ ತಾಳಿಹರಿದು, ಬಳೆಹೊಡೆದರು ಎಂದಾಗುತ್ತದೆ.

೨೮. ಮಾರ್ಕ್‌ಗೆಬೋರಿಯೋ -'ಮುಸ್ಲಿಂ ಶ್ರೈನ್ಸ್ ಇನ್ ಇಂಡಿಯಾ' ಪು. ೨೦೧

ಅಧ್ಯಾಯ: ೫

ಹಿಂದೂ - ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯ: ಭಾಷಿಕ ಮತ್ತು ಸಾಹಿತ್ಯಿಕ ನೆಲೆಗಳು

೫.೧ ಭಾಷಿಕ ನೆಲೆಗಳು :

ಮಧ್ಯಯುಗೀನ ಕಾಲದಲ್ಲಿ ಸೃಷ್ಟಿಗೊಂಡ ದಖನಿಯು ಒಂದು ಪ್ರತ್ಯೇಕ ಭಾಷೆಯಾಗಿರದೆ ಅದು ಉರ್ದುವಿನ ಮೂಲ ರೂಪವಾಗಿದೆ. ಉರ್ದುವು ದಖನಿಯಿಂದ ಸಂಪೂರ್ಣ ಭಿನ್ನವಾದ ಸ್ವತಂತ್ರವಾದ ಭಾಷೆಯೆಂದು ಕೆಲವು ವಿಧ್ವಾಂಸರಯ ವಾದಿಸಿದರೆ ಮತ್ತೆ ಕೆಲವರು ಅದರ ಅಪಭ್ರಂಶ ರೂಪವಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಭಿನ್ನವಾಗಿ ಮತ್ತೊಂದು ಬಗೆಯ ವಾದವೂ ಇದೆ. 'ದಖನಿ'ಯು ಉರ್ದುವಿನ ಮೂಲ ರೂಪವಾಗಿದ್ದು ಅದರಿಂದ ಅವಿಷ್ಕಾರ ಗೊಂಡಿದೆಂಬುದಾಗಿದೆ.

ಸೈಯದ್ ಮೊಹಮ್ಮದ್ ಎನ್ನುವ ವಿಧ್ವಾಂಸರು ಅಭಿಪ್ರಾಯ ಪಡುವಂತೆ 'ಉರ್ದುವು ಅದರ ಅಭಿವೃದ್ಧಿಹೊಂದದ ಮೂಲ ರೂಪದಿಂದಲೇ ಅದು ಇಂಡಿಯಾದ ವಿವಿಧ ಕಡೆಗೆ ವಿವಿಧ ಹೆಸರುಗಳಿಂದ ವಿವಿಧ ಪ್ರಾಂತ್ಯಗಳಿಗೆ ಹರಡಲ್ಪಟ್ಟಿತು, ಅಭಿವೃದ್ಧಿ ಹೊಂದಿತು. ದಖನಿಯ ಹಿರಿಯಣ್ಣನಂತಿರುವ ಉರ್ದುವು ದಖನ್ನಿನಲ್ಲಿ ಉನ್ನತಿಗೇರಿತಲ್ಲದೆ ಉತ್ಕೃಷ್ಟ ಸಾಹಿತ್ಯ ನಿರ್ಮಾಣಕ್ಕೂ ಕಾರಣವಾಯಿತು[1] ಹಳೆಯ ಉರ್ದುವಿನ ಭಾಷಿಕ ರೂಪವು ದಖನ್ನಿಗೆ ಪ್ರವೇಶಪಡೆಯುವುದಕ್ಕೆ ಮುಂಚೆ ನೂರು ವರ್ಷಗಳ ಹಿಂದೆಯೇ ಅಸ್ತಿತ್ವದಲ್ಲಿದ್ದಿತಲ್ಲದೆ ಅಮೀರ್ ಖುಸ್ರುವು ಇದನ್ನು ತನ್ನ ಕಾವ್ಯ ಮಾಧ್ಯಮವನ್ನಾಗಿ ಬಳಸಿ ಕೊಂಡುದು ಸಹ ಇದನ್ನು ಸ್ಪಷ್ಟ ಪಡಿಸುತ್ತದೆ.[2]

ಉರ್ದುವಿನ ಬಹುತೇಕ ಪದಗಳು ಟರ್ಕಿ ಮೂಲದವಾಗಿದ್ದು ಅವು ಸೈನ್ಯದ ಠಾಣೆಗಳು, ಸೈನ್ಯ ಠಾಣೆಯ ಬಜಾರುಗಳ, ವ್ಯಾಪಾರ ಸ್ಥಳಗಳ ಅರ್ಥಸೂಚಕ ಪದಗಳಾಗಿವೆ. ಇದು ಈ ಭಾಷೆಯು ಸೃಷ್ಟಿಗೊಂಡ ಪರಿಸರ ಮತ್ತು ಕಾಲದ ಬಗೆಗೆ ಹೊಳಹುಗಳನ್ನು ನೀಡುತ್ತಿದ್ದಾಗ್ಯೂ ನಿಖರವಾದ ತೀರ್ಮಾನಕ್ಕೆ ಬರಲಾಗದು. ಈ ಭಾಷೆಯ ಸಂರಚನೆ, ವ್ಯಾಕರಣ ಮತ್ತು ವಿದೇಶಿ ಪದಗಳು ಸ್ಪಷ್ಟಪಡಿಸುವಂತೆ ಇದು ಹರ್ಯಾಣದ 'ಕಡಿಬೋಲಿ' 'ಹರ್ಯಾಣ್ವಿ' ಮತ್ತು 'ಪರ್ಶಿಯನ್' 'ಅರ್‍ಯಾಬಿಕ್' ಭಾಷೆಗಳ ಸಂಪರ್ಗರಿಂದ ಸೃಷ್ಟಿಗೊಂಡುದಾಗಿದೆ.

ಸಾಮಾನ್ಯವಾಗಿ ರಾಜಕೀಯ ಉದ್ದೇಶಗಳಿಂದ ಇಂಡಿಯಾಕ್ಕೆ ಬಂದ ಎಲ್ಲ ವಿದೇಶಿಯರು, ಯುರೋಪಿಯನ್ನರು ಕೂಡ ಈಶಾನ್ಯ ದಿಕ್ಕಿನಿಂದ ಪ್ರವೇಶಿಸಿದವರಾಗಿದ್ದು ಅವರು ರಣರಂಗದಲ್ಲಾಗಿಲಿ, ಹಳ್ಳಿಗಳಲ್ಲಾಗಲಿ, ನಗರಗಳಲ್ಲಾಗಲಿ 'ಕಡಿಬೋಲಿ' ಮತ್ತು 'ಹರ್ಯಾಣ್ವೀ' ಭಾಷೆ ಮಾತಾಡುವವರನ್ನು ಸಂಧಿಸಲೇಬೇಕಾಗಿತ್ತು. 'ಉರ್ದುವು ಅರ್ಯಾಬಿಕ್ ಪರ್ಶಿಯನ್, ಟರ್ಕಿ ಭಾಷೆ ಮಾತಾಡುವ ಮುಸ್ಲಿಂರದಾಗಿರದೆ ಅದು ಇಂಡಿಯಾದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಆರಂಭದ ವಿದೇಶೀ ಮುಸ್ಲಿಮರು ಸ್ಥಳೀಯ ಜನರನ್ನು ಸಂಧಿಸಿದಾಗ ಸೃಷ್ಟಿಗೊಂಡ ಭಾಷೆಯಾಗಿದೆ'.[೩] ನಂತರದಲ್ಲಿ ಇದು ಮುಸ್ಲಿಮ್ ಮತ್ತು ಮುಸ್ಲಿಮೇತರರ ನಡುವಿನ ಸಂವಾದದ ಯುದ್ಧದ ಶಾಂತಿಯ ಭಾಷೆಯಾಗಿ ವಿಕಾಸ ಹೊಂದಿತು. ಮಧ್ಯಕಾಲೀನ ದೆಹಲಿಯು ರಾಜಕೀಯವಾಗಿ ಎರಡು ಭಾಷಿಕ ಜಿಲ್ಲೆಗಳಿಂದಾವೃತವಾಗಿದ್ದು 'ಶಾಹಿದ್ರ' ಮತ್ತು 'ಜಮುನಾ'ದ ಪೂರ್ವ ಭಾಗದಲ್ಲಿ ಕಡಿಬೋಲಿ ಭಾಷೆಯು, ತುಘಲಕಾಬಾಧ್ ಜಮುನಾನದಿಯ ಪಶ್ಚಿಮಕ್ಕೆ ಹರ್ಯಾಣ್ವಿ ಭಾಷೆಯು ಆಡುಭಾಷೆಯಾಗಿತ್ತು. ದೆಹಲಿಯು ಉರ್ದುವಿನ ಮೊದಲ ಕೇಂದ್ರವೆಂಬುದನ್ನು ಗಮನಿಸಬೇಕು.

ದಖನ್ ಪ್ರಸ್ತಭೂಮಿಯಲ್ಲಿ ಉರ್ದುವಿಗೆ ಭಾಷಿಕ ಸಂಪರ್ಕವಾಗಿ ಮೊದಲು ದೊರೆತ ಪ್ರದೇಶವೆಂದರೆ 'ಮಹಾರಾಷ್ಟ್ರ'ವಾಗಿದೆ. 'ಮರಾಠಿ' ಯು ಇಂಡೋ-ಆರ್ಯನ್ ಭಾಷೆಯಾದ್ದರಿಂದ ಉರ್ದುವಿನೊಂದಿಗೆ ಈ ಭಾಷೆಯ ಕೊಡುಕೊಳ್ಳುವಿಕೆ ವ್ಯಾಪಕವಾಗಿದೆ. ಮರಾಠಿಯ 'ನಖೋ' (ಇಲ್ಲ) ಎನ್ನುವ ಪದ ಮತ್ತು 'ಚ' (ಲೂ) ಎನ್ನುವ ಸ್ವರವು 'ದಖನಿ' ಭಾಷೆಯನ್ನು ಪ್ರವೇಶಿಸಿರುವಂತಿದೆ.[೪] ಒಟ್ಟಾರೆಯಾಗಿ 'ದಖನಿ' ಅಥವಾ 'ಉರ್ದು' ವಿನ ಸಂರಚನೆಯನ್ನು ಗಮನಿಸಿ ಹೇಳುವುದಾದರೆ ಅದು ಪೂರ್ತಿಯಾಗಿ ಇಂಡಿಯಾದಲ್ಲಿ ಮುಸ್ಲಿಮೇತರರೊಂದಿಗಿನ ಒಡನಾಟದ ಫಲವಾಗಿ ಸೃಷ್ಟಿಗೊಂಡುದ್ದಾಗಿದೆಯಲ್ಲದೆ ಈ ಭಾಷೆಯ ಸಾಹಿತ್ಯ, ಅದರ ವಸ್ತು, ತಂತ್ರ ಇವುಗಳಿಂದಾಗಿ ಅದು 'ಸಂಸ್ಕೃತೀಕರಣ' ಪ್ರಕ್ರಿಯೆಯ ಫಲವೆಂಬುದನ್ನು ಅರಿಯಬಹುದಾಗಿದೆ.

ಉರ್ದುವು ಪ್ರದೇಶಗಳಿಗನುಗುಣವಾಗಿ ಬೇರೆಬೇರೆ ಹೆಸರುಗಳಿಂದ ಕರೆಯಲ್ಪಟ್ಟಿದೆ. ಇದನ್ನು ನಿರ್ಧಿಷ್ಟ

[illegible]

[illegible]

[illegible]

[illegible]

ಜನಾಂಗಕ್ಕಾಗಲಿ, ಪ್ರದೇಶಕ್ಕಾಗಲಿ ಸೀಮಿತಗೊಳಿಸುವುದು ಸರಿಯಲ್ಲ. 'ಮುಸ್ಲಿಮರು ಹಿಂದೂಗಳು ಈ ಭಾಷೆಯಲ್ಲಿ ಮಾತಾಡುವುದನ್ನು ಕೇಳಿದಾಗ ಇದನ್ನು 'ಹಿಂದಿ' ಇಲ್ಲವೆ 'ಹಿಂದುವಿ' ಎಂದು ಕರೆದರು. ಮುಸ್ಲಿಮರು ಈ ಭಾಷೆಯನ್ನಾಡುವಾಗ 'ಮುಸಲ್ಮಾನಿ' ಎಂದು ಕರೆದರು. ತೆಲುಗಿನಲ್ಲಿ ಈಗಲೂ ಇದನ್ನು 'ತರುಕುಮಾಟ' ಎಂದು ಕರೆಯುವುದನ್ನು ಗಮನಿಸಬಹುದಾಗಿದೆ.[3] ಉರ್ದುವಿನ ಮೊದಲ ಮುಖ್ಯ ಕೇಂದ್ರವಾದ ದೆಹಲಿಯಲ್ಲಿ ಇದನ್ನು 'ಜವಾನ್ -ಇ-ದೆಹ್ಲಿ' ಅಥವಾ 'ದೆಹಲವಿ' ಎಂದೂ, ಉತ್ತರ ಪ್ರದೇಶದಲ್ಲಿ 'ಗೋಜ್ರಾ' ಎಂದೂ, ರಾಜಾಸ್ಥಾನದಲ್ಲಿ 'ಗೋಜ್ರಿ', ಎಂದು ಕರೆಯಲಾಯಿತು. ನರ್ಮದಾ ನದಿಯನ್ನು ದಾಟಿ ಈಚೆ ಕಡೆ ದಕ್ಷಿಣದಲ್ಲಿ ಮಹಾರಾಷ್ಟ್ರ, ಆಂಧ್ರ, ಕರ್ನಾಟಕ, ತಮಿಳುನಾಡಿನಲ್ಲಿ ಇದನ್ನು 'ದಖನಿ' ಎಂದು ಕರೆಯಲಾಯಿತು. ದೆಹಲಿಯ ಆಸ್ಥಾನ ಭಾಷೆಯಾದಾಗಿ ಇದನ್ನು ಉರ್ದು- ಇ- ಮೊಹಲ್ಲಾ, ಜಬಾನ್ - ಇ-ಉರ್ದು- ಇ-ಶಾಹಿ, ಮುಹಾವೆರಾ- ಇ-ಶಹಜಾನ್ ಅಬಾದ್, ರೇಕ್ತಾ ಮತ್ತು ಉರ್ದು ಎಂದು ಕರೆಯಲಾಯಿತು.

ಇಂಗ್ಲೀಷರನ್ನೊಳಗೊಂಡಂತೆ ವಿದೇಶಿಯರು ಈ ಭಾಷೆಯ ಕುರಿತಂತೆ ವ್ಯವಹರಿಸುವಾಗ ಇದನ್ನು ಹಿಂದ್ ಅಥವಾ ಹಿಂದಿ ಎಂದು ಕರೆದರು. ಉರ್ದು, ಇಂಗ್ಲೀಷಿನಂತೆ ವಿಶಿಷ್ಟ ಗುಣಗಳಿಂದ ಕೂಡಿದುದಾಗಿದ್ದು ಅದರ ಭಾಷಿಕ-ಸಂರಚನೆಯು ಸುಲುಭ ಸಂವಹನ ಮತ್ತು ಅರ್ಥ ಸಾದೃಶ್ಯಗಳಿಂದಾಗಿ ಅದು ಆರ್ಯನ್ , ದ್ರಾವಿಡಿಯನ್ ಅಥವಾ ಟುಟ್ಯೋನಿಕ್ ಮತ್ತು ಇಂಡೋ ಜರ್ಮನಿಕ್ ಭಾಷೆಗಳೊಂದಿಗೆ ಸುಲುಭವಾಗಿ ವ್ಯವಹರಿಸಬಹುದಾಗಿತ್ತು.[4] ಇಂತಹ ಗುಣಗಳಿಂದಾಗಿ ದಖನಿಯು ಅಹಮದ್ ನಗರ, ಬಿಜಾಪುರ, ಖಾನ್ ದೇಶ, ಬೀದರ, ಗುಲುಬರ್ಗಾ, ಗೋಲ್ಕೊಂಡ, ಮದ್ರಾಸ್ ಗಳಲ್ಲಿ ಜನಪ್ರಿಯವಾಯಿತು.

ದಖನಿ ಉರ್ದು ಅಥವಾ ಉರ್ದು ಭಾಷೆಯನ್ನು ಪರಿಶೀಲಿಸಿದಾಗ ಅದು ಪೂರ್ತಿಯಾಗಿ ಇಲ್ಲಿಯೇ ಮುಸ್ಲಿಮೇತರೊಂದಿಗಿನ ಒಡನಾಟದ ಫಲವಾಗಿ ಸೃಷ್ಟಿಗೊಂಡುದಾಗಿಯೂ ಆ ಮೂಲಕ ಅದು ಇಂಡಿಯಾದ ಸಾಂಸ್ಕೃತಿಕ ಪ್ರಕ್ರಿಯೆಯ ಫಲವೆಂವುದನ್ನು ನಿರಾತಂಕವಾಗಿ ಹೇಳಿಬಿಡಬಹುದಾಗಿದೆ.[5] ಹಾಗೆಯೆ ಈ ಭಾಷೆಯಲ್ಲಿ ರಚನೆಗೊಂಡ ಸಾಹಿತ್ಯ, ವಸ್ತು, ತಂತ್ರ, ರೂಪಗಳನ್ನು ಸಂಕ್ಷಿಪ್ತವಾಗಿ ಪರಿಶೀಲಿಸುವುದರ ಮೂಲಕ ಇಂತಹ

ಸಾಂಸ್ಕೃತಿಕ ಪ್ರಕ್ರಿಯೆಯ ಸ್ವರೂಪವನ್ನು ನಾವು ಸ್ಪಷ್ಟವಾಗಿ ಅರಿಯಬಹುದಾಗಿದೆ.

ಬಹುಮನಿ ಸುಲ್ತಾನರಲ್ಲಿ ಫಿರೋಜ್ ಶಹಾನು ಉನ್ನತಾಭಿರುಚಿಯ ಸಾಹಿತ್ಯ, ಕಲೆಗಳ ಅಭಿಮಾನಿಯಾಗಿದ್ದನಲ್ಲದೆ ಅವುಗಳ ಪೋಷಕನೂ ಆಗಿದ್ದನು. ಹಿಂದೂ -ಮುಸ್ಲಿಂರ ಮಧ್ಯೆ ಸೌಹಾರ್ದತೆಯನ್ನುಂಟುಮಾಡುವಲ್ಲಿ ಈತನ ಕಾರ್ಯ ಸ್ತುತ್ಯಾರ್ಹವಾದುದಾಗಿದೆ. ಈ ಕಾಲದಲ್ಲಿಯೇ ದಖನ್ನಿನಲ್ಲಿ ಇಸ್ಲಾಂ ಮತ್ತು ಭಾರತೀಯ ಸಂಸ್ಕೃತಿಗಳೆರಡೂ ಪರಸ್ಪರ ಬೆರೆತು ತನ್ನದೇ ಆದ ವಿಶಿಷ್ಟ ಗುಣಗಳನ್ನು ರೂಢಿಸಿಕೊಂಡ ಸಮ್ಮಿಶ್ರ ಸಂಸ್ಕೃತಿಯೊಂದು ರೂಪು ತಳೆಯಿತು. ಇಂತಹ ಸಮ್ಮಿಶ್ರ ಸಂಸ್ಕೃತಿಯನ್ನು ಪ್ರೊ|| ವಹೀದ್ -ಉದ್ದೀನ್ ಸಲೀಮ್ ಎನ್ನುವ ವಿಧ್ವಾಂಸರು 'ಹಿಂದುಲ್ಮಾನಿ' ಸಂಸ್ಕೃತಿ ಎಂದುಕರೆದಿರುವುದು ಅರ್ಥ ಪೂರ್ಣವಾದುದಾಗಿದೆ.[೮] ನಂತರದಲ್ಲಿ ಬಿಜಾಪುರದ ಎರಡನೇ ಇಬ್ರಾಹಿಂ ಆದಿಲ್ ಷಾಹಿ, ಗೋಲ್ಕೊಂಡಾದ ಕುಲಿಕುತುಬ್ ಶಹಾ ಇವರು ಫಿರೋಜನ ನೀತಿಯನ್ನೆ ಅನುಸರಿಸಿದರು.

೫.೨ ಸಾಹಿತ್ಯಿಕ ನೆಲೆಗಳು :

ಮೊದಲಿಗೆ ಈಭಾಷೆಯ ಸಾಹಿತ್ಯಕ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಪರೀಶೀಲಿಸುಬಹುದು.ಬಹುಮನಿ ಸಂಸ್ಥಾನದ ಅಹಮ್ಮದ್ ಶಹಾವಲಿಯ ಆಸ್ಥಾನದಲ್ಲಿದ್ದ 'ನಿಜಾಮಿ'ಯು 'ದಖನಿ' ಭಾಷೆಯ ಮೊದಲ ಶ್ರೇಷ್ಠ ಕವಿಯಾಗಿದ್ದು ಧಾರ್ಮಿಕ ವಿಷಯಗಳನ್ನು ಬಿಟ್ಟು ಪ್ರೇಮ ಮತ್ತು ಇತರೆ ವಿಷಯಗಳ ಕುರಿತು ಬರೆದ ಪ್ರಪ್ರಥಮ ಕವಿಯಾಗಿದ್ದಾನೆ. ಬಹುಮನಿಕಾಲದ ಅದರಲ್ಲೂ ವಿಶೇಷವಾಗಿ ಬೀದರ್ ನ ಅಹಮದ ಶಾಹಾವಲಿಯ ಕಾಲದ ಉರ್ದು ಕವಿಗಳು ತಮ್ಮ ಕಾವ್ಯದ ವಸ್ತುವನ್ನಾಗಿ ಬಹುತೇಕ ಭಾರತೀಯ ಮೂಲದ ಜನಪ್ರಿಯ ನೀತಿ ಕಥೆಗಳನ್ನು ಆರಿಸಿ ಕೊಂಡರು. ಇವರಲ್ಲಿ 'ನಿಜಾಮಿ' ಯೇ ಪ್ರಮುಖನಾಗಿದ್ದಾನೆ. ೧೪೬೦ ರಲ್ಲಿ ರಚಿಸಿದ 'ಕದಮ್ ರಾವ್ ಪದಮ್ ರಾವ್' ಎನ್ನುವ ಈ ಕವಿಯ ಮಸ್ನವಿ ಕಾವ್ಯ ಕೃತಿಯ ಒಂದೇ ಒಂದು ಹಸ್ತಪ್ರತಿಯು 'ಕರಾಚಿ' ಯ ಅಂಜುಮನ್ ತರೀಕಿ - ಇ- ಉರ್ದು. ಗ್ರಂಥಾಲಯದಲ್ಲಿ ಲಭ್ಯವಿತ್ತು. ಇದನ್ನು ಈಚೆಗೆ 'ಶಕ್ಹಾವತ್ ಮಿರ್ಜಾ' ಅವರು ಸಂಪಾದಿಸಿ ಪ್ರಕಟಿಸಿದ್ದಾರೆ.'ನಿಜಾಮಿಯು ಈ ಕೃತಿಯಲ್ಲಿ

ಸಂಸ್ಕೃತ ಮೂಲದ ಶಬ್ದಗಳನ್ನು (ತತ್ಸಮ-ತದ್ಭವ) ಯಥೇಚ್ಛವಾಗಿ ಬಳಸಿರುವುದಾಗಿ ತಿಳಿದು ಬರುತ್ತದೆ.[6] ಈ ಕಾಲದ ಇನ್ನುಳಿದ ಕವಿಗಳೆಂದರೆ ಮುಸ್ತಾಖ್ , ಲತೀಫ್, ಫಿರೋಜ್ ಮತ್ತು ಅಶ್ರಾಫ್.

ಮುಸ್ತಾಖ್ ನು ಮೊಹಮ್ಮದ್ ಶಹಾಬಹುಮನಿಯ ಕಾಲದಲ್ಲಿದ್ದ ಕವಿಯಾಗಿದ್ದು, ಈತನು ಹಲಾವರು ಗಜಲ್ ಗಳನ್ನು ರಚಿಸಿದ್ದಾನೆ.ಸಂತ ಹಜರತ್ ಸೈಯದ್ ಬುರಾನುದ್ಧೀನ್ ಶಹಾಕಲೀಲುಲ್ಲಾನ ಸ್ತುತಿಗೀತೆಗಳನ್ನೊಳಗೊಂಡ ಈತನ ಕಾವ್ಯ ಕೃತಿಯ ಹಸ್ತಪ್ರತಿಯೊಂದು ದೊರೆತಿದೆ. ಲತೀಫನು ಇವನ ಸಮಕಾಲೀನನಾಗಿದ್ದು ಹಲವಾರು ಗಜಲ್ ಗಳನ್ನು, ಕಾವ್ಯಕೃತಿಗಳನ್ನು ರಚಿಸಿದ್ದಾನೆ.

ಫಿರೋಜ್ ನು ಸಹ ಬೀದರ್ ಗೆ ಸೇರಿದವನಾಗಿದ್ದು ಮುಸ್ತಾಫ್ ಮತ್ತು ಲತೀಫ್ ನ ಸಮಕಾಲೀನನಾಗಿದ್ದನು. ಇವನು ದಖನ್ನಿನ ಪ್ರಖ್ಯಾತ ಸಂತ ಹಜರತ್ ಮಖ್ ದೂಮ್ಜಿಶ್ಹೇಕ್ ಮೊಹಮ್ಮದ್ ಇಬ್ರಾಹಿಂನ ಅನುಯಾಯಿಯಾಗಿದ್ದನು. ಫಿರೋಜನು ಬೀದರನ್ನು ಬಿಟ್ಟು ಗೋಲ್ಕೊಂಡಾಕ್ಕೆ ಹೋದುದರ ಬಗ್ಗೆ ಕಥೆಯೊಂದು ಪ್ರಚಲಿತದಲ್ಲಿದೆ. ಇಬ್ರಾಹಿಂಕುತಬ್ ಶಾಹಾರು ಸೂಫಿಸಂತರಾದ ಮಖ್ ದೂಮ್ಜಿ ಅವರನ್ನು ತಮ್ಮ ಸಂಸ್ಥಾನದಲ್ಲಿ ಬಂದಿರಲು ವಿನಂತಿಸಿ ಕೊಂಡರು. ಅವರು ತಮ್ಮ ವೃದ್ಧಾಪ್ಯದ ಕಾರಣ ನೀಡಿ ಬರಲಾಗುವುದಿಲ್ಲವೆಂದು ತಿಳಿಸಿದರು. ಕುತಬ್ ಶಹಾನು ಕಡೆಗೆ ಅವರ ಅನುಯಾಯಿ ಮತ್ತು ಪ್ರಖ್ಯಾತ ಕವಿಯೂ ಆಗಿದ್ದ ಫಿರೋಜ್ ನನ್ನಾದರೂ ಕಳೂಹಿಸಿಕೊಡುವಂತೆ ವಿನಂತಿಸಿಕೊಂಡರು. ಫಿರೋಜನು ಕವಿಯಾಗಿ ಗೋಲ್ಕೊಂಡದಲ್ಲಿಯೂ ಸಹ ತಂಬಾ ಜನಮನ್ನಣೆ ಗಳಿಸಿದ್ದನು. ಗೋಲ್ಕೊಂಡಾದ ಪ್ರಮುಖ ಕವಿಗಳಾದ 'ವಝಿ' ಮತ್ತು 'ಇಬ್ನ್ -ಇ-ನಶಾತಿ'ಯು ತನ್ನಕೃತಿಯೊಂದರಲ್ಲಿ ಫಿರೋಜ್ ನ ಹೆಸರನ್ನು ಉಲ್ಲೇಖಿಸಿದ್ದಾನೆ. ಫಿರೋಜ್ ನ 'ಮಸ್ನವಿ' ಕಥನ ಕಾವ್ಯ 'ಫೀರತ್ ನಾಮಾ' ಅಥವಾ 'ತೌಸಫ್ ನಾಮಾ ಮಿರಾನ್ ಮೊಯಿನುದ್ದೀನ್ 'ಎಂದು ಹೆಸರಿಸಲಾದ ಈ ಕೃತಿಯಲ್ಲಿ ಹಜರತ್ ಶ್ಹೇಕ್ ಅಬ್ದುಲ್ ಖಾದರ್ ಜಿಲಾನಿ ಮತ್ತು ಆತನ ನಾಯಕ ಹಜರತ್ ಮಕ್ ದೂಮ್ಜಿ ಶ್ಹೇಕ್ ಮೊಹಮ್ಮದ್ ಇಬ್ರಾಹಿಂ ಇವರನ್ನು ಸ್ಮರಿಸಿರುವುದಾಗಿ ತಿಳಿದು ಬರುತ್ತದೆ. ಇದು ಸೂಫಿಜಂನ ತಾತ್ವಿಕತೆಯೊಂದಿಗೆ ಉರ್ದುಸಾಹಿತ್ಯದ ಸಾವಯವ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ.

[illegible]

[illegible]

[illegible]

ಬಹುಮನಿ ಸಂಸ್ಥಾನವು ಶಾಹಿ ರಾಜ್ಯಗಳಾದಾಗ ಸಾಹಿತ್ಯಿಕ ಚಟುವಟಿಕೆಗಳು ಬಿಜಾಪುರ ಮತ್ತು ಗೋಲ್ಕೊಂಡಾಕ್ಕೆ ವರ್ಗಾಯಿಸಲ್ಪಟ್ಟವು. ಬಿಜಾಪುರದ ಆದಿಲ್ ಷಾಹಿಗಳು 'ದಖನಿ' ಭಾಷೆಯ ಮತ್ತು ಸಾಹಿತ್ಯದ ಬಹು ದೊಡ್ಡ ಪೋಷಕರಾಗಿದ್ದು ಸ್ವತಃ ಎರಡನೆಯ ಇಬ್ರಾಹಿಂ ಕವಿಯಾಗಿ 'ನೌರಸ್ ನಾಮಾ' ಅಥವಾ 'ಕಿತಾಬ್ -ಇ-ನೌರಸ್ ' ಎಂಬ ಸಂಗೀತದ ಕುರಿತಾದ ಕಾವ್ಯಕೃತಿಯನ್ನು ರಚಿಸಿದ್ದಾನೆ. ಈತನ ಆಡಳಿತಾವಧಿಯಲ್ಲಿ ಅನೇಕ ಕವಿಗಳು ಗುಜರಾತಿನಿಂದ ಬೀದರ್ ಗೆ ಬಂದು ನೆಲಸಿದರು.

ಎರಡನೆಯ ಇಬ್ರಾಹಿಂ ಭಾರತೀಯ ಅಲಂಕಾರ ಶಾಸ್ತ್ರದ ಬಗೆಗೆ ವಿಶೇಷ ಆಸಕ್ತಿ ವಹಿಸಿದ್ದನಲ್ಲದೆ ನಮ್ಮ ಅಲಂಕಾರಿಕರು ಪ್ರತಿಪಾದಿಸಿದನವರಸ'ಗಳ ಬಗೆಗಿನ ಕಾವ್ಯವೇ'ಕಿತಾಬ್ -ಇ-ನವರಸ್ ಆಗಿದೆ. ಈ ಕೃತಿಯು ಭಾರತೀಯ ಸಂಗೀತದ ವಿವಿಧ ರಾಗಗಳ ಕುರಿತು ವಿವರವಾದ ಚರ್ಚೆಯನ್ನೊಳಗೊಂಡಿದೆ.ಭಾರತೀಯ ಪರಂಪರೆಯ ಕಾವ್ಯ, ಕಲೆ, ತತ್ವಜ್ಞಾನಗಳ ವಿಶೇಷ ವ್ಯಾಮೋಹಿಯಾದ ಇಬ್ರಾಹಿಂ ಕವಿಯಾಗಿದ್ದನಲ್ಲದೆ ಸ್ವತಃ ಒಳ್ಳೆಯ ಸಂಗೀತಗಾರನಾಗಿದ್ದನೆಂದು ಮೊಗಲ್ ಚಕ್ರವರ್ತಿ ಜಹಂಗೀರನು ಸಹ ಒಪ್ಪಿಕೊಳ್ಳುತ್ತಾನೆ.[10] ಆದಿಲ್ ಶಾಹಿಕಾಲದ ಅನೇಕ ಚಿತ್ರ ಕಲೆಗಳಲ್ಲಿ ಈ ಸುಲ್ತಾನನು ವಾದ್ಯಗಳನ್ನಿಡಿದು ಕುಳಿತಿರುವ ಭಂಗಿಗಳಿವೆ. ಇಬ್ರಾಹಿಂನು ಸಹಸ್ರಾರು ಹಿಂದೂ-ಮುಸ್ಲಿಂ ಸಂಗೀತಗಾರರು ಪಾಲ್ಗೊಳ್ಳುವ ಈದ್ - ಇ -ನವರಸ್' ಎನ್ನುವ ಸಂಗೀತದ ಉತ್ಸವವನ್ನು ಆರಂಭಿಸಿದ್ದನು.

'ಕಿತಾಬ್ -ಇ-ನವರಸ್ ' ಕೃತಿಯ ಆರಂಭವು ಇಸ್ಲಾಂನ ಸಂಪ್ರದಾಯದ ರೀತಿಯಲ್ಲಿ 'ಬಿಸಿಲ್ಮಾ' ದಿಂದ ಆರಂಭವಾಗದೆ ಗಣಪತಿಯ ಪ್ರಾರ್ಥನೆಯಿಂದ ಆರಂಭವಾಗುತ್ತದೆ. ನಂತರ ಶಿವ, ಪಾರ್ವತಿ, ಭೈರವ ಮೊದಲಾದವರಿಗೂ ಸೂಕ್ತಗೌರವವನ್ನು ತೋರಿಸಿದ್ದನೆ . ಇಬ್ರಾಹಿಂನ ಗೌರವವು ವಿಧ್ಯಾಧಿದೇವತೆಯಾದ ಸರಸ್ವತಿಯ ಮೇಲೆಯೇ ಅಧಿಕವಾಗಿತ್ತು. ಆತನು ಸರಸ್ವತಿಯನ್ನು ಈ ಕೆಳಗಿನಂತೆ ಸ್ತುತಿಸಿದ್ದಾನೆ.

ಭಾಷೆಗಳು ಅನೇಕವಿವೆ, ಭಿನ್ನವಿವೆ
ಆದರೆ ಭಾವನೆಯ ನಿವೇದನೆ ಒಂದೇ ಆಗಿದೆ
ಅವನು ಬ್ರಾಹ್ಮಣನೇ ಆಗಿರಲಿ ಅಥವಾ ತುರಕನೇಆಗಿರಲಿ

[illegible]

[illegible]

[illegible]

[illegible]

[illegible]

ವಿಧ್ಯಾಧಿದೇವತೆಯಾದ ಸರಸ್ವತಿಯು ನೋಡಿ ಮುಗಳ್ನಗುವ
ಅವನು ಒಬ್ಬನೇ ಆಗಿರುತ್ತಾನೆ.
ಓ ಇಬ್ರಾಹಿಮನೇ ಪ್ರಪಂಚವು ಜ್ಞಾನವನ್ನು ಮಾತ್ರ ಬಯಸುತ್ತದೆ
ತುಂಬು ಹೃದಯದಿಂದ ಸೇವಿಸು ಮತ್ತು ಧ್ಯಾನಿಸು ಶಬ್ದ ಸಾಗರದ ಸಾಮರ್ಥ್ಯವನು[10]

ಆದಿಲ್ ಷಾಹಿ ಕಾಲಘಟ್ಟದ ಕವಿಗಳಲ್ಲಿ ಅಬ್ದುಲ್ಲಾನು ಮೊದಲ ಶ್ರೇಷ್ಠ ಕವಿಯಾಗಿದ್ದಾನೆ.ಅಬ್ದುಲ್ಲಾನಿಗೆ ಅರ್ಯಾಬಿಕ್ ಪರ್ಶಿಯನ್ ಭಾಷೆಗಳು ಬರುತ್ತಿರಲಿಲ್ಲವಲ್ಲದೆ ಅವನು 'ಹಿಂದುವಿ' (ಉರ್ದು) ಭಾಷೆಯೊಂದನ್ನು ಮಾತ್ರ ಅರಿತ ವನಾಗಿದ್ದನಲ್ಲದೆ ಸಾಹಿತ್ಯಿಕವಾಗಿ ಆ ಭಾಷೆಯ ಮೇಲೆ ಹಿಡಿತಸಾಧಿಸಿದ್ದನು. ಈತನ 'ಇಬ್ರಾಹಿಂ ನಾಮಾ' ದ ವಸ್ತುವು ಎರಡನೆ ಇಬ್ರಾಹಿಂನ ಆಸ್ಥಾನ, ಅರಮನೆಗಳು, ಬಿಜಾಪುರ ನಗರ ಮತ್ತು ಉಧ್ಯಾನವನಗಳು, ಸುಂದರ ಹೆಣ್ಣು ಮಕ್ಕಳ ವರ್ಣನೆಯನ್ನೊಳಗೊಂಡುದಾಗಿತ್ತು. ಈಕಾವ್ಯಕೃತಿಯ ಕೆಲವು ಭಾಗಗಳು ಸ್ಪಷ್ಟ ಪಡಿಸುವ ಹಾಗೆ ಅಬ್ದುಲ್ಲಾನು ಶ್ರೇಷ್ಠ ಕಲಾವಿದನಾಗಿದ್ದನು. ರೂಪಕಗಳ ಮುಖಾಂತರ ವಸ್ತು ಸ್ಥಿತಿ ಯೊಂದನ್ನು ವರ್ಣಿಸುವ, ವಿವರಗಳನ್ನು ಕಟ್ಟಿಕೊಡುವ ಬಗೆ ಅಪೂರ್ವವಾದುದಾಗಿದೆ. ಅಬ್ದುಲ್ಲಾನು ಕಾವ್ಯದಲ್ಲಿನ ಕೆಲವು ವಿಶಿಷ್ಟ ಪದಗಳ ಕುರಿತಂತೆ ಇಂಡಿಯಾದ ಆಧ್ಯಾತ್ಮಿಕ ಪರಿಭಾಷೆಯಲ್ಲಿ ಅದರ ಅರ್ಥ ಮತ್ತು ತಾತ್ವಿಕ ಹಿನ್ನಲೆಯನ್ನು ಹುಡುಕಲು ಯತ್ನಿಸುವುದು ಅರ್ಥಪೂರ್ಣವಾಗಿದೆ.[11] ಅಬ್ದುಲ್ಲಾನು ಈ ಕೃತಿಯ ಭಾಷೆಯನ್ನು 'ಹಿಂದುವಿ' ಎಂದು ಕರೆದಿರುವನಲ್ಲದೆ ದೆಹಲಿಯ ಸುತ್ತಮುತ್ತ ಮಾತಾಡುವ ಭಾಷೆಯನ್ನು 'ದೆಹಲವಿ' ಎಂದು ಕರೆದಿದ್ದಾನೆ.

ಮುಖೂಮಿಯು ಮೊಹಮ್ಮದ್ ಆದಿಲ್ ಶಾಹನ ಆಸ್ಥಾನದ ಕವಿಯಾಗಿದ್ದನು. ' ಚಾಂದ್ರಬದನ್ ವಾ ಮಾಹೇರ್' ಎಂಬುದು ಈತನ ಪ್ರಖ್ಯಾತಕೃತಿಯಾಗಿದೆ. 'ಸನಾತಿ'ಯು ಈಕಾಲದ ಮತ್ತೊಬ್ಬ ಕವಿಯಾಗಿದ್ದು 'ಮಸ್ನವಿ- ಕೈಸಾ-ಇ-ತಾಮೀನ್ - ಅಮ್ ಸಾರಿ' ಎನ್ನುವ ಈತನ ಕೃತಿಯು ಪ್ರಸಿದ್ಧವಾದುದಾಗಿದೆ. ಕುತುಬ್ ಷಾಹಿ ರಾಜಕುಮಾರಿ 'ಕದೀಜಾಸುಲ್ತಾನ್ 'ಳನ್ನುಮೊಹಮ್ಮದ್ ಆದಿಲ್ ಶಾಹನಿಗೆ ಕೊಟ್ಟುಮದುವೆ ಮಾಡಿದಾಗ 'ಮಲಿಕ್ ಕುಶ್ ನೂದ್ ' ಎನ್ನುವ ಗೋಲ್ಕಂಡಾದ ಕವಿಯನ್ನು ವರದಕ್ಷಿಣೆಯಾಗಿ ಆದಿಲ್ ಷಹಾನ ಆಸ್ಥಾನಕ್ಕೆ ಕಳುಹಿಸಿ ಕೊಡಲಾಯಿತು.[12] ಈತನು 'ಹಶತ್ ಬಿಶತ್'

ಮತ್ತು 'ಬಜಾರ್ -ಇ-ಹುಸ್ನಾ' ಎಂಬ ಎರಡು ಪ್ರಖ್ಯಾತ ಮಸ್ನವಿಕಾವ್ಯಗಳ ಕರ್ತೃವಾಗಿದ್ದಾನೆ. 'ರುಸ್ತುಮಿ'ಯು ಆದಿಲ್ ಷಾಹಿ ಕವಿಗಳಲ್ಲೆಲ್ಲ ಅತ್ಯುತ್ತಮ ಕವಿಯಾಗಿದ್ದಾನೆ. ಈತನ ಇನ್ನೊಂದು ಹೆಸರು 'ಕಮಲ್ ಖಾನ್' ಎಂದೂ ಈತನಿಗೆ 'ಕಹತ್ತಲ್ ಕಾಹು' ಎಂಬ ಬಿರದೂ ಸಹ ನೀಡಲ್ಪಟ್ಟಿತ್ತು. 'ಕಹನೀರ್ ನಾಮಾ' ಹೆಸರಿನ ೨೪೦೦೦ ಪದ್ಯಗಳಿಂದ ಕೂಡಿದ ಧೀರ್ಘ ಕಥನ ಕಾವ್ಯವನ್ನು ರಚಿಸಿದ್ದಾನೆ.ಈಕೃತಿಯು ಆಕಾಲದ ಅತ್ಯಂತ ಮೇರು ಕೃತಿಯಾಗಿದೆ.

ದಖ್ಖಿನಿನ ಷಾಹೀ ರಾಜ್ಯಗಳಲ್ಲಿನ ಮೂರು ಸಂಸ್ಥಾನಗಳಲ್ಲೂ ಇದ್ದು ಕಾವ್ಯರಚನೆ ಮಾಡಿದ 'ಹಸನ್ ಚೌಕಿ'ಯು ವಿಶಿಷ್ಟ ಕವಿಯಾಗಿದ್ದಾನೆ. ಇವನು ಮೂಲತಃ ಅಹಮ್ಮದ್ ನಗರದಿಂದ ಬಂದವನಾಗಿದ್ದು ಅಲ್ಲಿನ ನಿಜಾಮ್ ಶಹಾನ ಕುರಿತಾಗಿ 'ಫಾತೇಹ್ ನಾಮಾ' ಎಂಬ ಕೃತಿಯೊಂದನ್ನು ರಚಿಸಿದ್ದಾನೆ. ಆನಂತರ ಬಿಜಾಪುರದ ಆಸ್ಥಾನದಲ್ಲಿದ್ದಾಗ 'ಮೆಜ್ ಬಾನಿನಾಮಾ ಶಾಹಿ' ಎಂಬ ಕೃತಿ ರಚಿಸಿದ್ದಾನೆ. ಇದು ಎರಡನೇ ಇಬ್ರಾಹಿಂ ಆದಿಲ್ ಶಹಾನ ಕಾವ್ಯಾತ್ಮಕ ಹೆಸರಾಗಿದೆ. ಬಿಜಾಪುರ ಸಂಸ್ಥಾನದ ರಾಜಕೀಯ ಉನ್ನತಿಯದಿನಗಳಲಿ ಬಿಜಾಪುರದ ಆಸ್ಥನದಲ್ಲಿಯೇ ಇದ್ದವನು ನಂತರ ಗೋಲ್ಕೊಂಡಾಕ್ಕೆ ಹೊರಟು ಹೋಗುತ್ತಾನೆ.

ಗೋಲ್ಕೊಂಡಾದಲ್ಲಿ'ದಖಿನಿ'ಯು ವ್ಯವಹಾರ, ಸಂಪರ್ಕ ಮತ್ತು ಸಾಹಿತ್ಯಿಕ ಅಭಿವ್ಯಕ್ತಿಯ ಭಾಷೆಯಾಗಿ ಎಲ್ಲಾ ರೀತಿಯಿಂದಲೂ ಔನ್ನತ್ಯಕ್ಕೇರಿತು. 'ಈ ಕಾಲದ ಸಾಹಿತ್ಯಿಕ ಶ್ರೇಷ್ಠತೆ, ಸಮೃದ್ಧಿ ಮತ್ತು ಸೃಜನಾತ್ಮಕೆಯಿಂದಾಗಿ ಇದನ್ನು ಇಂಗ್ಲೀಷ್ ಸಾಹಿತ್ಯದ ಎಲಿಜಬತ್ ಕಾಲಕ್ಕೆ ಹೋಲಿಸಲಾಗುತ್ತದೆ'.[೧೪] ೧೫೫೦ರಿಂದ ೧೬೫೦ ರವರೆಗೆ ಮತ್ತು ೧೬೫೦ರಿಂದ ೧೭೫೦ರವರೆಗಿನ ಕಾಲಘಟ್ಟವು ತನ್ನ ದಖನಿ ಸಾಹಿತ್ಯ ಕೃತಿಗಳಿಂದಾಗಿ ಬಹುಮುಖ್ಯ ಕಾಲಘಟ್ಟವೆನ್ನಿಸಿದೆ.

'ವಝಿಯುದ್ದೀನ್ ವಝ್ಹಿ' ಯು ಗೋಲ್ಕೊಂಡಾದ ಬಹುಮುಖ್ಯ ಕವಿಗಳಲ್ಲೊಬ್ಬನಾಗಿದ್ದಾನೆ. 'ಕುತುಬ್ ಮುಶ್ತಾರಿ' ಮತ್ತು 'ಸುಬ್ರಾಸ್ ' ಎನ್ನುವ ಎರಡು ಕೃತಿಗಳು ಅತ್ಯಂತ ಪ್ರಖ್ಯಾತ ಕೃತಿಗಳಾವೆ. ಸುಲ್ತಾನ್ ಮೊಹಮ್ಮದ್ ಕುಲಿ ಕುತುಬ್ ಶಾಹನು ಸ್ವತಃ ಕವಿಯಾಗಿದ್ದನಲ್ಲದೆ ಕಲೆ ಸಾಹಿತ್ಯ ಸಂಸ್ಕೃತಿಗಳಿಗೆ

ಮುಖ್ಯ ಆಶ್ರಯಧಾತನಾಗಿದ್ದನು. 'ವಝ್ಹಿ'ಯು ಈತನ ಆಸ್ಥಾನದಲ್ಲಿಯೇ ಇದ್ದನು.

ಸುಲ್ತಾನ್ ಮೊಹಮ್ಮದ್ ಕುಲಿ ಕುತುಬ್ ಶಹಾನ ಕಾವ್ಯ ನಾಮವು 'ಕುಲಿ' ಅಥವಾ 'ಮೊಹಮ್ಮದ್ ಕುಲಿ' ಎಂದಾಗಿದ್ದು ಈತನ ಕಾಲವು 'ಗೊಲ್ಕೊಂಡಾ'ದ ಸುವರ್ಣಯುಗವೆನಿಸಿಕೊಂಡಿತು. ಈತನು ಉರ್ದು ಸಾಹಿತ್ಯದಲ್ಲಿ 'ಕವಿತೆಗಳ ಸಂಕಲನ' (ದಿವಾನ್) ವೊಂದನ್ನು ಸಿದ್ಧಗೊಳಿಸಿದ ಮೊದಲಿಗನೆಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. 'ಮನೋವೈಶಾಲ್ಯತೆ, ಅತಿಥಿ ಸತ್ಕಾರ, ಸಭ್ಯತೆಯ ಇನ್ನೊಂದು ಹೆಸರಾದ 'ಹೈದರಾಬಾದಿ' 'ಸಂಸ್ಕೃತಿ'ಯ ಪ್ರತೀಕವಾಗಿದ್ದಾನೆ. ಈತನು ತೆಲುಗಿನಲ್ಲಿಯೂ ಪದ್ಯ ರಚಿಸಿದನಲ್ಲದೆ 'ತೆಲಂಗಾಣದವರಂತೆ ಉಡುಗೆ ತೊಡುಗೆ ತೊಟ್ಟನು. ತೆಲಂಗಾಣದ ಹೆಣ್ಣನ್ನೆ ಪ್ರೇಮಿಸಿ ವರಿಸಿದನು. ಮತ್ತು ಆ ಮೂಲಕ ದಖನ್ನಿನ ಶ್ರೇಷ್ಠ ಪರಂಪರೆಗೆ ತನ್ನದೇ ಕೊಡುಗೆ ನೀಡಿದನು".[೧೫] ಈತನ ಸಂಪೂರ್ಣ ಕೃತಿಗಳು 'ಕ್ಯಾಪ್ಟನ್ ಕುಲಾಯತ್ -ಇ-ಮೊಹಮ್ಮದ್ ಕುಲಿ' ಎನ್ನುವ ಶೀರ್ಷಿಕೆಯಡಿಯಲ್ಲಿ ಡಾ|| ಜೋರೆ ಎನ್ನುವವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿವೆ.

'ಗಲ್ವಾಸಿಯು'ಗೋಲ್ಕೊಂಡಾದ ನಂತರದ ಮುಖ್ಯಕವಿಯಾಗಿದ್ದಾನೆ. ಈತನು 'ವಝ್ಹಿ' ಯಕಾಲಕ್ಕೆ ತುಂಬಾ ಚಿಕ್ಕವನಾದರೂ ಸಾಹಿತ್ಯಿಕ ಗುಣಗಳಿಂದಾಗಿ 'ವಝ್ಹಿ'ಯನ್ನೇ ಮೀರಿಸುವಂತಿದ್ದನು. 'ಗವ್ವಾಸಿ'ಯು ಸುಸಂಸ್ಕೃತ ವ್ಯಕ್ತಿಯಾಗಿದ್ದುಸಂತ 'ಮೀರ್ ಮೊಹಮ್ಮದ್ ಮೊಯಿನ್ ' ಅನುಯಾಯಿಗಿದ್ದನು. 'ಸೈಫುಲ್ ಮುಲುಕ್ ವಾ ಬಾದಿಯಲ್ ಜಮಾಲ್ ' ಎನ್ನುವುದು ಈತನ ಪ್ರಾಖ್ಯಾತ ಕಾವ್ಯಕೃತಿಯಾಗಿದೆ. ಮೊಹಮ್ಮದ್ ಕುಲಿ ಯ ಕಾಲದಲ್ಲಿ 'ವಝ್ಹಿ' ಯು ಈತನ ಏಳ್ಗೆಗೆ ಅಡ್ಡಗಾಲು ಹಾಕಿದನು. ಮೊಹಮ್ಮದ್ ಕುಲಿಯನಂತರದ ಅವನ ಉತ್ತರಾಧಿಕಾರಿ ಕುತುಬ್ ಶಾಹನ ಕಾಲವು ಅಂತಹ ಹೇಳಿಕೊಳ್ಳುವಂತ ಕಾಲವಾಗಿರಲಿಲ್ಲ. ಇವನ ನಂತರದ ಅಬ್ದುಲ್ಲಾ ಕುತುಬ್ ಶಾಹಾನು ಈ ಶ್ರೇಷ್ಠಕವಿಯನ್ನು ಗೌರವಿಸಿ ಆಸ್ಥಾನದ ಮುಖ್ಯಕವಿಯನ್ನಾಗಿಸಿದನು. ಈತನು ಬಿಜಾಪುರದ ರಾಯಭಾರಿಯಾಗಿದ್ದನಲ್ಲದೆ ಉನ್ನತ ವರ್ಗಗಳಲ್ಲಿ ಗಣ್ಯ ಸ್ಥಾನ ಪಡೆದಿದ್ದನು.

ತಮ್ಮ ಅಜ್ಜ ಮೊಹಮ್ಮದ್ ಕುಲಿಕುತುಬ್ ಶಹಾನಂತೆ ಅಬ್ದುಲ್ಲಾನು ಸಹಾ ಸ್ವತಃ ಕವಿಯಾಗಿದ್ದನ್ನಲ್ಲದೆ ಸಾಹಿತ್ಯ ಪೋಷಕನಾಗಿದ್ದನು. ಅವನು 'ವಝಿ' 'ಗವ್ವಾಸಿ' ಮತ್ತು 'ಮಾಲ್ಫಿಕ್ ಕುಶನೂದರಿ'ಗೆ ಆಶ್ರಯ ನೀಡಿದ್ದನು.

'ವಝ್ಹಿ' ಮತ್ತು 'ಗವ್ವಾಸಿ' ಯ ರಂತೆ ರಾಜಾಶ್ರಯ ಪಡೆಯದೆ, ರಾಜಾಶ್ರಯದೊಂದಿಗೆ ಯಾವುದೇ ಸಂಬಂಧವಿಟ್ಟು ಕೊಂಡಿರದ ಇಬ್ನಾ-ಇ-ನಿಶಾತಿ' ಯು ತನ್ನ 'ಫೂಲ್ ಬನ್ ' ಎನ್ನುವ 'ಮಸ್ನವಿ' ಕಾವ್ಯಕೃತಿಯಿಂದಾಗಿ ಜನಪ್ರಿಯನಾಗಿದ್ದಾನೆ. ಆಸ್ಥಾನದಿಂದ ದೂರವಿದ್ದು ಕಾವ್ಯರಚನೆ ಮಾಡಿದ ಇನ್ನು ಕೆಲವರಲ್ಲಿ ಸೈಯದ್ ಬಲ್ಲಾಕಿ-ಶಹಾರಾಜ ಮಿರಾಂಜಿಕುದಾನಾಮಾ, ಫರೂಕಿ ಮತ್ತು ಮಿರಾನ್ ಯಾಕೂಬ್ ಮುಖ್ಯರಾಗಿದ್ದಾರೆ. ಇವರಲ್ಲೆಲ್ಲಾ ನಿಶಾತಿಯೆ ಪ್ರಮುಖ ಕವಿಯಾಗಿದ್ದಾನೆ.

೫.೨೧ ಸೂಫಿ ಧಾರ್ಮಿಕ-ಸಾಹಿತ್ಯ

ಸೂಫಿಗಳು ಸಾಮನ್ಯವಾಗಿ ತಮ್ಮ ಸೈದ್ಧಾಂತಿಕ, ಮತ್ತು ತಾತ್ವಿಕತೆಗೆ ಸಂಬಂಧಪಟ್ಟ ಕೃತಿಗಳನ್ನು ಪರ್ಶಿಯನ್ ಭಾಷೆಯಲ್ಲಿಯೇ ರಚಿಸಲು ಇಷ್ಟಪಡುತ್ತಿದ್ದರು. ಆದರೆ ದಖನಿ ಅಥವಾ ಉರ್ದು ಮಾತೃ ಭಾಷೆಯಾಗಿರುವ ಅಸಂಖ್ಯಾತ ಮುಸ್ಲಿಮರಿಗಾಗಿ ಸೂಫಿಗಳು 'ದಖನಿ' ಭಾಷೆಯಲ್ಲಿ ಬರೆಯಬೇಕಾದ ಅನಿವಾರ್ಯಕ್ಕೊಳಗಾದರೂ .ಅಧ್ಯಾತ್ಮಿಕತೆ, ಸೈದ್ಧಾಂತಿಕ ಪರಿಭಾಷೆಗೆ ಸಂವಾದಿಯಾದ ಪದಗಳು ಅರ್ಯಾಬಿಕ್, ಪರ್ಶಿಯನ್ ಭಾಷೆಯಲ್ಲಿ ದೊರೆತ ಹಾಗೆ 'ದಖನಿ' ಭಾಷೆಯಲ್ಲಿ ಕಂಡು ಕೊಳ್ಳಲು ಆರಂಭದಲ್ಲಿ ಕಷ್ಟವಾಗಿರಬೇಕು.

ಆರಂಭದ ಇಂತಹ ಪ್ರಯತ್ನ ಮಾಡಿದವರಲ್ಲಿ 'ಹಜರತ್ ಶಹಾಮಿರಾಂಜಿ ಶಂಶುಲ್ ಉಶ್ ಹಕ್' ಮತ್ತು ಆತನ ಮಗ 'ಬರ್ಹಾನ್ ಅಲ್ ದಿನ್ ಜಾನಮ್' ಮುಖ್ಯರಾಗಿದ್ದಾರೆ. ಶಹಾ ಮಿರಾಂಜಿಯು ತನ್ನ ಜೀವನದ ಆರಂಭದ ದಿನಗಳಲ್ಲಿ ಆರೇಬಿಯಾಕ್ಕೆ ಹೋದವನು ಹಿಂತಿರುಗಿ ಬಂದಾಗ ಬಹುಮನಿ ಸಂಸ್ಥಾನವು

ಅಂತ್ಯಗೊಂಡಿರುತ್ತದೆ. ' ಶಹಾಮಿರಾಂಜಿ' ಯು ಬಿಜಾಪುರದಲ್ಲಿದ್ದು ಕೊಂಡೇ 'ಚಿಷ್ತಿ' ಸೂಫಿ ಪರಂಪರೆಯನ್ನು 'ದಖನ್ನಿನಲ್ಲಿ' ಜೀವಂತವಾಗಿಡಲು ಶ್ರಮಿಸಿದನು. ಈತನು ಕಾವ್ಯ ಮತ್ತು 'ಕುಶ್ -ನಾಗ್ಜ್ಞ ' ಎನ್ನುವ ಕಾವ್ಯಕೃತಿಗಳು ತುಂಬಾ ಪ್ರಸಿದ್ಧಗೊಂಡಿವೆ. ಈ ಎರಡೂ ಕಾವ್ಯಗಳಲ್ಲಿ 'ಕುಶ್ ನೂದಿ' ಎನ್ನುವ ಕನ್ಯೆಯೊಬ್ಬಳು ಚಂಚಲ ಸ್ವಭಾವದವಳಾಗಿ ಅಲೆಯುತ್ತಾ ತನ್ನ ಆಧ್ಯಾತ್ಮಿಕ ತೃಷೆಯನ್ನು ನೀಗಿಸಿಕೊಳ್ಳಲು 'ಸೂಫಿ' ಮಾರ್ಗದರ್ಶಕನನ್ನು ಅರಸುತ್ತಿರುತ್ತಾಳೆ.[೧೬] 'ಶಾಮಿರಾಂಜಿ' ಯ ಮಗನಾದ ಬರ್ಹಾನ್ ಅಲ್ ದಿನ್ ಜಾನಮ್ ನು 'ಇರ್ಷದ್ ನಾಮಾ' ಮತ್ತು 'ಖಲೀಮತ್ ಅಲ್ ಹಕ್ ಯಿಖ್' ಎನ್ನುವ ಕೃತಿಗಳನ್ನು 'ದಖನಿ' ಭಾಷೆಯಲ್ಲಿ ರಚಿಸಿದ್ದು ಧಾರ್ಮಿಕ ಆಧ್ಯಾತ್ಮಿಕ ವಿಷಯಗಳನ್ನೊಳಗೊಂಡ ಕಾವ್ಯಕೃತಿಗಳಲ್ಲಿ ಇವು ಮುಖ್ಯವಾಗಿವೆ. ಇದರಲ್ಲಿ 'ಇರ್ಷದ್ ನಾಮಾ' ಕೃತಿಯು ಸಂಸ್ಕೃತ ಭೂಯಿಷ್ಠವಾದ ದಖನಿ ಭಾಷೆಯಲ್ಲಿದ್ದರೆ 'ಖಲೀಮತ್ ಅಲ್ ಹಕ್ ಯಿಖ್' ಎನ್ನುವ ಕೃತಿಯಲ್ಲಿ ಪರ್ಶಿಯನ್ ಬಳಕೆ ಹೆಚ್ಚಾಗಿ ಕಂಡು ಬರುತ್ತದೆ. ಈ ಕೃತಿಗಳನ್ನು ದಖನಿಯಲ್ಲಿ ರಚಿಸಿದಕ್ಕಾಗಿ ಜಾನಮ್ ನು ತನ್ನ ಓದುಗರಿಗೆ " 'ಹಿಂದುವಿ' (ದಖನಿ ಉರ್ದು ಅಥವಾ ಉರ್ದು) ಭಾಷೆಯ ಬಗೆಗೆ ಯೋಚಿಸ ಬೇಡಿ ಆದರೆ ಆ ಜ್ಞಾನ ಸಂಪತ್ತಿನ ಅರ್ಥದ ಕಡೆಗೆ ಕಣ್ಣು ತೆರೆದು ನೋಡಿ"ಎಂದು ಕೇಳಿ ಕೊಂಡಿದ್ದಾನೆ.[೧೭] ಮಿರಾಂಜಿ ಮತ್ತು ಜಾನಮ್ ಇಬ್ಬರೂ ಸಂಸ್ಕೃತದ ಪದಗಳನ್ನು ತತ್ಸಮ, ತದ್ಭವ ರೂಪಗಳಲ್ಲಿ ತಮ್ಮ ಕೃತಿಗಳಲ್ಲಿ ಬಳಸಿಕೊಂಡಿದ್ದಾರೆ. ಅಲ್ಲದೆ ಅವರುವೈದಿಕ ಚಿಂತನೆಯ ತಾತ್ವಿಕ ಪರಿಭಾಷೆ , ಆಧ್ಯಾತ್ಮಿಕ ವ್ಯಾಖ್ಯಾನಗಳಿಂದ ತುಂಬಾ ಪ್ರಭಾವಿತರಾಗಿದ್ದರು.[೧೮] ಇಂತಹ ಸಾಹಿತ್ಯಿಕ, ಭಾಷಿಕ ಪ್ರಯತ್ನಗಳು ಬಿಜಾಪುರದ್ದೇ ಆದ ವಿಶಿಷ್ಟ ಸಾಹಿತ್ಯಿಕ ಶೈಲಿಯೊಂದಕ್ಕೆ ಕಾರಣವಾಯಿತು. ಉದಾಹರಣೆಗೆ ಆದಿಲ್ ಷಾಹನ್ 'ಕಿತಾಬ್ -ಇ-ನವರಸ್' ಕೃತಿಯನ್ನು ಗಮನಿಸಬಹುದು. ಇದು ಭಾರತೀಯ ಅಲಂಕಾರಿಕ ಲಕ್ಷಣಗಳನ್ನು ಬಳಸಿಕೊಂಡು ಸಂಗೀತದ ಬಗೆಗೆ ವ್ಯಾಖ್ಯಾನಿಸುವ ಕೃತಿಯಾಗಿದೆ.

'ದಖನಿ' ಯನ್ನು ಆಧ್ಯಾತ್ಮಿಕ ಭಾಷೆಯನ್ನಾಗಿ ಬಳಸುವಲ್ಲಿ ಆರಂಭದ ಸೂಫಿಗಳಿಗೆ 'ಹಿಂಜರಿಕೆ' ಯಿದ್ದರೂ ಅವರು ಅನಿವಾರ್ಯವಾಗಿ ಈ ಭಾಷೆಯನ್ನು ಬಳಸಲೇಬೇಕಾಯಿತು. ಬಹುಸಂಖ್ಯಾತ ಮುಸ್ಲಿಮರು 'ದಖನಿ' ಮಾತೃ ಭಾಷಿಕರಾದುದರಿಂದಲೂ ಹಾಗೂ ಮುಸ್ಲಿಮೇತರರೊಂದಿಗಿನ ಮುಖ್ಯ ಸಂಪರ್ಕ

[illegible]

ಭಾಷೆಯಾದುದರಿಂದಲೂ ಸೂಫಿಗಳಿಗೆ ತಮ್ಮ ಆಧ್ಯಾತ್ಮಿಕ ಚಟುವಟಿಕೆಗಳ ವಿಸ್ತರಣೆಗೆ ಈ ಭಾಷೆಯ ಬಳಕೆ ಅನಿವಾರ್ಯವಾಯಿತು. ಕ್ರಮೇಣ ಆಸ್ಥಾನದ ಕವಿಗಳು ಸಹ 'ದಖನಿ' ಯಲ್ಲಿ ಸಾಹಿತ್ಯ ರಚಿಸತೊಡಗಿದರು. ಉತ್ತರದಲ್ಲಿ ಉರ್ದುವು ಆಸ್ಥಾನದ ಭಾಷೆಯಾಗುವುದಕ್ಕಿಂತ ಶತಮಾಗಳ ಹಿಂದೆಯೇ ದಖ್ಖಿನ್ನಿನಲ್ಲಿ ಈ ಭಾಷೆಯು ಆಸ್ಥಾನ ಭಾಷೆಯಾಯಿತು. 'ದಖನಿ'ಯನ್ನು ಒಂದು ಸಮರ್ಥ ಭಾಷೆಯನ್ನಾಗಿ ರೂಪಿಸುವಲ್ಲಿ ಸೂಫಿಗಳ ಕಾರ್ಯ ಮಹತ್ತರವಾದುದಾಗಿದೆ. ಆರಂಭದಲ್ಲಿ ರಾಜಾಶ್ರಯ ಪಡೆಯದೆ ಜನರ ಧಾರ್ಮಿಕ-ಸಾಂಸ್ಕೃತಿಕ, ಸಾಮಾಜಿಕ ಅಗತ್ಯಗಳಿಗಾಗಿ ಸೃಷ್ಟಿಗೊಂಡು ಜೀವಂತಿಕೆಯ ಭಾಷೆಯಾಗಿ 'ದಖನಿ' ಯು ದೇಶೀಯ ಸೆಲೆಗಳ ಅಭಿವ್ಯಕ್ತಿಯಾಗಿ ವಿಕಾಸಗೊಂಡಿತು. ಕರ್ನಾಟಕದಲ್ಲಿ (ವಿಶೇಷವಾಗಿ ಬಹುಮನಿ ಸಂಸ್ಥಾನಗಳಾದ ಕಲುಬುರ್ಗಿ, ಬೀದರ್, ಬಿಜಾಪುರ ಸಂಸ್ಥಾನದ ವ್ಯಾಪ್ತಿಯ ಪ್ರದೇಶಗಳು) ನ 'ದಖನಿ'ಯು 'ಉತ್ತರದ ಉರ್ದುವಿಗಿಂತ ಕೊಂಚ ಭಿನ್ನವಾಗಿ ೧೪ನೆಯ ಶತಮಾನದಲ್ಲಿ ಲಾಹೋರಿನಿಂದ ವಲಸೆ ಬಂದ ಪಂಜಾಬಿಗಳ ಭಾಷೆಯೊಂದಿಗೆ ತೆಲುಗು ಮತ್ತು ಕನ್ನಡದ ಪರಿಸರದೊಂದಿಗೆ ಸಂಸ್ಕೃತ ಪದಗಳು ಮೇಳೈಸಿಕೊಂಡು, ಅರಬ್, ಪರ್ಶಿಯನ್ ಭಾಷೆಯ ಪದ ಮತ್ತು ಕಾಗುಣಿತಗಳನ್ನು ಒಳಗೊಳ್ಳದೆ ಮೂಡಿಬಂದ ವಿಶಿಷ್ಟ ಭಾಷೆಯಾಗಿತ್ತು.[೧೯]

'ಸೂಫಿಜಂಗ' ಅನುಭಾವ, ತಾತ್ವಿಕ, ಸೈದ್ಧಾಂತಿಕ ವಿವರಗಳನ್ನು ಸಾಮಾನ್ಯ ಜನರಿಗೂ ಅಂದರೆ 'ಇಸ್ಲಾಂ' ನಲ್ಲಿ ನಿಷ್ಠೆಯಿರುವ ಜನರಿಗೆ ಸರಳವಾಗಿ ತಿಳಿಸಿ ಹೇಳಲು 'ದಖನಿ' ಭಾಷೆಯನ್ನು ಬಳಸಿಕೊಂಡರಾದರೂ 'ದಖನಿ' ಮಾತೃಭಾಷಿಕ ಅಸಂಖ್ಯಾತ ಅನಕ್ಷರಸ್ಥ ಮುಸ್ಲಿಮರೂ ಸಹ ಇದ್ದುದರಿಂದ ಸೂಫಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸ್ಥಳೀಯ ಭಾಷೆಗಳಲ್ಲಿ ಲಭ್ಯವಿರುವ ಜಾನಪದ ಸಾಹಿತ್ಯಕ್ಕೆ ಸಂವಾದಿಯಾಗಿ ಅವುಗಳ ತಂತ್ರ, ನಿರೂಪಣೆಗಳನ್ನೇ ಬಳಸಿಕೊಂಡು ಹಾಡುಗಳನ್ನು ರಚಿಸಿದರು. ಈ ಎರಡೂ ಮಾದರಿಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ಗಮನಿಸುವುದರ ಮೂಲಕ ಸೂಫಿಗಳು ತಮ್ಮ ಉಪದೇಶಗಳು ಮತ್ತು ಕಾವ್ಯ ಮಾಧ್ಯಮವನ್ನಾಗಿ 'ದಖನಿ' ಭಾಷೆಯನ್ನು ಬಳಸಿಕೊಳ್ಳುವುದರ ಮೂಲಕ ಮುಸ್ಲಿಂ ಮತ್ತು ಮುಸ್ಲಿಮೇತರರ ನಡುವೆ ಧರ್ಮ, ಆಧ್ಯಾತ್ಮಿಕತೆಗೆ ಸಂಬಂದಿಸಿದಂತೆ ಸರಳ ಸತ್ಯಗಳನ್ನು ಮುಂದಿಟ್ಟು ಎರಡೂ ಜನಾಂಗಗಳ ಮಧ್ಯೆ ಹೊಸ ಅರ್ಥೈಕೆಗೆ ಕಾರಣವಾಗಿ 'ಸಮನ್ವಯ' ವನ್ನು ಸಾಧಿಸುವಲ್ಲಿ ಸಫಲವಾದುದನ್ನು

ಕಂಡುಕೊಳ್ಳು ಬಹುದಾಗಿದೆ. ಏಕ ದೇವತಾರಾಧನೆಗೆ ಒತ್ತೊ ಕೊಡುವುದರ ಮೂಲಕ ಸ್ವರೂಪದಲ್ಲಿಯೇ ಪ್ರಗತಿಪರ ಮತ್ತು ಕ್ರಾಂತಿಕಾರಿಯಾದ 'ಇಸ್ಲಾಂ' ನೆಡೆಗೆ ಮುಸ್ಲಿಮೇತರರು ಆಕರ್ಷಿತರಾಗುವಲ್ಲಿ 'ದಖಿನಿ' ಯ ಈ ಎರಡನೇ ಬಗೆಯ ಜನಪದ ಸಾಹಿತ್ಯವು ಮುಖ್ಯ ಪ್ರೇರಣೆಯನ್ನೊದಗಿಸಿತು.

ಈಗ ಈ ಎರಡು ಸಾಹಿತ್ಯಿಕ ಮಾದರಿಯ ಉದಾಹರಣೆಗಳನ್ನು ಪರಿಶೀಲಿಸಬಹುದು. ಸೂಫಿಜಂ ನ ಅನುಭಾವದಲ್ಲಿ ಜಪ, ತಪ, ಧ್ಯಾನಗಳಿಗೆ ವಿಶೇಷ ಮಹತ್ವವಿದೆ. ಸಾಧಕನು ದೈವ ಸಾಮೀಪ್ಯ ಪಡೆಯುವಲ್ಲಿ ಹಲವಾರು ಹಂತಗಳನ್ನು ದಾಟಬೇಕಾಗುತ್ತದೆ. ಈ ಹಂತಗಳಲ್ಲೊಂದಾದ 'ಹಕೀಕತ್ ' ನಲ್ಲಿ ಸಾಧಕನು ಮೊದಲಬಾರಿಗೆ ದೈವ ದರ್ಶನವನ್ನು ಪಡೆಯುತ್ತಾನೆ. ಇದರ ಧ್ಯಾನಕ್ರಮವು ಪೂರ್ತಿ ಆಂತರಿಕವಾಗಿರುತ್ತದೆ. ಯಾತ್ರಿಕನು ಕೇವಲ ಬೌದ್ಧಿಕ ಪ್ರತಿಮೆಗಳ ಕಡೆ ಗಮನವಿಟ್ಟು ದೈವದರ್ಶನ ಪಡೆದು ಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು.

ಸೂರ್ಯನನ್ನೇ ನೋಡುತ್ತಿರುವ ಕಮಲದಂತೆ
ಚಂದ್ರಮನನ್ನೇ ನೋಡತ್ತಿರುವ ಗ್ರೀಕ್ ಜಾತಕ-ಪಕ್ಷಿಯಂತೆ
ಧ್ಯಾನವು ಇರಬೇಕು ನಮ್ಮಲೊಗೆ
ಅನೇಕ ಸಾಧುಗಳು ಧ್ಯಾನಿಸುವಂತೆ
ಲೋಭಿತಾನಿಧಿಯು ಕಲ್ಪಿಸಿಕೊಳ್ಳುವಂತೆ
ದೇವರು ನಮ್ಮ ದಮನಿಯೊಳು ಹೃದಯದೊಳು ಇದ್ದಾನೆ ಅಗೋಚರನಾಗಿ
ಧ್ಯಾನದಲ್ಲಿಯೂ ನಾವು ಕಾಣುವುದು ಅಗೋಚರವಾಗಿ
ಹೃದಯದ ಕಣ್ಣುಗಳು ಮಾತ್ರವೆ ಕಾಣುವವು ಅವನನ್ನು[20]

ಇನ್ನೊಂದು ಮಾದರಿಯ ಸಾಹಿತ್ಯದಲ್ಲಿ ಸೂಫಿಗಳು ಮೇಲಿನದಕ್ಕಿಂತ ಭಿನ್ನವಾಗಿ ಅನಕ್ಷರಸ್ಥ 'ದಖಿನಿ' ಸಮಾಜವನ್ನು ಅದರಲ್ಲೂ ವಿಶೇಷವಾಗಿ ಮಹಿಳೆಯರನ್ನು ತಲುಪಲು ಪ್ರಯತ್ನಿಸಲಾಯಿತಲ್ಲದೆ ಅದರಲ್ಲಿ ಯಶಸ್ವಿಯೂ ಆದರು.

ಸೂಫಿ ಸಂಸ್ಥೆಗಳು , ಉಪದೇಶ ಮಂದಿರಗಳು ಜನರಲ್ಲಿ ವಿಶೇಷ ಮನ್ನಣೆ, ಜನಪ್ರಿಯತೆಗಳಿಸುತ್ತಿದ್ದ ಕಾಲಘಟ್ಟದಲ್ಲಿ ಇಂತಹ ಸಾಹಿತ್ಯಿಕ ಪ್ರಕ್ರಿಯೆಯು ಕಂಡು ಬರುತ್ತಿದ್ದುದು ವಿಶೇಷ ಸಂಗತಿಯಾಗಿದೆ. ಸೂಫಿಗಳು ಇದಕ್ಕಾಗಿ ತಾವು ಬಳಸಿಕೊಂಡ ಜಾನಪದ ಸಾಹಿತ್ಯದ ವಸ್ತು, ತಂತ್ರ, ನಿರೂಪಣೆಗಳು ಕನ್ನಡ ಮತ್ತು ಮರಾಠಿಗಳ ಜಾನಪದ ಸಾಹಿತ್ಯದ ಪ್ರಕಾರಗಳಿಂದಾಗಿದ್ದು ಅವರು 'ದಖನಿ' ಭಾಷೆಯ ಮೂಲಕ 'ಇಸ್ಲಾಂ' ನ ತತ್ವಗಳನ್ನು ಸರಳವಾಗಿ ಗ್ರಾಮೀಣ ಪರಿಸರದಲ್ಲಿ ಹರಡಿದರು. ಚಕ್ಕೀನಾಮಾ (ಬೀಸುವ ಹಾಡುಗಳು) ಚರಕಾನಾಮ(ನೇಯ್ಗೆಯ ಪದಗಳು) ಲೋರಿ ನಾಮಾ (ಜೋಗುಳ ಹಾಡುಗಳು) ಶಾದಿನಾಮಾ (ದಿಬ್ಬಣದ ಹಾಡುಗಳು) ಸುಹಾಗನ್ ನಾಮಾ (ಮುತ್ತೈದೆಯ ಹಾಡುಗಳು) ಹೆಸರಿನ ಹಾಡುಗಳನ್ನು ಸ್ವತಃ ಸೂಫಿಗಳು ಮತ್ತವರ ಉತ್ತರಾಧಿಕಾರಿಗಳಿಂಧ ರಚಿಸಲ್ಪಟ್ಟು ಪ್ರಚಲಿತಕ್ಕೆ ಬಂದವು. ಇವು ಪ್ರಸ್ತುತ ಈಗಲೂ ದಖನ್ನಿನ 'ಜನಪದ ಇಸ್ಲಾಂ' ನ ಭಾಗವಾಗಿ ಜೀವಂತವಾಗಿವೆ. ನಿದರ್ಶನಕ್ಕಾಗಿ ' ಚಕ್ಕೀನಾಮಾ' (ಬೀಸುವಹಾಡು) ದ ಹಾಡೊಂದನ್ನು ಗಮನಿಸಬಹುದು. ಈ ಹಾಡಿನ ವಸ್ತು. ತಂತ್ರ ವಿಶೇಷವಾಗಿ ಕುತೂಹಲ ಕೆರಳಿಸುತ್ತದೆ. ದೇವರು ಮತ್ತು ಮಹಮ್ಮದ್ ಪೈಗಂಬರನ ನಡುವಣ ಆತ್ಮಿಕ ಸಂಬಂಧವನ್ನು ಸಂಕೇತಿಸಲು ಬೀಸುವ ಕಲ್ಲು ಅಥವಾ ಚರಕಾ (ನೇಯ್ಗೆಯಯಂತ್ರ) ಮತ್ತದರ ಬಿಡಿ ಭಾಗಗಳನ್ನು ಬಳಸಿ ಕೊಳ್ಳಲಾಗುತ್ತದೆಯಲ್ಲದೆ ಗೃಹಕೃತ್ಯದಲ್ಲಿ ತೊಡಗಿರುವ ಮಹಿಳೆಯನ್ನು ಆಧ್ಯಾತ್ಮಿಕ ಚಿಂತನೆಯೊಂದಿಗೆ ಬೆಸೆದು ಕೊಳ್ಳುವ ಹಾಗೆ ಅವಳ ವಿವಿಧ ಗತಿಗಳನ್ನು ನಿಯಂತ್ರಿಸುವುದು ಈ ಹಾಡುಗಳ ಮುಖ್ಯ ಉದ್ದೇಶವಾಗಿತ್ತು.

ಮರೆಯದಿರು ಈ ಶರೀರವೇ ಒಂದು ಬೀಸುವ ಕಲ್ಲು
ಮತ್ತು ಬೀಸುವಲ್ಲಿ ಇರಲಿಸದಾ ಎಚ್ಚರ
ಸೈತಾನನೆ ನನ್ನ ಸವತಿ
ನನ್ನ ಕೆಲಸವನ್ನು ಕೆಡಿಸಿ ದಣಿಸುತ್ತಾಳೆ
ಚಕ್ಕಿಯ ಹಿಡಿಕೆ ಅಲ್ಲಾನ ಮೊದಲಕ್ಷರವಾದ ಅಲೀಫ್ ನಂತೆ
ಮತ್ತು ಮಧ್ಯದ ಕಂಬಿ ಮಹಮ್ಮದನಂತೆ, ಆಗಿದೆ ಸ್ಥಿರ
ಹೀಗೆ ಸತ್ಯಾನ್ವೇಷಕನು ಕಾಣುವ ಸಂಬಂಧವನ್ನು
ಬೀಸುವ ಕಲ್ಲಿಗೆ ಹಾಕಲು ಕಾಳು ನಮ್ಮ ಕೈಗಳೆ ಅದಕೆ-ಸಾಕ್ಷಿ

ಅಂಶಗಳನ್ನು ಪ್ರಕಟಪಡಿಸ ಬಲ್ಲವಾಗಿವೆ.

೫.೩ ಹಿಂದೂ - ಮುಸ್ಲಿಂ ಸಾಂಸ್ಕೃತಿಕ - ಬಾಂಧವ್ಯ ಮತ್ತು ದ್ವಿ- ಭಾಷಿಕತೆ:

ಉರ್ದು - ಕನ್ನಡ, ತೆಲುಗು - ಉರ್ದು ಹೀಗೆ ದ್ವಿ - ಭಾಷಿಕತೆಯ ಮೂಲಕ ನಮ್ಮ ಸಾಂಸ್ಕೃತಿಕ ಬಾಂಧವ್ಯದ ಸ್ವರೂಪವನ್ನು ಅರಿಯಲು ಇಲ್ಲಿ ಯತ್ನಿಸಲಾಗಿದೆ. ಸಾಮಾನ್ಯವಾಗಿ ಎರಡು ಭಾಷಿಕ ಜನಾಂಗಗಳು ಪರಸ್ಪರ ನಿರ್ಧಿಷ್ಟ ಪ್ರದೇಶವೊಂದರಲ್ಲಿ ಸಂಪರ್ಕಕ್ಕೆ ಬಂದಾಗ ಅದು ಸಾಮಾಜಿಕ ರಾಜಕೀಯ ಪ್ರಭಾವಗಳಿಗೆ ಸಿಲುಕಿದಾಗ ಈ ತರಹದ ದ್ವಿ ಭಾಷಿಕ ಪರಿಸರವನ್ನು ಕಾಣಬಹುದಾಗಿದೆ.[೨೨]

ಉರ್ದು ಅಥವಾ ದಖನಿಯ ವಿಶಿಷ್ಟತೆಯೆಂದರೆ ಅದು ಇಡಿಯಾಗಿ ಅನ್ಯದೇಶಿಯವಾಗಿರದೆ ಈ ನೆಲದಲ್ಲೇ ಸೃಷ್ಟಿಗೊಂಡ ಭಾಷೆಯಾದದ್ದು ಮತ್ತದು ಇಂಗ್ಲೀಷಿನಂತೆ ವಿಶಿಷ್ಟ ಗುಣಗಳಿಂದ ಕೂಡಿದುದಾಗಿದೆ. ಅದರ ಭಾಷಿಕ ಸಂರಚನೆಯ ಸುಲುಭ ಸಂವಹನ ಮತ್ತು ಅರ್ಥ ಸಾದೃಶ್ಯಗಳಿಂದಾಗಿ ಅದು ಆರ್ಯನ್ ದ್ರಾವಿಡಿಯನ್ ಅಥವಾ ಟುಟ್ಯೋನಿಕ್ ಮತ್ತು ಇಂಡೋ ಜರ್ಮನಿಕ್ ಭಾಷೆಗಳೊಂದಿಗೆ ಸುಲುಭವಾಗಿ ವ್ಯವಹರಿಸಬಹುದಾಗಿತ್ತು. ಇಂತಹ ಭಾಷೆಯೊಂದಿಗಿನ ಕನ್ನಡ ಮತ್ತು ತೆಲುಗಗಳ ದ್ವಿ-ಭಾಷಿಕ ಪ್ರಕ್ರಿಯೆಗೆ ಸುಧೀರ್ಘ ಚರಿತ್ರೆಯಿದೆ. ಆಂಧ್ರದ ತೆಲಂಗಾಣ, ಉತ್ತರ ಕರ್ನಾಟಕದ ಬೀದರ್ ,ಗುಲುಬರ್ಗಾ, ಬಿಜಾಪುರ ಈ ಪ್ರದೇಶಗಳಿಂದ ದಕ್ಷಿಣಕ್ಕೆ ಬಂದ ಹಾಗೆಲ್ಲ ಇಂತಹ ದ್ವಿ - ಭಾಷಿಕ ಪರಿಸರವು ಕಡಿಮೆಯಾಗುತ್ತ ಬರುತ್ತದೆ. ತಮಿಳು ನಾಡಿನಲ್ಲಂತೂ ಮುಸ್ಲಿಮರೂ ಸಹ ತಮಿಳು ಮಾತೃಭಾಷಿಕರೆನಿಸಿಕೊಳ್ಳುತ್ತಾರೆ. ಆದರೆ ಇಂತಹ ದ್ವಿ-ಭಾಷಿಕ ಪರಿಸರವು ಅಷ್ಟಾಗಿ ಕಂಡು ಬರದಿರುವ ಕಡೆಯೂ ಸಹ ಸ್ಥಳೀಯ ಭಾಷೆಗಳ ಮೇಲಾದ ಉರ್ದುವಿನ ಪ್ರಭಾವವು ಗಮನಾರ್ಹವಾದುದಾಗಿದ್ದು ಇಸ್ಲಾಂ ಸಂಸ್ಕೃತಿಯೊಂದಿಗಿನ ಸ್ಥಳೀಯ ಸಂಸ್ಕೃತಿಯ ಸಂಸರ್ಗದ ಸ್ವರೂಪವನ್ನು ಇದು ಸ್ಪಷ್ಟವಾಗಿ ತೋರಿಸಿಕೊಡುತ್ತದೆ.

ದಖನಿಯ ಭಾಷಿಕ ಸ್ವರೂಪ ಮತ್ತದರ ಸಾಹಿತ್ಯವನ್ನು ಈ ಅಧ್ಯಾಯದ ಮೊದಲ ಭಾಗವಲ್ಲಿ

ಗಮನಿಸಲಾಗಿದೆ. ಈಗ ದಖನಿಯ (ಅಥವಾ ಉರ್ದುವಿನ) ಪ್ರಭಾವ ಕನ್ನಡದ ಮೇಲೆ ಯಾವ ಪ್ರಮಾಣದ್ದು ಮತ್ತದು ನಮ್ಮ ಸಾಂಸ್ಕೃತಿಕ ಬಾಂಧವ್ಯವು ಆಂತರಿಕ ಸಂಘರ್ಷದ ಮೂಲಕ ದೀರ್ಘಕಾಲಾವಧಿಯಲ್ಲಿ ಹೇಗೆ ಸಾಧಿಸಲ್ಪಟ್ಟಿತೆಂಬುದನ್ನು ಈ ಮೂಲಕ ಗಮನಿಸಬಹುದಾಗಿದೆ. ಇಂಡಿಯಾದಲ್ಲಿ ಮುಸ್ಲಿಂ ಸುಲ್ತಾನರು ಮತ್ತು ರಾಜರುಗಳ ಮಧ್ಯೆ ರಾಜಕೀಯ ಕಾರಣಕ್ಕಾಗಿ ನಡದ ಯುದ್ಧಗಳು ಇಂತಹ ಭಾಷಿಕ ಪ್ರಕ್ರಿಯೆಗೆ ಮುಖ್ಯ ತಳಹದಿಯಾಯಿತು ವಾಸ್ತವವಾಗಿ ಉರ್ದು ಸೃಷ್ಟಿಗೊಂಡದ್ದೇ ಸೈನಿಕ ಪರಿಭಾಷೆಯಾಗಿ. ಯುದ್ಧ ಸಂಬಂಧಿ ಚಟುವಟಿಕೆಗಳಿಂದ ಅದು ಬದುಕಿನ ಎಲ್ಲಾ ರಂಗಗಳಲ್ಲೂ ವಿಸ್ತರಿಸಿತು. ಕನ್ನಡ ಮತ್ತು ತೆಲುಗಿಗೆ ಸಂಬಂಧಿಸಿದಂತೆ ಉರ್ದುವಿನ ಪ್ರಭಾವದು ವಿಜಯನಗರ ಕಾಲದಲ್ಲಿ ಅಧಿಕವಾಯಿತು. ವ್ಯವಸ್ಥಿತ ಸೈನಿಕ ತರಬೇತಿಗಾಗಿ ಮತ್ತು ಫಿರಂಗಿ ದಳದಲ್ಲಿ ಮುಸ್ಲಿಂರು ವಿಜಯನಗರ ಸೈನ್ಯದಲ್ಲಿ ಸ್ಥಾನ ಪಡೆದುಕೊಂಡಿದ್ದರು. ಇದೂ ಸಹ ಕನ್ನಡ ಮತ್ತು ತೆಲುಗಿನ ಮೇಲೆ ಉರ್ದುವಿನ ಪ್ರಭಾವ ಅಧಿಕವಾಗಲು ಕಾರಣವಾಯಿತು.[೨೬]

ಈಗ ಅಂತಹ ಪದಗಳ ಪಟ್ಟಿಯೊಂದನ್ನು ಗಮನಿಸಿದರೆ ಇವು ಉರ್ದು ಅಥವಾ ಉರ್ದುವಿನ ಮೂಲಕ ಪ್ರವೇಶ ಪಡೆದಅರ್ಯಾಬಿಕ್, ಪರ್ಶಿಯನ್ ಪದಗಳೇ? ಎಂದು ಅನುಮಾನ ಹುಟ್ಟಿಸುವ ಮಟ್ಟಿಗೆ ಇವು ಕನ್ನಡದ ಶಬ್ದ ಸಂಪತ್ತಿನಭಾಗವಾಗಿಬಿಟ್ಟಿವೆ. ಈ ಕೆಳಗೆ ಅಂತಹ ಪದಗಳ ಪಟ್ಟಿಯೊಂದನ್ನು ನೀಡಲಾಗಿದೆ.[೨೭]

೫.೩೧ ಸೈನ್ಯ ಮತ್ತು ಯುದ್ಧ ಸಂಬಂಧಿ ಪದಗಳು

ಕನಾತು kanatu - tent wool

ಕಂದಕ - (kandaka)

ಕಿಲ್ಲೆ - (kille)

ಪಟ (pate)- ನಾಶವಾದ ,ಹಾಳಾದ, - ಧೂಳಿಪಟ

ಬಂದೂಕ - (Bnoduka)

ಬರೇಕ್ , (Barexkes)

ಬುರುಜು (Buruju)-ಗೋಪುರ (Twoer)

ಮುಸ್ತಾಯಿದು (mustaIadu) prepared

ಮಜಲು (majalu) stage

ಪವುಜು (pavuju - army

ಕೂನಿ= ಕೊಲೆ

ಗೋಲಂದಾಜ (golandaja- bomber)

ಚಬಕ (caboka) whip. ಹೊಡೆಯುವುದು ಚಾಟಿ

ಜಮಾದಾರ್ (jamadar) head sepoy

ಜೆಂಗಿ (jengi) war ಜೆಂಗಿಕುಸ್ತಿ

ತುಪಾಕಿ (tupkai) ತೋಪು (topu)- cannon

ತೋಪಾಖಾನೆ (Topokhone) = ortillery store = ಫಿರಂಗಿಗಳ ಸಂಗ್ರಹ

ನಾಮರ್ದ್ (Namarda) = covard = ಹೇಡಿ

ಬಹದ್ದೂರ್ (Bahadur) = Hero.

ಬಾರ್ - ಸಿಪಾಯಿ (bar- sipayi)- foot- soldier

ಬಾರು (baru) tood (as a gun)

ಸನೀನು (saninu) bayonet

ಸಿಪಾಯಿ (sipayi)- soldier

ಹವಾಲ್ದಾರ್ (havoladar)- army- officer.

ಧಾರ್ಮಿಕತೆಗೆ ಸಂಬಂಧಿಸಿದಂತೆ ತುಂಬಾ ವಿಶಿಷ್ಟವಾದ, ಭಿನ್ನ ಧಾರ್ಮಿಕ ನಂಬಿಕೆ ಮತ್ತು ಆಧ್ಯಾತ್ಮಿಕ ವಿವರಣೆಯ ಪದಗಳು ಶಿಷ್ಟ ಮತ್ತು ಆಡು ಭಾಷೆಗಳೆರಡರಲ್ಲೂ ಪ್ರಚಲಿತದಲ್ಲಿವೆ. ವಿಶೇಷವಾಗಿ ಮೊಹರಂ ಮತ್ತು ದರ್ಗಾಗಳಿಗೆ ಸಂಬಂಧಿಸದಂತೆ ನಡೆಯುವ ಉರುಸು ಮತ್ತು ದರ್ಗಾಗಳ ದೈನಂದಿನ ಆಚರಣೆಗಳಿಗೆ ಸಂಬಂಧಿಸಿದ ಪದಗಳು ಅಧಿಕವಾಗಿವೆ. ಈ ಪದಗಳು ಸ್ಪಷ್ಟ ಪಡಿಸುವ ಹಾಗೆ ಇವು ಮೂಲತಃ ಅರ್ಯಾಬಿಕ್, ಪರ್ಶಿಯನ್ ಪದಗಳಾದರೂ ಅವು ಇಂಡಿಯಾದ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಇಲ್ಲಿಯದೇ ಆದಂತಹ ವಿಶಿಷ್ಟ ಅರ್ಥ ಪಡೆದುಕೊಂಡವು. ಉದಾಹರಣೆಗೆ 'ಕಂದೂರಿ' ಎನ್ನುವ ಪದದ ಮೂಲಾರ್ಥವು ಹಿಂದೆ ಅರೇಬಿಯಾದಲ್ಲಿ ಪ್ರವಾದಿ ಮಹಮ್ಮದ್ ರ ಮಗಳು ಫಾತಿಮಾಳ ಗೌರವಾರ್ಥ ಸ್ತ್ರೀಯರು ಕೊಡುವ ಔತಣ ವೆಂದಾಗಿತ್ತು. ಆದರೆ ಇದು ಇಂಡಿಯಾದಲ್ಲಿ 'ಉರೂಸ್ ' ಮತ್ತು 'ಮೊಹರಂ' ನ ಸಂಧರ್ಭಗಳಲ್ಲಿ ಮಾಡುವ ಬಲಿಯ ಪ್ರಾಣಿಯ 'ಮಾಂಸ' ದ ಅಡುಗೆಯ ನೈವೇದ್ಯಕ್ಕೆ ಕಂದೂರಿ ಎಂದು ಕರೆಯಲಾಗುತ್ತದೆ. ವಾಸ್ತವವಾಗಿ ಇಂಡಿಯಾದಲ್ಲಿನ ಮುಸ್ಲಿಂ ಧಾರ್ಮಿಕ ಆಚರಣೆಗಳು ಮುಸ್ಲಿಂ ಮತ್ತು ಮುಸ್ಲಿಮೇತರರ ನಡುವಣ ಸಾಂಸ್ಕೃತಿಕ ಪ್ರಕ್ರಿಯೆಯ ಫಲಗಳಾಗಿದ್ದು, ಇಲ್ಲಿ ಸೂಚಿಸಲಾದ ಪದಗಳು ಮುಸ್ಲಿಮರಿಗೆ ಹೇಗೆಯೋ ಮುಸ್ಲಿಮೇತರರಿಗೂ ಸಹ ಅಷ್ಟೇ ಪವಿತ್ರ ಪದಗಳಾಗಿವೆ.[೨೫]

೫.೩.೨ ಧಾರ್ಮಿಕ ಮತ್ತು ಆಚರಣಾತ್ಮಕ ಪದಗಳು

ಅಲ್ಲಾ - ಅಲ್ಲಾಹ್

ಕಫಾಯಿ - ಉದ್ದನೆಯ ಗೌನು

ಖಾಜಿ - ನ್ಯಾಯಾಧೀಶ

ಕುತುಬಿ - ಧಾರ್ಮಿಕ ಪ್ರಸಂಗ

ಕುರಾನು - ಕುರ್ ಆನ್

ತಾಯಿತ - ತಾಯಿತ

ದೀನ್ - ನಂಬಿಕೆ

ನಗಾರಿ - ನಗಾರಿ

ನಬಿ - ಪ್ರವಾದಿ

ನಿಕಾಹು - ಮದುವೆ

ಪಕೀರ - ಪಕೀರ

ಬರಾಕಾತ್ - ಆರ್ಶೀವಾದ

ಮಕ್ಕಾ - ಮೆಕ್ಕಾ

ಮದೀನಾ - ಮದೀನಾ

ಮಸೀದಿ- ಮಸೀದಿ

ಶೇಕು - ಶ್ಹೇಕ್

ಸಲಾಮು - ಸಮಸ್ಕಾರ

ಸಿಲುಬೆ - ಸಿಲುಬೆ

ಸೈತಾನ್ - ಸೈತಾನ

ಪೀರಲು ಹಬ್ಬ - ಮೊಹರಂ, ತೆಲುಗ : ಪೀರಲು ಪಂಡುಗ

ಅಲಾವಿ - ಮೊಹರಂನ ಸಂದರ್ಭದಲ್ಲಿ ಮಸೀದಿಯ ಎದುರು ಹಾಕಲಾಗುವ ಅಗ್ನಿಕುಂಡ

ಸರಗಸ್ತಿ (ಶಹರ್ ಗಸ್ತ್) = ಮೊಹರಂನ ಸಂದರ್ಭದಲ್ಲಿ 'ಪಂಜಾ'ಗರು ಮೆರವಣಿಗೆ ಹೊರಡುವುದು

ಪಂಜಾ - ಹಸ್ತದಾರಣೆಯ ಪ್ರತಿಮೆ

ಆಲಂ - ಮೊಹರಂನ ಪಂಜಾದ ಇನ್ನೊಂದು ಹೆಸರು

ತಾಜಿಯಾ - ಪವಿತ್ರಗೋರಿಯಾಕೃತಿಯ ಶವ ಪೆಟ್ಟಿಗೆ

ಮಾದ್ಲಿ - ಗೋಧಿಯ ಚಪಾತಿಯನ್ನು ಹುಂಡಿ ಹುಂಡಿಯಾಗಿ ಮಾಡಿ ಅದರಲ್ಲಿ ಬೆಲ್ಲ, ಕೊಬ್ಬರಿ, ಮೊದಲಾದವುಗಳನ್ನು ಹಾಕಿ ಮಾಡಲಾಗುವ ಸಿಹಿ ಪದಾರ್ಥ. ಇದನ್ನು ವಿಶೇಷವಾಗಿ ಮೊಹರಂ ದಿನ ತಯಾರಿಸುವ ಸಿಹಿ ಪದಾರ್ಥ.

ಚೊಂಗ್ಯೊರೋಟಿ (ರೊಟ್ಟಿ). - ಸಿಹಿಲೇಪನದ ರೊಟ್ಟಿ ಮೊಹರಂನ ಸಂದರ್ಭದಲ್ಲಿ ನೈವೇದಿಕ್ಕೆ ಬಳಸುವ ಪದಾರ್ಥ. ಜಲಾಲಿ - ವೀರ ವ್ರತ ದೀಕ್ಷೆಯನ್ನು ಕೈಕೊಂಡ ಫಕೀರರಿಗೆ ಜಲಾಲಿಗಳೆಂದು ಕರೆಯುವುದು ವಾಡಿಕೆ. ಮೊಹರಂನ ಸಂಧರ್ಭದಲ್ಲಿ ಹರಕೆ ಹೊತ್ತ ಹಿಂದೂ - ಮುಸ್ಲಿಂರಿಬ್ಬರೂ ಜಲಾಲಿಗಳಾಗುವ ವಾಡಿಕೆಯಿದೆ.

ಕಂದೂರಿ - ಪರಿಶುದ್ಧವಾದ ಮಾಂಸ ಅಥವಾ ಮಧುರವಾದ ಪದಾರ್ಥಗಳಿಂದ ತಯಾರಿಸಿದ ಸಿಹಿಯಡುಗೆ. ಹಿಂದೆ ಪ್ರವಾದಿ ಮಹಮ್ಮದರ ಮಗಳು 'ಫಾತಿಮಾ' ಳ ಗೌರವಾರ್ಥ ಸ್ತ್ರೀಯರು ಕೊಡುವ ಔತಣಕ್ಕೆ ಕಂದೂರಿ ಎಂದು ಕರೆಯಲಾಗುತ್ತಿತ್ತು. ಇದರಲ್ಲಿ ಸ್ತ್ರೀಯರು ಮಾತ್ರ ಭಾಗವಹಿಸಬೇಕಾಗಿತ್ತು. ಆದರೆ ಕ್ರಮೇಣ ಇದರಲ್ಲಿ ಗಂಡಸರೂ ಪ್ರವೇಶಿಸಿದರು. ಮೊಹರಂನ ಸಂದರ್ಭದಲ್ಲಿ ೧೦ನೆಯ ದಿವಸ 'ಕಂದೂರಿ' ಮಾಡಲಾಗುತ್ತದೆ. ಉರೂಸ್ ಗೆ ಸಂಬಂಧಿಸಿದಂತೆಯೂ ಸಹ 'ಕಂದೂರಿ' ಯನ್ನು ಮುಖ್ಯನೈವೇದ್ಯವಾಗಿ ಅರ್ಪಿಸಲಾಗುತ್ತದೆ.

ಕರ್ಬಾಲ - ಕರ್ಬಲಾ ಮೊಹರಂಗೆ ಕಾರಣವಾದ ದುರಂತನಡೆದಸ್ಥಳ.

ಧೂಲ್ಲಾ - ಮದುಮಗ, ದೂಲ್ಲೇವ- ಮೊಹರಂನ ಸಂಧರ್ಭದ ಉಘ್ಘಡಣೆ

ಉರೂಸ್ - ಇದು ಪರ್ಶಿಯನ್ ಭಾಷೆಯ ಪದವಾಗಿದ್ದು ವಿವಾಹವೆಂದರ್ಥ. ಸೂಫಿಸಂತರ ಪುಣ್ಯತಿಥಿಗಳನ್ನು 'ಉರೂಸ್ ' ಎಂದು ಕರೆಯಲಾಗುತ್ತದೆ.

ಸಂದಲ್ - ಗಂಧ ತಮಿಳು ಸಂದಲ್ , ತೆಲುಗು - ಗಂಧಮು.

ಜೆಹಾರತ್ - ಸಾಮಾನ್ಯ ಪರಿಭಾಷೆಯಲ್ಲಿ 'ಜಾತ್ರಾ' ಎಂದು ಕರೆಯಲಾಗುತ್ತದೆ.

'ಇಸ್ಲಾಂ' ಸಂಸ್ಕೃತಿಯ ಪ್ರಕಾರ ಯಾರಾದರೂ ತೀರಿಕೊಂಡಾಗ 'ಧಫನ್ ' ಮಾಡಿದ ಮೂರನೆಯ ದಿನ ಸಮಾಧಿಯನ್ನು ಸಂದರ್ಶಿಸುವ ಕಾರ್ಯಕ್ರಮವು ಜೆಹಾರತ್ ಎನಿಸಿಕೊಳ್ಳುತ್ತದೆ.

'ಸಮ' ಆ - ಸೂಫಿ ಆಧ್ಯಾತ್ಮ ಸಂಗೀತ

ಕವ್ವಾಲಿ - ದರ್ಗಾ ಪರಂಪರೆಯಲ್ಲಿ 'ಸಮ ಆ'ದ ಮತ್ತೊಂದು ರೂಪ ಆಧ್ಯಾತ್ಮಿಕ ಸಂಗೀತ ಮೇಳ.

ಮುಜಾವರ್ - ಸಾಮಾನ್ಯವಾಗಿ ದರ್ಗಾಗಳ ದೈನಂದಿನ , ವಾರ್ಷಿಕ ವಿಧಿಗಳನ್ನು ನಿರ್ವಹಿಸುವ ಪುರೋಹಿತ.

ಪೀರ್ ಜಾದಾ - ಸೂಫಿ ಸಂಸ್ಥೆ (ದರ್ಗಾ) ಉತ್ತರಾಧಿಕಾರಿ.

ಪಾತೆಹಾ-ನಿವೇದನೆ - ಮೊಹರಂನ 'ತಾಜಿಯಾ'ಗಳಿಗೆ ಅಥವಾ ದರ್ಗಾದ 'ಮಜಾರ್ 'ಗಳಿಗೆ ಸಕ್ಕರೆ, ಕಂದೂರಿ, ಮುಂತಾದವುಗಳ ನೈವೇದ್ಯ ಅರ್ಪಿಸಿ 'ಕುರಾನಿ'ನ ಒಂದ್ಹೆರಡು ಸೂರಾಗಳನ್ನು ಪಠಿಸುವುದಕ್ಕೆ 'ಫಾತೆಹಾ' ಎನ್ನುತ್ತಾರೆ. ಕನ್ನಡದಲ್ಲಿ ಇದನ್ನು 'ಓದಿಕೆ' ಮತ್ತು ತೆಲುಗಿನಲ್ಲಿ 'ಚದುವಿಂಚಡಂ' ಎನ್ನುತ್ತಾರೆ.

ಗೋಡ - ಕುದುರೆ , ಗೋಧಿಯ ಕಣಕದಲ್ಲಿ 'ಕುದುರೆ'ಯ ಪ್ರತಿಮೆಗಳನ್ನು ಮಾಡಿ ಅವುಗಳನ್ನು ಬೇಯಿಸಿ ಸಿಹಿಪದಾರ್ಥ ತಯಾರಿಸಿ ಸಂತನ ಉರೂಸ್ ನ ಸಂದರ್ಭದಲ್ಲಿ ಅರ್ಪಿಸುವುದು.

ಲೋಭಾನ - ಧೂಪ.

೫.೩.೩ ಆಡಳಿತಾತ್ಮಕ ಪದಗಳು:

ಮುಸ್ಲಿಂರ ಆಡಳಿತದ ಪ್ರಭಾವದಿಂದಾಗಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಯಾಬಿಕ್, ಪರ್ಶಿಯನ್ ಉರ್ದುಪದಗಳು ಕನ್ನಡ ಮತ್ತು ತೆಲುಗುಗಳೆರಡರಲ್ಲೂ ಪ್ರವೇಶ ಪಡೆದವು. ಈ ಪದಗಳು ಬಹುತೇಕ ಆಡಳಿತಾತ್ಮಕ ದೇಶಿಯ ಪದಗಳನ್ನು ಪಲ್ಲಟಗೊಳಿಸಿ ಅವುಗಳ ಸ್ಥಾನವನ್ನು ಆಕ್ರಮಿಸಿಕೊಂಡಿರುವುದು ಮುಸ್ಲಿಂರ ಕ್ರಮಬದ್ಧ ಮತ್ತು ಸುವ್ಯವಸ್ಥಿತ ಆಡಳಿತದ ಪ್ರಭಾವವನ್ನು ಸೂಚಿಸುತ್ತದೆ. ಬ್ರಿಟೀಷರು ಸಹ ಇವುಗಳನ್ನು ಬದಲಾಯಿಸದೆ ಹಾಗೆಯೇ ಉಳಿಸಿಕೊಂಡು ಬಂದರು. ಸಾಮಾಜಿಕ ಮತ್ತು ಸಾಂಸ್ಕೃತಿಕ

ಸ್ಥಿತ್ಯಂತರಗಳಿಗೆ ರಾಜಕೀಯವು ಸಹ ಬಹು ಮುಖ್ಯ ಪ್ರೇರಕ ಸಂಗತಿಯಾದುದರಿಂದ ಆಡಳಿತಾತ್ಮಕ ಪದಗಳು ಸಾಂಸ್ಕೃತಿಕವಾಗಿ 'ಇಸ್ಲಾಂ' ನ ದಟ್ಟಪ್ರಭಾವವನ್ನು ಸೂಚಿಸುತ್ತವೆ. ನಿದರ್ಶನಾರ್ಥವಾಗಿ ಕೆಲವು ಪದಗಳನ್ನು ಈ ಕೆಳಗೆ ಕೊಡಲಾಗಿದೆ..

ಆಡಳಿತಾತ್ಮಕ ಪದಗಳು.

ಕಸಬಾ - ಮುಖ್ಯಪಟ್ಟಣ

ಜಿಲ್ಲೆ - ಜಿಲ್ಲೆ

ತಹಸೀಲು -ಜಿಲ್ಲೆಯ ಒಂದು ಭಾಗ

ತಾಲೂಕು - ತಾಲ್ಲೂಕು

ಮೊಹಲ್ಲಾ - ವಾರ್ಡ

ಜಮೀನು - ಹೊಲ

ಜಹಗೀರು - ಎಸ್ಟೇಟು

ಪರಗಣ - ಜಿಲ್ಲೆ

ಶಹರು - ನಗರ

ಸುಬೆ - ವಿಭಾಗ

ಅಮೀನ - ಕಂದಾಯ ಅಧಿಕಾರಿ

ನವಾಬ - ನವಾಬ

ಮುನ್ಸೀಫ - ಮುನ್ಸೀಪ

ಮುನ್ಸಿ - ಒಕ್ಕಣಿಕೆಗಾರ

ವಕೀಲ - ನ್ಯಾಯವಾದಿ

ವಜೀರ - ಮಂತ್ರಿ

ಸಾಹೇಬ - ಅಧಿಕಾರಿ, ಸಾಹೇಬ

ಅಮಲ್ದಾರ - ಕಂದಾಯ ವಸೂಲಿಗಾರ

ಕಾರಕೂನ - ಗುಮಾಸ್ತ

ಇನಾಮುದಾರ - ಇನಾಮುದಾರ

ಕಿಲ್ಲೇದಾರ - ಕೋಟೆಯ ಮೇಲ್ವೇಚಾರಣೆಯ ಅಧಿಕಾರಿ

ಕೊತ್ವಾಲ - ಪೋಲಿಸ್ ಅಧಿಕಾರಿ

ಖಜಾಂಚಿ - ಖಜಾಂಚಿ

ಚಪ್ರಾಸಿ - ಪೀವನ್

ಚಾಕರ - ಸೇವಕ

ಚೋಪದಾರ - ಬೆಳ್ಳಿದಂಡಧಾರಿ

ಚೌಕೀದಾರ - ವಾಡ್ ಮೆನ್

ಜಮಾದಾರ - ಮುಖ್ಯ ಸಿಪಾಯಿ (ಹೆಡ್ ಕಾನ್ಸಟೇಬಲ್)

ಜಮೀನ್ದಾರ - ಜಮೀನುದಾರ (ಭೂಮಾಲಿಕ)

ಜವಾನ - ಜವಾನ

ಜಹಗೀರುದಾರ - ಸುಲ್ತಾನ ಅಥವ ರಾಜರಿಂದ ಪಡದ ಜಹಗೀರನ ವ್ಯಕ್ತಿ

ತಹಸೀಲುದಾರ - ತಹಸೀಲ್ದಾರ

ತಾಬೇದಾರ - ಅನುಸರಿಸುವವನು

ಧಪೇದಾರ - ಧಪೇದಾರ

ಧಫ್ ತರ್ ದಾರಾ - ಕಂದಾಯ ಇಲಾಖೆಯ ಮುಖ್ಯ ಗುಮಾಸ್ತ

ದಿವಾನ - ಪ್ರಧಾನಮಂತ್ರಿ

ಪೌಜುದಾರ - ಪಡೆಯೊಂದರ ಮುಖ್ಯಸ್ಥ

ಭಕ್ಷಿ - ಸಂದಾಯಾಧಿಕಾರಿ

ಬಾದುಶಾಹಾ - ರಾಜ

ವಸೂಲುದಾರ - ತೆರಿಗೆ ವಸೂಲಿ ಮಾಡುವವನು

ಸಿರೆಸ್ತೆದಾರ - ಕಂದಾಯ ಇಲಾಖೆಯ ಮುಖ್ಯಗುಮಾಸ್ತ

ಸಲೆಹೇಗಾರ - ಸಲಹೇಗಾರ

ಸುಬೇದಾರ - ತಾಲೂಕು ಅಧಿಕಾರಿ

ಹರಕಾರ - ಹರಿಕಾರ

ಹವಾಲ್ದಾರ - ಸೈನದ ಅಧಿಕಾರಿ

ಸರಕಾರ - ಅಧಿಕಾರಿ

ಅದಾಲತ್ತು - ನ್ಯಾಯಾಲಯ

ಅಮಲು - ಜಾರಿ

ಅಮಾನತು - ಬಂಧಿಸುವುದು

ಅಮೀನ - ಕಂದಾಯ ಅಧಿಕಾರಿ

ಅಸಲು - ಅಸಲು

ಅಹವಾಲು - ಬೇಡಿಕೆ

ಆಸಾಮಿ - ವ್ಯಕ್ತಿ

ಏಲಮ್ - ಹರಾಜು

ಕಟ್ಟು - ಪತ್ರ

ಕಬೂಲು - ಒಪ್ಪಂದ

ಕರಾರು - ಕರಾರು (Agreement)

ಖಾಸಾ - ಸ್ವಂತ

ಕೈದು - ಬಂಧನ

ರೌಲು -ಕರಾರು

ಗೈರುಹಾಜರು - ಗೈರು ಹಾಜುರು

ಜಪ್ತಿ - ಜಪ್ತಿ

ಜಬಾಬು - ಉತ್ತರ

ಜರೂರು - ಅರ್ಜೆಟ್ , ತುರ್ತು

ಜಾಬಿತ - ಕ್ರಮಬದ್ಧ

ಜಾಮೀನು - ಜಾಮೀನು

ಜಾರಿ - ಜಾರಿಗೆ

ಪ್ರಸ್ತುತ ಇಲ್ಲಿ ಕನ್ನಡದ ಮೇಲಾದ ಉರ್ದುವಿನ ಪ್ರಭಾವವನ್ನು ಗಮನಿಸಲಾಗಿದೆ. ಉಳಿದಂತೆ ಭಾಷಾಶಾಸ್ತ್ರದ ವೈಜ್ಞಾನಿಕ ವಿಧಾನಗಳ ಮೂಲಕ (ಧ್ವನಿ, ಧ್ವನಿಮಾ, ಇತ್ಯಾದಿ) ಇದನ್ನು ವಿಶ್ಲೇಷಿಸುವ ಪ್ರಯತ್ನ ಮಾಡದೆ (ಮತ್ತು ಈ ಸಂಶೋಧಕನಿಗೆ ಅಂತಹ ಭಾಷಾವೈಜ್ಞಾನಿಕ ಪರಿಶ್ರಮದ ಕೊರತೆಯೂ ಇರುವುದರಿಂದ) ಒಟ್ಟಾರೆಯಾಗಿ ಬೇರೆ ಭಾಷೆಯೊಂದರ ಪ್ರಭಾವವೂ ಕೇವಲ ಪದಗಳ ರೂಪದಲ್ಲಿ ಪ್ರವೇಶ ಪಡೆಯದೆ, ಅಂತಹ ಪದಗಳ ಹಿಂದಿನ ನಂಬಿಕೆ, ರೀತಿ ರಿವಾಜು, ಜೀವನ ವಿಧಾನದ ಸಾಂಸ್ಕೃತಿಕ ಅಂಶಗಳು ಸ್ವೀಕರಾದ ಭಾಷೆಯ ಜನಾಂಗದ ಜೀವನದಲ್ಲೂ ಪ್ರವೇಶ ಪಡೆದಿರುತ್ತವೆಯೆಂಬುದನ್ನು ಸ್ಪಷ್ಟವಾಗಿ ಹೇಳಬಹುದಾಗಿದೆ.

ಉಳಿದೆಲ್ಲ ಆಚರಣೆಗಳು, ಧರ್ಮ, ಸಾಂಸ್ಕೃತಿಕ ವ್ಯಾಖ್ಯಾನಗಳಿಗಿಂತ ಸ್ಪಷ್ಟವಾಗಿ ಹಿಂದೂ - ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯವನ್ನು ಇಲ್ಲಿ ಕೊಡಲಾಗಿರುವ ಪದಗಳು ಮಂಡಿಸುತ್ತವೆ.

ಅಡಿಟಿಪ್ಪಣಿಗಳು

೧. ಸೈಯದ್ ಮೊಹಮ್ಮದ್ -'ದಿ ವ್ಯಾಲ್ಯೂ ಆಫ್ ದಖನಿ ಲಾಂಗೇಜ್ ', ಪು.೩

೨. ಮಶೂದ್ ಹುಸೇನ್ ಖಾನ್ -'ಹಿಸ್ಟರಿ ಆಫ್ ದಿ ಮಿಡಿವಲ್ ಡೆಕನ್ ', ಪು.೧೯

೩. ಸೈಯದ್ ಮೊಹಮ್ಮದ್ -'ದಿ ವ್ಯಾಲ್ಯೂ ಆಫ್ ದಖನಿ ಲಾಂಗೇಜ್ ', ಪು.೪

೪. ಮಶೂದ್ ಹುಸೇನ್ ಖಾನ್ -'ಹಿಸ್ಟರಿ ಆಫ್ ದಿ ಮಿಡಿವಲ್ ಡೆಕನ್ ', ಪು.೨೦

೫. ಸೈಯದ್ ಮೊಹಮ್ಮದ್ -'ದಿ ವ್ಯಾಲ್ಯೂ ಆಫ್ ದಖನಿ ಲಾಂಗೇಜ್ ', ಪು.೫

೬. ಅದೇ ಪು.೬

೭. ಅದೇ ಪು.೧೦

೮. ಅದೇ ಪು.೧೫

೯. ಮಶೂದ್ ಹುಸೇನ್ ಖಾನ್ -'ಹಿಸ್ಟರಿ ಆಫ್ ದಿ ಮಿಡಿವಲ್ ಡೆಕನ್ ', ಪು.೧೯

೧೦. ಆರ್ .ಎಂ. ಈಟನ್ -'ಸೂಫೀಸ್ ಆಫ್ ಬಿಜಾಪುರ್ ', ಪು.೯೮

೧೧. ಅದೇ ಪು.೯೯

೧೨. ಮಶೂದ್ ಹುಸೇನ್ ಖಾನ್ -'ಹಿಸ್ಟರಿ ಆಫ್ ದಿ ಮಿಡಿವಲ್ ಡೆಕನ್ ', ಪು.೨೪

೧೩. ಮೊಹಮ್ಮದ್ ಅಲಾಲುದ್ದೀನ್ -'ಸ್ಟಡಿ ಆಫ್ ದಿ ಕುತುಬ್ ಶಾಹಿ ಕಲ್ಚರ್ ಥ್ರೋದಿ ಪ್ರಿಂಟೆಡ್ ಪ್ರೋಟೋ ಉರ್ದು ಮತ್ನವೀಸ್ ಆಫ್ ಗೋಲ್ಕೊಂಡ', ಪು.೨೫

೧೪. ಅದೇ ಪು.೩೬

೧೫. ಅದೇ ಪು.೪೨

೧೬. ಮಶೂದ್ ಹುಸೇನ್ ಖಾನ್ -'ಹಿಸ್ಟರಿ ಆಫ್ ದಿ ಮಿಡಿವಲ್ ಡೆಕನ್ ', ಪು.೨೧

೧೭. ಆರ್.ಎಂ. ಈಟನ್ -'ಸೂಫೀಸ್ ಆಫ್ ಬಿಜಾಪುರ್ ', ಪು.೧೪೩

೧೮. ಮಶೂದ್ ಹುಸೇನ್ ಖಾನ್ -'ಹಿಸ್ಟರಿ ಆಫ್ ದಿ ಮಿಡಿವಲ್ ಡೆಕನ್ ', ಪು.೨೨

೧೯. ಆರ್.ಎಂ. ಈಟನ್ -'ಸೂಫೀಸ್ ಆಫ್ ಬಿಜಾಪುರ್ ', ಪು.೧೪೨

೨೦. ಅದೇ ಪು.೧೪೮

೨೧. ಅದೇ ಪು.೧೬೨

೨೨. ಸ್ವರಾಜ್ಯ ಲಕ್ಷ್ಮಿ -'ಇನ್ ಫ್ಲುಯೆನ್ಸ್ ಆಫ್ ಉರ್ದು ಆನ್ ತೆಲುಗು', ಪು.೧೨

೨೩. ವಿವರಗಳಿಗೆ ನೋಡಿ : ನ್ಯೂನಿಜ್ ಮತ್ತು ಡೊಮಿಂಗೋ ಪಯೀಸ್ ಅವರ ಪ್ರವಾಸ ಕಥನಗಳು 'ಮರೆತು ಹೋದ ಸಾಮ್ರಾಜ್ಯ-ವಿಜಯನಗರ' ರಾಬರ್ಟ್ ಸಿವೆಲ್ , ಅನು: ಸದಾನಂದ ಕನವಳ್ಳಿ, ಪು.೩೧೬ ಮತ್ತು ಪು.೩೫೮

೨೪. ಶಂಕರ ಕೆದಿಲ್ಲಾಯ -'ಫಾರಿನ್ ಲೋನ್ ವರ್ಡ್ಸ್ ಇನ್ ಕನ್ನಡ', ಪು.೨೩

೨೫. ಇಲ್ಲಿ ಕೊಡಲಾಗಿರುವ ಧಾರ್ಮಿಕ ಮತ್ತು ಆಚರಣಾತ್ಮಕ ಪದಗಳನ್ನು ಕ್ಷೇತ್ರ ಪರಿವೀಕ್ಷಣೆಯಿಂದ ಸಂಗ್ರಹಿಸುವುದರೊಂದಿಗೆ 'ಫಾರಿನ್ ಲೋನ್ ವರ್ಡ್ಸ್ ಇನ್ ಕನ್ನಡ', ಶಂಕರ್ ಕೆದಿಲ್ಲಾಯ ಮತ್ತು 'ಇನ್ ಫ್ಲುಯೆನ್ಸ್ ಆಫ್ ಉರ್ದು ಆನ್ ತೆಲುಗು' ಸ್ವರಾಜ್ಯ ಲಕ್ಷ್ಮಿ, ಎಂಬ ಪುಸ್ತಕಗಳಿಂದ ಆಯ್ದುಕೊಳ್ಳಲಾಗಿದೆ.

ಅಧ್ಯಾಯ : ೬

ಹಿಂದು-ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯ: ಜೀವನ ಕ್ರಮದ ನೆಲೆಗಳು ಮತ್ತು ಹುಟ್ಟು, ಸಾವು, ಮದುವೆ ಹಾಗೂ ಕೆಲವು ವಿಶಿಷ್ಟ ಧಾರ್ಮಿಕಾಚರಣೆಗಳು

ಹಿಂದೂ ಮತ್ತು ಮುಸ್ಲಿಂರ ನಡುವಣ ಸಾಂಸ್ಕೃತಿಕ ಪ್ರಭಾವಗಳು ಹೇಗೆ ಪರಸ್ಪರ ಮಿಳಿತಗೊಂಡು ಒಂದರಿಂದ ಮತ್ತೊಂದನ್ನು ಪ್ರತ್ಯೇಕಗೊಳಿಸಿ ನೋಡಲಾಗದಷ್ಟು ಅವು ಪೂರ್ತಿಯಾಗಿ ವಿಶಿಷ್ಟ ರೂಪು ಪಡೆದುಕೊಂಡಿವೆಯೆಂಬುದನ್ನು ಈ ಅಧ್ಯಾಯದಲ್ಲಿ ಗಮನಿಸಬಹುದಾಗಿದೆ. ಹುಟ್ಟು, ಸಾವು, ತಿಥಿ, ಉತ್ಸವ ಇತ್ಯಾದಿಗಳಲ್ಲೆಲ್ಲ ಇಸ್ಲಾಂನ ಸಂಸ್ಕೃತಿಯೊಂದಿಗೆ ಇಂಡಿಯಾದ ಸಾಂಸ್ಕೃತಿಕ ಅಂಶಗಳು ಬೆರೆತು ತಮ್ಮವೇ ಆದ ಸಂಸ್ಕಾರಗಳನ್ನು ರೂಢಿಸಿಕೊಂಡವುಗಳಾಗಿವೆ. ಮದುವೆಯಂತಹ ಬಹು ಮುಖ್ಯ ಸಮಾರಂಭದಲ್ಲೂ ಒಂದೆರಡು ಮುಖ್ಯ ಘಟನೆಗಳನ್ನು ಹೊರೆತು ಪಡಿಸಿದಂತೆ ಉಳಿದವೆಲ್ಲ ಪೂರ್ತಿಯಾಗಿ ಭಾರತೀಯ ಪದ್ಧತಿಗಳನ್ನು ಅಳವಡಿಸಿಕೊಂಡು 'ಹಿಂದೂಸ್ಥಾನಿ' ಮದುವೆಯೆ ಆಗಿದೆ. ಅಧ್ಯಯನದ ದೃಷ್ಟಿಯಿಂದ ಹೊರತಾಗಿ ಸಹಜವಾಗಿ ಗಮನಿಸುವುದಾದರೆ ಈ ರೀತಿಯ 'ಹಿಂದೂಸ್ಥಾನಿ', 'ಅರಬೀಸ್ಥಾನಿ' ಎಂಬ ವರ್ಗೀಕರಣವೆ ಕೃತಕವಾದುದಾಗಿದ್ದು ಅಭಾಸಕರವಾಗಿ ಕಾಣುತ್ತದೆ. ಏಕೆಂದರೆ ಇಂಡಿಯಾದ ಸಾಂಸ್ಕೃತಿಕ ಪರಿಸರದಲ್ಲಿ ಜನ್ಮ ಪಡೆದ ಮುಸ್ಲಿಂರ ಇಂತಹ ಬಹುತೇಕ ಆಚರಣೆಗಳು ಈ ಮಣ್ಣಿನ ವಿಶಿಷ್ಟತೆಯನ್ನೇ ಸಂತರಿಸಿಕೊಂಡವುಗಳಾಗಿವೆ. 'ಇಸ್ಲಾಂ' ಹುಟ್ಟಿದ 'ಅರಬ್' ಅಥವಾ ಆರಂಭದ ಇಸ್ಲಾಮಿಕ್ ರಾಷ್ಟ್ರಗಳ 'ಸಂಸ್ಕಾರ'ಗಳೊಂದಿಗೆ ಸುಧೀರ್ಘ ಕಾಲದ ಮುಸ್ಲಿಮೇತರರೊಂದಿಗಿನ ಸಹ ಬಾಳ್ವೆಯಿಂದಾಗಿ ಇಂತಹುದೊಂದು ಸಾಂಸ್ಕೃತಿಕ ಪ್ರಕ್ರಿಯೆಯು ಸಾಧ್ಯವಾಗಿದ್ದು ಇವನ್ನು ಕ್ರಮವಾಗಿ ಹುಟ್ಟು, ಮದುವೆ, ಸಾವು, ತಿಥಿ ಮತ್ತು ಕೆಲವು ವಿಶಿಷ್ಟ ಧಾರ್ಮಿಕ ಆಚರಣೆಗಳಿಂದ ಅಂತಹ ಪ್ರಭಾವವನ್ನು ಅರಿಯಬಹುದಾಗಿದೆ.

ಹೋಳಿ, ವಸಂತೋತ್ಸವದಂತಹ ಜನಪ್ರಿಯ ಆಚರಣೆಗಳು ಮುಸ್ಲಿಂ ಸುಲ್ತಾನರಿಂದ ವೈಭವಯುತವಾಗಿ ಆಚರಿಸಲ್ಪಡುತ್ತಿದ್ದವು. ಇಂತಲ್ಲಿ ಅವರು ಭಿನ್ನ ಧಾರ್ಮಿಕ ನಂಬಿಕೆಗಳನ್ನು ಗೌರವಿಸುವುದರೊಂದಿಗೆ ಶುದ್ಧ ಮನರಂಜನೆಯ ಕಡೆಗೆ ಆಸಕ್ತರಾಗಿದ್ದರು. ಹಾಗೆ ನೋಡಿದರೆ ಇಂಡಿಯಾದಲ್ಲಿನ 'ಇಸ್ಲಾಂ'ನ ರಾಜ್ಯಶಾಹಿಯೂ ಸಹ ಪೂರ್ತಿ ಇಸ್ಲಾಮೀ ತತ್ವಗಳ ಮೇಲೆ ನಿಂತಿದ್ದಾಗಿರದೆ ಅದು ಇಸ್ಲಾಮೇತರ ಆಡಳಿತಾತ್ಮಕ ಸೂತ್ರಗಳನ್ನೇ ಅನುಸರಿಸುತ್ತಿತ್ತು.[೧] ಯಾಕೆಂದರೆ ಮಹಮ್ಮದ್ ಪೈಗಂಬರರ ಕಾಲದಿಂದ ರಾಜಕೀಯ ಮತ್ತು ಧಾರ್ಮಿಕತೆಗಳೆರಡನ್ನೂ ಒಳಗೊಂಡಂತೆ ಸಾರ್ವಭೌಮ ಅಧಿಕಾರವನ್ನು 'ಖಲೀಫ್'ನು

[illegible]

[illegible]

ಹೊಂದಿರುತ್ತಿದ್ದ. ಆದರೆ ಇಂಡಿಯಾದಲ್ಲಿನ ಇಸ್ಲಾಂ ರಾಜ್ಯಶಾಹಿಯು ಭಾಗಶಃ ಧರ್ಮವನ್ನು ರಾಜಕೀಯದಿಂದ ಬೇರ್ಪಡಿಸಿತು. ಔರಂಗಜೇಬನಂತಹ ಕೆಲವು ಸುಲ್ತಾನರು ದೈನಂದಿನ ಜೀವನದ ಗತಿಯನ್ನು ಇಸ್ಲಾಮೀ ಪದ್ಧತಿಗಳಂತೆ ಅಳವಡಿಸಿಕೊಳ್ಳಲು ಪ್ರಯತ್ನಿಸಿದಾಗ್ಯು ಅದು ಸ್ವರೂಪದಲ್ಲಿ ಧಾರ್ಮಿಕ ಉತ್ತಾರಾಧಿಕಾರವೇ ಆಗಿರಲಿಲ್ಲ.

ಸೂಫಿಗಳ ಆಧ್ಯಾತ್ಮಿಕ ಸಂಗೀತವನ್ನಾಗಿ 'ಸಮಾ'ವನ್ನು ಜನಪ್ರಿಯಗೊಳಿಸಿ 'ಇಸ್ಲಾಂ' ಅನ್ನು ಆಕರ್ಷಕ ರೀತಿಯಲ್ಲಿ ಹರಡಿದರಲ್ಲದೆ ಸ್ವತಃ ಆ ಸಂಗೀತವು ಅವರ ಆತ್ಮಿಕ ಅಭಿವ್ಯಕ್ತಿಯ ಒಂದು ಪರಿಣಾಮಕಾರಿ ವಿಧಾನವಾಗಿತ್ತು. ಮೊಘಲರಲ್ಲಿ ವಿಶೇಷವಾಗಿ ಅಕ್ಬರ್ ಅದಿಲ್ ಶಾಹಿಗಳಲ್ಲಿ ಎರಡನೆಯ ಇಬ್ರಾಹಿಂ ಇವರೆಲ್ಲ ಅತ್ಯಂತ ಸಂಗೀತಸಕ್ತರಾಗಿದ್ದರಲ್ಲದೆ ಆಸ್ಥಾನದಲ್ಲಿ ದೇಶೀಯ ಸಂಗೀತಗಾರರಿಗೆ ಆಶ್ರಯವಿತ್ತಿದ್ದರು. ಇಂಡಿಯಾದ ಸಂಗೀತದ ಮೇಲಿನ 'ಇಸ್ಲಾಂ' ನ ಪ್ರಭಾವದಿಂದಾಗಿಯೇ 'ಹಿಂದುಸ್ಥಾನಿ' ಸಂಗೀತವು ರೂಪುಗೊಂಡಿತು. ಸ್ವತಃ ಎರಡನೆಯ ಇಬ್ರಾಹಿಮನು ಭಾರತೀಯ ಅಲಂಕಾರ ಶಾಸ್ತ್ರದ ಸಂಗೀತದ ಕುರಿತಾದ ಮುಖ್ಯ ಲಕ್ಷಣಗಳನ್ನೊಳಗೊಂಡಂತೆ 'ಕಿತಾಬ್ - ಇ - ನವರಸ್' ಎನ್ನುವ ಕೃತಿಯನ್ನು ರಚಿಸಿದನು. ಅಂದರೆ ಪ್ರಾತಿನಿಧಿಕವಾಗಿ 'ಇಸ್ಲಾಂ' ಸಂಸ್ಕೃತಿಯನ್ನು ಪ್ರತಿನಿಧಿಸುವ ಕುಲೀನ ವರ್ಗವ ನಿದರ್ಶನ ವಿದಾದರೆ ಉಳಿದಂತೆ 'ಮತಾಂತರ'ಗೊಂಡವರು ಮತ್ತು ಕುಲೀನ ವರ್ಗದಿಂದ ಭಿನ್ನವಾಗಿ ಸಾಮಾನ್ಯ ಮುಸ್ಲಿಮೇತರರೊಂದಿಗೆ ಗುರುತಿಸಿಕೊಂಡ ಮುಸ್ಲಿಮರ ಜೀವನ ವಿಧಾನವನ್ನು ನಾವು ಕಲ್ಪಿಸಿಕೊಳ್ಳಬಹುದಾಗಿದೆ. ಅರಬ್ಬಿ, ಪರ್ಶಿಯನ್, ಉರ್ದೂ ಸಹಗೊತ್ತಿರದ ಅನಕ್ಷರಸ್ಥ ಗ್ರಾಮೀಣ ಪರಿಸರದ ಮುಗ್ಧ ಮುಲ್ಲಾ ಅಥವಾ ಮುಜಾವರರು ಕುರಾನಿನ ಶ್ಲೋಕಗಳನ್ನು ಯಾರಿಂದಲಾದರು ಹೇಳಿಸಿಕೊಂಡೊ ಅಥವಾ ಕನ್ನಡ ಮತ್ತು ತೆಲುಗಗಳಲ್ಲಿ ಬರೆಯಿಸಿಕೊಂಡೊ ಉರು ಹೊಡೆದಿರುತ್ತಾರೆ. ಇವರೆಲ್ಲ 'ಇಸ್ಲಾಂ'ನ ತಾತ್ವಿಕತೆಯನ್ನು ಅರಿತಿರುತ್ತಾರೆಂದೂ ಅಲ್ಲ. ಅದೇನಿದ್ದರೂ ಮತ ಸಂಬಂಧಿ ಆಚರಣೆಗಳ ಸ್ವಲ್ಪವೇ ಭಾಗವಾಗಿ ಇವನ್ನು ಕುರುಡಾಗಿ ಅನುಕರಿಸುತ್ತಿದ್ದಾರೆ ಅಷ್ಟೆ. ನಗರಗಳಲ್ಲಿಯಂತೆ ಗ್ರಾಮೀಣ ಪರಿಸರಗಳಲ್ಲಿ ದೈನಂದಿನ ಪ್ರಾರ್ಥನೆಗಳಿಗಾಗಿ ಮಸೀದಿಗಳಿರುವುದು ತುಂಬಾ ವಿರಳವಾಗಿದೆ. ಆದರೆ ಇದಕ್ಕೆ ಬದಲಾಗಿ 'ಮೊಹರಂ'ನ ಮಸೀದಿಗಳು ಇವೆ.[2]

ಇವು ಹೆಚ್ಚಾಗಿ ಮುಸ್ಲಿಮೇತರರೊಂದಿಗಿನ ಆಚರಣಾತ್ಮಕ ಸಾದೃಶ್ಯಗಳೊಂದಿಗೆ ಕೂಡಿದವುಗಳಾಗಿವೆ. ಶರೀಫರು ಸಹ ತಮ್ಮ ತತ್ವಪದವೊಂದರಲ್ಲಿ 'ಅಲ್ಲಮ ಪ್ರಭುವಿನ ಅರಿಯದ ತುರಕರು ಪಂಜಾಪೂಜಮಾಡುವುದು ವ್ಯರ್ಥ' ಎಂದು ಮೊಹರಂನ ಸಂಧರ್ಭದ ಆಚರಣೆಗಳನ್ನು ಒಪ್ಪುವುದಿಲ್ಲ. ನಿರ್ಗುಣ, ನಿರಾಕಾರ ಉಪಾಸಕನನ್ನಾಗಿ, ಇಸ್ಲಾಂನ ತಾತ್ವಿಕ ದರ್ಶನದ ಪ್ರತೀಕವನ್ನಾಗಿ ಶರೀಫರು ಅಲ್ಲಮನನ್ನು ಕಂಡಿರುವುದು ಅರ್ಥಪೂರ್ಣವಾಗಿದೆ.

ಕೇವಲ ಮತಸಂಬಂಧಿ ಆಚರಣೆಗಳ ಅಲ್ಪ ಭಾಗವನ್ನೊರೆತು ಪಡಿಸಿದಂತೆ ಉಳಿದೆಲ್ಲ ಆಹಾರ, ಉಡುಗೆ, ತೊಡುಗೆ, ಜೀವನ ಸಂಸ್ಕಾರಗಳ ಮೇಲೆ ಸ್ಥಳೀಯ ಸಂಸ್ಕೃತಿಯ ಪ್ರಭಾವ ಗಾಢವಾಗಿದೆ ಹಾಗು ಇಸ್ಲಾಂನ ಮತ್ತು ಇಂಡಿಯಾದ ಸಂಸ್ಕೃತಿಗಳೆರಡನ್ನೂ ಬೆರೆಸಿಕೊಂಡ ಆಚರಣೆಗಳನ್ನು ಕಾಣಬಹುದಾಗಿದೆ. ಇಂತಹ ಸಾಂಸ್ಕೃತಿಕ ಪ್ರಕ್ರಿಯೆಯನ್ನು ಕ್ರಮವಾಗಿ ಬದುಕಿನ ಬಹು ಮುಖ್ಯ ಘಟನೆಗಳಾದ ಹುಟ್ಟು, ಮದುವೆ, ಸಾವು, ತಿಥಿಗಳ ಆಚರಣೆಯೊಂದಿಗೆ ಕೆಲವು ವಿಶಿಷ್ಟ ಧಾರ್ಮಿಕ ಆಚರಣೆಗಳನ್ನು ಪರಿಶೀಲಿಸವುದರ ಮುಖಾಂತರ ಅರಿಯಬಹುದಾಗಿದೆ.

೬.೧ ಜನನ ಮತ್ತು ಅದರ ಸಂಸ್ಕಾರಗಳು

ಮೊದಲಿಗೆ ಜನನ ಮತ್ತದರ ಸಂಸ್ಕಾರಗಳನ್ನು ಕುರಿತು ನೋಡಬಹುದು. ಸಾಮಾನ್ಯವಾಗಿ ಮಗು ಹುಟ್ಟಿದ ಕೂಡಲೆ ಅದರ ಹೊಕ್ಕಳು ಬಳ್ಳಿ ಕತ್ತರಿಸಿ, ಮಗುವನ್ನು ಚೆನ್ನಾಗಿ ತೊಳೆದು ಒಂದು ಬಟ್ಟೆಯಲ್ಲಿ ಸುತ್ತಿ ಹೊರಗೆ ಕುಳಿತಿರುವ ಗಂಡಸರ ಮಧ್ಯೆ ಅದನ್ನು ತಂದಿಡುವರು.

ಮೌಲ್ವೀ ಅಥವಾ ಬೇರೆ ಯಾರಾದರೊಬ್ಬರು ಮಗುವಿನ ಬಲ ಕಿವಿಯಲ್ಲಿ 'ಹಜಾ' ಮತ್ತು ಎಡಕಿವಿಯಲ್ಲಿ 'ಇರಾಮತ್ 'ನ ಮಂತ್ರವನ್ನು ಉಚ್ಚರಿಸುತ್ತಾರೆ.

ಅಲ್ಲಾಹು ಅಕಬರ್

ಅಲ್ಲಾಹು ಅಕಬರ್

ಅಲ್ಲಾಹು ಅಕ್ಬರ್

ಅಲ್ಲಾಹು ಅಕಬರ್

ಅಹ್ ಹದು ಅನ್ ಲಾ ಇಲಾಹ್ ಇಲ್ಲಿಲ್ಲಾಹ್

ಅಶ್ ಹದು ಅಲ್ ಲಾ ಇಲಾಹ್ ಇಲ್ಲಿಲ್ಲಾಹ್

ಅಶ್ ಹದು ಅನ್ ಮುಹಮ್ಮದನ್ ರಸೂಲಲ್ಲಾಹ್

ಅಶ್ ಹದು ಅನ್ ಮುಹಮ್ಮದನ್ ರಸೂಲಲ್ಲಾಹ್

ಹಯ್ಯಾ ಅಲಾ ಅಸ್ಸಲಾತೀ

ಹಯ್ಯಾ ಅಲಾ ಅಸ್ಸಲಾತೀ

ಹಯ್ಯಾ ಅಲಾ ಅಲ್ ಫಲಾಹ್

ಹಯ್ಯ ಅಲಾ ಅಲ್ ಫಲಾಹ್

ಅಲ್ಲಾಹು ಅಕಬರ್

ಅಲ್ಲಾಹು ಅಕಬರ್

ಲಾ ಇಲಾಹ ಇಲ್ಲಿಲ್ಲಾಹ್

ಅಂದರೆ ಅಲ್ಲಾಹ್ ಸರ್ವಶ್ರೇಷ್ಠನಾಗಿದ್ದಾನೆ. ಅಲ್ಲಾಹ್ ಸರ್ವಶ್ರೇಷ್ಠನಾಗಿದ್ದಾನೆ. ಅಲ್ಲಾಹ್ ನ ಹೊರೆತು ಪೂಜೆಗೆ ಯೋಗ್ಯರಾದವರು ಮತ್ಯಾರೂ ಇಲ್ಲ. ಇದಕ್ಕೆನಾನೇ ಸಾಕ್ಷಿ. ಮಹಮ್ಮದ ಪೈಗಂಬರರು ಅಲ್ಲಾಹ್ ನಿಂದ ಕಳುಹಿಸಲ್ಪಟ್ಟು ಪ್ರವಾದಿಗಳಾಗಿದ್ದಾರೆಂದು ನಾನು ಸಾಕ್ಷಿಯಾ ನಿಸಾರುತ್ತೇನೆ. ಪ್ರಾರ್ಥನೆಗೆ ಬನ್ನಿ, ಪ್ರಾರ್ಥನೆಗೆ ಬನ್ನಿ, ಪಾಪದಿಂದ ಮುಕ್ತರಾಗುವುದಕ್ಕೆಬನ್ನಿ, ಪಾತದಿಂದ ಮುಕ್ತರಾಗುವುದಕ್ಕೆ ಬನ್ನಿ. ಅಲ್ಲಾಹ್ ಎಲ್ಲರಿಗಿಂತಲೂ ದೊಡ್ಡವನು, ಎಲ್ಲರಿಗಿಂತ ದೊಡ್ಡವನು ಅಲ್ಲಾಹ್ ನ ಹೊರೆತು ಬೇರೆಯಾರೂ

ಪ್ರಾರ್ಥನೆಗೆ ಯೋಗ್ಯರಲ್ಲ.ಎಂಬುದು ಮೇಲಿನ ಮಂತ್ರದ ಅರ್ಥವಾಗಿದೆ.[5]

ಇದಾದ ನಂತರ ಬಲಗಿವಿಯಲ್ಲಿ 'ಇಕಾಮತ್ ' ಹೇಳಲಾಗುತ್ತದೆ. ಮೇಲಿನ 'ಹಜಾ' ಮಂತ್ರದ 'ಹಯ್ಯಾ ಅಲ್ ಫಲಾಹ್ ದ ನಂತರ 'ಕದ್ ಕಾಮತಿಸ್ಸಲಾತು' (ಪ್ರಾರ್ಥನೆ ಈಗ ಖಂಡಿತವಾಗಿಯೂ ಆರಂಭಗೊಳ್ಳುತ್ತದೆ) ಎಂದು ಸೇರಿಸಿಕೊಂಡರೆ 'ಇಕಾಮತ್ 'ನ ಮಂತ್ರ ಪೂರ್ಣಗೊಂಡಂತೆ ಈರೀತಿ 'ಹಬಾ' ಮತ್ತು 'ಇಕಾಮತ್ ' ಹೇಳುವುದರ ಉದ್ದೇಶವು 'ಫರಿಶ್ತಾ' (ದೇವದೂತರು) ಅವರು 'ತಕ್ ದೀರ್' (ಪಾಪ, ಪುಣ್ಯಗಳ ಪಟ್ಟಿ)ನಲ್ಲಿ ಮಗುವಿನ ಹೆಸರನ್ನು ದಾಖಲಿಸಿಕೊಂಡು ಅದಕ್ಕೆ ಒಳ್ಳೆಯ ನಡೆತೆ ಮತ್ತು ಆರ್ಶೀವಾದವನ್ನು ದಯಪಾಲಿಸುತ್ತಾರೆಂಬ ನಂಬಿಕೆಯಿದೆ. ವಾಸ್ತವವಾಗಿ ಈ ಪದ್ಧತಿಯನ್ನು ಹಜರತ್ ಮುಹಮ್ಮದ್ ಪೈಗಂಬರರೇ ಪ್ರಾರಂಭಿಸಿದುದಾಗಿ ತಿಳಿದು ಬರುತ್ತದೆ. ತಮ್ಮ ಮೊಮ್ಮಗ ಇಮಾಮ್ ಹಸನ್ನನ ಕಿವಿಗಳಲ್ಲಿ ಈ ಮಂತ್ರೋಚ್ಚಾರಣೆ ಮಾಡಿದ್ದರೆಂಬುದಾಗಿ ವಿವರಿಸಲಾಗುತ್ತದೆ. ಇದಾದನಂತರ ಮೂರು ದಿನಗಳೊಳಗಾಗಿ ಮಗುವಿನ ಕಿವಿಯಲ್ಲಿ ಮೂರು ಸಲ ಜನ್ಮ ನಾಮಗಳನ್ನು ಉಚ್ಚರಿಸಲಾಗುತ್ತದೆ. ನಂತರ ಬಂಧು ಬಳಗದವರನ್ನು ಊಟಕ್ಕೆ ಆಹ್ವಾನಿಸಲಾಗುತ್ತದೆ. ಸಾಮಾನ್ಯವಾಗಿ ಅಂದು ಸಿಹಿ ಊಟ ಹಾಕಿಸಲಾಗುತ್ತದೆ. ನಂತರ 'ನಲವತ್ತನೆ'ಯದಿನ 'ಮಗುವನ್ನು' ತೊಟ್ಟಿಲಿಗೆ ಹಾಕುವ ಕಾರ್ಯಕ್ರಮವಿರುತ್ತದೆ ಇದು ಬಹುತೇಕ ಸ್ಥಳೀಯ ಸಂಪ್ರದಾಯವಾಗಿದ್ದು ಪೂರ್ತಿಯಾಗಿ ಇಲ್ಲವೆ ಕೆಲವೊಂದು ಮಾರ್ಪಾಡುಗಳೊಂದಿಗೆ ಅದನ್ನೆ ಅನುಸರಿಸಲಾಗುತ್ತದೆ.

ಇಲ್ಲೂ ಸಹ ರಾಹುಕಾಲಗಳಿಗೆ ಕಾಲಗಳನ್ನು ಗಮನಿಸಲಾಗುವುದು. ಮಗುವಿಗೆ ಮೂರು ದಿನಗಳೊಳಗೆ ಜನ್ಮನಾಮ ಕೂಗುವಾಗಲೂ ಸಹ ಒಳ್ಳೆಯ ದಿನ, ಕಾಲವನ್ನು ಲಕ್ಷಿಸಲಾಗುತ್ತದೆ. ಸೋಮವಾರ, ಗುರುವಾರ, ಶುಕ್ರವಾರಗಳನ್ನು ಒಳ್ಳೆಯ ದಿನಗಳೆಂದು ಪರಿಗಣಿಸಲಾಗುವುದು.

ಹೆಣ್ಣಾಗಲಿ, ಗಂಡಾಗಲಿ, ಮಗು ಹುಟ್ಟಿದ ಕೂಡಲೆ ಸಕ್ಕರೆ ಹಂಚಲಾಗುತ್ತದೆ. ನಲವತ್ತನೆಯ ದಿನದಲ್ಲಿ ತೊಟ್ಟಿಲು ಇಡುವ ಕಾರ್ಯಕ್ರಮವನ್ನು ಇಟ್ಟು ಕೊಳ್ಳಲಾಗುತ್ತದೆ. ಬೆಳಿಗ್ಗೆ ಬಾಣಂತಿಗೆ ಐದು ಮಂದಿ ಸಣ್ಣ

ಮಕ್ಕಳಿಂದ 'ಸಿಹಿ' ಅಥವಾ ಯಾವುದಾದರೂ ಆಹಾರದ ಪದಾರ್ಥವನ್ನು ತಿನ್ನಿಸಲಾಗುವುದು. ಈ ಕಾರ್ಯಕ್ರಮ ರಾತ್ರಿಯ ಸಮಯದಲ್ಲಿ ನಡೆಯುವುದಾಗಿದ್ದು ತೊಟ್ಟಿಲನ್ನು ಹೂಗಳಿಂದ ಅಲಂಕರಿಸಲಾಗಿರುತ್ತದೆ. ಮಂಡಕ್ಕಿ (ಹರಳು) ಬೆಲ್ಲ, ಉತ್ತುತ್ತಿ ಮೊದಲಾದವುಗಳನ್ನು ಬಟ್ಟೆಯೊಂದರಲ್ಲಿ ಕಟ್ಟಿ ತೊಟ್ಟಿಲೊಳಗೆ ಇಡಲಾಗುತ್ತದೆ. ಗಂಧದ ತುಂಡೊಂದನ್ನು ಸಹ ಪಕ್ಕದಲ್ಲಿರಿಸಲಾಗುವುದು. ತೊಟ್ಟಿಲ ಕೆಳಗಡೆ ಅಕ್ಕಿಯನ್ನು ಹರಡಿ ಅದರ ಮೇಲೆ ಚರಿಗೆಯಲ್ಲಿ 'ತುಂಬಿದ ನೀರ' (ಪವಿತ್ರನೀರು)ನ್ನು ಇಡಲಾಗುತ್ತದೆ. ಹೆಂಗೆಳೆಯರು ಸುತ್ತ ನೆರೆದು ಜೋಗುಳ ಹಾಡುಗಳನ್ನು ಹಾಡುತ್ತಿರುತ್ತಾರೆ. ಮಗುವಿನ ಸಹೋದರ ಮಾವ ಮೂರು ಸಲ ಹೆಸರಿಡಿದು ಕೂಗುತ್ತಾನೆ. ಪ್ರತಿಸಲ ಕೂಗಿದಾಗಲೆಲ್ಲ ಆತನ ಬೆನ್ನ ಮೇಲೆ ಅಲ್ಲಿ ನೆರೆದಿರುವ (ಹೆಣ್ಣಾಗಲಿ, ಗಂಡಾಗಲಿ)ವವರು ಮುಷ್ಟಿಯಿಂದ ಬೆನ್ನಿಗೆ ಹೊಡೆಯುತ್ತಾರೆ. ಇದು ತಮಾಷೆಯ ಸಂಗತಿಯಾಗಿದ್ದು ತುಂಬಾ ರಂಜನೆಯನ್ನೊದಗಿಸುತ್ತದೆ. ಇಷ್ಟೆಲ್ಲ ನಡೆಯುವಾಗ ಕೆಲವು ಹೆಂಗಳೆಯರು ತೊಟ್ಟಿಲು ಹಾಡುಗಳನ್ನು ಹಾಡುತ್ತಿರುತ್ತಾರೆ. ಅಂತಹ ತೊಟ್ಟಿಲು ಹಾಡೊಂದನ್ನು ಈ ಕೆಳಗೆ ನೋಡಬಹುದು.

ಏಕ್ ಮೈನೆ ಲಗೇಜಿ ಬೀಬಿ
ಬೀಬಿ ಫಾತಿಮಾ ಘುರ್ ಆಯೆ
ಲಾಕೋಂಕೆ ಮಂಡೇ ಮೆಮೆ ಸರೋಮ್ ಖಿಲಾಹೇ
ಲಾ ಇಲಾಹಾ ಇಲ್ಲಲ್ಲಾಹೋ ಇಲ್ಲಲ್ಲಾಹೋ ಸುಬಾನ್
ಐಸೇ ಬಚ್ಚೇ ಹೋಂಕೋ ಅಲ್ಲಾ ನಿಗವಾನ್
ಲಾ ಇಲಾಹಾ ಇಲ್ಲಲ್ಲಾಹೋ ಇಲ್ಲಲ್ಲಾಹೋ ಸುಬಾನ್
ದೋನೆ ಮೈನೆ ಲಗೇಜಿ ಬೀಬಿ
ಬೀಬಿ ಫಾತಿಮಾ ಘುರ್ ಆಯೆ'

'ನಮ್ಮ ಮನೆಯಲ್ಲಿ ಬೀಬಿ ಪಾತಿಮಾಳಂತಹ ಮಗು ಹುಟ್ಟಿ ಒಂದು ತಿಂಗಳಾಯಿತು. ಲಕ್ಷ, ಲಕ್ಷ

ಮಂಟಪಗಳಲ್ಲಿ, ಸರೋವರಗಳಲ್ಲಿ ನಿನ್ನನ್ನು ಆಡಿಸುವೆ. ಅಲ್ಲಾಹ್ ಹೊರೆತು ಬೇರೆ ದೇವರಿಲ್ಲ. ಇಂತಹ ಮಗುವನ್ನು ದೇವರು ಕಾಪಾಡಲಿ' ಎಂದು ಮುಂದುವರೆಯುವ ಹಾಡು ಒಂದನೇ ತಿಂಗಳಿನಿಂದ ೯ ತಿಂಗಳವರೆಗಿನ ಮಗುವಿನ ಬೆಳವಣಿಗೆಯನ್ನು ವರ್ಣಿಸುತ್ತದೆ. ಮೇಲೆ ಕೊಡಲಾದ ಹಾಡಿನ ಕಡೆಯಲ್ಲಿ ದೋನೆ ಮೈನೆ ಲಗೇಜಿ ಬೀಬಿ, ಬೀಬಿ ಫಾತಿಮಾ ಘುರ್ ಆಯೆ ಎಂದು ಮುಂದುವರೆದದ್ದು ಒಂಬತ್ತು ತಿಂಗಳವರೆಗಿನ ಮಗುವಿನ ಬೆಳವಣಿಗೆಯನ್ನು ಕುರಿತು ವಿವರಿಸುತ್ತದೆ.

ಮಗು ಹುಟ್ಟಿದ ತಕ್ಷಣ ಕಿವಿಯಲ್ಲಿ 'ಹಜಾ' ಮತ್ತು 'ಹಕಾಮತ್ ' ಕೂಗುವುದನ್ನೊರೆತು ಪಡಿಸಿ ಉಳಿದ ಆಚರಣೆಗಳಲ್ಲ ಸ್ಥಳೀಯ ಸಂಪ್ರದಾಯದ ಆಚರಣೆಗಳಿಂದ ರೂಪುಗೊಂಡವುಗಳಾಗಿವೆ.

ಸಾವಿಗೆ ಸಂಬಂಧ ಪಟ್ಟ ಆಚರಣೆಗಳಲ್ಲೂ ಸಹ ಭಾರತೀಯ ಪ್ರಭಾವವೂ ದಟ್ಟವಾಗಿದೆ. ಇನ್ನು ಮುಂದೆ ಆ ವಿವರಗಳನ್ನು ಪರಿಶೀಲಿಸಬಹುದು.

೬.೧೨ ಸಾವಿಗೆ ಸಂಬಂಧಿಸಿದ ಆಚರಣೆಗಳು:

ಸಾಮಾನ್ಯವಾಗಿ ಮುಸ್ಲಿಮರಲ್ಲಿ ಯಾರಾದರೂ ಸತ್ತಾಗ ಅಳುವುದಿಲ್ಲ. ಹಾಗೆ ಅತ್ತರೆ ಅದು ಅಳುವವರ ಅಜ್ಞಾನದ ಕುರುಹು ಎಂದು ಪರಿಗಣಿಸಲಾಗುತ್ತದೆ. ಹೀಗೆ ಅಳುವುದರಿಂದಾಗಿ ಮೃತನ ಆತ್ಮ ಸ್ವರ್ಗವನ್ನು ಪ್ರವೇಶಿಸಲಾರೆದೆಂಬ ನಂಬಿಕೆಯಿದೆ. ಯಾರಾದರೂ ಸತ್ತಾಗ ಮೂರು ತಾಸಿನೊಳಗಾಗಿ 'ಧಪನ್' ಮಾಡಬೇಕೆಂದು ಹೇಳಲಾಗುತ್ತದೆ. ಆದರೆ ಈ ನಿಯಮವನ್ನು ಎಲ್ಲ ಕಾಲಕ್ಕೂ ಪಾಲಿಸಲಾಗುವುದಿಲ್ಲ. ದೂರದ ಬಂಧುಗಳು, ರಕ್ತ ಸಂಬಂಧಿಗಳು ಬರುವವರೆಗೆ 'ಸಂಸ್ಕಾರ'ದ ಕ್ರಿಯೆ ನಡೆಯುವುದಿಲ್ಲ ಅಥವಾ ತಡೆಹಿಡಿಯಬಹುದು.

ಪಾರ್ಥಿವ ಶರೀರವನ್ನು ಪೂರ್ತಿ ಸ್ವಚ್ಛಗೊಳಿಸಿದ ಮೇಲೆ 'ಹುಜು' ಮಾಡಿಸಿ (ನಮಾಜ್ ಗೆ ಮುಂಚೆ ಮುಖ, ಕೈಕಾಲು ತೊಳೆಯುವ ಪದ್ಧತಿ) ವಸ್ತ್ರವೊಂದರಲ್ಲಿ ಸುತ್ತಿದ ಮೇಲೆ ಸುಗಂದ ದ್ರವ್ಯಗಳನ್ನು

ಸಿಂಪಡಿಸಲಾಗುತ್ತದೆ. ಪಾರ್ಥಿವ ಶರೀರವನ್ನು ಸ್ವಚ್ಛಗೊಳಿಸುವಾಗ ಯಾರೂ ನೋಡುವಂತಿಲ್ಲ.ಶಿಯಾ ಮುಸ್ಲಿಮರಲ್ಲಿ ಸ್ನಾನ ಮಾಡಿಸಲು 'ಹೆಣ'ವನ್ನು ಬಚ್ಚಲು ಮನೆಗೆ ತೆಗೆದುಕೊಂಡು ಹೋಗುವುದು ರೂಢಿ. 'ಸುನ್ನಿ' ಮುಸಲ್ಮಾನದಲ್ಲಿ ಮನೆಯಲ್ಲಿ ತೀರಿಕೊಂಡವರಿಗೆ ಅಪ್ತರಾದವರು ಸ್ನಾನ ಮಾಡಿಸುತ್ತಾರೆ. ಸ್ನಾನ ಮಾಡಿಸುವಾಗ ಹರಿದುಬರುವ ನೀರು ಅಪವಿತ್ರವೆಂದು ತಿಳಿಯಲಾಗುತ್ತಿದ್ದು ಮನೆಯ ಹೊರಗೆ ಅಂಗಳದಲ್ಲಿ ಗುಂಡಿತೋಡಿ ಅದರಲ್ಲಿನೀರು ನಿಲ್ಲಿಸಲಾಗುತ್ತದೆ.

ಸ್ನಾನ ಮಾಡಿಸಿದ ಮೇಲೆ ಪಾರ್ಥಿವ ಶರೀರಕ್ಕೆ ಸುಗಂಧ ದ್ರವ್ಯಗಳನ್ನು ಲೇಪಿಸಿಲಾಗುತ್ತದೆ. ಕಣ್ಣಿಗೆ ಕಾಡಿಗೆ ಹಚ್ಚಿ (ಸುರ್ಮಾ) ಹಣೆಯ ಮೇಲೆ ಸೋಪಿಟ್ಟು ಅದರ ಮೇಲೆ ಪಹಲೇ ಕಲ್ಮಾ ಬರೆಯಲಾಗುತ್ತದೆ. 'ಲಾ ಇಲಾಹ ಇಲ್ಲಲ್ಲಾಹು ' ಮೊಹಮ್ಮದ ರುಸೂಲುಲ್ಲಾಹ (ಸೊಲ್ಲಲ್ಲಾಹ ಅಲೈಹಿ ವಸಲ್ ಮ್) ಎಂದು. ನಂತರ ವಸ್ತ್ರವೊಂದರಲ್ಲಿ ಸುತ್ತಲಾಗುತ್ತದೆ. ಶಿಯಾಗಳಾದರೆ ಹೆಣವನ್ನು ಪೆಟ್ಟಿಗೆಯಲ್ಲಿಟ್ಟು ಅದರ ಮೇಲೆ ಶಾಲು ಹೊದಿಸಲಾಗುತ್ತಾದೆ. ಶವ ಯಾತ್ರೆಯಲ್ಲಿ ಕುರಾನ್ ನ ಪಠಣವಿರುತ್ತದೆ. ಸುನ್ನಿಗಳಲ್ಲಿ ಹೆಣವನ್ನು ಪಲ್ಲಂಗದ ಮೇಲಿಟ್ಟು, ಶಾಲು ಹೊದೆಸಿ ತೆಗೆದುಕೊಂಡು ಹೋಗುತ್ತಾರೆ. ಸುನ್ನಿಗಳಲ್ಲಿ ತೀರಿಕೊಂಡ ವ್ಯಕ್ತಿಯ ಸನ್ನಿಹಿತ ವ್ಯಕ್ತಿಗಳು, ಗೆಳೆಯರು ಹೆಗಲು ಕೊಟ್ಟು ಕುರಾನಿನ ಶ್ಲೋಕಗಳನ್ನು ಪಠಿಸುತ್ತ ಶವ ಯಾತ್ರೆಯಲ್ಲಿ ಸಾಗುತ್ತಾರೆ. ಹೆಣ್ಣು ಮಕ್ಕಳು ಶವ ಯಾತ್ರೆಯಲ್ಲಿ ಪಾಲ್ಗೊಳ್ಳಬಾರದಲ್ಲಿದೆ ಕಬರಸ್ಥಾನ (ಶ್ಮಶಾನ)ದ ಕಡೆಗೆ ಮುಖ ಮಾಡಿಯೂ ಸಹ ಇರಬಾರದು. ಸಾಮಾನ್ಯವಾಗಿ ಶವಯಾತ್ರೆಗೆ ಹೊರಡುವ ಹಾದಿಯಲ್ಲಿ ಮಸೀದಿಯಿದ್ದರೆ ಅಲ್ಲಿಗೆ ಹೋಗಿಯೇ ನಂತರ ಶ್ಮಶಾನಕ್ಕೆ ಹೋಗುವುದು ರೂಢಿ.

ಶವವನ್ನು ಹೂಳುವ ಗೋರಿಗಳು ಎರಡು ವಿಧ. ದಕ್ಷಿಣದಿಂದ ಉತ್ತರಕ್ಕೆ ಮೃತವ್ಯಕ್ತಿಯ ಆಕಾರದ ನಾಲ್ಕು ಅಡಿ ಆಳವಿರುವ ಒಂದು ಗುಂಡಿ ತೋಡಿ, ಶವದ ಮುಖವನ್ನು ಮಕ್ಕಾ ದಿಕ್ಕಿಗೆ ಅಭಿಮುಖವಾಗಿಟ್ಟು, ಹೊಂದಿಸಿರುವ ಕಫನಿನೊಂದಿಗೆ ಶವವನ್ನು ಆ ಗುಂಡಿಯಲ್ಲಿ ಇಡುತ್ತಾರೆ. ಅದರ ಮೇಲೆ ಮರದ ಒಂದು ಹಲಗೆ ಅಥವಾ ಕಲ್ಲಿನ ನೆಲಗಟ್ಟನ್ನಿಟ್ಟು, ಮಣ್ಣಿನಿಂದ ಮುಚ್ಚಿ ಅದಕ್ಕೆ ಗೋರಿಯ ಆಕಾರ ಕೊಡುತ್ತಾರೆ. ಎರಡನೆಯ ವಿಧಾನ ಹೀಗಿದೆ. ಪುರುಷರ ಎದೆಯಷ್ಟು ಆಳ ಗುಂಡಿಯನ್ನು ಅಗೆದು ಅದರ ಬುಡದಲ್ಲಿ,

ಒಂದು ಪಕ್ಕಕ್ಕೆ ಶವದ ಆಕಾರದ ಇನ್ನೊಂದು ಹೊಂಡ ತೋಡುತ್ತಾರೆ. ಅದನ್ನು 'ಲಹ್ದ' ಅಥವಾ 'ಬಗಲೀ' ಎನ್ನುತ್ತಾರೆ. ಅಲ್ಲಿಯ ನೆಲವನ್ನು ಶುದ್ಧಗೊಳಿಸಿ, ಕೆಲವರು ಕುರಾನಿನ 'ಸೂರಾವ್ ಯಾಷಿನ್ ' ಎಂಬ ಹೆಸರಿನ ಭಾಗವನ್ನು ಓದುತ್ತಾರೆ. ಅನಂತರ ಹೆಣವನ್ನು 'ಲಹ್ದ್ 'ನಲ್ಲಿಟ್ಟು ಅದರ ಮೇಲಿನ ಭಾಗವನ್ನು ಹಸಿ ಇಟ್ಟಿಗೆಯಿಂದ ಮುಚ್ಚುತ್ತಾರೆ. ಅದರ ಮೇಲೆ ಮಣ್ಣು ತುಂಬಿ ಗೋರಿಯನ್ನು ಸಿದ್ಧಗೊಳಿಸುತ್ತಾರೆ. ಕೆಲವರು ಇನ್ನೊಮ್ಮೆ ಗೋರಿಯ ತಲೆಯ ಭಾಗದಲ್ಲಿ ಕುಳಿತು 'ಸೂರವ ಯಾಸೀನ್' ಅಥವಾ 'ಸೂರ ವತಬಾರಕ್ ' ಇತ್ಯಾದಿ ಮಂತ್ರಗಳನ್ನು ಪಠಿಸುತ್ತಾರೆ. ಶವ ಹೂಳುವ ವೇಳೆಯಲ್ಲಿ ಎಲ್ಲ ಬಂಧುಗಳೂ, ಮಿತ್ರವರ್ಗದವರೂ ಒಂದೊಂದು ಹಿಡಿ ಮಣ್ಣು ಹಾಕುತ್ತಾ ಈ ಕೆಳಗಿನ ಮಂತ್ರಗಳನ್ನು ಉಚ್ಚರಿಸುತ್ತಾರೆ. 'ಮಿನಹಾ ಖಲಕನಾಕುಮ್ ವಫೀಹಾ ನಯೀದುಕುಮ್ ವ ಮೀನಹಾ ನುಖರಿಜುಕುಮ್ ತಾರತನ್ ಉಖರಾ (ನೀನು ಮಣ್ಣಿನಿಂದ ಹುಟ್ಟಿದ್ದೀಯೆ, ನಿನ್ನನ್ನು ಮಣ್ಣಿನಲ್ಲಿ ಸೇರಿಸಲಾಗುತ್ತದೆ. ಕಯಾಮತ್ತಿನ ದಿವಸ ಮಣ್ಣಿನಿಂದಲೇ ನಿನ್ನನ್ನು ಮೇಲಕ್ಕೆ ಎತ್ತಲಾಗುವುದು).[೫]

ಬೇರೆಡೆಯಿಂದ ಶವ ಸಂಸ್ಕಾರಕ್ಕೆ ಬಂದವರು ಇರುವುದಾದರೆ ಮೂರುದಿವಸದವರೆಗೆ ಇರಬೇಕು. ಇಲ್ಲದಿದ್ದರೆ ಕತ್ತಲಾಗುವುದಕ್ಕೆ ಮುಂಚೆ (ದೀಪ ಹಚ್ಚುವುದರೊಳಗೆ) ಹೊರಟು ಹೋಗಬೇಕು. ಹೋಗುವಾಗ ಯಾರಿಗೂ ಹೇಳಬಾರದು. ಇದು ಬಹುತೇಕ ಸ್ಥಳೀಯ ಪ್ರಭಾವದಿಂದ ರೂಢಿಗೆ ಬಂದುದಾಗಿದೆ.

ಮೂರನೆಯ ದಿನ (ಕಾರ್ಯ, ಅಥವಾ ಕಾರ್ಯೇವು) ಹೂವು, ಗಂಧ, ಎರಡನ್ನೂ ಬೆರೆಸಿ ಗೋರಿಯ ಮೇಲಿಟ್ಟು ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಇದನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡುವುದಾದರೆ ಶವ ಸಂಸ್ಕಾರದ ಮೂರನೆಯ ದಿನ ಕುರಾನಿನ ಪಠಣದ ನಂತರ ಒಂದು ಪಾತ್ರೆಯಲ್ಲಿ ಗಂಧ ಮತ್ತು ಎಣ್ಣೆಯನ್ನು ತಂದು ಹಿಡಿಯುತ್ತಾರೆ. ಅಲ್ಲಿ ನೆರೆದಿರುವವರು ಹೂಗಳನ್ನು ಎಣ್ಣೆಯಲ್ಲಿ ಮಿಶ್ರಮಾಡುತ್ತಾರೆ. ನಂತರ ಅದನ್ನು ತೆಗೆದು ಕೊಂಡು ಹೋಗಿ ಗೋರಿಯ ಮೇಲೆ ಹಾಕಲಾಗುತ್ತದೆ. ಇದಾದ ನಂತರ ಕ್ರಮವಾಗಿ ೧೦, ೨೦, ೩೦, ಮತ್ತು ೪೦ದಿನಗಳ ತಿಥಿ ಆಚರಿಸಲಾಗುತ್ತದೆ.

ಸಾಮಾನ್ಯವಾಗಿ ಸತ್ತ ೪೦ ದಿನಗಳಲ್ಲಿ ಮಾಡುವ ತಿಥಿಯೇ ದೊಡ್ಡ ತಿಥಿಯಾಗಿದ್ದು ಉಳಿದವುಗಳಿಗೆ ಅಂತಹ ಪ್ರಾಮುಖ್ಯತೆಯೇನೂ ಇಲ್ಲ. ಇಂಡಿಯಾದಲ್ಲಿ ಮುಸ್ಲಿಂರು ಸಾವಿಗೆ ಸಂಬಂಧಿಸಿದ 'ತಿಥಿ'ಯ ಆಚರಣೆಯನ್ನು ನಿಸ್ಸಂದೇಹವಾಗಿ ಮುಸ್ಲಿಮೇತರ ಪ್ರಭಾವದಿಂದ ರೂಢಿಸಿಕೊಂಡದ್ದಾಗಿದೆ. ಅಬ್ದುಲ್ ಹಲೀಮ್ 'ಶರತ್' ಎನ್ನುವ ಉರ್ದು ವಿದ್ವಾಂಸರೊಬ್ಬರು ವಿವರಿಸುವಂತೆ 'ಮುಸ್ಲಿಮರು' ಇಂಡಿಯಾದಲ್ಲಿ ಸಾವಿಗೆ ಸಂಬಂಧಿಸಿದ ತಿಥಿಗಳ ಆಚರಣೆಯನ್ನು ಮುಸ್ಲಿಮೇತರರನ್ನು ಅನುಕರಿಸಿಯೇ ಕಲಿತದ್ದಾಗಿದ್ದು ಸತ್ತವರು ತಿಥಿ ಊಟದಲ್ಲಿ ಭಾಗವಹಿಸುತ್ತಾರೆಂಬ ನಂಬಿಕೆಯನ್ನು ಇಂತ ಅನುಕರಣೆಯಿಂದ ರೂಢಿಸಿ ಕೊಂಡವರಾಗಿದ್ದು ಮೃತನಿಗೆ ಪ್ರಿಯವಾದ ಭಕ್ಷ್ಯ ಭೋಜ್ಯಗಳನ್ನು ಮಾಡಿಸಿ ಊಟಕ್ಕೆಹಾಕುತ್ತಾರೆಂಬುದಾಗಿ ವಿವರಿಸುತ್ತಾರೆ.[೬]

ನಲವತ್ತನೆಯ ದಿನದ ತಿಥಿಯಂದು ರಾತ್ರಿ ಪೂರ್ತಿ ಜಾಗರಣೆ ಮಾಡಲಾಗುತ್ತದೆ. ಮನೆಯಲ್ಲಿ ಯಾವ ಭಾಗದಲ್ಲಿ ಪಾರ್ಥಿವ ಶರೀರವನ್ನಿಡಲಾಗಿತ್ತೋ ಆ ಜಾಗದಲ್ಲಿ ತೀರಿಕೊಂಡ ವ್ಯಕ್ತಿಗೆ ಪ್ರಿಯವಾದ ಪದಾರ್ಥಗಳನ್ನಿಡುತ್ತಾರೆ. ಪ್ರಾಣ ಬಿಟ್ಟ ಸ್ಥಳದಲ್ಲಿನೀರು ಮತ್ತು ಹೂಗಳ ಮಿಶ್ರಣದ ತಂಬಿಗೆಯನ್ನಿಟ್ಟು ಮೇಲೆ ಹೂವಿನ ಹಾರವನ್ನು ತಂಬಿಗೆಗೆ ತಾಕುವಂತೆ ನೇತು ಹಾಕಿರುತ್ತಾರೆ. ೪೦ನೆಯ ದಿನದ ರಾತ್ರಿ ಜಾಗರಣೆಯಾದ ಮೇಲೆ ಬೆಳಿಗ್ಗೆ 'ಗೋರಿ'ಯಿರುವ ಸ್ಥಳಕ್ಕೆ ಹೋಗಿ ದರೂದ್ ಪ್ರಾರ್ಥನೆ ಮುಗಿಸಿಕೊಂಡು ಬರಲಾಗುತ್ತದೆ. ಆ ಪಾರ್ಥನೆ ಹೀಗಿದೆ. 'ಅಲ್ಲಾಹುಂ ಸಲೀ ಅಲಾ ಮೊಹಮ್ಮದಿನ್ ವಹಲಾ ಹಾಲಿ ಮೊಹಮ್ಮದಿನ್ ವಬಾರಿ ಮಸಲ್ಲಿಮ್ ' ಇದನ್ನು ಒಂದೇ ಒಂದು ಸಲ ಪಠಿಸಿದರೂ ಸಹ 'ರಸೂಲ'ರು ಪ್ರಾರ್ಥನೆ ಮಾಡಿದವರ ಸಲುವಾಗಿ ಅವರು 'ಅಲ್ಲಾಹ್ 'ನಲ್ಲಿ ಹತ್ತು ಸಲ ಪ್ರಾರ್ಥಿಸುತ್ತಾರೆ ಎಂದು ನಂಬಲಾಗಿದೆ. ಇದಾದನಂತರ 'ಅಲ್ ಫಾತೆಹಾ' ಪಠಿಸಲಾಗುತ್ತದೆ. ಇದು ಕುರಾನಿನ ಮೊದಲಭಾಗವಾಗಿದೆ.

ಅಲ್ ಹಮ್ದು ಲಿಲ್ಲಾಹಿ ಕಬ್ಬಿಲ್ ಆಲಮೀನ್

ಅರ್ರಹಮಾನಿರ್ ರಹೀಮ್

ಮಾಲಿಕಿ ಯೌದ್ದೀನ್

ಇಯಾಕಾ ನ ಅಬುದುವ ಇಯಾಕಾ ನಸ್ತ ಈನ್

ಇಹದಿನಸ್ ಸಿರಾತಲ್ ಮುಸ್ತಕೀಮ್

ಸಿರಾತಲ್ ಲಜೀನಾ ಆನ್ ಅಮ್ತ ಅಲೈಹಿಮ್

ಗೈರಿಲ್ ಮಗದೂಬಿ ಅಲೈಹಿಮ್ ಬಲದ್ ವಾಲ್ಗೀನ್

ಅಮೀನ್

ಇದರರ್ಥ ಹೀಗಿದೆ. "ಎಲ್ಲಾ ಪ್ರಶಂಸೆ ಅಲ್ಲಾನಿಗೆ ಸೇರಲಿ. ಅವನು ಜಗತ್ತಿನ ಒಡೆಯ. ಅವನು ಪರಮ ದಯಾಳು, ಕೃಪಾಳು. ಅವನು ಕಯಾಮತ್ ದಿನದ ಸ್ವಾಮಿ. ಹೇ ಖುದಾ. ನಾವು ನಿನ್ನನ್ನು ಪೂಜಿಸುತ್ತೇವೆ.

ಸಹಾಯಕ್ಕಾಗಿ ನಿನ್ನನ್ನೇ ಕರೆಯುತ್ತೇವೆ. ನೀನು ನಮಗೆ ಸರಿಯಾದ ಮಾರ್ಗ ತೋರಿಸು. ಯಾರ ಮೇಲೆ ನೀನು ಕೃಪಾದೃಷ್ಟಿ ಬೀರಿದೀಯೋ ಅವರ ಮಾರ್ಗವನ್ನು ನಮಗೆ ತೋರಿಸು. ಯಾರ ಮೇಲೆ ನಿನಗೆ ಕೋಪವಿದೆಯೋ ಅವರ ಮಾರ್ಗವನ್ನು ಅಥವಾ ಪಥ ಭ್ರಷ್ಟರ ಮಾರ್ಗವನ್ನು ನಮಗೆ ತೋರಿಸಬೇಡ. 'ತಥಾಸ್ತು'.

೬.೧೩ ಮದುವೆಗೆ ಸಂಬಂಧಿಸಿದ ಆಚರಣೆಗಳು :

ಇಂಡಿಯಾದಲ್ಲಿನ ಮುಸ್ಲಿಮರ ಮದುವೆಯ ಆಚರಣೆಗಳು ಅರಬ್ ಸಂಸ್ಕೃತಿಯ (ಇತರೆ ಇಸ್ಲಾಮಿಕ್ ರಾಷ್ಟ್ರಗಳ ಸಂಸ್ಕೃತಿಯೊಂದಿಗೆ) ಜೊತೆಗೆ ಸ್ಥಳೀಯ, ಸಂಸ್ಕೃತಿಯ ವಿವರಗಳು ಬೆರೆತು ವಿಶಿಷ್ಟ ಮತ್ತು ವರ್ಣರಂಜಿತ ಆಚರಣೆಯಾಗಿ ರೂಪುಗೊಂಡಿದೆ.

ಮೊದಲಿಗೆ ವರನ ಕಡೆಯವರು 'ವಧು'ವನ್ನು ನೋಡಲು ಹೋಗುತ್ತಾರೆ.ಇವರ ಜೊತೆಗೆ ವರನೂ ಸಹ ಹೋದರೂ ಅವನು ಅವಳನ್ನು ನೋಡುವಂತಿಲ್ಲ. ಹೆಣ್ಣು ಮಕ್ಕಳು ಮಾತ್ರ 'ವಧು'ವನ್ನು ನೋಡಲು

ಅವಕಾಶವಿದ್ದು ವಧುವಿಗೆ ಜಡೆ ಹೆಣೆದು ಹೂ ಮುಡಿಸುತ್ತಾರೆ. ಇದು ವರನ ಕಡೆಯ ಮನೆಯ ಹೆಣ್ಣು ಮಕ್ಕಳೆಲ್ಲ 'ವಧು'ವನ್ನು ನೋಡಲು ಒಂದು ನೆಪವಾಗಿರುತ್ತದೆ. ವರನನ್ನು ಹೊರಗಡೆ ಮನೆಯ ಹೆಣ್ಣು ಮಕ್ಕಳಿಗೆಲ್ಲ ಕಾಣುವಂತೆ ಕೂಡಿಸಿರುತ್ತಾರೆ. ಸಾಮಾನ್ಯವಾಗಿ ಮುಸ್ಲಿಮೇತರರು 'ಹೆಣ್ಣ'ನ್ನು ನೋಡಲು ಹೋಗುವಾಗ ಒಯ್ಯುವಂತೆ 'ಹೂ ಹಣ್ಣು' ಒಯ್ದಿರುತ್ತಾರೆ. ತುಂಬಾ ಹಿಂದೆ ಅಂದರೆ ಆಧುನಿಕತೆಯ ಸೋಂಕಿನ್ನೂ ಇರದಿದ್ದ ಕಾಲದಲ್ಲಿ ಕಾಫಿ, ಟೀ ಅಥವಾ ನೀರನ್ನೂ ಸಹ ಗಂಡಿನ ಕಡೆಯವರು ಹೆಣ್ಣಿನ ಮನೆಯಲ್ಲಿ ಮುಟ್ಟುತ್ತಿರಲಿಲ್ಲ. ಈಗ ಕಾಫಿ, ಟೀ, ತಿಂಡಿಯನ್ನು ಸ್ವೀಕರಿಸಲಾಗುತ್ತದೆ. ಹೆಣ್ಣು ನೋಡುವ ಕಾರ್ಯಕ್ರಮ ಮುಗಿದ ನಂತರ ಒಪ್ಪಿಗೆಯಾದಲ್ಲಿ 'ನಿಶ್ಚಿತಾರ್ಥ' ನಡೆಸಲಾಗುವುದು. ಸೀರೆ, ಕುಪ್ಪಸದ ಕಣ, ಕಡಗಾ, ಜೈನು, ಡಾಬು, ಪಾಹೇಲ (ಕಾಲಿನ ಕಡಗ) ಮೊದಲಾದ ಆಭರಣ, ವಸ್ತ್ರಗಳನ್ನು ಕೊಟ್ಟು 'ಎಲೆ ಹಂಚಿ' ಬರುವುದು ಪದ್ಧತಿ. ಸ್ಥಳೀಯ ಪರಿಭಾಷೆಯಲ್ಲಿ 'ಹೋಳಿಗೆಯ' ಊಟ ಹಾಕಿಸುವುದು ಎಂದು ಕರೆಯಲಾಗುತ್ತದೆ. ಇಂತಹ ನಿಶ್ಚಿತಾರ್ಥಕ್ಕೆ ಸಂಬಂಧಿಸಿದಂತೆ ಮುಸ್ಲಿಮರಲ್ಲಿ 'ತಾಂಬೂಲ' ಹಂಚುವ ಪದ್ಧತಿಯು ತುಂಬಾ ಹಿಂದಿನಿಂದಲೂ ಇರುವುದಾಗಿ ಕಂಡು ಬರುತ್ತದೆ. ಗೋಲ್ಕೊಂಡ ಸುಲ್ತಾನರ ಕಾಲದಲ್ಲಿ ರಚಿತಗೊಂಡ ದಖನಿ 'ಮಸ್ನವಿ' ಕಾವ್ಯ 'ಫೂಲ್ ಬನ್ ' ನಲ್ಲಿ ಈ ಬಗ್ಗೆ ವಿವರಣೆಯಿದೆ. ಅಲ್ಲಿನ ಕಾವ್ಯಸಂದರ್ಭದಲ್ಲಿ ಕನ್ಯೆಯೊಬ್ಬಳಿಗೆ ಮದುವೆಗೊತ್ತಾದಾಗ 'ನಿಶ್ಚಿತಾರ್ಥ'ದ ಕುರುಹಾಗಿ ಎಲೆ ಹಂಚಲಾಗುತ್ತದೆ.[೭]

'ಮಧ್ಯಯುಗೀನ' ಕಾಲದಲ್ಲಿ ಇಂಡಿಯಾಕ್ಕೆ ಬಂದ ಬಹುಪಾಲು ಪ್ರವಾಸಿಗರ ಬರವಣಿಗೆಗಳಿಂದಲೂ ಸಹ ಮುಸ್ಲಿಮರು ಅತಿಥಿಗಳಿಗೆ 'ತಾಂಬೂಲ'ವನ್ನುನೀಡಿ ಗೌರವಿಸುವ ಶಿಷ್ಟಾಚಾರವನ್ನು ಹೊಂದಿದ್ದಿರ ಬಗ್ಗೆ ತಿಳಿದು ಬರುತ್ತದೆ. ವಿದೇಶಿ ಪ್ರವಾಸಿಗರು ಮತ್ತು ರಾಯಭಾರಿಗಳನ್ನು ಮುಸ್ಲಿಂ ಸುಲ್ತಾನರು 'ತಾಂಬೂಲ' ನೀಡಿ ಸತ್ಕರಿಸುತ್ತಿದ್ದರೆಂಬುದನ್ನು ಉಲ್ಲೇಖಿಸಿದ್ದಾರೆ.

ಹೆಣ್ಣಿನ ಮನೆಯವರು ಗಂಡಿನ ಮನೆಗೆ ಬಂದು ವರನಿಗೆ ಬಟ್ಟೆ, ಬರೆ, ಉಂಗುರ ಅಥವಾ ಕೈಗಡಿಯಾರ, ಇವೆಲ್ಲವನ್ನು ಅಥವಾ ಇವುಗಳಲ್ಲಿ ಕೆಲವನ್ನು ಕೊಟ್ಟು ಎಲೆಹಂಚಲಾಗುವುದು. ಮದುವೆ

[illegible]

[illegible]

[illegible]

ನಡೆಯುವುದು ಹೆಣ್ಣಿನ ಮನೆಯಲ್ಲಿಯೇ ಆಗಿದ್ದು 'ನಿಕಾಹ್ 'ದ ನಂತರ ಎರಡನೇ ಊಟವನ್ನು ಗಂಡಿನ ಕಡೆಯವರು ಕೊಡುವುದು ರೂಢಿಯಲ್ಲಿದೆ. 'ಬಾಜಾ ಬಜಂತ್ರಿ'ಯ ವೆಚ್ಚವನ್ನು ಕೆಲವೆಡೆ ಹೆಣ್ಣಿನ ಕಡೆಯವರು ಒಂದುಭಾಗದಂತೆ ಮತ್ತು ಗಂಡಿನ ಕಡೆಯವರು ೨ ಭಾಗದಂತೆ ಹಂಚಿಕೊಳ್ಳುತ್ತಾರೆ. ಕಟ್ಟುನಿಟ್ಟಾಗಿ ಇದನ್ನೆ ಎಲ್ಲೆಡೆಗೂ ಅನ್ವಯಿಸುತ್ತಾರೆಂದು ಹೇಳಲಾಗದು.

'ಶುಕ್ರಾನ' ಎಂದು ಕರೆಯಲಾಗುವ 'ನಿಕಾಹ್ 'ದ ದಿನ ಮನೆಯ ಮುಂದೆ ಹಂದರಹಾಕಿ, ಕಿಚಡಿ ಮತ್ತು ಬದನೆಕಾಯಿ ಪಲ್ಯ ಮಾಡಿ ನೈವೇದ್ಯವನ್ನಾಗಿ ಸಲ್ಲಿಸಿ ಮಂಟಪದ ಕೆಳಗೆ 'ಓದಿಕೆ' ಮಾಡ (ಕುರಾನ್ ನ ಶ್ಲೋಕಗಳನ್ನು ಪಠಿಸಿ) ಲಾಗುತ್ತದೆ. 'ನಿಕಾಹ್ ' ನಡೆಯುವುದು ಇದೇ ಸ್ಥಳದಲ್ಲಾಗಿದೆ. ಈ ತರಹ ನೈವೇದ್ಯ ಮಾಡುವುದು ಹಲವೆಡೆ ಇರದೇ ಇದ್ದರೂ ಸಹ ಮದುವೆಯ ಮಂಟಪದಲ್ಲಿ 'ನಿಕಾಹ್ ' ನಡೆಯುವ ಸ್ಥಳ ಪವಿತ್ರವೆಂಬುದಾಗಿ ಗುರುತಿಸುತ್ತಾರಲ್ಲದೆ ಅದಕ್ಕೆ 'ನಿವೇದನೆ' ಫಾತೆಹಾ (ಓದಿಕೆ) ಸಲ್ಲಿಸಲಾಗುತ್ತದೆ. ಮದುವೆಯ 'ಹಂದರ' ಕ್ಕೆ 'ಹಂದರದಸೊಪ್ಪು' ಎಂದು ಕರೆಯಲಾಗುವ ಗಿಡದ ಎಲೆಗಳನ್ನುಬಳಸುತ್ತಾರೆ. ಮದುವೆಯ ಈ 'ಹಂದರ' ಕ್ಕೆ ಅರ್ಧ ಚಂದ್ರಾಕೃತಿ 'ಮತ್ತ ನಕ್ಷತ್ರ' ದ ಗುರುತಿರುವ ಹಸಿರು ಮತ್ತು ಕೆಂಪು ಧ್ವಜಗಳನ್ನು ಕಟ್ಟಲಾಗುತ್ತದೆ.

ಗಂಡಿನ ಕಡೆಯವರು ಮದುವೆಯ ಹಿಂದಿನ ದಿನ ದಿಬ್ಬಣ ಹೊರಟು ಹೆಣ್ಣಿನ ಊರಿಗೆ ಹೊರಟಾಗ ಮುಸ್ಲಿಮೇತರರ ಮದುವೆಯ ವಿಧಿಗಳನ್ನು ಅನುಸರಿಸುತ್ತಾರೆ. ಹೆಣ್ಣಿನ ಊರು ಸಮೀಪಿಸುತ್ತಿದ್ದಂತೆಯೇ ಊರ ಹೊರಗೆ ಮದುವೆಯ ದಿಬ್ಬಣವನ್ನು ನಿಲ್ಲಿಸಲಾಗುತ್ತದೆ. ಅವರನ್ನು ಸ್ವಾಗತಿಸಲು ವಧುವಿನ ಕಡೆಯ ಅಣ್ಣ, ತಮ್ಮ, ತಂದೆ ಮೊದಲಾದವರೆಲ್ಲ ಹೋಗುತ್ತಾರೆ. ಹೋಗುವಾಗ ಒಂದು ತಂಬಿಗೆಯ ತುಂಬ ನೀರು, ಹಾಲು, ತುರಿದ ಒಣಕೊಬ್ಬರಿ ಮತ್ತು ಸಕ್ಕರೆಯ ಮಿಶ್ರಣವನ್ನು ತೆಗೆದುಕೊಂಡು ಹೋಗುತ್ತಾರೆ. ಮಧುಮಗನ ಭಾವ ಅಥವಾ ಮಾವನವರು ವರನನ್ನು ಅಲ್ಲಿ ಕೆಳಗಿಳಿಸಿ ಕಂಬಳಿ ಅಥವಾ ಜಮಖಾನೆಯನ್ನು ಹಾಸಿ ಅದರ ಮೇಲೆ ಕೂಡಿಸಿ ಮುಖ ತೊಳೆದು ಎಣ್ಣೆ ಹಚ್ಚಿ ಹೂವಿನ ಹಾರ ಹಾಕಲಾಗುತ್ತದೆ. ಕೊಬ್ಬರಿ, ಸಕ್ಕರೆಯ ಮಿಶ್ರಣವನ್ನು ತಿನ್ನಿಸಿ, ಹಾಲುಕುಡಿಸಿ ಮದುಮಗನೊಂದಿಗೆ ಮದುವೆಯ ದಿಬ್ಬಣವನ್ನು ವಿಜೃಂಬಣೆಯಿಂದ

ಊರೊಳಗೆ ಕರೆದುಕೊಂಡು ಬಂದು 'ಬಿಡದಿ ಮನೆ'ಗೆ ಬಿಡಲಾಗುತ್ತದೆ.

ಅಲ್ಲಿಗೆ ಬಂದ ಗಂಡಿನ ಕಡೆಯವರು ಸಕ್ಕರೆ, ಕೊಬ್ಬರಿ, ಅಕ್ಕಿಯ ಮಿಶ್ರಣದೊಂದಿಗೆ ತಯಾರಿಸಿದ ಪದಾರ್ಥವನ್ನು ತಟ್ಟೆಯಲ್ಲಿಟ್ಟುಕೊಂಡು ವಸ್ತ್ರ, ಒಡವೆ, ಎಲೆ ಅಡಿಕೆ, ಲವಂಗ, ಚಕ್ಕೆ ಮುಂತಾದ 'ತಾಂಬೂಲ'ದ ಪರಿಕರಗಳೊಂದಿಗೆ ವಧುವಿನ ಮನೆಗೆ ಬರುತ್ತಾರೆ. ದೈವಸ್ಥರನ್ನು (ಹಿರಿಯರನ್ನು) ಮುಲ್ಲಾರನ್ನು ಕರೆದು ಕುರಾನ್ ನ ಕೆಲವು ಸೂರಾಗಳನ್ನು ಪಠಿಸಿದ ನಂತರ ಮದುವೆಗೆ ಸಂಬಂಧಿಸಿದ ವಿವರಗಳ ಬಗೆಗೆ ಚರ್ಚಿಸುತ್ತಾರೆ.

ಬೆಳಗಿನ ಹೊತ್ತು ಮದುಮಗನಿಗೆ 'ಸೆರಾ' (ಮುಸ್ಲಿಮರ ಮದುವೆಯಲ್ಲಿ ಮಾತ್ರ ಬಳಸಲ್ಪಡುವ ಮದುವೆಯ 'ವರ'ನು ಮುಖ ಮುಚ್ಚುವಂತಿರುವ ಹೂವಿನ 'ಜಾಲರಿ'ಗೆ 'ಸೇರಾ'ಎಂದು ಕರೆಯಲಾಗುತ್ತದೆ) ತೆಗೆದುಕೊಂಡು ಹೋಗುವಾಗ ಕಾಣಿಕೆ, ಬಟ್ಟೆ ಇತ್ಯಾದಿಗಳನ್ನು ಜೊತೆಗೆ ತೆಗೆದುಕೊಂಡು ಹೋಗಬೇಕು. ವರನನ್ನು ಮದುವೆಯ ವಸ್ತ್ರಗಳಿಂದ ಅಲಂಕರಿಸುವುದಕ್ಕೆ ಮುಂಚೆ 'ಅರಿಶಿಣ' ಹಚ್ಚಿ ನೀರು ಹಾಕಲಾಗುತ್ತದೆ. ಹೆಣ್ಣಿನ ತಮ್ಮ ಅಥವಾ ಅಣ್ಣನು ದೈವದ ಬಂಧು ಬಳಗದ ಅಪ್ಪಣೆ ಪಡೆದು 'ಮದುಮಗನಿಗೆ ಸೇರಾ ಕಟ್ಟುತ್ತಾನೆ. ಅಲಂಕೃತಗೊಂಡ ಮದುಮಗನನ್ನು ಊರ ತುಂಬಾ ಮದುಮಗ ಮೆರವಣಿಗೆ ಮಾಡಿದ ಮೇಲೆ ಮದು ಮಗಳ ಮನೆಗೆ ಕರೆದು ತರುತ್ತಾರೆ. ಮದುಮಗ ಹೊಸ್ತಿಲ ಆಚೆ ನಿಂತಿರುವಾಗಲೆ ಮದುಮಗಳನ್ನು ಕರೆತಂದು ಅಡ್ಡ ಪರದೆ ಹಿಡಿದು ನಿಲ್ಲಿಸುತ್ತಾರೆ. ವಧುವರರು 'ಪರಸ್ಪರ' ಐದು ಬೊಗಸೆ ಅಕ್ಕಿಯನ್ನು ತಲೆಯ ಮೇಲೆ ಸುರಿದುಕೊಳ್ಳುತ್ತಾರೆ. ಈ ಬಗೆಯ ಪರಸ್ಪರ ಅಕ್ಕಿಯನ್ನು 'ಎರಚಿ' ಕೊಳ್ಳುವ ಪದ್ಧತಿಯು ಅತ್ಯಂತ ಕುತೂಹಲ ಕರವಾಗಿದೆ. ಮುಸ್ಲಿಮೇತರರ ಮದುವೆಗಳಲ್ಲಿ 'ಹಸೆಮಣೆ'ಯ ಮೇಲೆ ಕುಳಿತ ವಧುವರರು ತಾಳಿಗೆ ಮುಂಚೆ ಐದು ಸಲ ಎರಡೂ ಕೈಗಳಲ್ಲಿ ಮುಷ್ಟಿಯಿಂದಿಡಿದ ಅಕ್ಕಿಯನ್ನು ಪರಸ್ಪರರು ಮೊಣಕಾಲುಗಳ ಚಿಪ್ಪಿನ ಭಾಗಕ್ಕೆ, ಭುಜಕ್ಕೆ ಮತ್ತು ತಲೆಗೆ ಸ್ಪರ್ಶಿಸಿ ಅಲ್ಲಿ ಅಕ್ಕಿಯನ್ನು ಹಾಕಿಕೊಳ್ಳುತ್ತಾರೆ. ತಾಳಿ ಕಟ್ಟುವಾಗಲೂ ಸಹ 'ಅರಿಶಿಣ' ಮತ್ತು ಕುಂಕುಮ ಬೆರೆಸಿದ ಅಕ್ಕಿಯನ್ನು (ಅಕ್ಷತೆ) ಮದುಮಕ್ಕಳ ಮೇಲೆ ಮದುವೆಗೆ ಬಂದವರು ಹಾಕುತ್ತಾರೆ.[೮] ಮುಸ್ಲಿಮರು ಈ ಪದ್ಧತಿಯನ್ನು ಯಥಾ ರೀತಿ ಸ್ವೀಕರಿಸದೆ ಸ್ವಲ್ಪ ಮಾರ್ಪಾಟನೊಂದಿಗೆ



ಅಲಂಕೃತಗೊಂಡ 'ಮುಸ್ಲಿಂ' ಮದುಮಗ



ಮದುಮಗನ ಅಲಂಕರಣ



ತಾಯಿಯಿಂದ ಮಗನಿಗೆ 'ದೃಷ್ಟಿ' ತೆಗೆಯುವುದು



'ದೃಷ್ಟಿ' ತೆಗೆಯುವ ಇನ್ನೊಂದು ದೃಶ್ಯ.



ಮದುಮಗ ಮದುವೆಯ ಸಂದರ್ಭದಂದು ಮದುಮಗಳ ಮನೆಗೆ ಪ್ರವೇಶಿಸುವಾಗ ಹೊಸ್ತಿಲ
ಹೊರಗಡೆ ಮದುಮಗ, ಒಳಗಡೆ ಮದುಮಗಳು ಪರಸ್ಪರ 'ಐದು ಬೊಗಸೆ'
ಅಕ್ಕಿ ಎರಚಿಕೊಳ್ಳುವುದು (ಸೇಸೆಯಿಕ್ಕುವುದು).



ತಾಳಿ ಕಟ್ಟುವ ದೃಶ್ಯ.



ವಧುವರರಿಗೆ ದೃಷ್ಟಿ ತೆಗೆಯುವ ಮತ್ತೊಂದು ದೃಶ್ಯ.



ಹೊಸ್ತಿಲು ಪ್ರವೇಶಿಸುವ ಮದುಮಗನಿಗೆ 'ಒನಕೆ' ಅಡ್ಡ ಹಿಡಿದು ಕಾಣಿಕೆ ಕೇಳುವುದು. ಮದುಮಗನ ಮುಖ ಮುಚ್ಚಿದ 'ಸೇರಾ' (ಹೂವಿನ ಜಾಲರಿ)ವನ್ನು ಚಿತ್ರದಲ್ಲಿ ಕಾಣಬಹುದು.



ಮದುಮಗಳಿಗೆ 'ಸೂಸುಗ' (ಹೂವಿನಿಂದ ಹೆಣೆದ ತಲೆಯ ಮೇಲೆ ಹಾಕುವ ಪಟ್ಟಿ) ಹಾಕುವುದು.

ಸ್ವೀಕರಿಸಿಕೊಂಡಿದ್ದಾರೆ.

ಈ ಕ್ರಿಯೆಯಾದ ನಂತರ 'ವಧು'ವಿನ ಕಡೆಯ ತಮ್ಮಂದಿರು, ತಂಗಿಯರು, 'ಒನಕೆ'ಯನ್ನು ತಂದು ಅಡ್ಡಹಿಡಿದು ಮದು ಮಗನ ಪ್ರವೇಶವನ್ನು ತಡೆಹಿಡಿಯುತ್ತಾರೆ.ಆತನಿಂದ ತಮಗೆ ಕಾಣಿಕೆ ಸಿಕ್ಕುವವರೆಗೂ ತಡೆಹಿಡಿದಿರುತ್ತಾರೆ. ನಂತರ ಮದುಮಗನನ್ನು'ನಿಕಾಹ್ 'ದ ಸ್ಥಳಕ್ಕೆ ಕರೆದುಕೊಂಡು ಹೋಗಲಾಗುತ್ತದೆ.

ಹೆಣ್ಣು ಮತ್ತು ಗಂಡಿನ ಕಡೆಗೆ ತಲಾ ಐದ್ಮೆದು ಮಂದಿ ಸಾಕ್ಷಿಗಳಾದರೂ ಇರಬೇಕಾಗುತ್ತದೆ. ವರನನ್ನು ಕೂಡಿಸುವ ಮುಖ್ಯ ಸ್ಥಳದಲ್ಲಿ ಹಾಸಲ್ಪಟ್ಟ ಮೆತ್ತೆಯ ಮೇಲೆ ಅಕ್ಕಿಯನ್ನು ಹರಡಿರುತ್ತಾರೆ. ಇಲ್ಲವೆ ಮದುಮಗನನ್ನು ಅಲಂಕೃತ ಕುರ್ಚಿಯ ಮೇಲೆ ಕೂರಿಸಲಾಗಿರುತ್ತದೆ. ಖಾಜಿಯಿಂದ 'ನಿಕಾಹ್ ಕುದ್ಬ್' (ವಿವಾಹದ ಮಂತ್ರ) ಓದಿದ ಮೇಲೆ ಮದುವೆಗೆ ಒಪ್ಪಿಗೆ ಇದೆಯೋ ಇಲ್ಲವೋ ಎಂದು ಖಾಜಿಯು ಗಂಡಿನ ಕಡೆಯ ಹಿರಿಯರನ್ನು ವಿಚಾರಿಸುತ್ತಾನೆ. ನಂತರ ವರನಿಗೆ ಇಷ್ಟವಿದೆಯೋ ಇಲ್ಲವೋ ಎಂದು ಕೇಳಲಾಗುತ್ತದೆ. ಅದೇ ತರಹ ಒಳಗಿರುವ 'ವಧು'ವನ್ನೂ ಸಹ ಕೇಳಲಾಗುತ್ತದೆ. 'ಖಾಜಿ'ಯು ಮದುಮಕ್ಕಳ ಹೆಸರುಗಳನ್ನು ಪುಸ್ತಕದಲ್ಲಿ ನಮೂದಿಸಿಕೊಂಡು ಅವರಿಂದ ಸಹಿ ಪಡೆಯುತ್ತಾನೆ. ಇದಾದ ನಂತರ ಕುರಾನಿನ ಹಲವು ಸೂರಾಗಳನ್ನು ಪಠಿಸಲಾಗುತ್ತದೆ. ಉತ್ತುತ್ತಿ, ಕಲ್ಲುಸಕ್ಕರೆಯ ಮಿಶ್ರಣವನ್ನು ಹಂಚಲಾಗುತ್ತದೆ. ಗಂಧದ ಬಟ್ಟಲಿನಲ್ಲಿ ಹಾಕಿದ್ದ ತಾಳಿಯನ್ನು ಮದುಮಗಳ ಅತ್ತೆ ಇಲ್ಲವೆ ತಾಯಿ ಯಾರಾದರೊಬ್ಬರು ತೆಗೆದುಕೊಂಡು ಹೋಗಿ ಒಳಗಿರುವ ಮದು ಮಗಳಿಗೆ ಕಟ್ಟಲಾಗುತ್ತದೆ.

'ನಿಕಾಹ್ 'ದ ಕಾರ್ಯಕ್ರಮ ಮುಗಿದ ನಂತರ ಗಂಡಿನ ಕಡೆಯವರಿಗೆ ಮೊದಲು ಊಟ ಹಾಕಿದ ನಂತರ ಉಳಿದವರನ್ನು ಊಟಕ್ಕೆ ಆಹ್ವಾನಿಸುತ್ತಾರೆ. ಇದಾದ ನಂತರ ಸಂಜೆ ಹೊತ್ತಾಗಲಿ, ರಾತ್ರಿಯಾಗಲಿ ಅಥವಾ ಮರುದಿನವಾಗಲಿ ಹೂ ಮುಡಿಸುವ ಕಾರ್ಯ ಕ್ರಮವಿರುತ್ತದೆ. ಇಲ್ಲಿ ಹೂಮುಡಿಸುವುದೆಂದರೆ, ನವ ಮದು ಮಕ್ಕಳನ್ನು ಅಲಂಕರಿಸಿ ಒಂದ್ಕೆಡೆ ಕೂಡಿಸಿ ನೆರೆಹೊರೆಯವರನ್ನು ಆಹ್ವಾನಿಸಿ ಸಂಭ್ರಮಿಸುವ ಒಂದು ಪದ್ಧತಿಯಾಗಿದೆ.

ಮೂರನೆಯ ದಿನ ಕಾರ್ಯಕ್ರಮವನ್ನು 'ಜುಲ್ವಾ' ಎಂದು ಕರೆಯಲಾಗುತ್ತದೆ. ಇಂದು ಮದುಮಗಳನ್ನು ಕಳುಹಿಸಿ ಕೊಡಲಾಗುತ್ತದೆ. ಇಂದಿನ ಕಾರ್ಯಕ್ರಮದ ಅಂಗವಾಗಿ ಮದುಮಗನು ತಮಾಷೆಯ ಆಟಗಳಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಸಿಹಿ ಅನ್ನವನ್ನು ತಟ್ಟೆಯಲ್ಲಿ ಗೋಪುರಾಕಾರ ಪೇರಿಸಿ ಅದಕ್ಕೆ ದಪ್ಪನೆಯ ಕೆಂಪುದಾರ ಸುತ್ತಿ ಹೂಗಳನ್ನು ಸಿಕ್ಕಿಸಿರುತ್ತಾರೆ. ಮದುಮಗನು ಹೂ, ದಾರಕ್ಕೆ ಮತ್ತು ಇನ್ನೊಂದು ಹೂವಿಗೆ ಸೋಕದಂತೆ ಎಲ್ಲಾ ಹೂಗಳನ್ನು ಜಾಣ್ಮೆಯಿಂದ ತೆಗೆಯಬೇಕಾಗುತ್ತದೆ. ಕೀಳಬೇಕಾದ ಹೂ ದಾರಕ್ಕೆ ಅಥವಾ ಇನ್ನೊಂದು ಹೂಗೆ ತಾಗಿದರೆ ಕೈಯಲ್ಲಿ ಬೆತ್ತ ಹಿಡಿದು ಹೊಡೆತಗಳ ಶಿಕ್ಷೆ ನೀಡಲಾಗುತ್ತದೆ. ಹೀಗೆ ಶಿಕ್ಷಿಸುವವರು ಸಾಮಾನ್ಯವಾಗಿ 'ವಧು'ವಿನ ಕಡೆಯ ತಮ್ಮ, ಅಣ್ಣಂದಿರು ತಂಗಿಯರಾಗಿರುತ್ತಾರೆ. ಇದಾದ ನಂತರ ಮದುಮಗನು ಒಳಗೂ ಹೊರಗೂ ಬೆಣ್ಣೆ ಅಥವಾ ತುಪ್ಪ ಹಚ್ಚಿದ ಒಣಕೊಬ್ಬರಿಯ ಬಟ್ಟಲನ್ನು ತನ್ನ ಬೆಣ್ಣೆಸವರಿದ ಕೈಗಳಿಂದಲೇ ಮುರಿಯಬೇಕಾಗುತ್ತದೆ. ಇದಂತೂ ತುಂಬಾ ಪ್ರಯಾಸದ ಕೆಲಸವಾಗಿದ್ದರಿಂದ ಮದುಮಗನನ್ನು ಗೋಳುಹೊಯ್ದುಕೊಳ್ಳಲಾಗುತ್ತದೆ.

ಈ ಕಾರ್ಯಕ್ರಮಗಳೆಲ್ಲ ಮುಗಿದ ನಂತರ ಮದುವೆಗೆ ಕಾಣಿಕೆಯಾಗಿ ಬಂದ ಎಲ್ಲ ವಸ್ತ್ರ, ಹಣ, ಅಭರಣಗೊಳೊಂದಿಗೆ ಹೆಣ್ಣನ್ನು ಗಂಡಿನ ಮನೆಗೆ ಕಳುಹಿಸಿಕೊಡಲಾಗುತ್ತದೆ. ಮನೆಯಿಂದ ವಾಹನದವರೆಗೆ 'ವಧು'ವನ್ನು ಮದುಮಗನು ಹೊತ್ತುಕೊಂಡೇ ತರಬೇಕಲ್ಲದೆ ಊರಲ್ಲಿಳಿದ ಮೇಲೂಸಹ ಮನೆಯವರೆಗೆ ಮತ್ತೆ ಹೊತ್ತುಕೊಂಡೇ ಹೋಗಬೇಕಾಗುತ್ತದೆ. ಗಂಡಿನ ಮನೆಯಲ್ಲಿ ವಧುವರರಿಗೆ ಮತ್ತೆ ನೆರೆಹೊರೆಯವರ ಸಮ್ಮುಖದಲ್ಲಿ ಹೂ ಮುಡಿಸಲಾಗುತ್ತದೆ.

೬.೧೪ ಕೆಲವು ವಿಶಿಷ್ಟ ಬಗೆಯ ಧಾರ್ಮಿಕ ಆಚರಣೆಗಳು :

ಮಹತ್ವದ ಮುಸ್ಲಿಂ ಹಬ್ಬಗಳನ್ನು ಹೊರೆತುಪಡಿಸಿಯೂ ಮುಸ್ಲಿಮರಿಗೆ ಮಾತ್ರ ಸೀಮತವಾದ ಆಚರಣೆಗಳು ಕಂಡು ಬರುತ್ತವೆ. ಅದರಲ್ಲಿ ಅರೇಬಿಯಾದ ಪ್ರಖ್ಯಾತ ಸಂತ ಮೆಹಬೂಸುಬಾನಿಯ 'ಗ್ಯಾರಿಬಿ' ತುಂಬಾ ಮುಖ್ಯವಾಗಿದೆ. ರಂಜಾನ್, ಬಕ್ರೀದ್ ನಂತಹ ಮುಖ್ಯ ಹಬ್ಬಗಳನ್ನು ಹೊರೆತು ಪಡಿಸಿ

ನೋಡವುದಾದರೆ ಮೆಹಬೂ ಸುಬಾನಿಯವರ ಗ್ಯಾರಿಬಿಯ ಆಚರಣಾ ವಿಧಾನಗಳು ಮುಸ್ಲಿಮೇತರ ಸುಪ್ರದಾಯಗಳನ್ನು ಹೋಲುತ್ತಿವೆ.

ಮೊಹಬೂ ಸುಭಾನಿಯ ಗ್ಯಾರಿಬಿಯ ದಿನ 'ಮಾಲದಿ'ಯನ್ನು ಮಾಡಿ ಅದನ್ನು ಮಜಾರ್ ನ (ಸಮಾಧಿ) ಆಕಾರದಲ್ಲಿ ಪೇರಿಸಿ ಅದರ ಮೇಲೆ ಐದು ಬೆಳ್ಳಿಯ ತುಪ್ಪದ ದೀಪಗಳನ್ನು ಹಚ್ಚಿಡುತ್ತಾರೆ. ಮುಸ್ಲಿಮರು ವಾಸವಾಗಿರುವ ಕಾಲೋನಿ, ಗಲ್ಲಿಗಳಲ್ಲಿ ಅಥವಾ ಹಳ್ಳಿಗಳಲ್ಲಿ 'ದರ್ಗಾ' ಕಟ್ಟೆಗಳೆಂದು ಕರೆಯಲಾಗುವ ಹಸಿರು ಝುಂಡಾ ಇರುವ ಸ್ಥಳಗಳು 'ಮೆಹಬೂಸುಬಾನಿ'ಯ ದರ್ಗಾದ ಸಂಕೇತಗಳಾಗಿವೆ. ಇಲ್ಲಿ ಬೇವಿನ ಮರ ಅಥವಾ 'ಗ್ಯಾಂದ್ಮರ್' ವನ್ನೊಳಗೊಂಡಂತೆ ಕಟ್ಟೆಕಟ್ಟಿ ದೊಡ್ಡ ದೊಡ್ಡ ಬಿದಿರಿನ ಕೋಲುಗಳಿಗೆ ಹಸಿರು ಝುಂಡಾ ಏರಿಸಿರುತ್ತಾರೆ. 'ಗ್ಯಾರಿಬಿ'ಯ ದಿನ ಭಕ್ತರ ಮನೆಯಲ್ಲಿ ಕನಿಷ್ಟ ಐದು ಜನ ಫಕೀರರನ್ನಾದರೂ ಕರೆದು 'ಓದಿಕೆ' ಮಾಡಿಸಿ ಝುಂಡಾ ತೆಗೆದುಕೊಂಡು ಮೆರವಣಿಗೆಯಲ್ಲಿ ಬಂದು ಪೂಜೆಸಲ್ಲಿಸಲಾಗುತ್ತದೆ. ನಂತರ ಫಕೀರರಿಗೆ ಮನೆಯಲ್ಲಿ ಹೂವಿನ ಹಾರ ಹಾಕಿ ಸತ್ಕರಿಸುವುದರೊಂದಿಗೆ ಊಟಕ್ಕೆ ನೀಡಿ ಅವರ ಭಿಕ್ಷಾಪಾತ್ರೆ (ಕಿಸ್ತಿ)ಯ ತುಂಬ ಆಹಾರವನ್ನು ತುಂಬಿಸಿ ಕಳುಹಿಸಲಾಗುತ್ತದೆ. ಜೊತೆಗೆ ದಕ್ಷಿಣೆಯನ್ನು ಸಹ ನೀಡಲಾಗುತ್ತದೆ. ಇದಕ್ಕೆ ಸಂವಾದಿಯಾಗಿ ಮುಸ್ಲಿಮೇತರರಲ್ಲಿ (ಲಿಂಗಾಯಿತರ ಮತ್ತು ಇತರೆ ಜಾತಿಗಳ) ತುಂಬಾ ಪವಿತ್ರ ಮತ್ತು ಉತ್ಸವದ ದಿನಗಳಲ್ಲಿ ಜಂಗಮರನ್ನೋ ಅಥವಾ ಪೌರೋಹಿತ್ಯದ ವರ್ಗವನ್ನೊ ಕರೆದು ಊಟ ಹಾಕಿಸಿ ದಕ್ಷಿಣೆ ನೀಡಿ ಕಳಹಿಸುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಇದಲ್ಲದೆ ಮುಸ್ಲಿಮೇತರರಲ್ಲಿ ಹಿರಿಯರ ಹಬ್ಬ ಪ್ರಚಲಿತದಲ್ಲರುವಂತೆ ಈ ಭಾಗದ ಮುಸ್ಲಿಮರಲ್ಲಿಯೂ ಸಹ ಇದು ಪ್ರಚಲಿತದಲ್ಲಿದೆ. ಷಹಬಾನು ತಿಂಗಳಲ್ಲಿ ನಡೆಯುವ ಈ ಆಚರಣೆಯು ತುಂಬಾ ಕುತೂಹಲಕರವಾಗಿದೆ. ಪಿತೃಗಳಿಗೆ ಇಲ್ಲಿ ಆಹಾರವನ್ನಾಗಿ 'ಸಜ್ಜುಕ' 'ಫಲಾವು' ಮಾಡಲಾಗುತ್ತದೆ. ಕುರಿಯ ಐದು ಮಾಂಸದ ತುಂಡುಗಳನ್ನು ಕೆಂಡದಲ್ಲಿ ಸುಟ್ಟು 'ಚಪಾತಿ'ಯ ಮೇಲಿಟ್ಟು ಎಲೆ, ಅಡಿಕೆ, ತಂಬಾಕು, ಬೀಡಿ, ಸೀಗರೇಟು, ಇತ್ಯಾದಿ ಪಿತೃಗಳ ಇಷ್ಟದ ವಸ್ತುಗಳನ್ನಿಟ್ಟು 'ಓದಿಕೆ' ಮಾಡಲಾಗುತ್ತದೆ. ಸಾಮಾನ್ಯವಾಗಿ ಈ ಆಚರಣೆ ನಡೆಯುವುದು ಸಂಜೆಯ ಹೊತ್ತು ಆರರ ಸಮಯಕ್ಕಾಗಿದೆ. ಅಂದು ಪಿತೃಗಳಿಗೆ

ಹೊಸ ಬಟ್ಟೆ ತಂದು ನೈವೇದ್ಯದ ಪಕ್ಕದಲ್ಲಿಟ್ಟಿರುತ್ತಾರೆ. ಮಾರನೆಯ ದಿನ ಬೆಳಿಗ್ಗೆ ಒಂದು ಹಸಿರು ಕುಪ್ಪಸದ ಕಣ, ಹಸಿರು ಬಳೆ ಇವನ್ನು ಒಬ್ಬ ಫಕೀರನಿಗೋ ಅಥವಾ ಬಡವನಿಗೋ ಕೊಟ್ಟು 'ಒದಿಕೆ' ಮಾಡಿಸಲಾಗುತ್ತದೆ. ಈ ಆಚರಣೆಯು ನಿಸ್ಸಂದೇಹವಾಗಿ 'ಹಿರಿಯರ ಹಬ್ಬವೇ ' ಆಗಿದ್ದು ಮುಸ್ಲಿಮೇತರರನ್ನು ಅನುಕರಿಸಿ ರೂಢಿಸಿಕೊಂಡದ್ದಾಗಿದೆ.ಇಲ್ಲೂ ಪಿತೃಗಳಿಗೆ ಹೊಸ ಬಟ್ಟೆ ತಂದು, ಅವರ ಇಷ್ಟದ ಪದಾರ್ಥಗಳನ್ನು ನೈವೇದ್ಯವನ್ನಾಗಿ ಇಡಲಾಗುತ್ತದೆ.

ಆಂಧ್ರದ ಅನಂತಪುರ ಮತ್ತು ಬಳ್ಳಾರಿ ಜಿಲ್ಲೆಗಳ ಗಡಿ ಭಾಗದ ಪ್ರದೇಶದಲ್ಲಿ ಬರುವ 'ಇಡುಪನ ಕಲ್ಲಿ 'ನಲ್ಲಿ ತುಂಬಾ ಅಪರೂಪದ ವಿಶಿಷ್ಟ ಆಚರಣೆಯೊಂದು ರೂಢಿಯಿದೆ.'ಸಿಲಾರಜ್ಜಬ್ ' ಎಂದು ಕರೆಯುವ ಪವಿತ್ರ ಸ್ಥಳವೊಂದರಲ್ಲಿ (ಹುತ್ತ ಬೆಳೆದ ಆ ಸ್ಥಳದ ಸುತ್ತ ಕಟ್ಟಿದ ಕಟ್ಟಡವಾಗಿವೆ.)'ರಜ್ಜಬ್ ' ತಿಂಗಳ ಎರಡನೇ ಶುಕ್ರವಾರದಂದು 'ತಿಥಿ'ಯ ರೂಪದ ಆಚರಣೆಯೆಂದು ರೂಢಿಯಲ್ಲಿದೆ.ಬಹುಶಃ ಇಲ್ಲಿ ಯಾರಾದರೊಬ್ಬ ಸಂತನ ಸಮಾಧಿಯ ಸ್ಥಳದಂತೆ ತೋರುತ್ತದೆ. ಇಲ್ಲಿನ ಹಳ್ಳಿಗರ ಸ್ಮರಣೆಯಿಂದ ಅದು ಅಳಸಿ ಹೋಗಿ ಅಲ್ಲಿ ಹುತ್ತದೊಳಗಿಂದ 'ಉದ್ಭವ ಮೂರ್ತಿ' ಮೂಡಿದ್ದಾನೆಂದು ಭಾವಿಸುತ್ತಾರೆ.

ಇಲ್ಲಿ ರಜ್ಜಬ್ ತಿಂಗಳ ಎರಡನೆಯ ಶುಕ್ರವಾರದಂದು ಊರವರೆಲ್ಲ ಸೇರಿ (ವಿಶೇಷವಾಗಿ ಮುಸ್ಲಿಮರು) ಉತ್ಸವದ ಒಟ್ಟು ವೆಚ್ಚವನ್ನು ಭರಿಸುತ್ತಾರೆ. ಕನಿಷ್ಟ ಇಪ್ಪತ್ತೈದು ಸೇರಿನಷ್ಟು ಗೋಧಿಯನ್ನು ಬೀಸುವ ಕಲ್ಲಿನಲ್ಲಿ ಅಂದಿನ ದಿನವೇ ಬೀಸಿ ಹಿಟ್ಟನ್ನು ತಯಾರಿಸಬೇಕು. ಅಡಿಗೆಗೆ ಬಳಸುವ ಕಾರವನ್ನೂ ಸಹ ಅಂದೇ ಪುಡಿ ಮಾಡಬೇಕು. ಬಲಿಯ ಪ್ರಾಣಿಯಾಗಿ ಕುರಿಯಾಗಲಿ ಅಥವಾ ಆಡಾಗಲಿ ಯಾವುದರ ಮೈಮೇಲೆಯು ಮಚ್ಚೆ ಸಹ ಇರದೆ ಸಾದಾ ಬಣ್ಣದವಾಗಿರುವುದು ಇರಬಾರದು. ಕುರಿಯ,ಆಡಿನ ಬಣ್ಣ ಒಂದೇ ಆಗಿರಬೇಕು.ಬಲಿ ಕೊಟ್ಟ ಪ್ರಾಣಿಯದೇಹದಿಂದ ಮಾಂಸವನ್ನಷ್ಟೆ (ಖಂಡ, ಮಾಂಸದ ತುಂಡುಗಳು) ತೆಗೆದುಕೊಂಡು ಉಳಿದ ತಲೆ, ಕರುಳು,ಕಾಲುಗಳನ್ನು ಹುತ್ತದೊಳಗೆ ಇಲ್ಲವೆ ಸಮೀಪ ಹಾಕಬೇಕು. ಅಡಿಗೆ ಮಾಡುವಾಗಿನ ವ್ಯರ್ಥ ಪದಾರ್ಥಗಳನ್ನು ಸಹ ಹುತ್ತದೊಳಗೇ ಸುರಿಯಬೇಕು. ಗೋಧಿಯ ಕಣಕದಿಂದ ಸಣ್ಣಗಾತ್ರದ ಕುದುರೆಯಾಕೃತಿಗಳನ್ನು ಮಾಡಿ ಕಡುಬಿನಂತೆ ಬೇಯಿಸಿ ಸಕ್ಕರೆ ಅಥವಾ ಬೆಲ್ಲವನ್ನು ಬೆರೆಸಿ'ಸಿಹಿ

[illegible]

[illegible]

[illegible]

[illegible]

ಪದಾರ್ಥ'ವನ್ನು ತಯಾರಿಸುತ್ತಾರೆ. ಇನ್ನೊಂದು ಪಾತ್ರೆಯಲ್ಲಿ 'ಫಲಾವು' ತಯಾರಿಸಲಾಗುತ್ತದೆ. ಸಮಾರಂಭದ ಮುಖ್ಯಸ್ಥಳದಲ್ಲಿ ಮೆತ್ತೆಯೊಂದನ್ನು ಹಾಸಿ ಒಂದು ಪಕ್ಕದಲ್ಲಿ ೨೫ ಮಣ್ಣಿನ ತಟ್ಟೆಗಳಲ್ಲಿ ಸಿಹಿ ಪದಾರ್ಥವನ್ನಿಟ್ಟಿರುತ್ತಾರೆ.ಎದುರುಗಡೆ ಇನ್ನೊಂದು ಪಕ್ಕದಲ್ಲಿ ೨೫ ಮಣ್ಣಿನತಟ್ಟೆಗಳಲ್ಲಿ 'ಫಲಾವು' ಬಡಿಸಿರುತ್ತಾರೆ. ಒಂದು ಕಡೆಯ ಪದಾರ್ಥವನ್ನು ಇನ್ನೊಂದು ಕಡೆಗೆ ತೆಗೆದು ಕೊಂಡು ಹೋಗಲೇ ಕೂಡುದು. ಸಮಾರಂಭಕ್ಕೆ ಹಾಜರಾದ ಭಕ್ತರು ಸಿಹಿಪದಾರ್ಥ ತಿನ್ನುವುದನ್ನು ಮುಗಿಸಿಕೊಂಡೇ ಇನ್ನೊಂದು ಪದಾರ್ಥದೆಡೆಗೆ ಹೋಗಬೇಕಾಗುತ್ತದೆ. ಮಣ್ಣಿನ ತಟ್ಟೆಯಲ್ಲಿಯೇ ತಿನ್ನಬೇಕಲ್ಲದೆ ತಿಂದ ಪದಾರ್ಥವು ಮಿಕ್ಕರೆ ಅಲ್ಲಿಯೇ ಬಿಡಬೇಕು. ಹಿತ್ತಾಳೆಯ 'ಹರಿವಾಣ'ದಲ್ಲಿ 'ನೈವೇದ್ಯವನ್ನಾಗಿ' ಸಿಹಿಪದಾರ್ಥ (ಗೋಡೆ) ಮತ್ತು ಪಲಾವುಗಳನ್ನಿಟ್ಟು ಹೂಹಾಕಿ, ಊದು ಹಚ್ಚಿ, ಬುಕ್ಕಿಟ್ಟು (ಅಬೀರ) ಹಾಕಿ, ಲೋಭಾನ (ಧೂಪ) ಹಾಕಲಾಗುತ್ತದೆ. ಊಟ ಮಾಡಿದ ನಂತರವೂ ಮಿಕ್ಕ ಆಹಾರವನ್ನು ಹುತ್ತದಲ್ಲಿ ಚೆಲ್ಲಬೇಕಾಗುತ್ತದೆ. ಈ ಆಚರಣೆಯಲ್ಲಿ ಅಂಗವಿಕಲರು (ಹಲ್ಲು ಮುರಿದವರೂ ಸಹ), ಉಡಿಕೆ ಮಾಡಿಕೊಂಡವರು (ವಿಧವೆ, ವಿದುರರಾಗಿದ್ದು ಪುರ್ನವಿವಾಹ ಮಾಡಿಕೊಂಡವರು) ಭಾಗವಹಿಸುವಂತಿಲ್ಲ.

ಭಿನ್ನ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಸಹಬಾಳ್ವೆ ನಡೆಸುವ ಮುಸ್ಲಿಮರು ತಮ್ಮ ಬದುಕಿನ ಕ್ರಮಗಳ ಮುಖಾಂತರ ಇನ್ನೊಂದು ಸಂಸ್ಕೃತಿಯ ಜೊತೆ ಸಮಾನ ಆಶಯಗಳೊಂದಿಗೆ ಸಾವಯವ ಸಂಬಂಧ ಪಡೆದುಕೊಳ್ಳುವ ನೆಲೆಯಲ್ಲಿ ಸುಧೀರ್ಘ ಕಾಲಾವಧಿಯಲ್ಲಿ ರೂಪುಗೊಂಡ ಇಂತಹ ವಿಶಿಷ್ಟ ಬಗೆಯ ಅಂಶಗಳು 'ಸಾಂಸ್ಕೃತಿಕ ರೂಪಕಗಳಂತಿದ್ದು ಅವು ಎರಡು ಸಂಸ್ಕೃತಿಗಳ ಮಧ್ಯೆದ ಅಂತಃ ಸಂಬಂಧಗಳನ್ನು ಆ ಮೂಲಕ ಸಂಸ್ಕೃತೀಕರಣ ಪ್ರಕ್ರಿಯೆಯನ್ನು ಸೂಚಿಸಸುತ್ತವೆ.

ಅಡಿಟಿಪ್ಪಣಿಗಳು

೧. ಬಿಪಿನ್ ಚಂದ್ರ, ರೋಮಿಲಾ ಥಾಪರ್,

-'ಕೋಮುವಾದ ಮತ್ತು ಭಾರತೀಯ ಇತಿಹಾಸ ಲೇಖನ' ಪು.೩೮

೨. ಇದನ್ನು ವಾಸ್ತವವಾಗಿ ಮಸೀದಿಗಳೆಂದು ಕರೆಯಲಾಗದು ಸ್ಥಳೀಯ ಪರಿಭಾಷೆಯಲ್ಲಿ ಇವನ್ನು 'ಮಸೀದಿಗುಡಿ' 'ಪೀರ್ಲ ಚಾವಡಿ' (ತೆಲುಗು) ಎಂದು ಕರೆಯಲಾಗುತ್ತದೆ. 'ಇಮಾಮ್ ಬರಾಸ್,' ಪಂಚಾಮಕಾನ್, 'ಅಷುರಖಾನ್ 'ಗಳೆಂದು ಕರೆಯುವ ಇವು ಮೊಹರಂನ ಪಂಜಾಗಳು, ತಾಜಿಯಾಗಳನ್ನಿಡುವ ಆಲಯಗಳಾಗಿವೆ.

೩. ಶ್ರೀಪಾದ ಜೋಷಿ, ಅನು; ಡಾ ಹಿರಣ್ಮಯ, 'ಮುಸ್ಲಿಂ ಉತ್ಸವಗಳು ಮತ್ತು ಸಂಸ್ಕಾರಗಳು' ಪು.೨೫

೪. ಈ ಹಾಡು ಹಾಡಿದವರು ಶ್ರೀ ಮತಿ ಹುಸೇನಮ್ಮ, ಕರ್ಚೇಡು ಗ್ರಾಮ, ಬಳ್ಳಾರಿ ತಾಲೂಕು.

೫. ಶ್ರೀಪಾದಜೋಷಿ, ಅನು:ಡಾ॥ ಹಿರಣ್ಮಯ 'ಮುಸ್ಲಿಂಉತ್ಸವಗಳು ಮತ್ತು ಸಂಸ್ಕಾರಗಳು' ಪು. ೩೦

೬. ಅಬ್ದುಲ್ ಹಲೀಮ್ 'ಶರರ್ ' ಅನು: ಪಂಚಾಕ್ಷರೀ ಹಿರೇಮಠ, 'ಪುರಾತನ ಲಕ್ನೋ' ಪು. ೨೮೮

೭. ಮಹಮ್ಮದ್ ಅಲಲುದ್ದೀನ್ -'ಸ್ಟಡಿ ಆಫ್ ದಿ ಕುತುಬ್ ಷಾಹಿ ಕಲ್ಚರ್ ಥ್ರೋದಿ ಪ್ರಿಂಟೆಂಡ್ ಪ್ರೋಟೋ ಉರ್ದು ಮತ್ನವೀಸ್ ಆಫ್ ಗೋಲ್ಕೊಂಡಾ' ಅಪ್ರಕಟಿತ ಪಿ.ಹೆಚ್ .ಡಿ. ಮಹಾ ಪ್ರಬಂಧ. ಪು. ೨೫೧.

೮. ಇಂಡಿಯಾದಲ್ಲಿ ಮುಸ್ಲಿಮೇತರರಿಗೆ ಮದುವೆಯ ಸಂದರ್ಭದಲ್ಲಿ 'ಅರಿಷಿಣ' ಎಷ್ಟು ಪವಿತ್ರ ಹಾಗೂ ಮಹತ್ವದ್ದೋ, ಮುಸ್ಲಿಮರಿಗೂ ಸಹ ಅಷ್ಟೇ ಮಹತ್ವದ್ದಾಗಿದೆ. ಉತ್ತರ ಭಾರತದಲ್ಲಿ ಮುಸ್ಲಿಮರು ಮದುವೆಯ ಸಂದರ್ಭದಲ್ಲಿ 'ಅರಿಷಣ' ಲೇಪಿಸಿದ ಬಟ್ಟೆಯನ್ನು ವಿಜೃಂಬಣೆಯಿಂದ ಮದುಮಗಳ ಮನೆಗೆ ತೆಗೆ ಕೊಂಡುಹೋಗಲಾಗುತ್ತದೆ. ವಿವರಳಿಗೆ ನೋಡಿ: 'ಪುರಾತನ ಲಕ್ನೋ' ಅಬ್ದುಲ್ ಹಲೀಮ್ 'ಶರರ್ ' ಅನು: ಪಂಚಾಕ್ಷರಿ ಹಿರೇಮಠ . ಪು.೧೫೦

೯. **ಗ್ರ್ಯಾಂಡ್ಮರ:** ಗೋವಿನ ಮರ ಎಂದು ಕರೆಯುವ ಇದು ಸೂಫಿಸಂತನೊಬ್ಬನು ತನ್ನ ಅನುಯಾಯಿಗೆ ಆಧ್ಯಾತ್ಮಿಕ ಉತ್ತರಾಧಿಕಾರ ನೀಡಿದ ಕುರುಹಾಗಿ ಈ ಮರದ ಕಡ್ಡಿಯನ್ನು ನೀಡಲಾಗುತ್ತದೆ. ಸಾಮಾನ್ಯವಾಗಿ ಈ ಭಾಗದ ಹಳ್ಳಿಗಳಲ್ಲಿ ದರ್ಗಾಕಟ್ಟೆಗಳೆಂದು ಕರೆಯುವವರೆಲ್ಲಾ ಬಹುತೇಕ ಈ ಮರವನ್ನೊಳಗೊಂಡು ಕಟ್ಟಿದ ಕಟ್ಟೆಗಳಾಗಿವೆ.

ಅಧ್ಯಾಯ : ೭

ಸಮಾರೋಪ

ಪ್ರಸ್ತುತ ವರ್ತಮಾನದಲ್ಲಿ ಇಂಡಿಯಾದಲ್ಲಿ ಧರ್ಮವನ್ನು ಆಧಾರವಾಗಿಟ್ಟುಕೊಂಡು 'ಹಿಂದೂ - ಮುಸ್ಲಿಂ' ಎಂಬುದಾಗಿ ಎರಡು ಜನಾಂಗಗಳನ್ನು ಪ್ರತ್ಯೇಕಿಸಿ ನೋಡುವ ದೃಷ್ಟಿಕೋನವೊಂದು ಪ್ರಚಲಿತದಲ್ಲಿದೆ. ಹಾಗೆಯೆ ಸೀಮಿತ ಮತಸಂಬಂಧಿ ಆಚರಣೆಗಳನ್ನು ವೈಭವೀಕರಿಸಿ ಸಾಂಸ್ಕೃತಿಕವಾಗಿಯೂ ಭಿನ್ನತೆಯನ್ನು ಸೂಚಿಸುವುದು ಎಷ್ಟರ ಮಟ್ಟಿಗೆ ಸರಿ ? ವಾಸ್ತವವಾಗಿ ಇಂಡಿಯಾದ ಮುಸ್ಲಿಮರು ಸಾಂಸ್ಕೃತಿಕವಾಗಿ ಭಿನ್ನದೇಶ ,ಕಾಲ ಸಂದರ್ಭಗಳನ್ನು ಪ್ರತಿನಿಧಿಸುತ್ತಾರೆಯೇ ? ಎಂದು ಪ್ರಶ್ನಿಸಿಕೊಂಡಾಗ ಈ ರೀತಿಯ ವರ್ಗೀಕರಣವು ಅಸಮಂಜಸವಾಗಿದ್ದು ತಪ್ಪಾದ ನೆಲೆಯಿಂದ ಮೂಡಿದೆಯೆಂಬುದನ್ನು ಅರ್ಥಮಾಡಿಕೊಳ್ಳಬಹುದು. ಹಾಗೆಯೇ ನಾವೀಗ 'ಹಿಂದೂ' ಎಂದು ಕರೆಯಲ್ಪಡುವ ಪದವೂ ಸಹ 'ಧರ್ಮ' ಸೂಚಕ ಪದವಂತೂ ಅಲ್ಲವೇ ಅಲ್ಲ. ಸಹಸ್ರಾರು ಕುಲ, ಮತ, ಗೋತ್ರಗಳ ಮಿಶ್ರಣವನ್ನು 'ಧಾರ್ಮಿಕ' ಏಕಸೂತ್ರತೆಯಲ್ಲಿ ಬಂಧಿಸಿವುದು ಅವಾಸ್ತವಿಕ ಸಂಗತಿಯಾಗಿದೆ. ಆದಕ್ಕಾಗಿಯೇ ಈ ಅಧ್ಯಯನದಲ್ಲಿ 'ಹಿಂದೂ' ಎಂಬ ಪದವನ್ನು ಬಳಸಬೇಕಾದ ಕಡೆಯಲ್ಲೆಲ್ಲ ಪ್ರಜ್ಞಾಪೂರ್ವಕವಾಗಿಯೇ 'ಮುಸ್ಲಿಮೇತರರು' ಎಂಬ ಪದವನ್ನು ಬಳಸಲು ಪ್ರಯತ್ನಿಸಲಾಗಿದೆ.

ನಮ್ಮ ಸಾಂಸ್ಕೃತಿಕ ಪರಂಪರೆಯ ಸುಧೀರ್ಘ ವಿಕಾಸ ಕ್ರಮದಲ್ಲಿ ಬ್ರಿಟೀಷ್ ವಸಾಹತು ಶಾಹಿ ಕಾಲವು ಅತ್ಯಂತ ಸಂದಿಗ್ಧ ಮತ್ತು ಸಾಂಸ್ಕೃತಿಕ ತಲ್ಲಣಗಳಿಂದ ಕೂಡಿದ ಕಾಲಾವಧಿಯಾಗಿದೆ. ಈ ಕಾಲಾವಧಿಯಲ್ಲಿ ಧಾರ್ಮಿಕ ಮೂಲ ಭೂತವಾದ, ರಾಷ್ಟ್ರೀಯತವಾದ, ಧಾರ್ಮಿಕ ಸುಧಾರಣೆಗಳಂತಹ ಸಂಘಟನೆಗಳು ಕಾಣಿಸಿಕೊಂಡವು. ಸ್ವಾತಂತ್ರ್ಯ ಹೋರಾಟದ ಅಗತ್ಯವಾಗಿ ಹುಟ್ಟಿಕೊಂಡ ರಾಷ್ಟ್ರೀಯತವಾದವು. ಇಂಡಿಯಾದ ಪರಂಪರೆ, ಸಂಸ್ಕೃತಿಯನ್ನು ಅರ್ಥೈಸಲು ಆಗತಾನೇ ಕಣ್ಣು ಬಿಡುತ್ತಿದ್ದ ದುರುದ್ದೇಶ ಪೂರಿತ ಬ್ರಿಟೀಷ್ ಚರಿತ್ರೆ ಮೊದಲಾದ ಶಾಸ್ತ್ರಗಳನ್ನು ಬಳಸಿಕೊಂಡಿತು. ಆವರೆಗೆ ಯಾವುದೇ ಪೂರ್ವಗ್ರಹಗಳಿಲ್ಲದೆ ಸೌಹಾರ್ದಯುತವಾಗಿ ಬದುಕುತ್ತಿದ್ದ ಜನರ ನಡುವೆ ಧರ್ಮ, ಸಂಸ್ಕೃತಿ, ರಾಷ್ಟ್ರೀಯತೆಯ ಹೆಸರಲ್ಲಿ ವಿಷ ಹರಡಲಾಯಿತು. ಹಿಂದೂ - ಮುಸ್ಲಿಂ ಎಂಬ ಎರಡು ವರ್ಗಗಳನ್ನು ವಿಭಜಿಸಿಕೊಂಡು ಅದಕ್ಕೆ ಪೂರಕವಾದ ಪರಂಪರೆ,ಸಂಸ್ಕೃತಿಯ ವಿವರಗಳನ್ನು ಹೆಕ್ಕಿ ತೆಗೆದು ಜೋಡಿಸಲು ಪ್ರಯತ್ನಿಸಲಾಯಿತು. ಶತಶತಮಾನಗಳ ಹಿಂದೂ - ಮುಸ್ಲಿಂ ಸಾಂಸ್ಕೃತಿಕ ಪರಂಪರೆಯನ್ನು ಅಖಂಡವಾಗಿ ಇಂಡಿಯಾದ ಸಾಂಸ್ಕೃತಿಕ ಚೌಕಟ್ಟಿನಲ್ಲಿ

ಗ್ರಹಿಸದೆ ಕೇವಲ ಮತೀಯ ದೃಷ್ಟಿಕೋನದಿಂದ ವ್ಯಾಖ್ಯಾನಿಸಲು ಹೊರಡಲಾಯಿತು.

ಇಂತಹ ಸಂಕೀರ್ಣ ಸ್ಥಿತಿಯಲ್ಲಿ ಕಾಣಿಸಿಕೊಂಡ ಮತೀಯ ಸಂಘಟನೆಗಳು ಸಹಜವಾಗಿಯೇ ವಿಕೃತವಾಗಿ ತಿರುಚಲ್ಪಟ್ಟ, ಪರಂಪರೆ, ಸಂಸ್ಕೃತಿಯ ವ್ಯಾಖ್ಯಾನಗಳಿಗೆ ಜೋತು ಬಿದ್ದು ಪರಸ್ಪರರ ಮೇಲೆ ದ್ವೇಷ ಕಾರತೊಡಗಿದ್ದವು.

ಸುದೀರ್ಘ ಕಾಲದ ಸಹಬಾಳ್ವೆ, ಭಕ್ತಿಪಂಥದ ಕಾಣ್ಕೆ, ಮತಾಂತರೀಕರಣ, ಸಂಸ್ಕೃತೀಕರಣ ಮುಂತಾದ ಪ್ರಕ್ರಿಯೆಗಳ ಮೂಲಕ ಸಂತರಿಸಿಕೊಂಡಿದ್ದ ಸಾಂಸ್ಕೃತಿಕ ಸಮನ್ವಯತೆಯನ್ನು ಬದಿಗಿಟ್ಟು ಮರುದ್ವೇಶ ಪೂರಿತ ಮತೀಯ ಭಾವನೆಗಳ ಅಮಲಿಗೆ ಸಿಕ್ಕಿಕೊಳ್ಳಬೇಕಾಯಿತು. ಸಂಸ್ಕೃತಿಯ ಬೇರುಗಳನ್ನು ಹುಡಕ ಹೊರಟು ತಪ್ಪು ಗ್ರಹಿಕೆಗಳ ಭ್ರಾಮಕ ಜಗತ್ತಿನಲ್ಲಿ ಬದುಕುತ್ತಿದ್ದ ಮತೀಯ ಸಂಘಟನೆಗಳ, ಧಾರ್ಮಿಕ ಮೂಲ ಭೂತವಾದಿ ವರ್ಗಕ್ಕೆ ವರ್ತಮಾನದ ವಾಸ್ತವಗಳು ಅರ್ಥವಾಗುತ್ತಿರಲಿಲ್ಲ. ಇಂತಹದೊಂದು ಸ್ಥಿತಿಗೆ ಬಹುಮಟ್ಟಿಗೆ ಕಾರಣವಾಗಿರುವಂತೆ ವಸಾಹಸುಶಾಹಿ ಕಾಲಘಟ್ಟದ ಆಧುನಿಕ ಶಾಸ್ತ್ರ, ಪರಿಜ್ಞಾನಗಳಿಗೆ ಪಕ್ಕಾಗಿ ಇಂಡಿಯಾದ ಸಮಾಜವು ತನ್ನ ಪರಂಪರೆಯೊಂದಿಗೆ ಅರ್ಥಪೂರ್ಣ ಸಮನ್ವಯವನ್ನು ಸಾಧಿಸಿಕೊಳ್ಳಲಾಗದೆ ಇಂತಹ ಸಾಂಸ್ಕೃತಿಕ ತಲ್ಲಣಗಳಿಗೆ ತಪ್ಪುಗ್ರಹಿಕೆಗಳಿಗೆ ಒಳಗಾಗಬೇಕಾಯಿತು. ಇಂತಹ ಸಂದರ್ಭದಲ್ಲಿ ಕಾಣಿಸಿಕೊಂಡ ಮತೀಯ ಸಂಘಟನೆಗಳಾಗಲಿ, ಧಾರ್ಮಿಕ ಮೂಲಭೂತವಾದವಾಗಲಿ ಇದಕ್ಕೆ ಹೊರತಾಗಿರಲಿಲ್ಲ. ಹಾಗಾಗಿ ಇವ್ಯಾವು ನಮ್ಮ ಪರಂಪರೆಯ ಜೊತೆ ಸಾವಯವ ಸಂಬಂಧ ಪಡೆಮಕೊಳ್ಳಲಾಗದೆ ಮತೀಯ ಮುಖವಾಡಗಳನ್ನು ಧರಿಸಬೇಕಾಯಿತು.

ವರ್ತಮಾನದಲ್ಲಿ ತಿರುಚಲ್ಪಟ್ಟ ನಮ್ಮ ಚರಿತ್ರೆ, ಮತ್ತು ಸಾಂಸ್ಕೃತಿಕ ಪರಂಪರೆಯ ವ್ಯಾಖ್ಯಾನಗಳು ಏನನ್ನು ಸೂಚಿಸುತ್ತವೆ ? ಮತ್ತು ವಾಸ್ತವದಲ್ಲಿ ಕಂಡು ಬರುವ ನಮ್ಮ ಸಾಂಸ್ಕೃತಿಕ ಆಶಯಗಳು ಸ್ಪಷ್ಟ ಪಡಿಸುವುದೇನು ? ಎಂಬುದನ್ನು ವಸ್ತು ನಿಷ್ಠವಾಗಿ ಅರಿಯಲು ಲಿಖಿತ ಮೂಲಗಳನ್ನು ಪ್ರಧಾನವಾಗಿ ಲಕ್ಷಿಸದೆ ಆಚರಣಾತ್ಮಕ ವಿವರಗಳಿಗೆ ಹೋಗಲಾಗಿದೆ. ಇಲ್ಲಿ ಚರಿತ್ರೆ ಮತ್ತು ಸಾಂಸ್ಕೃತಿಕ ವ್ಯಾಖ್ಯಾನಗಳಿಗೆ ಸಂಬಂಧ

ಪಟ್ಟಿ ವಿವರಗಳನ್ನು ಪೂರ್ತಿಯಾಗಿ ಕಡೆಗಣಿಸಲಾಗಿದೆಯೆಂದು ಇದರರ್ಥವಲ್ಲ. ಇವನ್ನು ಪೂರಕವಾಗಿಟ್ಟುಕೊಂಡು ವಾಸ್ತವದ ಸಾಂಸ್ಕೃತಿಕ ಆಶಯಗಳಿಗೊಂದು ಸುಸಂಬದ್ಧವಾದ ಚಾರಿತ್ರಿಕ ನೆಲೆಗಟ್ಟನ್ನು ಶೋಧಿಸಿ ಸತ್ಯಸಂಗತಿಗಳನ್ನು ಅರಿಯಲು ಪ್ರಯತ್ನಿಸಲಾಗಿದೆ. ಇಂಡಿಯಾದಂತಹ ವರ್ಣ ವ್ಯವಸ್ಥೆಯ ವಿಶಿಷ್ಟ ಸಮಾಜಿಕ ಸಂರಚನೆಯಲ್ಲಿ ಧರ್ಮವು ಸಮುದಾಯವೊಂದಕ್ಕೆ ತನ್ನ ಸಂಪ್ರದಾಯ ಶೀಲತೆಯ ಮೂಲಭೂತ ಗುಣಗಳ ಮೂಲಕ ನಿರ್ಬಧಕ್ಕೊಳಪಡಿಸುವುದು ಕಷ್ಟದ ಸಂಗತಿಯಾಗಿದೆ. ವಾಸ್ತವಿಕವಾಗಿ 'ಇಸ್ಲಾಂ' ನಂತಹ ಸಾಂಸ್ಥಿಕ ಧರ್ಮವೊಂದು ಹೇರಲ್ಪಡುವ ಧಾರ್ಮಿಕ ವಿಧಿ, ಕಟ್ಟಳೆಗಳು ಮತ್ತು ಜೀವನ ವಿಧಾನವನ್ನು ಪ್ರಭಾವಿಸುವಂತಹ ನಿಯಮ, ನಿಬಂಧನೆಗಳ ನಡುವೆಯೂ ಅದರ ಸಂಪ್ರದಾಯಕತೆಯನ್ನು ಮೀರಿ ಮುಸ್ಲಿಮೇತರ ವರ್ಗದೊಂದಿಗೆ ಹೊಸತೊಂದು ಜೀವಂತಿಕೆಯನ್ನು ಅನ್ವೇಷಿಸಲು ಪ್ರಯತ್ನಿಸುವ 'ಉರುಸು'.'ಮೊಹರಂ' ನಂತಹ ಪ್ರಕ್ರಿಯೆಗಳನ್ನು ವಿಶ್ಲೇಷಿಸುವುದರ ಮುಖಾಂತರ ನಮ್ಮ ಸಾಂಸ್ಕೃತಿಕ ಬಾಂಧವ್ಯದ ಸ್ವರೂಪವನ್ನು ಅರಿಯಲು ಪ್ರಯತ್ನಿಸಲಾಗಿದೆ.

ಕರ್ನಾಟಕ ಮತ್ತು ಆಂಧ್ರದ ಗಡಿಭಾಗಗಕ್ಕೆ ಸಂಬಂಧಿಸಿದ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿನ ಸೂಫಿಗಳು, ತತ್ವತದಕಾರರು, ಉರುಸು, ಮೊಹರಂ ಆಚರಣೆಗಳನ್ನು ಅಧ್ಯಯನ ಮಾಡುವುದರ ಮುಖಾಂತರ ನಮ್ಮ ಸಾಂಸ್ಕೃತಿಕ ಪರಂಪರೆಯ ವಿಕಾಸದ ಅರ್ಥಪೂರ್ಣ ನೆಲೆಗಳನ್ನು ಕಂಡುಕೊಳ್ಳಲುಯತ್ನಿಸಲಾಗಿದೆ. ನಿದರ್ಶನಕ್ಕೆ 'ಮೊಹರಂ' ಆಚರಣೆಯ ಕುರಿತಾದ ಈ ಅಧ್ಯಯನದ ವಿಶ್ಲೇಷಣೆ, ವ್ಯಾಖ್ಯಾನ ಮತ್ತು ಕಡೆಯಲ್ಲಿ ಬರುವ ತೀರ್ಮಾನಗಳನ್ನು ಗಮನಿಸಬಹುದು. 'ಮೊಹರಂ' ಶೋಕಾಚರಣೆಯಾದರೂ ಅದು ಉತ್ಸವದ ರೂಪ ನಡದು ಕೊಂಡು ಮುಸ್ಲಿಂ ಮತ್ತು ಮುಸ್ಲಿಮೇತರರಿಬ್ಬರಿಂದಲೂ ಉತ್ಸಾಹದಿಂದ ಆಚರಿಸಲ್ಪಡುವ ಆಚರಣೆಯಾಗಿ ಮಾರ್ಪಟ್ಟಿದೆ. ಮುಸ್ಲಿಮೇತರರಲ್ಲಿ ಇದು ಯುಗಾದಿ ದೀಪಾವಳಿಗಿಂತಲೂ ಮಹತ್ವದ ಆಚರಣೆಯಾಗಿದೆ. 'ಮೊಹರಂ'ನ ಈ ಜನಪ್ರಿಯತೆಯು ಏನನ್ನು ಸೂಚಿಸುತ್ತದೆ ? ಮತ್ತು ಅದು ಶೋಕಾಚರಣೆಯಾಗಿದ್ದೂ ಹಬ್ಬವಾಗಿ ಆಚರಿಸಲ್ಪಪಡಲು ಕಾರಣಗಳೇನು ? ಈ ಆಚರಣೆಯು ಭಕ್ತಿಪಂಥದ ಚಳುವಳಿಗಳ ಕಾಲದಲ್ಲಿ ಇಂಡಿಯಾದಲ್ಲಿ ಪ್ರಚಲಿತಕ್ಕೆ ಬಂದಿತೆ ? ಮತ್ತು ಏಕೆ ಮುಸ್ಲಿಮೇತರರು ಮೊಹರಂನಲ್ಲಿ

ಪಾಲ್ಗೊಳ್ಳುತ್ತಾರೆಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಯತ್ನಿಸಲಾಗಿದೆ.

ಉರೂಸ್ ನಿರ್ದಿಷ್ಟ ಸಂತನ ಉಪದೇಶ ಮತ್ತು ಆಧ್ಯಾತ್ಮಿಕ ಆಚರಣೆಗಳ ಫಲವಾಗಿ ಆತನ ಅನುಯಾಯಿ ಭಕ್ತ ಪರಂಪರೆಯಿಂದ ಉಂಟಾದ ಪ್ರಕ್ರಿಯೆಯಾಗಿದ್ದು ಅದಕ್ಕೊಂದು ತಾತ್ವಿಕ, ಸಾಂಸ್ಕೃತಿಕ ನೆಲೆಗಟ್ಟಿದೆಯೆಂದು ಸ್ಪಷ್ಟವಾಗಿ ಹೇಳಬಹುದು. ಆದರೆ ಇರಾಕ್ ನ 'ಕರ್ಬಲಾ' ಮೈದಾನದಲ್ಲಿ ಘಟಿಸಿದ ದುರಂತ ಘಟನೆಯು ಇಂಡಿಯಾದ ಮುಸ್ಲಿಮೇತರ ವರ್ಗಗಳಲ್ಲಿ ಆಚರಣಾತ್ಮಕ ಅಭಿವ್ಯಕ್ತ ಪಡೆಯುವುದುಅಭಾಸಕರವಲ್ಲವೆ ? ಎಂಬ ಪ್ರಶ್ನೆಯು ಕಾಡುತ್ತದೆ. ಆದರೆ ಇದಕ್ಕೆ ಎರಡು ಸಮರ್ಥನೆಗಳನ್ನು ಕೊಡಬಹುದು. ಮೊದಲನೆಯದಾಗಿ ಕರ್ಬಲಾದಂತಹ 'ಇಸ್ಲಾಂ'ನ ಆಂತರಿಕ ಸಂಘರ್ಷಗಳ ಸ್ಪಷ್ಟ ತಿಳಿವು, ಅಂದರೆ ಇಸ್ಲಾಂನ ಮುಸ್ಲಿಮೇತರ ವರ್ಗಕ್ಕಿದ್ದು ಅದು ಪ್ರಜ್ಞಾಪೂರ್ವಕವಾಗಿ ಆತ್ಮ ಬಲಿದಾನದ ಧಾರ್ಮಿಕ ವ್ಯಕ್ತಿಗಳಿಗೆ ಗೌರವ ಸೂಚಿಸುತ್ತಿರಬೇಕು. ಎರಡನೆಯದಾಗಿ ಸುದೀರ್ಘ ಕಾಲಾವಧಿಯಲ್ಲಿ ಮುಸ್ಲಿಂರೊಂದಿಗೆಸಹಬಾಳ್ವೆ ನಡೆಸುತ್ತಿದ್ದ ಮುಸ್ಲಿಮೇತರರು ಅವರ ಅನುಕರಣೆಯಿಂದಾಗಿ ಕೇವಲ ಮೌಢ್ಯಾಚರಣೆಯಾಗಿ 'ಪಂಜಾ'ಗಳಿಗೆ 'ತಾಜಿಯಾ'ಗಳಿಗೆ ಪೂಜೆಸಲ್ಲಿಸುವ ಪರಿಪಾಠಬೆಳೆಸಿಕೊಂಡಿರಬೇಕು.

ಆದರೆ ಮೇಲಿನ ಕಾರಣಗಳು ಸಂಪೂರ್ಣವಾಗಿ ನಿಜವಲ್ಲ. ಮೊಹರಂ ಮುಸ್ಲಿಮೇತರರ ಧಾರ್ಮಿಕ ಜೀವನದ ಭಾಗವಾದುದರ ಕುರಿತು ಕೆಲವು ಅಂಶಗಳನ್ನು ಅವು ಸ್ಪಷ್ಟ ಪಡಿಸುತ್ತವೆ. ಇಂಡಿಯಾದಲ್ಲಿ ಮುಸ್ಲಿಂ ರಾಜ್ಯಸತ್ತೆಯನ್ನು ಸ್ಥಾಪಿಸಿ ಮತಾಂತರದ ಮೂಲಕ 'ಇಸ್ಲಾಂ' ಅನ್ನು ಹರಡುವುದಕ್ಕಿಂತಲೂ ಹೇಗಾದರೂ ಮಾಡಿ ದೇಶವನ್ನಾಳಬೇಕೆಂಬ ಉತ್ಕಟಾಪೇಕ್ಷೆ ಹೊಂದಿದ್ದ ಸುಲ್ತಾನರಿಗಿಂತ ಭಿನ್ನವಾಗಿ ಸೂಫಿಗಳು ತಮ್ಮ ಆಧ್ಯಾತ್ಮಿಕ ಚಟುವಟಿಕೆಗಳಿಂದ 'ಇಸ್ಲಾಂ' ಅನ್ನು ಜನಪ್ರಿಯಗೊಳಿಸಿದರು. ಸೂಫಿ ಕೇಂದ್ರಗಳತ್ತ ಆಕರ್ಷಿತರಾದ ಅಸಂಖ್ಯಾತ ಮುಸ್ಲಿಮೇತರರು ಸೂಫಿಗಳ ಅನುಯಾಯಿಗಳಾಗಿ ಸೂಫಿ ಆಧ್ಯಾತ್ಮಿಕ ನಂಬಿಕೆ, ಆಚರಣಾತ್ಮಕ ಸ್ವರೂಪದಿಂದಾಗಿ 'ಇಸ್ಲಾಂ'ನ ನಂಬಿಕೆ ಮತ್ತು ಜೀವನ ಪದ್ಧತಿಯನ್ನು ರೂಪಿಸಿಕೊಳ್ಳಬೇಕಾದುದರಿಂದ ಅನಿವಾರ್ಯವಾಗಿ ಮುಸ್ಲಿಮರಾಗಬೇಕಾಯಿತು. ಇಲ್ಲಿ ಸೂಫಿಗಳಿಂದಾಗಲಿ ರಾಜ್ಯಾಧಿಕಾರದ ಮೂಲಕವಾಗಲಿ ಒತ್ತಾಯದ ಮುಖಾಂತರ ನಡೆದ 'ಮತಾಂತರ' ಇದಾಗಿರದೆ ಕೇವಲಮುಸ್ಲಿಮೇತರರು ಸೂಫಿ ಆಧ್ಯಾತ್ಮಿಕ

ಪರಂಪರೆಯೊಂದಿಗೆ ಗುರುತಿಸಿಕೊಂಡ ಫಲವಾಗಿ ಇಂತಹ ಪ್ರಕ್ರಿಯೆಯು ಹಂತ ಹಂತವಾಗಿ ನಡೆಯಿತು. ಈ ವಿವಿಧ ಹಂತಗಳಲ್ಲಿ 'ಮೊಹರಂ' ಮುಸ್ಲಿಂ ಮತ್ತು ಮುಸ್ಲಿಮೇತರ ವರ್ಗಗಳಲ್ಲಿ ಸಮಾನ ಆಸಕ್ತಿ ಹುಟ್ಟಿಸುವ ಆಚರಣೆಯಾಯಿತು. ಸ್ಪಷ್ಟವಾಗಿ ಹೇಳುವುದಾದರೆ 'ಮೊಹರಂ' ಮುಸ್ಲಿಮೇತರರ 'ಇಸ್ಲಾಂ'ನಂತಹ ಆಕರ್ಷಣೆಯ ವಿವಿಧ ಮಜಲುಗಳಲ್ಲಿ ರೂಪುಗೊಂಡ ಆಚರಣೆಯಾದುದರಿಂದ ಅದು 'ಸಾಂ'ಸ್ಕೃತೀಕರಣ'ದ ಕುರುಹುಗಳನ್ನು ದಾಖಲಿಸಿಕೊಂಡಿದೆ. ಇಂತಹ ಕುರುಹುಗಳು ನಮ್ಮ ವರ್ತಮಾನದ ಸಾಂಸ್ಕೃತಿಕ ಗೊಂದಲಗಳಿಗೆ ಸಮರ್ಪಕವಾದ ಉತ್ತರವನ್ನು ನೀಡಬಲ್ಲವಾಗಿವೆ.

ಇಂದು ವರ್ತಮಾನದಲ್ಲಿ ಆಧುನಿಕ ವಿದ್ಯಮಾನಗಳೊಂದಿಗೆ ನಮ್ಮ ಸಾಂಸ್ಕೃತಿಕ ಬದುಕು ವಿಚ್ಛಿದ್ರಗೊಳ್ಳುತ್ತಿದ್ದು, ಬದುಕಿನ ಸ್ಫೂರ್ತಿ ಮತ್ತು ಜೀವಸೆಲೆಗಳಿಗಾಗಿನ ಹುಡುಕಾಟ ನಿರಂತರವಾಗಿದೆ. ಇಂತಲ್ಲಿ ನಮ್ಮ ಪರಂಪರೆಯೊಂದಿಗಿನ ಉನ್ನತ ಮೌಲ್ಯಗಳು, ಬದುಕಿನ ಅರ್ಥ ಮತ್ತು ನಿರರ್ಥಕಗಳ ಆತ್ಮಿಕ ಅರಿವಿನೊಂದಿಗೆ ಹುಟ್ಟಿಕೊಂಡ ಸಾಂಸ್ಕೃತಿಕ ಅಂತರ್ ಮಥನದ ಅಪೂರ್ವ ಅರಿವಿನೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳಬೇಕಾದ ಅಗತ್ಯ ತುಂಬಾ ಇದೆ. ೧೨ನೆಯ ಶತಮಾನದ ವಚನಕಾಲದ ಸಾಂಸ್ಕೃತಿಕ ಆಶಯಗಳು ಪ್ರಸ್ತುತದಲ್ಲೂ ನಮ್ಮ ಗೊಂದಲಗಳಿಗೆ ಉತ್ತರ ನೀಡಬಲ್ಲವು ಮತ್ತು ಬದುಕನ್ನು ನಿದೇಶಿಸಬಲ್ಲವು ಎಂದಾದಾಗ, ಇಂಡಿಯಾದಲ್ಲಿನ 'ಇಸ್ಲಾಂ'ನ ಸಂಸರ್ಗದಿಂದ ಹುಟ್ಟಿಕೊಂಡ ಹೊಸ ನಂಬಿಕೆ, ಜೀವನ ವಿಧಾನವನ್ನೊಳಗೊಂಡ ಅರಿವಿನ ಸ್ಮೃತಿಕೋಶವನ್ನು ನಾವು ಎಷ್ಟರ ಮಟ್ಟಿಗೆ ಅರಿತವರಾಗಿದ್ದೇವೆ? ಎಂಬ ಪ್ರಶ್ನೆ ಮೂಡುತ್ತದೆ.

ವರ್ತಮಾನದ ಸಾಂಸ್ಕೃತಿಕ ಆಶಯಗಳ ಮುಖೇನ ನಾವು ಗತದ ಇಂತಹ ಅರಿವಿನೊಂದಿಗೆ ಸಂಬಂಧ ಪಡೆಯುವ ಪ್ರಯತ್ನದ ಫಲವೇ ಈ 'ಅಧ್ಯಯನ'ವಾಗಿದೆ. ಇನ್ನೂ ಈ ಕ್ಷೇತ್ರದಲ್ಲಿ ಮಾಡಬಹುದಾದ ಕೆಲಸ ಅಪಾರವಾಗಿದೆ. ಸೂಫಿಗಳು ಮತ್ತು ಮುಸ್ಲಿಮೇತರರು ಧಾರ್ಮಿಕ, ಆಧ್ಯಾತ್ಮಿಕ, ಅನುಭಾವಿಕ ನೆಲೆಗಳಲ್ಲಿ ಒಂದಾದ ಪ್ರಕ್ರಿಯೆ ಮತ್ತು ಇಂತಹ ಸಾಂಸ್ಕೃತಿಕ ಒಳಗೊಳ್ಳುವಿಕೆ ಮತ್ತು ಸಂಘರ್ಷದ ವಿವರ ವಿವರಗಳನ್ನೂ ಒಳಗೊಂಡ 'ದಖನಿ' ಉರ್ದು, ಪರ್ಶಿಯನ್ ಭಾಷೆಯಲ್ಲಿರುವ ಸಾಹಿತ್ಯ ಕೃತಿಗಳು, ದಾಖಲೆಗಳ ವ್ಯವಸ್ಥಿತ ಅಧ್ಯಯನ, ಅನುವಾದ, ವಿಶ್ಲೇಷಣೆ ನಡೆಯಬೇಕಾಗಿದೆ.

ಅನುಬಂಧ-೧

ಮೊಹರಂ ಗೀತೆಗಳು

ಒಂದು

ಒಂಟೇಲೆ ಯರ್ರಬೀಬಿಕಿ ಎಂದರಮ್ಮಾ ಕೊಡುಕುಲೇ ಸ್ವಾಮಿ ನೀಲಾಭರಣಂ
ಚಿನ್ನ ಕಾಸಿಮ್ ಪೆದ್ದ ಕಾಸೀಮ್ ವಾಳಿದ್ದರೇ ಕೊಡುಕಲೇ
ಚಿನ್ನ ಕಾಸಿಮ್ ಪೆದ್ದ ಕಾಸಿಮ್ ಒಕ್ಕಸಾಲಿಕಿಯೇಸರೇ
ಸೆದುವರಾನ್ನಿ ಸೆದುವಲನ್ನಿ ವಾಳಿದ್ದರೆ ನೇರ್ರಸರೇ
ವಿಧ್ಯಲನ್ನಿ ಯುದ್ದಾಲನ್ನಿ ವಾಳ್ಳು ನೇರ್ರಸರೇ
ದೊಡ್ಡವಾರಿ ಆಡಬಿಡ್ಡಾ ನಿಲಸು ಜಾಬಲು ರಾಸಿನೆದೆ
ಜಾಬಾಯ್ಯನೆ ರಾಸಿನಾವೆ ಕಾಕಿ ಕಾಲಕಿಗಟ್ಟೆನೇ
ಕಾವ್ ಕಾವ್ ಅರಸಿನಾದೇ ಕೊಮ್ಮ ಕಿಂದ ಇಡಸಿನಾದೇ
ಚಿನ್ನ ಕಾಸೀಮ್ ಚೂಸಿನಾಡು ಜಾಬುಲನ್ನಿಚದುವೇನೆ
ಅನ್ನ ರಾರಾ ಪೆದ್ದ ಕಾಸೀಮ್ ಮನಿಕಿ ಪೆಂಡ್ಲಿ ಅಂಟಾರೋ
ಗುರ್ರಾಲು ಇಡಸಿನಾರು ಗುಂಕರಿಂಚಿ ಪೊಯ್ಯಿನಾರೇಒಂಟೀಲೆ
ಯರ್ರ ಬೇಬಿಕಿ ದೊಂಗ ಮನಮುಲೇಸಾರೆ
ದೊಡ್ಡಿವಾರು ಆಡಬಿಡ್ಡಕಿ ದೊಂಗ ಆಕುಲು ಪಂಚರೇ
ದೊಡ್ಡಿವಾರು ಆಡ ಬಿಡ್ಡಕಿ ದೊಂಗ ಸಮ್ಮುಲು ಯೇಸರೇ
ದೊಡ್ಡಿವಾರು ಆಡ ಬಿಡ್ಡಿಕಿ ಸಿಕ್ಕು ಜಡಲು ಯೇಸರೇ
ದೊಡ್ಡಿವಾರು ಆಡ ಬಿಡ್ಡಕಿದೊಂಗ ಕಾಡಗಿ ಕೊಟ್ಬರೇ
ದೊಡ್ಡಿವಾರಿ ಆಡ ಬಿಡ್ಡಕಿ ದೊಂಗ ಗಂದಮು ಕೊಟ್ಬರೇ
ದೊಡ್ಡಿವಾರಿ ಆಡ ಬಿಡ್ಡಕಿ ದೊಂಗ ಪೆಂಡ್ಲಿ ಚೇಸರೇ
ಪೆಂಡ್ಲೈನ ಚೇಸಿನಾರು ಗುರ್ರಾಲು ಯೆಕ್ಕಿನಾರೇ
ಗುರ್ರಾಲು ಯೆಕ್ಕಿನಾರು ಗುಂಕರಿಂಚಿ ಪೊಯ್ಯಿರೇ
ದೊಡ್ಡಿವಾರಿ ಆಡಬಿಡ್ಡ ನಿಲಸಿ ಜಾಬಲು ರಾಸಾರೇ
ಜಾಬೈನೆ ರಾಸಿನಾರೇ ಕಾಕಿ ಕಾಲಕಿ ಕಟ್ಬಿನಾದೇ
ಯೇ ಜಾಬು ತೆರಿಸೇಕಿ ನಾಕೇಮಿ ಲಂಚಮೇ
ಕೂಸೇಟಿ ಗೊಂತಾಕಿ ಕುಚ್ಚುಲು ತೆಪ್ಪಿಂಚನೇ
ಬಿಡ ಪಡೀನ ಸೇನಿಲನ್ನಿಕಿ ಸೆನಗಲ ಯೇಪಿಂಚನೇ
ಸೆನಗಲ ತಿನಿ ಸೈಯ್ಯಿಗೆಡಗಕಿ ಸೆಲಿಮಿಲು ತೀಪಿಂಚನೇ
ನುವ್ ಪೊಯ್ಯಿ ಅಂತವರಕು ಪಂದಲ್ಲೇ ಸಾಗಿಂಚನೇ
ಕಾವ್ ಕಾವ್ ಅರಸಿನಾದೇ ಕೊಮ್ಮಕಿಂದ ಇಡಿಸಿನೇ

ಸಿನ್ನ ಕಾಸೀಮ್ ಚೂಸಿನಾಡೇ ಜಾಬುಲನ್ನಿ ಚದಿವಸೀ
ಅನ್ನರಾರು ಪೆದ್ದ ಕಾಸೀಮು ಮನಕಿಯುದ್ಧಮು ಜರಿಗಿನಾದೇ
ಪಸುಮು ಬಟ್ಟಲು ಇಡವರಾದೇ ಯುದ್ಧಂ ಬಟ್ಲು ತೊಡಗರೇ
ಆಯುಧಾಲು ತೀಸಿನಾರು ನೈಲೋನ ನೂರ್ಯಾರೆ
ಸಿರ ಕುಕ್ಕಲುನಿಡಿಸಿನಾರೆ ಗುರ್ರಾಲು ಎಕ್ಕಿನಾರೇ
ಅಮ್ಮರಾವೆ ಯರ್ರಬೇಬಿ ಮಾಕು ಸೆಲುವುರಿಯ್ಯಮಾ
ಸೆಲವ್ವೆನ ಇಚ್ಚೇಕಿ ನಾಕೇಮಿ ಅನುಮಾನಮೇ
ಅಮ್ಮರಾವೆ ಯರ್ರಬೇಬಿ ಮಾಕು ಸೆದ್ದಿ ಕಟ್ಟಮ್ಮಾ
ಸದ್ದಿ ಕಟ್ಟಕಿ ಗುಡ್ಡಲೇದು ತಾಳಂಡ್ರ ಕೊಡುಕುರಾ
ಸದ್ದಿ ಕಟ್ಟೆ ಗುಡ್ಡಲೇದನಿ ತಾಳಂಡ್ರ ಕೊಡುಕುರಾ
ಸದ್ದಿ ಕಟ್ಟೆ ಗುಡ್ಡಲೇದನಿ ಪಲಕಿತವಿ ತಲ್ಲಿರೋ
ಅಮ್ಮ ರಾವೆ ಯರ್ರಬೀಬಿ ಮಾಕು ಸೆಲುವುಲಿಯ್ಯಮಾ
ಪೈಯೇದಿ ಪೋತಾರು ನಾಕೇಮಿ ಅನುಮಾನಮೇ
ಗ್ಯಾಡ ಮೀದ ಮಲ್ಲೆಸೆಟ್ಟು ಮೇಮು ವೇಸಿ ಪೋತಾಮೆ
ಮಳಗಿಲೋನ ಮಲ್ಲೆ ದೀಪಂ ಮೇಮು ಪೆಟ್ಟಿ ಪೋತಾಮೆ
ಗ್ಯಾಡ ಮೀದ ಮಲ್ಲೆ ಸೆಟ್ಟು ನಲುನಲುಗಿವುಂಟನೇ
ಗುರ್ರಾಲು ಎಕ್ಕಿನಾರು ಗುಂಕುರಿಂಚಿಪೊಯ್ಯರೇ
ಗುಂಕುರಿಂಚಿ ಪೊಯ್ಯಿನಾರು ಬಾಯಿತ್ಯಾಕಿ ಪೊಯ್ಯರೇ
ಅನ್ನರಾರು ಪೆದ್ದ ಕಾಸೀಮ್ ಮನಕು ಯುದ್ಧಮು ಜರಗಿನೋ
ಮುಂದರೊಚ್ಚೆ ದಂಡೇಮಿ ರೆಂಡು ಲಕ್ಷಲ ದಂಡುರೋ
ರೆಂಡು ಲಕ್ಷಲ ದಂಡುನೇಮಿ ರೆಂಡು ಏಟ್ಲಕಿ ನರಿಕಿರೋ
ವೆನುಕೊಚ್ಚೆ ದಂಡೇಮಿ ಮೂಡು ಲಕ್ಷಲ ದಂಡುರೋ
ಮೂಡು ಲಕ್ಷಲ ದಂಡುನೇಮಿ ಮೂಡು ಏಟ್ಲಕಿ ನರಿಕಿರೋ
ವೆನುಕೊಚ್ಚೆ ದಂಡೇಮಿ ಏಡುಲಕ್ಷಲ ದಂಡುರೋ
ಪಾಪಿಷ್ಟು ದಂಡೇಮಿ ಮನಕೊದ್ದು ತಮ್ಮುಡೋ
ಗುರ್ರಾಲು ಇಡಿಸಿನಾರು ಬಾಯಿಲೋಕಿ ಪೊಯ್ಯಿರೇ
ಬಾಯಿಲೋಕಿ ದಿಗಿನಾರು ನೀಳ್ಳೆನ ತಾಗಿರೇ
ಪಾಪಿಷ್ಟ ದಂಡೇಮಿ ಬಾಯಿತಾಕಿ ವಚ್ಚರೀ

ಬಂಗಾರು ಬಲ್ಲೆಲ್ಲೈನ ಬಂಡಕಿಂದ ಡಾಗಿರೇ
ಸುತ ಮುತ್ತ ತಿರಿಗಿನಾರು ದಂಡುಯೆನಿಕ್ಕಿ ಮಳ್ಳಿರೇ
ಗಡ್ಡಮೀದ ತೊಂಡೆ ಬಿಕ್ಕಿ ನೆಕ್ಕಿನೆಕ್ಕಿ ಚೂಸಿನೇ
ನೆಕ್ಕಿ ನೆಕ್ಕಿ ಚೂಸಿನಾದೇ ವೇಲು ಪೆಟ್ಟಿ ಚೂಸಿನಾದೇ
ಚಿನ್ನ ಕಾಸೀಮ್ ಪೆದ್ದ ಕಾಸೀಮ್ ರೆಂಡು ಏಟ್ಲಕಿ ನರಿಕಿರೇ
ರೆಂಡು ಏಟ್ಲಕಿ ನರಿಕಿನಾರು ದಂಡು ಎನ್ನಿಕಿ ಮಳ್ಳಿರೋ

ಆತಡು ಪೆಟ್ಟಿನ ಕುಕ್ಕಾಲೋಚ್ಚಿ
ಆತಡು ಪೆಟ್ಟಿನ ಕುಕ್ಕಾಲೋಚ್ಚಿ
ಆತಡು ರಾಲೇದನ್ನಯ್ಯೇ
ಆತಡು ರಾಲೇದನ್ನಯ್ಯೋ
ಎನಕೊಚ್ಚೇ ದಂಡುಲೊಸ್ತಾಡು ಯೇಡಿವದ್ದೇ ಲಾಲ್ಯಮ್ಮಾ
ಎನ ಕೊಚ್ಚೇ ದಂಡುಲೊಸ್ತಾಡು ಯೇಡಿವದ್ದೇ ಚೆಲ್ಲಿಲೋ

ಆತಡು ಯೆಕ್ಕಿನ ಗುರ್ರಾಲೊಚ್ಚಾ
ಆತಡು ಯೆಕ್ಕಿನ ಗುರ್ರಾಲೊಚ್ಚಾ
ಆತಡು ರಾಲೇದನ್ನಯ್ಯೋ

ಎನಕೊಚ್ಚೇ ದಂಡುಲ ವಸ್ತಾಡು ಯೇಡಿವದ್ದೇ ಲಾಲೆಮ್ಮ
ಎನಕೊಚ್ಚೇ ದಂಡುಲ ವಸ್ತಾಡು ಯೇಡಿವದ್ದೇ ಲಾಲೆಮ್ಮ

ಆತಡು ತೊಡಗಿನ ಬಟ್ಟಾಲೊಚ್ಚೇ
ಆತಡು ತೊಡಗಿನ ಬಟ್ಟಾಲೊಚ್ಚೇ
ಆತಡು ರಾಲೇದನ್ನಯ್ಯೇ

ಎನಕೊಚ್ಚೇ ದಂಡುಲು ವಸ್ತಾಡು ಯೇಡಿವದ್ದೇ ಲಾಲೆಮ್ಮ
ಎನಕೊಚ್ಚೇ ದಂಡುಲು ವಸ್ತಾಡು ಯೇಡಿವದ್ದೇ ಚೆಲ್ಲಿಲೋ

ಒಂಟೀಲೆ ಆಡಬಡ್ಡಿನಿ ನಿಲಸಿ ರಂಡಲು ತೆಂಚಿರೀ
ಒಂಟೀಲಿ ನಿಲಸಿ ರಂಡಲು ತೆಂಚಿರೀ
ಮಳಗಿಲೋನ ಮಲ್ಲೆ ದೀಪಂ ಆರಿ ಆರಿ ಪೊಯ್ಯಿನೇ
ಕಟ್ಟುಮಿಂದ ಮಲ್ಲೆ ಸೆಟ್ಟು ಯೆಂಡಿ ಯೆಂಡಿ ಪೊಯ್ಯಿನೇ

ನಿನು ತಾಳಲೇನಮ್ಮಾ
ನಿನು ತಾಳಲೇನಮ್ಮಾ
ವಾಳ್ಳೆ ತೊಡ್ಯಾಲು ಅರಪಿಬಂದಾಲು

ನಿನು ತಾಳಲೇನಮ್ಮಾ
ವಾಳ್ಳೆ ಸೇತ್ತಾಲು ಸೆರಕು ತುಂಟಾಲು
ನಿನ್ನ ತಾಳಲೇನಮ್ಮಾ

ನಿನು ತಾಳಲೇನಮ್ಮಾ
ವಾಳ್ಳೆ ರಕ್ತಮು ಬೆಲ್ಲಮ್ ಪಾನಕಮು
ನಿನು ತಾಳಲೇನಮ್ಮಾ

ನಿನು ತಾಳಲೇನಮ್ಮಾ
ವಾಳ್ಳೆ ಪೇಗಲು ಲಾಡಿಬಂದಾಲು
ನಿನು ತಾಳಲೇನಮ್ಮಾ

ನಿನು ತಾಳಲೇನಮ್ಮಾ
ಜೊನ್ನಲು ದೆಪ್ಪಿಂಚಿ ಕೊಂದರು ಸೇವಿಂಚಿ
ನಿನು ತಾಳಲೇನಮ್ಮಾ

ನಿನು ತಾಳಲೇನಮ್ಮಾ
ಕಂಚು ಮ್ಯಾಕಾನೆ ತೆಚ್ಚಿ ಕೊಂದರು ಸೇವಿಂಚಿ
ನಿನು ತಾಳಲೇನಮ್ಮಾ

ನಿನು ತಾಳಲೇನಮ್ಮಾ
ಕಂಚು ಮ್ಯಾಕಾನೆ ತೆಚ್ಚಿ ಕೊಂದರು ಸೇವಿಂಚಿ
ನಿನು ತಾಳಲೇನಮ್ಮಾ

ನಿನು ತಾಳಲೇನಮ್ಮಾ
ಐದು ಮಂದಿ ಪಕ್ಕೀರ್ಲಿಕಿ ಪಂಚಿ ಪೆಟ್ಟೆ ತಪ್ಪುಡು
ನಿನು ತಾಳಲೇನಮ್ಮಾ

ನಿನು ತಾಳಲೇನಮ್ಮಾ
ನಿನು ತಾಳಲೇನಮ್ಮಾ
ಯಾಡಾದಿಕೊಕ್ಕದಿನಮು ವಚ್ಚಿ ಪೊಯ್ಯೆ ದಿನಮು

(ತೆಲುಗಿನ ಮೊಹರಂ ನ ಈ ಹಾಡನ್ನು ಸಂಗ್ರಹಿಸಿದುದು ಬಳ್ಳಾರಿ ತಾಲೂಕ್ ವಣೇನೂರುನಲ್ಲಿ ದೊರೆತದ್ದಾಗಿದ್ದು ಶ್ರೀಮತಿ ಲಸುಮಮ್ಮ, ಶ್ರೀಮತಿ ಮರೆಮ್ಮ ಇವರು ಹಾಡಿದ್ದಾಗಿದೆ. ಈ ಹಾಡಿನ ಕನ್ನಡದ ಗದ್ಯಾನುವಾದ ಈ ಕೆಳಗಿನಂತಿದೆ.)

ಅರೇಬಿಯಾದಲ್ಲಿ ಕೆಂಪು ಬೀಬಿಯ ಮಕ್ಕಳು ಸಣ್ಣ ಕಾಸೀಮ್ ಮತ್ತು ದೊಡ್ಡ ಕಾಸೀಮ್ ಎನ್ನುವವರಿದ್ದರು. ಇಬ್ಬರನ್ನು ಒಂದೇ ಶಾಲೆಗೆ ಹಾಕಿದರು. ಓದಲು, ಬರೆಯಲು ಮತ್ತು ಯುದ್ಧ ವಿದ್ಯೆಗಳನ್ನು ಕಲಿತರು. ಯೌವನಕ್ಕೆ ಬಂದಾಗ ಅಂತಸ್ತಿನಲ್ಲಿ ಅವರಿಗಿಂತ ಮೇಲಿನ ವಂಶಸ್ಥರ ಹುಡುಗಿಯರಿಂದ ಪ್ರೇಮ ಪತ್ರಗಳು ಬರತೊಡಗಿದವು. ಪ್ರೇಮ ಪತ್ರಗಳನ್ನು ಕಾಗೆಯ ಕಾಲಿಗೆ ಕಟ್ಟಿ ಕಳುಹಿಸುತ್ತಿದ್ದರು. ಪ್ರೇಮವ್ಯವಹಾರ ಒಂದು ಹಂತಕ್ಕೆ ಬಂದು ಮದುವೆಯಾಯಿತು. ಕುಶಿಯಿಂದ ಕುದುರೆಗಳ ಮೇಲೆ ಹತ್ತಿ ಸವಾರಿ ಮಾಡಿದರು. ಕಾಗೆಗಳಿಗೂ ಕುಶಿಯಾಯಿತು. ಅವು ತಮ್ಮ ಕೆಲಸಕ್ಕೆ ಪ್ರತಿಫಲವಾಗಿ ಕಾಣಿಕೆ ಕೇಳಿದಾಗ ಅವರು ಅವುಗಳ ಕೂಗುವ ಕೊರಳಿಗೆ ಅಲಂಕಾರದ ಕುಚ್ಚು ತಂದು ಕೊಡುವೆವೆಂದು ಮತ್ತು ಅವುಗಳಿಗೆ ತಿನ್ನಲು 'ಅನುಕೂಲವಾಗುವಂತೆ ಬೀಳು ಬಿದ್ದ ಹೊಲಗಳಿಗೆ ನೆಲಗಡಲೆ ಹಾಕಿಸುವುದಾಗಿ' ನೀರು ಕುಡಿಯಲು ಚಿಲುಮೆಗಳನ್ನು ತೋಡಿಸುವುದಾಗಿಯೂ ಆಶ್ವಾಸನೆ ಕೊಟ್ಟರು. ಅಷ್ಟರೊಳಗೆ ತಮಗೆ ಯುದ್ಧ ಸಂಭವಿಸುವುದಾಗಿ ತಿಳಿದುಬಂತು. ಅರಶಿಣ ಬಟ್ಟೆ ಬಿಟ್ಟು ಯುದ್ಧದ ಬಟ್ಟೆ ತೊಟ್ಟರು. ಆಯುಧಗಳನ್ನು ತೆಗೆದು ಹರಿತಗೊಳಿಸಿದರು. ಮುಂದೆ ಬೇಟೆ ನಾಯಿಗಳನ್ನು ಬಿಟ್ಟು. ತಾಯಿಯನ್ನು ಬಲವಂತದಿಂದ ಒಪ್ಪಿಸಿ ಬುತ್ತಿ ಕಟ್ಟಿಸಿಕೊಂಡು ಕುದುರೆ ಹತ್ತಿ ಹೊರಟರು. ಹೋಗುವುದಕ್ಕಿಂತ ಮುಂಚೆ ತಾಯಿ ಅನುಮಾನಿಸಿದಾಗ ಮಕ್ಕಳು ಕಟ್ಟೆಯ

ಮೇಲೆ ಮಲ್ಲಿಗೆಯ ಬಳ್ಳಿ ಮನೆಯೊಳಗೆ ದೀಪ ಮುಡಿಸಿ ಹೋಗುವುದಾಗಿ, ಮಲ್ಲಿಗೆಯ ಬಳ್ಳಿ ಕಂದಿ ಹೋದರೆ, ದೀಪ ಆರಿಹೋದರೆ ತಾವು ಮರಣ ಹೊಂದಿದೆವೆಂದು ತಿಳಿಯಬೇಕು ಎಂದು ಸೂಚಿಸಿ ಕುದುರೆಗಳನ್ನತ್ತಿ ಘೀಕರಿಸಿ ಹೊರಟರು.

ಹೋಗುತ್ತಿರುವಾಗ ತುಂಬಾ ದೂರದ ನಂತರ ತಮ್ಮೆದುರಿಗೆ ಬರುವ ದಂಡು ಎರಡು ಲಕ್ಷದ ದಂಡಾದರೂ ಎರಡೇ ಏಟಿಗೆ ಸಂಹರಿಸಿದರು. ಅದರ ಹಿಂದೆ ಬರುವ ಮೂರು ಲಕ್ಷದ ದಂಡನ್ನೂ ಸಹ ಮೂರೆ ಏಟಿಗೆ ಹೊಡೆದರು. ಅದರ ಹಿಂದೆ ಬರುವ ದಂಡು ಏಳುಲಕ್ಷದ ದಂಡಾಗಿತ್ತು. ಅದು ಕ್ರೂರ ಮತ್ತು ಪಾಪಿಷ್ಟ ದಂಡೆಂದು ಅನುಮಾನಿಸಿ ಅದರ ಸಹವಾಸ ನಮಗೆ ಬೇಡವೆಂದು ಕುದುರೆಗಳನ್ನು ಬಿಟ್ಟು ಬಾವಿಯೊಳಗಡೆ ಇಳಿದರು. ಆಪಾಪಿಷ್ಟ ದಂಡು ಬಾವಿಯ ಸಮೀಪ ಬಂತು. ಅಲ್ಲಿ ಅವರನ್ನು ಕಾಣದೆ ಹಿಂದಿರುಗಿ ಹೋಗುವಾಗ ಬಾವಿಯ ದಂಡೆಯ ಮೇಲೆ ಓತಿಕ್ಯಾತವೊಂದು ತಲೆಯಾಡಿಸುತ್ತ ಇವರೆಡೆ ನೋಡಿತು. ಬೆರಳಿಟ್ಟು ತೋರಿಸುವಂತೆ ಬಾವಿಯೊಳಗಿದ್ದವರನ್ನು ತೋರಿಸಿತು. ಸಣ್ಣಕಾಸೀಮ್ ದೊಡ್ಡ ಕಾಸೀಮ್ ರನ್ನೂ ಎರಡೇ ಏಟಿಗೆ ಕತ್ತರಿಸಿದರು.

ಇತ್ತ ದಾರಿ ಕಾಯುತ್ತಿದ್ದ ಮಡದಿಯರು ಅವರ ಬೇಟೆನಾಯಿಗಳು, ಕುದುರೆಗಳು ಹಿಂದಿರುಗಿದರೂ ಅವರು ಹಿಂದಿರುಗದಿರುವುದನ್ನು ಗಮನಿಸಿದರು. ಅಷ್ಟರಲ್ಲಿ ಅವರು ತೊಟ್ಟ ಬಟ್ಟೆಗಳು ಬಂದವು. ಅದೇ ವೇಳೆಯಲ್ಲಿ ಮನೆಯಲ್ಲಿನ ದೀಪ ಆರಿಹೋಯಿತು. ಕಟ್ಟೆಯ ಮೇಲಿನ ಮಲ್ಲಿಗೆಯ ಬಳ್ಳಿ ಕಂದಿಹೋಯಿತು. ಯುದ್ಧದಲ್ಲಿ ಕಾಸೀಮರು ಮರಣ ಹೊಂದಿದ್ದರಿಂದ ಅವರ ಹೆಂಡತಿಯರ ಕೈ ಬಳೆ ಹೊಡೆದರು. ಕೆಂಪು ಬೀಬಿ ದುಃಖಿಸುತ್ತಾ ಸೊಸೆಯರಿಗೆ ನಾನು ನಿಮ್ಮನ್ನು ಯಾವ ಕಣ್ಣಿನಿಂದ ನೋಡಲಿ ಎಂದು ಪರಿತಪಿಸುತ್ತಾ ಯುದ್ಧರಂಗದಲ್ಲಿನ ಅವರ ಕೈಗಳು ಕಬ್ಬಿನ ತುಂಡುಗಳು, ರಕ್ತವು ಬೆಲ್ಲದ ಪಾನಕವು, ಕರುಳು ಕೊರಳಲ್ಲಿ ಲಾಡಿಯ ಸಂಕೇತಗಳೆಂದು ಹೇಳುತ್ತಾರೆ. ಕುರಿಯನ್ನು ಬಲಿಗೊಟ್ಟು, ಕಂದೂರಿಯನ್ನು ಎಡೆಮಾಡಿ ಸೇವಿಸಬೇಕು ಎಂದು ಬಯಸುತ್ತಾಳೆ. ಅದಕ್ಕಾಗಿಯೆ ಇಂತಹ ಹಬ್ಬ ವರ್ಷಕ್ಕೊಂದು ಸಲ ಬರುತ್ತದೆ. ಪ್ರತಿವರ್ಷ ಕಾಸೀಮರ ಮರಣದ ದಿನ ಅವರ ಸ್ಮರಣೆಯಾಗಲಿ ಎಂದು ಆಶಿಸುತ್ತಾಳೆ. ಇಲ್ಲಿಗೆ ಈ ಕಥನ ಗೀತೆ ಮುಗಿಯುತ್ತದೆ.

ಎರಡು

ಆರುಮಂದಿ ತುರಕರು ಕೂಡಿ ವಾರೆಲಿ ಚಂದಪ್ಪನ ನೋಡಿ
ಗುದ್ದಲಿ ಹಾಕೋ ಸಡಗಾರ ಯಮ ಹೊನ್ನೂರು ಸ್ವಾಮಿ
ಗುದ್ದಲಾಕಾದು ಸಡಗಾರ
ಹತುಮಂದಿ ತುರಕಾರು ಕೂಡಿ ವಾರೆಲಿ ಚಂದಪ್ಪನ ನೋಡಿ
ಹಲಗೀಯ ಸಬೂದ ದಿಮಿದಿಮಿ

ಬಿಳಿ ಕುದುರಿ ಏರಿಕ್ಯಂಡು ನೀನು ಬಾರೊನ್ನೂರು ಸ್ವಾಮಿ
ಮಾಲುದಿ ನನ್ನಾ ಮನಿಯಾಗ
ಮಾಲುದಿಯೇ ನನ್ನ ಮನಿಯಾಗೊನ್ನೂರುಸ್ವಾಮಿ
ಕಂದಾನ ಜವಳಿ ಇಳಿವೇನು
ಕಂದ್ಯಾನೇ ಜವಳಿ ಇಳಿವೇನ್ನೂರುಸ್ವಾಮಿ
ಕಂದಾನ ಮ್ಯಾಲೆ ದಯೆವಿರಲೇ
ಕೆಂಗುದಿರಿ ಏರಿಕ್ಯಂಡು ನೀ ಬಾರೊನ್ನೂರುಸ್ವಾಮಿ
ಕಂದೂರಿ ನನ್ನ ಮನಿಯಾಗ
ಕಂದೂರಿಯೇ ನನ್ನ ಮನಿಯಾಗೊನ್ನೂರುಸ್ವಾಮಿ
ಕಂದಾನ ಜವಳಿ ಇಳಿವೇನು
ಓರಿಯೆಂಡೆ ತಂದು ರಾಮಸಾಲಿಗೆಸರಿಸಿ
ಸಾದಾಮಲ್ಲಿಗೆ ಎಡೆ ಮಾಡೀ ಕೋಲನ್ನು ಕೋಲೆ
ಸಾದಾ ಮಲ್ಲಿಗೆ ಎಡೆ ಮಾಡೊನ್ನೂರುಸ್ವಾಮಿ
ಅಪ್ಪೆನ್ನೂರುಸ್ವಾಮಿಗೆ ಶಿವಪೂಜೇಕೋಲನ್ನ ಕೋಲೆ
ಎತ್ತೀನ ಯೆಂಡೆ ತಂದು ಆವರಿಗೆ ಸಾರಿಸಿ
ಮಚ್ಚುಮಲ್ಲಿಗೆಯೆಡೆ ಮಾಡೀ ಕೋಲನ್ನ ಕೋಲೆ
ಸಾದೀನೆ ಮಲ್ಲಿಗೆಯೆಂತೆ ಮಾಡೆನ್ನೂರುಸ್ವಾಮಿ
ಅಣ್ಣೊನ್ನೂರು ಸ್ವಾಮಿಗೆ ಶಿವಪೂಜೆ ಕೋಲನ್ನಕೋಲೆ
ತೆಳ್ಳಾನ ನೀರಿಗೆ ಬೆಳ್ಳಾನೆಕೊಲ್ಲಿಗೆ
ಗಟ್ಟಿಸಿ ಬಡಿಯಾ ಬಿಸಲಿಗೇ ಕೋಲನ್ನಕೋಲೆ
ಗಟ್ಟಿಸಿ ನಾ ಬಡಿಯೋ ಬಿಸಲೀಗೊನ್ನೂರುಸ್ವಾಮಿ
ವಲ್ಲಿ ಮುಂಡಾಸವಣೆಗ್ಯಾವೊ ಕೋಲನ್ನ ಕೋಲೆ
ಇಟ್ಟೀನ ಕೊಲ್ಲೀಗೆ ತೆಳ್ಳಾನ ನೀರಿಗೆ
ಜಾಡಿಸಿ ಬಡಿಯೊ ಬಿಸಲೀಗೆ ಕೋಲನ್ನಕೋಲೆ
ಜ್ಯಾಡಿಸ್ಯನ್ನಾ ಬಡಿಯೇ ಬಿಸಿಲೀಗೊನ್ನೂರುಸ್ವಾಮಿ
ಹಚ್ಚಡ ಮುಂಡಾಸವಣೆಗ್ಯಾವೊ ಕೋಲನ್ನ ಕೋಲೆ
ಅಪ್ಪ ಅದ್ಯಾನೆಂದು ಇಪ್ಪತ್ತು ಗಾವುದ ಬಂದೆ

ಅಪ್ಪ ಇಲ್ಲಲ್ಲೊ ಗುಡಿಯಾಗೆ ಕೋಲಣ್ಣ ಕೋಲೆ
ಅಪ್ಪ ಇಲ್ಲಲ್ಲೊ ಗುಡಿಯಾಗೊನ್ನೂರು ಸ್ವಾಮಿ
ಲೋಭಾನದಾಗತಿಗ್ಯಾನೆ ಕೋಲಣ್ಣ ಕೋಲೆ
ಲೋಬನಾದೊಗಿಯ್ಯಾಗ ಅಡಗ್ಯಾನೊನ್ನೂರು ಸ್ವಾಮಿ
ಬಾಲನ ಸಂತಾನ ಕೊಡು ನಮಗೇ ಕೋಲಣ್ಣ ಕೋಲೆ
ಅಣ್ಣ ಐದ್ಯಾನೆಂದು ಹನ್ನೊಂದು ಗಾವುದ ಬಂದೆ
ಅಣ್ಣ ಇಲ್ಲಲ್ಲೋ ಗುಡಿಯ್ಯಾಗ ಕೋಲಣ್ಣ ಕೋಲೆ
ಅಣ್ಣ ಇಲ್ಲವಲ್ಲೋ ಗುಡಿಯಾ ಗೊನ್ನೂರು ಸ್ವಾಮಿ
ಬುಕ್ಕಿಟ್ಟು ನ್ಯಾಗಡಿಗ್ಯಾದೆ ಕೋಲಣ್ಣ ಕೋಲೆ
ಅಂದುಳ್ಳ ವಣೇನೂರೆ ಚಂದವುಳ್ಳ ಬಜಾರದಾಗೆ
ಗಂದ ಆರ್ಯಾವೆ ಕೋಲಣ್ಣಕೋಲೆ
ಗಂದಾನೆ ಆರ್ಯಾವೆಲ್ಲ ಗಗನಕ್ಕೊನ್ನೂರುಸ್ವಾಮಿ
ಗುಡೀಲಿಂದರ್ಗಾಕ್ಕೆ ಬರುವಾಗೆ ಕೋಲಣ್ಣ ಕೋಲೆ
ಗುಡೀ ಲಿಂದರ್ಗಾಕ್ಕೆ ಬರುವಾಗೊನ್ನೂರುಸ್ವಾಮಿ
ಇಟ್ಲಿಂಗರುಡಿಗೆ ಸಡಿಲ್ಯಾವೆ ಕೋಲಣ್ಣಕೋಲೆ
(ಈ ಹಾಡು ಹಾಡಿದವರು ಶ್ರೀಮತಿ ದಾಸರ ಮರೆಮ್ಮ, ವಣೇನೂರು, ಬಳ್ಳಾರಿ ತಾಲೂಕ್.)

ಮೂರು

ರಣ ಮೇಲೆ ನಡೆದಾ ಹುಸೇನ್ ಸಾಹೇಬ್
ಪರಮೇಶ್ವರಾಯನ ಮೇಲೆ ಮುನಿದಾ
ಪ್ರಿಯ ಬಾವಾನ್ ಹೆಂಡತೀ ಬಾಳಾ
ಅಡಚಾಳು ಹೇಳುತಾಳೆ ಗಂಡಾಗೆ
ಮಾಯಾದ ಪುರುಷಾ ಸಾಕೀದ ಸಣ್ಣ ಮಕ್ಕಾಳ್
ಸಣ್ಣ ಮಕ್ಕಾಳ್ ಬಿಟ್ಟು ಹೋಗಬೇಡೊ
ಅಯ್ಯೋ ಜಗಳಕ್ಕ ಎಂದೂ ॥ ರಣ ॥

ಕುರುಸೂಮೆ ಜೈನ ಬೀಬಿ ಕೂಡಿ ಅಳುತಾಳೆಅಣ್ಣಾನ ಮೋರೆ ನೋಡಿ

ನಮ್ಮ ತಲೆಯೋ ಮೇಲೆ ಹಾಸ್ತಾನಿಟ್ಟುಹೋಗಬೇಡೊ

ಅಯ್ಯೋ ಜಗಳಕ್ಕೆ ಎಂದೂ || ರಣ ||

ಎಡಗೈಲಿ ಡಾಲು ಫಿರಂಗಿ ಹಿಡಿದೂ

ಹುಸೇನು ಸಾಹೇಬು ತಾನ್ನೊಬ್ಬ ನಡೆದು

ಉರು ಸುತ್ತಾಲಾಕಿ ತಿರುಗಿ ಎಂಭತ್ತು

ಸಾವಿರ ದಂಡೇ ವಡೆದಾ || ರಣ ||

ಏಜೀದು ಎಲ್ಲಾರು ಕೂಡಿ ಬಂದೂ

ಹುಸೇನ ಸಾಹೇಬನ ಜೀವಾನೆಕೊಂದು

ವೈಕುಂಠ ದಾರೀಲಿ ಹೋಗಿ ಕುಣಿದಯು

ಶಿವನೀಗೆ ಎಂತಾದು ವೀಳೆ ತಂದಾನೆಂದು || ರಣ ||

ಬಾನೂನು ಕೈಯೋಳೆ ಬಾಯ್ ಹೊಡೆದೂ

ಕಾಟಾನೆ ಕರೆಮಣಿ ಎಲ್ಲಾನೆ ಹರಿದು

ಶಿವಕೊಟ್ಟು ಮುತ್ತೈದೆ ತಾನೆ ಹೊಯ್ದಾ || ರಣ ||

ಕಿಣಿಮೀಲಿ ದುಕ ಮಾಡೂತ ಬಾಳ ಜಗದೊಳಗೆ

ಆದೀತು ಇಂತಾವೆ ಜಗಳಾ

ಮಾಕೆ ದೊಳಗೆ ದೊಡ್ಡ ಪೀರ್

ಆತನ ಪಾದಕೆ ವಂದೇವೆಂದು || ರಣ ||

(ಈ ಹಾಡು ಹಾಡಿದವರು ಮಹಮ್ಮದ್ ಜಾಬುಸಾಬ್, ಆದೋನಿ, ಆಂಧ್ರ ಪ್ರದೇಶ)

ನಾಲ್ಕು

ಕಾಸೀಮ್ ಕಂದಾನ ಕರ್ಮಾವು ಕೇಳಿರಣ್ಣಾ

ಸಣ್ಣಾ ಬಾಲಾಕ ಹಸುಮಗನ ಮರಣಾವಾನ

ಕರ್ಬಾಲಾದೊಳಗೆ ಹೋಗಿ ಕೊಟ್ಟಾರೊ ಶಿರಸಾವನ

ಪೂರ್ವಲಿಖಿತವು ಬ್ರಹ್ಮ ಲಿಖಿತವು
ತಪ್ಪಾದುದಾರೀಗನ್ನ ‖ ಕಾಸೀಮ್ ‖

ಕಾಸೀಮ್ ಕೇಳ್ಯಾರು ತಂದೀಗೆ ಅಪ್ಪಾಣೀನ
ಬೇಗ ಹೋಗುವೆ ಛಲದೋಳು ರಣಕೆ ನಾನಾ
ಹ್ಯಾಗೆ ಸೈರೀಸಾಲಿ ಇಂತಾ ತಿಳಿಗೇಡಿನಾ
ಹೋಗಿ ಮಾಡುವೆ ಬೇಗ ಮಾಡುವೆ
ಏಜೀದು ಮರಣಾವಾನಾ ಕಾಸೀಮ್ ‖

ಕಾಸೀಮ್ ಕೇಳ್ಯಾರು ತಾಯೀಗೆ ಅಪ್ಪಾಣೀನ
ಇಂತಾ ಕಷ್ಟಾದಿ ಇದ್ವೇನು ಫಲವೇನಾನಾ
ನಾವು ಜಯಿಸೇವು ಎಲ್ಲಾರು ವಂದೇದೀನಾ ‖ ಕಾಸೀಮ್ ‖

ಮಗನಾ ಮಾತೀಗೆ ಮನಸೋತು ಅಪ್ಪಾಣೀನಾ
ಕೊಟ್ಟು ಕಳುಹುವೇಳ್ಯಾ ಹೋಗಿ ಬಾರೋ ಕಂದಾ ನೀನಾ
ಕಿಚ್ಚಾವಂದೀನ ಮಾಡೀದರೊ ಶರಣಾ
ಎಚ್ಚಾರಿಲ್ಲಾದೆ ಕಬರು ಇಲ್ಲಾದೆ ರಣದೋಳು ನಿಂತಾವನಾ ‖ ಕಾಸೀಮ್ ‖

ಕಾಸೀಮ್ ಎಳಬಾಲ ಕೆಡಾವೀದ ಚಾಪಾವಾನ
ಮುಪ್ಪೆ ಮುರದೀತು ಮಾರ್ಬಾಲ ಏಜೀದಾನ
ಜಡ್ಡೆ ಜಂಗೇರು ಪೈಲವಾನಾರು ಮಡಿದಾರು ಲಕ್ಷಾಜಾನಾ ‖ ಕಾಸೀಮ್ ‖

ಕತ್ತಿ ಜಂಕುಳಿಸಿ ಕರಿದಾರೊ ಏಜೀದಾನ
ಸುತ್ತ ಮುತ್ತಾಲ ರಾಜ್ಯಾರೋ ಕಾಸೀಮನಾ
ಎತ್ತ ನೋಡಲಿ ಅತ್ತೇ ಜಂಬೇ ಬಾಣಾ
ಮುತ್ತು ಸುರಿದ್ಹಂಗೆ ಮಳೆಯು ಸುರಿದ್ಹಂಗೆ
ಸುರಿಸ್ಯಾನೆ ವಂದೇ ಸವನಾ ‖ ಕಾಸೀಮ್ ‖

ಕಾಸೀಮ್ ಮಡಿದಿದ್ದು ನೋಡಿದಾರೋ ಹುಸೇನ
ಕೂಸೀನ್ ತಂದಾರೋ ಪೇರಾಕ್ಕೆ ಆಕ್ಷಾಣಾನಾ
ಸೀಸ ಕಾಸೀದಂತೆ ಆಯೀತು ಇಳಿದಿಳಿದು ತಾಯೀಗಿನ್ನು
ಈಸಾ ಮುನಿದಾನೋ ಹರನೇ ಮುನಿದಾನೋ
ಎರವಾದೆ ಕಂದಾ ನೀನು ॥ ಕಾಸೀಮ್ ॥

ಸಿದಿನಿ ಕೊಪ್ಪಾಡಿ ಸಾರೀದಾರೀ ಕವನಾ
ಸತ್ಯ ಮೂರ್ತಿ ಜರಾದರಿ ನಂಬಿಹರಾ
ಬುದ್ದೀವಂತಾರು ಕೇಳೀರಿ ಈ ಕಥನಾ
ಇದ್ದ ದೈವಕ್ಕೆ ಕುಂತ ದೈವಕ್ಕೆ
ನಮೊ ನಾಮೊ ಎಂಬೂವಾನಾ ॥ ಕಾಸೀಮ್ ॥
(ಈ ಹಾಡು ಹಾಡಿದವರು ಇಸ್ಮಾಯಿಲ್ ಸಾಬ್, ಆದೋನಿ, ಆಂಧ್ರ ಪ್ರದೇಶ)

ಐದು

ಕೇಳಿರಿ ಲಡಾಯ ಮುಂದೇ
ಮಹಮ್ಮದ್ದನೀಪಾ ಬಂದೆ
ಮೌಲಾಲಿ ಮಗಾನಂದೆ
ಹುಸೇನ್ ಸಾಹೇಬ ತಮಂದೆ
ನಮ್ಮಣ್ಣಗೆ ಏಜೀದ ಕೊಂದೆ
ಎದಿ ಹೊಯ್ದನು ಶೀಲ ಕೊಯ್ದೆ
ಹುಡುಗನು ಬ್ಯಾಡೋ ಏಜೀದನ್ನಂದೆ
ಸಸಿ ತಗದನು ಪಾತಾಳದೊಂದೇ ॥ ಕೇಳಿರಿ ॥

ಮೂರುಲೋಕದೊಳಾಗೆ ನಿಂತೆ
ಬೆಳಾಕು ಇತ್ತು ಚೆಂದೇ
ಸೂರ್ಯ ಚಂದ್ರ ಮುಣಾಗಿಂದೆ
ಹಾಗಾಯಿತು ನೀವೂ ಹಿಂದೆ ॥ ಕೇಳಿರಿ ॥

ಹುಸೇನು ಸಾಹೇಬರ ದಯದಿಂದ
ಹಾಗಾಯಿತು ಪ್ರಾರಬದಿಂದಾ
ಎಲಿಸಿಕ್ಕಿತೊ ಮುರೇನಂದಾ
ದುಕ ಮಾಡುವೆ ನಾನಾ ಚೆಂದಾ || ಕೇಳಿರಿ ||

ಹುಸುಬಿ ಕಾಕಾ ಬಂದೆ
ಕರ್ಬಲಾಕೆ ಹೋಗುವೆನೆಂದೆ
ಹೋಗಿ ಆರಣ್ಯದೊಳಗಡೆ ಕೊಂಡೆ
ಕೆಂಪು ನಿಶಾನೆ ಹಚ್ಚಿರೊ ಜಲಾದು || ಕೇಳಿರಿ

ಏಜೀದಗೆ ಕಗಾದು ಬರಾದು
ನೀವು ಲಡಾಯಕೆ ಬರ್ಯೋ ಜಲಾದು
ನಿಮ್ ಹೆಂಡರ ತಾಳಿ ಹರಾದು
ಹೀಗೆಂದು ಕಗಾದ ಬರಾದು || ಕೇಳಿರಿ ||

ಆ ಕಾಗದ ಏಜೀದ ಕಂಡೂ
ಅವನೋಡಿ ಎದೆ ಹೊಡಕೊಂಡು
ಕರೆಕಳುಹಿಸ್ಯಾನೆಲ್ಲಾ ದಂಡು
ಕೂಡ್ಯಾಕನೆ ಮದ್ದೇ ಗುಂಡು || ಕೇಳಿರಿ ||

ತುಬಾಕಿ ಕೈಯೊಳಗಿಡಕೊಂಡೂ
ಅವ ಲಡಾಯಿಕಿ ಹೊಂಟವನು ಗಂಡು
ಹೋಗಿ ಕರ್ಬಲಾದೊಳಗೆ ಇಳೊಕಂಡು
ಅಲ್ಲಿ ಮಹಮ್ಮದ್ ಹನೀಪನ ಕಂಡು || ಕೇಳಿರಿ ||

ಸುಮ್ಮನೆ ಹೋಗು ಉಳುಕಂಡು
ಮುಂದೀನ ತಾವು ತಿಳಕಂಡು

ಏರೀ ಬರುಬೇಡ ಜನರ ಕಂಡು
ಅಣ್ಣ ತಂಬ್ರನೆಲ್ಲ ಕರಕಂಡು ‖ ಕೇಳಿರಿ ‖

ಸುತಗಟ್ಟೆರ ಡೇರಕೆ ದಂಡು
ಮಳಿಯಂಗೆ ಸುರಿಸ್ಯರೋ ಗುಂಡು
ಕಬ್ಬಕ್ಕಿ ಕವಿದ ಹಿಂಡು
ಸುಟ್ಟರಿಸಿ ಬಿಟ್ಟನೋ ಗುಂಡು ‖ ಕೇಳಿರಿ ‖

ಬಾಣಾದಿರೀಸು ಬಿಟ್ಟ ಏಜೀದ
ಇಪರೀತ ಸುಟ್ಟನೋ ಮೊದ್ಲಾ
ಕೇಳರಿ ಲಡಾಯಿ ಮುಂದೆ
ಮಹಮದ್ಹ ನೀಫ ಬಂದೆ ‖ ಕೇಳಿರಿ ‖

ಮಹಮ್ಮದ್ಹನೀಪ ಸರದಾರಾ
ಬಲಗೈಗೆ ಹತ್ತಿತೊ ಹಾರಾ
ನಮಾಜಿ ಮಾಡನೊ ಪೂರಾ
ಏನು ಹೊತ್ತು ತಂದಿರಿ ಸಾಹೇಬರಾ ‖ ಕೇಳಿರಿ ‖

ಅವರು ಕುದುರೆ ಮೇಲೆ ಸಂಹಾರಾ
ಆಗಿ ಹೊರಟರೊ ತಯ್ಯಾರಾ
ಕೈಯೊಳಗೆ ಜಿಲುಚಿಕಾರಾರಾ
ರಣದೊಳಗೆ ಹೊಂಟ ಬಹದೂರಾ ‖ ಕೇಳಿರಿ ‖

ಕೈಯೊಳಗೆ ಹಿಡಿದು ಕಂಜೂರ
ಸಿಟು ತುಂಬಿತು ಹೊಟ್ಟೆಗೆ ಪೂರಾ
ಕುದುರೆ ಹಾರಿತು ಅಪರಂಪಾರಾ
ಹನ್ನೆರಡು ಗ್ರಾಮದ ದೂರಾ ‖ ಕೇಳಿರಿ ‖

ಬಡಿಯಕ್ಕೆ ಹೊರಟರೊ ಸರದಾರಾ
ಹಾರಿ ಹೋದವೊ ಲಕ್ಷಾ ಶೀರಾ
ದಂಡೆಲ್ಲಾ ಆಯಿತು ಸಂಹಾರ
ಹರಿಸ್ಯಾರೊ ರಕ್ತ ಸಮುದ್ದ್ರೂರ ॥ ಕೇಳಿರಿ ॥

ಏಜೀದನೆಂಬೊ ಹೇಷಾರ
ಉಳಿಲಿಲ್ಲ ವಂಶಕೆ ಯಾರ್ಯಾರಾ
ಲೂಟಿ ಮಾಪ್ಯಾನ ರಮ್ಮಸಗಾರಾ
ಕಿಲೇವು ತಗಂಡು ಸಂಹಾರಾ ॥ ಕೇಳಿರಿ ॥

ದೇವಲೋಕದೊಳಗೆ ಹೇಷಾರ
ಕರ್ಬಾಲ ನಡುಗೀತು ಥರಥಾರ
ಭೂಮಿ ಆಯಿತು ನೀರ್ ನೀರಾ
ಸತ್ತು ಹೋದ ಏಜೀದು ಮುಡಿದಾರಾ ॥ ಕೇಳಿರಿ ॥

ಹುಸೇನ್ ಸಾಹೇಬರ ಶರಣಾರ
ಹತ್ತು ದಿವಸ ಹಾಲು ಯ್ಯಾವಾರ
ಸಿಂಹಾಸನದೊಳಗೆ ಧುಮುಕ್ಯಾರಾ
ಬರುತಾರೆ ಹುಸೇನು ಸಾಹೇಬರಾ ॥ ಕೇಳಿರಿ ॥

ಅವರ ಪಾದಕೆ ನಮಸ್ಕಾರ
ಮಾಡ್ಯಾರೆ ಅಲಿ ವಸ್ತಾದಾ
ಅವರು ಸತ್ಯವಂತ ಶರಣ್ರುನೋಡಾ
ಮೂರು ಲೋಕ ಆಳೊ ಅಧಿಕಾರಾ ॥ ಕೇಳಿರಿ ॥
(ಈ ಹಾಡು ಹಾಡಿದವರು ಇಸ್ಮಾಯಿಲ್ ಸಾಬ್, ಆದೋನಿ, ಆಂಧ್ರ ಪ್ರದೇಶ)

ಆರು

ಅಸಗಾರಾಲಿ ಉತುಪನ್ನದೊಳು ಸುಕ ಕಾಣಾಲಿಲ್ಲ
ಎರವು ಆದವರೀಗೆ ತಾಯಿ ಹಾಲಾ
ಹೇ ಒಂಬತ್ತು ತಿಂಗಾಳ ಸಣ್ಣ ಬಾಲಾ ॥ ಅಸಗಾ ॥

ಎರಡೇ ತೂಕಿ ಒಣಗ್ಯಾರೆ ಮೊಳೆತಾರ ಗಾಲಾ ಮೇಲಾ
ಕುಡುದೇನಂದರೆ ಗುಕ್ಕೆ ನೀರೇ ಇಲ್ಲಾ
ಹೇ ಬಿದ್ಯೆತೆ ಬೆಂಕ್ಯಂತ ಮಧ್ಯಾಹ್ನ ಬಿಸಲಾ ॥ ಅಸಗಾ ॥

ಪೀರ್ ಹುಸೇನ್ ಮಗನೀಗೆ ತಾಗಂಡ ಕುದುರೆ ಮೇಲಾ
ನೀರ ಹುಡುಕೂತ ಹೊಂಟಾ ಆರಣ್ಯ ಮೇಲಾ
ಹೇ ಬಿದ್ಯೆಕೆ ಬೆಂಕ್ಯಂತ ಮಧ್ಯಾಹ್ನ ಬಿಸಲಾ ॥ ಅಸಗಾ ॥

ಹೊಳೀಯಾ ದಂಡೇಲಿ ಬಂದು ನಿಂತು ಭಕ್ತಿ ಮಾಡ್ಯಾರೆಲ್ಲಾ
ಏಜೀದ್ನ ದಂಡೂ ಭರ್ತಿ ಕಬುರಾ
ಹೇ ಹತ್ತು ದಂಡು ರಾತ್ರಿ ಯಾಯಿತು ಹಗಲ ॥ ಅಸಗಾ ॥
ಅಂದ್ಹಾರುಸೇನ್ ದಯಮಾಡಿ ನೀರು ಕೊಡ್ರಿ ವಂದೇ ಬಟ್ಲ
ಎನ್ನ ಅಣ್ಣಾನ ಮಗನಿಗೆ ಚೈನಾವಿಲ್ಲ
ಹೇ ಪುಣ್ಯಾಶರತ ನಿಮಗಾಗೋತಲ್ಲ ॥ ಅಸಗಾ ॥

ಕೆಟ್ಟಾ ಮನಿಸ್ಯಾ ಹುಸೇಣ್ಣಾನಿಗೆ ಬಾಣ ಬಿಟ್ಟಾನಲ್ಲ
ತಪ್ಪಡಿ ಬಡಿದು ತಿಳಿಸುವೆನು ಮೋರಿ ಮ್ಯಾಲೆ
ಹೇ ಕಾಕೀಕಿ ಅಂತ ಪ್ರಾಣ ಬಿಟ್ಟಾನಲ್ಲ ॥ ಅಸಗಾ ॥

ಎದೆಗೆ ಕಕ್ಕಿ ರಕ್ತ ಕೆಳಗೆ ಬೀಳಗೊಡಲಿಲ್ಲ
ರಕ್ತಾದೊಳಗೆ ಆದಾವು ವಜ್ರಸಾಲಾ
ಹೇ ಒಂಬತ್ತು ತಿಂಗಾಳ ಸಣ್ಣ ಬಾಲಾ ॥ ಅಸಗಾ ॥

ರಾಜ ಬೀದಿಯೊಳ್ ಮೋಜೀಲಿ ಎನಕಂದ ಆಡಾಲಿಲ್ಲ
ಎನ್ನ ಕಣ್ಣಿಲಿ ನಾನು ನೋಡಾಲಿಲ್ಲ
ಹೆಣ ಯಾರಿಗೆ ಕೈಯ ಕೊಡಲಿಲ್ಲ ॥ ಅಸಗಾ ॥

ಸತ್ಯಾಶಂಕಾ ಮಾಡೀದರಿವ ಯಾಕೋ ಹೇಳೇವಲ್ಲಾ
ಖಿಳಿಗಿ ಸಾಹೇಬನ ದಯ ನಮ್ಮ ಮ್ಯಾಲೆ
ಪ್ರಿಯ ಆತಗೆ ಮಾಡುವೆ ಸೋಲ್ಲೇ ಆಳಾ ಅಸಗಾ ॥
(ಈ ಹಾಡು ಹಾಡಿವವರು ಮಹಮ್ಮದ್ ಜಾಬುಸಾಬ್, ಆದೋನಿ, ಆಂಧ್ರ ಪ್ರದೇಶ)

ಏಳು

ಸತಿವಂತರ ಕತಿ ಕೇಳರಿ ಕುಂತ ನಿಂತಾ ಜನಾ
ಕರ್ಬಾಲ ಅಡಿಯಾಗ ಮೂಡೀತ್ರೀ ಕದುನಾ
ಕಾಸೀಮ ಎದುರುಬಿದ್ದ ಬಾಳ್ ಧೈರ್ಯವಾನ
ಲಾಡಂಗಿ ಯುದ್ಧಕಿಂತ ಮಾಡಿ ಯೋಚನಾ ॥ ಸತಿ ॥

ನಿಮು ಕಾಣೆ ನಿಮ ತಂದಿ ಆದರು ಮರಣಾ
ತಾಯಿರಿಯರು ಅಳುತಾರೊ ಹೋಗ ಬ್ಯಾಡೋ ಮಗನಾ
ನಿಮ ಬೆಳಕ ನದಿ ಮ್ಯಾಲೆ ಸೂರಿಯಾನ ಕಿರಣಾ
ನಿನಗ ನೋಡಿ ಹೊತ ನಾನು ಕಳಿತೇನು ಮಗನಾ
ಕಾಕಾನ ಮಗಳೀಗಿ ಎಣ್ಣಿ ಹಚ್ಯಾರ ಸಣ್ಣ ಸುಕ್ರವಾರ ದಿನಾ
ಕೈಗಿ ಕಂಕಾಣವಿತ್ರೀ ಹಣೆಗಿ ಬಾಸಿಂಗನ
ಎಂತ ಯ್ಯಾಳ ಸಾಧೀಸಿ ಬಂದೀತೋ ತಾನಾ
ಬಾಸಿಂಗ ಹೂವದಿಂದೆ ನಡುದೀತೋ ಕದುನಾ
ಮಡದೀಯ ಕೇಳುತಾಳ್ರಿ ಪದವಿಡಿದು ಚಯ್ ನಾ
ಏನ ಹೇಳತ್ರಿ ಹೇಳ್ರಿ ಜುಬಾನ
ಮುಂದ ಬರೂಲಾಕ ಇನ್ನೇಸೋ ದಿನ
ನಮಮ ನಿಮದು ಅರಸಿಣವೆ ಕೂನ್ಯ

ಮಡದೀಗಿ ಯೇಳಿ ಕೇಳಿ ಸಮಜೂ ಮಾಡ್ಯಾನ
ಸಂದು ಮಾಡಿ ಕುದಿರೀಗಿ ಬಿಗುದಾನ್ರಿ ಜೀನು
ಕುದರಿಮ್ಯಾಲ ಕುಂತನ್ರಿ ಕಾಸೀಮ್ ಸಾಹೇಬನ
ಲಾಡಂಗಿ ನಡುದಾನ್ರಿ ಎಂತ ದರ್ಯದವನಾ
ಹೇ ಕೈಲೊಳಗಿನ ಸಮ್ ಪಾನ ನಡಿತೊಂದೆ ಸವನಾ
ಕೈಲಾಕೊ ಜನಕೆಲ್ಲ ಪಡುದಾನ್ರಿ ಪ್ರಾಣ
ಕೈಯ ಸೋತು ನಿಂತಾನ್ರಿ ಆಗಿ ನಿತ್ರಾಣ
ಸಂದ ನೋಡಿ ಪಡುದಾನ್ರಿ ಯಜೀತು ಪ್ರಾಣಾ
(ಈ ಹಾಡು ಹಾಡಿದವರು ಮಾಣಿಕ್ ಹಲಿಗಿ, ಸುಲ್ತಾನಾ ಬಾದ್ ವಾಡಿ, ಬೀದರ ಜಿಲ್ಲೆ)

ಎಂಟು

ಸುತ್ತಲುಕ ಕಮಲಾಪುರ ಸಮೀ
ದೋಜ್ಯಕವಬ್ಬ ಕಟ್ಟೆಸೀದಾಮನಿ
ತೀನ್ನೆ ತಿರು ಪಾಂಚೆಗು ಸ್ಮಾರೆಕ ಮನೆ
ಅದರ ಒಳಾಗೆ ಕುಂತೀದ್ವ ವಬ್ಬ ದೊಡ್ಡಾಮುನಿ
ಏನು ಯೇಳಲಿ ಆ ಮನೀ ಮುನಿ
ಅವ ಹ್ಯೆಕೊಂಡು ಕುಂತಿದ್ವ ಅವ ದುನಿ
ಅದರ ಹಳ್ಳಿ ಹತ್ತೀತು ಕೊನಿ
ಊರೊಳಾಗೆ ನಿಂತು ಮಾಡತಿದ್ವ ದನೀ
ದನಿ ಕೇಳಿ ಉಪ್ಪಾರ ಬಂದ ಮಾಗಿನೀ
ಮ್ಯಾಲೆ ಕುಂತು ಹಕ್ಕಿ ನೋಡತಾನ ಗುನಿ
ಮೂರ ತರದ ಮ್ಯಾಲೆ ಮುರಿತೇನಿ ಮುಲಿ
ಇದರ ಮ್ಯಾಲೆ ಹುಟ್ಟಾಸ್ತೀನಿ ಇಂದ್ರಜಿತ್ತನ ಮನೀ
ಇಂದ್ರಜಿತ್ತ ರಾಜ ಇದ್ವ ದೊಡ್ಡಾದನಿ
ಮನಿ ಕಟ್ಟ ಉಪ್ಪಾರಾಗೆ ಕರಿತೀನಿ
ದಾರನಿಲ್ಲದೆ ಜವುತಿ ಮಾಡಸ್ತೀಂತೀನಿ
ಜೋಡು ಕಂಬದ ಮ್ಯಾಲೆ ಬೋದು ಎಳಸ್ತೀನಿ

ಬೋದನಿ ಸುದ್ದಿ ನಿಂತು ನಾ ಸಚೇಳ್ತೀನಿ
ಸಂಸಾನಿಲ್ಲದ ಮನಸೀಗೆ ನಾನು ಹರುಷ ಬಿಡತೀನಿ
ಒಂಭತ್ತ ಕೊಲ್ಲೀದೊಳಗೆ ವಂದು ಕಂಬ ಕೊಟ್ಟೀನಿ
ಆ ಕಂಬಾದ ಸಲುವಾಗಿ ವಂದು ರಂಬೆ ಬಿಟ್ಟೀನಿ
ಕಂಬ್ಲುಸತ್ತ ರಂಬೇ ಪೇರಿ ಹಾಕ್ಸತೀನಿ
ಹತ್ತು ಮಂದಿ ತೊತ್ತುಕೈಲಿ ಕೊಡಸ್ತೀನಿ
ನನ್ನ ಸರಿಯಾಸರೆ ನಿಂತು ಹಾಡಂತೀನಿ
ಶಾಯಿರ ಬಂದು ನನ್ನ ಮುಂದ ಹಾಡಂತೀನಿ
ಯವಗಿಂದವಗೆ ತೋಡು ಮಾಡಿ ಹಾಡಂತಿನೀ
ಹಾಡಲೋದರೆ ಬಿಟ್ಟು ಓಡಂತಿನಿ
ನಮ್ಮ ಗರೀಬ ಗುರುವಿಗೆ ಓಗಿ ಕೇಳಂತೀನಿ
ಗುರುವಿನ್ನಾಮ ನುಡಿದೋನಿಗೆ ಹೌದಂತಿನಿ
ಅಲ್ಲದ ನಾಮ ನುಡಿದೋನಿಗೆ ಬ್ಯಾಡಂತಿನಿ
ಸಾಕು ತಮ್ಮ ಸುಮ್ಮಗನ್ಹಿಂದೆ ಕೂಡಂತಿನಿ
ಈ ಕುಣಿತ ಕುಣಿದು ಹಾಡವ್ ನಿಗೆ ಹಾಡಂತಿನಿ
ಯವಗಿಂದವಗೆ ತೋಡುಮಾಡಿ ಹಾಡಂತಿನಿ
ಹಾಡಲ ಹೋದರೆ ಬಿಟ್ಟು ಓಡಂತಿನಿ
ನಮ್ಮ ವಸ್ತಾದ ಮಲಕಪ ಓಗಿ ಕೇಳಂತಿನಿ
ಸಿಸ್ಸಿಸ್ಯನ್ನ ಹಳ್ಳಿದಾಗ ನಡಿ ಅಂತಿನಿ
ಯವಗಿಂದವಗೆ ತೋಡುಮಾಡಿ ಹಾಡಂತಿನಿ
ಹಾಡಲು ಹೋದರೆ ಬಿಟ್ಟು ಓಡಂತಿನಿ
ನಮ್ಮ ಗರೀಬ ಗುರುವಿಗೆ ಹೋಗಿ ಕೇಳಂತಿನಿ
(ಈ ಹಾಡು ಹಾಡಿದವರು ಈರಣ್ಣ ಬಂಡೆ ಸುಲ್ತಾನಾ ಬಾದ್ ವಾಡಿ, ಬೀದರ ಜಿಲ್ಲೆ)

ಒಂಬತ್ತು

ಇದು ಡೊಳ್ಳಿನ ಪದವಾಗಿದ್ದು ಮುಲ್ಲಾರ ಬಗೆಗೆ ಉಪಯುಕ್ತ ಮಾಹಿತಿಯನ್ನೊಳಗೊಂಡಿರುವದರಿಂದ ಇಡಿಯಾಗಿ ಈ ಹಾಡನ್ನು ಇಲ್ಲಿ ಕೊಡಲಾಗುತ್ತದೆ. (ಈ ಹಾಡು ಹಾಡಿದವರು ಅಂಜಿನಪ್ಪ, ಹಾವಳಗಿ ಗ್ರಾಮ, ಕಣೇಕಲ್ಲು ತಾಲೂಕ್, ಅನಂತರಪುರ ಜಿಲ್ಲೆ, ಆಂಧ್ರ ಪ್ರದೇಶ)

ಕೇಳಯ್ಯಾ ಸಿವನೇ, ನನ್ನಾಳ್ಯಾದ ಮರುಳೇ
ಗೂಳ್ಳ ಕ್ಯಾಣೇಗೆ ನೂರಯ್ಯೋ
ವಾರಾದ ಸರಸ್ವತಿಯ ಗವರಿ ಪುತ್ರರರು ನಾವು
ವಿದ್ಯೇವೊ ನೇಳಯ್ಯಾ ನಮಗೊಂದು
ವಿದ್ಯೇವೊ ನೇಳಯ್ಯಾ ಹಿರಿಯುಂಕ ಮುನಿಯೋ
ಬುದ್ದಿ ಯೇಳಯ ಜಾಗದೊಡಿಯಾನೇ
ವುಚ್ಚಾಲಿಲ್ಲದ ಮುತ್ತು ವಜ್ಜುರಾದ ಕಾಯಾವು
ತಿದ್ದಿ ಯೇಳಯ ದೀವ ನುಡಿಗಾಳೂ
ತಿದ್ದೀದಾ ನುಡಿಗಾಳು ತೀಡಿ ಯೇಳಯ ದೇವ
ಹುಯ್ಯೋ ಜಂಚೇರು ಮಾಳಯ್ಯ
ದೇವರು ಬಂದಾವೊ ಬನ್ನಿರೋ ॥ ಕೇಳಯ್ಯಾ ॥

ಕರಿಯೋ ಕಂಬಾಳಿ ಗದ್ದಿಗೆ ಮಾಡಿ
ಬೇವಿನೇ ಕೊಳ್ಳೇ ಮುಂದಿಳುನಾನೇ
ಬೇವಿನ ಡೊಳ್ಳೀನಾ ಬೆನ್ನಿಂದೆ ಕುಂತು
ನಾವಿನ್ನ ಗುರುವೀನ ನೆನುದೇವೋ ॥ ಕೇಳಯ್ಯಾ॥

ಹಿರಿಯಾರೇಳಿದ ನಡತಿ ಕರದು ಕೇಳಿರಿ ದೈವಾ
ಕರಿಯಣ್ಣಾ ಕಲುಗೂಡಿ ದ್ಯಾವಾರೂ
ಸಿದ್ದರೇಳಿದಾ ನುಡಿಗಾಳೆಚ್ಚಿ ಸೇಳಿರಿ ದೈವಾ
ಎದ್ದಾವೋ ಮರಳೀಯ ದ್ಯಾವಾರೂ
ಮುರವು ತೋರಿದ ಲಿಂಗ ಗುಂಡೀನೊಳಗೈ ತಂದು

ಸೆಂಡು ಸ್ವಾಮಿಂತಿಗೆ ತಂದಾನೊ

ಸೆಂಡು ಸ್ವಾ ಮಿಂತೀಗೆ ದುಂಡು ಮಲ್ಲಿಗೆ ತಂದು

ಮಂಡೇಲಟ್ಟೊ ಮನಸು ಕಂಡಾನೊ

ಬಿಲ್ವಪತ್ರಿ ಜಾಜಿ ಮಲ್ಲೀಗೆ ಹೂವೇ ತಂದು

ಕೊಲ್ಲೀಲಿಟ್ಟು ಕಳಿಯಾ ಕಂಡಾನು

ಕೊಲ್ಲೀನೊಳಗಿರುವ್ವೋದೊಂದು ಯಾರ್ಯಾರು ಬಲ್ಲವರು

ಹಾಲು ಸಕ್ಕರೆ ಗಿಣ್ಣೊಂದು ಅಬಿಸೇಕೊ

ಹಾಲೂ ಸಕ್ಕರೆ ಬಾಳೀಯಾ ಗೊನಿಯೇ

ಆಲೂರ ಬಾಗಾಳ ಗಜನಿಂಬೇ

ಸಕ್ಕರೆ ಗ್ವಾನದ ಮರಕೆ ಕಟ್ಟೇಲಾಡಿದ ಪದಕೆ

ಕಾವಳಕೆ ಬೆಳುದಿಂಗಳು ಕಾದವ್ವೋs.....

ಹೇ... ಕಾವಳಕೆ ಬೆಳುದಿಂಗಳು ಕಾದಂತ

ಕುರಗೋಡು ಸಾಲೊಳಗಾಡಂದ್ವಾರೀ ಪದಗಾಳೂ

ನಿಂತು ಹಾಡಿದ ಪದವು ಕುಂತು ಕೇಳುವರುಂಟು

ಯಂತಪ್ಪ ದೈವಾ ಯನ್ನೊಡಿಯಾನೇ

ಮುಂಗೋಳಿ ಕೂಗ್ಯಾವೊ ಮೂಡಲು ಕೆಂಪ್ಹರಿದಾವೊ

ಮೂಡಲು ಕೆಂಪ್ಹರಿದಾಗ

ನಾರ್ಯರು ನಿರುತಿರುವಾಗ

ಜಳಕಕ್ಕೆ ತಾಸುಗಳಿಗಿದ್ವಾವೋ

ಸೂರಿದೇ ಬರುವಾಗ

ನಾರ್ಯರು ನಿರು ತರುವಾಗ

ದ್ವಾರ ಪಾಲಕನಡ್ಡ ಸುಳಿದಾನೊ

ದ್ವಾರಪಾಲಕನಟ್ಟೆ ಸುಳಿದಾನೊ ಮಾಳಪ್ಪಾ

ಹುಯ್ಯೋ ಜುಚೇರು ಮಾಳಪ್ಪಾ

ದ್ಯಾವಾರು ಬಂದಾವೊ ಬನ್ನಿರೋ

(ಈ ಹಾಡು ಹಾಡಿದವರು ನಾಗಪ್ಪ, ಯಲ್ಲಪ್ಪ ಹಾಗೂ ಸಂಗಡಿಗರು, ಹಾವಳಿಗಿ ಗ್ರಾಮ, ಕಣೇಕಲ್ಲು ತಾಲೂಕ್, ಆಂಧ್ರ ಪ್ರದೇಶ)

ಹತ್ತು

ಎಂತ ಸಕ್ಕನಿ ದೇವುಡೋಯಮ್ಮಾ ಹೊನ್ನೂರು ಸ್ವಾಮೀ
ಸುಭ ಸಕ್ಕನಿ ಬಾಲುಡೋಯಮ್ಮಾ
ಹೇ ಬೂದಿಗುರಮು ಎಕ್ಕಿನಾಡೇ
ಭೂಮಿಲೆಲ್ಲಾ ತಿರುಗುತಾಡಮ್ಮಾ
ಉರುಸು ಸಾಗೇ ಗುಂತುಕಂಟಿಕಿ
ಸಾರಿವೆಳ್ಳೊನ್ನೂ್ಹರು ಸ್ವಾಮೀ
ನೀಕಿ ಜಲ್ಮಮು ಲಾಲಿ ಸ್ವಾಮೀ ||ಎಂತು

ಎಂತ ಮಂಚಿ ದೇವುಡೋಯಮ್ಮಾ
ಸುಭ ಸಕ್ಕನಿ ಬಾಲುಡೋಯಮ್ಮಾ
ನೀಲಗುರಮು ಎಕ್ಕಿನಾಡೇ
ನಿಲವು ಗುರುಮು ಎಕ್ಕಿನಾಡೇ
ನಿಲವು ಸೊಗಸಲು ಚೂಸಿನಾಡಮ್ಮಾ
ನಿಲವು ಸೊಗಸಲು ನಿಲುವುಟದ್ದಮು
ನೀರೆ ಜಲ್ಮಮು ಲಾಲೀ ಸ್ವಾಮೀ || ಎಂತ||

ಎಂತ ಸಕ್ಕನಿ ದೇವುಡೋಯಮ್ಮಾ
ಮೌಲಾಲಿ ಸ್ವಾಮಿ ಸುಭ ಸಕ್ಕನಿ ಬಾಲುಡೋಯಮ್ಮಾ
ಎರ್ರ ಗುರ್ರಮ್ ಎಕ್ಕಿನಾಡೇ
ಎಂಡಿ ಕಲ್ಯಮ್ ಪೆಟ್ಟಿನಾಡಮ್ಮಾ
ಉರುಸು ಸಾಗೇ ಹೊನ್ನೂ್ಹರಿಕಿ
ನೀಕಿ ಜಲ್ಮಮ್ ಲಾಲಿ ಸ್ವಾಮೀ || ಎಂತ||

ಹೇ ಕಾಸಿದಟ್ಟಿಗಟ್ಟಿ ನಾಡೇ
ಕಾಸಿಲೋ ಸೈಬಾಕು ಯೇಸಿ
ಉರುಸುಸಾಗೇ ಪೆನಗೊಂಡಕಿ

ನೀಕಿ ಜಲ್ಮಮು ಲಾಲಿಸ್ವಾಮೀ

ಮೌಲಾಲಿ ಸ್ವಾಮೀ ಸುಭಸಕ್ಕನಿ ಬಾಲುಡೋಯಮ್ಮಾ

(ಈ ಹಾಡು ಹಾಡಿದವರು ನಾಗಪ್ಪ, ಹಾವಳಿಗಿ ಗ್ರಾಮ, ಆಂಧ್ರ ಪ್ರದೇಶ)

ಹನ್ನೊಂದು

(ಇದು ಬಂದೇನವಾಜ್ ಗೇಸುದರಾಜ್‌ರ 'ಉರುಸ್'ನ ವಿವರಗಳನ್ನೊಳಗೊಂಡ ಹಾಡಾಗಿದೆ. ಈ ಹಾಡು ಗುಲುಬರ್ಗಾ ಜಿಲ್ಲೇಯ ಸೇಡಂ ತಾಲೂಕಿನ ಮೋತಕ ಪಲ್ಲಿಯಲ್ಲಿ ಸಂಗ್ರಹಿಸಿದ ಹಾಡಾಗಿದ್ದು ಇದನ್ನು ಹಾಡಿದವರು ಕಾಶಪ್ಪ ಮತ್ತು ಸಂಗಡಿಗರಾಗಿದ್ದಾರೆ.)

ದೋಸ್ತರಾಪೂದ್ದೀನ್

ಸಣ್ಣಾದೊಡ್ಡವಾರು ಸಭಕುಂತೀರಣ್ಣಾ ||

ತಿಳದಷ್ಟು ಹೇಳತೀನಿ ಸಣ್ಣವ ನಾನಾ...

ಬಂದೇ ನವಾಜು ಗಂಧಾದಿನ ಬಾಳಮಂದಿ ಬರುತಾದೋ ದೂರ್ ದೂರಿನ್ನಾ||

ಅಕುಬಾರ ಬಂದಿತ್ತು ಜಾತ್ರೇದು ಜರಗೂರ

ಹೈದರಬಾದಿಯ ಉದುರು ಬಾರುತಾನಾs...(?)||

ವಾಹೀನಿ ಹರದಿತ್ರೀs... ಹಿಂದೂಸ್ಥಾನಾs...||

ಮಾರ್ ವಾಡ ಮಲ್ನಾಡ ಬಿಜುವಾಡಿನ್ನಾ||

ಬಿದರಕೋಟಿ ಬಗಲಕೋಟಿ ಹಾಗಲಕೋಟಿ, ಸಿಮಣಿಕೋಟಿ

ತಾಳಿಕೋಟಿ ಮಂದಿ ಬಂತು ತ್ಹಾಟ್ಟೀ ಚಿನ್ನಾ||

ಕರಣಕೋಟಿ ನಾರ್ಯಾಯಣ ಪ್ಯಾಟಿ ಗುರುಮತ್ ಕಲ್ಲಿನ್ನಾs....

ಹೋರಾಟ, ಭೋರಾಟ ಸುಲುಪ್ಯಾಟಿನ್ನಾ||

ಇಷ್ಟು ಚೆಂದಳ ಮಂದಿ ಬಂದೂ ಇಳೂದ್ಹಾದ

ರೈಲು ನೋಡಿ ಟೋಪು ನಾಮದ ಧನ್ನಾ ಧನ್ನಾs....||

ಏಳಾಗುಮ್ ಟಾದ ಬಲ್ಲಿ ಬೆನ್ನಿಗೆ ಬೆನ್ನಾ

ಇಪತ್ತೊಂದು ಅವಾಜವತಾವ್ ಒಂದೇ ಸವನಾs...||

ಸುದ್ದೀ ಮುಟ್ಟಿತ್ತೂ ಸುಬೇದಾರುಗಾ

ತಾರು ಮಾಡಿರಿ ಬಸಿರೇ ದೌಲತ್ತುಗಾs...||

ಸುದ್ದೀ ಮುಟ್ಟಿತು ಹೋಗಿ ಬರುತಾನ ಜನನಿಂತು

ಬಗ್ಗೀ ವಳಗೇ ಕುಂತೂ ಸಾಮಧಾನಾs...

ಬಗ್ಗೀ ನಡುಸ್ತಾರಾ ಭಾಳ್ನಿಧಾನಾ||

ನೋಡುಲಾಕ್ಕೆ ಬಂದಿತ್ತೋ ಸರ್ವೋ ಜಾನಾ||

ಹೊಂಟಿತ್ತು ಸವ್ವಾರಿ ಆರುಸನಾ

ಬರರ್ಹಾರ ಹಾದ್ದಿದು ಸಾಡಕಿನ್ನಾs.... ||

ಸಡಕಿಡದೂ ಸಾಲ್ಹೆತ್ತಿ ಉರಿತ್ಯಾವ ಬಿಸಿಲು ಬತ್ತಿ

ಬೆಂಕೀ ಕೋರಿದ್ದಂಗೆ ಮೈಟಾಪಿನ್ನಾ||

ಕಣ್ಣೀಗೆ ಕಾಣುಸ್ತಾದ ಕೇಳ್ರಿ ಹುಸೇನಾs...

ಕೈಲಾಸ ಕಂಡ್ಹಂಗೆ ಆಯಿತಕ್ಷಣಾs.....||

ದೋಸ್ತರಪೂದ್ದೀನ್

ಅನುಬಂಧ - ೨

ಸೂಫಿ ಸಂತ ಸಂಸ್ಕೃತಿಯನ್ನು ಖಂಡಿಸಲು ವಸಹಾತು ಶಾಹಿ ಕಾಲದಲ್ಲಿ ಅಸ್ತಿತವಕ್ಕೆ ಬಂದ ವಹಬ್ಬಿ ಸುಧಾರಣಾವಾದಿಪಂಥದ ವಾದಗಳು

(೧) ಧರ್ಮಶಾಸ್ತ್ರೀಯ ರೀತಿ:- ಸಂತರು ತಮ್ಮ ಅನುಯಾಯಿಗಳಿಂದ ಭಕ್ತರಿಂದ ನೈಸರ್ಗಿಕ ಮತ್ತು ಅತೀಂದ್ರಿಯ ಶಕ್ತಿಗಳನ್ನು ನಿಯಂತ್ರಿಸುವ ಮತ್ತು ನಿಯಮಗಳನ್ನು ವಿಧಿಸುವ ಮಹಿಮಾ ಪುರುಷರೆಂದು ಪರಿಗಣಿಸಲ್ಪಟ್ಟಿದ್ದಾರೆ. ಇವರು ಪೌರೋಹಿತ್ಯದ ಮತ್ತು ಪವಾಡಗಳನ್ನು ನಡೆಸುವ ಶಕ್ತಿಯನ್ನು ಹೊಂದಿದವರಾಗಿದ್ದಾರೆಂದು ನಂಬಲಾಗಿದೆ. ಸೂಫೀಗಳಿಗೆ ಯಾವುದು ತಪ್ಪು ಮತ್ತು ಸರಿಯೆಂದು ನಿರ್ಣಯಿಸುವ ಮತ್ತು ತಾವು ಬದುಕಿರುವಾಗಲೇ ತಮ್ಮ ಅನುಯಾಯಿಗಳಿಗೆ ಆಧ್ಯಾತ್ಮಿಕ ಮಾರ್ಗದರ್ಶನ ಮಾಡುವ ಅಧಿಕಾರವಿದೆಯೆಂದು ನಂಬಲಾಗಿದೆ. ಆದರೆ ಧರ್ಮಶ್ಯಾಸ್ತ್ರೀಯವಾಗಿ ಇದು ತಪ್ಪಾಗಿದ್ದು. 'ಯಾವುದೇ ಧಾರ್ಮಿಕ ವಿಧಿ, ನಿಯಮಗಳನ್ನು ವಿಧಿಸುವುದಾಗಲಿ, ಆಧ್ಯಾತ್ಮಿಕ ಮಾರ್ಗದರ್ಶನ ಮಾಡಬಹುದಾದ ಅಧಿಕಾರವಾಗಲಿ ಅಲ್ಲಾಹ್ ನಿಗೆ ಮಾತ್ರ ಸಂಬಂಧಿಸಿದ್ದಾಗಿದ್ದು, ಸಂತನಿಗೆ ಸಂಬಂಧಿಸಿದಂತೆ ಈ ಬಗೆಯ ಗುಣಗಳ ಆರೋಪಗಳು ದೈವತ್ವದೊಂದಿಗಿನ ಸಹಭಾಗಿತ್ವವನ್ನು ಪ್ರತಿಪಾದಿಸುವ ಬಹುದೇವತಾ ಪದ್ಧತಿಯೊಂದಿಗೆ ಸಂಬಂಧ ಕಲ್ಪಿಸುವವುಗಳಾಗಿವೆ.

ಪರಮಾಧಿಕಾರವು ಅಲ್ಲಾಹ್ ನಿಗೆ ಸೇರಿದ್ದಾಗಿದ್ದು ಎಲ್ಲಾ ಮನುಷ್ಯ ವರ್ತನೆಗಳು ದೈವತ್ವದ ಮುಂದೆ ಒಂದೇ ತೆರನಾದವುಗಳಾಗಿವೆ. ಎಲ್ಲಾ ಮುಸ್ಲಿಮರು , ಸಾಮಾನ್ಯ ಜನಗಳಾಗಿರಲಿ, ಶ್ರೇಷ್ಠರಾಗಿರಲಿ, ಎಲ್ಲರೂ ಸಮಾನರು. ಅವರ ಮಧ್ಯೆ ಭಿನ್ನತೆಯೇನಾದರೂ ಇದ್ದರೆ ಅದು ಒಳ್ಳೆಯ ಮತ್ತು ಕೆಟ್ಟ, ನಡೆತೆಗಳಲ್ಲಿ ಮಾತ್ರವಾಗಿದೆ.

ಸಂತರು ಯಾವುದೇ ರೀತಿಯ ಹೆಚ್ಚುಗಾರಿಕೆಯನ್ನು ಪೌರೋಹಿತ್ಯದ ಯಾವುದೇ ಶಕ್ತಿಯನ್ನು ಹೊಂದಿಲ್ಲದಿರುವುದರಿಂದ ದೇವರ ಅನುಗ್ರಹಕ್ಕಾಗಿ ಅವರನ್ನು ಪ್ರಾರ್ಥಿಸುವುದು ನಿಷ್ಪ್ರಯೋಜಕವಾದುದಾಗಿದೆ.

ಧಾರ್ಮಿಕ ನಿಯಮಗಳು :

ಗೋರಿಗಳನ್ನು ನಿರ್ಮಿಸುವುದಾಗಲಿ, ಅವುಗಳನ್ನು ಶಾಶ್ವತವಾದ (ಕಲ್ಲು ಮತ್ತು ಇಟ್ಟಿಗೆಗಳಿಂದ) ರಚನೆಗಳನ್ನಾಗಿ ಮಾರ್ಪಡಿಸುವುದನ್ನಾಗಲಿ ಇಸ್ಲಾಂನ ಧಾರ್ಮಿಕ ನಿಯಮಗಳು ನಿಷೇಧಿಸುತ್ತವೆ. ಇಂತಹ ಕಟ್ಟಡಗಳ ಮೇಲೆ ಗುಮ್ಮಟ್ಟ ಗಳನ್ನು ನಿರ್ಮಿಸುವುದನ್ನೊಳಗೊಂಡಂತೆ ಇಂತಹ ರಚನೆಗಳನ್ನು ಸಮೂಲವಾಗಿ ನಾಶಗೊಳಿಸಬೇಕು. ದೈವಿಕ- ಶ್ರದ್ಧೆ ಮತ್ತು ಅಲ್ಲಾಹ್ ನ ನಡುವೆ ಮಧ್ಯವರ್ತಿತ್ವವನ್ನು ನಿಷೇಧಿಸಲಾಗಿದೆ. ಇಂತಹ ಮಧ್ಯವರ್ತಿತ್ವದಿಂದಾಗಿ ದೇವರ ಪ್ರತಿಷ್ಠೆಯಲ್ಲಿ ಪಾಲುದಾರರಾಗುತ್ತಾರೆ. ಅವರು ಕಾನೂನುಬಾಹಿರವಾಗಿ ಮುಗ್ಧ ಭಕ್ತರಿಂದ ಹಣ ಸಂಪಾದಿಸುತ್ತಾರೆ. ಒಬ್ಬ ನಿಜವಾದ ಮುಸ್ಲಿಮನು ದರ್ಗಾದ ಮೇಲ್ವಿಚಾರಕನೊಂದಿಗೆ ಸೇರಿ ಏನನ್ನೂ ಮಾಡಲಾರ.

ಒಂದು ನಿರ್ದಿಷ್ಟ ಸ್ಥಳವನ್ನು ಸಂತನ ಸಮಾಧಿಸ್ಥಳವೆಂಬ ಕಾರಣಕ್ಕಾಗಿ ಪವಿತ್ರ ಸ್ಥಳವೆಂದು ಪರಿಗಣಿಸವುದು ದುರಾಚಾರವಾಗಿದೆ. ಅಲ್ಲಿಗೆ ತೀರ್ಥಯಾತ್ರೆಯ ಉದ್ದೇಶದಿಂದ ಹೋಗುವುದನ್ನು ನಿಷೇಧಿಸಲಾಗಿದೆ. ನಿರ್ದಿಷ್ಟಪಡಿಸಿದ ದಿನ, ವಾರ ಅಥವಾ ವರ್ಷಗಳಲ್ಲಿ ನಿರ್ದಿಷ್ಟ ಪಡಿಸಿದ ಸಂತನನ್ನು ಆರಾಧಿಸುವುದು, ಆ ಆರಾಧನೆಯ ಕಾಲ ನಿರ್ಣಯ ಮಾಡವುದು ಸಹ ದೂಷಣಾರ್ಹವಾಗಿದೆ. ಸಂತನ ಪುಣ್ಯತಿಥಿಗಳಾದ ಉರೂಸ್ ಗಳನ್ನು,ವೈಯಕ್ತಿಕವಾಗಿ ಭಾರತದಲ್ಲಿ ಪ್ರತಿ ಶುಕ್ರವಾರ ರಾತ್ರಿ ಸಂತನಿಗೆ ಪೂಜಿಸುವುದನ್ನು ಸಹ ಖಂಡಿಸಲಾಗಿದೆ. ಪ್ರಾರ್ಥನೆಯನ್ನು ಸಂತನ ಹೆಸರಲ್ಲಿ ಮಾಡದೆ ಅಲ್ಲಾಹ್ ನ ಹೆಸರಲ್ಲಿ ಮಾಡಬೇಕು. ಸಂತನ ಗೋರಿಗಳಿಗೆ ಇಷ್ಟಾರ್ಥಗಳನ್ನು ನೆರವೇರಿಸುವಂತೆ ಪ್ರಾರ್ಥಿಸುವುದು, ಹರಕೆ ಹೊರುವುದು ಇವೆಲ್ಲ ದೇವರೊಂದಿಗೆ ಚೌಕಾಶಿ ಮಾಡುವುದಾಗಿದ್ದು ಮತ್ತೆ ಮತ್ತೆ ಇಂತಹ ಮೌಢ್ಯಗಳಿಗೆ ಪ್ರಚೋದಿಸುವವುಗಳಾಗಿವೆ. ಈ ರೀತಿಯ ಹಲವು ನಿಷೇಧಗಳ ಪಟ್ಟಿಯೇ ಇವೆ. ಪವಿತ್ರ 'ಕಾಬಾ' ವೊಂದನ್ನುಳಿದು ಯಾವುದೇ ಗೋರಿಗೆ ವಿಧೇಯ ಸೂಚಕ ಸಂಕೇತಗಳಿಂದ ವಿಧೇಯತೆ ಪ್ರಕಟಿಸುವಂತಿಲ್ಲ. ದೀಪ ಉರಿಸುವುದಾಗಲಿ, ಧೂಪ ಹಾಕುವುದಾಗಲೀ, ಗೋರಿಗಳಿಗೆ (ಮಜಾರ್ ಗಳಿಗೆ) ಹೊದಿಕೆ, ಮುಸುಕು ಹಾಕುವುದಾಗಲಿ ಮಾಡಬಾರದು. ಎಲ್ಲಾ ರೀತಿಯ ಆಧ್ಯಾತ್ಮಿಕ ಸಂಗೀತ ಮೇಳಗಳನ್ನು (ಕವ್ವಾಲಿ, ಮಜ್ಲೀಸ್) ಅವು ಮೌಖಿಕವಾಗಿರಲಿ, ವಾದ್ಯಗಳ ಮೂಲದ್ದಾಗಿರಲಿ, ನಿಷೇಧಿಸಬೇಕು. ಸಂಗೀತಗಾರರು, ದೇವದಾಸಿಯರು, ಧ್ವಜಹಿಡಿಯುವವರೊಂದಿಗೆ ಮಾದಕ ಪಾನೀಯಗಳನ್ನು ಸೇವಿಸಿ ಕುಣಿಯುತ್ತ ಬರುವ ಧಾರ್ಮಿಕ ಮುಖವಾಡದ ವರ್ಣರಂಜಿತ ಹಬ್ಬದ ರೀತಿಯ ಆಚರಣೆಗಳನ್ನು ನಿಷೇಧಿಸಬೇಕು. ಇವು ಬಹುದೇವತಾರಾಧನೆಯ ಲಕ್ಷಣಗಳಾಗಿದ್ದು ಕುರಾನ್ ಮತ್ತದರ ಪರಂಪರೆಯ ವಿವರಗಳು ಇಂತಹ ಲಕ್ಷಣಗಳನ್ನು ಖಂಡಿಸುತ್ತವೆ.

ವಿದೇಶಿ ಪ್ರವಾಸಿಗರೊಬ್ಬರ ಮೊಹರಂನ ಕುರಿತಾದ ದಾಖಲೆ

(ಜಾನ್ ದ ದೆವೆನೋ ಎನ್ನುವ ಪ್ಯಾರಿಸ್ ಪ್ರಾವಾಸಿಗವನೊಬ್ಬನು ೧೭ನೇ ಶತಮಾನದ ಮಧ್ಯಭಾಗದಲ್ಲಿ (೧೬೬೪)ದಕ್ಷಿಣಭಾರತದಲ್ಲಿ ಪ್ರವಾಸದಲ್ಲಿದ್ದಾಗ ಆಂಧ್ರಪ್ರದೇಶದ ಹೈದರಾಬಾದಿನಲ್ಲಿ ಮೊಹರಂನ್ನು ವೀಕ್ಷಿಸಿ ದಾಖಲಿಸಿರುವುದು ಅತ್ಯಂತ ಮಹತ್ವದ್ದಾಗಿದೆ. ಇಲ್ಲಿ ಜಾನ್ ದ ದೆವೆನೋ ಮೊಹರಂ ಆಚರಣೆಯಲ್ಲಿ ಮುಸ್ಲಿಂರೊಂದಿಗೆ ಮುಸ್ಲಿಮೇತರರೂ ಪಾಲ್ಗೊಳ್ಳುವುದನ್ನು ದಾಖಲಿಸಿದ್ದಾನೆ. ಅದರಲ್ಲೂ ವಿಶೇಷವಾಗಿ ಮುಸ್ಲಿಂರಿಗಿಂತಲೂ ಮುಸ್ಲಿಮೇರರೂ ಈ ಆಚರಣೆಯಲ್ಲಿ ಉತ್ಸಾಹದಿಂದ ಕುಣಿಯುವುದನ್ನು (ಅಲಾವಿ ಕುಣಿಯುವುದನ್ನು) ವಿವರಿಸುತ್ತಾನೆ. ಇದನ್ನು ಪ್ರವಾಸಿಕಂಡಇಂಡಿಯಾದ ಎಳನೆಯ ಸಂಪುಟದ ಪುಟ ನೂರರಿಂದ ಆಯ್ದು ಕೊಳ್ಳಲಾಗಿದೆ.)

ಕಾರೊಮಂಡಲ ತೀರದ ಸ್ಥಳಗಳ ಪರಿಚಯ ಸಾಕಷ್ಟು ಆದ ಮೇಲೆ ನಾನೂ ಮಚ್ಛಲಿ ಪಟ್ಟಣದಿಂದ ಭಾಗನಗರಕ್ಕೆ (ಹೈದರಾಬಾದ್) ಹಿಂದಿರುಗಿದೆ. ಅಲ್ಲಿ ಮೂರುವಾರ ಇದ್ದೆ. ಮೆಸಬಜೊ (M.BAZON) ಅವರನ್ನು ಬಿಟ್ಟು ನಾನು ಹೊರಡುವಂತಿರಲಲ್ಲ. ಅವರಿಗೆ ಬೇಲೆ ಕೆಲಸವಿತ್ತು. ಆದ್ದರಿಂದ ಅವರಿಗೋಸ್ಕರ ಕಾಯುತ್ತಾನಿಂತೆ. ಆಗ 'ಹುಸೇನ್' (ಮೊಹರಂ) ಹಬ್ಬ ನೋಡುವ ಅವಕಾಶಸಿಕ್ಕಿತು. ಎಲ್ಲರೂ ಮುಖ ಮೋರೆಗೆಲ್ಲ ಬೂದು ಬಳಿದುಕೊಂಡು ಮುಖವಾಡ ಹಾಕಿಕೊಂಡು ಹತ್ತುದಿನಗಳು ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾ ತಿರುಗುತ್ತಾರೆ. ವಿವಿಧ ವೇಷಗಳನ್ನು ಹಾಕಿಕೊಂಡು ಕತ್ತಿ 'ಹಿಡಿದು' 'ಹುಸೇನ್ ' ಎಂದು ಜೋರಾಗಿ ಕೂಗುತ್ತ ಕರೆಯುತ್ತಾರೆ. ಹಿಂದೂಗಳು ಸಹ ಈ ಹಬ್ಬದಲ್ಲಿ ವೇಷ ಹಾಕಿಕೊಂಡು 'ಮೂರ್'ರಗಿಂತ (ಮುಸ್ಲಲ್ಮಾನರಿಗಿಂತ) ಹೆಚ್ಚಾಗಿ ಕುಣಿಯುತ್ತಾರೆ.

ಮೂರರು ಹತ್ತು ದಿನಗಳಕಾಲ ಉಪವಾಸ ಇದ್ದವರಂತೆ ನಟಿಸುಸತ್ತಾರೆ. ಆದರೆ ಮನೆಗಳಲ್ಲಿ ಪಟ್ಟಾಗಿ ತಿನ್ನುತ್ತಾರೆ. ಕೇವಲ ಹಣ್ಣು ಹಂಪಲುಗಳನ್ನು ಮಾತ್ರ ತಿನ್ನುತ್ತೇವೆಂದು ಬಾಯಲ್ಲಿ ಹೇಳುತ್ತಾರೆ.

ಈ ಹಬ್ಬದ ವೇಳೆ ಷಿಯ್ಯಾಗಳಿಗೂ ಸುನ್ನಿಗಳಿಗೂ ಜಗಳ ತಪ್ಪಿದ್ದಲ್ಲ. ರಕ್ತಹರಿಯದೆ ಈ ಹಬ್ಬ ಮುಗಿಯುವುದೇ ಇಲ್ಲ. ಈ ಹಬ್ಬದ ಹತ್ತು ದಿನಗಳ ಕಾಲ ಸ್ವರ್ಗದ ಬಾಗಿಲು ತೆರೆದಿರುತ್ತವೆ ಎಂದು ಮೂರರ ನಂಬಿಕೆ. ಸತ್ತವರು ಸ್ವರ್ಗಕ್ಕೆ ಹೋಗುತ್ತಾರೆಂಬ ನಂಬಿಕೆಯಿಂದ ಸಾಯಲೂ ಸಿದ್ಧವಾಗಿರುತ್ತಾರೆ.

ಈ ಹಬ್ಬ ಮುಗಿದ ನಂತರ ಸೂರತ್ತಿಗೆ ಹೊರಡಲು ಸಿದ್ಧನಾಗಿರಬೇಕೆಂದು ಮಸ್ಯಬಜೋ ಅವರು ಹೇಳಿಕಳುಹಿಸಿದರು. ನಾನು ಸಿದ್ಧತೆಗಳನ್ನು ಮಾಡಿಕೊಂಡೆ.

ಅನುಬಂಧ - ೨


(ಹೈದರಾಬಾದ್ ಕರ್ನಾಟಕದೆಡೆ ಹಜರತ್ ಮೌಲಾನಾ ಸಿದ್ಧಿಕ್ ಎನ್ನುವವರು, ತಾವು ದೀನ್‌ದಾರ್ ಚೆನ್ನಬಸವಣ್ಣನ ಅವತಾರವೆಂಬುದಾಗಿ ಪ್ರತಿಪಾದಿಸಿ ಸೂಫಿ ಮತ್ತು ಶೈವದ ಅನುಭಾವಗಳೆರಡರಿಂದಲೂ ಪ್ರೇರಣೆ ಪಡೆದು 'ದೀನ್‌ದಾರ್ ಬಸವ ಸಮಾಜ' ಎನ್ನುವ ಆಧ್ಯಾತ್ಮಿಕ ಪಂಥವೊಂದನ್ನು ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಹುಟ್ಟು ಹಾಕಿದರು. ಆ ಸಮಾಜದ ತಾತ್ವಿಕ ವಿವರಗಳನ್ನೊಳಗೊಂಡ 'ಲಿಂಗಾಯತ' ಎನ್ನುವ ಕಿರು ಪುಸ್ತಕದಿಂದ ಆಯ್ದ ಭಾಗವನ್ನಿಲ್ಲಿ ಕೊಡಲಾಗಿದೆ. ಇಸ್ಲಾಂನ ಮತ್ತು ಶೈವದ ಅನುಭಾವಗಳೆರಡೂ ಒಂದೇ ಎಂಬುದನ್ನು ಪ್ರತಿಪಾದಿಸಿರುವುದು ಕುತೂಹಲಕರವಾಗಿದೆ.)

ಲಿಂಗಾಯತ ಜನಾಂಗ ಮತ್ತು ಅರಬ ಜನಾಂಗಗಳ ಮೂಲತತ್ವಗಳು ಸರಿಸಮಾನವಾಗಿದೆ "ವೀರಶೈವ ಮತಸಾರ ಸಂಗ್ರ" ಎಂಬ ಲಿಂಗಾಯತರ ಅಧಿಕೃತ ಗ್ರಂಥದಲ್ಲಿ ಬರೆದಿರುವುದೇನೆಂದರೆ ಈ ಬ್ರಹ್ಮಾಂಡದ ರಚನೆಯ ಮೊದಲು ಪಂಚ ಮಹಾಭೂತಗಳು ಐದು ಅಕ್ಷರಗಳ ರೂಪದಲ್ಲಿದ್ದುವು. ಅವು ಮುಂದೆ ಸಾಗಿ ಐದು ಪೀಠಗಳಾಗಿ ಮಾರ್ಪಟ್ಟವು ಅವು ಶೂನ್ಯತೆಯಿಂದ ಹೊರಟಿರುವವು ಆ ಪೀಠದ ಹೆಸರು 'ಶೂನ್ಯ ಸಿಂಹಾಸನ' ಎಂದರೆ ಶೂನ್ಯದಿಂದ ಹೊರಟಿದ ಪೀಠ. ಸೂಕ್ಷ್ಮ ಅಥವಾ ಶೂನ್ಯತೆಯು ಅಕಾರ ಹೊಂದಿದ ಮೇಲೆ ಆಕಾಶವು ಹುಟ್ಟಿತು. ಅದರಲ್ಲಿ ನಾಲ್ಕು ಮಹಾತತ್ವಗಳು; ಪೃಥ್ವಿ, ಜಲ, ಅಗ್ನಿ ಮತ್ತು ವಾಯು ಸಮಾವೇಶಗೊಂಡವು. ಆಕಾಶದಿಂದ ನೀರು ಸುರಿದಾಗ ಮಣ್ಣು ತನ್ನಲ್ಲಿ ಅಡಕವಾಗಿರುವ ಗಾಳಿ ಮತ್ತು ಬೆಂಕಿಯಿಂದ ಹಚ್ಚ ಹಸಿರಾಗುತ್ತದೆ. ಸೃಷ್ಟಿಗೆ ಅಹಾರ ಸಿಗುತ್ತದೆ. ನಮ್ಮ ದೃಷ್ಟಿಧ್ಯೇಯದಂತೆ ಐದು ಅಕ್ಷರಗಳು ಎರಡು ಅಲಿಫ್ ಎಂದರೆ ನಿಂತ ೧- ೧ 'ಅ'ಕಾರ ಮತ್ತು ಮೂರು ಜೆರ್ 'ಒ - ಒ - ಒ' ಎಂಬಂಥ 'ಅ'ಕಾರಗಳಾಗಿವೆ.

ಮೊದಲನೆ ಅಲಿಫ್ ಎಂಬ 'ಅ' ಕಾರದಿಂದ "ಅಹ್ಮದ್ " (ಸ.ಅ)ರವರು, ಇನ್ನೊಂದು 'ಅ' ಕಾರ ಅಲಿಫ್ ದಿಂದ ಅಬೂಬಕರ್ (ರದಿ) ಮತ್ತು 'ಜೆರ್' ಎಂಬ 'ಅ' ಕಾರದಿಂದ ಉಮರ್ (ರದಿ) ಉಸ್ಮಾನ್ (ರದಿ) ೨ ಮತ್ತು ಅಲೀ (ರದಿ) ಇರುವರು ಹೇಗೆಂದರೆ ಮೇಲೆ ಪ್ರಸ್ತಾಪಿಸಿದ ಗ್ರಂಥದಲ್ಲಿ ಇದರ ವಿವರಣೆ ಕೆಳಗಿನಂತಿದೆ ಎಂದರೆ "ಐದು ಅಕ್ಷರಗಳು ತಮ್ಮ ತಮ್ಮ ಹೆಸರುಗಳನ್ನು ಕ್ರಮವಾಗಿ ಈಶಾನ್ಯ, ತತ್ಪುರುಷ, ಅಘೋರ, ವಾಮದೇವ, ಮತ್ತು ಸದ್ಯೋಜಾತಿ ಎಂದು ವ್ಯಕ್ತಪಡಿಸಿದರು". ಇದರ ಮತ್ತಷ್ಟು ವಿವರವು ಈ ರೀತಿ ಮಾಡಲಾಗಿದೆ.

ಈಶಾನ್ಯ ಮುಖದಿಂದ ಆಕಾಶ ಉಂಟಾಯ್ತು, ತತ್ಪುರುಷನ ಮುಖದಿಂದ ನೀರು, ಅಘೋರನ ಮುಖದಿಂದ ಅಗ್ನಿ, ವಾಮದೇವನ ಮುಖದಿಂದ ಗಾಳಿ, ಸದ್ಯೋಜಾತಿಯ ಮುಖದಿಂದ ಮಣ್ಣು ಹುಟ್ಟಿದವು. ಅರಬರಲ್ಲಿ ಇದರ ವಿವರವು ಕೆಳಗಿನಂತಿದೆ.

ಜಗದ್ಗುರುಗಳಾದ ಹಜ್ ರತ್ ಮುಹಮ್ಮದ (ಸ.ಅ)ರವರು ಅಪ್ಪಣೆ ಕೊಟ್ಟಿರುವುದೇನೆಂದರೆ; ನನ್ನ ನಾಲ್ಕು

ಸಂಗಡಿಗರು ನಾಲ್ಕು ಮಹಾತತ್ವಗಳಂತಿರುವರು; ಅಬೂಬಕರ (ರದಿ)ರವರು'ನೀರು' ಉಮರ್ (ರದಿ)ರವರು 'ಅಗ್ನಿ' ಉಸ್ಮಾನ (ರದಿ)ರವರು 'ವಾಯು' ಮತ್ತು ಅಲೀ (ರದಿ)ರವರಿಗೆ 'ಅಬುತುರಾಬ್ ' ಎಂದರೆ 'ಮಣ್ಣಿನ ತಂದೆ' ಎಂಬ ಬಿರುದನ್ನು ದಯಪಾಲಿಸಿ ಈ ಸಮಸ್ಯೆಯನ್ನು ಸ್ಪಷ್ಟೀಕರಿಸಿದರು. ಹ|| ಮುಹಮ್ಮದ (ಸ.ಅ)ರವರು ಅಲೀ(ರದಿ)ರವರ ಬಗ್ಗೆ ಮತ್ತಷ್ಟು ವಿವರಣೆಯಲ್ಲಿ ಸ್ಪಷ್ಟಗೊಳಿಸಿದರೇನೆಂದರೆ ಅಲೀ(ರದಿ)ರವರು ಈಶ್ವರ ಅರ್ಥಾತ್ ಸರ್ವಲೋಕಗಳ ದಯಾನಿಧಿ ಹ||ಮುಹಮ್ಮದ (ಸ.ಅ)ರವರ ಪುತ್ರರು ಇವರ ಹೆಸರಿನ 'ಲಿಪಿ' ಯಾಕಾರವೂ  ಈ ತರದ, ಎಂದರೆ ಗಣಪತಿಯ ಸ್ವರೂಪದಂತೆ ಬರೆಯಲ್ಪಡುತ್ತದೆ. ಇದು ನಿಜವಾಗಿ ಅರಬ್ಬೀ ಲಿಪಿಯಲ್ಲಿ "ಅಲೀ" ಶಬ್ದವಿದೆ. ಮತ್ತು ಹ||ಮುಹಮ್ಮದ (ಸ.ಅ)ರವರು ಅಪ್ಪಣೆ ಕೊಡಿಸಿರುವುದೇನೆಂದರೆ, ಅಲೀ(ರದಿ)ರವರು ವಿದ್ಯಾದ್ವಾರವು ಆದಕಾರಣ ಲಿಂಗಾಯತರು ಪ್ರತಿ ವಿದ್ಯಾರ್ಥಿಯ ವಿದ್ಯಾರಂಭದಲ್ಲಿ ಇದರ ಪೂಜೆ ಮಾಡಿಸುತ್ತಾರೆ. ಮತ್ತು ಆರಂಭಿಕ ವಿದ್ಯಾ ಕಲಿಯತಕ್ಕ ಫಲಕದ ಮೇಲೆ ಗಣಪತಿಯ ಚಿತ್ರ ಚಿತ್ರಿಸುತ್ತಾರೆ.

ಆದಂ ಮತ್ತು ಹವ್ವಾ ಇವರ ಸಾದೃಶ್ಯದಲ್ಲಿ ಇವರ ಅಧಿಕೃತ ಗ್ರಂಥಗಳಲ್ಲಿ ಮಹಾದೇವ ಹಾಗೂ ಪಾರ್ವತಿ ಎಂದು ಬರೆಯಲ್ಪಟ್ಟಿದೆ. ತ್ರಿಲೋಕಗಳ ಒಡೆಯರಾದ ಹ||ಮುಹಮ್ಮದ್ (ಸ.ಅ)ರವರು ವಿಜ್ಞಾಪಿಸಿರುವು ದೇನೆಂದರೆ, "ಜಗತ್ತಿನಲ್ಲಿ (೯೯) ಆದಮರು ಆಗಿಹೋಗಿದ್ದಾರೆ ಮತ್ತು ನನ್ನ ಆದಮರು ನೂರನೆಯವರು; ಇವರ ಐದು ಸಾವಿರ ಆರು ನೂರು ವರ್ಷಗಳ ತರುವಾಯ ನಾನು ಬಂದಿರುವೆನು." ಅರಬರಲ್ಲಿಯೂ ಇದೇ ರೀತಿಯ ನಂಬಿಕೆ ಇತ್ತು.ಆದ್ದರಿಂದ ಅರಬರಲ್ಲಿ ಮತ್ತು ಲಿಂಗಾಯತರಲ್ಲಿಯೂ ಈ ಮಾತು ಸಾಮಾನ್ಯವಾಗಿ ನಡೆಯುತ್ತ ಬಂದಿದೆ, ಅದೇನೆಂದರೆ ಆದಮರ ಒಂದು ಪಾದ ಸಿಂಹಳದ್ವೀಪದಲ್ಲಿ, ಅಲ್ಲಿ ಅರಬರ ಎರಡನೆಯ ತಂಗುದಾಣವಾಗಿತ್ತು.

ಇಂದಿಗೆ ಐದು ಸಾವಿರ ವರ್ಷಗಳ ಹಿಂದೆ ಲಿಂಗಾಯತರ ಮುಖ್ಯಸ್ಥ ಶಿವಭಕ್ತನಾದ ರಾವಣನು ಲಂಕಾದ್ವೀಪವನ್ನು ಆಳುತ್ತಿದ್ದನು. ಇಂತಹ ಶಾಸ್ತ್ರಧಾರನ ಮೇಲಿಂದ ಶ್ರೀರಾಮರ ಕಾಲ ಎಂಟು ಲಕ್ಷ ಐದು ಸಾವಿರ ವರ್ಷಗಳೆಂದು ತೋರಿಸಲ್ಪಡುತ್ತದೆ. ಕೊನೆಯಲ್ಲಿದ್ದರು ಮತ್ತು ಶ್ರೀಕೃಷ್ಣರು ದ್ವಾಪಾರ ಯುಗದ ಕೊನೆಯವರು. ಏಕೆಂದರೆ ದ್ವಾಪಾರದ ಕಾಲ ಎಂಟು ಲಕ್ಷ ವರ್ಷಗಳಾಗುವುದು; ಈ ಯೋಚನೆಯಿಂದ ರಾಮರ ಕಾಲ ಎಂಟು ಲಕ್ಷ ಐದು ಸಾವಿರ ವರ್ಷಗಳೆಂದು ಸಿದ್ಧವಾಗುತ್ತದೆ. ಉದ್ದೇಶವೇನೆಂದರೆ, ಶ್ರೀರಾಮರ ಕಾಲದಲ್ಲಿ ಶಿವಭಕ್ತನಾದ ರಾವಣನಿದ್ದನು. ಈ ರಾವಣ ಎಂಬ ಶಬ್ದವು ಫಿರೋನ್ ಶಬ್ದದ ಅಪಭ್ರಂಶವಾದವೆಂದು ತಿಳಿದುಬರುತ್ತದೆ. ಅರಬ ಪ್ರದೇಶ ಯಾವಾಗಲೂ ಮಿಸರ್ ದೇಶದ ವಶದಲ್ಲಿ ಇದ್ದಿತೆಂದು ಇತಿಹಾಸದಿಂದ ತಿಳಿದು ಬರುತ್ತದೆ. ಹೇಗೆಂದರೆ ಈರಾನ್ ದ ಅರಸನಾದ ಪರವೇಜ್ ನು, ಜಗದ್ಗುರು ಹ||ಮುಹಮ್ಮದ (ಸ.ಅ)ರವರ ಶಾಂತಿ: (ಇಸ್ಲಾಂ)ವನ್ನು ಸ್ವೀಕರಿಸಲು ಕೊಟ್ಟ ಆಮಂತ್ರಣ ಪತ್ರದ ಮೇಲೆ ಕೋಪಾವೇಶದಿಂದ ಸನ್ನಿಧಾನ ಮುಹಮ್ಮದ್ (ಸ.ಅ)ರನ್ನು

ಸೆರೆಹಿಡಿಯಲು ಮಿಸರ್ ದೇಶದ ರಾಜಪಾಲನಿಗೆ ಆಜ್ಞೆಕೊಟ್ಟಿದ್ದನು. ಇದರಿಂದ ಅರಬ್ ದೇಶವು ಯಾವಾಗಲೂ ಮಿಸರ್ ದೇಶದ ಆಧೀನವಾಗಿದ್ದಿತ್ತೆಂದು ತಿಳಿಯುತ್ತದೆ. ಮಿಸರ್ ದ ಅರಸನು 'ಫಿರೋನ್ 'ನೆಂಬ ಬಿರುದಿನಿಂದ ಕರೆಯಲ್ಪಡುತ್ತಿದ್ದನು. ಈ ನಂಬಿಕೆಯ ಕಾರಣದಿಂದಾಗಿ ಅರಬರು ಮುಸಲ್ಮಾನರ (ಶಾಂತಿ:ಧಾರಕ)ರಾದ ಬಳಿಕ ಗೌರವ ಹೆಚ್ಚಿಸುವ ದೃಷ್ಟಿಕೋನದಿಂದ "ಸನ್ನಿದಾನ ಜಗದ್ಗುರು ಹಜರತ ಮುಹಮ್ಮದ"(ಸ.ಅ)ರವರಿಗೆ "ರಾ ಏನಾ"ಎಂದು ಕರೆದಿದ್ದರು, ಆದರೆ ಪರಮಾತ್ಮ (ಅಲ್ಲಾಃ)ನಿಗೆ ಅದು ಅಪ್ರೀಯವಾಯಿತು.

ನಿಜವಾದ ವಿಷಯವೇನೆಂದರೆ, ಅರಬ ಸ್ಥಾನ ಮತ್ತು ಅದರ ಸುತ್ತಮುತ್ತಲಿನ ಜನರು ಅರಬವಂಶಜರು ಮತ್ತು ಆಫ್ರಿಕೆಯ ಉತ್ತರ ಮತ್ತು ಪೂರ್ವ ಹಾಗೂ ಈಶಾನ್ಯ ಪ್ರದೇಶದ ಜನರೂ ಅರಬವಂಶಜರು. ಈ ಅರಬರು ಫಿರೋನಿನ ಕಾಲಕ್ಕಿಂತಲೂ ಪೂರ್ವದಿಂದ ವಾಣಿಜ್ಯ ಮೂಲಕ ದಕ್ಷಿಣ ಭಾರತದಿಂದ ತಮ್ಮ ಸಂಬಂಧವನ್ನಿಟ್ಟಿದ್ದರು. ಇದರ ಸಲುವಾಗಿ ಅರಬರ ಬಗ್ಗೆ ಮಾನವ ಸೃಷ್ಟಿಯ ಆದಿಕಾಲದಿಂದಲೇ ದಕ್ಷಿಣ ಭಾರತದಲ್ಲಿ ಕೇವಲ ಈ ಒಂದೇ ಜನಾಂಗ ನೆಲಸಿತ್ತೆಂದು ಹೇಳುವುದರಲ್ಲಿ ಅತಿಶಯೋಕ್ತಿಯಾಗಲಾರದು. ಮೊತ್ತ ಮೊದಲು ದಕ್ಷಿಣಕ್ಕೆ ಬಂದ ಅರಬಿ ತಂಡದವರ ಭಾಷೆ ಅರವೀಯಾಗಿತ್ತು. ಭಾರತೀಯರ ಭಾಷೆ ಶೈಲಿಯಲ್ಲಿ 'ಬ'ಕಾರವು 'ವ'ಕಾರದಿಂದ ಬದಲಾಗುತ್ತದೆ ಆದುದರಿಂದ ಅರವೀ ನಿಜವಾಗಿ ಅರಬೀ ಇದೆ. ಇದು ಆ ಕಾಲದ ಅರಬರ ಭಾಷೆ ಇತ್ತು; ಅದು ಅರಬೀ ಭಾಷೆಯ ಅಪಭ್ರಂಶವಾದ ಭಾಷೆ ಇದೆ. ಅರಬರ ಎರಡನೆಯ ಆಗಮನವಾದಾಗ ಅರಬೀ ಭಾಷೆಯು ತೆಲಂಗಿ ಭಾಷೆಯ ರೂಪಗೊಂಡಿತು. ಮತ್ತು ಮೂರನೆಯ ಬರುವಿಕೆಯಾದಾಗ ಕನ್ನಡ ಭಾಷೆಯಾಯಿತು ಹಾಗೂ ನಾಲ್ಕನೆ ಬರುವಿಕೆಯಿಂದ ತುಳು ಭಾಷೆ ಹುಟ್ಟಿತ್ತು.ಈ ಭಾಷೆ ಈ ಕಾಲದ ಮಲಬಾರಿಯವರ ಭಾಷೆಯಾಗಿದೆ.

ಶಾಂತಿ: ಧರ್ಮ (ಇಸ್ಲಾಂ)ದ ಉದಯದ ನಂತರ ಇಲ್ಲಿಗೆ ಬಂದ ಅರಬರ ಭಾಷೆ ಅರಬೀಯಾಗಿದೆ. ಅದು ಬದಲಾಗದ ಸ್ಥಿತಿಯಲ್ಲಿದೆ. ಅರವೀ ಭಾಷೆಯ ಮೇಲೆ ಲಕ್ಷೋಪಲಕ್ಷ ವರ್ಷಗಳು ಸಂದಿಸಿದ್ದರಿಂದ ಉಳಿದ ಭಾಷೆಗಳಂತೆ ಇದರ ಸ್ಥಿತಿಯೂ ಆಯಿತು. ಎಂದರೆ ಜಗತ್ತಿನ ಎಲ್ಲ ಭಾಷೆಗಳು ಅರಬ್ಬಿ ಭಾಷೆಯಿಂದಲೇ ಉದಯಿಸಿದವು, ತನ್ನ ನಿಜತ್ವದ ಎದುರಿಗೆ ಎಲ್ಲ ಭಾಷೆಗಳು ಇದೇ ಸ್ಥಿತಿಯಾಗಿದೆ.

ಇದೊಂದು ಸ್ಥಿರವಾದ ವಿಷಯವು. ಈ ಬಗ್ಗೆ ಬಹಳ ಚರ್ಚೆಗಳಾಗಿವೆ, ದೃಢವಾದ ಆಧಾರಪ್ರಮಾಣಗಳಿಂದ ಅರಬೀ ಭಾಷೆಯೇ ಸರ್ವ ಭಾಷೆಗಳ ಮಾತೃ ಭಾಷೆ ಎಂದು ಸಿದ್ಧಪಡಿಸಲಾಗಿದೆ.ಉದ್ದೇಶವೇನೆಂದರೆ ಅರವೀ ಭಾಷೆ ಮಾತನಾಡುವವರಲ್ಲಿ ಹೊಡ ಅರಬೀ ಜನಾಂಗಗಳ ಆಗಮನವಾಯಿತು. ಆದ್ದರಿಂದ ಇವರಲ್ಲಿ ಭಾಷಣ ಹಾಗೂ ಲೇಖನ ಕಲೆಯಲ್ಲಿ ಅರಬಿತ್ವದ ಸಮೀಪವಾಗುವ ಕಾರಣ ಉಂಟಾಯಿತು, ತೆಲಂಗಿ ಭಾಷೆ ಅರವೀ ಭಾಷೆಯನಂತರದ ಭಾಷೆ, ಮತ್ತು ಕನ್ನಡ ಭಾಷೆ ತೆಲಂಗಿ ಭಾಷೆಯ ನಂತರದ ಭಾಷೆ, ಹಾಗೂ ತುಳು ಭಾಷೆ ಕನ್ನಡ ಭಾಷೆಯ ನಂತರದ ಭಾಷೆಯಾಗಿದೆ. ಎಲ್ಲಾ ಭಾಷೆಗಳಲ್ಲಿಯೂ ಅರಬೀ ಶಬ್ದಗಳು ಕಂಡು ಬರುತ್ತವೆ. ಆದರೆ ಲಿಂಗಾಯತ ಜನಾಂಗದ

[illegible]

[illegible]

[illegible]

[illegible]

ಪ್ರಸಿದ್ಧವಾದ ಕನ್ನಡ ಭಾಷೆ ಇದರಲ್ಲಿ ಇನ್ನಿತರ ಭಾಷೆಗಳಿಗಿಂತಲೂ ಹೆಚ್ಚಾಗಿ ಅರಬಿ ಶಬ್ದಗಳು ಕಂಡು ಬರುತ್ತವೆ. ಏಕೆಂದರೆ ಇವರು ಅರಬರಿಂದ ಸಂಬಂಧಗಳು ಬೆಳಸುವುದರಲ್ಲಿ ಸಮೀಪದವರು. ಈ ಲಿಂಗಾಯತರ ನಂತರ ಬಂದ ಅರಬರಿಗೆ ನಾವೂ ಮಾಪಿಳ್ಳೆ ಎನ್ನುತ್ತೇವೆ. ಇವರ ಹೆಸರುಗಳೂ ಅರಬರಂತೆ ಅಪತ್ಯ ನಾಮಗಳ ಹೆಸರುಗಳಿವೆ. ಉದಾ ॥ಅರಬಸ್ಥಾನದಲ್ಲಿ ಅರಬರ ಹೆಸರುಗಳು "ಅಬೂಬಕರ್ , ಅಬುಲ್ಕಾಸಿಂ, ಅಬೂ ಅಹ್ಮದ, ಅಬೂಮೊಹಮ್ಮದ,"ಮುಂತಾದವುಗಳು ಇವೆ ಮತ್ತು ಮಾಪಿಳ್ಳೆಯವರ ಹೆಸರುಗಳೂ "ಬಕರಬ್ಬಾ, ಕಾಸಿಮಬ್ಬಾ ಅಹ್ಮದಬ್ಬಾ ಮುಹಮ್ಮದಬ್ಬಾ ಎಂಬುದಾಗಿರುವವು. ಆದರೆ ವ್ಯತ್ಯಾಸವೇನೆಂದರೆ ಮೊದಲಿಗಿದ್ದ ಅಬ್ಬಾ ಶಬ್ದವನ್ನು ತೆಗೆದು ಕೊನೆಗೆ ಹಾಕಲಾಗಿದೆ. ಇವರಿಗಿಂತ ಮೊದಲು ಬಂದಿರುವ ಅರಬ ಜನಾಂಗವಾದ ಲಿಂಗಾಯತರೂ ತಮ್ಮ ಹೆಸರುಗಳನ್ನು ಇದೇ ರೀತಿಯಲ್ಲಿ ಮಾಡಿ ಕೊಂಡಿದ್ದಾರೆ, ಇವರು ಸಹ ಹೊರತ್ತು ಪಡಿಸದೆ ಈ ಕುಲ = ನಾಮಗಳುಳ್ಳ ಹೆಸರುಗಳನ್ನು ಬಳಸಿರುವರು. ಎಂದರೆ ಪ್ರತಿಲಿಂಗಾಯತನ ಹೆಸರಿನ ಕೊನೆಯಲ್ಲಿ ಅಬ್ಬಾ ಎಂಬ ಅರಬೀ ಶಬ್ದಕ್ಕೆ ಸಮಾನಾರ್ಥವಾದ ಅಪ್ಪಾ ಶಬ್ದವಿರುತ್ತದೆ. ಏಕೆಂದರೆ ಇವರಲ್ಲಿ 'ಪ'ಕಾರ ಮತ್ತು 'ಬ' ಕಾರದ ಬಗ್ಗೆ ಒಟ್ಟು ಸಿದ್ಧಾಂತದಂತೆ ಇವೆರಡು ಶಬ್ದಗಳೂ ಅದಲು ಬದಲಾಗುತ್ತದೆ. ಆದುದರಿಂದ ಅಪ್ಪಾ ಶಬ್ದ ನಿಜವಾಗಿ ಅಬ್ಬಾ ಎಂದಾಗಿದೆ, ಇದು ಅರಬಿಶಬ್ದವು ಇದರ ಅರ್ಥ ತಂದೆ ಎಂದಾಗುತ್ತದೆ. ಆ ಹೆಸರುಗಳೂ ಕೆಳಗಿನಂತಿವೆ "ವೀರಪ್ಪ ಮಹಾ ದೇವಪ್ಪ, ಸಿದ್ಧಪ್ಪಾ, ರಾಮಪ್ಪ, ಚನ್ನ ಬಸಪ್ಪ, ಈಶ್ವರಪ್ಪ, ಹನುಮಂತಪ್ಪ, ಮಲ್ಲಿಕಾಜಪ್ಪ ಮುಂತಾದವುಗಳು. ಈ ಸಾಮ್ಯತೆಯಿಂದ ಲಿಂಗಾಯತ ಜನಾಂಗ ಸಮೀಪದ ಅರಬರು, ಮಿಸರಿಯವರ ಏಳ್ಗೆಯ ಕಾಲದಲ್ಲಿ ದಕ್ಷಿಣಕ್ಕೆ ವಲಸೆ ಬಂದಿರುವರು.

ಅರಬೀ ಭಾಷೆಯು ಸರ್ವ ಭಾಷೆಗಳ ಮಾತೃಭಾಷೆ ಎಂಬುದು ಮನ್ನಿಸಲ್ಪಟ್ಟ ವಿಷಯವು. ಹೀಗಿರುವುದರಿಂದ ಅಗತ್ಯವಾಗಿ ಅರಬೀ ಲಿಪಿಯೂ ಜಗತ್ತಿನ ಎಲ್ಲಾ ಲಿಪಿಗಳ ಮಾತೃಲಿಪಿಯಾಗಿರಬೇಕು, ಎಂದರೆ ಸರ್ವ ಲಿಪಿಗಳು ಇದೇ ಅರಬೀ ಲಿಪಿಯಿಂದಲೇ ಉಂಟು ಮಾಡಲ್ಪಟ್ಟಿರಬೇಕು, ಚಿಂತನೆಯಿಂದ ನಿಜವಾಗಿ ಹೀಗೆಯೇ ಇದೆ ಎಂದು ತಿಳಿದು ಬರುತ್ತದೆ. ಜನಾಂಗಗಳು ಎಷ್ಟು ಮಟ್ಟಿಗೆ ಹಳೇಯವೆಂದು ಕಂಡುಬರುತ್ತವೆಯೋ ಅಷ್ಟರ ಮಟ್ಟಿಗೆ ಅವರ ಲಿಪಿಗಳಲ್ಲಿ ಹೆಚ್ಚಾಗಿ ಕೆಡುತನ ಕಂಡು ಬರುತ್ತದೆ. ಆದರೆ ಲಿಂಗಾಯತ ಜನಾಂಗ (ಅರಬರ) ಹತ್ತಿರವಾಗಿರುವ ಕಾರಣ ಇವರ ಲಿಪಿಯು ಅರಬೀಯೊಂದಿಗೆ ಹೆಚ್ಚಾಗಿ ಹೋಲಿಕೆಯಾಗಿರುತ್ತದೆ. ಸ್ವೀಕರಿಸಲ್ಪಟ್ಟ ಮಾತೇನೆಂದರೆ, ಎಲ್ಲಾ ಅರಬೀ ಅಕ್ಷರಗಳ ಮೇಲೆ 'ಅ'ಕಾರ ಚಿನ್ಹೆಗಳಿರುತ್ತವೆ. ಈ 'ಅ'ಕಾರ ಚಿಹ್ನೆಯನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ಅರಬೀ ಅಕ್ಷರಗಳ ಲೇಖನ ಕಲೆಯನ್ನು ಉಳಿಸುತ್ತ ಪ್ರತಿ ಅಕ್ಷರದ ಎದುರಿಗೆ ಇರಿಸಲಾಗಿದೆ ಮತ್ತ ಪೂರ್ವಾತ್ಯ ದೇಶದಲ್ಲಿ ಅಕ್ಷರಗಳನ್ನು ಮಗುಚಿಸಲ್ಪಟ್ಟಿದೆ. 'ಅ'ಕಾರ ಚಿಹ್ನೆಯನ್ನು ಪ್ರತಿ ಅಕ್ಷರದ ಕೊನೆಗೆ ಹಾಕಿದ್ದಾರೆ. ಲಿಂಗಾಯತ ಜನಾಂಗವು ಸಮೀಪದಲ್ಲಿ ಬಂದ ಅರಬರು ಇರುವ ಕಾರಣ ಇವರು ಅರಬ್ಬೀಯಂತೆ 'ಅ'ಕಾರ ಚಿನ್ಹೆಯನ್ನು ಪ್ರತಿ ಅಕ್ಷರದ ಮೇಲೆಯೇ ಇಟ್ಟಿದ್ದಾರೆ. ಸ್ವಲ್ಪ ವ್ಯತ್ಯಾಸವೇನೆಂದರೆ ಅರಬೀ ಅಕ್ಷರದ ಮೇಲೆ 'ಅ'ಕಾರ ಚಿನ್ಹೆ

ಬೇರೆಯಾಗಿರುತ್ತದೆ ಮತ್ತು ಕನ್ನಡ ಅಕ್ಷರಗಳಲ್ಲಿ ಈ 'ಅ'ಕಾರ ಚಿನ್ಹೆಯನ್ನು ಅಕ್ಷರಕ್ಕೆ ಕೂಡಿಲು ವೃತ್ತಾಕಾರವನ್ನು ಎಳೆಯಲಾಗುತ್ತದೆ. ಉದಾ|| ಅರಬೀ ಅಕ್ಷರಗಳು- ع- ث- ت -ب- ا ಮುಂತಾದುವು. ಕನ್ನಡಾಕ್ಷರಗಳು " ಅ - ಬ - ತ ಸ-ಜ್ ".ಜಗಕ್ಕೆಲ್ಲ ತಿಳಿದಿರುವ ವಿಷಯವೇನೆಂದರೆ, ಉತ್ತರ ಭಾರತದ ಎಲ್ಲ ಭಾಷೆಗಳ ಲಿಪಿಗಳು ದೇವನಾಗರಿಯಿಂದ ಹೋಲಿಕೆ ಹೊಂದುವಂತೆ ಇವೆ ಮತ್ತು ದಕ್ಷಿಣದ ಭಾಷೆಗಳ ಲಿಪಿಗಳು ಕನ್ನಡ ಲಿಪಿಗೆ ಹೋಲಿಕೆಯಾಗುವಂತೆ ಇವೆ.

ದೇವನಾಗರಿ ಲಿಪಿ ನಿಜವಾಗಿಯೂ ಕನ್ನಡ ಲಿಪಿಯಿಂದ ಮಾಡಲ್ಪಟ್ಟಿದೆ. ಆದಕಾರಣ ದೇವನಾಗರಿಗೆ ನಂದಿನಾಗರಿಯೂ ಎನ್ನಲಾಗುತ್ತದೆ. ನಂದಿ ಎಂದರೆ ಎತ್ತು ಈ ನಂದಿಯೇ ಕಡೆಗೆ ಭಾರತವ ಎಲ್ಲಾ ಜನಾಂಗಗಳ ದೇವರಾಯ್ತು. ಇದು ಯಾವಾಗ ಅಂದರೆ ಶಿವನು ಉತ್ತರ ಭಾರತವನ್ನು ಕೈವಶ ಮಾಡಿಕೊಂಡು ಹಿಮಾಲಯ ಬೆಟ್ಟಗಳವರೆಗೆ ತಲುಪಿದ್ದನು. ಕಾಶ್ಮೀರದಲ್ಲಿ ಸುಲೇಮಾನ್ ಸಿಂಹಾಸನ ಬೆಟ್ಟದ ಮೇಲೆ ಈ ಲಿಂಗಾಯತ ಜನಾಂಗದ "ಲಿಂಗ ಮತ್ತು ನಂದಿ" ಈಗಲೂ ಇವೆ. ಹಾಗೂ ಕಾಶೀಯಲ್ಲಿಯೂ 'ನಂದಿ ಮತ್ತು ಲಿಂಗವು' ಈಗಲೂ ಇವೆ.

ಇವರ ಹಿಡಿಕೆಯ ಪ್ರಭಾವಪರಿಣಾಮ ಉತ್ತರ ಭಾರತದ ಜನರ ಮೇಲೆ ಬೀರಿದ ಬಳಿಕ ಇವರು ಯಜ್ಞದಲ್ಲಿ ಎತ್ತಿನ ವಧೆಯನ್ನು ನಿಲ್ಲಿಸಿ ಬಿಟ್ಟರು. ಆದಾಗ್ಯೂ ವೇದ ಮತ್ತು ಉತ್ತರ ಭಾರತದ ಪುರಾಣಗಳನ್ನು ಓದಿ ನೋಡಿದರೆ, ಅವರಲ್ಲಿ ಎತ್ತಿನ ಯಜ್ಞ ಸಾಮಾನ್ಯವಾಗಿ ಇತ್ತು ಎಂದು ತಿಳಿದು ಬರುತ್ತದೆ.

ಪುರಾಣಗಳಲ್ಲಿ ಶ್ರೀರಾಮರ ಗುರುಗಳಾದ ವಶಿಷ್ಠ ಮತ್ತು ವಾಲ್ಮೀಕಿ ಋಷಿಗಳು ಕೂಡ ವೇದ ಪ್ರಮಾಣಾಧಾರದಿಂದ ಹೋರಿಗಳನ್ನು ವಧೆ ಮಾಡಿದ್ದಾರೆ. ೧ ಮತ್ತು "ಸೀತಾದೇವಿಯೂ ಗಂಗಾ ಹೊಳೆಯ ದಂಡೆಯ ಮೇಲೆ ಒಂದು ಸಾವಿರ ಹಸುಗಳನ್ನು ವಧೆ ಮಾಡಿಸಿದ್ದಳು. ೨.ಹಾಗೂ ಮನುಜೀಯವರು ನರ್ಮದಾ ನದಿಯ ದಂಡೆಯ ಮೇಲೆ ನಾಲ್ಕು ಲಕ್ಷ ಹಸುಗಳನ್ನು ವಧೆಮಾಡಿಸಿದರೆಂದು ಪುರಾಣಗಳಲ್ಲಿ ಬರೆಯಲ್ಪಟ್ಟಿದೆ. ೩. ಭಾರತದಲ್ಲಿ ಒಂದೇ ಜನಾಂಗ ಲಿಂಗಾಯತ ಮಾತ್ರ ಎಂದೂ ಎತ್ತಿನ ವಧೆಯ (ಯಜ್ಞ)ಮಾಡಿಲ್ಲವೆಂದು ಕಂಡು ಬರುತ್ತದೆ. ಇವರ ಆಳ್ವಿಕೆಯ ಕಾಲದಲ್ಲಿ ಎಂದರೆ ಶಿವಭಕ್ತನಾದ ರಾವಣನು ಉತ್ತರ ಭಾರತದಲ್ಲಿ ಧಾಳಿ ಮಾಡಿ ತನ್ನ ಕೈವಶ ಮಾಡಿಕೊಂಡನಂತರ ಅವರಿಂದ ವೇದಗಳ ಯಜ್ಞದಲ್ಲಿರುವ ಪಶುವಧೆನಿಂತು ಹೋಯ್ತು: ಬೌದ್ಧರು ತಮ್ಮ ಆಳ್ವಿಕೆಯ ಕಾಲದಲ್ಲಿ ವೈದಿಕರನ್ನು ಮತ್ತಷ್ಟು ಮೆತ್ತಗೆ ಮಾಡಿದರು.

ನಿಜವಾಗಿಯೂ ಇದು ಲಿಂಗಾಯತ ಜನಾಂಗದ ಪ್ರಭಾವದಿಂದಲೇ ಹಿಂದೂ ಜಾತಿಗಳು ಎತ್ತನ್ನು ಪೂಜ್ಯವೆಂದು ಹೇಳುವರು. ಇಲ್ಲವಾದರೆ ಅವರ ವೇದ ಹಾಗೂ ಶಾಸ್ತ್ರಗಳಲ್ಲಿ ಯಾವ ಕಡೆಯಲ್ಲೂ ಎತ್ತು ಅಥವಾ ಗೋವಿಗೆ ಪಾವಿತ್ರ್ಯವೂ ಇಲ್ಲ ಇವರ ಆಳ್ವಿಕೆಯ ಕಾಲದಲ್ಲಿ ಕನ್ನಡ ಲಿಪಿನ ಮೇಲಿನ 'ಅ'ಕಾರ ಚಿನ್ಹೆ ನಂದಿನಾಗರಿಯಲ್ಲಿ

ಪ್ರತಿ ಅಕ್ಷರದ ನಂತರ ಬಂದಿತು. ಮರಾಠಿ "ಎನ್ ಸಾಯಿಕ್ಲೊಪೇಡ್ಯಾ"ದ ಪ್ರಸಿದ್ಧ ಬರಹಗಾರರಾದ ಡಾ: ಕೇತ್ಕರ ಪಿ.ಹೆಚ್ .ಡಿ.ಯವರ ಅಭಿಪ್ರಾಯವೇನೆಂದರೆ ಉತ್ತರ ಭಾರತದ ಹೇಮಾದ್ರಿ ಪಂಡಿತರು ಮೋಡಿ ಳಿಯನ್ನು ಅರಬೀ ವರ್ಣಮಾಲೆಯಿಂದ ರಚಿಸಿದ್ದಾರೆ. ಇಂಗ್ಲಿಷ್ ಭಾಷೆಯ ಕ್ಯಾಪಿಟಲ್ ಲೆಟರ್ಸ್ ವೆಂಬ ಅಕ್ಷರಗಳು ಎಂದರೆ ಬುನಾದಿ ಅಕ್ಷರಗಳೆಂದು ಎನ್ನಲಾಗಿದೆ. ಅವು ನಿಜವಾದ ಅಕ್ಷರಗಳಾಗಿವೆ. ಇವುಗಳಿಂದಲೆ ಅನ್ಯ ಅಕ್ಷರಗಳು ರಚಿಸಲ್ಪಟ್ಟಿವೆ; ಆ ಕ್ಯಾಪಿಟಲ್ ಲೇಟರ್ಸ್ ನಿಜವಾಗಿ ಅರಬಿ ಅಕ್ಷರಗಳಿಂದ ರಚಿಸಲಾಗಿದೆ. ಇದರ ಉಲ್ಲೇಖ ಹಿಂದೆಯಾಗಿದೆ ಲ್ಯಾಟಿನ್ ಅಥವಾ ಇಂಗ್ಲೀಷ್ ಬರಹಗಳಲ್ಲಿ ಅರಬೀ ಅಕ್ಷರಗಳ ಲೇಖನ ಕಲೆ ಉಳಿಸಿ ಅರಬೀ ಅಕ್ಷರದ 'ಅ'ಕಾರ ಚಿಹ್ನೆಗೆ ಅಲಿಫ್ ಎಂಬ ನಿಂತ ಗೆರೆಯ ರೂಪ (೧)ದಲ್ಲಿ ಇಡಲಾಗಿದೆ. ಕನ್ನಡ, ದೇವನಾಗಿರಿ, ಮತ್ತು ಇಂಗ್ಲಿಷ್ ಈ ಮೂರು ಭಾಷೆಗಳ ಮೂಲಾಕ್ಷರಗಳನ್ನು ಕೋಷ್ಟಕದಲ್ಲಿ ತೋರಿಸಲಾಗಿದೆ. ಈ ಲಿಂಗಾಯತ ಜನಾಂಗವು ಅರಬೀಯವರ ಸಮೀಪದ ವಂಶಜರಾಗಿರುವ ಕಾರಣ ತಮ್ಮ ಮೂಲಾಕ್ಷರಗಳಲ್ಲಿ ಅರಬೀ 'ಅ'ಕಾರ ಚಿನ್ಹೆಯನ್ನು .ಉಳಿಸಿದ್ದಾರೆಂದು ಓದುಗರು ಗಮನಿಸಬಹುದು.

ಲಿಂಗಾಯತ ಹಾಗೂ ಮುಸಲ್ಮಾನರ ಶ್ರದ್ಧೆಗಳ ಐಕ್ಯತೆ

ಲಿಂಗಾಯತರಲ್ಲಿ	ಮುಸಲ್ಮಾನರಲ್ಲಿ
೧. ಲಿಂಗಾಯತರಲ್ಲಿ ಮಹದೇವ ಪಾರ್ವತೀಯವರಿಂದ ನರವಂಶದ ಉತ್ಪತ್ತಿ ಆರಭಂವಾಯಿತು.	೧. ಮುಸಲ್ಮಾನರಲ್ಲಿ ಆದಂ ಮತ್ತು ಹವ್ವಾ ಇವರಿಂದ ನರವಂಶದ ಉತ್ಪತ್ತಿ ಆಯಿತು.
೨. ಸಿಂಹಳ ದ್ವೀಪದಲ್ಲಿ ಮಹದೇವನ ಪಾದವಿದೆ.	೨. ಸಿಂಹಳ ದ್ವೀಪದಲ್ಲಿ ಆದಂರ ಪಾದವಿದೆ.
೩. ಈಶ್ವರನ ಮಗ ಗಣಪತಿ	೩. ಸರ್ವಲೋಕಗಗಳ ಕರುಣಾನಿಧಿ ಈಶ್ವರ ಸ್ವರೂಪಿ ಹ॥ ಮಹಮ್ಮದ (ಸ.ಅ)ರವರ ಅಳಿಯರು ಆಧ್ಯಾತ್ಮಿಕ ಸಂಬಂಧಿ ಪುತ್ರ ಹ॥ ಅಲೀ ಗಣಭಪತಿಯ ಸ್ವರೂಪದಲ್ಲಿದ್ದಾರೆ.
೪. ಈಶಾನ್ಯನ ಮುಖದಿಂದ ಆಕಾಶ ಹೊರಟಿತು.	೪. ಸನ್ನಿಧಾನ ಜಗದ್ಗುರು ಹ॥ ಮೊಹಮ್ಮದ (ಸ.ಅ)ರಿಂದ ಆಕಾಶ ಉಂಟಾಯಿತು.
೫. ಸದ್ಯೋವಜಾತಿ, ವಾಮದೇವ, ಅಘೋರ ತತ್ಪುರುಷ=ನೀರು.	೫. ಹ॥ ಅಲೀ (ರದಿ) ಹ॥ ಉಸ್ಮಾನ್ , (ರದಿ) ಹ॥ ಉಮರ (ರದಿ) ಹ॥ ಅಬೂಬಕರ (ರದಿ) ಇವರು ನಾಲ್ಕು ಮಹಾತತ್ವಗಳಾಗಿದ್ದಾರೆ.

[illegible]

[illegible]

[illegible]

ಲಿಂಗಾಯತರಲ್ಲಿ	ಮುಸಲ್ಮಾನರಲ್ಲಿ
೬. ಮಠದಲ್ಲಿ ಪೋಷಿಸಲ್ಪಡುವ ಶಿಶುವಿಗೆ ಸಾಮರಿ (ಸ್ವಾಮಿಮರಿ) ಎನ್ನುತ್ತಾರೆ. ನಂತರ ಅವನು ಮಠದ ಪಟ್ಟಾಧಿರಿಕಾಯಾಗುತ್ತಾನೆ.	೬. ಹ|| ಮೂಸಾ (ಮೊಶೆ) ಪೈಗಂಬರರ ಸಂಗಡ ವಲಸೆ ಮಾಡಿ ಬಂದವರಲ್ಲಿ ಮಿಸರೀಯವರ ಆಶ್ರಮದಲ್ಲಿ ಪೋಷಿಸಲ್ಪಟ್ಟ ಯಹೂದಿ ಶಿಶು ಒಬ್ಬನಿದ್ದನು. ಅವನಿಗೆ 'ಸಾಮಾರಿ' ಎಂದೆನ್ನುತ್ತಾರೆ. ಇದರ ಉಲ್ಲೇಖ ದೇವೋಕ್ತ ಕುರಾನಿನಲ್ಲಿ ಇದೆ.
೭. ಜಂಗಮ (ಪರಿಪೂರ್ಣ ಮಾನವ)ನು ರುದ್ರ ರೂಪ (ತ್ರಿಜಗ ವಲ್ಲಭ ಸಂದೇಶಕ, ಹ|| ಮೊಹಮ್ಮದ (ಸ.ಅ)ರವರು) ಅವರಿಗೆ ಪುನರ್ಜನ್ಮವಿಲ್ಲ.	೭. ಫನಾಫಿರ್ ರಸೂಲ್ ಮಾನವರೇ ಪರಿಪೂರ್ಣ ಮಾನವರು, ಇದೇ ಕಡೆಯ ಎಬ್ಬಿಸುವಿಕೆ, ಈ ಸ್ಥಳಕ್ಕೆ ಪಡೆವುದು ಪ್ರತಿ ಮುಸಲ್ಮಾನನ ಕರ್ತವ್ಯವು.
೮. ಹರ ಎಂಬ ಮೇಧಾವಿ ಪ್ರತಾಪವು (ಜಲಾಲಿ) ಹೆಸರಿನ ಪೂಜಕರಾಗಿದ್ದಾರೆ.	೮. ಮೊಹಮ್ಮದ (ಸ.ಅ) ಎಂಬ ಮೇಧಾವಿ ಪ್ರತಾಪವುಳ್ಳ (ಜಲಾಲಿ) ಹೆಸರಿನ ಅನುರಾಗಿಗಳಾಗಿದ್ದಾರೆ.
೯. ಧರ್ಮ ವಿಮುಖವಾದವನಿಗೆ ಶುದ್ಧೀಕರಿಸಿ ಪುನಃ ತೆಗೆದುಕೊಳ್ಳಲಾಗುತ್ತದೆ.	೯. ಧರ್ಮ ವಿಮುಖನನ್ನು ಪುನಃ ಧರ್ಮದಲ್ಲಿ ತೆಗೆದುಕೊಳ್ಳಲಾಗುತ್ತದೆ.
೧೦. ಖಡ್ಗ ಕೈಯಲ್ಲಿದ್ದರೆ ಧರ್ಮ ವಿಮುಖನನ್ನು ಕೊಲ್ಲಲ್ಪಡಲಾಗುತ್ತದೆ.	೧೦. ಖಡ್ಗ ಕೈಯಲ್ಲಿದ್ದರೆ ಧರ್ಮ ವಿಮುಖನನ್ನು ಕೊಲ್ಲಲ್ಪಡಲಾಗುತ್ತದೆ.
೧೧. ನೀರು ತಳವಿತ್ತು ಆ ವೇಳೆ ಅದರ ಮೇಲೆ ಕೇವಲ ಶಂಭುನಿದ್ದನು.	೧೧. ಕೇವಲ ನೀರಿನ ಮೇಲೆ ಒಂದು ಸಮಯ ಅಲ್ಲಾಹನ ಪೀಠವಿತ್ತು.
೧೨. ಲಿಂಗದಲ್ಲಿ ಎಲ್ಲಾ ವಸ್ತುಗಳು ಅಡಕವಾಗಿದೆ.	೧೨. ಮಾನವರಲ್ಲಿ ಎಲ್ಲಾ ವಸ್ತುಗಳು ಅಡಕವಾಗಿದೆ.
೧೩. ನಾಲ್ಕು ವೇದಗಳು ಮತ್ತು ವಚನಗಳ ನಂತರ ಪ್ರಣವ ಅರ್ಥಾತ್ ಪಾರಾಯಣೇಸುವ ಒಂದು ಗ್ರಂಥವಿದೆ.	೧೩. ಸರ್ವಗ್ರಂಥಗಳಿಗೆ ಮುದ್ರೆಯೆಂದರೆ ಎಲ್ಲ ಗ್ರಂಥಗಳನ್ನೊಳಗೊಂಡ ಕುರಾನ್ ಅರ್ಥಾತ್ ಓದುವುದು ಇಸ್ಲಾಮೀ ಗ್ರಂಥವಾಗಿದೆ.
೧೪. ವಿಗ್ರಹ ಪೂಜೆ ಮಹಾಪಾಪವು.	೧೪. ದೈವ ಸಹಭಾಗಿತ್ವ=ವಿಗ್ರಹ ಪೂಜೆ ಎಂದರೆ (ಶಿರ್ಕ್) ಮಹಾಪಾಪವು.
೧೫. ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ.	೧೫. ಆಲಮೆ ನಾಸೂತ್ , ಆಲಮೆ ಮಲಕೂತ್ , ಆಲನಮೆ ಜಬ್ರೂತ್ .

ಲಿಂಗಾಯತರಲ್ಲಿ	ಮುಸಲ್ಮಾನರಲ್ಲಿ
೧೬. ಭಕ್ತ, ಮಹೇಶ, ಪ್ರಸಾದ, ಪ್ರಾಣ, ಶರಣ ಮತ್ತು ಐಕ್ಯ.	೧೬. ಫನಾಫಿಲ್ ವಜೂದ್, ಫನಾಫಿಷೇಖ, ಫೆನಾಫಿಜ್ಹಾತ್, ಫನಾಫಿರ್ ರಸೂಲ್, ಫನಾಫಿಲ್ಲಾಹ.
೧೭. ಲಿಂಗಾಯಿತರ ಕೆಲ ಪವಿತ್ರ ಸ್ಥಳಗಳಲ್ಲಿ ಕುರಿಗಳು ವಧಿಸಲ್ಪಡುತ್ತವೆ.	೧೭. ಮುಸಲ್ಮಾನರ ಪವಿತ್ರ ಸ್ಥಳಗಳಲ್ಲೂ ಕುರಿಗಳು ವಧಿಸಲ್ಪಡುವುದು.
೧೮. ಲಿಂಗಾಯಿತ ಜನಾಂಗದ ಪೂಜ್ಯ ವ್ಯಕ್ತಿಗಳು ಗಡ್ಡವನ್ನು ಬಿಡುತ್ತಾರೆ.	೧೮. ಮುಸಲ್ಮಾನರಲ್ಲಿ ಗಡ್ಡ ಪವಿತ್ರ ವಸ್ತು ಇದೆ.
೧೯. ಲಿಂಗಾಯತ ಜನಾಂಗದ ಪೂಜ್ಯ ಜನರು ಕಾವಿಯ ಪೋಷಾಕನ್ನು ಹುಟ್ಟು ಹಸಿರು ಮುಂಡಾಸವನ್ನು ಸುತ್ತುವರು.	೧೯. ಮುಸಲ್ಮಾನರ ಕೆಲಗುರುಕುಲಗಳಲ್ಲಿ ಕಾವಿಯ ಬಟ್ಟೆ ಹಾಗೂ ಹಸಿರು ಮುಂಡಾಸವನ್ನು ಧರಿಸುವರು.
೨೦. ಈ ಜನಾಂಗದ ಪಟ್ಟ ಶೂನ್ಯ (ಸೂಕ್ಷ್ಮ) ಸಿಂಹಾಸನ ಅಂದರೆ ಕಳೆ (ಲಾಇಲಾಹ)ದ ಕಳೆದ ಸಿಂಹಾಸನವೆನಿಸಿಕೊಳ್ಳುವುದು.	೨೦. ಇವರ ಪ್ರತಿ ಗುರುಪೀಠ ಶಾಲೆ ಮತ್ತು ಪ್ರತಿ ಆಶ್ರಮ (ಲಾಇಲಾಹ) ಎಂದರೆ ತನ್ನನ್ನು ಕಳೆಯುವ ಶಿಕ್ಷಣ ಕೊಡುತ್ತದೆ.
೨೧. ಈ ಜನಾಂಗದ ಶೇಷ್ಠ ವರ್ಗ ಅಂದರೆ ಜಂಗಮರಲ್ಲಿ ಅಸ್ಪ್ರಶ್ಯತೆ ಇಲ್ಲ.	೨೧. ಮುಸಲ್ಮಾನರಲ್ಲಿಯೂ ಅಸ್ಪ್ರಶ್ಯತೆ ಇಲ್ಲ.
೨೨. ಶಾಂತಿಃ (ಇಸ್ಲಾಂ)ದ ಪ್ರಚಾರ ಸಿದ್ಧಾಂತದಿಂದ ಪ್ರಭಾವಿತರಾಗಿ ಎಂಟುನೂರು ವರ್ಷಗಳಿಂದ ಲಿಂಗಾಯತರಲ್ಲಿ ಧರ್ಮ ಪ್ರಚಾರ ಕಾರ್ಯ ಆರಂಭಿಸಿತು.	೨೨. ಶಾಂತಿಃ (ಇಸ್ಲಾಂ) ಪ್ರಚಾರಕ ಧರ್ಮವಾಗಿದೆ.
೨೩. ಯಾವ ವ್ಯಕ್ತಿಯಾದರೂ ತನ್ನ ಧರ್ಮವನ್ನು ಬಿಟ್ಟು ಬಂದ ನಂತರ ತನ್ನ ಧರ್ಮದವರಿಗೆ ಭವಿಗಳೆಂದು ತಿಳಿಯದವನು ಅವರೊಳಗಿನವನೆ.	೨೩. ಯಾವ ವ್ಯಕ್ತಿಯಾದರೂ ತನ್ನ ಧರ್ಮವನ್ನು ಬಿಟ್ಟು ಶಾಂತಿಃ (ಇಸ್ಲಾಂ)ದಲ್ಲಿ ಸೇರಿದ ನಂತರ ತನ್ನ ಧರ್ಮದವರನ್ನು ಭವಿಗಳೆಂದು ತಿಳಿಯದವನು ಅವರೊಳಗಿನವನೇ.
೨೪. ಲಿಂಗಾಯತ ಜನಾಂಗದಲ್ಲಿ ಯಾವವರೆಗೆ ಒಡಕು ಸ್ಪರ್ಧೆಗಳಾಗದೆ ಪ್ರಳಯ ಸ್ಥಿರವಾಗಲಾರದು.	೨೪. ಮುಸಲ್ಮಾನರಲ್ಲೂ ಯಾವವರೆಗೆ ತಾರತಮ್ಯ ಸ್ಪರ್ಧೆಗಳಾಗದೆ ಪ್ರಳಯ ಸ್ಥಿರವಾಗಲಾರದು.
೨೫. ಲಿಂಗಾಯತರಲ್ಲಿ ಪ್ರಳಯದ ಅಧಿಪತಿ	೨೫. ಮುಸಲ್ಮಾನರಲ್ಲಿ "ಮಾಲಿಕಿಯೌಮಿದ್ದೀನಿನ"

ಲಿಂಗಾಯತರಲ್ಲಿ	ಮುಸಲ್ಮಾನರಲ್ಲಿ
ರುದ್ರನಿರುವನು.	ಪ್ರತಿರೂಪ ಹ॥ಮೊಹಮ್ಮದ ಆಯ್ದ (ಸ.ಅ)ರವರು ಪ್ರಳಯದ ಒಡೆಯರು.
೨೬. ಲಿಂಗಾಯತ ಜನಾಂಗದ ಚಿತ್ರದುರ್ಗದಲ್ಲಿರುವ ಪ್ರಧಾನ ಕೇಂದ್ರವಾದ ಶೂನ್ಯ ಸಿಂಹಾಸನ ಮಠದಲ್ಲಿ ಬೀಜಮಂತ್ರ "ಲಾಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹಿ" ಎಂಬ ಕಲಮಾತೃತ ಬಾ: ಬೆಳಗುತ್ತಲಿದೆ.	೨೬. ಮುಸಲ್ಮಾನರ ಬಳಿಯೂ ಪ್ರತಿ ಮಸೀದಿಗಳಲ್ಲಿ ಬೀಜಮಂತ್ರ "ಲಾಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹಿ" ಎಂಬ ಕಲಮಾತೈಯ ಬಾ: ಬೆಳಗುತ್ತಲಿದೆ.
೨೭. ಲಿಂಗಾಯತ ಜನಾಂಗದಲ್ಲಿ ಬೀಜ ಮಂತ್ರದ ಪ್ರಸಾದದಿಂದ ಕೆಳಗಿನ ಶಿವಶರಣರು ಉದಯಿಸಿದರು. ೧. ಕಲ್ಯಾಣ ಬಸವೇಶ್ವರರು, ೨. ಮಳೆಯ ಮಲ್ಲೇಶಪ್ಪ (ಕಡಗಂಚಿದ ಮಠ ಮಲಿಕಾಷಾಃ ಸಾಹೇಬರು), ೩. ಕೊಡೆಕಲ್ಲು ಬಸಪ್ಪನವರು (ಮೊಹಮ್ಮದ್ ಸರ್ವರರು) ೪. ಮೋನಪ್ಪಯ್ಯ (ಮೊಯೀನುದೀನ್ ರು ತಿಂಥಿಣಿ) ೫. ಅಲ್ಲಾಹಮಹಾಪ್ರಭು (ಸುಲ್ತಾನ್ ಅಹ್ಮದ್ ಷಾಃ ಬೀದರ) ೬. ಮುರುಘಸ್ವಾಮಿ (ಮುರ್ತುಜಾಷಾಃ ಕಾದ್ರಿಯವರು ಚಿತ್ರದುರ್ಗ).	೨೭. ಮುಸಲ್ಮಾನರಲ್ಲಿ ಬೀಜಮಂತ್ರ (ಕಲ್ಮಾತೃಯ ಬಾ:)ದ ಪ್ರಸಾರದಿಂದ ಬಹಳಷ್ಟು ಶಿವಶರಣರು ಉದಯಿಸಿದರು. ೧. ಹ॥ಪೀರಾನೆಪೀರ್ ಗೌಸುಲಾಜಂಸ್ತಗೀರರು. ೨. ಹ॥ ಖ್ವಾಜಾ ಮೊಯಿನುದ್ದೀನ್ ಚಿಷ್ತಿಯವರು. ೩. ಹ॥ ದಾದಾ ಹಯಾತ ಕಲಂದರರು. ೪. ಹ॥ ಖ್ವಾಜಾಬಂದಾ:ನವಾಜಗೇಸುದರಾಜ್ ರವರು. ೫. ಬಾಬಫಕ್ರುದ್ದೀನರು ಪೆನಗೊಂಡ. ೬. ಹ॥ ಅಮೀನುದ್ದೀನ್ ಆಲಾ ಬೀಜಾಪುರ ಮುಂತಾದವರು.
೨೮. ಲಿಂಗಾಯತ ಜನಾಂಗದ ಬಳಿ ಧರ್ಮ ರಾಜನು ಏಳು ಗಜದ ಕಲ್ಲಿನ ರೂಪದಲ್ಲಿ ಬಿದ್ದಿದ್ದಾನೆ, ಶ್ರೀ ಚನ್ನಬಸವೇಶ್ವರರ ಆಶೀರ್ವಾದದಿಂದ ಬೆಳಕಿನಲ್ಲಿ ಬರುವ ನಿರೀಕ್ಷೆಯಿದೆ.	೨೮. ಮುಸಲ್ಮಾನರ ಬಳಿ ಪ್ರವಾದಿತ್ವದ ಮಾರ್ಗ ಮೇಲಿರುವ ಧರ್ಮರಾಜ್ಯವು ಕೊನೆಯ ಕಾಲದಲ್ಲಿ ಬೆಳಕಿಗೆ ಬರುವ ಶುಭಕರವಾದ ಭವಿಷ್ಯವಾಣಿ ಇದೆ. ಅವರು ಎಂಟು ಜನ ಧರ್ಮರಾಜರು ಕುರೈಷ್ಯವೆಂಬ ಮನೆತನದವರು ಇರಬೇಕು.

ಲಿಂಗಾಯತ ಮತ್ತು ಮುಸಲ್ಮಾನರಲ್ಲಿ ಪದ್ಧತಿ ಮತ್ತು ಸಂಸ್ಕಾರಗಳ ಐಕ್ಯತೆ	
೧. ಲಿಂಗಾತಯ ಜನಾಂಗ ತಮ್ಮ ಕೂಸಿನ ಕೊರಳಲ್ಲಿ ಉಪನಯನದ ವೇಳೆಯಲ್ಲಿ ಲಿಂಗವನ್ನು ಕಟ್ಟುವುದು ಅಗತ್ಯವೆಂದು ತಿಳಿಯುತ್ತಾರೆ.	೧. ಮುಸ್ಲಿಂ ಜನಾಂಗ ತಮ್ಮ ಕೂಸಿನಖತ್ನಾ (ಲಿಂಗದ ತುದಿ ಛೇದನೆ) ಮಾಡುವುದು ಅಗತ್ಯವೆಂದು ತಿಳಿಯುತ್ತದೆ.
೨. ಲಿಂಗದ ಸಂಬಂಧ ಗುಪ್ತಾಂಗದಿಂದ ಇದೆ.	೨. ಖತ್ನಾದ ಸಂಬಂಧ ಗುಪ್ತಾಂಗದಿಂದ ಇದೆ.
೩. ಲಿಂಗಾಯತರಲ್ಲಿ ಲಗ್ನ ಮತ್ತು ಉಡಿಕೆಯ ರೂಢಿ ಇದೆ.	೩. ಮುಸಲ್ಮಾನರಲ್ಲಿ ಲಗ್ನ ಮತ್ತು ಪುನರ್ ವಿವಾಹವಿದೆ.
೪. ಲಿಂಗಾಯತರಲ್ಲಿ ಬಹುಪತ್ನಿಯರನ್ನಾಳ್ವಿಕೆಗೆ ಧರ್ಮಸಮ್ಮತವಾಗಿದೆ.	೪. ಮುಸಲ್ಮಾನರಲ್ಲಿಯೂ ಬಹು ಪತ್ನಿಯರನ್ನಾಳ್ವಿಕೆಗೆ ಧರ್ಮ ಸಮ್ಮತವಾಗಿದೆ.
೫. ಲಿಂಗಾಯತ ಜನಾಂಗ ತಮ್ಮ ಶವವನ್ನು ಸ್ನಾನ ಮಾಡಿಸಿ ಬಟ್ಟೆ ತೊಡಿಸಿ ಹೂಳುತ್ತಾರೆ.	೫. ಮುಸಲ್ಮಾನರೂ ತಮ್ಮ ಶವವನ್ನು ಸ್ನಾನ ಮಾಡಿಸಿ ಬಟ್ಟೆ ತೊಡಿಸಿ ಹೂಳುತ್ತಾರೆ.
೬. ಲಿಂಗಾಯತ ಜನಾಂಗ ತಲೆ ಬೋಳಿಸುವುದು ಮತ್ತು ತಲೆ ತುಂಬಾ ಕೂದಲಿಡುತ್ತಾರೆ.	೬. ಮುಸಲ್ಮಾನರು ತಲೆ ಬೋಳಿಸುತ್ತಾರೆ ಮತ್ತು ತಲೆ ತುಂಬಾ ಕೂದಲಿಡುತ್ತಾರೆ.
೭. ಲಿಂಗಾಯತ ಜನಾಂಗದ ಜನಾಂಗಿಯ ಗುರುತು ಬಿದಿಗೆ ಚಂದ್ರ ಧ್ವಜವಿದೆ.	೭. ಮುಸಲ್ಮಾನರ ಜನಾಂಗೀಯ ಗುರುತು ಬಿದಿಗೆ ಚಂದ್ರ ಧ್ವಜವೆ ಇದೆ.

ಲಿಂಗಾಯತ ಮತ್ತು ಮುಸಲ್ಮಾನರ ಸ್ವಭಾವ ಹಾಗೂ ರೀತಿಗಳಲ್ಲಿ ಐಕ್ಯತೆ	
೧. ಲಿಂಗಾಯತ ಜನಾಂಗ ಯಾವ ಅರಸನ ರಾಜ ದ್ರೋಹಿಯಾಗಲಾರದು.	೧. ಮುಸಲ್ಮಾನರೂ ಯಾವ ಅರಸನ ದ್ರೋಹಿಗಳಾಗಲಾರರು.
೨. ಲಿಂಗಾಯತ ಜನಾಂಗ ಯಾವ ಧಾರ್ಮಿಕ ವ್ಯವಹಾರದ ಕರೆಗೆ ಹೋಗೊಟ್ಟು ಒಂದಾಗಿ ಕೂಡುತ್ತದೆ.	೨. ಮುಸಲ್ಮಾನರು ಧಾರ್ಮಿಕ ವ್ಯವಹಾರದ ಕರೆಗೆ ಓಗೊಟ್ಟು ಒಂದಾಗಿಕೂಡುವರು.
೩. ಲಿಂಗಾಯತ ಜನಾಂಗ ಹೊಡೆದಾಟ ಬಡಿದಾಟ ಹಾಗೂ ಸಾವಿಗೆ ಎದುರುವುದಿಲ್ಲ.	೩. ಮುಸಲ್ಮಾನರೂ ಹೊಡೆದಾಟ ಬಡಿದಾಟ ಮತ್ತು ಸಾವಿಗೆ ಹೆದರುವುದಿಲ್ಲ.

ಅನುಬಂಧ - ೪

ಬೀದರಿನ ಸ್ಥಳಿಯ ಕನ್ನಡ ದಿನ ಪತ್ರಿಕೆಗಳ ಭಾಷೆಯ ಮೇಲೂ ಉರ್ದುವಿನ ಪ್ರಭಾವ ದಟ್ಟವಾಗಿದೆ.
ಉದಾಹರಣೆಗೆ ಈ ಕೆಳಗಿನ ದಿನ ಪತ್ರಿಕೆಯ ತುಣಕೊಂದನ್ನು ನೋಡಬಹುದು.

ಪಬ್ಲಿಕ್

ಸಂಪಾದಕರು: ಗಂಧರ್ವ ಸೇನಾ, ಕನ್ನಡ ದಿನ ಪತ್ರಿಕೆ, ಬೀದರ್, ಶನಿವಾರ ೯-೩-೧೯೯೬,

ಮಂತ್ರಿ ಪದವಿಗಾಗಿ ಅಟ್ಟುರ - ಮೀರಾಜುದ್ದೀನ್ ನಡುವೆ ಜಬರದಸ್ತ ಮುಖಾಬಲಾ

ನಾಗಮಾರಪಳ್ಳಿ ತಟಸ್ಥ

ಬೀದರ್ ೮:-

ಮಂತ್ರಿ ಪದವಿಯಿಂದ ಮೀರಾಜುದ್ದೀನ್ ಅವರ ರಾಜಿನಾಮೆಯಿಂದ ಖಾಲಿ ಆಗಿರುವ ಜಾಗ ಭರ್ತಿ ಮಾಡಲು ಬೀದರಿನ ಮೂವರೂ ದಳ ಶಾಸಕರು ದಾವೇದಾರರು ಆಗಿದ್ದಾರೆ.

ಆದರೆ ಸದ್ಯಕ್ಕೆ ಬೆಂಗಳೂರಿನಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ಗಮನಿಸಿದರೆ ಸದ್ಯಕ್ಕೆ ಪದ್ದಮುಖ ಸ್ಪರ್ಧೆ ಬಸವಕಲ್ಯಾಣದ ಶಾಸಕೆರಾದ ಬಸವಕಲ್ಯಾ ಪಾಟೀಲ ಅಟ್ಟುರ ಹಾಗೂ ಮಾಜಿ ಮಂತ್ರಿ ಮೀರಾಜುದ್ದೀನ್ ಅವರ ನಡುವೆಯೇ ನಡೆಯತಿದೆ ಏನೋ ಎಂಬ ಭಾವನೆ ವ್ಯಕ್ತವಾಗುತಿದೆ.

ಮೀರಾಜುದ್ದೀನ್ ಅವರ ಪರವಾಗಿ ನೂರಾರು ಜನರ ತಂಡ ಈಗಾಗಲೇ ಬೆಂಗಳೂರಿನಲ್ಲಿಯೇ ಬಿಡಾರ ಹೂಡಿದ್ದಾರೆ. ಹಾಗೂ ಪ್ರತಿಯೊಬ್ಬ ಮಂತ್ರಿಗೆ ಭೇಟಿ ಆಗಿ ಲಾಬಿಂಗ್ ಮಾಡುತಿದ್ದಾರೆ. ಐಕ್ಸದ ಧುರೀಣರಿಗೆಲ್ಲಾ ದಿನಾಲು ಭೇಟಿ ಆಗಿ ಮೀರಾಜುದ್ದೀನ್ ಅವರಿಗೆ ಮತ್ತೆ ಮಂತ್ರಿ ಮಾಡುವ ಸಲುವಾಗಿ ಮನವಿ ಮಾಡುತಿದ್ದಾರೆ.

ಇವರ ಪರವಾಗಿ ಬೀದರ ಜಿಲ್ಲೆಯವರಲ್ಲದೇ ಗುಲಬರ್ಗಾ ಜಿಲ್ಲೆಯ ಕೆಲ ಮುಸ್ಲಿಂ ಕಾರ್ಯ ಕರ್ತರೂ ಬಹಳ ತಿರುಗಾಡುತಿದ್ದಾರೆ. ಎಂದು ತಿಳಿದು ಬಂದಿದೆ.

ಈಗಾಗಲೇ ಕೋರ್ಟನಲ್ಲಿಯೀವ ಕಾರಣಕ್ಕಾಗಿ ಪ್ರಶ್ನಿಸಿ ರಿಟ್ ಅರ್ಜಿ ಹಾಕಲಾಗಿತ್ತೂ ಅದೇ ಕೆಲಸ ಮಂತ್ರಿ ಪದವಿ ತ್ಯಜಿಸಿ ಮೀರಾಜುದ್ದೀನ್ ಅವರ ಪ್ರಾಮಾಣಿಕತೆ ಸಾಬಿತು ಆಗುತ್ತಿದೆ. ಹೀಗಾಗಿ ಮತ್ತೆ ಅವರಿಗೆ ಮಂತ್ರಿ ಮಂಡಲಕ್ಕೆ ಸೇರಿಸಬಹುದಾಗಿದೆ ಎಂದು ಇವರುಗಳು ವಾದಿಸುತಿದ್ದಾರೆ.

ಅದೇ ರೀತಿ ಬಸವರಾಜ ಪಾಟೇಲ ಅಟ್ಟುರೆ ಅಪರ ಪರವಾಗಿ ಕೂಡಾ ಜಬರದಸ್ತ್ ಲಾಬಿಂಗ್ ನಡೆಯುತಿದೆ.

ಈಗಾಗಲೇ ಜಿಲ್ಲೆಯಲ್ಲಿ ಸತತವಾಗಿ ನಾಲ್ಕು ಬಾರಿ ಆಯ್ಕೆ ಆಗುತ್ತ ಬಂದಿರುವ ಏಕೈಕ ಶಾಸಕರಾಗಿದ್ದಾರೆ. ಅಲ್ಲದೇ ಮೀರಾಜುದ್ದೀನ್ ಅವರಿಗೆ ಒಂದು ಅವಕಾಶ ಕೊಡಲಾಗಿದೆ. ಅಲ್ಲದೇ ಮೀರಾಜುದ್ದೀನ್ ಅವರಿಗೆ ಮಂತ್ರಿಗಿರಿ ಮತ್ತು ನೀಡಿದರೆ, ಹಿಂದುಮತದಾರರಿಗೆ ಕೆರಳಿಸಿದಂತೆ ಆಗುತ್ತದೆ.

ಈದರಿಂದ ಭಾಜಪ ರಾಜಕೀಯ ಲಾಭಗಳಿಸಬಹುದು. ಈ ಎಲ್ಲಾ ಕಾರಣಗಳಿಂದ ಸದ್ಯ ಮಂತ್ರಿ ಪದವಿಗೆ ಅಟ್ಟುರೆ ಅವರ ಸರದಿ ಇದೆ. ಅವರಿಗೆ ಮಂತ್ರಿ ಮಾಡಬೇಕು ಎಂಬವಾದ ಅಟ್ಟುರ ಅವರ ಬೆಂಬಲಿಗರು ಮಂಡಿಸುತಿದ್ದಾರೆ.

ಅಟ್ಟುರ ಅವರ ಬೆಂಬಲಿಗರೂ ನೂರಾರು ಜನ ಬೆಂಗಳೂರನಲ್ಲಿ ಪಕ್ಷದ ಮುಖಂಡರಿಗೆ ಪ್ರಮುಖ ಮಂತ್ರಿಗಳಿಗೆ ದಿನಾಲು ಭೇಟಿ ಆಗುತಿದ್ದಾರೆ ಎನ್ನಲಾಗಿದೆ.

ಆದರೆ ಆಶ್ಚರ್ಯ ಎಂದರೆ ಔರುದ್ ಶಾಸಕರಾದ ಗುರುಪಾದಪ್ಪ ನಾಗಮಾರಪಳ್ಳಿ ಅವರು ಮೌನ ತಾಳಿದ್ದಾರೆ. ಯಾವ ಲಾಬಿಂಗ್ ಕೂಡಾ ನಡೆಸುತಿಲ್ಲ. ಯಾರ ಕಡೆಗೂ ಯಾರಿಂದಲೂ ಹೇಳಿಸುವ ಲಾಬಿಂಗ್ ಮಾಡುತಿಲ್ಲ ಎಂದು ಗೊತ್ತಾಗಿದೆ.

ಆದರೆ ಮೀರಾಜ ಅಟ್ಟುರೆ ಅವರು ಲಾಬಿಂಗ್ ಮಾಡುತ್ತಿರುವುದರ ಕಿಂತು ಹೆಚ್ಚು ಪರಿಣಾಮ ನಾಗಮಾರಪಳ್ಳಿ ಅವರ ಮೌನವೇ ಬೀರುತಿದೆ ಎಂದೂ ರಾಜಕೀಯ ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ.

ಈ ಲಾಬಿಂಗ್ ಒಂದೆಡೆ ಇದ್ದರೆ ದೇವೇಗೌಡರು ಮತ್ತೊಂದೆಡೆಂದು ಹೇಳಬಹುದು. ಅವರ ಮನಸ್ಸಿನಲ್ಲಿ ಏನಿದೆಂಬುದು ಯಾರಿಗೂ ಗೊತ್ತಿಲ್ಲ. ಈಗಾಗಲೇ ಮಂತ್ರಿ ಮಂಡಲ ವಿಸ್ತರಿಸುತ್ತಾರೋ ಅಥವಾ ಇಂಜಾರ್ಜ ಮಂತ್ರಿಯಾಗಿ ಕಲ್ಬುರ್ಗಿದವರಿಗೆ ಜವಾಬ್ದಾರಿ ನೀಡುತ್ತಾರೋ ಎಂಬಂದೂ ಸುಳಿವೊ ಅವರು ಇನ್ನೂ ನೀಡಲಿಲ್ಲ.

ಗುಲುಬರ್ಗಾ ಕನ್ನಡದ ಮೇಲಾದ ಉರ್ದುವಿನ ಪ್ರಭಾವಕ್ಕೆ ಉದಾಹರಣೆಗೆಈ ಕೆಳಗಿನ ಜನಪದ ಕತೆಯೊಂದನ್ನು ನೋಡಬಹುದು

ಇಬ್ಬುರು ಅಣತಮದೇರು

ಇಬ್ಬುರು ಅಣತಮದೇರು ಇದ್ದುರು. ಒಬ್ಬಿಗ ಮಕ್ಳ ಇದ್ರ ಒಬ್ಬಿಗಿದ್ದಿಲ್ಲ. ಪೂಸ್ ಐತವಾರ್ ಬಂದು ಮಕ್ಳ ಸೊಸ್ತುರು ಇದ್ದರೆ ಒಬ್ಬರೆ ಹೆಣಮಗ್ಳು ಮನ್ಯಾಗ ಒಬ್ಬರ ಸೊಸಿಗೆ ಮನಿಕಡಿ ಇಟ್ಟಕ್ಯಾಸ ಉಳ್ದ ಆಸುಮಂದಿ

ಸೊಸ್ತುರಿಗತೊಗೊಂಡು ಗಂಗಾಕ ಹೋದುಳು. ಇಕಿ ಮಕ್ಕುಳ ಮರ್ಗುಳ ಇಲ್ದಕಿ ಎಲ್ಲಾ ಮನಿ ಧಂದ್ಯಾ ಮಾಡಿ ಹೋದುಳು. ಹೋಗಿ ಬಂದು ಅಡ್ಗಿ ಮಾಡಿ ಉಳ್ಳಾಕ ಅಕಿಗ ಹೊತ್ತೇ ಹೋಯ್ತು. ಆಗ ಗಂಡುಗ ಅಂದುಳು ಮಕ್ಕಳ ಸೊಸ್ತುರು ಇದ್ದಾವ್ರ ಮನಿ ಕಡಿ ಬಿಟ್ಟು ನಿಚಿಂತಿ ಹೋದುರು. ನಮ್ಗ ಹೋಗಿ ಬಂದು ಮಾಡ್ಕೊಂಡ ಉಳ್ಳಾಕ ಅಟಾಟಿ ಆಗ್ಲತದಾ ಅಂದುಳು. "ನನ್ಗ ಹ್ಯಾಂಗರಾ ಮಾಡ್ರಿ ಒಂದ ಸೊಸಿ ಮಾಡ್ರಿ" ಅಂದುಳು. ಕಂವಾ "ಮಕ್ಳು ಇಲ್ದೆ ಸೊಸಿ ಹ್ಯಾಂಗ ಮಾಡ್ಲಿ ನೀ ಏನ ಅಂದಿ ಅದ ನಡ್ಸದಾ ಹ್ಯಾಂಗ ನಡ್ಸಲಿ" ಅಂದಾ. ಅಕಿ "ನೀವ ಹ್ಯಾಂಗರ ಮಾಡ್ರಿ ನಂಗ ಸೊಸಿ ಮಾಡ್ರಿ" ಅಂದುಳು "ಅಂದ್ರ ಅಕ್ಕಿ, ಹಿಟ್ಟಾ, ಅರಾ ಕಟ್ಟು ನಾ ಹೊಯ್ತಾ ಎಕಡೆರೆ ದೂರ" ಅಂದಾ. ಅಂದುರುಪ್ಲೆ ಸೇರ ಹಿಟ್ಟಿ ಕಟ್ಟುಳು. ನಿಟ್ಟಾಗ ಕಡ್ಲಿ ಹಿಟ್ಟು ಕಟ್ಟುಳು. ರೊಟ್ಟಿ ಎಲ್ಲಾ ಕಡ್ಗೊಂಡಕೆಸಿ ಹೋದಾ. ಹೋದಾ ಹೋದಾ ಹೋದಾ ಧೂರ ಹೋದಾ. ಅಲ್ಲೊಂದ ಹಣಮಂದೇವರ ಗುಡಿ ಇತ್ತು. ಕಲ್ಲಿ ಹೋಗಿ ಕುಂತಾ. ಕಲ್ಲಿ ಒಬ್ರಿಗ ಐದಮಂದಿ ಹೆಣಾಮಕ್ಳ ಇದ್ದುರು. ಆ ಹೆಣಮಕ್ಳು ಗುಡಿ ಮುಂದ ಮನಿ ಘರಕುಲಿ ಮಾಡಿ ಪೂಸ್ ಐತವಾರ ಮಾಡಿ ಅಡತಿರು. ಹೊತ್ತ ಮುಣಗತನಾ ಅಷ್ಟುರು. ಹೊತ್ತಮುಣಗಿ ಮನಿಗೊಳು ಖೆಡಾಕುರು. ಮತ್ತ ಅರೆ ಸಣ್ಣಾಕಿ ಮನಿ ಮುಂದ ಕಲ್ಲ ಹಚ್ಚಿ ಮತ್ತೆ ನಾಳಿಗ ಆಡ್ಲಾಕ ಬರ್ತದಂತ ಬಂದುಳು.

ಆ ಪಾರ್ಗೊಳು ಮುಂದ ಮುಂದ ನಡ್ದುರ "ನಾಭೀ ಹೋಗಬೇಕು ಮಕೋಲಾಕ ಜಾಗಾ ಅರಾ ಸಿಗ್ರದೇನು" ಅಂತ ನಡ್ದಾ. ಅವ್ರ ಮನೀಗ ಹೋಗಿ ಅವ್ರಿಗಿ ಕೇಳ್ದಾ "ಏ ಎವಾ, ಮಕೊಲಾಕ ಜಾಗಾ ಕುಡು" ಅಂದಾ."ಮಕೊರೆಪಾ ಯಾರ ಬ್ಯಾಡಾಂತಾರಾ" ಅಂದುರು. ಕುಂತ ಅಲ್ಲೆ ಸೇಲ್ಯಾಗ. ಐದ ಮಕ್ಳೆಲ್ಲಾ ಟುಕ್ಡಿ ಮುಕ್ಡಿ ತಿಂದ ಮೊಕೊಂಡು. ಇವ್ರ ಗಂಡಾ ಹೆಣ್ತಿ ಹಾಂಗೆ ಮೊಕೊಲತುರು "ಎವಾ ಮೊಕೊಲತ್ರೆ. ಎಡ್ಡರೊಟ್ಟಿ ಮಾಡದಿತ್ತ ಹಸು ಆಗಿವ್ರು" ಅಂದಾ "ಮಾಡಿ ಕುಡ್ತೀನಿ ತರ್ರೆಪ್ಪಾ ನಿಮ್ಮಲ್ಲಿ ಹಿಟ್ಟು ಇದ್ದುರ. ನಂಬಲ್ಲೆರ ಏನೂ ಇಲ್ಲಾ" ಅಂದುಳು. "ಐ ಈಗೆಲ್ಲಿ ಮಾಡ್ತಿ ಮೊಕೆರಿ ಎವ್ವಾನನ್ಸಲುವಾಗಿ ಹೈರಾಣ ಆಗಿ" ಅಂದಾ. "ಐ ಮಾಡಿ ಕಡ್ತಿನಿ ತರ್ರೆಪಾ" ಅಂದುಳು. ಕಂವಾ ಎಲ್ಲಾ ಹಿಟ್ಟು, ಖಾರಾ ತಕ್ಕೊಟ್ಟ. ಜ್ವಾಳದ ಹಿಟ್ಟು ಝುಲ್ಸುಳು. ಅದ್ರಾಗ ಲಾಲು ರತನ ಹೊಂಟು. ಕಡ್ಲಿ ಹಿಟ್ಟು ಝುಲ್ಸುಳು. ಅದ್ರಾಗ ಮುತ್ತು ಹವಳಾ ಹೊಂಟು. ಆಕಿ ಅಂದುಳು. "ಐ ಏಟ ದೌಳವ್ರ ಇದ್ದಿರ ಬೇಕವ್ವಾ ಬರಿ ಹಿಟ್ಟಿನಾಗೆ ಈಟ ಹೊಂಟು. ಮನ್ಯಾಗ ಏಟ ಇದ್ದಿರಬೇಕ" ಅಂದುಳು. ಅಡ್ಗಿ ಮಾಡ್ದುಳು. ಉಳ್ಳಾಕ ಬರ್ರಿ ಅಂತ ಕರ್ದುಳು. ಅಂದರ "ನಿನ್ನ ಗಂಡಗ ಬಿ ಕರಿಯವಾ" ಅಂದಾ. "ಅವ್ರಿಗ ಎದಕ ಎಪ್ಪಾ ನೀವೆ ಉಣ್ರಿ" ಅಂದುಳು. "ಇಲ್ಲಾ ಕರಿ" ಅಂದಾ. ಅವ್ರಿಬ್ರು ಊಟಾ ಮಾಡ್ದುರು "ನೀವುಬಿ ಉಣ್ರಿಯವಾ" ಅಂದಾ. ಐ ರೊಟ್ಟಿ ಕಟ್ಕೊಂಡು ಹ್ರೋಗಿ ಎಪ್ಪಾ ನಮಗೆದಕ ಬ್ಯಾಡಾ" ಅಂದುಳು."ಇಲ್ಲಾ ಉಣಾನೆ ಉಣ್ರಿ" ಅಂತ ಅಕಿಗ ಉಳ್ಳಕ ಹಚ್ಚದಾ ಅಂವಾ. ಎಲ್ಲಾ ವಾರಾ ನಾರಿ ಮಾಡಿ ಬಂದಕ್ಯಾಸ ಮಾತಾಡ್ಕೊಂತ ಕುಂತುಳು. ಸೊಸಿ ಸಲ್ವಾಗಿ ಬಂದದ್ದ ಹೇಳಿ ಚಿಕ್ಕಕೀನ ಕೇಳ್ದ. "ಏನ ಮಾಡ್ಬೇಕ್ರಿ ನಮ್ಮ ಮಾನ್ಯಾಗ ಐದ ಮಂದಿ ಹೆಣಮಕ್ಳು ಹಾರ. ಕುಡ್ತಿದ್ವಿವಿ. ಆದರ ನೀವ ದೌಳವ್ರು. ನಾವ ಗರೀಬ್ರು" ಅಂದುಳು. ಅಂವಾ ಅಂದಾ "ನಮಗ ಏನ್ ಹತ್ತಾಲ್ರಿ. ನಮ್ಗ ಚಿಕ್ಕಕಿಗ ಕೊಟ್ಟುರ

ನಾಪು. ನಾವೆಲ್ಲಾ ಮಾಡ್ಕೋತೇವು ಅದ್ರ ನಾವು ಕಲಾಲ ಇಟ್ಟಕೇಸಿ ಮದಿ ಮಾಡ್ತೇವು ನೋಡ್ರಿ, ಮಗನೀಗ ಬಲ್ಲಿ ಕೂಡ್ಸಾಲಾ" ಅಂದಾ. ಅಕಿ ಅಂದುಳು "ಯಾವಕಿ ನಿಮ್ಮ ಮನ್ನಿಗಿ ಬಂದಕಿಗ ಒಯ್ರಿ" ಅಂದುಳು. ಸಣ್ಣ ಕಿಗಿ ತೊಗೊಂಡ ಕೇಸಿ ಬಂದಾ. ಮತ್ತ ಪೂಸ್ ಐತವಾರ ಬಂತು. ಒಂದು ಪಾವ್ ಕಳವಿ ಅಕ್ಕಿ ಒಂದು ಪಾವ್ ಹೆಸರ ಬ್ಯಾಳಿ ಕಲ್ಸಿ ಇಟ್ಟುಳು. ಈಸು ಹೆಸರು ಬ್ಯಾಳಿ ಅವಾ "ಅವು ಐದು ಬ್ಯಾರೆ ಬ್ಯಾರೆ ಮಾಡು. ಮೈ ತೊಳಕೊಂಡ ಅಡ್ಗಿ ಮಾಡು ಬೆಂಕಿ ಕಳೀ ಬ್ಯಾಡಾ, ತಟ್ಟಿ ತೆರಿ ಬ್ಯಾ" ಅಂದಾ. ಅದಿಟು ಮಾಡ್ದುಳು. ಅತ್ತಿ ಮಾವಾ ಬಂದುರು ಆರ್ತಿ ಮಾಡ್ಸುರು ಉಂಡುರು.

ಮುಂದ ಮೂರನೆ ಐತವಾರ್ ಬಂತು. "ಭಳಿ ಸಾರಣಿ ಮಾಡು ಅಡ್ಗಿ ಮಾಡು. ನಾವ ಬರತನ ಕೂಡು" ಅಂತ ಹೇಳ್ಸುರು. ಅಕಿ ಭಳಿಸಾರಣಿ ಮಾಡಿ ನೋಡಟ್ಗೆ ಬೆಂಕಿಹೋಯ್ತು. ನೆರಮನಿಗಿ ಭೆಂಕಿಗಿ ಹೋದುಳು. ಭೆಂಕಿಗಿ ಹೋಗತನಾ ಕಲ್ಲಿ ಅತ್ತಿ ಸೊಸಿ ಝಗಡಾ ಆಡ್ಲತಿರು ಅಕಿ ಅತ್ತಿ ಅಂದಳು."ನೋಡು ಅಕಿ ಗಂಡ ಇಲ್ದೆ ಜಿನಗಾನಿ ಮಾಡ್ಲತಳು. ನೀ ಗಂಡ ಇದ್ದು, ನೀ ಈಟು ಝಗಡಾ ಆಡ್ತಿ" ಅಂತ ಅಂಬದು ಆ ಪೋರಿ ಕೇಳ್ಸುಳು. ಮನಿಗ ಬಂದು ಒಲ್ಲಾಗ ಬೆಂಕಿ ಇಟ್ಟುಳು ಹೋಗಿ ಮುಚ್ಕೊಂಡು ಮಕೊಂಡಳು. ಅತ್ತಿ ಮಾವ ಬಂದರು "ಯಾಕ ಅಡ್ಗಿ ಮಾಡಿಲ್ಲಾ" ಅಂತ ಸೊಸಿಗ ಕೇಳ್ಸುರು. "ನೆತ್ತಿ ನೊಯ್ ಲತದ ಮಕೊಂಡಿದಾ" ಅಂತ ಅಂದುಳು.

ಮುಂದ ನಾಕನೆ ಐತವಾರ ಬಂತು. ಭಳಿ ಸಾರಣಿ ಮಾಡು ನಾಕು ಖೊಲ್ಲಿ ತಟ್ಟಿ ತೆರಿ ಐದನೆ ಖೊಲ್ಲಿ ತಟ್ಟಿ ತೆರಿಬ್ಯಾಡ ಅಂತ ಅತ್ತಿ ಇದ್ವಕಿ ಸೊಸಿಗ ಹೇಳಿ ಮಯ ತೊಳಕೊಲಾಕ ಗಂಗಾಕ ಹೋದುರು. ಸೊಸಿ ಇದ್ವಕಿ ಅಡ್ಗಿ ಮಾಡಿ ಒಂದ ಖೊಲ್ಲಿ ತಟ್ಟಿ ತೆರ್ದ ನೋಡುಳು ಅದ್ರಾಗ ಮುತ್ತು ಇದ್ದು. ಮತ್ತೊಂದು ತೆರ್ದು ನೋಡುಳು. ಹವಳಾ ಇದ್ದು. ಮತ್ತೊಂದ ತೆರ್ದುಳು ಬಂಗಾರ ಬೆಳ್ಳಿ ಇದ್ದು ಮತ್ತೊಂದ ತೆರೆದ್ಲು, ದ್ರವ್ಯ ಇತ್ತು ನಾಕ ಖೊಲ್ಲಿ ತಟ್ಟಿ ಮುಚ್ಚುಳು. ಮತ್ತೊಂದು ತಟ್ಟಿ ತೆರ್ದುಳು ಅದ್ರಾಗ ಮಹಾದೇವನ ಪಿಂಡಾ, ತುಳ್ಸಿ ಕಟ್ಟಿ, ಒಂದ ಕಡಿ ತೊರಿ ಹರಿಲತದ, ಪಲ್ಲಂಗ ಅದಾ. ಅದರ ಮ್ಯಾಲ ಶಾಲ ಹೊಚ್ಗೊಂಡ ಒಬ್ಬ ಮಕೊಂಡಾನ. ಅದೊಂದು ತಟ್ಟಿ ಮುಚ್ಚುಳು. ಅತ್ತಿ ಮಾವಾ ಬಂದುರು. ಆರ್ತಿ ಮಾಡಿ ಉಳ್ಳಾಕ ಕುಂ[illegible]ರು. ಅತ್ತಿ, ಮೂರ ಗಂಗಾಳ ತೊಳಿಲತಾಳು ಸೊಸಿ ಇದ್ವರೆ "ನಿಮ್ಮ ಮಗನಿಗ ಉಳ್ಳಾಕ ಎಬಸ್ರಿ" ಅಂದುಳು. "ನಾ ಎಬ್ಸಲವಾ ನೀನೇ ಎಬ್ಸು" ಅಂದುಳು. ಸೊಸಿ ಇದ್ವಾಕಿ ಎಬ್ಸಲಾಕ ಹೋದಳು. ಅಂವಾ ಅಂದ "ನಾ ಈಗ ಬರಾಲಾ ರಥ ಸಪ್ತಮಿ ದಿನಾ ಏಳ್ತಾ" ಅಂದ. "ಅವತ್ತ ನೆಂಟ ನೆಲ್ಲಗಿರಿ ಕರ್ಸಿ ಈ ತೊರಿಧಡ್ಡಿಗ ನಾ ಕೂಡ್ತಾ. ಆ ತೊರಿ ಧಡ್ಡಿಗಿ ತಾಯಿಗ ಕೂಡ್ಸಬೇಕು. ಅಕಿ ಮಲಿ ಹಾಲ ಹಿಂಡಬೇಕು. ಅಕಿನ ಮಲಿ ಹಾಲ ಬಂದ ನನ್ನ ಬಾಯಾಗ ಬೀಳಬೇಕು" ಅಂದ. ಮುಂದ ಐತವಾರ ಮಾಡ್ಸುರು. ಮುಂದ ರಥಸಪ್ತಿಮಿ ಬಂತು. ನೆಂಟನೆಲ್ಲರಿಗಿ ಕರ್ಕೊಂಡು ಅಡ್ಗಿ ಅಂಬ್ಲಿ ಮಾಡಕೊಂಡು ತೊರಿಗಿ ಹೋದುರು. ಆ ಧಡ್ಡಿ ಅವನಿಗ್ ಖುರ್ಚಿ ಹಾಕಿ ಕೂಡ್ಸುರು. ಈ ಧಡ್ಡಿಗ ಇಕಿಗ ಕೂಡ್ಸುರು. ಮಲಿಹಾಲ ಹಿಂಡುರು. ಅವ್ನ ಬಾಯಾಗ

ಬಿದ್ದು, ನೆಂಟನೆಲ್ಲರಿಗ ಊಟಾ ಹಾಕಿ ಲಗ್ನ ಹಚ್ಕೊಂಡು ಮನಿಗ ಬಂದುರು.

(ಇಲ್ಲಿ ಮೇಲೆ ಕೊಡಲಾಗಿರುವ ಕಲುಬುರ್ಗಿ ಭಾಷೆಯ ಜನಪದ ಕಥೆಯನ್ನು ಗುಲುಬರ್ಗಾ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ 'ಜನಪದ ಕಥೆಗಳ ಸಂಕಲನ 'ದಿಂದ ಆಯ್ದುಕೊಳ್ಳಲಾಗಿದೆ).

ಪರಾಮರ್ಶನ ಗ್ರಂಥಗಳು

೧. ಅಬ್ದುಲ್ ಮಜೀವ್ ಖಾನ್ -'ಜಲಾಲುದ್ದೀನ್ ರೂಮಿ', ಕ.ಸಾ. ೧೯೯೪

೨. ಡಾ || ಅಬ್ದುಲ್ ಹಮೀನ್ - 'ಬಂದೇನವಾಜ್', ಕ.ಸಾ.ಅ. ೧೯೯೪

೩. ಅಬ್ದುಲ್ ಹಲೀಮ್ 'ಶರರ್' -'ಪುರಾತನ ಲಕ್ನೋ' ಸಾಹಿತ್ಯ ಅಕಾಡೆಮಿ ೧೯೭೬
ಅನು : ಪಂಚಾಕ್ಷರಿ ಹಿರೇಮಠ್,

೪. ಅಬ್ದುಲ್ ಹಮೀದ್ -'ಸೂಫಿ ಪಥ ಮತ್ತು ಶರಣ ಪಥ' ಅಪ್ರಕಟಿತ ಪಿ.ಹೆಚ್.ಡಿ. ಮಹಾಪ್ರಬಂಧ ,ಕನ್ನಡ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ೧೯೮೮-೮೯

೫. ಇಬ್ರಾಹಿಮ್ ಸ ಈದ್ -'ಇಸ್ಲಾಂ ಒಂದು ಅಧ್ಯಯನ' ಶಾಂತಿಪ್ರಕಾಶನ ಮಂಗಳೂರು ೧೯೯೬.

೬. " " -ಪ್ರವಾದಿ ಮಹಮ್ಮದ್ , ಜೀವನ ಮತ್ತು ಸಂದೇಶ ಶಾಂತಿಪ್ರಕಾಶನ. ೧೯೯೫

೭. 'ಕನ್ನಡ ತತ್ತ್ವಪದಕಾರರು' ವಿವಿಧ ಲೇಖಕರು, ಕನ್ನಡ ಸಾಹಿತ್ಯ ಅಕಾಡೆಮಿ ೧೯೯೩

೮. ಡಾ|| ಎಂ. ಆರ್ ಗಜೇಂದ್ರ ಗಡ -'ಇಸ್ಲಾಂ ಧರ್ಮದ ಕೊಡುಗೆ' ಡಿ. ರತ್ನವರ್ಮ ಹೆಗ್ಗಡೆ ಸ್ಮಾರಕ ಉಪನ್ಯಾಸ ಮಾಲೆ, ಉಜಿರೆ

೯. ಸಂ.ಎಂ. ಚಂದ್ರಶೇಖರ: -'ಚೆನ್ನ ಬಸವ ಪುರಾಣ' ೧೯೭೭ ಮೈಸೂರು. ವಿ.ವಿ.

೧೦.ತೂಮಾಟಿದೋಣಪ್ಪ , -'ಜಾನಪದ ಕಳಾಸಂಪಾದನೆ', ವಿಶಾಲೇಂದ್ರ ಪಬ್ಲಿಷಿಂಗ್ ಹೌಸ್, ೧೯೭೫

೧೧. ತಾಳ್ಳೂರಿ ಆಂಜನೇಯಲು -'ರಾಮದಾಸು' (ತೆಲುಗು), ತೆಲುಗು ವಿ. ವಿ. ೧೯೯೦

೧೨. ದ.ರಾ. ಬೇಂದ್ರೆ. -'ಕಬೀರ ವಚನಾವಲಿ' ಸಾಹಿತ್ಯ ಅಕಾಡೆಮಿ ೧೯೬೮

೧೩. ಡಾ || ಎಂ.ಎಂ. ಪಡಶೆಟ್ಟಿ -'ತಿಂಥಿಣಿ ಮೋನಪ್ಪಯ್ಯ' ವೀರಶೈವ ಅಧ್ಯಯನ ಸಂಸ್ಥೆ ಗದಗ -- ೧೯೯೨

೧೪. ಪದ್ರುದ್ದೀನ್ ಇಸ್ಲಾಹಿ -'ಕುರಾನ್', ಸಮಗ್ರಪರಿಚಯ, ಶಾಂತಿ ಪ್ರಕಾಶನ, ಮಂಗಳೂರು ೧೯೮೯

[illegible] [illegible]
[illegible]

[illegible] [illegible]

[illegible]
[illegible] [illegible]

[illegible]
[illegible]

[illegible]
[illegible] [illegible]

[illegible] [illegible]
[illegible]
[illegible]

[illegible]
[illegible]
[illegible] [illegible]

[illegible] [illegible]
[illegible]
[illegible]
[illegible]
[illegible]

೨೫.ಸಂ: ಸಿ.ಎಸ್. ಶಿವಕುಮಾರಸ್ವಾಮಿ -'ಕರ್ನಾಟಕ ಜಾತ್ರೆಗಳು' ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ. ಬಿ. ಆರ್. ಪ್ರಾಜೆಕ್ಟ -- ೧೯೮೮

೨೬. ಶಮ್ಸ್ ಪೀರ್ ಝಾದ -'ಪ್ರವಾದಿವರ್ಯ (ಸ)ರ ವಚನ ರತ್ನಗಳು' ಶಾಂತಿ ಪ್ರಕಾಶನ, ಮಂಗಳೂರು ೧೯೮೨

೨೭. ಷಣ್ಮುಖಯ್ಯ ಅಕ್ಕೂರಮಠ -'ಸೂಫಿ ಮತ್ತು ಶರಣರ ಅನುಭಾವಪಥ,' ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ ಮೂರುಸಾವಿರ ಮಠ, ಹುಬ್ಬಳ್ಳಿ. ೧೯೮೨.

೨೮. ಷೇಕ್ ಮಸ್ತಾನ್ -'ತೆಲುಗು ಸಾಹಿತ್ಯಮು - ಮುಸ್ಲಿಂಲ ಸೇವಾ ' ತೆಲುಗು ಇಸ್ಲಾಮಿಕ್ ಪಬ್ಲಿಕೇಶನ್ಸ್

೨೯. ಡಾ ಸಂಗಮೇಶ ಸವದತ್ತಿ ಮಠ -'ಕಲುಬುರ್ಗಿ ಕನ್ನಡ ಗುಲುಬರ್ಗಾ ವಿ.ವಿ. ೧೯೮೯

೩೦. ಸಯ್ಯದ್ ಅಬ್ದುಲ್ ಅಲಾ ಮೌದೂದಿ -'ಇಸ್ಲಾಂ ಸಮೀಕ್ಷೆ' ಐಡಿಯಲ್ ಇಸ್ಲಾಮಿಕ್ ಟ್ರಸ್ಟ್ ಮರ್ಹೂಮ್ ಮಂಗಳೂರು ೧೯೮೮

೩೧. ಸಂ. ಎಸ್ . ಶಿವಣ್ಣ -'ಸ್ವರ ವಚನ ಸಂಪುಟ - ೧' ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥ ಮಾಲೆ, ಮೈಸೂರು ೧೯೯೫.

೩೨. ಎಸ್ . ಆರ್. ಭಟ್ -' ಹಿಂದೂ ಮುಸ್ಲಿಂ ಘರ್ಷಣೆಗಳ ಸಮಸ್ಯೆ' ನವ ಕರ್ನಾಟಕ ಪ್ರ. ೧೯೮೬

೩೩. ಡಾ ಎಸ್.ಎಂ. ಹಿರೇಮಠ್ -'ಶರಣ ಬಸವೇಶ್ವರ' ಗುಲುಬರ್ಗಾ ವಿ.ವಿ. ೧೯೯೧

೩೪. ಬಿ.ರಾಮರಾಜು -'ತೆಲುಗು ಜಾನಪದ ಗೇಯ ಸಾಹಿತ್ಯಮು', ಜಾನಪದ ವಿಜ್ಞಾನ ಪ್ರಚರಣಲು ಹೈದರಾಬಾದ್,

ಉರ್ದು ಪರಾಮರ್ಶನ ಗ್ರಂಥಗಳು

೧. ಡಾ|| ಹುಸೇನಿ ಶಾಹದ್ -'ಸೈಯದ್ ಷಹಾ ಅಮೀನುದ್ದೀನ್ ಅಲಾ ' ಅಂಜುಮನ್ - ತರೀಕಿ - ಉರ್ದು - ಹೈದರಾಬಾದ್ ೧೯೭೩

೨.ಮೊಹಮದ್ ಕರೀಮುದ್ದೀನ್ -'ಫಿಕರನ್ - ಅಲ್ -ಕರಾಮತ್ ' , ಮಿತ್ತಯಾ ಹಿಮಾಯತ್ ಕುನ್ ಬಜಾರ್ , ಮೀಂಚಿತ್ಲಿ ,ಆಂಧ್ರಪ್ರದೇಶ(?)

೩. ಡಾ||ಮೊಹಮದ್ ಸಿಬ್ ಗತ್ ಉಲ್ಲಾ -'ತಸವ್ವೂಫ್ ಅವ್ರ [illegible] ಸೂಫಿಯಾಯಿಯೇ', ಕರಾಮ್ ಸೈಯದ್ ಅಬೂಬ್ ಅಫ್ [illegible]ಬ್ ಕತಾಯಿಜಮೀನ್ ಮಾಲಿಕ್ ಪಬ್ಲಿಕೇಶನ್, ಬೆಂಗಳೂರು,೧೯[illegible]

೪. ಸಂ.ನಜೀರ್ ಅಹಮದ್ -ಇಬ್ರಾಹಿಂ ಆದಿಲ್ [illegible]ಹಾನಿ , ' ಕಿತಾಬ್ -ಇ- ನವರಸ್ ' ಲಕ್ನೋ ವಿಶ್ವವಿದ್ಯಾ[illegible]ಯ,ಲಕ್ನೋ (?)

೫. ಗಚ್ಚಿ ಮಹಲ್ ಸಾಹೆಬ್ -' ಶಂಶ್ -ತರೀಕಿ-[illegible]ನ್', ಗಚ್ಚಿ ಮಹಲ್ ಪಬ್ಲಿಕೇಶನ್ ,ಬಿಜಾಪುರ

1. Asghar ali engineer: -'Sufisim and Communal Harmony', Print well pubblication, jaipur- 302004, 1991

2. MP. Ahmedpasha -'History of Sufi saints of Andhra Desu', During the Early Asufjahi from A.D. 1724 (Unpublished Ph.D.Theises,Osmania University)

3. Ban key Behari -'Sufis, mystics and yogis of India' Braratitya vidya Bahavan Bombay- 400007 1991

4. DE. Barry -'Sources of Indian Tradition' Columbia university press Columbia. 1958.

5. Bakshi, Ashwani kumar -'Residancy of Hyderabad' Unpublished Ph.D.Thises.Osmania University

6. P.N. CHOPRA- -'A Social cultural and economic History of India' vol I & II, Macmillan India limited macmillan India press, MADRAS - 1990

7. CARL BROCKLMON - 'History of Islamic people' 4 Edition london (1956)

8. CENSUS OF INDIA - Vol- I, II, Vol VII- B, Kurnool- Dist (1961)

9.Chirstian w. Trill -'Muslim Shrines in India' or fared university press 1959,

10. Croos, William: -'The popular Religion and Folklore of nothern India' London, A constable. co. 1986

11. Cummighan J.D; -'History of the sikhs', john murray, London.1849

12. P.Y.Deshpande -'Jnanadeva' Sahithaya Akadimi 1972

13. R.M.Eaten -'Sufis of Bijapur', Princetion University press Prinction, New Jerssy,1978

14. FAZAL AHMED -'Husain the gread mortyr', Taj company, 3151, Turkman gote, Delhi- 110006.

15. Hazrat Inayat Khan -'The sufi message' Motilal Bandaridass publishers Vol I- to- IX P.V.T Delhi 1990

16. IH AZAD F ARLQI -'SUFISM and BHAKTI ASHINAV publications 1984

17. D.N. Kumdra -'Religious and Culturol History of India' Goyal brother prakashan, Educational publishers, 11/1903, Chuma mondi pohar ganj, New Delhi - 110055 (1984)

18. MAJOLA ASAD -'Indian Muslim Festivals and customs', Publications Division, Ministry of information and Brood casting, Government of India

19. Max Weber. -'The Religion of India', The Free press, Glenoe, Illinoice, 1960.

20. Muhammad Alauddin -'The Role of the Baridis in the History of the Deccan'. (1487- 1619)1983 Dept of History, OSMANIA University (Unpublished Ph.d.Thesis)

21. MP Muhommad Alouddin -'Study of the Qutb Shali Culuture Through the printed proto Urdu Mathnivees of Golconda' 1979 Osmania University ,Dept. Of History

22. Mir Sadiq Ahmed Naqvi -'Muslim Religious Institutions and their Role under the Qutb shahs', 1986.

23. NISAR AHMED FARUQI -'Early mushim Historigraph' Idarah- I Addiyati- I- Delhi - 6. 1983

24. TH ponday Rajkishore -'Early dakhni prose' (from 14th- 1017th (entery) 1891, Central University,Unpublished Ph.D Thises

25. B. RAMA RAJU -'Maharram folk songs in Telgugu' The Institute of Indo- middle East cultured studies, Aoopur, Hyderabad - 1964.

26. Rafiq Zakaria -'Muhammad and the Quran'

27. T.C. Rastogi -"sufism" A dictionary with profiles of saint poets strling publishers p.v.l. 1990

28. Rizwana Firdousi -'Emancipation of women in Hyderabad with Specieal reference to Muslim women (1911- 48)' Dept of History 1988, (Unpublished Ph.D. Thesis), O.S. University

29. Syed Sha Khusro Hussaini -'Gisudiraz on sufisim' Idarah- I.A. Dabiyati Delhi 1983.

30. SAAIQ NO QUI -'Quth shahi Ashur Khanas' Ba- ul- llm society, 22-8- 361/16 Darulashifa, Hyderabad - (1987)

31. Sayid Ather Abbos Rizvi -'A History of Sufisim in India' Vo: I & II Mumshirom momoharlal, publishers pv. Ltd.1992

32. Susin Bally -'Saints, Goddesses and kings', Cambridgi university press 1992.

33. S.Sakuntala -'Throvels of Tavernier and jheve not in the Golconda', Dept. of History , 1980, (Unpublished Ph.D. Thises)

34.V.Swarajyalakshmi, -'The influence of Urdu on Telugu', Dept of linguistics. O.S. University, 1976.

35. SULEMAN SIDDIQUI. -'M. Sufis of the Deccan (1347- 1538 A.D.)' 1975, Dept of I.Studies, O.U.Hydarabad

36. H.K.Sherwani and Dr.P.M.Joshi -History of the Medieaval Deccan ,Vol.I & II Govt. of Andhra Pradesh 1973

37. Trimingham j Spencer -'The Sufi Orders in Islam', Oxford University Press, 1971

38. THOMS PATRICK HUGHES -'Dictianary of Islam' casmol publications, New Delhi (1984)

39.A Warab Doddamani -'Muslims in Dakshina Kannada', Green Words Publications Mangalore,1993

40. Gazetter of Bombay, Bijapur-23 (Bombay 1884)